# ಕನ್ನಡ ಕಥನ ಸಾಹಿತ್ಯದಲ್ಲಿ ಹೋಟೆಲಿನ ಪರಿಕಲ್ಪನೆ

(ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)


ಸಂಶೋಧಕರು

ಷಣ್ಮುಖಪ್ಪ ಬೊದುರ

ಮಾರ್ಗದರ್ಶಕರು

ಡಾ. ಎ. ಸುಬ್ಬಣ್ಣ ರೈ

ಪ್ರಾಧ್ಯಾಪಕರು



ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೭

797

# ಕನ್ನಡ ಕಥನ ಸಾಹಿತ್ಯದಲ್ಲಿ ಹೋಟೆಲಿನ ಪರಿಕಲ್ಪನೆ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾಪ್ರಬಂಧ)



ಸಂಶೋಧಕರು
**ಷಣ್ಮುಖಪ್ಪ ಬೊದುರ**

ಮಾರ್ಗದರ್ಶಕರು
**ಡಾ. ಎ. ಸುಬ್ಬಣ್ಣ ರೈ**
ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೭

# ಸಂಶೋಧಕರ ಘೋಷಣಾ ಪತ್ರ

**ಕನ್ನಡ ಕಥನ ಸಾಹಿತ್ಯದಲ್ಲಿ ಹೋಟೆಲಿನ ಪರಿಕಲ್ಪನೆ** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ **ಡಾ. ಎ. ಸುಬ್ಬಣ್ಣ ರೈ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೧೦-೦೮-೨೦೧೨
ಸ್ಥಳ : ವಿದ್ಯಾರಣ್ಯ

**ಷಣ್ಮುಖಪ್ಪ ಬೊದುರ**
ಸಂಶೋಧಕ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಷಣ್ಮುಖಪ್ಪ ಬೊದುರ ಅವರು **ಕನ್ನಡ ಕಥನ ಸಾಹಿತ್ಯದಲ್ಲಿ ಹೋಟೆಲಿನ ಪರಿಕಲ್ಪನೆ** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೧೦. ೮. ೨೦೧೧
ಸ್ಥಳ : ವಿದ್ಯಾರಣ್ಯ

ಡಾ. ಎ. ಸುಬ್ಬಣ್ಣ ರೈ
ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಪರಿವಿಡಿ

ಅಧ್ಯಾಯ : ಒಂದು

# ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ : ಒಂದು

# ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

ಆಧುನಿಕ ಕನ್ನಡ ಸಾಹಿತ್ಯವು ಪ್ರಾಚೀನ ಸಾಹಿತ್ಯದಿಂದ ಭಿನ್ನ ರೀತಿಯಲ್ಲಿ ರಚನೆಗೊಂಡಿದೆ. ಅದರ ಮನೋಧರ್ಮದ ಸೃಜನಾತ್ಮಕ ಕ್ರಿಯೆಯಿಂದಾಗಿಯೇ ವಿಭಿನ್ನರೂಪ ಪಡೆದುಕೊಂಡಿದೆ. ಪ್ರಾಚೀನ ಸಾಹಿತ್ಯದಲ್ಲಿ ದೇವರು ಧರ್ಮ ಮುಂತಾದವುಗಳು ವಿಷಯ ವಸ್ತುಗಳಾಗಿದ್ದವು. ಅಲ್ಲಿ ದೇವರ ಸಾಹಸಗಾಥೆ, ಅವತಾರಗಳು, ಧಾರ್ಮಿಕ ಸಂದೇಶ, ಅದರಲ್ಲಿನ ಕಟ್ಟುಪಾಡುಗಳ ವಿವರಣೆಗಳು, ಶಾಸ್ತ್ರದ ಸ್ವರೂಪ ಮತ್ತು ವಿವರಣೆ ಹಾಗೂ ನೀತಿ ಬೋಧನೆಗಳು ಕೇಂದ್ರವಸ್ತುವಾಗಿದ್ದವು. ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯದಲ್ಲಿ ಕಂದ, ಷಟ್ಪದಿ, ಸಾಂಗತ್ಯ, ರಗಳೆ, ತ್ರಿಪದಿ ಇಂತಹ ಪದ್ಯ ಮಾಧ್ಯಮದ ಕಾವ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟಿಕೊಂಡಿವೆ. ಆದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪದ್ಯಕ್ಕಿಂತ ಗದ್ಯ ಮಾಧ್ಯಮಕ್ಕೆ ಮಹತ್ವವನ್ನು ಕೊಡಲಾಗಿದೆ.

ಪರಂಪರಾಗತ ಸಾಮಾಜಿಕ ವ್ಯವಸ್ಥೆಯೊಂದು ಆಧುನಿಕ ಮೌಲ್ಯಗಳಿಗೆ ಮುಖಾಮುಖಿಯಾದಾಗ ಪಲ್ಲಟಗೊಳ್ಳುವ ಕ್ರಮ ಕನ್ನಡ ಕಥನಸಾಹಿತ್ಯದಲ್ಲಿ ಒಂದು ಮುಖ್ಯ ವಸ್ತುವಾಗಿರುತ್ತದೆ. ವೈಚಾರಿಕ ಪರಂಪರೆಯೊಂದು ನಿರ್ಮಾಣವಾಗಿ ಕಣ್ಣು ತೆರೆಯುತ್ತಿದ್ದ ಸಂದರ್ಭದಲ್ಲಿ ಸಣ್ಣಕಥೆ - ಕಾದಂಬರಿಗಳನ್ನು ಒಳಗೊಂಡ ಕಥನಸಾಹಿತ್ಯವೆಂಬುದು ಈ ಗದ್ಯ ಮಾಧ್ಯಮದ ಪ್ರಕಾರಗಳಾಗಿವೆ. ಇವುಗಳ ಆಸಕ್ತಿಯ ಕೇಂದ್ರ ದೇವರಾಗಿರದೆ ಮನುಷ್ಯನ ವೈಯಕ್ತಿಕ ಕಾಲ್ಪನಿಕ ಅನುಭವಗಳು ಕಥನದ ವಸ್ತುಗಳಾದವು. ವಾಸ್ತವತೆಗೆ ತೀರಾ ಹತ್ತಿರವಾಗಿ, ಜೀವನದ ಭಾಗವಾಗಿ ಸನ್ನಿವೇಶಗಳನ್ನು ಓದುಗರ ಮನಸ್ಸಿನಲ್ಲಿ ಮೂಡಿಸುವ ಉದ್ದೇಶ ಕಥನಕಾರರಿಗೆ ಬಂತು. ಹಾಗಾಗಿ ಇಲ್ಲಿ ಹೊಸ ಶಿಕ್ಷಣ ಪದ್ಧತಿಯಿಂದ ಸಾಂಪ್ರದಾಯಿಕ ಮನೋಭಾವ ಮಾಯವಾಗಿ ವೈಚಾರಿಕ ಎಂಬ ವಿಚಾರ ಸರಣಿಯು ನಿರ್ಮಾಣಗೊಂಡಿತು.

ಕನ್ನಡದ ಕಥೆ-ಕಾದಂಬರಿಗಳು ಮೊದಲಿನಿಂದಲೂ ಸಮಕಾಲೀನ ಜನಸಾಮಾನ್ಯರಲ್ಲಿ ಉಂಟಾಗುವ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಪಲ್ಲಟಗಳನ್ನು ಸಂಕೀರ್ಣವಾಗಿ ಬಿಂಬಿಸಿವೆ. ವಸಾಹತುಶಾಹಿ ಆಳ್ವಿಕೆಯು ಅನೇಕ ಹೊಸ ಮೌಲ್ಯಗಳನ್ನು, ವಿಚಾರಗಳನ್ನು, ವಸ್ತುಗಳನ್ನು, ಸಂಸ್ಥೆಗಳನ್ನು ತಂತ್ರಜ್ಞಾನದ ಆವಿಷ್ಕಾರಗಳನ್ನು ಇಲ್ಲಿಗೆ ತಂದಿರುತ್ತದೆ. ಈ ಬೆಳವಣಿಗೆ ಯಿಂದ ಸ್ಥಳೀಯ ಜೀವನಕ್ರಮಗಳು ತೀವ್ರವಾದ ಒತ್ತಡಕ್ಕೆ ಸಿಲುಕಿದವು. ಪೂರ್ವ ಪಶ್ಚಿಮಗಳ ಮುಖಾಮುಖಿ ಹಳೆತು ಹೊಸತುಗಳ ಸಂಘರ್ಷಕ್ಕೂ ನಾಂದಿಯಾಯಿತು. ಮನುಷ್ಯ ಬದುಕಿನ ಆದ್ಯತೆಗಳು, ಅಶೋತ್ತರಗಳು ಬದಲಾಗಲಾರಂಭಿಸಿದವು. ಸ್ಥಿರ ಸಮಾಜ ಚಲಿಸಲಾರಂಭಿಸಿತು. ಈ ಚಲನೆಯ ಪರಿಣಾಮ ಏಕರೂಪಿಯಾಗಿರಲಿಲ್ಲ. ಬಹುರೂಪಿಯಾದ ಹೊಸ ಬದಲಾವಣೆಗಳು ಕೆಲವು ವರ್ಗಗಳಿಗೆ ವಿಮೋಚನೆಯನ್ನು ತಂದರೆ ಮತ್ತೆ ಕೆಲವು ವರ್ಗಗಳು ಹೊಸ ಒತ್ತಡಗಳು ಮತ್ತು ತೊಂದರೆಗಳನ್ನು ಎದುರಿಸಬೇಕಾಯಿತು. ಈ ಚಲನೆಯ ಪರಿಣಾಮ ಏಕರೂಪಿಯಾಗಿರಲಿಲ್ಲ. ಹಳೆಯ ಮೌಲ್ಯಗಳು, ಜೀವನಕ್ರಮಗಳು ತೀವ್ರವಾದ ವಿಮರ್ಶೆಗೆ ಗುರಿಯಾದವು. ಎಲ್ಲ ಕ್ಷೇತ್ರಗಳಲ್ಲಿ ಹೊಸ ಸುಧಾರಣೆಗಳು ಕಂಡುಬರಲಾರಂಭಿಸಿದವು. ಭಾರತೀಯ ಮನಸ್ಸು ವಸಾಹತೀಕರಣಕ್ಕೆ ಒಳಗಾಯಿತು. ಅದು ಆಧುನಿಕವಾಯಿತು. ಈ ಸಂಕೀರ್ಣ ಸ್ಥಿತಿಯನ್ನು ಸರಳವಾದ ಪರ ವಿರೋಧಗಳ ನೆಲೆಯಲ್ಲಿ ಆಳ್ವಿಕೆಗೊಳಿಸದೆ ಕನ್ನಡದ ಪ್ರತಿಭಾವಂತ ಲೇಖಕರು ತಮ್ಮ ಕಾಲದ ವಿದ್ಯಮಾನಗಳಿಗೆ ಪ್ರಬುದ್ಧವಾಗಿ ಸ್ಪಂದಿಸಿ ತಮ್ಮ ಸಾಹಿತ್ಯ ಕೃತಿಗಳನ್ನು ಕಟ್ಟಿದರು. ಆದ್ದರಿಂದಲೇ ಕನ್ನಡದ ಅತ್ಯುತ್ತಮ ಸಾಹಿತ್ಯ ಕೃತಿಗಳು ಪೂರ್ವ ಸಾಹಿತ್ಯಿಕ ಪ್ರಯೋಗಗಳಾಗಿರುವಂತೆ ಮಹತ್ವದ ಸಾಂಸ್ಕೃತಿಕ, ಐತಿಹಾಸಿಕ ದಾಖಲೆಗಳೂ ಆಗಿಬಿಟ್ಟಿವೆ.

ಒಂದು ಐತಿಹಾಸಿಕ ಪ್ರಕ್ರಿಯೆಯ ಫಲವಾಗಿ ನಮ್ಮ ಸಮಾಜದಲ್ಲಿ ಕಾಣಿಸಿಕೊಂಡ ಚಲನೆ ಯನ್ನು ಕನ್ನಡದ ಕಥಾಸಾಹಿತ್ಯ ಮೂರು ಮುಖ್ಯ ಆಕೃತಿಗಳಲ್ಲಿ ಗ್ರಹಿಸಿ ದಾಖಲಿಸಿದೆ ಎಂದು ಸ್ಥೂಲವಾಗಿ ಗುರುತಿಸಬಹುದು. ಅವುಗಳೆಂದರೆ ಆಗಮನ, ನಿರ್ಗಮನ ಮತ್ತು ಪುನರಾಗಮನ. ಇವು ಹಾಗೆ ಪ್ರತ್ಯೇಕ ಪ್ರತ್ಯೇಕವೆಂದೇನೂ ಅಲ್ಲ. ಅವು ಕೆಲವೊಮ್ಮೆ ಒಂದರೊಳಗೊಂದು ಕಾಣಿಸ ಬಹುದು ಅಥವಾ ಒಂದೇ ಆಕೃತಿಯಲ್ಲಿ ಈ ಮೂರು ಛಾಯೆಗಳು ಸೂಚಿತವಾಗಬಹುದು. ಇದು ಕೇವಲ ಸಾಪೇಕ್ಷೆಗೆ ಒತ್ತು ಮತ್ತು ಪ್ರಾಮುಖ್ಯಗಳ ಪ್ರಶ್ನೆ ಅಷ್ಟೆ. ಅವುಗಳನ್ನು ಆಧರಿಸಿ ಕನ್ನಡ ಕಥನಗಳನ್ನು ಅಭ್ಯಾಸದ ಅನುಕೂಲಕ್ಕಾಗಿ ಆಗಮನದ ಕಥನಗಳು, ನಿರ್ಗಮನದ ಕಥನಗಳು, ಪುನರಾಗಮನದ ಕಥನಗಳು ಎಂದು ವಿಂಗಡಿಸಿಕೊಳ್ಳಬಹುದು. ಒಂದು ಕುಟುಂಬ, ಸಮಾಜ, ಹಳ್ಳಿ ಪರಿಸರವನ್ನು ಹೊರಗಿನ ಸಂಗತಿಗಳು ಹೊಸದಾಗಿ ಪ್ರವೇಶಿಸಿದಾಗ ಉಂಟಾಗುವ ಪರಿಣಾಮ ಪಲ್ಲಟಗಳನ್ನು ಚಿತ್ರಿಸುವ ಕಥೆ-ಕಾದಂಬರಿಗಳನ್ನು ಆಗಮನದ ಕಥನಗಳು ಎನ್ನಬಹುದು. ಕನ್ನಡದ ಮೊದಲ ಸಾಮಾಜಿಕ ಕಾದಂಬರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಇಂದಿರಾಬಾಯಿ

(೧೮೯೯) ಈ ಬಗೆಯ ಕಥನಕ್ಕೆ ಒಳ್ಳೆಯ ನಿದರ್ಶನ (ಅಶೋಕ ಟಿ.ಪಿ., ೨೦೧೪, ಪು. ೧೦೧-೧೦೨). ಟಿ.ಪಿ. ಅಶೋಕರ ಈ ಮಾತುಗಳು ಆಧುನಿಕ ಕನ್ನಡ ಕಥನಸಾಹಿತ್ಯದ ನಿಲುವು-ಧೋರಣೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ನಮಗೆ ಹೆಚ್ಚು ಪ್ರಸ್ತುತವೆನಿಸುತ್ತವೆ.

ಆಧುನಿಕ ಕನ್ನಡಸಾಹಿತ್ಯ ಸಂದರ್ಭದಲ್ಲಿ ಸಣ್ಣಕಥೆ-ಕಾದಂಬರಿಗಳು ಆಯಾಯ ಭೌಗೋಳಿಕ ಪರಿಸರದ ಪ್ರಾದೇಶಿಕತೆಯನ್ನು ಮೈಗೂಡಿಸಿಕೊಂಡಿರುತ್ತವೆ. ಉದಾಹರಣೆಗೆ ಗುಲ್ವಾಡಿ ವೆಂಕಟರಾವ್ (೧೮೪೪) ಅವರ ಕಾದಂಬರಿಗಳು, ಎಂ.ಎಸ್. ಪುಟ್ಟಣ್ಣ(೧೮೫೪)ನವರ ಕಾದಂಬರಿಗಳು, ಎಂ.ಎಲ್. ಶ್ರೀಕಂಠಗೌಡ(೧೮೬೪) ಅವರ ಕಾದಂಬರಿಗಳು, ಕೆರೂರು ವಾಸುದೇವಾಚಾರ್ಯ(೧೮೬೬)ರ ಕಾದಂಬರಿಗಳು, ಆಲೂರ ವೆಂಕಟರಾಯ(೧೮೮೦)ರ ಕಾದಂಬರಿಗಳು, ತಿರುಮಲಾಂಬ(೧೮೮೭) ಅವರ ಸಣ್ಣಕಥೆ-ಕಾದಂಬರಿಗಳು, ಮುಳಿಯ ತಿಮ್ಮಪ್ಪಯ್ಯ(೧೮೮೮)ನವರ ಸಣ್ಣಕಥೆಗಳು, ಮಾಸ್ತಿ ವೆಂಕಟೇಶ ಅಯ್ಯಂಗಾರ್(೧೮೯೧) ಅವರ ಸಣ್ಣಕಥೆ-ಕಾದಂಬರಿಗಳು, ಎಂ.ಆರ್.ಶ್ರೀ.(೧೮೯೨)ಯವರ ಕಾದಂಬರಿಗಳು, ಆರ್. ಕಲ್ಯಾಣಮ್ಮ(೧೮೯೪)ನವರ ಕಾದಂಬರಿಗಳು, ಗಳಗನಾಥ(೧೮೯೬)ರ ಕಾದಂಬರಿಗಳು, ದೇವುಡು ನರಸಿಂಹಶಾಸ್ತ್ರೀ(೧೮೯೭)ಯವರ ಸಣ್ಣಕಥೆ-ಕಾದಂಬರಿಗಳು, ಕೆ.ವಿ. ಅಯ್ಯರ್(೧೮೯೮) ಅವರ ಸಣ್ಣಕಥೆ-ಕಾದಂಬರಿಗಳು, ಬೆಟಗೇರಿ ಕೃಷ್ಣಶರ್ಮ(೧೯೦೦) ಅವರ ಸಣ್ಣಕಥೆ-ಕಾದಂಬರಿಗಳು, ಶಿವರಾಮ ಕಾರಂತ(೧೯೦೨)ರ ಸಣ್ಣಕಥೆ-ಕಾದಂಬರಿಗಳು, ಎ. ಸೀತಾರಾಮಯ್ಯ(೧೯೦೨)ನವರ ಸಣ್ಣಕಥೆ-ಕಾದಂಬರಿಗಳು, ಶ್ರೀರಂಗ(೧೯೦೪)ರ ಕಾದಂಬರಿಗಳು, ಕುವೆಂಪು(೧೯೦೪) ಅವರ ಸಣ್ಣಕಥೆ-ಕಾದಂಬರಿಗಳು, ಸಿಂಪಿ ಲಿಂಗಣ್ಣ(೧೯೦೫)ನವರ ಕಾದಂಬರಿಗಳು, ಪು.ತಿ. ನರಸಿಂಹಾಚಾರ್ಯ(೧೯೦೫)ರ ಸಣ್ಣಕಥೆಗಳು, ರಂ.ಶ್ರೀ.ಮುಗಳಿ (೧೯೦೬)ಯವರ ಸಣ್ಣಕಥೆ-ಕಾದಂಬರಿಗಳು, ಅನಕೃ(೧೯೦೮) ಅವರ ಕಾದಂಬರಿಗಳು, ವಿ.ಕೃ.ಗೋಕಾಕ (೧೯೦೯) ಅವರ ಕಾದಂಬರಿಗಳು, ರಾವಬಹದ್ದೂರ(೧೯೧೦)ರ ಸಣ್ಣಕಥೆ-ಕಾದಂಬರಿಗಳು, ಅಶ್ವತ್ಥ(೧೯೧೨) ಅವರ ಸಣ್ಣಕಥೆ-ಕಾದಂಬರಿಗಳು, ಕೊಡಗಿನ ಗೌರಮ್ಮ(೧೯೧೨)ನವರ ಸಣ್ಣಕಥೆ-ಕಾದಂಬರಿಗಳು, ವಿ.ಎಂ. ಇನಾಂದಾರ(೧೯೧೨)ರ ಕಾದಂಬರಿಗಳು, ಬೀಚಿ(೧೯೧೩)ಯವರ ಕಾದಂಬರಿಗಳು, ಎಚ್. ದೇವೀರಪ್ಪ(೧೯೧೩)ನವರ ಸಣ್ಣಕಥೆ-ಕಾದಂಬರಿಗಳು, ಎಚ್.ಎಲ್. ನಾಗೇಗೌಡ(೧೯೧೫) ಅವರ ಸಣ್ಣಕಥೆ-ಕಾದಂಬರಿಗಳು, ವಾಣಿ(೧೯೧೭)ಯವರ ಸಣ್ಣಕಥೆ-ಕಾದಂಬರಿಗಳು, ಸಿದ್ಧಯ್ಯ ಪುರಾಣಿಕ(೧೯೧೮) ಅವರ ಸಣ್ಣಕಥೆ-ಕಾದಂಬರಿಗಳು, ಮಿರ್ಜಿ ಅಣ್ಣಾರಾಯ(೧೯೧೮)ರ ಸಣ್ಣಕಥೆ-ಕಾದಂಬರಿಗಳು, ಬಸವರಾಜ ಕಟ್ಟೀಮನಿ(೧೯೧೯)ಯವರ ಸಣ್ಣಕಥೆ-ಕಾದಂಬರಿಗಳು, ತರಾಸು(೧೯೨೦) ಅವರ ಕಾದಂಬರಿಗಳು, ಪಾಟೀಲ ಪುಟ್ಟಪ್ಪ(೧೯೨೧)ನವರ ಸಣ್ಣಕಥೆಗಳು, ಶಾಂತಾದೇವಿ ಮಾಳವಾಡ (೧೯೨೨) ಅವರ ಸಣ್ಣಕಥೆ-ಕಾದಂಬರಿಗಳು, ವ್ಯಾಸರಾಯ ಬಲ್ಲಾಳ(೧೯೨೩)ರ ಸಣ್ಣಕಥೆ-ಕಾದಂಬರಿಗಳು, ನಿರಂಜನ (೧೯೨೪) ಅವರ ಸಣ್ಣಕಥೆ-ಕಾದಂಬರಿಗಳು, ಎಲ್.ಎಸ್. ಶೇಷಗಿರಿರಾವ್(೧೯೨೫)

ಅವರ ಸಣ್ಣಕಥೆಗಳು, ಬಿ.ಸಿ. ರಾಮಚಂದ್ರಶರ್ಮ(೧೯೨೫) ಅವರ ಸಣ್ಣಕಥೆಗಳು, ಹೆಚ್. ತಿಪ್ಪೇರುದ್ರಸ್ವಾಮಿ(೧೯೨೮)ಯವರ ಸಣ್ಣಕಥೆ-ಕಾದಂಬರಿಗಳು, ಶಂಕರ ಮುಕಾಶಿ ಪುಣೇಕರ(೧೯೨೮) ಅವರ ಕಾದಂಬರಿಗಳು, ಯಶವಂತ ಚಿತ್ತಾಲ(೧೯೨೮)ರ ಸಣ್ಣಕಥೆ-ಕಾದಂಬರಿಗಳು, ಶಾಂತಿನಾಥ ದೇಸಾಯಿ(೧೯೨೯)ಯವರ ಸಣ್ಣಕಥೆ-ಕಾದಂಬರಿಗಳು, ಸಿದ್ಧಲಿಂಗ ಪಟ್ಟಣಶೆಟ್ಟಿ(೧೯೨೯)ಯವರ ಸಣ್ಣಕಥೆಗಳು, ದುಂ.ನಿಂ. ಬೆಳಗಲಿ(೧೯೩೧)ಯವರ ಸಣ್ಣಕಥೆ-ಕಾದಂಬರಿಗಳು, ಚಂದ್ರಕಾಂತ ಕುಸನೂರು(೧೯೩೧) ಅವರ ಸಣ್ಣಕಥೆ-ಕಾದಂಬರಿಗಳು, ಯು.ಆರ್. ಅನಂತಮೂರ್ತಿ(೧೯೩೨)ಯವರ ಸಣ್ಣಕಥೆ-ಕಾದಂಬರಿಗಳು, ಅನುಪಮ ನಿರಂಜನ(೧೯೩೪) ಅವರ ಸಣ್ಣಕಥೆ-ಕಾದಂಬರಿಗಳು, ಎಸ್.ಎಲ್. ಭೈರಪ್ಪ(೧೯೩೪)ನವರ ಕಾದಂಬರಿಗಳು, ಪಿ.ಲಂಕೇಶ್(೧೯೩೫) ಅವರ ಸಣ್ಣಕಥೆ-ಕಾದಂಬರಿಗಳು, ಚಂದ್ರಶೇಖರ ಕಂಬಾರ(೧೯೩೭)ರ ಕಾದಂಬರಿಗಳು, ಗಿರಡ್ಡಿ ಗೋವಿಂದರಾಜ (೧೯೩೯) ಅವರ ಸಣ್ಣಕಥೆಗಳು, ನಾ. ಮೊಗಸಾಲೆ(೧೯೪೪)ಯವರ ಸಣ್ಣಕಥೆ-ಕಾದಂಬರಿಗಳು, ವೈದೇಹಿ(೧೯೪೫)ಯವರ ಸಣ್ಣಕಥೆಗಳು, ಶ್ರೀಕೃಷ್ಣ ಆಲನಹಳ್ಳಿ(೧೯೪೭)ಯವರ ಸಣ್ಣಕಥೆ-ಕಾದಂಬರಿಗಳು, ದೇವನೂರು ಮಹಾದೇವ(೧೯೪೯) ಅವರ ಸಣ್ಣಕಥೆ-ಕಾದಂಬರಿಗಳು, ಕುಂ. ವೀರಭದ್ರಪ್ಪ(೧೯೫೩)ನವರ ಸಣ್ಣಕಥೆ-ಕಾದಂಬರಿಗಳು, ಬರಗೂರು ರಾಮಚಂದ್ರಪ್ಪನವರ ಸಣ್ಣಕಥೆ-ಕಾದಂಬರಿಗಳು, ಬಿ.ಟಿ. ಲಲಿತಾ ನಾಯಕ ಅವರ ಸಣ್ಣಕಥೆ-ಕಾದಂಬರಿಗಳು, ಗೀತಾ ನಾಗಭೂಷಣ ಅವರ ಸಣ್ಣಕಥೆ-ಕಾದಂಬರಿಗಳು, ಸಾ.ರಾ. ಅಬೂಬಕ್ಕರ್ ಅವರ ಸಣ್ಣಕಥೆ-ಕಾದಂಬರಿಗಳು, ಬೋಳುವಾರು ಮಹಮ್ಮದ್ ಕುಂಞ್ಞ ಅವರ ಸಣ್ಣಕಥೆ-ಕಾದಂಬರಿಗಳು, ವೀಣಾ ಶಾಂತೇಶ್ವರ ಅವರ ಸಣ್ಣಕಥೆ-ಕಾದಂಬರಿಗಳು, ಬೆಸಗರಹಳ್ಳಿ ರಾಮಣ್ಣನವರ ಸಣ್ಣಕಥೆಗಳು, ಕಾಳೇಗೌಡ ನಾಗವಾರ ಅವರ ಸಣ್ಣಕಥೆಗಳು, ಕರೀಗೌಡ ಬೀಚನಹಳ್ಳಿಯವರ ಸಣ್ಣಕಥೆಗಳು, ಕೃಷ್ಣಮೂರ್ತಿ ಪುರಾಣಿಕ ಅವರ ಸಣ್ಣಕಥೆಗಳು, ರಾಜಶೇಖರ ನೀರಮಾನ್ವಿಯವರ ಸಣ್ಣಕಥೆಗಳು, ಜಂಬಣ್ಣ ಅಮರಚಿಂತ ಅವರ ಸಣ್ಣಕಥೆಗಳು, ವ್ಯಾಸರಾವ ನಿಂಜೂರರ ಸಣ್ಣಕಥೆ-ಕಾದಂಬರಿಗಳು, ಅಮರೇಶ ನುಗಡೋಣಿ ಯವರ ಸಣ್ಣಕಥೆಗಳು, ಮೊಗಳ್ಳಿ ಗಣೇಶ್ ಅವರ ಸಣ್ಣಕಥೆ-ಕಾದಂಬರಿಗಳು ಇವು ಒಟ್ಟು ತೃತೀಯ ಜಗತ್ತಿನ ಸಾಮಾಜಿಕ ಸ್ಥಿತ್ಯಂತರಗಳ ಕೆಲವು ಮೂಲಮಾದರಿಗಳನ್ನು ಸೂಕ್ಷ್ಮವಾಗಿ ಚಿತ್ರಿಸಿವೆ. ಇಲ್ಲಿ ಈ ಬಗೆಯ ಸಾಹಿತ್ಯ ಕೃತಿಗಳಲ್ಲಿ ಆಧುನಿಕತೆಯ ಪ್ರವೃತ್ತಿಯು ಪ್ರಕಟಗೊಂಡಿದೆ. ವಸಾಹತುಶಾಹಿ ತಂದ ಹೊಸ ಮೌಲ್ಯಗಳಿಗೆ ನಮ್ಮ ಸಮಾಜದ ಪ್ರತಿಕ್ರಿಯೆ ಏಕರೀತಿಯಾಗಿರಲಿಲ್ಲ. ನಮ್ಮ ಬಹುಮುಖಿ ಸಂಸ್ಕೃತಿಯು ಲಾವಣಿ, ತತ್ವಪದಗಳು, ಜನಪದ ಗೀತೆಗಳು, ಕಾವ್ಯ, ನಾಟಕ, ಕಥೆ-ಕಾದಂಬರಿ ಹೀಗೆ ವ್ಯಕ್ತಪಡಿಸಿದ ಪ್ರತಿಕ್ರಿಯೆಯು ಬಹುರೂಪಿಯಾಗಿತ್ತು. ಕೆಲವು ಬದಲಾವಣೆಗಳು ನಮ್ಮನ್ನು ತಲ್ಲಣಗೊಳಿಸುತ್ತವೆ. ಕೆಲವು ವಿರೋಧಿಸಿದರೆ ಮತ್ತೆ ಕೆಲವುಗಳೊಂದಿಗೆ ರಾಜಿ ಮಾಡಿಕೊಳ್ಳಲಾಯಿತು. ಕೆಲವನ್ನು ಸ್ವಾಗತಿಸಿದರೆ ಮತ್ತೆ ಕೆಲವನ್ನು ಉಗ್ರವಾಗಿ

ಪ್ರತಿಭಟಿಸಲಾಯಿತು. ಸ್ವಾಗತ, ರಾಜಿ, ಸಂಘರ್ಷಗಳ ನಡುವೆ ನಮ್ಮ ಕಥೆ-ಕಾದಂಬರಿಕಾರರು ಈ ಆಧುನಿಕ ಪ್ರಕ್ರಿಯೆಯನ್ನು ಕಥನವಾಗಿಸಿದ್ದಾರೆ. ದೇಶೀಯ ಮತ್ತು ವಿದೇಶೀಯ ಸಂಸ್ಕೃತಿಗಳ ಮುಖಾಮುಖಿ ಸ್ವರೂಪ ಈ ಆಧುನಿಕತೆಯ ಒಂದು ಮುಖವಾಗಿದೆ. ನಮಗೆ ಆಧುನಿಕತೆ ಬಂದದ್ದು ಅನಿವಾರ್ಯತೆಯಿಂದಲ್ಲ. ಆದರೆ ನಮ್ಮ ವಾಸ್ತವವಾದಿ ಪ್ರೇರಣೆಗಳಿಗೆ ಮೂಲ ಈ ಆಧುನಿಕತೆಯ ಪ್ರವೇಶದಿಂದಾಗಿ ಹುಟ್ಟಿದ ಹೊಸ ಪರಿಸ್ಥಿತಿಗಳು. ನಮ್ಮನ್ನು ಸ್ಪಷ್ಟಪಡಿಸಿಕೊಳ್ಳುವ ಮಾನಸಿಕ ಅನಿವಾರ್ಯತೆ, ವಸಾಹತುಶಾಹಿ ತಂತ್ರಗಾರಿಕೆ, ಸುಧಾರಣೆ ಮತ್ತು ಆಕ್ರಮಣಗಳಿಂದ ಪ್ರವೇಶ ಪಡೆದ 'ಆಧುನಿಕತೆ'. ನಮ್ಮ ಸಾಮಾಜಿಕ ಸಂರಚನೆಗಳ ಮೇಲೆ ನಮ್ಮ ಪರಂಪರಾಗತ ಮೌಲ್ಯಗಳ ಮೇಲೆ ಉಂಟು ಮಾಡಿದ ಆಘಾತದ ಸ್ವರೂಪ ಕೂಡ ಸಂಕೀರ್ಣವಾದದ್ದು. ಚರಿತ್ರೆ ಯುದ್ದಕ್ಕೂ ಪಾಶ್ಚಾತ್ಯರ ಆಕ್ರಮಣಕ್ಕೆ ಒಳಗಾಗುತ್ತಲೇ ಇರುವ ಭಾರತೀಯ ಸಮಾಜ, ಸಂಸ್ಕೃತಿ, ಭಾಷೆ, ಜನ ಈ ಬಗೆಯ ಆಘಾತಗಳನ್ನು ಎದುರಿಸುತ್ತಲೇ ಬಂದಿದೆ.

ಆಧುನಿಕ ಕಥನಸಾಹಿತ್ಯದಲ್ಲಿ ಆಧುನಿಕತೆಯ ಪ್ರತೀಕವಾದ ಅಥವಾ ಆಧುನೀಕರಣ ಪ್ರಕ್ರಿಯೆಯ ಅಂಶಗಳಾದ ದವಾಖಾನೆ, ಅಂಚೆ ಕಚೇರಿ, ನ್ಯಾಯಾಲಯ, ಕಾರಾಗೃಹ, ರೈಲು ನಿಲ್ದಾಣ, ಬಸ್ ನಿಲ್ದಾಣ, ವಿಮಾನ ನಿಲ್ದಾಣ, ಹಡಗು ತಂಗುದಾಣ, ತಹಸೀಲ್ ಕಛೇರಿ, ಆರಕ್ಷಕ ಠಾಣೆ, ಆಕಾಶವಾಣಿ, ದೂರದರ್ಶನ ಕೇಂದ್ರ, ಮುದ್ರಣಾಲಯ, ಮೊಬೈಲ್ ಸೆಂಟರ್, ಕಂಪ್ಯೂಟರ್ ಸೆಂಟರ್ ಹಾಗೂ ಹೋಟೆಲು ಮುಂತಾದವುಗಳು ಪ್ರವೇಶ ಪಡೆದುಕೊಂಡಿವೆ. ಆಧುನಿಕ ಸಂದರ್ಭದಲ್ಲಿ ಮನುಷ್ಯ ಜೀವನದ ಒಂದು ಅನಿವಾರ್ಯ ಅಂಗವಾಗಿ ಹೋಟೆಲು ಬೆಳೆದುನಿಂತಿದೆ. ಗ್ರಾಮಾಂತರ ಪ್ರದೇಶದಿಂದ ಹಿಡಿದು ನಗರಪ್ರದೇಶದವರೆಗೆ ವಿವಿಧ ಸ್ತರ, ವಿನ್ಯಾಸಗಳ ಹೋಟೆಲು ಗಳನ್ನು ನಾವಿಂದು ಕಾಣಬಹುದಾಗಿದೆ. ಚಾದಂಗಡಿ, ಖಾನಾವಳಿ, ಭವನ, ಉಪಾಹಾರ ಮಂದಿರ, ಫಲಾಹಾರ ಮಂದಿರ, ಟಿಫಿನ್ ಸೆಂಟರ್, ಟೀ ಸ್ಟಾಲ್, ಟೀ ಅಂಗಡಿ, ಮೆಸ್ಸು, ಬಾರ್ ಮತ್ತು ರೆಸ್ಟೋರೆಂಟ್, ಹೋಟೆಲು, ಸಾಂತೇರ ಗ್ರೂಫ್ ಆಫ್ ಹೋಟೆಲ್ಸ್, ಊಟ ಚಹಾ ಮತ್ತು ಕಾಫಿ ಹೋಟೆಲು, ಲೇಡಿಜ್ ಬಾರ್, ದಾಬಾ ಇತ್ಯಾದಿ ಬಗೆ ಬಗೆಯ ಹೆಸರು ಗಳಿಂದ ಹೋಟೆಲುಗಳು ಜನರನ್ನು ಆಕರ್ಷಿಸುತ್ತವೆ. ಪ್ರಯಾಣ, ಪ್ರವಾಸಗಳು ಹೆಚ್ಚುತ್ತಿರುವ ಇವತ್ತಿನ ದಿನಮಾನಗಳಲ್ಲಿ ಪ್ರಯಾಣಿಕರಿಗೆ ಊಟ-ತಿಂಡಿಗಳ ಜೊತೆಗೆ ವಸತಿವ್ಯವಸ್ಥೆಯನ್ನು ಕಲ್ಪಿಸುವ ಹೋಟೆಲುಗಳು ದಿನೇ ದಿನೇ ಹುಟ್ಟಿಕೊಳ್ಳುತ್ತಿವೆ. ಗ್ರಾಹಕರಿಗೆ ಅವರವರ ಅವಶ್ಯಕತೆಗಳನ್ನು ಪೂರೈಸುವ ಕೇಂದ್ರಗಳಾದರೆ ಮಾಲೀಕರಿಗೆ ಆದಾಯವನ್ನು ತಂದುಕೊಡುವ ಉದ್ಯಮ ತಾಣಗಳಾಗಿವೆ. ಹೀಗೆ ವಾಣಿಜ್ಯ, ಉದ್ಯಮ, ಊಟ, ಉಪಾಹಾರ ಇತ್ಯಾದಿಗಳಿಗೆಂದೇ ಹುಟ್ಟಿಕೊಂಡ ಹೋಟೆಲುಗಳು ವಿವಿಧ ವಿದ್ಯಮಾನ, ಚಟುವಟಿಕೆಗಳ ಕೇಂದ್ರವಾಗಿ ಗಮನ ಸೆಳೆಯುತ್ತವೆ. ಸುದ್ದಿ, ವರ್ತಮಾನಗಳ ಸೃಷ್ಟಿ, ಟೀಕೆ, ಪ್ರಸಾರತಾಣಗಳಾಗಿ ಗ್ರಾಮೀಣ ಜನರಿಗೆ ಬಿಡುವಿನ ವೇಳೆಯ ಹರಟೆಯ ಕೇಂದ್ರಗಳಾಗಿ,

ಆಧುನಿಕತೆಯ ಪ್ರವೇಶ ಮಾಧ್ಯಮವಾಗಿ, ಪರಂಪರೆ ಮತ್ತು ಆಧುನಿಕತೆಯ ಸಂಘರ್ಷದ ತಾಣವಾಗಿ ಗ್ರಾಮೀಣ ಪ್ರದೇಶದ ಹೋಟೆಲುಗಳು ಗಮನಾರ್ಹವೆನಿಸುತ್ತವೆ.

ಹೀಗೆ ಆಧುನಿಕ ಸಂದರ್ಭದ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಹೋಟೆಲುಗಳು ಸಹಜವಾಗಿಯೇ ನಮ್ಮ ಸಾಹಿತ್ಯದಲ್ಲೂ ಸ್ಥಾನ ಪಡೆದಿರುತ್ತವೆ. ಹಾಗೆ ನೋಡಿದರೆ ವಿಶ್ವಸಾಹಿತ್ಯದಲ್ಲೂ 'ಭಾಸರನ', 'ಕ್ಯಾಂಟರ್ ಬರಿ ಟೇಲ್ಸ್' ಕಥೆ-ಘಟನಾವಳಿಗಳು ನಡೆಯುವುದು ಛತ್ರದಲ್ಲಿ. ಆಧುನಿಕ ಸಂದರ್ಭದಲ್ಲಂತೂ ಬದುಕಿನಂತೆ ಸಾಹಿತ್ಯಕ್ಕೂ ಹೋಟೆಲು ಒಂದು ಅನಿವಾರ್ಯ ಸಂಗತಿ ಎನಿಸಿತು. ಅದರಲ್ಲೂ ಕಥನಸಾಹಿತ್ಯದಲ್ಲಂತೂ ಹೋಟೆಲಿನ ಚಿತ್ರಣಕ್ಕೆ ಪ್ರಮುಖ ಸ್ಥಾನವಿದೆ. ಕನ್ನಡದ ಕೆಲವು ಕಥೆ-ಕಾದಂಬರಿಗಳಿಗೆ ಹೋಟೆಲಿನ ಹೆಸರೇ ಶೀರ್ಷಿಕೆಯಾಗಿ ಬಂದಿರುವುದು ಇದಕ್ಕೆ ಪ್ರಮುಖ ಸಾಕ್ಷಿ ಎನ್ನಬಹುದು. ಪಂಜೆ ಮಂಗೇಶರಾಯರ 'ಕಮಲಾಪುರದ ಹೊಟ್ಲಿನಲ್ಲಿ', ವೀಣಾ ಶಾಂತೇಶ್ವರರ 'ಹೋಟೆಲ್ ಬ್ಲೂವ್', ಬಿ.ಎಲ್. ವೇಣು ಅವರ 'ಗೌರಿ ಮೆಸ್ಸು', ಬೇಲೂರು ರಾಮಮೂರ್ತಿ ಅವರ 'ಶೀನಣ್ಣನ ಟೀ ಅಂಗಡಿ', ಜಿ.ವಿ. ಪ್ರಭು ಅವರ 'ಕೃಷ್ಣಭಟ್ಟರು ಹಾಗೂ ಅವರ ಹೋಟೆಲು ಉದ್ಯಮ'ವು, ದು.ನಿಂ. ಬೆಳಗಲಿ ಅವರ 'ಕಾತ್ರಾಳ ರತ್ನಿಯ ಚಾದಂಗಡಿ', ಬಸವರಾಜ ಕಟ್ಟೀಮನಿ ಅವರ 'ಖಾನಾವಳಿ ನೀಲಾ', ವ್ಯಾಸರಾವ ನಿಂಜೂರ ಅವರ 'ಶ್ರೀ ಚಾಮುಂಡೇಶ್ವರಿ ಭವನ' ಮುಂತಾದ ಶೀರ್ಷಿಕೆಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ. ಇವಲ್ಲದೇ ಕನ್ನಡದ ಬಹುತೇಕ ಕಥೆ-ಕಾದಂಬರಿಗಳಲ್ಲಿ ಹೋಟೆಲಿನ ಚಿತ್ರಣವು ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಂಡಿದೆ.

ಗ್ರಾಮೀಣ ಪರಿಸರದ ಸಾಮಾಜಿಕ ಸ್ಥಿತಿಗಳನ್ನು ವಿವರಿಸುವಲ್ಲಿ, ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ತಿಳಿಸುವಲ್ಲಿ, ಸಂಪ್ರದಾಯ ಪರಂಪರೆಯ ಆಧುನಿಕ ಮುಖಾಮುಖಿಯನ್ನು ಅಭಿವ್ಯಕ್ತಿಸುವಲ್ಲಿ, ಗ್ರಾಮೀಣ ಪ್ರದೇಶಕ್ಕೆ ನಗರಸಂಸ್ಕೃತಿಯು ಪ್ರವೇಶವಾದದ್ದನ್ನು ನಿರೂಪಿಸುವಲ್ಲಿ, ನಗರಸಂಸ್ಕೃತಿ ಮತ್ತು ನಗರಪ್ರಜ್ಞೆಯನ್ನು ಅಭಿವ್ಯಕ್ತಿಸುವಲ್ಲಿ ಒಟ್ಟಾರೆ ಕಥನದ ಬೆಳವಣಿಗೆ ಮತ್ತು ಸನ್ನಿವೇಶ ನಿರ್ಮಾಣದಲ್ಲಿ, ಕಥನತಂತ್ರವನ್ನು ರೂಪಿಸುವಲ್ಲಿ ಹೋಟೆಲಿನ ಚಿತ್ರಣವು ಪ್ರಮುಖ ಪಾತ್ರ ವಹಿಸುತ್ತದೆ.

### ೧.೧. ಉದ್ದೇಶ

ಕನ್ನಡ ಸಾಹಿತ್ಯವನ್ನು ವಿವಿಧ ದೃಷ್ಟಿಕೋನ, ಪರಿಕಲ್ಪನೆ, ವಾದಗಳ ಹಿನ್ನೆಲೆಯಲ್ಲಿ ಬಹುವಿಧವಾಗಿ ಅಧ್ಯಯನ ನಡೆಸಲಾಗಿದೆ. ಆದರೆ ಸಾಹಿತ್ಯಕ್ಕೂ ಹೋಟಲಿಗೂ ನಡುವೆ ಇರುವ ಅಂತಃಸಂಬಂಧದ ನೆಲೆಯಲ್ಲಿ ಕನ್ನಡ ಸಾಹಿತ್ಯದ ಅಧ್ಯಯನವು ನಡೆದಿಲ್ಲವೆಂದೇ ಹೇಳಬಹುದು. ಸಾಹಿತ್ಯೇತರ ಜ್ಞಾನಶಿಸ್ತುಗಳಲ್ಲಿ ಹೋಟೆಲು ಉದ್ಯಮದ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ.

ಈ ಹಿನ್ನೆಲೆಯಲ್ಲಿ ಕನ್ನಡ ಕಥನಸಾಹಿತ್ಯದಲ್ಲಿ ಹೋಟೆಲು ಚಿತ್ರಣಗೊಂಡ ಬಗೆಯ ವಿವಿಧ ಮುಖಗಳನ್ನು ಸ್ವರೂಪ, ವಿನ್ಯಾಸ, ಆಶಯಗಳನ್ನು ಗುರುತಿಸಿ ವಿಶ್ಲೇಷಿಸುವ ಉದ್ದೇಶದಿಂದ ಪ್ರಸ್ತುತ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಕನ್ನಡದ ಸಣ್ಣಕಥೆ-ಕಾದಂಬರಿಗಳು ಹೋಟೆಲಿನ ಚಿತ್ರಣದ ಮೂಲಕ 'ಉದ್ಯಮದಾಚೆಗಿನ ವಿದ್ಯಮಾನಗಳನ್ನು' ಹೇಗೆ ಅಭಿವ್ಯಕ್ತಿಸಿವೆ ಎಂಬುದನ್ನು ಕಂಡುಕೊಳ್ಳುವ ಪ್ರಮುಖ ಉದ್ದೇಶವನ್ನು ಇಲ್ಲಿ ಇರಿಸಿ ಕೊಳ್ಳಲಾಗಿದೆ.

### ೧.೨. ವ್ಯಾಪ್ತಿ

ಹೋಟೆಲಿನೊಳಗಿನ ವಿದ್ಯಮಾನಗಳಿಗೆ ಕಲಾತ್ಮಕ ಅಭಿವ್ಯಕ್ತಿಯನ್ನು ನೀಡಿದ ಕನ್ನಡದ ಪ್ರಮುಖ ಸಣ್ಣಕಥೆ-ಕಾದಂಬರಿಗಳನ್ನು ಇಲ್ಲಿ ಪ್ರಧಾನ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಪಂಜೆ ಮಂಗೇಶರಾಯರ 'ಕಮಲಾಪುರದ ಹೊಟ್ಲಿನಲ್ಲಿ', ಚದುರಂಗರ 'ನಾಲ್ಕು ಮೊಳ ಭೂಮಿ', 'ತುಳಸಿ', '೧೯೬೭', ವ್ಯಾಸರಾಯ ಬಲ್ಲಾಳರ 'ಎರಡು ಧ್ರುವ', 'ಸಂಪಿಗೆ ಹೂವು', 'ಬೆಂಕಿಯ ನಾಲಗೆ', 'ಕಾಡು ಮಲ್ಲಿಗೆ', 'ಹೊಸ ಹಗಲು', ಯಶವಂತ ಚಿತ್ತಾಲರ 'ತ್ರಯೋದಶ ಪುರಾಣ', 'ಮುಖಾಮುಖಿ', ಯು.ಆರ್. ಅನಂತಮೂರ್ತಿ ಅವರ 'ಪ್ರಕೃತಿ', 'ಪ್ರಸ್ತ, 'ಘೋಜರಾಜ', 'ಬರ', 'ಸೂರ್ಯನ ಕುದುರೆ', 'ಆಕ್ರಮಣ', 'ಕ್ಲಿಪ್ ಜಾಯಿಂಟ್', ಮಾವಿನಕೆರೆ ರಂಗನಾಥರ 'ಉಳಿದದ್ದು ಆಕಾಶ', ಜಿ.ಎಸ್. ಸದಾಶಿವ ಅವರ 'ಮೀಸೆಯವರು', 'ಹ್ಯಾಂಗೋವರ್', ಸಾ.ರಾ. ಅಬೂಬಕ್ಕರ್ ಅವರ 'ಮೂಲೆ ಮುಟ್ಟಿದ ಹುಳು', 'ಚಪ್ಪಲಿಗಳು', ಎಂ.ಬಿ. ಕುಕ್ಯಾನ್ ಅವರ 'ಮೃಣಾಲಿನಿ', 'ಎಕ್ಸ್‌ಪರ್ಟ್ ಮ್ಯಾನೇಜರ' ಮತ್ತು 'ಕಳ್ಳರ ಕಳ್ಳ', ವೀಣಾ ಶಾಂತೇಶ್ವರರ 'ಹೋಟೆಲ್ ಬ್ಲೂವ್', ಬೇಲೂರು ರಾಮಮೂರ್ತಿ ಅವರ 'ಶೀನಣ್ಣನ ಟೀ ಅಂಗಡಿ', ಜಿ.ವಿ. ಪ್ರಭು ಅವರ 'ಕೃಷ್ಣಭಟ್ಟರು ಅವರ ಹೋಟೆಲು ಉದ್ಯಮವು', ಬಿ.ಎಲ್. ವೇಣು ಅವರ 'ಗೌರಿ ಮೆಸ್ಸು', ಅಮರೇಶ ನುಗಡೋಣಿ ಅವರ 'ಏ ದಿಲ್ ಮಾಂಗೆ ಮೋರ್', 'ಕಣ್ಣು ಮುಕ್ಕಾದ ಬೀಜಗಳು', 'ಕಾಗಿಕೂಟ' ಮುಂತಾದ ಸಣ್ಣಕಥೆಗಳನ್ನೂ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ', ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು', ಅನಕೃ ಅವರ 'ಸಂಧ್ಯಾರಾಗ', 'ಸುಂದರ ಸಂಸಾರ', 'ಕಳಂಕಿನಿ', 'ನಗ್ನಸತ್ಯ', 'ಶನಿ ಸಂತಾನ', 'ಸಂಜೆಗತ್ತಲು', 'ಅಪರಂಜಿ', 'ಪಂಕಜ', ಶಾಂತಿನಾಥ ದೇಸಾಯಿಯವರ 'ಬೀಜ', ಬೀಚಿಯವರ 'ಆರಿದ ಚಹಾ', ಸಾಯಿಸುತೆ ಅವರ 'ಶಿಶಿರದ ಇಂಚರ', 'ಪ್ರೇಮ ಸಾಫಲ್ಯ', ಬಸವರಾಜ ಕಟ್ಟೀಮನಿ ಅವರ 'ಖಾನಾವಳಿ ನೀಲಾ', 'ಬೀದಿಯಲ್ಲಿ ಬಿದ್ದವಳು', ವ್ಯಾಸರಾಯ ಬಲ್ಲಾಳರ 'ವಾತ್ಸಲ್ಯ ಪಥ', 'ಬಂಡಾಯ', 'ಹೆಜ್ಜೆ', ನಿರಂಜನರ 'ಚಿರಸ್ಮರಣೆ', ಶಂಕರ ಮೊಖಾಶಿ ಪುಣೇಕರ ಅವರ 'ಗಂಗವ್ವ ಗಂಗಾಮಾಯಿ', ದು.ನಿಂ. ಬೆಳಗಲಿ ಅವರ 'ಕಾತ್ರಾಳ ರತ್ನಿಯ ಚಾದಂಗಡಿ',

ಯು.ಆರ್. ಅನಂತಮೂರ್ತಿ ಅವರ 'ಪ್ರೀತಿ ಮೃತ್ಯು ಭಯ', 'ಭಾರತೀಪುರ', 'ಸಂಸ್ಕಾರ', ಪೂರ್ಣಚಂದ್ರ ತೇಜಸ್ವಿ ಅವರ 'ಚಿದಂಬರ ರಹಸ್ಯ', 'ಸ್ವರೂಪ', ನಾ. ಮೊಗಸಾಲೆಯವರ 'ಉಲ್ಲಂಘನೆ', ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು', 'ಪರಸಂಗದ ಗೆಂಡೆತಿಮ್ಮ', ಕುಂ.ವೀರಭದ್ರಪ್ಪ ಅವರ 'ಕೊಟ್ರೇಶಿ ಕನಸು', ವ್ಯಾಸರಾವ ನಿಂಜೂರರ 'ಶ್ರೀ ಚಾಮುಂಡೇಶ್ವರಿ ಭವನ', 'ತೆಂಕ ನಿಡಿಯೂರಿನ 'ಕುಳವಾರಿಗಳು', ತ್ರಿವೇಣಿಯವರ 'ಮೊದಲ ಹೆಜ್ಜೆ', ಕೆ.ಟಿ. ಗಟ್ಟಿಯವರ 'ಮೃತ್ಯೋರ್ಮಾ ಅಮೃತಂಗಮಯ', 'ಪುನರಪಿ ಜನನ', 'ಅಮುಕ್ತ', 'ಯುಗಾಂತರ', 'ಅಭಿಚಾರ', 'ಮಿತಿ', ನಾ. ಡಿಸೋಜ ಅವರ 'ಹರಿಯುವ ನದಿ', 'ಬೆಂಕಿಯ ನಾಲಿಗೆ', 'ವಿಷಾನಿಲ', ಉಷಾ ನವರತ್ನರಾಮ ಅವರ 'ಯೌವ್ವನದ ಹೊನಲಲ್ಲಿ', ಮೊಗಳ್ಳಿ ಗಣೇಶ್ ಅವರ 'ಅನಾದಿ', ಸುದರ್ಶನ ದೇಸಾಯಿ ಅವರ 'ಸೀಳು ನಾಲಿಗೆ', 'ಪೊಲೀಸ್ ಡಾಗ್' ಮುಂತಾದ ಕಾದಂಬರಿಗಳನ್ನೂ ಪ್ರಾತಿನಿಧಿಕವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇವಲ್ಲದೆ ಕಥನದ ಬೆಳವಣಿಗೆ ಮತ್ತು ಸನ್ನಿವೇಶ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಆಯ್ದ ಕೆಲವು ಜನಪ್ರಿಯ ಕಾದಂಬರಿಗಳನ್ನೂ, ಅದೇ ರೀತಿ ಕೆಲವು ಪತ್ತೇದಾರಿ ಕಾದಂಬರಿಗಳನ್ನೂ ಆಕರಗಳಾಗಿ ಬಳಸಿಕೊಳ್ಳಲಾಗಿದೆ.

### ೧.೩. ವೈಧಾನಿಕತೆ

ಮುಖ್ಯವಾಗಿ ಇಲ್ಲಿ ಆಕರಮುಖಿ ವಿಶ್ಲೇಷಣಾತ್ಮಕ ಅಧ್ಯಯನ ವಿಧಾನವನ್ನು ಅನುಸರಿಸಲಾಗಿದೆ. ಅದರೊಳಗಡೆ ಸಾಹಿತ್ಯ ಮತ್ತು ಆಧುನೀಕರಣ ಪ್ರಕ್ರಿಯೆ ಎಂಬ ಪರಿಕಲ್ಪನೆಯನ್ನು ಅನ್ವಯಿಸಿ ಕೊಳ್ಳಲಾಗಿದೆ. ಕನ್ನಡದ ಸಣ್ಣಕಥೆ-ಕಾದಂಬರಿಗಳು ಹೋಟೆಲಿನ ಚಿತ್ರಣದ ಮೂಲಕ ಗ್ರಾಮೀಣ ಪ್ರದೇಶದ ಸಮಾಜಶಾಸ್ತ್ರೀಯ ಸಂಗತಿಗಳನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತವೆ. ಹಾಗಾಗಿ ಸಾಹಿತ್ಯ ಮತ್ತು ಸಮಾಜಶಾಸ್ತ್ರದ ಅಂತಃಸಂಬಂಧದ ನೆಲೆಗಳನ್ನು ಶೋಧಿಸುವ ಅಧ್ಯಯನ ವಿಧಾನವೂ ಇಲ್ಲಿದೆ.

ಅಧ್ಯಾಯ : ಎರಡು

# ಪ್ರಸ್ತಾವನೆ - ವಿಷಯ ಪ್ರವೇಶ

ಅಧ್ಯಾಯ : ಎರಡು

# ಪ್ರಸ್ತಾವನೆ - ವಿಷಯ ಪ್ರವೇಶ

## ೨.೧. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಕನ್ನಡ ಕಥನಸಾಹಿತ್ಯವು ಹಿಂದಿನ ಸಾಹಿತ್ಯದಿಂದ ಮುಖ್ಯವಾಗಿ ಬೇರ್ಪಟ್ಟಿರುವುದು ತನ್ನ ಮನೋಧರ್ಮದಿಂದಾಗಿ. ಪ್ರಾಚೀನ ಸಾಹಿತ್ಯದಲ್ಲಿ ದೇವರನ್ನು ಮತ್ತು ಧರ್ಮವನ್ನು ಕೇಂದ್ರವಾಗಿಟ್ಟು ಕೊಳ್ಳಲಾಗುತ್ತಿತ್ತು. ದೇವರ ಸಾಹಸಗಾಥೆ, ಅವತಾರಗಳು, ಧಾರ್ಮಿಕ ವಿವರಣೆಗಳು, ಶಾಸ್ತ್ರಾದಿಗಳ ವಿವರಣೆಗಳು ಹಾಗೂ ನೀತಿ-ಬೋಧನೆಗಳು ಅಲ್ಲಿನ ಕಥಾವಸ್ತುವಾಗಿದ್ದವು. ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯದಲ್ಲಿ ಪದ್ಯ ಮಾಧ್ಯಮದ ಕಾವ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿತ್ತು. ಆದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪದ್ಯಕ್ಕಿಂತ ಗದ್ಯ ಮಾಧ್ಯಮವು ಮಹತ್ವವನ್ನು ಪಡೆದುಕೊಂಡಿತು. ಸಣ್ಣಕಥೆ–ಕಾದಂಬರಿಗಳನ್ನು ಒಳಗೊಂಡ ಪ್ರಸ್ತುತ ಕಥನಸಾಹಿತ್ಯವೆಂಬುದು ಈ ಗದ್ಯ ಮಾಧ್ಯಮದ ಪ್ರಕಾರಗಳಾಗಿವೆ. ಈ ಕಥನಸಾಹಿತ್ಯದ ಆಸಕ್ತಿಯ ಕೇಂದ್ರ ದೇವರಾಗಿರದೆ ಮನುಷ್ಯನ ವೈಯಕ್ತಿಕ ಕಾಲ್ಪನಿಕ ಅನುಭವಗಳು ಕೃತಿಯ ವಸ್ತುವಾದವು. ವಾಸ್ತವತೆಗೆ ತೀರ ಹತ್ತಿರವಾಗಿ ಜೀವನದ ಭಾಗವಾಗಿ ಸನ್ನಿವೇಶಗಳನ್ನು ಸಹೃದಯರ ಮನಸ್ಸಿನಲ್ಲಿ ಮೂಡಿಸುವ ಉದ್ದೇಶ ಕಥನಕಾರರಿಗೆ ಬಂತು. ಹೀಗಾಗಿ ಇಲ್ಲಿ ಸಾಂಪ್ರದಾಯಿಕ ಮನೋಭಾವ ಮಾಯವಾಗಿ ವೈಚಾರಿಕತೆ ಎಂಬ ವಿಚಾರಸರಣಿಯು ನಿರ್ಮಾಣ ಗೊಂಡಿತು. ಆಧುನಿಕತೆಯ ಪ್ರತೀಕವಾದ ಅಥವಾ ಆಧುನೀಕರಣ ಪ್ರಕ್ರಿಯೆಯ ಅಂಶಗಳಾದ ಹೋಟೆಲು, ದವಾಖಾನೆ, ಅಂಚೆ ಕಛೇರಿ, ನ್ಯಾಯಾಲಯ, ತಹಸೀಲ್ ಕಛೇರಿ, ರೈಲು ನಿಲ್ದಾಣ, ಬಸ್ಸು ನಿಲ್ದಾಣ, ವಿಮಾನ ನಿಲ್ದಾಣ, ರೇಡಿಯೋ, ಆರಕ್ಷಕ ಠಾಣೆ, ಕಾರಾಗೃಹ, ಮುದ್ರಣಾಲಯ, ಹಡಗು ನಿಲ್ದಾಣ, ದೂರದರ್ಶನ ಕೇಂದ್ರ, ಮೊಬೈಲ್ ಸೆಂಟರ್, ಕಂಪ್ಯೂಟರ್ ಸೆಂಟರ್ ಮುಂತಾದವುಗಳು ಪ್ರವೇಶ ಪಡೆದುಕೊಂಡವು. ಇವುಗಳಲ್ಲಿ ಹೋಟೆಲು

ಎಂಬುದು ಸಾಹಿತ್ಯದ ವಸ್ತುವಾಗಿ, ಸನ್ನಿವೇಶ ನಿರ್ಮಾಣದ ಘಟಕವಾಗಿ ಕನ್ನಡ ಕಥನಸಾಹಿತ್ಯದಲ್ಲಿ ಹೋಟೆಲು ಅಥವಾ ಹೋಟೆಲಿನ ಪರ್ಯಾಯ ಘಟಕಗಳು ಹೇಗೆ ಪರಿಕಲ್ಪಿತವಾಗಿವೆ ಎಂಬುದನ್ನು ಅಧ್ಯಯನ ನಡೆಸುವುದು ಅತ್ಯಂತ ಪ್ರಸ್ತುತವೆನಿಸುತ್ತದೆ. ಕನ್ನಡ ಸಾಹಿತ್ಯವನ್ನು ವಿವಿಧ ದೃಷ್ಟಿಕೋನ, ಪರಿಕಲ್ಪನೆ, ವಾದಗಳ ಹಿನ್ನೆಲೆಯಲ್ಲಿ ಬಹುವಿಧವಾಗಿ ಅಧ್ಯಯನ ನಡೆಸಲಾಗಿದೆ. ಆದರೆ, ಸಾಹಿತ್ಯಕ್ಕೂ ಹೋಟೆಲಿಗೂ ನಡುವೆ ಇರುವ ಅಂತರ್‌ಸಂಬಂಧದ ನೆಲೆಯಲ್ಲಿ ಕನ್ನಡ ಸಾಹಿತ್ಯದ ಅಧ್ಯಯನವು ನಡೆದಿಲ್ಲವೆಂದೇ ಹೇಳಬಹುದು. ಸಾಹಿತ್ಯೇತರ ಜ್ಞಾನಶಿಸ್ತುಗಳಲ್ಲಿ ಹೋಟೆಲು ಉದ್ಯಮದ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಇಂತಹ ಅಧ್ಯಯನಗಳು ಸಾಹಿತ್ಯಾಧ್ಯಯನ ಸಂದರ್ಭದಲ್ಲಿ ವಿಶೇಷ ಮಹತ್ವವನ್ನು ಪಡೆದುಕೊಳ್ಳದಿದ್ದರೂ ಕೇವಲ ಮಾಹಿತಿಯ ದೃಷ್ಟಿಯಿಂದ ಅವುಗಳನ್ನು ಇಲ್ಲಿ ಗಮನಿಸುವುದು ಸೂಕ್ತವೆನಿಸುತ್ತದೆ. ಈ ಕೆಳಗಿನ ಕೋಷ್ಟಕದಲ್ಲಿ ಭಾಷೆ, ಶಿಕ್ಷಣ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ, ವ್ಯವಹಾರ ಅಧ್ಯಯನ ಮುಂತಾದ ಜ್ಞಾನ ಶಿಸ್ತುಗಳಲ್ಲಿ ಹೋಟೆಲಿಗೆ ಸಂಬಂಧಪಟ್ಟಂತೆ ನಡೆದ ಕೆಲವು ಅಧ್ಯಯನಗಳನ್ನು ಗಮನಿಸಬಹುದಾಗಿದೆ.

| ಕ್ರ.ಸಂ. | ಸಂಶೋಧಕರು | ಸಂಶೋಧನೆಯ ವಿಷಯ | ವಿಶ್ವವಿದ್ಯಾಲಯ | ವರ್ಷ |
|---|---|---|---|---|
| ೧. | ಮೊಹಮ್ಮದ್ ಅಮೀರುಲ್ಲಾ ಖಾನ್ | ವಿಶೇಷ ಉದ್ದೇಶಗಳಿಗಾಗಿ ಇಂಗ್ಲೀಷ್ ಭಾಷಾ ಕಲಿಕೆ; ಕ್ಯಾಟರಿಂಗ್; ಹೋಟೆಲು ಮತ್ತು ಪ್ರವಾಸೋದ್ಯಮಗಳಲ್ಲಿನ ಸಿಬ್ಬಂದಿಗಳ ಇಂಗ್ಲಿಷ್ ಬಳಕೆ ಯನ್ನು ಅನುಲಕ್ಷಿಸಿ | ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗಕ್ಕೆ ಸಲ್ಲಿಸಿದ್ದಾರೆ | ೧೯೮೯ |
| ೨. | ಸುಂದರರಾಜನ್ ಇವಾಂಜಲಿನ | ಹೋಟೆಲು ವ್ಯವಹಾರ ಕ್ಯಾಟರಿಂಗ್ ತಂತ್ರಜ್ಞಾನ ಹಾಗೂ ಆನ್ವಯಿಕ ಪೌಷ್ಟಿಕತೆ ಹಿನ್ನೆಲೆ ಯಲ್ಲಿ ಹೋಟೆಲು ವ್ಯವಹಾರ ಮತ್ತು ಕ್ಯಾಟರಿಂಗ್ ತಂತ್ರಜ್ಞಾನ ವಿದ್ಯಾರ್ಥಿಗಳಲ್ಲಿನ ಪ್ರಕ್ರಿಯೆಗಳ ಅಧ್ಯಯನ | ಮುಂಬಯಿ ವಿಶ್ವ ವಿದ್ಯಾಲಯದ ಶಿಕ್ಷಣ ವಿಭಾಗಕ್ಕೆ ಸಲ್ಲಿಸಿದ್ದಾರೆ | ೧೯೯೭ |
| ೩. | ವೀರೇಂದ್ರಕುಮಾರ | ಹೋಟೆಲು ಉದ್ಯಮದಲ್ಲಿನ ಬಾಲಕಾರ್ಮಿಕರ ಮನಃಶಾಸ್ತ್ರೀಯ | ಸಾಗರ ಡಾ. ಹರಿಸಿಂಗ್ | ೨೦೦೮ |

| | | | | |
|---|---|---|---|---|
| | | ಅಧ್ಯಯನ, ಸಾಗರ ಮಹಾನಗರ ವನ್ನು ಅನುಲಕ್ಷಿಸಿ | ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ | |
| ೪. | ಕುಲಭೂಷಣ ಮೇಘೆ | ನಾಗಪುರ ನಗರದ ಹೋಟೆಲು ಉದ್ಯಮದಲ್ಲಿನ ಕಾರ್ಮಿಕರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ | ನಾಗಪುರದ ರಾಷ್ಟ್ರ ಸಂತ ತುಕಡೋಜಿ ಮಹಾರಾಜ ವಿಶ್ವ ವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ | ೧೯೮೨ |
| ೫. | ಜಯವಂತ ಸುಬೇದಾರ ಚೌಧರಿ | ಮಹಾಬಲೇಶ್ವರ ಮತ್ತು ಪಂಚಗಣಿ ಬೆಟ್ಟ ಪ್ರದೇಶಗಳಲ್ಲಿನ ಪ್ರವಾಸೋದ್ಯಮ ಹಾಗೂ ಹೋಟೆಲು ಉದ್ಯಮಗಳ ವಾಣಿಜ್ಯ ಹಾಗೂ ಆರ್ಥಿಕತೆಗಳ ಅಧ್ಯಯನ | ಕೊಲ್ಲಾಪುರ ಶಿವಾಜಿ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ | ೧೯೮೮ |
| ೬. | ಮೋಹಂತಿ ಪ್ರಗತಿ | ಒರಿಸ್ಸಾದಲ್ಲಿನ ಹೋಟೆಲು ಉದ್ಯಮದ ಅರ್ಥಶಾಸ್ತ್ರ | ಭುವನೇಶ್ವರಿ ಉತ್ಕಲ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೧ |
| ೭. | ಬಿ.ಎಲ್. ಅಗರವಾಲ | ರಾಜಸ್ಥಾನದಲ್ಲಿ ಹೋಟೆಲು ಉದ್ಯಮದ ಬೆಳವಣಿಗೆ ಮತ್ತು ಅಭಿವೃದ್ಧಿ; ಜೈಪುರ ನಗರವನ್ನು ಅನುಲಕ್ಷಿಸಿ | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೨ |
| ೮. | ಎಂ.ಎ. ಕಮಲಾಕ್ಷಿ | ಕೇರಳದಲ್ಲಿ ಹೋಟೆಲು ಉದ್ಯಮ; ಪ್ರವಾಸೋದ್ಯಮವನ್ನು ಅನುಲಕ್ಷಿಸಿ | ಕೊಚ್ಚಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೬ |

| | | | |
|---|---|---|---|
| ೯. ರೇಖಾರಾಣಿ | ಬರೇಲಿ ವಿಭಾಗದ ಹೋಟೆಲು ಮತ್ತು ಪ್ರವಾಸೋದ್ಯಮಗಳ ವಿಶ್ಲೇಷಣಾತ್ಮಕ ಅಧ್ಯಯನ | ಬರೇಲಿ ಮಹಾತ್ಮ ಜ್ಯೋತಿಬಾ ಫುಲೆ ರೋಹಿಲ್ಖಂಡ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೭ |
| ೧೦. ಹರಿಶ್ಚಂದ್ರ ಬಿಸ್ತಾ | ನೈನಿತಾಲ್ ಪ್ರದೇಶದ ಹೋಟೆಲು ಗಳಲ್ಲಿನ ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಅಧ್ಯಯನ | ನೈನಿತಾಲ ಕುಮೂನ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೭ |
| ೧೧. ಸುರಭಿ ಸಿಂಘಾಲ | ದೆಹಲಿಯ ಪಂಚತಾರಾ ಹೋಟೆಲುಗಳಲ್ಲಿನ ಕಾರ್ಯ ನಿರ್ವಹಣ ವಿಧಾನ | ದೆಹಲಿ ವಿಶ್ವ ವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೪ |
| ೧೨. ಎನ್. ಚಂದ್ರಪ್ಪ | ಶಿವಮೊಗ್ಗ ನಗರದಲ್ಲಿ ಬಾಲ ಕಾರ್ಮಿಕ ಪದ್ಧತಿ; ಹೋಟೆಲು, ಗ್ಯಾರೇಜು ಮತ್ತು ವರ್ಕ್‌ಶಾಪ್ ಗಳನ್ನು ಅನುಲಕ್ಷಿಸಿ | ಕುವೆಂಪು ವಿಶ್ವ ವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ | ೨೦೦೮ |
| ೧೩. ರೀಟಾ ದೇರಶ್ರೀ | ಭಾರತದ ಹೋಟೆಲು ಉದ್ಯಮ ದಲ್ಲಿ ಹಣಕಾಸು ನಿರ್ವಹಣೆ | ಜೋಧಪುರ ಜೈ ನಾರಾಯಣ ವ್ಯಾಸ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೮ |
| ೧೪. ಟಿ.ಆರ್. ಅನಿಲ ಕುಮಾರ | ಹೋಟೆಲು ಉದ್ಯಮ; ಸಮಸ್ಯೆಗಳು ಮತ್ತು ನಿರೀಕ್ಷೆಗಳು | ತಿರುವನಂತಪುರಂ ಕೇರಳ ವಿಶ್ವ ವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೩ |

| | | | |
|---|---|---|---|
| ೧೫. ವೈಶಾಲಿ ವಿನಯ ವರ್ಣೇಶ್ವರ | ಪುಣೆ ನಗರದಲ್ಲಿನ ಹೋಟೆಲು ಉದ್ಯಮದ ಸ್ಥಿತಿಗತಿಗಳು | ಮುಂಬಯಿ ಎಸ್.ಎನ್.ಡಿ.ಟಿ. ಮಹಿಳಾ ವಿಶ್ವ ವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೨ |
| ೧೬. ಸಯ್ಯದ್ ಅಹಮ್ಮದ್ | ಭಾರತದ ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿನ ಹೋಟೆಲು ವ್ಯವಹಾರಗಳ ತೌಲನಿಕ ಅಧ್ಯಯನ | ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೭೮ |
| ೧೭. ಎಸ್.ಎಂ. ನೇಗಿ | ಭಾರತದ ಪ್ರವಾಸೋದ್ಯಮ ಅಭಿವೃದ್ಧಿಗೆ ಹೋಟೆಲು ಉದ್ಯಮದ ಕೊಡುಗೆ | ಶ್ರೀನಗರ ಎಚ್.ಎನ್.ಬಿ.ಜಿ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೭೯ |
| ೧೮. ಮೋಹನ ನಗಾರಿ | ನಾಗಾಲ್ಯಾಂಡಿನಲ್ಲಿ ವ್ಯವಹಾರ ಸಂಸ್ಥೆಗಳ ಅಭಿವೃದ್ಧಿ; ಹೋಟೆಲು ವ್ಯವಹಾರಗಳನ್ನು ಅನುಲಕ್ಷಿಸಿ | ಇಂಪಾಲ ಮಣಿಪುರ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | |
| ೧೯. ರಾಜೇಶ್ವರ ಶರ್ಮಾ | ಕಾರ್ಪೊರೇಟ್ ವಲಯದ ಹೋಟೆಲ್ ಲೆಕ್ಕಪತ್ರಗಳ ವಿಧಾನ; ದೆಹಲಿಯಲ್ಲಿನ ಪಂಚತಾರಾ ಹೋಟೆಲುಗಳ ಹಣಕಾಸು ವರದಿಗಳ ವಿಶ್ಲೇಷಣಾತ್ಮಕ ಅಧ್ಯಯನ | ಹೊಸ ದೆಹಲಿ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೪ |
| ೨೦. ಕೃಷ್ಣಕುಮಾರ | ಉತ್ತರ ಪ್ರದೇಶ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಹೋಟೆಲು | ಬರೇಲಿ ಮಹಾತ್ಮ ಜ್ಯೋತಿಬಾ ಪುಲೆ | ೧೯೯೫ |

| | | | |
|---|---|---|---|
| | ಉದ್ಯಮದ ಪಾತ್ರ; ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಗಳನ್ನು ಅನುಲಕ್ಷಿಸಿ | ರೋಹಿಲ್ಖಂಡ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | |
| ೨೧. ಮೀರಾ ಸಯ್ಯದ್ ಅಹಮ್ಮದ್ | ಭಾರತದ ಸಾರ್ವಜನಿಕ ಹಾಗೂ ಖಾಸಗಿ ವಲಯಗಳಲ್ಲಿ ಹೋಟೆಲು ಉದ್ಯಮಗಳ ತೌಲನಿಕ ಅಧ್ಯಯನ | ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೭೭ |
| ೨೨. ಪೂಜಾ ಮತ್ತೂರ | ಸಾರ್ವಜನಿಕ ವಲಯದ ಹೋಟೆಲುಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕಾರ್ಯನಿರ್ವಹಣಾ ಅಭಿವೃದ್ಧಿ ದೆಹಲಿ ಅಶೋಕ ಹೋಟೆಲು ಕಾರ್ಯವಿಧಾನವನ್ನು ಅನುಲಕ್ಷಿಸಿ | ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೨ |
| ೨೩. ಬಿ. ಶ್ರೀನಿವಾಸ ರಾವ್ | ಆತಿಥ್ಯ ಸೇವೆಗಳು ಮಾರುಕಟ್ಟೆ; ಹೈದರಾಬಾದಿನ ಆಯ್ದ ತಾರಾ ಹೋಟೆಲುಗಳನ್ನು ಅನುಲಕ್ಷಿಸಿ | ನಾಗಾರ್ಜುನ ನಗರ ಆಚಾರ್ಯ ನಾಗಾರ್ಜುನ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೮ |
| ೨೪. ವೀರೇಂದ್ರ ಸಿಂಗ್ ಜಾಂಜ್ರಿಯ | ರಾಜಸ್ಥಾನದ ಹೋಟೆಲು ಉದ್ಯಮದಲ್ಲಿನ ಕಾರ್ಯ ಕುಶಲತೆ ಮತ್ತು ಸಮಸ್ಯೆಗಳು (ಶೇಖಾವತಿ ಕ್ಷೇತ್ರದ ವಿಶೇಷ ಅಧ್ಯಯನ) | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೬ |
| ೨೫. ನಾಗೇಶ ಮಿಶ್ರ | ರಾಜಸ್ಥಾನದ ಹೋಟೆಲು ಉದ್ಯಮದಲ್ಲಿನ ಆಡಳಿತಾತ್ಮಕ ಆಯಾಮಗಳು | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೬ |

| | | | |
|---|---|---|---|
| ೨೬. ಗೌರಿ ತ್ರಿವೇದಿ | ಗ್ವಾಲಿಯರ್ ಮತ್ತು ಚಂಬಲ್ ಪ್ರದೇಶಗಳಲ್ಲಿನ ಹೋಟೆಲು ಉದ್ಯಮದ ಆಡಳಿತಾತ್ಮಕ ಸಂರಚನೆಯ ಅಧ್ಯಯನ | ಗ್ವಾಲಿಯರ್ ಜಿಜಾಜಿ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೮ |
| ೨೭. ದೇಬಾಜಿನಿ ಸಾಹೋರ | ಹೋಟೆಲು ವ್ಯವಹಾರಗಳಲ್ಲಿ ಗ್ರಾಹಕ ಸಂಪರ್ಕ ನಿವಾರಣೆಯ ಸಂಯೋಜನೆ; ಒರಿಸ್ಸಾ ಮತ್ತು ಗುಜರಾತಿನ ಹೋಟೆಲುಗಳಲ್ಲಿನ ನಿರ್ವಹಣೆ ಮತ್ತು ಕಾರ್ಯ ವಿಧಾನಗಳ ಅಧ್ಯಯನ | ಭುವನೇಶ್ವರಿ ಉತ್ಕಲ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೯ |
| ೨೮. ಎಚ್.ಆರ್.ಪ್ರಿಯಾ ದಾಖರ | ಪ್ರವಾಸೋದ್ಯಮದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ; ಮೇಘಾಲಯದ ಹೋಟೆಲುಗಳ ಅಧ್ಯಯನ | ಶಿಲ್ಲೊಂಗ್ ನಾರ್ತ್ ಈಸ್ಟ್ ಹಿಲ್ ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೯ |
| ೨೯. ಕೇಸರ ಯಾದವ | ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲು ಗಳಲ್ಲಿನ ನಿರ್ವಹಣ ಸಾಮರ್ಥ್ಯ; ರಾಜಸ್ಥಾನವನ್ನು ಅನುಲಕ್ಷಿಸಿ | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ವ್ಯವಹಾರಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೮೮ |
| ೩೦. ನಿಯು ಹಾಸನ್ ಅಹಮ್ಮದ್ | ಭಾರತೀಯ ಹೋಟೆಲು ಉದ್ಯಮದ ಆರ್ಥಿಕತೆಯ ಗುಣಮಟ್ಟ ನಿಷ್ಕರ್ಷ | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ವ್ಯವಹಾರಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೯ |
| ೩೧. ಸಮೀರ ಹುಸೇನ್ | ಭಾರತೀಯ ಹೋಟೆಲು ಉದ್ಯಮದ ಆರ್ಥಿಕ ಸಂಪನ್ಮೂಲ ನಿರ್ವಹಣೆ | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ವ್ಯವಹಾರಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೦ |

| | | | |
|---|---|---|---|
| ೩೨. ರಾಮಬಾಬು ಶರ್ಮಾ | ಹೋಟೆಲು ಉದ್ಯಮದಲ್ಲಿ ಲೆಕ್ಕಪತ್ರ ನಿರ್ವಹಣೆ ಮತ್ತು ವಿಧಾನಗಳು | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ವ್ಯವಹಾರಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೧ |
| ೩೩. ಅಬ್ದುಲ್ ಅಹಮ್ಮದ್ | ಭಾರತೀಯ ಹೋಟೆಲು ಉದ್ಯಮದಲ್ಲಿ ಕ್ರಿಯಾ ಬಂಡವಾಳದ ವಿಶ್ಲೇಷಣೆ | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ವ್ಯವಹಾರಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೨ |
| ೩೪. ಭಾಸ್ಕರ ವಿರಬಾಯಿ ತ್ರಿವೇದಿ | ಆತಿಥ್ಯ ಉದ್ಯಮದಲ್ಲಿ ಮಾನವ ಸಂಪನ್ಮೂಲ ಕಾರ್ಯವಿಧಾನಗಳು; ತಾರಾ ಹೋಟೆಲುಗಳನ್ನು ಅನುಲಕ್ಷಿಸಿ | ಭುವನಗರ ವಿಶ್ವವಿದ್ಯಾಲಯದ ವ್ಯವಹಾರಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೮ |
| ೩೫. ಮಂಕುಶ ಸೇಟಿ | ಪಶ್ಚಿಮ ರಾಜಸ್ಥಾನದ ಆಯ್ದ ಪಾರಂಪರಿಕ ಹೋಟೆಲುಗಳಲ್ಲಿನ ವರ್ಧಿತ ಮಾರುಕಟ್ಟೆಯ ಅಧ್ಯಯನ | ಜೋಧಪುರ ಜೈ ನಾರಾಯಣ ವಿಶ್ವವಿದ್ಯಾಲಯದ ವ್ಯವಹಾರಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೮ |
| ೩೬. ವಿಕಾಶ ಸಿಂಘಾಲ | ಗ್ರಾಹಕರ ವಿಶ್ವಾಸದ ಮೇಲೆ ಸೇವಾ ಗುಣಮಟ್ಟ ಪ್ರಭಾವ; ಪಂಜಾಬ್ ಮತ್ತು ಚಂಡೀಗಡದ ಹೋಟೆಲುಗಳ ಅಧ್ಯಯನ | ಪಟಿಯಾಲ ಪಂಜಾಬ್ ವಿಶ್ವವಿದ್ಯಾಲಯದ ವ್ಯವಹಾರಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೧೦ |
| ೩೭. ಪೂಜಾ ವಸಂತರಾವ ದೇಶಮುಖ್ | ಮಹಾರಾಷ್ಟ್ರದ ಪಂಚತಾರಾ ಹೋಟೆಲುಗಳಲ್ಲಿನ ಸಮಸ್ಯೆ ಮತ್ತು ನಿರೀಕ್ಷೆಗಳ ಅಧ್ಯಯನ | ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ವ್ಯವಹಾರಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೧೨ |

| | | | |
|---|---|---|---|
| ೩೮. ನಜ್ಮೀ ಜಮಾಲ ಅನ್ಸಾರಿ | ಹೋಟೆಲು ಸೇವೆಗಳ ಮಾರುಕಟ್ಟೆ; ಆಗ್ರಾದ ಹೋಟೆಲು ಕ್ಲಾರ್ಕ್ ಸಿರಾಜನ್ನು ಅನುಲಕ್ಷಿಸಿ | ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ವ್ಯವಹಾರ ಆಡಳಿತ ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೩ |
| ೩೯. ಎಸ್. ರಾಮಮೂರ್ತಿ | ಹೋಟೆಲು ಉದ್ಯಮಗಳ ಮಾರುಕಟ್ಟೆ ವ್ಯವಹಾರ | ದೆಹಲಿ ವಿಶ್ವವಿದ್ಯಾಲಯದ ವ್ಯವಹಾರ ಆಡಳಿತ ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೫ |
| ೪೦. ವಿಮ್ಲಾ ದೇವ್ಲೊ | ರಾಜಸ್ಥಾನ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲುಗಳ ಕಾರ್ಯ ನಿರ್ವಹಣೆ ಮತ್ತು ಕಾರ್ಯವಿಧಾನಗಳು | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ವ್ಯವಹಾರ ಆಡಳಿತ ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೯ |
| ೪೧ ಓಂ ಪ್ರಕಾಶ ಗುಸಯ್ಯ | ರಾಜಸ್ಥಾನ ಪಾರಂಪರಿಕ ಹೋಟೆಲುಗಳ ಆಡಳಿತ ನಿರ್ವಹಣೆ ಮತ್ತು ಕಾರ್ಯವಿಧಾನಗಳು | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ವ್ಯವಹಾರ ಆಡಳಿತ ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೦ |
| ೪೨. ಜಮೀಲ್ ಅಹಮ್ಮದ್ ಖಾದರ | ಭಾರತದ ಹೋಟೆಲು ಮತ್ತು ಪ್ರವಾಸೋದ್ಯಮದಲ್ಲಿನ ಆಡಳಿತಾತ್ಮಕ ಸಮಸ್ಯೆಗಳು (ಆಯ್ದ ಹೋಟೆಲು ಮತ್ತು ಪ್ರವಾಸಿ ಕೇಂದ್ರಗಳ ಅಧ್ಯಯನ) | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ವ್ಯವಹಾರ ಆಡಳಿತ ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೧ |
| ೪೩. ಪಿ. ರಾಜಮೋಹನ | ಹೋಟೆಲು ಉದ್ಯಮಗಳಲ್ಲಿ ಇ. ಕಾಮರ್ಸ್ ಅಳವಡಿಕೆಯ ಸ್ವರೂಪ ಮತ್ತು ವಿನ್ಯಾಸ | ಅಣ್ಣಾಮಲೈ ವಿಶ್ವವಿದ್ಯಾಲಯದ ವ್ಯವಹಾರ ಆಡಳಿತ ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೬ |

| | | | |
|---|---|---|---|
| ೪೪. ಶ್ವೇತಾ ಡಂಗಿ | ಹೋಟೆಲು ಸೇವೆಗಳ ಮಾರುಕಟ್ಟೆಯಲ್ಲಿ ಬದಲಾಗುತ್ತಿರುವ ಆಯಾಮಗಳು(ರಾಜಸ್ಥಾನದ ಹೋಟೆಲುಗಳ ಅಧ್ಯಯನ) | ಉದಯಪುರ ಮೋಹನಲಾಲ್ ಸುಖಾಡಿಯಾ ವಿಶ್ವವಿದ್ಯಾಲಯದ ವ್ಯವಹಾರ ಆಡಳಿತ ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೬ |
| ೪೫. ಸಂಜೀವಕುಮಾರ | ಹೋಟೆಲು ಉದ್ಯಮದಲ್ಲಿ ಮಹಿಳಾ ಸಂಪನ್ಮೂಲ ನಿರ್ವಹಣೆ; ರಾಜಸ್ಥಾನ ವನ್ನು ಅನುಲಕ್ಷಿಸಿ | ಜೋಧಪುರ ಜೈ ನಾರಾಯಣ ವ್ಯಾಸ ವಿಶ್ವವಿದ್ಯಾಲಯದ ವ್ಯವಹಾರ ಆಡಳಿತ ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೦ |
| ೪೬. ಹೇಮಾ ವರ್ಮಾ | ಭಾರತೀಯ ಹೋಟೆಲು ಉದ್ಯಮಗಳಲ್ಲಿನ ಪದಾರ್ಥ ನಿರ್ವಹಣ ವಿಭಾಗದ ವಿಮರ್ಶಾತ್ಮಕ ಮೌಲ್ಯಮಾಪನ; ಕೆಲವು ಆಯ್ದ ಹೋಟೆಲುಗಳಲ್ಲಿನ ಆಹಾರ ಸೇವೆಗಳ ಅಧ್ಯಯನ | ಬರೇಲಿ ಮಹಾತ್ಮಾ ಜ್ಯೋತಿ ಬಾಪುಲೆ ರೋಹಿಲ್ಖಂಡ ವಿಶ್ವವಿದ್ಯಾಲಯದ ವ್ಯವಹಾರ ಆಡಳಿತ ನಿರ್ವಹಣಾಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೯ |
| ೪೭. ಕೆ.ಸಿ. ಶರ್ಮಾ | ಪ್ರವಾಸೋದ್ಯಮ ಮತ್ತು ಹೋಟೆಲು ವ್ಯವಹಾರದಲ್ಲಿನ ಕಾರ್ಯವಿಧಾನಗಳ ಮೌಲ್ಯಮಾಪನ | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ಸಾರ್ವಜನಿಕ ಆಡಳಿತ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೪ |
| ೪೮. ಎಂ.ಎ. ಸಲೀಮ್ ಖಾನ | ಭಾರತದಲ್ಲಿ ಹೋಟೆಲು ಉದ್ಯಮದ ಸಂಘಟನೆ ಮತ್ತು ನಿರ್ವಹಣೆ; ಸಾರ್ವಜನಿಕ ವಲಯದ ಆಯ್ದ ಹೋಟೆಲುಗಳ ಅಧ್ಯಯನ | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ಸಾರ್ವಜನಿಕ ಆಡಳಿತ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೧೯೯೯ |

| | | | |
|---|---|---|---|
| ೪೯. ಮುಖಮೇಶ್ ಅಹಮ್ಮದ್ | ಜೋರ್ಡಾನಿನಲ್ಲಿ ಪ್ರವಾಸೋದ್ಯಮ ಆಡಳಿತ; ಹೋಟೆಲು ಉದ್ಯಮವನ್ನು ಅನುಲಕ್ಷಿಸಿ | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ಸಾರ್ವಜನಿಕ ಆಡಳಿತ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೦ |
| ೫೦. ಅಮೀರ್ ಲಾ ಖಾಸಿಂ | ಜೋರ್ಡಾನ ಮತ್ತು ಭಾರತ ದಲ್ಲಿನ ಹೋಟೆಲು ನಿರ್ವಹಣೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಅವುಗಳ ಪ್ರಭಾವ | ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ಸಾರ್ವಜನಿಕ ಆಡಳಿತ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೧ |
| ೫೧. ಭರತ್ ಕಪೂರ | ಉತ್ತರ ಭಾರತದ ಜೈನೀಸ್ ಹೋಟೆಲುಗಳಲ್ಲಿನ ಆಹಾರ ಸೇವೆಗಳು | ಕುರುಕ್ಷೇತ್ರ ವಿಶ್ವ ವಿದ್ಯಾಲಯದ ಪ್ರವಾಸೋದ್ಯಮ ಆಡಳಿತ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೧೨ |
| ೫೨. ಮನೀಶ ಆನಂದ | ರಾಷ್ಟ್ರೀಯ ರಾಜಧಾನಿ ಪ್ರದೇಶದ ಹೋಟೆಲುಗಳಲ್ಲಿನ ಸಂಪತ್ತು ನಿರ್ವಹಣಾ ವಿಧಾನ | ಕುರುಕ್ಷೇತ್ರ ವಿಶ್ವ ವಿದ್ಯಾಲಯದ ಪ್ರವಾಸೋದ್ಯಮ ಆಡಳಿತ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೧೨ |
| ೫೩. ಸುನೈನಾ ಖಾತ್ರಿ | ಭಾರತೀಯ ಹೋಟೆಲು ಉದ್ಯಮದ ಆರ್ಥಿಕತೆಯ ಸ್ವರೂಪ | ಜೋಧಪುರ ಜೈ ನಾರಾಯಣ ವ್ಯಾಸ ವಿಶ್ವವಿದ್ಯಾಲಯದ ಲೆಕ್ಕಪತ್ರ ನಿರ್ವಹಣಾ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೦೬ |
| ೫೪. ಬೀಜು ಲೇಕ್ಷ ಮನಾನ್ | ಕೇರಳದಲ್ಲಿ ವಲಸಿಗ ಬಾಲ ಕಾರ್ಮಿಕ ಪದ್ಧತಿ; ತಿರುವನಂತಪುರ ಜಿಲ್ಲೆಯ ಹೋಟೆಲು ಚಾಹದಂಗಡಿಗಳಲ್ಲಿನ ಬಾಲಕಾರ್ಮಿಕರ ಅಧ್ಯಯನ | ಕೊಟ್ಟಾಯಂ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಗಾಂಧಿ ಚಿಂತನೆಗಳ ಮತ್ತು ಅಭಿವೃದ್ಧಿ ವಿಭಾಗಕ್ಕೆ ಸಲ್ಲಿಸಿದ್ದಾರೆ. | ೨೦೧೨ |

ಇಂತಹ ಹಲವು ಪಿಎಚ್.ಡಿ. ಮಹಾಪ್ರಬಂಧಗಳು ವಿವಿಧ ವಿಶ್ವವಿದ್ಯಾಲಯಗಳಿಗೆ ಸಲ್ಲಿಕೆಯಾದ ಬಗೆಗೆ ಮಾಹಿತಿಗಳು ಲಭ್ಯವಾಗುತ್ತವೆ. ಆದರೆ ಈ ಬಗೆಯ ಅಧ್ಯಯನಗಳಿಗೆ ಸಾಹಿತ್ಯ ಅಧ್ಯಯನ ದೊಂದಿಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ.

ಸಾಹಿತ್ಯ ಸಂದರ್ಭದಲ್ಲಿ ಹೋಟೆಲು ಮತ್ತು ಸಾಹಿತ್ಯದ ಅಂತರ್‌ಸಂಬಂಧದ ಕುರಿತು ಪ್ರತ್ಯೇಕ ಅಧ್ಯಯನ ನಡೆಯದಿದ್ದರೂ ಪ್ರಸ್ತುತ ಅಧ್ಯಯನ ವಿಷಯಕ್ಕೆ ಪ್ರಧಾನ ಆಕರಗಳಾದ ಸಣ್ಣಕಥೆ–ಕಾದಂಬರಿಗಳ ಕುರಿತು ಈಗಾಗಲೇ ಹಲವಾರು ಅಧ್ಯಯನಗಳು ನಡೆದಿವೆ. ಅಂತಹ ಕೆಲವು ಅಧ್ಯಯನಗಳು ಸಾಹಿತ್ಯ ಮತ್ತು ಹೋಟೆಲಿನ ಅಂತರ್‌ಸಂಬಂಧವನ್ನೂ ಪ್ರಾಸಂಗಿಕವಾಗಿ ಪ್ರಸ್ತಾವಿಸುತ್ತವೆ. ಆ ಬಗೆಯ ಒಂದೆರಡು ಪಿ.ಎಚ್.ಡಿ. ಪದವಿ ಅಧ್ಯಯನಗಳನ್ನು, ಅದೇ ರೀತಿ ಬಿಡಿಬರಹಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ರಾಜಶೇಖರ ಹಳೆಮನಿಯವರು ಪಿಎಚ್.ಡಿ. ಪದವಿಗಾಗಿ ೨೦೦೧ರಲ್ಲಿ 'ತಲೆಮಾರುಗಳ ಸಂಘರ್ಷ' ಎಂಬ ಮಹಾಪ್ರಬಂಧವನ್ನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇದು 'ತಲೆಮಾರುಗಳ ಸಂಕಥನ' ಎಂಬ ತಲೆಬರಹದೊಂದಿಗೆ ೨೦೧೧ರಲ್ಲಿ ಪ್ರಕಟವಾಗಿದೆ. ಕಾದಂಬರಿಗಳಲ್ಲಿ ತಲೆಮಾರುಗಳ ಸಂಘರ್ಷ ಎಂಬ ಐದನೆಯ ಅಧ್ಯಾಯದಲ್ಲಿ ಹೋಟೆಲಿನ ಚಿತ್ರಣದ ದೃಷ್ಟಿಯಿಂದ ಮುಖ್ಯವೆನಿಸುವ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ', ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಶ್ರೀಕೃಷ್ಣ ಆಲನಹಳ್ಳಿಯವರ 'ಪರಸಂಗದ ಗೆಂಡೆತಿಮ್ಮ' ಮತ್ತು 'ಭುಜಂಗಯ್ಯನ ದಶಾವತಾರಗಳು' ಶಾಂತಿನಾಥ ದೇಸಾಯಿ ಅವರ 'ಬೀಜ' ಮುಂತಾದ ಕಾದಂಬರಿಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಹೋಟೆಲಿನ ಚಿತ್ರಣದ ಪ್ರಾಸಂಗಿಕ ಪ್ರಸ್ತಾಪಗಳಿವೆ.

ಎಸ್.ಟಿ. ಮುಂಟೋಳಿ ಅವರು ಪಿಎಚ್.ಡಿ. ಪದವಿಗಾಗಿ ೨೦೦೩ರಲ್ಲಿ 'ದು.ನಿಂ.ಬೆಳಗಲಿ ಬದುಕು ಬರಹ: ಒಂದು ಅಧ್ಯಯನ' ಎಂಬ ಮಹಾಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇದರ ಕಾದಂಬರಿ ಸಾಹಿತ್ಯ ಅನ್ನುವ ಅಧ್ಯಾಯದಲ್ಲಿ 'ಕಾತ್ರಾಳ ರತ್ನಿಯ ಚಾದಂಗಡಿ' ಕಾದಂಬರಿಯನ್ನು ಅಧ್ಯಯನಕ್ಕೊಳಪಡಿಸಿದ್ದಾರೆ.

ಬಿ.ಎಸ್.ಸುದೀಪ್ ಅವರು ಪಿಎಚ್.ಡಿ. ಪದವಿಗಾಗಿ ೨೦೧೮ರಲ್ಲಿ 'ಅನಕೃ ಅವರ ಕಾದಂಬರಿ ಗಳಲ್ಲಿ ವಸ್ತುವಾಗಿ ಮಹಿಳೆ' ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಅನಕೃ ಅವರ ಕಾದಂಬರಿಗಳಲ್ಲಿ ಮಹಿಳಾ ಪ್ರತಿನಿಧೀಕರಣ ಎನ್ನುವ ಆರನೆಯ ಅಧ್ಯಾಯದಲ್ಲಿ ಸಂಧ್ಯಾರಾಗ, ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು, ಅಪರಂಜಿ, ಪಂಕಜ, ಕಳಂಕಿನಿ ಮೊದಲಾದ ಹೋಟೆಲಿನ ಪ್ರತಿನಿಧೀಕರಣವುಳ್ಳ ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ.

ಬಿ.ರಾಜೇಶ ಅವರು ಪಿಎಚ್.ಡಿ. ಪದವಿಗಾಗಿ ೨೦೧೧ರಲ್ಲಿ 'ಕೆ.ಟಿ.ಗಟ್ಟಿಯವರ ಕೃತಿಗಳಲ್ಲಿ ಪ್ರತಿರೋಧದ ನೆಲೆಗಳು' ಎಂಬ ಮಹಾಪ್ರಬಂಧದಲ್ಲಿ ಅಮುಕ್ತ, ಯುಗಾಂತರ, ಅಭಿಚಾರ,

ಪುನರಪಿ ಜನನ, ಮಿತಿ, ಮೃತ್ಯೋರ್ಮಾ ಅಮೃತಂಗಮಯಾ ಮುಂತಾದ ಹೋಟೆಲಿನ ಪ್ರತಿನಿಧೀಕರಣವುಳ್ಳ ಕಾದಂಬರಿಗಳನ್ನು ವಿಶ್ಲೇಷಿಸಿದ್ದಾರೆ.

ರಾಜಶ್ರೀ ಇನಾಂದಾರ ಅವರು ಪಿಎಚ್.ಡಿ. ಪದವಿಗಾಗಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಮುಂಬಯಿ ಕನ್ನಡ ಕಾದಂಬರಿಗಳು: ಒಂದು ಅಧ್ಯಯನ' ಎಂಬ ಮಹಾಪ್ರಬಂಧವು ೧೧೧೩ರಲ್ಲಿ ಪ್ರಕಟವಾಗಿದೆ. ಮುಂಬಯಿ ಕನ್ನಡ ಕಾದಂಬರಿದಾರರು ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಹೋಟೆಲಿನ ಚಿತ್ರಣದ ದೃಷ್ಟಿಯಿಂದ ಮುಖ್ಯವೆನಿಸುವ ವ್ಯಾಸರಾವ ನಿಂಜೂರ ಅವರ 'ಶ್ರೀ ಚಾಮುಂಡೇಶ್ವರಿ ಭವನ' ಕಾದಂಬರಿಯನ್ನು ಪ್ರಾಸಂಗಿಕವಾಗಿ ಇಲ್ಲಿ ವಿಶ್ಲೇಷಿಸಲಾಗಿದೆ. ಅದೇ ಕಾದಂಬರಿಯ ಬಗೆಗೆ ಆರನೇ ಅಧ್ಯಾಯವಾದ ಪುರುಷ ಕಾದಂಬರಿಕಾರರ ಕಾದಂಬರಿಗಳಲ್ಲಿಯ ಸ್ತ್ರೀ ಪಾತ್ರಗಳು ಎಂಬಲ್ಲಿಯೂ ಪ್ರಸ್ತಾಪಿಸಲಾಗಿದೆ. ಅದೇ ರೀತಿ ಹೋಟೆಲು ಚಿತ್ರಣವುಳ್ಳ ವ್ಯಾಸರಾಯ ಬಲ್ಲಾಳರ ವಾತ್ಸಲ್ಯಪಥ, ಹೆಜ್ಜೆ ಮೊದಲಾದ ಕಾದಂಬರಿಗಳ ವಿಶ್ಲೇಷಣೆಯು ಇಲ್ಲಿದೆ.

ಟಿ.ಪಿ.ಅಶೋಕ ಅವರು 'ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣ ಪ್ರಕ್ರಿಯೆ' ಎಂಬ ಲೇಖನದಲ್ಲಿ 'ಮರಳಿ ಮಣ್ಣಿಗೆ' ಕಾದಂಬರಿಯನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆಧುನೀಕರಣ ಪ್ರಕ್ರಿಯೆಯಲ್ಲಿ ಹೋಟೆಲು ನಿರ್ವಹಿಸುವ ಪಾತ್ರವೇನೆಂಬುದನ್ನು ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿರುವ ಬರಹವಿದು.

ಇವಲ್ಲದೆ ಪ್ರಸ್ತುತ ಅಧ್ಯಯನಕ್ಕೆ ಪ್ರಧಾನ ಆಕರಗಳಾಗಿ ಬಳಸಿಕೊಂಡ ಹಲವಾರು ಸಣ್ಣಕಥೆ-ಕಾದಂಬರಿಗಳು ಬೇರೆ ಬೇರೆ ಸಂದರ್ಭಗಳಲ್ಲಿ ವಿವಿಧ ಪರಿಕಲ್ಪನೆಗಳ ಅಡಿಯಲ್ಲಿ ಅಧ್ಯಯನಕ್ಕೊಳ್ಳ ಪಟ್ಟಿವೆ.

ಬಸವರಾಜ ಸಾದರ ಅವರು ೧೯೮೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಬಸವರಾಜ ಕಟ್ಟೀಮನಿ' ಎಂಬ ಮಹಾಪ್ರಬಂಧ, ಬೆಟ್ಟಂಪಾಡಿ ಸದಾಶಿವಭಟ್ಟ ಅವರು ೧೯೯೦ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಪಂಜೆ ಮಂಗೇಶರಾಯರು: ಒಂದು ಅಧ್ಯಯನ' ಎಂಬ ಮಹಾಪ್ರಬಂಧ. ಮಲ್ಲಿಕಾ ಘಂಟಿ ಅವರು ೧೯೯೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ: ಒಂದು ಅಧ್ಯಯನ' ಎಂಬ ಮಹಾಪ್ರಬಂಧ, ಎಸ್.ಡಿ. ಪಾಟೀಲ್ ಅವರು ೧೯೯೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಕನ್ನಡ ಕಾದಂಬರಿಗಳಲ್ಲಿ ವರ್ಗಸಂಘರ್ಷ' ಎಂಬ ಮಹಾಪ್ರಬಂಧ, ಎಂ.ಎಸ್. ಶೇಖರ ಅವರು ೧೯೯೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ 'ಶ್ರೀಕೃಷ್ಣ ಆಲನಹಳ್ಳಿಯವರ ಸಾಹಿತ್ಯ: ಒಂದು ಅಧ್ಯಯನ' ಎಂಬ ಮಹಾಪ್ರಬಂಧ, ಪಿ.ಎಸ್. ವರದಾ ಅವರು ೧೯೯೭ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಪಂಜೆಯವರ ಕೃತಿಗಳು: ಒಂದು ಅಧ್ಯಯನ' ಎಂಬ ಮಹಾಪ್ರಬಂಧ,

ವಿಜಯಲಕ್ಷ್ಮೀ ಅವರು ೧೯೯೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ 'ವ್ಯಾಸರಾಯ ಬಲ್ಲಾಳರು: ಒಂದು ಅಧ್ಯಯನ' ಎಂಬ ಮಹಾಪ್ರಬಂಧ, ಕರುಣಾಕರ ಶೆಟ್ಟಿ ಅವರು ೨೦೦೦ರಲ್ಲಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಶಿವರಾಮ ಕಾರಂತ ಮತ್ತು ಪ್ರೇಮಚಂದ್ರ ಗ್ರಾಮೀಣ ಕಾಂದಬರಿಗಳ ತೌಲನಿಕ ಅಧ್ಯಯನ' ಎಂಬ ಮಹಾಪ್ರಬಂಧ, ರೇವಯ್ಯ ಒಡೆಯರ್ ಅವರು ೨೦೦೧ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಕಾರಂತರ ಕಾದಂಬರಿಗಳಲ್ಲಿ ಮಾನವೀಕರಣದ ನೆಲೆಗಳು' ಎಂಬ ಮಹಾಪ್ರಬಂಧ, ಸುನಿತಾ ಶೆಟ್ಟಿ ಅವರು ೨೦೦೧ರಲ್ಲಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಕಾರಂತರ ಕಾದಂಬರಿಗಳಲ್ಲಿ ಸ್ತ್ರೀಪಾತ್ರ' ಎಂಬ ಮಹಾಪ್ರಬಂಧ, ವೈ.ಎಂ. ಭಜಂತ್ರಿ ಅವರು ೨೦೦೨ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ, 'ದು.ನಿಂ.ಬೆಳಗಲಿ ಅವರ ಕಾದಂಬರಿಗಳು: ಒಂದು ಅಧ್ಯಯನ' ಎಂಬ ಮಹಾಪ್ರಬಂಧ, ಅಮರೇಶ ಶೆಟ್ಟಿ ಅವರು ೨೦೦೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಬಸವರಾಜ ಕಟ್ಟೀಮನಿಯವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ' ಎಂಬ ಮಹಾಪ್ರಬಂಧ, ಗಿರಿಜಾಂಬ ಅವರು ೨೦೦೩ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ವ್ಯಾಸರಾಯ ಬಲ್ಲಾಳರ ಬದುಕು ಬರಹ: ಒಂದು ಅಧ್ಯಯನ' ಎಂಬ ಮಹಾಪ್ರಬಂಧ, ಟಿ.ಆರ್. ಮಂಜುನಾಥ ಅವರು ೨೦೦೪ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಶಿವರಾಮ ಕಾರಂತರ ಸಾಮಾಜಿಕ ಕಾದಂಬರಿಗಳ ವಿಡಂಬನಾ ಸ್ವರೂಪ' ಎಂಬ ಮಹಾಪ್ರಬಂಧ, ಮುನಿಯಪ್ಪ ಅವರು ೨೦೦೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಜಕೀಯ ಪ್ರಜ್ಞೆ: ಒಂದು ಅಧ್ಯಯನ' ಎಂಬ ಮಹಾಪ್ರಬಂಧ, ಎಸ್.ಎಂ. ಕವಿತಾರಾಣಿ ಅವರು ೨೦೦೫ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಯು.ಆರ್ ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ' ಎಂಬ ಮಹಾಪ್ರಬಂಧ, ಮುಂತಾದ ಅಧ್ಯಯನಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಹೀಗೆ ಹೋಟೆಲಿನ ಪ್ರತಿನಿಧೀಕರಣವುಳ್ಳ ಹಲವಾರು ಸಣ್ಣಕಥೆ-ಕಾದಂಬರಿಗಳು ಬೇರೆ ಬೇರೆ ದೃಷ್ಟಿಕೋನಗಳಿಂದ ಅಧ್ಯಯನಕ್ಕೊಳಪಟ್ಟಿವೆ. ಆದರೆ ಇಂತಹ ಯಾವುದೇ ಅಧ್ಯಯನಗಳು ಸಾಹಿತ್ಯ ಮತ್ತು ಹೋಟೆಲಿನ ಅಂತರ್‌ಸಂಬಂಧದ ನೆಲೆಗಳನ್ನು ಅಷ್ಟಾಗಿ ಗುರುತಿಸಿದಂತಿಲ್ಲ. ಈ ನಿಟ್ಟಿನಲ್ಲಿ ಮೇಲೆ ಹೆಸರಿಸಿದ ಟಿ.ಪಿ. ಅಶೋಕ ಅವರ ಲೇಖನ ಮಾತ್ರ ಪ್ರಸ್ತುತ ಅಧ್ಯಯನ ವಿಷಯ ಸಂದರ್ಭದಲ್ಲಿ ಪ್ರಸ್ತುತವೆನಿಸುತ್ತದೆ. ಹಾಗಾಗಿ ಅದನ್ನಿಲ್ಲಿ ಪೂರಕ ಆಕರವಾಗಿ ಬಳಸಿಕೊಳ್ಳಲಾಗಿದೆ.

### ೨.೨. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೋಟೆಲಿನ ಪ್ರತಿನಿಧೀಕರಣ: ಒಂದು ಸ್ಥೂಲನೋಟ

ಸಾಹಿತ್ಯದಲ್ಲಿ ಆಧುನಿಕರಣ ಪ್ರಕ್ರಿಯೆಗೆ ಕಾರಣವಾಗುವ ಆಧುನಿಕತೆಯ ಘಟಕಗಳಲ್ಲಿ ಹೋಟೆಲಿಗೆ ವಿಶಿಷ್ಟ ಸ್ಥಾನವಿದೆ. ಸಣ್ಣಕಥೆ-ಕಾದಂಬರಿಗಳಂತಹ ಕಥನಸಾಹಿತ್ಯದಲ್ಲಿ ಆಧುನೀಕರಣದ

ಪ್ರಕ್ರಿಯೆಯ ಭಾಗವಾಗಿ ಹೋಟೆಲು ಪ್ರಮುಖ ಪಾತ್ರವೆನಿಸುತ್ತದೆ. ಅದಲ್ಲದೆ ಅಂಕಣ ಬರಹ, ಸಂಪಾದಕೀಯ ಬರಹ, ಲಲಿತಪ್ರಬಂಧ, ಪ್ರವಾಸಕಥನ, ಕಾವ್ಯಗಳಂತಹ ಇತರ ಪ್ರಕಾರಗಳಲ್ಲೂ ಹೋಟೆಲಿನ ಪ್ರತಿನಿಧೀಕರಣ ಇದ್ದೇ ಇರುತ್ತದೆ. ಕಥನಸಾಹಿತ್ಯದಲ್ಲಿ ಸನ್ನಿವೇಶ ನಿರ್ಮಾಣದ ಭಾಗವಾಗಿ ಹೋಟೆಲು ಕಾಣಿಸಿಕೊಂಡರೆ ಅಂಕಣ ಸಾಹಿತ್ಯ, ಸಂಪಾದಕೀಯ ಬರಹ, ಪ್ರವಾಸ ಕಥನಗಳಲ್ಲಿ ಹೋಟೆಲನ್ನು ಕೇಂದ್ರವಸ್ತುವಾಗಿರಿಸಿಕೊಂಡು ನಡೆಸುವ ಚಿಂತನೆ, ವಿಚಾರ ಹಾಗೂ ವಿನೋದ ಪ್ರಸಂಗಗಳಿರುತ್ತವೆ. ಒಟ್ಟಿನಲ್ಲಿ ಆಧುನಿಕ ಸಾಹಿತ್ಯಕ್ಕೂ ಹೋಟೆಲಿಗೂ ಇರುವ ಅಂತರ್ ಸಂಬಂಧದ ನೆಲೆಗಳು ವಿಭಿನ್ನವೂ ವಿಶಿಷ್ಟವೂ ಆಗಿವೆ. ಕಥನಸಾಹಿತ್ಯವನ್ನು ಹೊರತುಪಡಿಸಿ ಉಳಿದ ಪ್ರಕಾರಗಳಲ್ಲಿ ಹೋಟೆಲಿನ ಪ್ರತಿನಿಧೀಕರಣವು ಯಾವ ಸ್ವರೂಪದಲ್ಲಿರುತ್ತದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಮುಖ್ಯವಾಗಿ ಅಂಕಣಸಾಹಿತ್ಯ ಸಂಪಾದಕೀಯ ಬರಹಗಳು, ಲಲಿತ ಪ್ರಬಂಧಗಳು, ಪ್ರವಾಸಕಥನಗಳು, ಕಾವ್ಯಗಳು, ಇತರ ಬರಹಗಳಂತಹ ಸಾಹಿತ್ಯ ಪ್ರಕಾರಗಳಲ್ಲಿ ಹೋಟೆಲು ಚಿತ್ರಣಗೊಂಡ ಬಗೆಯನ್ನು ಪರಿಶೀಲಿಸಲಾಗಿದೆ. ವಿಶಿಷ್ಟ ಪ್ರಕಾರಗಳ ಸಾಹಿತ್ಯ ಕೃತಿಗಳಲ್ಲಿ ವಿಭಿನ್ನ ಬಗೆಯ ಹೋಟೆಲುಗಳು ಅವುಗಳಲ್ಲಿನ ಆಹಾರ ಪದಾರ್ಥಗಳು, ಹೋಟೆಲಿನ ಮಾಲೀಕರು, ಕಾರ್ಮಿಕರು, ಗ್ರಾಹಕರು ಹೀಗೆ ಹೋಟೆಲಿಗೆ ಸಂಬಂಧಪಟ್ಟ ವಿವಿಧ ವ್ಯಕ್ತಿ ಹಾಗೂ ಪರಿಕರಗಳ ಕುರಿತಾದ ವೈನೋದಿಕವೂ, ವೈಚಾರಿಕವೂ ಆದ ಬರಹಗಳಿವೆ.

**ಅಂಕಣ ಸಾಹಿತ್ಯ ಮತ್ತು ಸಂಪಾದಕೀಯ ಬರಹಗಳು**

ಅಂಕಣ ಬರಹವೆಂಬುದು ಆಧುನಿಕ ಸಂದರ್ಭದಲ್ಲಿ ಸಾಹಿತ್ಯ ಪ್ರಕಾರವಾಗಿ ಬೆಳೆದುನಿಂತಿದೆ. ಕನ್ನಡದಲ್ಲಿ ಇಂದು ವೈವಿಧ್ಯಮಯ ಸಾಹಿತ್ಯ ಕೃತಿಗಳು ಸೃಷ್ಟಿಯಾಗುತ್ತಿವೆ. ಹೊಸ ಹೊಸ ಪ್ರಕಾರಗಳು ಕನ್ನಡ ಸಾಹಿತ್ಯಕ್ಕೆ ಸೇರ್ಪಡೆಗೊಳ್ಳುತ್ತಿವೆ. ಅಂಕಣ ಬರಹಕ್ಕೆ ಕನ್ನಡದ ಹೆಸರಾಂತ ಸಾಹಿತಿ ಹಾ.ಮಾ. ನಾಯಕ ಅವರು ರಾಷ್ಟ್ರಮಟ್ಟದ ಮನ್ನಣೆಯನ್ನು ತಂದುಕೊಟ್ಟಿದ್ದಾರೆ. ಕನ್ನಡದ ಬಹುಪಾಲು ಸಾಹಿತಿಗಳು ಅಂಕಣ ಬರಹಗಳನ್ನೂ ಬರೆದಿದ್ದಾರೆ. ಇವರುಗಳಲ್ಲಿ ಕು.ಶಿ. ಹರಿದಾಸ ಭಟ್ಟರು ಒಬ್ಬರು. ಇವರು ಉದಯವಾಣಿ ಪತ್ರಿಕೆಗೆ ಅಂಕಣ ಸಾಹಿತ್ಯವನ್ನು ಬರೆಯುತ್ತಿದ್ದರು. ಇವರ ಅಂಕಣ ಬರಹಗಳ ಸಂಕಲನವಾದ 'ಲೋಕಾಭಿರಾಮ' ಸಂಪುಟ ೫ ರಲ್ಲಿ "ಉಡುಪಿ ಅಡುಗೆ ಇಂಟರ್‌ನ್ಯಾಷನಲ್" ಎಂಬ ಬರಹವಿದೆ. ಇಲ್ಲಿ ಉಡುಪಿಯ ಪ್ರಾದೇಶಿಕ ಅಡುಗೆಶೈಲಿಯ ವಿಶಿಷ್ಟತೆಯನ್ನು ಲೇಖಕರು ಲಲಿತವಾದ ಧಾಟಿಯಲ್ಲಿ ಚಿತ್ರಿಸಿದ್ದಾರೆ. ಸ್ಥಳೀಯ ಅಡುಗೆಯ ಶೈಲಿಯು ಹೋಟೆಲುಗಳ ಮೂಲಕ ವಿಶ್ವಮಟ್ಟದ ಖ್ಯಾತಿ ಪಡೆದ ಪರಿಯನ್ನು ಅಂಕಣಕಾರರು ವಿವರಿಸಿದ್ದಾರೆ. ಅಡುಗೆಯ ಪ್ರಾಚೀನತೆ, ಬಾಣಸಿಗರ ಸ್ಥಾನಮಾನ, ಉಡುಪಿಯ ಪ್ರಾದೇಶಿಕ ಅಡುಗೆಶೈಲಿಯ ವೈಶಿಷ್ಟ್ಯ ಇತ್ಯಾದಿ ಅಂಶಗಳನ್ನು ಈ ಬರಹದಲ್ಲಿ ರಂಜನೀಯವಾಗಿ ವಿವರಿಸಲಾಗಿದೆ. "ಅಡುಗೆ ಊಟ ತಿಂಡಿ ಎಂದರೆ ಒಂದು ವಿನೋದದ ಸಂಗತಿ ಎಂಬುದಾಗಿ

ತಿಳಿಯುವ ಕಾಲವೊಂದಿತ್ತು. ಹಾಗೆಯೇ ಅಡುಗೆ ಕೆಲಸವೆಂದರೆ ತಾತ್ಸಾರ ಮಾಡುವಂತೆಯೂ ಇದ್ದಿತು. ಅಂತ ಕಾಲ ಹೊರಟುಹೋಗಿದೆ. ಬೇರೆ ದೇಶಗಳಲ್ಲಿ ಎಂದೋ ಹೊರಟುಹೋಗಿತ್ತೆಂದು ತೋರುತ್ತದೆ. ಇಂಥ ಪ್ರಸಿದ್ಧ ಅಡುಗೆಭಟ್ಟರು ನಮ್ಮ ಹೋಟೆಲಿಗೆ ಬರುತ್ತಾರೆಂದು ಜಾಹೀರಾತು ಕೊಡುವ ಹೋಟೆಲುಗಳನ್ನು ನಾನು ಅಮೆರಿಕದಲ್ಲಿ ನೋಡಿದ್ದೇನೆ. ವಿದೇಶಿ ಹೋಟೆಲುಗಳಲ್ಲಿನ ಕೆಲವು ಬಾಣಸಿಗರು ಬ್ಯಾಂಕು, ಅಂಚೆ ಇಂತಹ ಸರಕಾರಿ ಸಂಸ್ಥೆಗಳಲ್ಲಿನ ಮುಖ್ಯಸ್ಥರು ಪಡೆಯುವ ಸಂಬಳದ ಮೂರರಷ್ಟು ಸಂಭಾವನೆಯನ್ನು ಪಡೆಯುತ್ತಾರೆಂದು ಲೇಖಕರು ಅಭಿಪ್ರಾಯ ಪಡುತ್ತಾರೆ. ಅಡುಗೆ, ಅಡುಗೆ ತಯಾರಕರು, ಹೋಟೆಲಿನ ವ್ಯವಹಾರ ಮುಂತಾದವುಗಳ ಬಗೆಗೆ ಜನರಲ್ಲಿ ಅರಿವನ್ನು ಮೂಡಿಸಲು ಈ ಬರಹವು ಸಹಕಾರಿಯಾಗಿದೆ. ಉಡುಪಿಯ ಪ್ರಾದೇಶಿಕ ಅಡುಗೆ ಶೈಲಿಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದ್ದನ್ನು ಬರೆಯಹೊರಟ ಅಂಕಣಕಾರರು ಸಾಂದರ್ಭಿಕವಾಗಿ ನಮ್ಮ ದೇಸಿ ಹೋಟೆಲುಗಳ ರೀತಿ, ವಿದೇಶಿ ಹೋಟೆಲುಗಳ ಸ್ಥಿತಿಗತಿಗಳನ್ನು ಪ್ರಸ್ತಾಪಿಸುತ್ತಾ ಅಡುಗೆಯ ಪ್ರಾಚೀನತೆ, ಪರಂಪರೆ ಪ್ರಸ್ತುತ ಸ್ಥಿತಿಗತಿಗಳನ್ನೂ ಬರಹದಲ್ಲಿ ಅನಾವರಣಗೊಳಿಸಿದ್ದಾರೆ. ಪ್ರಾಚೀನ ಸಂಸ್ಕೃತ ನಾಟಕಗಳಲ್ಲಿ ಒಬ್ಬ ವಿದೂಷಕ ಹಸಿವೋ ಹಸಿವು ಎಂದು ಕೂಗುತ್ತಾ ರಂಗದ ಮೇಲೆ ಬಂದಾನು ಅಥವಾ ತಿಂದುಂಡು ಡೊರಕಿ ಹೊಡೆಯುವ ನಟನೆ ತೋರಿಯಾನು. ಭೋಜನ ಪ್ರಿಯನಾದ ಒಬ್ಬ ಬ್ರಾಹ್ಮಣನನ್ನು ರಂಗದ ಮೇಲೆ ತರುವುದೇ ಹಾಸ್ಯಕ್ಕೆ ಪ್ರಚೋದನೆ ಎನಿಸಿತು. ಇಂಥ ಮನಃಪ್ರವೃತ್ತಿಯ ದೇಶದಲ್ಲಿ ನಳಪಾಕದ ಉದಾಹರಣೆಯನ್ನು ಪುಂಖಾನುಪುಂಖವಾಗಿ ನೀಡಬಲ್ಲ ಎಂಥ ತಜ್ಞ ಅಡುಗೆಯವನಾದರೂ ಅನಾಮಧೇಯನಾಗಿಯೇ ಉಳಿಯುತ್ತಾನೆ. ನಿತ್ಯವೂ ಸಾವಿರಾರು ಮಂದಿಯ ಹೊಟ್ಟೆಯನ್ನು ನಾಲಗೆಯ ಮುಖಾಂತರ ಸಂತೃಪ್ತಿಗೊಳಿಸುವ ನಳಮಹಾಶಯನ ಬದಲು ಅಡುಗೆ ಮಾಡಿಸಿದ ಯಜಮಾನನಿಗೆ ಕೀರ್ತಿ ಸಲ್ಲುತ್ತದೆ. ಇಂಥ ಪರಿಸ್ಥಿತಿಯಿಂದಾಗುವ ಕೆಲವು ಲಕ್ಷಣಗಳು ಇತ್ತೀಚೆಗೆ ಬದಲಾಗುತ್ತಿರುವುದು ಶುಭಸೂಚನೆಯಾಗಿದೆ.

ಉಡುಪಿಯ ಸ್ಥಳೀಯ ಚರಿತ್ರೆಯನ್ನು ಅಂಕಣ ಬರಹದಲ್ಲಿ ಪ್ರಮುಖವಾದದ್ದು ಎನ್ನುವುದಕ್ಕೆ ಲೇಖಕರ ಮಾತುಗಳೇ ಸಾಕ್ಷಿ. "ಇವತ್ತಿನ ಶೀರ್ಷಿಕೆಯಲ್ಲಿ ಉಡುಪಿಯನ್ನು ಅಡುಗೆಯ ಹಿಂದೆ ಸೇರಿಸಲು ಐತಿಹಾಸಿಕ ಕಾರಣಗಳಿವೆ. ಅಡುಗೆ ವಿದ್ಯೆಗೆ ಪ್ರಸಿದ್ಧವಾದ ಸ್ಥಳವೆಂದು ಉಡುಪಿ ಖ್ಯಾತಿ ಪಡೆದಿರುವುದು ಯಾರಿಗೆ ಗೊತ್ತಿಲ್ಲ? ಪ್ರಯಾಣ ಕಾಲದಲ್ಲಿ ಯಾವೂರಾಯಿತು ಎಂದು ಕೇಳುವವರಿಗೆ ಉಡುಪಿ ಎಂದಿರೋ ನಿಮ್ಮ ಹೋಟೆಲೆಲ್ಲಿ? ಎಂದು ಕೇಳುತ್ತಾರೆ. ಬ್ಯಾಂಕುಗಳನ್ನು ಕಟ್ಟುವುದರಲ್ಲಿ, ಶಿಕ್ಷಣವ್ಯವಸ್ಥೆಯಲ್ಲಿ ಎಷ್ಟು ಮುಂದುವರಿದಿದ್ದರೂ ಉಡುಪಿಯ ಅಸಲೀ ಕೀರ್ತಿ ಇರುವುದು ಅಲ್ಲಿನ ಅಡುಗೆಯ ದೆಸೆಯಿಂದ. ಈ ಅಡುಗೆಗೆ ಮೂಲಸ್ಫೂರ್ತಿಯಾಗಿರುವ ಇಲ್ಲಿನ ಮಠಗಳ ದೆಸೆಯಿಂದ ಸಾವಿರಾರು ಮಂದಿಗೆ ಅಡುಗೆ ಮಾಡುವುದು ಹೇಗೆ, ಮಾಡಿದ್ದನ್ನು

ಬಡಿಸುವುದು ಹೇಗೆಂಬುದರ ಬಗ್ಗೆ ಉಡುಪಿಗೆ ಸಾವಿರಾರು ವರ್ಷಗಳ ಅನುಭವವಿದೆ. ಇದರ ಸ್ವಲ್ಪ ಲಾಭ ಮತ್ತು ಪ್ರಯೋಜನವನ್ನು ಪಡೆದ ಜನರು ಕರ್ನಾಟಕದ ತುಂಬೆಲ್ಲ ಭೋಜನಾಲಯಗಳನ್ನೂ ವಿಶ್ರಾಮಭವನಗಳನ್ನೂ ತೆರೆದು ಯಶಸ್ವಿ ವ್ಯಾಪಾರಿಗಳೂ ಉದ್ಯಮಿದಾರರೂ ಆಗಿದ್ದಾರೆ. ಮದರಾಸಿನ ಉಡ್‌ಲ್ಯಾಂಡ್ಸ್ ಮತ್ತು ದಾಸ್‌ಪ್ರಕಾಶಗಳೂ ಉಡುಪಿಯಿಂದಲೇ ಸ್ಫೂರ್ತಿ ಪಡೆದ ಬೃಹತ್ ಉದ್ಯಮಗಳಾಗಿ ವಿಕಾಸಗೊಂಡು ದೆಹಲಿ, ಮುಂಬಯಿ, ನ್ಯೂಯಾರ್ಕ್‌ಗಳಿಗೂ ದಾಳಿ ಇಟ್ಟು ದಶಕಗಳೇ ಸಂದಿವೆ. ಉಡುಪಿ ಎನ್ನುವ ಹೆಸರಿನಲ್ಲಿ ಗುಣಶ್ರೇಷ್ಠತೆಯನ್ನು ಸೂಚಿಸುವ ಅಂಶ ಇರುವುದರಿಂದಲೇ ದಕ್ಷಿಣ ಕನ್ನಡ ಜಿಲ್ಲೆಯ ಯಾವ ಗ್ರಾಮದಿಂದ ಹೊರಟವರಾದರೂ ತಮ್ಮ ಹೋಟೆಲಿಗೆ ಉಡುಪಿ ಎಂಬ ಹೆಸರನ್ನೇ ಕೊಡುತ್ತಾರೆ. ಯುರೋಪಿನಲ್ಲಿ ಫ್ರೆಂಚರು, ಇಟಲಿಯನ್ನರು ಉಡುಪಿಯವರಂತೆ ಹೆಸರು ಮಾಡಿದ ನಳ ಜನಾಂಗದವರು. ಇಲ್ಲಿ ಮೆಚ್ಚಬೇಕಾದ ಅಂಶವೇನೆಂದರೆ ಇಂಥ ಹೆಸರನ್ನು ಉಡುಪಿ ಯಾವ ಪ್ರಾಣಿಹತ್ಯೆ ಮಾಡದೆಯೇ ಸಾಧಿಸಿರುವಂಥದ್ದು. ಕಾಲಿ ಸೊಪ್ಪು–ಸೆದೆಗಳ ಸಂಸ್ಕರಣಗಳಿಂದಲೇ ಅಂದರೆ ಸಸ್ಯಾಹಾರಗಳಿಂದಲೇ ಜನರ ಮನಸ್ಸನ್ನು ಗೆದ್ದುಕೊಂಡಿದ್ದು. ಪ್ರಖ್ಯಾತ ವಿಜ್ಞಾನಿ ಹಾಲ್ಡೆನ್ ಮದ್ರಾಸಿನಲ್ಲಿ ಒಮ್ಮೆ ಸಸ್ಯಾಹಾರದ ರುಚಿ ನೋಡಿ - ಇಡ್ಲಿ ಸಾಂಬಾರ್ ಅಥವಾ ಉಪ್ಪಿಟ್ಟಿನ ರುಚಿ ನೋಡಿರಬಹುದು - ಒಂದು ತೀರ್ಮಾನ ಕೊಟ್ಟಿದ್ದರು. ಮದ್ರಾಸಿಗೆ ಬರುವ ಹುಲಿಯಾದರೂ ಸಸ್ಯಾಹಾರಿಯಾಗಿ ಬಿಟ್ಟೀತು ಎಂದರು. ರುಚಿಕರವಾದ ಪದಾರ್ಥಗಳನ್ನು ಅಲ್ಲಿ ತಯಾರಿಸುತ್ತಾರೆ ಎಂದರ್ಥ. ಪಾಪ ಹಾಲ್ಡೇನ್ ಅವರಿಗೆ ತಮಿಳರಲ್ಲೂ ತಮಿಳರಾಗಿಬಿಟ್ಟಿರುವ ಆ ಹೋಟೆಲು ಮಾಲೀಕರು ಮೂಲತಃ ಉಡುಪಿಯವರು, ಅಲ್ಲಿಂದಲೇ ಈ ಕಲೆಯ ಬೇರನ್ನು ಕಂಡುಹಿಡಿದವರು ಎಂಬುದು ಗೊತ್ತಿರಲಿಲ್ಲ. ನಿಜಕ್ಕೂ ಹುಲಿಯನ್ನು ಸೋಲಿಸುವಂಥ ಭೋಜನಕಲೆ ಉಡುಪಿಯಿಂದಲೇ ಸ್ಫೂರ್ತಿಯಾದದ್ದು. ಅದಕ್ಕೆ ಚಾಲನೆ ಕೊಟ್ಟಿದ್ದು ಉಡುಪಿಯಲ್ಲಿ ಇಂದಿಗೂ ಪ್ರಚಲಿತವಾಗಿರುವ ಸಾಮೂಹಿಕ ಅನ್ನಸಂತರ್ಪಣೆಯ ಸಂಘಟನೆ ಸಾವಿರಾರು ಮಂದಿಗೆ ಏಕಕಾಲದಲ್ಲಿ ಉಣಬಡಿಸುವ ವ್ಯವಸ್ಥಿತವಾದ ಕ್ರಮ. ಒಂದು ಭೋಜನಪದ್ಧತಿ ಮೊದಲು ಜೀವನೋಪಾಯಕ್ಕೆ, ಆಮೇಲೆ ವ್ಯಾಪಾರಕ್ಕೆ ಚಾಲನೆ ಕೊಟ್ಟು ಕಾಲಾನಂತರ ಅದೇ ಒಂದು ದೊಡ್ಡ ಉದ್ಯಮದ ರೂಪದಲ್ಲಿ ದೇಶಾದ್ಯಂತ ಹರಡಿಕೊಂಡಿರುವುದು ಸರ್ವವಿದಿತ(ಹರಿದಾಸಭಟ್ಟ ಕು.ಶಿ., ೧೯೯೪, ಪು ೭೩-೭೪). ಉಡುಪಿ ಇಂಟರ್‌ನ್ಯಾಷನಲ್ ಎಂಬ ಬರಹದಲ್ಲಿ ಅಂಕಣಕಾರರು ಪರಿಚಯಾತ್ಮಕವಾಗಿ ವಿವರಿಸಿದ್ದಾರೆ. ಹೀಗೆ ಅಲಕ್ಷ್ಯಕ್ಕೆ ಈಡಾಗಿ ಬೆಳೆದುಬಂದ ಅಡುಗೆ ಕಲೆ, ಹೋಟೆಲು ವ್ಯವಹಾರ ಮುಂತಾದವುಗಳಿಗೆ ಆಧುನಿಕ ಸಂದರ್ಭದಲ್ಲಿ ಮನ್ನಣೆಯು ಪ್ರಾಪ್ತವಾಗಿರುವುದನ್ನು ಕೆಲವೊಂದು ಸನ್ನಿವೇಶಗಳ ಚಿತ್ರಣದೊಂದಿಗೆ ಓದುಗರ ಮುಂದೆ ತೆರೆದಿಡುತ್ತಾರೆ.

ಇದೇ ಲೇಖಕರ 'ಲೋಕಾಭಿರಾಮ' ಸಂಪುಟ ೬ರಲ್ಲಿ "ಮೌಲಿಕ ಶಾಖಾಹಾರ ಅಡುಗೆ ಎಂಬ ಬರಹವಿದೆ. ಇಲ್ಲಿ ಹೋಟೆಲಿನ ಶಾಖಾಹಾರ ಅಡುಗೆಯ ಕುರಿತಾದ ಚಿತ್ರಣವಿದೆ. "ಅಡುಗೆಯ ಕಲೆ ಜನ್ಮವೆತ್ತಿದ್ದೇ ಉಡುಪಿಯಲ್ಲೇನೋ ಎಂದು ಭ್ರಮೆ ಬರುವಂತೆ ವಿಶೇಷವೆನಿಸಿದೆ. ಇಲ್ಲಿನ ಅಡುಗೆ ಈ ಶತಮಾನದಲ್ಲಿ ವಿಶ್ವವ್ಯಾಪಿಯಾಗಿತ್ತು. ಮೊದಲು ಕರ್ನಾಟಕದಲ್ಲಿ ನಂತರ ಮುಂಬಯಿ, ತಮಿಳುನಾಡು, ತದನಂತರ ಭಾರತ ದೇಶದಲ್ಲಿ ಮುಖ್ಯವಾಗಿ ಸಸ್ಯಾಹಾರಿ ಭೋಜನಕ್ಕೆ ಬೇಡಿಕೆ ಬಂದಂತೆ ಜಗದಗಲ ಪ್ರಚುರಗೊಂಡಿದೆ. ಅದರ ಸವಿಯರಿತ ಮಂದಿ ಆಮೇಲೆ ವಾರಕ್ಕೊಮ್ಮೆಯಾದರೂ ಅದನ್ನು ಸವಿಯಲು ಬರುತ್ತಾರೆಂಬುದು ಆಮೇಲೆ ಜನಪ್ರಿಯತೆ ಹೆಚ್ಚಾದಂತೆ ಐರೋಪ್ಯ ದೇಶಗಳೂ ಕೂಡ ಉಡುಪಿ ಅಡುಗೆಯನ್ನು ಮೆಚ್ಚಿಕೊಳ್ಳಲು ಸಾಧ್ಯವಿದೆ. ಅಮೆರಿಕದವರಿಗೆ ಸ್ವಂತದ್ದು ಎಂಬ ಅಡುಗೆಯೇ ಇಲ್ಲವೇನೋ ಎಂಬಷ್ಟು ಅವರು ಬೇರೆ ದೇಶಗಳ ಪಾಕಕಲೆಗೆ ಅಧೀನರಾಗಿದ್ದಾರೆ(ಹರಿದಾಸಭಟ್ಟ ಕು.ಶಿ., ೧೯೯೮, ಪು ೨೧೯). ಉಡುಪಿಯಲ್ಲಿ ತಯಾರಾಗುವ ಅಡುಗೆ ಹಾಗೂ ಅಲ್ಲಿನ ಜನರು ಅಡುಗೆಕಲೆಯನ್ನು ಕರಗತ ಮಾಡಿಕೊಂಡಿರುವ ಬಗೆಯನ್ನು ಮನೋಜ್ಞವಾಗಿ ಅಂಕಣಕಾರರು ಚಿತ್ರಿಸಿದ್ದಾರೆ.

ಹೋಟೆಲಿನ ಕುರಿತಾಗಿ ಅಧ್ಯಯನ ನಡೆಸಲು ಉಡುಪಿಗೆ ಬಂದ ವಿದೇಶಿ ಅಧ್ಯಯನಕಾರರು ಲೇಖಕನನ್ನು ಭೇಟಿಯಾದ ಸಂದರ್ಭದ ಕೆಲವು ಅನುಭವಗಳನ್ನು ಅವರು ಇಲ್ಲಿ ಹಂಚಿಕೊಳ್ಳುತ್ತಾರೆ. "ನಾಲ್ಕು ವರ್ಷದ ಪೂರ್ವದಲ್ಲಿ ಒಬ್ಬ ಡೆನ್ಮಾರ್ಕಿನಿಂದ ಬಂದಿದ್ದು, ಉಡುಪಿ ರೆಸ್ಟೋರೆಂಟ್‌ಗಳ ಬಗ್ಗೆ ಪ್ರಬಂಧ ರಚಿಸುವ ಕಾಲಕ್ಕೆ ನನ್ನನ್ನು ಮಾತನಾಡಿಸಿದ್ದು ಎಲ್ಲ ಆನಂತರ ಆತ ಕಳಿಸಿಕೊಟ್ಟ ಮಹಾಪ್ರಬಂಧದಲ್ಲಿ ಅಧಿಕೃತ ವಕ್ತೃತ್ವದ ಮನ್ನಣೆ ಪಡೆದುಬಿಟ್ಟಿತ್ತು. ನನ್ನ ಬಿಡಿ ವಿಚಾರಗಳನ್ನು ಇಡಿಯಾಗಿ ಹಿಡಿದುಕೊಂಡ ಹಾಗಿತ್ತು ಆತ.

ಜೀವನದ ಹೋರಾಟದಲ್ಲಿ ನೆರವಾದ ಉಡುಪಿ ಅಡುಗೆಯಲ್ಲಿ ಅಥೆಂಟಿಕ್ ಆದದ್ದು ತಿರುಳಾವುದು ಎಂಬ ಬಗ್ಗೆ ಈಚೆಗೆ ಕುಮಾರಿ ಯು.ಬಿ. ರಾಜಲಕ್ಷ್ಮಿ ಅವರು ಒಂದು ಪುಸ್ತಕ ಬರೆದು ಖಚಿತಗೊಳಿಸಿದ್ದಾರೆ. ಹೀಗೆನ್ನುತ್ತಾ ಹರಿದಾಸಭಟ್ಟರು ರಾಜಲಕ್ಷ್ಮಿ ಅವರ ಪುಸ್ತಕದ ಸಾಲುಗಳನ್ನು ಇಲ್ಲಿ ಉಲ್ಲೇಖಿಸುತ್ತಾರೆ.

ಹೋಟೆಲುಗಳು ಮತ್ತು ಅಲ್ಲಿನ ತಿಂಡಿ-ತಿನಿಸುಗಳ ಬಗೆಗೆ ವಿವರಿಸಿದ ಮತ್ತೊಬ್ಬ ಅಂಕಣಕಾರ ರೆಂದರೆ ನಾಗೇಶ ಹೆಗಡೆ ಅವರು. 'ಚಾ ಪಲ್ಯಾಕ್ಕೂ ಕ್ಯಾನ್ಸರ್' ಎಂಬ ಈ ಬರಹದಲ್ಲಿ ಹೋಟೆಲುಗಳಲ್ಲಿನ ತಿಂಡಿ-ತಿನಿಸುಗಳ ಬಗೆಗೆ ಎಚ್ಚರಿಕೆ ವಹಿಸುವಂತಹ ಮಾತುಗಳನ್ನಾಡಿದ್ದಾರೆ. ಈ ಬರಹವು ಮೇಲ್ನೋಟಕ್ಕೆ ಹಾಸ್ಯದಿಂದ ಕೂಡಿದ್ದರೂ ಓದುಗರನ್ನೇ ಚಿಂತನೆಗೆ ಹಚ್ಚುವಲ್ಲಿ ಸಹಕಾರಿಯಾಗಿದೆ. ಮಾನವನ ಆರೋಗ್ಯಕ್ಕೆ ಇರುವ ಸಂಬಂಧದ ನೆಲೆಗಳನ್ನು ಮಾರ್ಮಿಕವಾಗಿ ಈ ಬರಹವು ವಿವರಿಸುತ್ತದೆ. ಈ ಅಂಕಣ ಬರಹದಲ್ಲಿ ಉಪ್ಪಿಟ್ಟು ಹಾಗೂ ಕರಿದ ಮೀನು

ತಿಂದರೆ ಕ್ಯಾನ್ಸರ್ ಬಂದೀತೆಂಬ ಮದ್ರಾಸ್ ವಿಜ್ಞಾನಿಗಳ ಹೇಳಿಕೆ ಓದಿ ಮೃತ್ಯುವಿನ ಬಾಯಲ್ಲೂ ನೀರೂರಿರಬಹುದು. ವಡೆ ತಿನ್ನುವುದು ಅಪಾಯವೆಂದು ನಮ್ಮ ಪೂರ್ವಜರಿಗೆ ಎಷ್ಟೋ ಮೊದಲೇ ಗೊತ್ತಿತ್ತೆಂದು ತೋರುತ್ತದೆ. ಅದಕ್ಕೆ ಅವರು 'ಶ್ರಾದ್ಧ ಮಾಡಿ ವಡೆ ತಿನ್ನೋದಕ್ಕಿಂತ ಮದುವೆ ಮಾಡಿ ಒಬ್ಬಟ್ಟು ತಿನ್ನೋದು ವಾಸಿ' ಎಂಬ ಗಾದೆ ಇಟ್ಟಿದ್ದಾರೆ. ಈಗಂತೂ ವಡೆ ತಿಂದರೆ ತಿಂದವನದೇ ಶ್ರಾದ್ಧ ಆದೀತೆಂದು ವಿಜ್ಞಾನಿಗಳು ಹೇಳಿದ್ದಾರೆ. ಅಂದ ಹಾಗೆ ಎಲ್ಲಾ ಬಿಟ್ಟು ವಡೆಯ ಮೇಲೆ ಇವರ ಗಮನ ಹೋಗಿರಲು ಕಾರಣ ಏನು? ಯಾವುದೋ ಹೋಟೆಲು ಹೊಕ್ಕು ಮೈಕ್ರೊಸ್ಕೋಪ್‌ನಲ್ಲಿ ವಡೆ ಹುಡುಕುವ ಪ್ರಸಂಗ ಬಂದಿತ್ತೇ? ಸದ್ಯ ಬರೀ ಉಪ್ಪಿಟ್ಟು, ಮಸಾಲೆದೋಸೆ, ಮಸಾಲೆ ಸಿನಿಮಾ ಇತ್ಯಾದಿ ಅವರ ಕಣ್ಣಿಗೆ ಬಿದ್ದಿಲ್ಲದ್ದು ದಕ್ಷಿಣದವರ ಅದೃಷ್ಟ ಆದರೂ ಹೇಳುವಂತಿಲ್ಲ. ನಾಳೆ ಹೃದ್ರೋಗತಜ್ಞರೋ ಯುರಾಲಜಿಸ್ಟೋ, ನ್ಯೂರಾಲಾಜಿಸ್ಟೋ ಇಲಿಗಳಿಗೆ ಮೈಸೂರುಪಾಕ್, ಪೂರಿ-ಪಲ್ಯ ತಿನಿಸಿ ನೋಡಿ ನಮ್ಮ ಜಿಹ್ವಾಚಾಪಲ್ಯಕ್ಕೆ ಅಪಾಯದ ಲೇಬಲ್ ಹಚ್ಚಬಹುದು. ಆಗ 'ಮಸಾಲೆವಡೆ ತಿಂದು ಕ್ಯಾನ್ಸರಿಗೆ ಬಲಿಯಾಗುವ ಬದಲು ಮೈಸೂರುಪಾಕ್ ತಿಂದು ಬರುವ ಹೃದ್ರೋಗವೇ ಲೇಸು' ಎಂಬ ಹೊಸಗಾದೆ ಹುಟ್ಟಿಕೊಂಡರೆ ಯಾರೂ ತಗಾದೆ ಮಾಡಲಿಕ್ಕಿಲ್ಲ. ಹೇಗೂ ಈಗಿನ ಕಾಲದಲ್ಲಿ ರೋಗವಿಲ್ಲದೆ ಸಾಯಬೇಕೆಂದರೆ ವೈದ್ಯರಿಗೆ ಶರಣು ಹೋಗಲೇಬೇಕು ತಾನೆ(ನಾಗೇಶ ಹೆಗಡೆ, ೧೯೯೬, ಪು. ೧೯). ಇವು ಹೋಟೆಲುಗಳಲ್ಲಿನ ತಿಂಡಿ-ತಿನಿಸುಗಳನ್ನು ಕೇಂದ್ರೀಕರಿಸಿಕೊಂಡ ವಿಚಾರಗಳಾಗಿವೆ. ಪ್ರಮುಖವಾಗಿ ಅಂಕಣಕಾರರು ವೈಜ್ಞಾನಿಕ ವಿಚಾರಗಳಿಗೆ ಹತ್ತಿರವಾಗಿ ಮಾತನಾಡಿದ್ದಾರೆ. ಹೋಟೆಲುಗಳಲ್ಲಿ ತಯಾರಾಗುವ ಉಪಾಹಾರಗಳ ಬಗೆಗೆ ಎಚ್ಚರಿಕೆ ವಹಿಸುವಂತಹ ವಿಚಾರಗಳು ಇಲ್ಲಿ ಇಂಬು ಪಡೆದುಕೊಂಡಿವೆ. ಈ ಅಂಕಣ ಬರಹವು ಮೇಲ್ನೋಟಕ್ಕೆ ಸರಳತೆಯಿಂದ ಕೂಡಿದ್ದರೂ ಓದುಗರನ್ನು ಗಂಭೀರ ಚಿಂತನೆಗೆ ಹಚ್ಚುವಲ್ಲಿ ಸಹಕಾರಿಯಾಗಿದೆ. ಮಾನವನ ಆರೋಗ್ಯಕ್ಕೆ ಇರುವ ಸಂಬಂಧದ ನೆಲೆಗಳನ್ನು ಮಾರ್ಮಿಕವಾಗಿ ಚಿತ್ರಿಸುತ್ತದೆ. ಪ್ರಸ್ತುತ 'ಚಾ ಪಲ್ಯಾಕ್ಕೂ ಕ್ಯಾನ್ಸರ್' ಎಂಬ ಈ ಬರಹವು ಹೋಟೆಲು ಪ್ರತಿನಿಧೀಕರಣದ ದೃಷ್ಟಿಯಿಂದ ಮಹತ್ವದ್ದೆನಿಸುತ್ತದೆ. ಲೇಖಕರು ಈ ಬರಹದಲ್ಲಿ ಶೀರ್ಷಿಕೆಯನ್ನು ಚಮತ್ಕಾರಯುತವಾಗಿ ಬಳಸಿಕೊಂಡಿದ್ದಾರೆ,

ಈಶ್ವರ ದೈತೋಟ ಅವರ 'ಅಂತರದೃಷ್ಟಿ' ಎಂಬುದು ಅಂಕಣ ಬರಹಗಳ ಸಂಕಲನವಾಗಿದೆ. ಪ್ರತಿದಿನ ಸುಮಾರು ಐದು ವರ್ಷಗಳ ಕಾಲ ಉದಯವಾಣಿ ದೈನಿಕಕ್ಕೆ ಬರೆಯುತ್ತಾ ಬಂದ ಬರಹಗಳ ಕಟ್ಟು ಇದಾಗಿದೆ. ಪರಿಸರ, ಆಹಾರ ಮೊದಲಾದ ವಿಷಯಗಳ ಬಗೆಗೆ ಬರೆದ ಬರಹಗಳು ಇಲ್ಲಿವೆ. ಈ ಸಂಕಲನದಲ್ಲಿನ 'ಆಹಾರ' ಎಂಬ ಬರಹವು ಸಾಹಿತ್ಯ ಮತ್ತು ಹೋಟೆಲಿನ ಅಂತರ್‌ಸಂಬಂಧದ ದೃಷ್ಟಿಯಿಂದ ಪ್ರಸ್ತುತವೆನಿಸುತ್ತದೆ. ಈ ಬರಹದಲ್ಲಿ ಹೋಟೆಲಿನ ಕುರಿತಾದ ಭೌಗೋಳಿಕ, ಸಾಂಸ್ಕೃತಿಕ, ಧಾರ್ಮಿಕ, ವೈಜ್ಞಾನಿಕ ಅಂಶಗಳು ಚಿತ್ರಿತವಾಗಿವೆ.

“ಹಿಮಾಲಯದ ತುದಿಯಲ್ಲಿ ಇರಲಿ, ಚಂದ್ರಲೋಕದಲ್ಲಿ ಇರಲಿ ಎಲ್ಲಿ ಹೋದರೂ ಅಲ್ಲೊಂದು ಉಡುಪಿ ಹೋಟೆಲು ಇದ್ದೇ ಇರುತ್ತದೆ ಎನ್ನುವಂತಹದ್ದು ವಾಸ್ತವವಾಗಿರುತ್ತದೆ. ಉಡುಪಿ ಹೋಟೆಲುಗಳ ಜನಪ್ರಿಯತೆ ಮತ್ತು ವಿಸ್ತಾರ ವರ್ಣನೆಯ ಒಂದು ಮುಖವಾಗಿದೆ. ಹಾಗೆಯೇ ಅಡುಗೆ ಶೈಲಿ ಅನಧಿಕೃತ ಸಾಂಸ್ಕೃತಿಕ ರಾಯಭಾರಿ ಎಂದು ಕೆಲವು ಅನುಭವಿಗಳು ಎನ್ನುತ್ತಾರೆ. ದಕ್ಷಿಣ ಕನ್ನಡದ ಜಾನಪದ ಕಲೆ, ಸಂಸ್ಕೃತಿ ಮಹಿಮೆ ಹೊರಹೋದದ್ದೇ ಉಡುಪಿ ಹೋಟೆಲುಗಳು ಹಾಕಿಕೊಟ್ಟ ಸಾಂಸ್ಕೃತಿಕ ದಾರಿಯಲ್ಲಿ ಎಂದು ವಾದಿಸುವವರು ಇದ್ದಾರೆ”(ಈಶ್ವರ ದೈತೋಟ, ೧೯೯೫, ಪು. ೨೮). ಇಲ್ಲಿ ಹೋಟೆಲು ಪಡೆದುಕೊಂಡಿರುವ ಜನಪ್ರಿಯತೆಯ ವಿಸ್ತಾರವನ್ನು ಅಂಕಣಕಾರರು ನೆನಪಿಸಿಕೊಳ್ಳುತ್ತಾರೆ. ಹೋಟೆಲುಗಳ ಮುಖಾಂತರ ವಿವಿಧ ಕಲೆಗಳು ಹೊರಹೊಮ್ಮಿದ ರೀತಿಗಳು ಹಾಗೂ ಅನುಭವಿಗಳ ವಿಚಾರಸರಣಿಯನ್ನು ಲೇಖಕರು ಬಿಚ್ಚಿಟ್ಟಿದ್ದಾರೆ. ಇವು ಮೆಚ್ಚುಗೆ ಮಾತಿನ ಜೊತೆ ಜೊತೆಗೆ ಉಡುಪಿ ಹೋಟೆಲುಗಳ ಅವನತಿಯ ಲಕ್ಷಣಗಳನ್ನು ಕುರಿತು ವಿವರಿಸುವ ಪ್ರಮುಖ ಅಂಶಗಳಾಗಿವೆ. “ಈಗ ಉಡುಪಿಗೆ ಬನ್ನಿ ಶ್ರೀ ಕೃಷ್ಣನ ಊರಿನ ಹೋಟೆಲುಗಳ ಅಡುಗೆ ಮನೆಗಳಲ್ಲಿ ಸ್ಥಳೀಯ ಪ್ರಭಾವ ಕ್ರಮೇಣ ಮರೆಯಾಗುತ್ತಿದೆ. ಸಸ್ಯಾಹಾರಿ ರೆಸ್ಟೋರೆಂಟ್‌ಗಳಲ್ಲಿ ನಿಧಾನವಾಗಿ ಕೇರಳ, ತಮಿಳುನಾಡು ಅಡುಗೆಭಟ್ಟರು ತಳವೂರತೊಡಗಿದ್ದಾರೆ. ಅವರು ಮಾಡುವ ಗರಿಗರಿ ದೋಸೆ, ಹೂವಿನಂತಹ ಇಡ್ಲಿ, ಗರಂ ನೀರುಳ್ಳಿ ಚಟ್ನಿ–ರಸ ಸ್ವಾದಕರ ಮನಗೆಲ್ಲುತ್ತದೆ”(ಅದೇ). ಹೋಟೆಲುಗಳಲ್ಲಿ ಸ್ಥಳೀಯ ಕಾರ್ಮಿಕರ ಬದಲಾಗಿ ಹೊರರಾಜ್ಯಗಳ ಕಾರ್ಮಿಕರಿಂದ ಬದಲಾಗುತ್ತಿರುವ ಗ್ರಾಹಕರ ಮನೋಸ್ಥಿತಿಯನ್ನು ಅಂಕಣಕಾರರು ವಿವರಿಸುತ್ತಾರೆ. ಉಡುಪಿ ಪರಿಸರದ ಹೋಟೆಲುಗಳಲ್ಲಿ ಸಾಂಪ್ರದಾಯಿಕ ಆಹಾರ ಪದಾರ್ಥಗಳ ತಿಂಡಿ–ತಿನಿಸುಗಳ ಬದಲಾಗಿ ವಿನೂತನ ಶೈಲಿಯ ತಿಂಡಿ–ತಿನಿಸುಗಳು ಕಾಣಿಸಿಕೊಂಡ ಬಗೆಯನ್ನು ಲೇಖಕರು ತಮ್ಮದೇ ಆದ ಶೈಲಿಯಲ್ಲಿ ಬರೆದಿದ್ದಾರೆ. ಕೊಲ್ಲೂರು, ಉಡುಪಿ ಕೃಷ್ಣ, ಧರ್ಮಸ್ಥಳ ಮಂಜುನಾಥ ಮತ್ತು ಮಣಿಪಾಲ ಆಸ್ಪತ್ರೆಗೆಂದು ಈ ಜಿಲ್ಲೆಗೆ ನೆರೆಕೆರೆ ರಾಜ್ಯಗಳಿಂದ ಬರುವ ಯಾತ್ರಾರ್ಥಿಗಳ ಸಂಖ್ಯೆ ಎಂಬತ್ತರ ದಶಕದಿಂದ ವೃದ್ಧಿಸುತ್ತಾ ಬಂದಿದೆ. ಈ ಯಾತ್ರಾರ್ಥಿಗಳ ಹಾಗೂ ಕಾರ್ಯಾರ್ಥಿಗಳ ರುಚಿರುಚಿಯ ಬೇಡಿಕೆಗೆ ಪೂರಕವಾಗಿ ಹೋಟೆಲುಗಳ ಅಡುಗೆ ಶೈಲಿಯಲ್ಲೂ ಪ್ರಭಾವ ಉಂಟಾಗಿದೆ. ಮದ್ರಾಸಿ ವಡೆ, ಮಲೆಯಾಳ ದೋಸೆ ವಲಸೆ ಬರಲು ಈ ಪ್ರಚೋದನೆ ಅವಕಾಶ ಸೂಕ್ತ ವಾತಾವರಣ ನಿರ್ಮಿಸಿತು. ಆದರೆ ಹೋಟೆಲು ಮಾಲೀಕರನ್ನು ಪ್ರಶ್ನಿಸಿದರೆ “ಈ ಊರಲ್ಲಿ ಒಳ್ಳೆಯ ಕುಕ್ಸ್ ಎಲ್ಲಿ ಸಿಗುತ್ತಾರೆ ಮಾರಾಯರೆ” ಎಂದು ಪ್ರತಿಕ್ರಿಯೆ ಬರುತ್ತದೆ(ಅದೇ). ಇಂತಹ ಪ್ರಮುಖ ಹತ್ತಾರು ಸಮಸ್ಯೆಗಳನ್ನು ಲೇಖಕರು ಬರಹದಲ್ಲಿ ವಿವರಿಸಿದ್ದಾರೆ. ಹೋಟೆಲುಗಳ ಆಂತರಿಕ ಪಲ್ಲಟಗಳನ್ನು ಅಂಕಣಕಾರರು ಗುರುತಿಸಿದ್ದಾರೆ. ಇವುಗಳ ಜೊತೆಗೆ ಈ ಬರಹದಲ್ಲಿ ಲೇಖಕರು ಹೋಟೆಲಿನ ಸಂಸ್ಕೃತಿ ಮುಂತಾದವುಗಳ ಬಗೆಗೂ ಮಾರ್ಮಿಕವಾಗಿ ವಿವರಿಸಿದ್ದಾರೆ.

ಬಿ.ಎಂ. ಹನೀಫ್ ಅವರ 'ಬಣ್ಣದ ಬುಗುರಿ' ಕೃತಿಯಲ್ಲಿನ 'ಮೆಜೆಸ್ಟಿಕ್ ಮಾಣಿಗಳ ವಿಜಯ ವೃತ್ತಾಂತವು' ಎಂಬುದು ಹೋಟೆಲಿನ ಕುರಿತಾದ ಅಂಕಣ ಬರಹವಾಗಿದೆ. ಗ್ರಾಮೀಣ ಪರಿಸರದ ನಿರುದ್ಯೋಗಿ ಗಣೇಶಭಟ್, ಕೆಂಚೆಗೌಡ, ವೆಂಕಟರಮಣ ಹೆಗಡೆ, ನಾಗರಾಜ, ಇಬ್ರಾಹಿಂ ಮುಂತಾದ ಯುವಕರು ಹೋಟೆಲಿನ ಮೂಲಕ ಸ್ಥಿತಿವಂತರಾಗಿ ನಂತರದಲ್ಲಿ ವಿವಿಧ ಹೋಟೆಲುಗಳ ಮಾಲೀಕರಾದ ಬಗೆಯಿದೆ. ಇನ್ನೂ ಕೆಲವರು ಪ್ರತಿಷ್ಠಿತ ಹೋಟೆಲುಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ ಬಗೆಯನ್ನೂ ಈ ಅಂಕಣ ಬರಹವು ಓದುಗರೆದುರು ತೆರೆದಿಡುತ್ತದೆ. ರಾಯಲ್ ಕಪಿಲಾ, ಶೋಭಾ, ಶೀತಲ್, ಟೂರಿಸ್ಟ್, ಸುಪ್ರಭಾತ, ರಾಮಕೃಷ್ಣ, ಮಂಜುನಾಥ, ಸ್ವರ್ಣ ಮೊದಲಾದ ಬೆಂಗಳೂರಿನ ಕೆಲವು ಪ್ರಮುಖ ವಸತಿಗ್ರಹಗಳನ್ನು ಲೇಖಕರು ತಮ್ಮ ಬರಹದಲ್ಲಿ ಉಲ್ಲೇಖಿಸುತ್ತಾರೆ. ಬೆಂಗಳೂರಿನ ಮೆಜೆಸ್ಟಿಕ್ ಪರಿಸರದಲ್ಲಿರುವ ಹೋಟೆಲು ಕಾರ್ಮಿಕರ ಹಾಗೂ ಮಾಲೀಕರ ಸ್ಥಿತಿಗತಿಗಳನ್ನು ಪ್ರಸ್ತುತ ಈ ಅಂಕಣ ಬರಹವು ಮನೋಜ್ಞವಾಗಿ ಕಟ್ಟಿಕೊಟ್ಟಿದೆ.

ಆರ್. ಗಣೇಶ್ ಅವರು ವಿಜಯ ಕರ್ನಾಟಕ ದೈನಿಕಕ್ಕೆ ಬರೆಯುತ್ತಿದ್ದ ಅಂಕಣ ಬರಹಗಳು 'ಅಭಿರುಚಿ' ಎಂಬ ಸಂಕಲನ ರೂಪದಲ್ಲಿ ಪ್ರಕಟವಾಗಿವೆ. ಪ್ರಸ್ತುತ ಕೃತಿಯಲ್ಲಿ 'ತಿಂಡಿಗಳ ತಿಂಡಾಟದಲ್ಲಿ' ಎನ್ನುವ ಬರಹವೊಂದಿದೆ. ಇಲ್ಲಿ ಹೋಟೆಲಿನಲ್ಲಿ ತಯಾರಾಗುವ ವಿವಿಧ ಬಗೆಯ ಉಪಾಹಾರಗಳ ಪದನಿಷ್ಪತ್ತಿಯನ್ನು ವಿನೋದಪೂರ್ಣವಾಗಿ ವಿಶ್ಲೇಷಿಸಿದ್ದಾರೆ. ಇದರಲ್ಲಿ ಮುಖ್ಯವಾಗಿ ದೋಸೆ ಪದವನ್ನು ಒಬ್ಬ ರಾಜನ ಕಥೆಯ ಮೂಲಕ ತಿಳಿಸುತ್ತಾ ಹೋಗುತ್ತಾರೆ. ರಾಜ ಈ ಖಾದ್ಯದ ಹೆಸರೇನೆಂದು ಕೇಳಿದಾಗ ಅಡುಗೆಭಟ್ಟ ಆಲೋಚಿಸಿ ದೋ–ಸುಯಾ ಎಂದು ತಿಳಿಸುತ್ತಾನೆ. ಅದೇ ಮುಂದೆ ದೋಸೆ ಎಂದೆನಿಸಿತು. ಹಾಗೆಯೇ ಚಪಾತಿ, ಅಕ್ಕಿರೊಟ್ಟಿ, ಜೋಳದ ರೊಟ್ಟಿ, ತಾಲಿಪಟ್ಟು, ಇಡ್ಲಿ, ಉಪ್ಪಿಟ್ಟು, ಪೂರಿ ಈ ಮೊದಲಾದ ಉಪಾಹಾರಗಳ ನುಡಿ ಬೆಡಗುಗಳನ್ನು ತಿಳಿಸುತ್ತಾರೆ.

ಸಂತೋಷಕುಮಾರ ಗುಲ್ವಾಡಿ ಅವರು 'ತರಂಗ' ವಾರಪತ್ರಿಕೆಗೆ ಬರೆದ 'ಅಂತರಂಗ ಬಹಿರಂಗ' ಎಂಬ ಹೆಸರಿನ ಸಂಪಾದಕೀಯ ಬರಹಗಳು ನಂತರದಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿವೆ. ಈ ಸಂಕಲನದಲ್ಲಿ "ಮುಂಬಯಿ ಉಡುಪಿ ಹೋಟೆಲುಗಳಿಗೆ ಉಳಿಗಾಲವೆಲ್ಲಿ?" ಎಂಬ ಹೋಟೆಲು ಸಂಬಂಧಿತ ಬರಹವೊಂದಿದೆ. ಲೇಖಕರು ಈ ಸಂಪಾದಕೀಯ ಬರಹದಲ್ಲಿ ಸ್ವತಃ ತಾವು ಕಂಡ ಅನುಭವವನ್ನು ಕುರಿತು ವಿವರಿಸಿದ್ದಾರೆ. ಮುಂಬಯಿಯಲ್ಲಿ ಸುಮಾರು ೧೫೦೦ ಉಡುಪಿ ಹೋಟೆಲುಗಳಿವೆ. ಅವುಗಳ ಸಾಧನೆ ಅಪಾರವಾದದ್ದು. ಮುಂಬಯಿಗೆಲ್ಲಾ ಕಡಿಮೆ ಬೆಲೆಗೆ ಆರೋಗ್ಯಕರ, ರುಚಿಕರ, ಪೂರ್ಣಜೀರ್ಣಿತ ಆಹಾರವನ್ನು ಈ ಉಡುಪಿ ಹೋಟೆಲುಗಳು ಒದಗಿಸಿದವು. ಲೇಖಕರ ಅನುಭವದ ಪ್ರಕಾರ ಮುಂಬಯಿಯಲ್ಲಿ ಇದ್ದಷ್ಟು

ಉಡುಪಿ ಹೋಟೆಲುಗಳು ದೇಶದ ಬೇರೆ ಯಾವ ಭಾಗದಲ್ಲೂ ಇರಲಿಲ್ಲ. ಉಡುಪಿ ಹೋಟೆಲುಗಳ ಸಂಘರ್ಷ ಎಷ್ಟರಮಟ್ಟಿಗೆ ಆಯಿತೆಂದರೆ ದಕ್ಷಿಣಾತ್ಯರ ಮೇಲಿನ ಮುನಿಸಿನಿಂದ ಆರಂಭಗೊಂಡ ಶಿವಸೇನೆಯ ಮೊದಲ ಗುರಿ ಈ ಹೋಟೆಲುಗಳ ಮೇಲೆ ಕಣ್ಣು ಬಿತ್ತು. ಇದರಿಂದಾಗಿಯೇ ಉಡುಪಿ ಹೋಟೆಲುಗಳ ಅವನತಿ ಆರಂಭವಾಯಿತೆಂದು ಈ ಬರಹಗಾರರು ತಿಳಿಸಿದ್ದಾರೆ.

ಅಂಕಣ ಮತ್ತು ಸಂಪಾದಕೀಯ ಬರಹಗಳಂತೆಯೇ ಲಲಿತಪ್ರಬಂಧಗಳಲ್ಲೂ ಹೋಟೆಲು, ಹೋಟೆಲುಗಳಲ್ಲಿನ ತಿಂಡಿ–ತಿನಿಸುಗಳ ಬಗೆಗಿನ ಚರ್ಚೆಯ ಗದ್ಯ ಚಿತ್ರಣಗಳಿವೆ. ವೀರೇಂದ್ರಸಿಂಪಿ ಅವರ 'ಹಳ್ಳಿಯ ಚಹಾ ಹೋಟೆಲುಗಳು' ಎಂಬ ಪ್ರಬಂಧದಲ್ಲಿ ಗ್ರಾಮೀಣ ಪ್ರದೇಶದ ಹೋಟೆಲುಗಳ ಸ್ಥಿತಿಗತಿ ಕುರಿತ ಚಿತ್ರಣವಿದೆ. ನಗರಗಳಲ್ಲಿನ ಹೋಟೆಲುಗಳು ಹೊಂದಿರುವ ಆಧುನಿಕವಾದ ಕಟ್ಟಡ, ಪೀಠೋಪಕರಣ, ಅಲ್ಲಿನ ತಿಂಡಿ–ತಿನಿಸುಗಳ ಬಗೆಗೆ ಚಿತ್ರಿಸಲಾಗಿದೆ. ಇಲ್ಲಿನ ವಿವಿಧ ಪ್ರಕಾರದ ತಿಂಡಿ–ತಿನಿಸುಗಳು ಗ್ರಾಹಕರ ಮೇಲೆ ಬೀರುವ ಪ್ರಭಾವವನ್ನು ವಿವರಿಸಲಾಗಿದೆ. ಹಾಗೆಯೇ ಗ್ರಾಮೀಣ ಸಾಂಸ್ಕೃತಿಕ ಕೇಂದ್ರವಾಗಿ 'ಚಂದ್ರಭವನ'ವನ್ನು ಪ್ರಬಂಧಕಾರರು ಪರಿಚಯಿಸುತ್ತಾರೆ. ಪ್ರಬಂಧಕಾರರು ಹಳ್ಳಿಯ ಹೋಟೆಲುಗಳ ಸ್ಥಿತಿಗತಿ, ಗ್ರಾಹಕರ ಮನೋಭಾವನೆ, ತಿಂಡಿ–ತಿನಿಸುಗಳು ತಯಾರಾಗುವ ಬಗೆಯನ್ನು ಇಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಹಳ್ಳಿಯ ಹೋಟೆಲುಗಳಲ್ಲಿ ದೊರಕುವ ಗ್ರಾಹಕರ ಮಾನಸಿಕ ನೆಮ್ಮದಿ ಚಹಾದಿಂದ ಉಂಟಾಗುವ ಉಪಯೋಗಗಳ ಬಗೆಗೆ ಈ ಪ್ರಬಂಧದಲ್ಲಿ ವಿವರಿಸಲಾಗಿದೆ. ಮನೆಗಳಲ್ಲಿ ಹಾಗೂ ಹೋಟೆಲುಗಳಲ್ಲಿ ತಯಾರಾಗುವ ಬಗೆ ಬಗೆಯ ಚಹಾ ಹಾಗೂ ತಿಂಡಿ ತಿನಿಸುಗಳ ಮನೋಜ್ಞ ಚಿತ್ರಣ ಇಲ್ಲಿದೆ. ಹಳ್ಳಿಯ ಹೋಟೆಲುಗಳು ಕಟ್ಟಿಕೊಡುವ ಆತ್ಮೀಯತೆ, ಆತಿಥ್ಯ ನಗರಪ್ರದೇಶದ ಹೋಟೆಲುಗಳು ಕೊಡಲಾರವು ಎಂಬುದು ಪ್ರಬಂಧಕಾರರ ಇಲ್ಲಿನ ನಿಲುವಾಗಿದೆ. ಹಳ್ಳಿಯ ಹೋಟೆಲುಗಳಲ್ಲಿ ಗ್ರಾಹಕರ ಬೇಕು ಬೇಡಗಳನ್ನು ಪೂರೈಸುವ ನೆಲೆಯಲ್ಲಿ ಮಾಣಿಯ ಚಿತ್ರಣವು ಇಲ್ಲಿದೆ. ಹಳ್ಳಿಯ ಹೋಟೆಲುಗಳಲ್ಲಿನ ತಿಂಡಿ–ತಿನಿಸುಗಳಿಂದ ಗ್ರಾಹಕರು ಸಂತೃಪ್ತರಾಗುವ ಸ್ವರೂಪವನ್ನು ವಿವರಿಸಿದ್ದಾರೆ. ಈ ಹೋಟೆಲುಗಳು ಸಾರ್ವಜನಿಕರ ಕೂಟ, ರಸಿಕರ, ಉಂಡಾಡಿಗಳ ನಿವಾಸ, ತರುಣರ ಕ್ಲಬ್ಬು, ಗೃಹಸ್ಥರ ವಿರಾಮಗೃಹ, ವೃದ್ಧರ ಬಾಯಿಚಪಲ ತಣಿಸುವ ಅಕ್ಷಯಪಾತ್ರೆ, ಅಕ್ಷರಸ್ಥರ ಪಾರ್ಲಿಮೆಂಟು, ಸರ್ವ ವಯಸ್ಸಿನ ಸರ್ವ ಅಭಿರುಚಿ ಹವ್ಯಾಸಗಳ, ಸರ್ವ ಉದ್ಯೋಗದ, ಸರ್ವಜಾತಿಗಳ ಜನರಿಗೆ ಸಮಾನ ಸ್ಥಾನವನ್ನು ಕಲ್ಪಿಸಿರುವ ಬಗೆಯನ್ನು ಪ್ರಬಂಧಕಾರರು ಗುರುತಿಸಿದ್ದಾರೆ. ಹಾಗೆಯೇ ವಿಶ್ರಾಂತಿಯ ಸ್ಥಳ, ಶಕ್ತಿ ಗಳಿಸುವ ನೆಲೆ, ಭಾವೈಕ್ಯತೆಯ ಹುಟ್ಟು, ಈ ಹಳ್ಳಿಯ ಚಹಾ ಹೋಟೆಲುಗಳಲ್ಲಿಯೇ ಎಂಬುದನ್ನು ಪ್ರಬಂಧದಲ್ಲಿ ಚಿತ್ರಿಸಿದ್ದಾರೆ.

ಇದೇ ಪ್ರಬಂಧಕಾರರ 'ಖಾನಾವಳಿಗಳು' ಎಂಬುದು ಇನ್ನೊಂದು ಲಲಿತಪ್ರಬಂಧವಾಗಿದೆ. ಖಾನಾವಳಿಗಳು ಆಧುನಿಕ ಜಗತ್ತಿನ ಜನರಿಗೆ ಮುಖ್ಯ ಕೀಲಗಳಾಗಿವೆ. ಸ್ವರ್ಗದ ತಂಗುಮನೆಗಳು

ಭೂಲೋಕದಲ್ಲಿ ಎಲ್ಲಿಯಾದರೂ ಇದ್ದರೆ ಅವು ಖಾನಾವಳಿಗಳು. ನಮ್ಮ ಹೊಟ್ಟೆ ನೆತ್ತಿಗಳ ಕಡೆಗೆ ಗಮನ ಕೊಟ್ಟು ಹಸಿದ ಹೊಟ್ಟೆಗೆ ತುತ್ತು ಅನ್ನವನ್ನು ಮಿತವಾಗಿ ಆರೋಗ್ಯ ಕೆಡದಂತೆ ಪರಿಸ್ಥಿತಿಯನ್ನು ನಿರ್ಮಿಸುತ್ತಿವೆ. ಆಹಾರ ಜೀರ್ಣ ಕ್ರಿಯೆಯ ಕಡೆಗೆ ಗಮನ ಕೊಡುತ್ತಿರುವ ಖಾನಾವಳಿಗಳ ಪಾತ್ರವನ್ನು ವಿವರಿಸಿದ್ದಾರೆ. ಇಂತಹ ಖಾನಾವಳಿಗಳ ಋಣವನ್ನು ಜನ್ಮ ಜನ್ಮ ಕಳೆದರೂ ತೀರಿಸುವುದಾಗುವುದಿಲ್ಲ. ಹೀಗೆನ್ನುವ ಪ್ರಬಂಧಕಾರರ ಸ್ವ ಅನುಭವವು ಖಾನಾವಳಿಗಳ ಮೂಲಕ ವ್ಯಕ್ತವಾಗಿದೆ.

ಅ.ರಾ. ಮಿತ್ರ ಅವರ 'ಹೋಟೆಲುಗಳು' ಎಂಬ ಲಲಿತಪ್ರಬಂಧವೊಂದಿದೆ. ಇಲ್ಲಿ ಪ್ರಾಚೀನ ಹಾಗೂ ಸಮಕಾಲೀನ ಹೋಟೆಲುಗಳು ಹೊಂದಿರುವ ವ್ಯವಸ್ಥೆಯ ಕುರಿತ ಚಿತ್ರಣವಿದೆ. ಪ್ರಾಚೀನ ಕಾಲದ ಹೋಟೆಲುಗಳು ಶೋಕಿಗೆಂದೋ, ಲೋಕಾಭಿರಾಮವಾಗಿ ಹರಟಲೆಂದೋ ತಂಗುದಾಣ ಗಳಾಗಿದ್ದವು. ಅವರು ಅಗತ್ಯ ಬಿದ್ದಾಗ ಹೋಟೆಲುಗಳ ಆಶ್ರಯ ಪಡೆದುಕೊಳ್ಳುವ ಚಿತ್ರಣಗಳನ್ನು ವಿವರಿಸಿದ್ದಾರೆ. ಹೋಟೆಲು ಹಾಗೂ ಹೋಟೆಲುಗಳಲ್ಲಿನ ತಿಂಡಿಗಳಿಗೆ ಆಕಸ್ಮಿಕ ಸಂದರ್ಭದಲ್ಲಿ ಅವಲಂಬಿತರಾಗುತ್ತಿದ್ದರು. ಆಧುನಿಕ ಹೋಟೆಲುಗಳು ಮನುಷ್ಯನು ಬದುಕುವ ಕ್ರಮಕ್ಕೆ ಅನಿವಾರ್ಯ ಸಂಗತಿಯಾದದ್ದನ್ನು ಚಿತ್ರಿಸಿದ್ದಾರೆ. ಹಿಂದಿಗಿಂತಲೂ ಈಗಿನ ಹೋಟೆಲುಗಳು ಆಧುನಿಕ ಪ್ರಪಂಚಕ್ಕೆ ಹತ್ತಿರವಾಗಿರುವುದನ್ನು ಪ್ರಬಂಧಕಾರರು ಮನೋಜ್ಞವಾಗಿ ವಿವರಿಸಿದ್ದಾರೆ. ಗ್ರಾಹಕರ ಹಾಗೂ ಕಾರ್ಮಿಕ ಹೋಟೆಲುಗಳಲ್ಲಿ ಇರುವಾಗಿನ ಮನೋಸ್ಥಿತಿಯನ್ನು ವಿವರಿಸಿದ್ದಾರೆ. ಆಧುನಿಕತೆಯ ಹೋಟೆಲುಗಳು ಹೊಂದಿರುವ ತಿಂಡಿ-ತಿನಿಸು ತಯಾರಿಕಾ ಉಪಕರಣಗಳ ಮಾರ್ಮಿಕತೆಯನ್ನು ತಿಳಿಯಪಡಿಸಿದ್ದಾರೆ. ಆ ಉಪಕರಣಗಳಿಂದ ಗ್ರಾಹಕವರ್ಗದಲ್ಲಿ ಉಂಟಾಗುವ ಮಾನಸಿಕ ತಿಳುವಳಿಕೆ ಗಳನ್ನು ಚಿತ್ರಿಸಲಾಗಿದೆ. ಮುಖ್ಯವಾಗಿ ಪ್ರಬಂಧಕಾರರು ತಿಂಡಿ-ತಿನಿಸು ಹೋಟೆಲುಗಳು ಇದರ ಜೊತೆಗೆ ವಸತಿಸೌಲಭ್ಯವನ್ನು ಕಲ್ಪಿಸುವ ಹೋಟೆಲುಗಳ ಕುರಿತು ಸಮಗ್ರವಾಗಿ ಈ ಪ್ರಬಂಧದಲ್ಲಿ ಹಿಡಿದಿಟ್ಟಿದ್ದಾರೆ.

ಜಿ.ಟಿ. ನಾರಾಯಣರಾವ್ ಅವರು 'ಯಥಾ ಜನಾಃ ತಥಾ ಹೋಟೆಲು' ಎಂಬ ಲಲಿತ ಪ್ರಬಂಧದಲ್ಲಿ ಹೋಟೆಲಿನ ಕುರಿತಾದ ಚಿತ್ರಣವಿದೆ. ಲಲಿತ ಪ್ರಬಂಧಕಾರರು ಉನ್ನತವರ್ಣದವರಲ್ಲಿ ಹೋಟೆಲು ಹಾಗೂ ಅಲ್ಲಿನ ತಿಂಡಿ-ತಿನಿಸುಗಳ ಬಗ್ಗೆ ಇರುವ ಕನಿಷ್ಠ ಮನೋಭಾವನೆಯನ್ನು ಗುರುತಿಸಿದ್ದಾರೆ. ಅನ್ನದಾನ, ಅನ್ನವಿಕ್ರಯದ ಬಗೆಗೆ ಮೇಲ್ವರ್ಗದವರು ತಾಳಿರುವ ಭಾವನೆಯನ್ನು ಪ್ರಬಂಧದಲ್ಲಿ ಚಿತ್ರಿಸಿದ್ದಾರೆ. ಹಾಗೆಯೇ ಕೇರಳ ಮೂಲದವರ ಹೋಟೆಲು ಹಾಗೂ ಉಪಾಹಾರ ತಯಾರಿಸುವ ರುಚಿಸೂಕ್ಷ್ಮತೆಯನ್ನು ವಿವರಿಸಿದ್ದಾರೆ. ಲೇಖಕರ ದೃಷ್ಟಿಯಲ್ಲಿ ಹೋಟೆಲು ಉದ್ಯಮ ಸಮಾಜದ ಒಂದು ಅವಿಭಾಜ್ಯ ಅಂಗ. ಸರಕು ಹಾಗೂ ಸೇವೆ ಪೂರೈಸಲು ಬಹುಜನಾವಲಂಬಿ ಕಾರ್ಖಾನೆ ಜನರ ಮೂರು ಪ್ರಮುಖ ಅವಶ್ಯಕತೆಗಳ ಪೈಕಿ ಆಸನ, ವಸನ, ವಸತಿ ಇವುಗಳಲ್ಲಿ

ಮೊದಲನೆಯದನ್ನೂ ಕೊನೆಯದನ್ನೂ ಒದಗಿಸುವ ತಂತ್ರ ಸೌಕರ್ಯ ಹಸಿದು ಕನಲಿ ಬರುವ ದೂರ್ವಾಸನಿಗೂ ಅವನ ಶಿಷ್ಯಳಿಗೂ ದಿಡೀರನೆ ಮೃಷ್ಟಾನ್ನ ಭೋಜನ ಬಡಿಸುವ ಅಕ್ಷಯ ಪಾತ್ರೆ(ಜಿ.ಶಂ.ಪರಮಶಿವಯ್ಯ (ಸಂ.), ೧೯೮೮; ಪುಟ ೮೨) ಹೀಗೆ ಪ್ರಬಂಧಕಾರರು ಹೋಟೆಲುಗಳ ಬಗೆಗೆ ಮಹತ್ವಪೂರ್ಣವಾದ ಮಾತುಗಳನ್ನು ಬಿಚ್ಚಿಟ್ಟಿದ್ದಾರೆ. ಹೋಟೆಲುಗಳು ಆಯಾ ಊರಿನ ಸಾಂಸ್ಕೃತಿಕ ವೈಶಿಷ್ಟ್ಯವನ್ನು ದೇಶ ವಿದೇಶಗಳ ಪ್ರಯಾಣಿಕರಿಗೂ ಪರಿಚಯಿಸಿಕೊಡುವ ಜೀವಂತ ರಾಯಭಾರಿಗಳು ಎಂಬುದನ್ನು ತಿಳಿಸುವುದೇ ಇಲ್ಲಿ ಲೇಖಕರ ಮುಖ್ಯ ಆಶಯವಾಗಿದೆ. ದೇಶದ ಕೆಲವೊಂದು ಮುಖ್ಯ ನಗರಗಳಿಗೆ ಹೋಗಿ ಅಲ್ಲಿಯ ಮಧ್ಯಮವರ್ಗದ ಹೋಟೆಲುಗಳಲ್ಲಿ ಹಲವು ದಿನ ತಂಗಿದ್ದು ಹಿಂತಿರುಗಿದಾಗ ಈ ಹೇಳಿಕೆಯ ಯಥಾರ್ಥ ಅರಿವಾಗುವುದು.

ಹೋಟೆಲುಗಳು ಜನರ ಉದರಗಳಿಗೆ ಗ್ರಾಸ ಒದಗಿಸುವ ಆಹಾರ ಕಾರ್ಖಾನೆಗಳು. ಇವುಗಳ ಅನ್ವಯಕ್ಷೇತ್ರ ನಿಜಕ್ಕೂ ಜಾತ್ಯತೀತ, ಭಾಷಾತೀತ ಮತ್ತು ಗಡಿಗಳ ಪರಿಮಿತಿ ಮೀರಿ ಪಟ್ಟಾಲಮ್ ಹೊಟ್ಟೆ ಮೇಲೆ ನಡೆಯುತ್ತದೆ. ಹೋಟೆಲು ದೇಶ ಸಂಚಾರಿಗಳಿಗೆ ಮೊದಲ ತಂಗುದಾಣಗಳು ಎಂದೇ ಇವು ಕಲಾವಿದ, ಸಾಹಿತಿ, ಉದ್ಯಮಿ, ಪ್ರವಾಸಿ ಪ್ರತಿಯೊಬ್ಬನಿಗೂ ಪ್ರಿಯ ಸಂಗತಿಗಳು. ಒಂದು ಪಕ್ಷ ಹೋಟೆಲುಗಳು ಇಲ್ಲವಾಗಿದ್ದರೆ ಜನರ ಸ್ಥಿತಿ ಏನಾಗುತ್ತಿತ್ತೋ? ಆಗ ಪ್ರತಿಯೊಬ್ಬನೂ ತನ್ನ ಪಾತ್ರೆಯನ್ನು ತಾನೇ ಹೊತ್ತು ಹೋಗಬೇಕಾಗುತ್ತಿತ್ತು(ಅದೇ, ಪುಟ ೮೪) ಎಂಬಿತ್ಯಾದಿ ವಿವರಗಳು ಜಿ.ಟಿ. ನಾರಾಯಣರಾವ್ ಅವರ 'ಯಥಾ ಜನಾ ತಥಾ ಹೋಟೆಲು' ಎಂಬ ಲಲಿತಪ್ರಬಂಧದಲ್ಲಿ ಚಿತ್ರಣಗೊಂಡಿವೆ.

ಪು.ತಿ.ನ. ಅವರ 'ಮಸಾಲೆದೋಸೆ' ಎಂಬ ಲಲಿತಪ್ರಬಂಧವು ಸಾಹಿತ್ಯ ಮತ್ತು ಹೋಟೆಲಿನ ಅಂತರ್‌ಸಂಬಂಧದ ಸಂದರ್ಭದಲ್ಲಿ ಪ್ರಸ್ತುತವೆನಿಸುತ್ತದೆ. ಇಲ್ಲಿ ಪ್ರಬಂಧಕಾರರು ಮಸಾಲೆದೋಸೆಯನ್ನು ಒಂದು ಪರಿವರ್ತನೆಯ ಸಾಧನವಾಗಿ ಚಿತ್ರಿಸಿದ್ದಾರೆ. ಇದರ ಮೂಲಕವಾಗಿ ನಾಗರಿಕ-ಅನಾಗರಿಕ, ಸಂಸ್ಕೃತರು-ಅಸಂಸ್ಕೃತರು, ಹಳ್ಳಿಗರು-ಪಟ್ಟಣಿಗರು, ಪ್ರಗತಿಶೀಲರು–ಸಂಪ್ರದಾಯಸ್ಥರು, ಇಲ್ಲಿರುವ ಸೂಕ್ಷ್ಮತೆಗಳನ್ನು ಪ್ರಬಂಧಕಾರರು ಗುರುತಿಸಿದ್ದಾರೆ. ಹೋಟೆಲುಗಳಲ್ಲಿ ತಯಾರಾಗುವ ಮಸಾಲೆದೋಸೆಗೆ ಜಾತಿ, ಮತ, ಪಂಥ, ಧರ್ಮ ಮೀರಿ ಒಂದು ಕಡೆ ಸೇರುವ ಸಾಮರ್ಥ್ಯವಿದೆ. ಐಕ್ಯತೆಯನ್ನು ಸಾಧಿಸುವುದರಲ್ಲಿ ಪ್ರಭಾವಶಾಲಿಯಾದ ವಸ್ತು ಮಸಾಲೆದೋಸೆ ಎನ್ನುತ್ತಾರೆ ಪ್ರಬಂಧಕಾರರು.

ನ.ಹ. ಕಟಗೇರಿ ಅವರ 'ಧಾರವಾಡದ ದೋಸೆಗಳು' ಎಂಬ ಲಲಿತಪ್ರಬಂಧದಲ್ಲಿ ಧಾರವಾಡದ ಹೋಟೆಲು ಮತ್ತು ಮನೆಗಳಲ್ಲಿ ತಯಾರಾಗುವ ಬಗೆಬಗೆಯ ದೋಸೆಗಳ ಪ್ರಭೇದಗಳನ್ನು ಬಾಯಿಯಲ್ಲಿ ನೀರೂರುವಂತೆ ನಿರೂಪಿಸಲಾಗಿದೆ. ವಿದೇಶಿ ಹೋಟೆಲುಗಳಲ್ಲಿ ತಯಾರಾಗುವ ದೋಸೆ ಗ್ರಾಹಕರಲ್ಲಿ ಪಡೆದುಕೊಂಡ ಪ್ರಾಮುಖ್ಯತೆಯನ್ನು ಖಚಿತಪಡಿಸಿದ್ದಾರೆ. ಬ್ರಾಹ್ಮಣರಲ್ಲಿ ವಿಶೇಷವಾದ ದಿನಗಳಲ್ಲಿ ವಿವಿಧ ಪ್ರಕಾರಗಳ ದೋಸೆಗಳು ತಯಾರಾಗುತ್ತಿದ್ದ ಬಗೆಯನ್ನು ಇಲ್ಲಿ

ವಿವರಿಸಿದ್ದಾರೆ. ದೋಸೆ ಕಾಲಕ್ಕೆ ತಕ್ಕಂತೆ ಪಡೆದ ಅರ್ಥ ಬದಲಾವಣೆಯಾದ ರೀತಿಯನ್ನು ವಿವರಿಸಿದ್ದಾರೆ. ದೋಸೆ ತಯಾರಿಸುವ ಕ್ರಮವನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಹೋಟೆಲಿನ ದೋಸೆ ವಿವಿಧ ರೀತಿಯ ರೂಪ ಪಡೆದುಕೊಳ್ಳುವ ಬಗೆಯನ್ನು ಪ್ರಬಂಧಕಾರರು ರುಚಿಕಟ್ಟಾಗಿ ನಿರೂಪಿಸಿದ್ದಾರೆ. ವಿವಿಧ ಬಗೆಯ ಚಟ್ನಿ ಪಲ್ಯಗಳ ಕುರಿತ ವಿವರಗಳು ಪ್ರಬಂಧದ ಹಿರಿಮೆಯನ್ನು ಹೆಚ್ಚಿಸಿವೆ. ಧಾರವಾಡದ ಗ್ರ್ಯಾಂಡ್ ಹೋಟೆಲ್ ಸವಿಸವಿ ದೋಸೆಗಳಿಗೆ ಜೀವ ತುಂಬುವ ಪ್ರಸಿದ್ಧಿಯನ್ನು ಪಡೆದ ಬಗೆಯಿದೆ. ಹೋಟೆಲಿನ ದೋಸೆಗಳನ್ನು ತಿನ್ನದವನೆ ಪಾಪಿ ಅನ್ನುವ ನೆಲೆಯಲ್ಲಿ ಅಲ್ಲಿನ ದೋಸೆ ಪ್ರಾಮುಖ್ಯತೆ ಪಡೆದುಕೊಂಡಿತ್ತು. ಕೃಷ್ಣಪ್ಪನ ಹೋಟ್ಲು, ಬಾಂಬೆ ರೆಸ್ಟೋರೆಂಟ್, ಧಾರವಾಡ ರೆಸ್ಟೋರೆಂಟ್, ದೋಸೆ ಹೋಟೆಲು, ದಾವಣಗೆರೆಯ ಬೆಣ್ಣೆಯ ದೋಸೆ ಹೋಟೆಲು, ಬಯಲು ತೋಟದ ಕಂಟ್ರಿ ಕ್ಲಬ್ಬು ಮುಂತಾದವುಗಳನ್ನು ಪ್ರಬಂಧಕಾರರು ಹೆಸರಿಸಿದ್ದಾರೆ.

ಇದೇ ಲೇಖಕರ 'ಭಜಿಯ ಬಹುರೂಪಗಳು' ಎಂಬುದು ಮತ್ತೊಂದು ಲಲಿತಪ್ರಬಂಧವಾಗಿದೆ. ಈ ಪ್ರಬಂಧದಲ್ಲಿ ಭಾರತದ ವಿವಿಧೆಡೆಗಳ ಹೋಟೆಲುಗಳಲ್ಲಿ ಪ್ರಸಿದ್ಧವಾಗಿರುವ ಬಗೆಬಗೆಯ ಭಜಿಗಳ ಬಗೆಗೆ ಸ್ವಾದಿಷ್ಟವಾಗಿ ವಿವರಿಸಲಾಗಿದೆ. ಉತ್ತರ ಕರ್ನಾಟಕದ ತಿನಿಸುಗಳಲ್ಲಿ ಭಜಿಯ ಸ್ಥಾನ, ಕಾಲ, ಹುಟ್ಟು ಇತ್ಯಾದಿ ಪ್ರಮುಖ ಅಂಶಗಳ ಕುರಿತಾದ ಮಾಹಿತಿ ಇಲ್ಲಿದೆ. ಹಿಂದೂಸ್ತಾನದ ಎಲ್ಲಾ ರಾಜ್ಯಗಳಲ್ಲಿ ಕಾಣಸಿಗುವ ಒಂದು ವಿಶಿಷ್ಟ ಖಾದ್ಯವೆಂದರೆ ಅದು ಭಜಿ. ಭಜಿ, ಪಕೋಡಾ ಮಿರ್ಚಿ ಎಂದು ಭಾಷಿಕವಾಗಿ ಕರೆದರು. ಮಾಡುವ ಪದ್ಧತಿ, ತಿನ್ನುವ ಪದ್ಧತಿ, ರುಚಿ ಒಂದೇ ಎಂದು ಪ್ರಬಂಧಕಾರರು ಪರಿಭಾವಿಸಿದ್ದಾರೆ. ಕಾಂದಾಭಜಿ, ಮಿರ್ಚಿ, ಭಜಿ, ಬುರಬುರಿ ಎಂಬಿತ್ಯಾದಿ ಹೆಸರುಗಳು ಕರ್ನಾಟಕ-ಮಹಾರಾಷ್ಟ್ರ ಗಡಿಪ್ರದೇಶಗಳಲ್ಲಿನ ಮನೆಮಾತಾಗಿದೆ ಎಂದು ಪ್ರಬಂಧಕಾರರು ಅಭಿಪ್ರಾಯಪಡುತ್ತಾರೆ. ಹೋಟೆಲುಗಳು, ಡಬ್ಬಾ ಅಂಗಡಿ, ಗಿಡದ ಕೆಳಗಡೆ, ರಸ್ತೆ ಬದಿಯಲ್ಲಿ ಹೀಗೆ ಎಲ್ಲೆಂದರಲ್ಲಿ ಭಜಿ–ಮಿರ್ಚಿಯು ಲಭ್ಯವಾಗುತ್ತಿರುವುದನ್ನು ಪ್ರಬಂಧಕಾರರು ಗುರುತಿಸುತ್ತಾರೆ. ಈ ತರಹದ ತಿನಿಸು ಸಿಗದಿದ್ದರೆ ಹೋಟೆಲುಗಳಲ್ಲಿ ಪ್ರಾಪ್ತವಾಗುತ್ತವೆ ಎಂಬುದನ್ನು ಪ್ರಬಂಧಕಾರರು ಇಲ್ಲಿ ವಿವರಿಸಿದ್ದಾರೆ. ಪ್ರಬಂಧಕಾರರು ತಮ್ಮ ಸ್ವ–ಅನುಭವವೆಂಬಂತೆ ನಿರೂಪಿಸುವ ಭಜಿ ತಿನ್ನುವ ಚಪಲಕ್ಕೆ ಸಂಬಂಧಪಟ್ಟ ಪ್ರಸಂಗ ಒಂದು ಅತ್ಯಂತ ಸ್ವಾರಸ್ಯಕರವಾಗಿದೆ. "ನನ್ನ ಮಿತ್ರೊಬ್ಬರು ಹರಟೆ ಹೊಡೆಯುತ್ತಾ ಹೀಗೆ ಹೇಳುತ್ತಿದ್ದರು. ಭಜಿ ತಿನ್ನೋ ಬಾಯಿ ಚಪಲ ವಯಸ್ಸಾದಂಗಾದಂಗೆ ಹೆಚ್ಚು ಆಗ್ತದೆ ಅಂತ ಅನಸ್ತದೆ. ನಮ್ಮೂರಿಂದ "ಪೆನ್ಷನರ್ಸ್ ಪೆರೆಡಾಯಿಜಿ" ರಿಟಾಯರ್ಡ ಆದ ಮಂದಿಗೆ ಸ್ಟೇಷನ್ನಿಗೆ ಹೋಗೋದು ಅಂದ್ರೆ ಒಂದು ವಿಶೇಷ ಆಕರ್ಷಣೆ. ಸ್ಟೇಷನ್ ಸುತ್ತ ಮುತ್ತ ಇರೋ ರಿಟಾಯರ್ಡ ಜನರು ಸಾಯಂಕಾಲ ವಾಕಿಂಗ್ ಮಾಡಿಕೋತ ಸ್ಟೇಷನ್‌ಗೆ ಬಂದು ಅಲ್ಲಿ ರಾಜಕಾರಣ ಊರ ಸುದ್ದಿಯಲ್ಲಾ ಮಾತಾಡಿಕೋತ ಕೂಡೋದು ನಿತ್ಯದ ರೂಢಿ.

ಮನೆಯಿಂದ ಹೊರಟವರು ಸೀದಾ ಸ್ಟೇಷನದ ಹತ್ತಿರದ ಭಟ್ಟನ ಹೋಟೆಲಿಗೆ ಹಾಜರ. ಯಾಕಂದ್ರೆ ಅದ ವ್ಯಾಳ್ಯಾಕ ಭಟ್ಟ ಬಿಸಿಬಿಸಿ ಬುರುಬುರಿ ಕರಿತಾರ. ಅತ್ಲಾಗ ಇತ್ಲಾಗ ನೋಡಿ ಸೀದಾ ಒಳಗೆ ಹೋಗಿ ತಮ್ಮ ಖಾಯಂ ಟೇಬಲ್ಲಿಗೆ ಕೂತು ಟೊಪಗಿ ಇನ್ನೊಂದು ಕುರ್ಚಿ ಮ್ಯಾಲೆ ಇಟ್ಟು, ಬಡಗಿ ಮೂಲಿಗೆ ಆನಸಿ ಬಂದ ನಿಂತ ಮಾಣಿಗೆ ಒಂದ ಪ್ಲೇಟ ಭಜಿ ತರಲು ಆರ್ಡರ್ ಮಾಡುವರು. ಅದು ಬರುವವರೆಗೆ ತಮ್ಮ ಮುಂದಿನ ಟೇಬಲ್ಲಿಗೆ ಕೂತುಕೊಂಡ ಇನ್ನೊಬ್ಬ ಗಿರಾಕಿ ಭಜಿ ಅಗಿಯೋದನ್ನು ನೋಡಕೋತ ಕೂಡುವರು. ಯಾವಾಗ ತಮ್ಮ ಭಜಿ ಬಂದಾವೋ ಯಾವಾಗ ಅಗಿದೇನೋ ಅನ್ನೋ ಬಾಯಿ ಚಪಲ. ಅಷ್ಟರಲ್ಲಿ ಮಾಣಿ ತಂದಿಟ್ಟ ಪ್ಲೇಟನ್ಯಾಗಿನ ಒಂದೊಂದೆ ಭಜಿಗೆ ಚಟ್ನಿ ಅದ್ದಿಕೊಂಡು ರುಚಿಮಾಡಿಕೊಂಡು ತಿಂದು ಒಂದ ಕಪ್ ಚಹಾ ಹೀರಿ ಬಾಯಿ ಒರಸಿಕೊಂಡು ಸ್ಟೇಶನಿಗೆ ಬಂದು ಹರಟೆಗೆ ಸಜ್ಜ ಆಗ್ತಾರೆ" (ಸಬಿಹಾ (ಸಂ.), ೧೯೯೯, ಪುಟ ೧೨೪). ಪ್ರಬಂಧದಲ್ಲಿನ ಈ ವಿವರಣೆಯು ಭಜಿ ತಿನ್ನುವ ಜಿಹ್ವಾ ಚಾಪಲ್ಯವನ್ನು ವಿನೋದಪೂರ್ಣವಾಗಿ ಕಟ್ಟಿಕೊಡುತ್ತದೆ.

ವಿ. ಸೀತಾರಾಮಯ್ಯನವರ 'ದೋಸೆ' ಎಂಬ ಲಲಿತಪ್ರಬಂಧವು ದೋಸೆಯ ವಿವಿಧ ಪ್ರಭೇದಗಳನ್ನು ಲಲಿತವಾದ ಧಾಟಿಯಲ್ಲಿ ಪರಿಚಯಿಸುತ್ತದೆ. ಇಲ್ಲಿ ಊಟದ ಹೋಟೆಲು, ಕಾಫಿ ಹೋಟೆಲು ಎಂಬುದನ್ನು ಹೆಸರಿಸಿದ್ದಾರೆ. ಹಾಗೆಯೇ ರೆಸ್ಟೋರೆಂಟ್, ಆ ಭವನ ಈ ಭವನ, ಕ್ಯಾಂಟೀನ್, ಕೆಫೆ, ಲಂಚ್ ಹೋಂ, ಕೆಬಿನ, ನಾನಾ ವಿಲಾಸಗಳು ಮಂದಿರಗಳು ಇತ್ಯಾದಿಗಳನ್ನು ವಿನೋದದ ನೆಲೆಯಲ್ಲಿ ಪರಿಚಯಿಸಿದ್ದಾರೆ. ಮನೆಗಳಲ್ಲಿ ಮತ್ತು ಹೋಟೆಲುಗಳಲ್ಲಿ ಗ್ರಾಹಕರ ರುಚಿ-ಅಭಿರುಚಿಗಳಿಗೆ ತಕ್ಕಂತೆ ತಯಾರಿಸಲಾಗುವ ಬಗೆಬಗೆಯ ದೋಸೆಯ ಪ್ರಭೇದಗಳನ್ನು ಪ್ರಬಂಧಕಾರರು ಇಲ್ಲಿ ವಿವರಿಸಿದ್ದಾರೆ. ಮನೆಯಲ್ಲಿನ ಕಾಫಿ, ದೋಸೆ ಹೋಟೆಲಿನಲ್ಲಿ ತಯಾರಾಗುವ ಕಾಫಿ, ದೋಸೆಗಳಲ್ಲಿನ ರಸಾಸ್ವಾದದ ಭಿನ್ನತೆಯನ್ನು ಗುರುತಿಸಿದ್ದಾರೆ. ಸಾದಾದೋಸೆ, ತುಪ್ಪದ ದೋಸೆ, ಮಸಾಲಾದೋಸೆ ಇವುಗಳ ರುಚಿ ವಿಶೇಷತೆಯನ್ನು ಈ ಪ್ರಬಂಧವು ಮಾರ್ಮಿಕವಾಗಿ ವಿವರಿಸುತ್ತದೆ. ಕಾಳಮ್ಮನ ಗುಡಿ ಬೀದಿಯ ಎಡ್ವರ್ಡ್ ದೋಸೆ, ಪಬ್ಲಿಕ್ ಲೈಬ್ರರಿಯ ಹನುಮಂತ ರಾಯರ ದೋಸೆ, ಬಳಪೇಟೆಯ ನಾರಾಯಣಪ್ಪನವರ ಮೋಟರ್ ಟೈರ್ ದೋಸೆ, ಉಡುಪಿ ಹೋಟಲಿನ ಒಂದೂ ಕಾಲಾಣೆಯ ಮಸಾಲಾದೋಸೆ, ಕಂಚೀ ವಿಳಾಸದ ರಂಧ್ರೋಲ್ ದೋಸೆ, ಅಯ್ಯಂಗಾರ್ ಮಾರ್ಕೆಟ್ ಬಳಿಯ ದೋಸೆ, ಬೆಂಗಳೂರಿನ ಹೋಟೆಲಿನಲ್ಲಿ ತಯಾರಾಗುವ ದೋಸೆ ಎಂಬ ವಿವರಗಳು ಈ ಪ್ರಬಂಧದಲ್ಲಿ ಅಡಕಗೊಂಡಿವೆ. ಹೋಟೆಲುಗಳಲ್ಲಿನ ದೋಸೆಯ ಆಕಾರ, ಗಾತ್ರ, ರುಚಿ, ಹದ, ಪರಿಮಳಗಳಲ್ಲಿನ ವಿಶಿಷ್ಟತೆಯನ್ನು ಪ್ರಬಂಧಕಾರರು ಸ್ಪಷ್ಟಪಡಿಸಿದ್ದಾರೆ. ದಪ್ಪಜಾತಿಯವು, ತೆಳ್ಳನೆಯವು, ದಪ್ಪದವುಗಳಲ್ಲಿ ಮಕಮಲ್ಲಿನಂತೆ, ಮೈಸೂರು ಪಾಕಿನ ಬಿರುಕಿನಂತಿರುವ ದೋಸೆ ಹೋಟೆಲಿನಲ್ಲಿ ದೊರಕುವ ದೋಸೆಗಳ ಗುಣಲಕ್ಷಣಗಳನ್ನು ಈ ಪ್ರಬಂಧದಲ್ಲಿ ನಿರೂಪಿಸಿದ್ದಾರೆ.

ಪ್ರಭಾ ಅವರ 'ಇಡ್ಲಿ ಸಾರ್ ಇಡ್ಲಿ' ಎಂಬ ಲಲಿತಪ್ರಬಂಧವು ಲಘುಧಾಟಿಯಲ್ಲಿನ ಬರಹವಾಗಿದೆ. ಇಲ್ಲಿ ಪ್ರಬಂಧಕಾರರು ತಮ್ಮ ಗೆಳೆಯರ ಸಂಗಡ ಹೋಟೆಲು, ಸಿನಿಮಾ ಮಂದಿರ ಹಾಗೂ ವಾಯುವಿಹಾರಕ್ಕೆಂದು ತೆರಳುತ್ತಿದ್ದ ವಿವಿಧ ಪ್ರಸಂಗಗಳನ್ನು ಲಘುಧಾಟಿಯಲ್ಲಿ ವಿವರಿಸಿದ್ದಾರೆ. ಬಹುಪಾಲು ಹೋಟೆಲುಗಳಲ್ಲಿ ಮಾಣಿಯ ಕಾರ್ಯವೈಖರಿಯ ಬಗೆಗಳನ್ನು ಈ ಲಲಿತಪ್ರಬಂಧದಲ್ಲಿ ಪರಿಚಯಿಸಿದ್ದಾರೆ. ಹೋಟೆಲುಗಳ ಮಾಣಿ ಇಡ್ಲಿ ಸಾಂಬಾರ್ ಸರಬರಾಜು ಮಾಡುವ ಬಗೆ, ಗಿರಾಕಿಗಳು ಅವುಗಳನ್ನು ಅಗಿಯುವಲ್ಲಿನ ಮಾನಸಿಕ ಸ್ಥಿಮಿತತೆಯನ್ನು ಪರಿಚಯಿಸಿದ್ದಾರೆ. ಹೋಟೆಲುಗಳಲ್ಲಿನ ಇಡ್ಲಿ, ಸಾಂಬಾರ್, ಕೇಸರಿಬಾತ್ ಸೂಸುವ ರುಚಿ, ಸವಿ, ಸ್ವಾದ ಮುಂತಾದ ಕ್ರಿಯೆಗಳ ಕುರಿತಾದ ಮಾಹಿತಿಗಳಿವೆ. ಅಲ್ಲಿ ದೊರಕುವ ಕಾಫಿ, ಇಡ್ಲಿ, ಚಟ್ನಿ ಹಾಗೂ ಅವುಗಳಿಂದ ಆಹ್ಲಾದಕರ ವಾಸನೆ, ಆಕರ್ಷಣೆ ಗ್ರಾಹಕರಲ್ಲಿ ವ್ಯಕ್ತವಾಗುವ ಆನಂದದಾಯಕ ಪರಿಯು ಪ್ರಬಂಧದಲ್ಲಿ ಬೆಳವಣಿಗೆ ಕಂಡಿದೆ. ಹಾಗೆಯೇ ಇಡ್ಲಿ ಸೇವನೆಯಿಂದ ವಿವಿಧ ಪ್ರಕಾರದ ರೋಗಗಳು ದೂರವಾಗುವ ಒಳಸುಳಿವುಗಳಿವೆ. ಹೋಟೆಲುಗಳಲ್ಲಿನ ಇಡ್ಲಿಗಿಂತ ರುಚಿಕರವಾದ ಸಾಂಬಾರ್ ಸಿಗುವ ನಿದರ್ಶನಗಳು ಚಿತ್ರಿತವಾಗಿವೆ. ಹೋಟೆಲುಗಳಲ್ಲಿ ತಯಾರಾಗುವ ಇಡ್ಲಿಯ ವಿವಿಧ ಪ್ರಭೇದಗಳನ್ನೂ ಅವುಗಳ ಗುಣಲಕ್ಷಣಗಳನ್ನು ಬಾಯಲ್ಲಿ ನೀರೂರುವಂತೆ ನಿರೂಪಿಸಿದ್ದಾರೆ. ಬೆಂಗಳೂರು ಹೋಟೆಲುಗಳಲ್ಲಿನ ಇಡ್ಲಿಯಲ್ಲಿರುವ ಪ್ರೋಟೀನು, ವಿಟಮಿನ್, ಇವುಗಳ ಗುಣಸ್ವರೂಪದ ಮಾತುಗಳಿವೆ. ಇಡ್ಲಿಯ ಮಹತ್ವದ ಕುರಿತು ಮಾತನಾಡುವ ಮಂದಿಯನ್ನು ವಿಚಾರಗಳನ್ನು ಮಂಡಿಸುವ ಚಿಂತಕರೆಂದು ಪ್ರಬಂಧಕಾರರು ಕರೆದಿರುವುದು ಇಲ್ಲಿನ ವಿನೋದ ಪೂರ್ಣತೆಗೆ ಸಾಕ್ಷಿಯಾಗಿದೆ. ಇಡ್ಲಿ ತಯಾರಿಕಾ ವಿಧಾನ, ತೆಂಗಿನಕಾಯಿ ಚಟ್ನಿ, ಘಮಘಮಿಸುವ ಇಂಗಿನ ಒಗ್ಗರಣೆಯ ಸಾಂಬಾರಿನ ಮಹತ್ವ ಪ್ರಬಂಧದಲ್ಲಿ ಮೂಡಿಬಂದಿದೆ. ನಗರಪ್ರದೇಶದ ಬಹುಪಾಲು ಕುಟುಂಬಗಳು ಹೋಟೆಲಿನ ಇಡ್ಲಿ ಸಾಂಬಾರ್‌ಗೆ ದಾಸರಾಗಿರುವ ವಿವರಗಳನ್ನು ಈ ಬರಹ ಒಳಗೊಂಡಿದೆ.

ಎಂ. ಈರಪ್ಪ ಕಂಬಳಿ ಅವರ 'ಕೇಸರೀಬಾತ್ ಪುರಾಣ' ಎಂಬ ಲಲಿತಪ್ರಬಂಧವು ಹೋಟೆಲುಗಳಲ್ಲಿ ದೊರೆಯುವ ಕೇಸರಿಬಾತಿನ ಮಹಿಮೆಯನ್ನು ಸೊಗಸಾಗಿ ನಿರೂಪಿಸುತ್ತದೆ. ಚೋಟಾ ಕ್ಯಾಂಟೀನುಗಳಿಂದ ಪಂಚತಾರಾ ಹೋಟೆಲುಗಳ ಕೇಸರಿಬಾತ್ ರುಚಿಯ ಬಗೆಯನ್ನು ಪ್ರಬಂಧಕಾರರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಇದು ಉಡುಪಿಯ ಹೋಟೆಲುಗಳಿಂದ ನಾಡಿನ ವಿವಿಧ ಭಾಗಗಳಲ್ಲಿ ಪಸರಿಸಿದ ಪರಿಯು ಇಲ್ಲಿ ನಿರೂಪಿತವಾಗಿದೆ. ಬಹುಪಾಲು ಹೋಟೆಲು ಮತ್ತು ಕ್ಯಾಂಟೀನುಗಳಲ್ಲಿ ಗೋಡಂಬಿ, ದ್ರಾಕ್ಷಿಗಳನ್ನು ಬಳಸಿ ರುಚಿರುಚಿಯಾಗಿ ತಯಾರಿಸುವ ಕೇಸರಿಬಾತಿನ ವಿಶೇಷತೆಯನ್ನು ಇಲ್ಲಿ ವಿವರಿಸಲಾಗಿದೆ.

'ಮಸಾಲೆಗೆ ಹೋದ ಮಾನ' ಎಂಬುದು ಈರಪ್ಪ ಕಂಬಳಿಯವರ ಮತ್ತೊಂದು ಲಲಿತ ಪ್ರಬಂಧವಾಗಿದೆ. ಬರಹದ ಪ್ರಾರಂಭದಲ್ಲಿ ಸಾಮಾನ್ಯ ತಿಂಡಿ-ತಿನಿಸುಗಳ ಕುರಿತಾದ ವಿವರಣೆಗಳು ಕಂಡುಬರುತ್ತವೆ. ಆಧುನಿಕ ನಾಗರಿಕ ಜಗತ್ತಿನ ರುಚಿಸ್ವಾದಕರು ಹೋಟೆಲುಗಳಲ್ಲಿ ದೊರೆಯುವ ಬಗೆಬಗೆಯ ದೋಸೆ, ಉಪ್ಪಿಟ್ಟು, ಇಡ್ಲಿ ಮುಂತಾದವುಗಳಿಗೆ ನೀಡುವ ಪ್ರಾಮುಖ್ಯತೆಯು ಇಲ್ಲಿ ನಿರೂಪಿತವಾಗಿದೆ. ಗ್ರಾಹಕರ ಚಾಪಲ್ಯ ತಣಿಸಲು ಹೋಟೆಲು ಉದ್ಯಮದಾರರು ಹೊಸ ಹೊಸ ತಿಂಡಿ-ತಿನಿಸುಗಳನ್ನು ತಯಾರಿಸುವ ಪ್ರವೃತ್ತಿಯನ್ನು ಪ್ರಬಂಧಕಾರರು ಬಿಚ್ಚಿಡುತ್ತಾರೆ. ಹೋಟೆಲಿನ ಮಸಾಲೆದೋಸೆಯು ಗ್ರಾಮೀಣ ಪರಿಸರದಿಂದ ಬಂದ ವಿದ್ಯಾರ್ಥಿಗಳಿಗೆ ಶಾಪವಾಗಿ ಪರಿಣಮಿಸುವ ಸಂಗತಿಯು ಚಿತ್ರಿತವಾಗಿದೆ. ಗ್ರಾಮೀಣ ಜನರಲ್ಲಿ ಮನಸ್ತಾಪ, ವೈರಾಗ್ಯ ಬಂದಾಗ ಹೋಟೆಲಿನ ಮಸಾಲೆದೋಸೆಯಿಂದ ಮಾನಸಿಕ ಸ್ಥಿತಿಯು ಹೇಗೆ ಸಮತೋಲನಗೊಳ್ಳುತ್ತದೆ ಎಂಬುದನ್ನು ಪ್ರಬಂಧಕಾರರು ವಿನೋದಪೂರ್ಣವಾಗಿ ವಿವರಿಸುತ್ತಾರೆ. ಉಡುಪಿ ಹೋಟೆಲಿನವರು ದೋಸೆ ಎಂಬ ಉಪಾಹಾರ ಪದಾರ್ಥಕ್ಕೆ ಅಸ್ತಿತ್ವವನ್ನು ಹಾಕುವುದರ ಜೊತೆಗೆ ಅದರ ಪರಂಪರೆಯನ್ನು ಬೆಳೆಸಿದವರು. ನಂತರ ಸಾದಾದೋಸೆ, ಮಿಕ್ಸ್ ದಾಲ್, ಇನ್‌ಸ್ಟಂಟ್ ದೋಸೆ, ಪೋಹಾ ದೋಸೆ, ರವಾದೋಸೆ, ಮೈಸೂರು ಮಸಾಲಾದೋಸೆ, ನೀರುದೋಸೆ, ಈರುಳ್ಳಿದೋಸೆ, ಪೆಸರಟ್ಟು, ಬೆಣ್ಣೆದೋಸೆ, ಕ್ಯಾಬೇಜು ದೋಸೆ, ಸೌತೆಕಾಯಿ ದೋಸೆ, ಮೈದಾದೋಸೆ, ಚೀಸ್ ದೋಸೆ, ಎಣ್ಣೆಮುಕ್ತ ದೋಸೆ, ಸಸ್ಯಾಹಾರ ದೋಸೆ, ಮೊಟ್ಟೆದೋಸೆ ಮುಂತಾದವುಗಳ ಕುರಿತ ವಿವರಗಳಿವೆ. ಬೆಂಗಳೂರು ನಗರದಲ್ಲಿನ ಬೈಟು ಗ್ರಾಹಕರ ಬಗೆಗೆ ಅದೇ ರೀತಿ ಅವರಿಗೆ ಸಹಕರಿಸುವ ಹೋಟೆಲುಗಳ ಬಗೆಗೆ ಪ್ರಬಂಧಕಾರರು ಹಾಸ್ಯಪೂರ್ಣವಾಗಿ ಬರೆಯುತ್ತಾರೆ. ಎಂ.ಟಿ.ಆರ್. ಹೋಟೆಲು ತಯಾರಿಸುವ ದೋಸೆಗಳು ಜನಪ್ರಿಯತೆ ಪಡೆದ ರೀತಿಯನ್ನು ತಿಳಿಸಿದ್ದಾರೆ. ದೋಸೆ ಕ್ಯಾಂಪ್, ಪೋಲೀಸ್ ಸ್ಟೇಷನ್, ನ್ಯಾಯಾಲಯ, ವಿಧಾನಸೌಧದ ಚರ್ಚೆಯ ಪರಿಯನ್ನು ವಿವರಿಸಿದ್ದಾರೆ. ಹೋಟೆಲುಗಳಲ್ಲಿ ರವೆದೋಸೆ ತಯಾರಾಗುವ ಬಗೆಯನ್ನು ಅತ್ಯಂತ ವಿನೋದ ಪೂರ್ಣವಾಗಿ ಕಟ್ಟಿಕೊಡುತ್ತಾರೆ. ಪ್ರತಿನಿತ್ಯ ಹೋಟೆಲುಗಳಲ್ಲಿ ತಿಂಡಿ-ತಿನಿಸುಗಳು ತಯಾರಾಗುವ ವಿಧಾನ ಮತ್ತು ತಿಂಡಿ-ತಿನಿಸುಗಳನ್ನು ತಯಾರಿಸುವಲ್ಲಿ ಮನೆಗೂ ಹೋಟೆಲಿಗೂ ಇರುವ ವ್ಯತ್ಯಾಸ ಇತ್ಯಾದಿ ಸಂಗತಿಗಳೆಲ್ಲ ರಸವತ್ತಾಗಿ ಮೂಡಿಬಂದಿವೆ. ಮನೆ ದೋಸೆಗಿಂತ ಹೋಟೆಲಿನ ದೋಸೆ ರಂಗೇರುವ ಬಗೆ, ವಿಶಿಷ್ಟ ಪರಿಮಳ, ರುಚಿಕಟ್ಟು ಇವುಗಳ ಕುರಿತ ಮೆಚ್ಚುಗೆಯ ಮಾತುಗಳಿವೆ. ಹಾಗೆಯೇ ನಗರದ ಹೋಟೆಲೊಂದರಲ್ಲಿ ದೋಸೆ ತಯಾರಿಕೆಗಾಗಿ ನಡೆಯುವ ಪೂರ್ವಸಿದ್ಧತೆಯನ್ನು ಹೀಗೆ ವಿವರಿಸುತ್ತಾರೆ. "ಒಂದು ಮೂಲೆಯಲ್ಲಿ ತರಕಾರಿ ರಾಶಿಯಿತ್ತು. ಅಟ್ಟದ ಮೇಲೆ ಹೋಟೆಲು ಹುಡುಗರ ಬಟ್ಟೆ ಟ್ರಂಕುಗಳಿದ್ದವು. ಅದಕ್ಕಿಂತ ಮುಖ್ಯವೆಂದರೆ ಆ ಕೋಣೆಯ ಮಧ್ಯ ನೆಲದ ಮೇಲೆ ಬಿಳಿ ಬಟ್ಟೆಯ ಮೇಲೆ ಬೇಯಿಸಿ ಹಾಕಿದ್ದ ಆಲೂಗಡ್ಡೆ

ಗುಡ್ಡೆಯಿತ್ತು. ಇಬ್ಬರು ಬೆಂದ ಆಲೂಗಡ್ಡೆಯ ಸಿಪ್ಪೆ ಸುಲಿದು ಹಾಕುತ್ತಿದ್ದರು. ಇನ್ನಿಬ್ಬರು ಚಡ್ಡಿ ಹಾಕಿದ್ದ ಹುಡುಗರು ಅಟ್ಟದಿಂದ ಇಳಿಬಿದ್ದ ಹಗ್ಗ ಹಿಡಿದು ಜೋಲಿ ತಪ್ಪದಂತೆ ಬೆಂದ ಆಲೂಗಡ್ಡೆಗಳನ್ನು ಒಂದೇ ಸಮಾ ಕಚಪಚ ತುಳಿತುಳಿದು ರಾಸು ಮಾಡುತ್ತಿದ್ದರು. (ಈರಪ್ಪ ಕಂಬಳಿ ಎಂ., ೨೦೦೩, ಪುಟ ೧೨೩). ಹೀಗೆ ಹೋಟೆಲು ತಿಂಡಿ-ತಿನಿಸುಗಳ ರುಚಿಯ ಹಿಂದಿರುವ ವಾಸ್ತವ ಸಂಗತಿಯನ್ನು ಪ್ರಬಂಧಕಾರರು ಬಿಚ್ಚಿಡುತ್ತಾರೆ. ನಗರಪ್ರದೇಶದ ಹೋಟೆಲುಗಳಲ್ಲಿನ ಮಸಾಲೆದೋಸೆ ಮಧ್ಯಮವರ್ಗದವರ ಮನಸ್ಸಿನಲ್ಲಿ ನೆಲೆ ನಿಂತ ಬಗೆಯು ಸಹ ಈ ಪ್ರಬಂಧದಲ್ಲಿದೆ.

ಕೃಷ್ಣಾನಂದ ಕಾಮತ್ ಅವರ 'ಚಾಚೂ ತಪ್ಪದೆ ಸವಿಯುವ ಚಹಾ' ಎಂಬುದು ಪ್ರವಾಸಾನುಭವವನ್ನು ಆಧರಿಸಿ ಬರೆದ ಒಂದು ಲಲಿತಪ್ರಬಂಧವಾಗಿದೆ. ಹೋಟೆಲಿನಲ್ಲಿ ಚಹಾ ತಯಾರಿಸುವಾಗಿನ ವಿವಿಧ ಭಂಗಿಗಳು, ಗ್ರಾಹಕರು ಚಹಾ ಸವಿದು ಪಡುವ ಸಂತೋಷ ಇತ್ಯಾದಿ ಸಂಗತಿಗಳು ಈ ಪ್ರಬಂಧದಲ್ಲಿ ವಿನೋದಪೂರ್ಣವಾಗಿ ಮೂಡಿಬಂದಿವೆ. ಹಾಗೆಯೇ ಹೋಟೆಲಿನಲ್ಲಿ ಚಹಾ ಪಡೆದುಕೊಂಡ ಸ್ಥಾನಮಾನದ ಕುರಿತು ಲೇಖಕರು ವಿವರಿಸುತ್ತಾರೆ. ಸಾಮಾನ್ಯ ಗ್ರಾಹಕನನ್ನು ಚಹಾದ ಮೂಲಕ 'ಹೋಟೆಲು' ಆಕರ್ಷಣೆಗೊಳಪಡಿಸುವ ಬಗೆಯು ಇಲ್ಲಿ ಚಿತ್ರಿಣಗೊಂಡಿದೆ. ಹೋಟೆಲಿಲ್ಲದ ಸ್ಥಳಗಳಲ್ಲಿಯೂ ಚಹಾ ಪಾನೀಯದ ವಿಶಿಷ್ಟ ಪರಂಪರೆ ಜನಸಾಮಾನ್ಯರಲ್ಲಿ ನೆಲೆ ನಿಂತ ಪರಿಯು ಇಲ್ಲಿ ನಿರೂಪಿತವಾಗಿದೆ. ಚಹಾದ ಅಸ್ತಿತ್ವವು ಹೋಟೆಲು, ಕ್ಯಾಂಟೀನ್, ಶೆಟ್, ಪುತುಸೆಟ್, ಬಾಬ್‌ಸೆಟ್, ವಿಟುಸೆಟ್ ಮುಂತಾದವುಗಳಿಂದ ಮತ್ತಷ್ಟು ಗಟ್ಟಿಗೊಂಡಿದೆ. ಕಾಂಗೋ ಟೀ, ಕೇರಳ ಟೀ, ಕಣ್ಣನ್ ದೇವನ್ ಟೀ, ಕರೆಂಟ್ ಇವುಗಳ ಸಹಕಾರದಿಂದ ಚಹವು ಹೋಟೆಲುಗಳಲ್ಲಿ ಜನಪ್ರಿಯತೆ ಪಡೆದುದನ್ನು ಪ್ರಬಂಧಕಾರರು ವಿವರಿಸುತ್ತಾರೆ. ರಾಜಸ್ಥಾನ ಚಾದಂಗಡಿ, ಪಂಜಾಬಿ ಡಾಬಾಗಳಲ್ಲಿನ ಚಹವು ಗ್ರಾಹಕರ ಮನಸ್ಸನ್ನು ತೃಪ್ತಿ ಪಡಿಸುವ ಬಗೆಯನ್ನೂ ಇಲ್ಲಿ ವಿವರಿಸಲಾಗಿದೆ. ರೋಮ್ ನಗರದ ಸ್ವಸಹಾಯ ಪದ್ಧತಿಯ ಹೋಟೆಲನ್ನು ಹೆಸರಿಸಿದ್ದಾರೆ. ಅಲ್ಲಿ ತಿಂಡಿ-ತೀರ್ಥಗಳ ಜೊತೆಗೆ ವಿವಿಧ ಚಹಾ ತಯಾರಿಕಾ ಕ್ರಮದ ಕುರಿತ ನಿರೂಪಣೆಯಿದೆ.

ಇದೇ ಪ್ರಬಂಧಕಾರರ 'ನಾ ಕಂಡ ಬೆಂಗಳೂರು' ಎಂಬುದು ಪ್ರವಾಸಾನುಭವವನ್ನಾಧರಿಸಿದ ಇನ್ನೊಂದು ಲಲಿತಪ್ರಬಂಧವಾಗಿದೆ. ಪ್ರಬಂಧಕಾರರು ಬೆಂಗಳೂರು ನಗರವನ್ನು ಸುತ್ತಾಡಿದ ಸಂದರ್ಭದಲ್ಲಿ ವಿವಿಧ ಹೋಟೆಲುಗಳಿಗೆ ಭೇಟಿ ಕೊಟ್ಟು ಪಡೆದ ಅನುಭವವನ್ನು ಲಲಿತವು ಸುಂದರವಾದ ಧಾಟಿಯಲ್ಲಿ ಬಿಚ್ಚಿಟ್ಟಿದ್ದಾರೆ. ಬ್ರಾಹ್ಮಣರ ಕಾಫಿ ಅಂಗಡಿ, ಬ್ರಾಹ್ಮಣರ ರೊಟ್ಟಿ ಅಂಗಡಿ ಮೊದಲಾದವುಗಳನ್ನು ಇಲ್ಲಿ ಹೆಸರಿಸಿದ್ದಾರೆ. ಇಲ್ಲಿನ ತಿಂಡಿ ತಿನಿಸುಗಳು ಜೋಳದ ರೊಟ್ಟಿ, ಬ್ರೆಡ್, ಬಿಸ್ಕೀಟು, ಮಸಾಲೆ ಹಾಲು, ಬಾದಾಮಿ ಹಾಲು, ಆರೆಂಜ್, ಕೋಕಾ ಕೋಲಾ ಮೊದಲಾದವುಗಳನ್ನು ಪ್ರಬಂಧದಲ್ಲಿ ಹೆಸರಿಸಿದ್ದಾರೆ. ರಸ್ತೆ ಬದಿಯ ಅಂಗಡಿಯಲ್ಲಿ ಕಡಿಮೆ

ಬೆಲೆಗೆ ಸಿಗುವ ಚಕ್ಕಲಿ, ಕೋಡುಬಳೆ, ವಡೆ, ಬೋಂಡಾ ಗೋಡಂಬಿಗಳಂತಹ ತಿನಿಸುಗಳು ಇಲ್ಲಿ ಪ್ರಸ್ತಾಪಿತವಾಗಿವೆ. ಕೇಸರಿಬಾತ್, ಚೌಚೌಬಾತ್, ಒಂದೇ ತಿನಿಸಿಗೆ ವಿವಿಧ ಅರ್ಥ ಕಲ್ಪಿಸಿರುವುದನ್ನು ಇಲ್ಲಿ ಚಿತ್ರಿಸಿದ್ದಾರೆ. ಫುಲ್‌ಮೀಲ್ಸ್, ಪ್ಲೇಟ್‌ಮೀಲ್ಸ್, ಸ್ಪೆಷಲ್ ಊಟ ಹಾಗೂ ಹೋಟೆಲು ಮಾಣಿಯ ಅವಲಂಬಿಕೆಯು ಈ ಪ್ರಬಂಧದಲ್ಲಿ ಚಿತ್ರಣಗೊಂಡಿದೆ.

ಇದೇ ಲೇಖಕರ 'ಬೆಂಗಳೂರಿನ ಅನುಭವಗಳು' ಎಂಬ ಪ್ರವಾಸಾನುಭವವನ್ನಾಧರಿಸಿದ ಲಲಿತಪ್ರಬಂಧದಲ್ಲಿ ಬೆಂಗಳೂರು ನಗರದ ವಸತಿಗೃಹಗಳ ಸ್ಥಿತಿಗತಿಗಳನ್ನು ಚಿತ್ರಿಸಲಾಗಿದೆ. ಬೆಂಗಳೂರಿನ ಅಮರ್ ಹೋಟೆಲಿನ ಬಗ್ಗೆ ಬರೆಯುತ್ತಾ ಗ್ರಾಹಕರನ್ನು ಸೆಳೆಯಲು ಹೋಟೆಲಿನವರು ಆಟೋರಿಕ್ಷಾದವರೊಂದಿಗೆ ಮಾಡಿಕೊಂಡ ಒಳ ಒಪ್ಪಂದದ ವಿವರಗಳನ್ನು ಲೇಖಕರು ಕಟ್ಟಿಕೊಟ್ಟಿದ್ದಾರೆ. ಮಹಾಂತೇಶ ಟಿಫಿನ್ ರೂಮ್ಸ್, ಎಂ.ಟಿ.ಆರ್.ನಂತಹ ಹೋಟೆಲುಗಳು ಗ್ರಾಮೀಣರಿಗೆ ತಿಂಡಿ-ತೀರ್ಥಗಳ ಜೊತೆಗೆ ವಿಶ್ರಾಂತಿಯನ್ನು ಪಡೆಯಲು ಸ್ಥಳ ಒದಗಿಸುತ್ತವೆ. ಉದ್ಯೋಗಸ್ಥರು ಮತ್ತು ಸಣ್ಣಪುಟ್ಟ ವ್ಯಾಪಾರಗಳಿಗೆ ಎಂ.ಟಿ.ಆರ್. ಹೋಟೆಲು ಮಾತುಕತೆಗೆ ಪ್ರಮುಖ ಕೇಂದ್ರವಾಗಿರುವುದನ್ನು ಇಲ್ಲಿ ಚಿತ್ರಿಸಿದ್ದಾರೆ. ಕೇಸರಿಬಾತ್, ಪೊಂಗಲ್, ಪಕೋಡಾ, ವಾಂಗಿಬಾತ್ ಹೀಗೆ ಹಲವು ತಿನಿಸುಗಳನ್ನು ಎಂ.ಟಿ.ಆರ್. ಉಣಬಡಿಸುತ್ತದೆ. ಹೋಟೆಲುಗಳಿಗೆ ಗ್ರಾಹಕರು ಮತ್ತು ಹೋಟೆಲು ಮಾಣಿಗಳು ಬಳಸುವ ಬಹುಭಾಷಾ ಶೈಲಿಯನ್ನು ಪ್ರಬಂಧಕಾರರು ಮನೋಜ್ಞವಾಗಿ ವಿವರಿಸುತ್ತಾರೆ.

ಸ.ಜ. ನಾಗಲೋಟಿಮಠ ಅವರ 'ಖಾನಾವಳಿ ಗಂಗಪ್ಪ' ಎಂಬ ಲಲಿತಪ್ರಬಂಧದಲ್ಲಿ ಲೇಖಕರ ಕಾಲೇಜುದಿನಗಳ ಅನುಭವಗಳ ಕಲಾತ್ಮಕ ಅಭಿವ್ಯಕ್ತಿ ಇದೆ. ಉತ್ತಮ ವಿದ್ಯಾರ್ಥಿಗಳ ಉತ್ಪಾದನೆಗೆ ವಿದ್ಯಾಸಂಸ್ಥೆ, ಬೋಧಕವರ್ಗದಂತೆ ಗಂಗಪ್ಪನ ಊಟದ ಮನೆಯು ಹೇಗೆ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ಬರಹಗಾರರು ತಿಳಿಸುತ್ತಾರೆ. ಗಂಗಪ್ಪನ ಊಟದ ಮನೆಯ ಸಲಕರಣೆಗಳು ಅಲ್ಲಿ ದೊರೆಯುವ ಆಹಾರಗಳ ವೈವಿಧ್ಯ ಹಾಗೂ ಆಹಾರಪದಾರ್ಥಗಳನ್ನು ಬಡಿಸುವ ಪರಿ ಇತ್ಯಾದಿಗಳ ಬಗೆಗೆ ಬರಹಗಾರರ ಅನಿಸಿಕೆಗಳು ಹೀಗಿವೆ. "ಊಟದ ಮನೆಯಲ್ಲಿ ಉತ್ತಮ ಸಲಕರಣೆಗಳು ಇಲ್ಲವಾದರೂ ಸಹ ರುಚಿಕಟ್ಟಾದ ಆಹಾರವು ವಿದ್ಯಾರ್ಥಿಗಳಲ್ಲಿ ಸ್ಮರಣೀಯ ವಾದದ್ದಾಗಿದೆ. ಊಟಕ್ಕೆ ಕುಳಿತರೆ ಮೊದಲು ದೊಡ್ಡ ಸ್ಟೇನ್‌ಲೆಸ್ ಸ್ಟೀಲಿನ ತಟ್ಟೆ ಬರುತಿತ್ತು. ಅದರೊಡನೆ ಎರಡು ಸಣ್ಣ ಬಟ್ಟಲು ಹಾಗೂ ಒಂದು ನೀರಿನ ವಾಟೆ ಒಂದು ಬಟ್ಟಲಿನ ತುಂಬ ಮೊಸರು, ಇನ್ನೊಂದರಲ್ಲಿ ಘಮಘಮಿಸುವ ಸಾರು ತಟ್ಟೆಯಲ್ಲಿ ಉಪ್ಪು, ನಿಂಬೆಹಣ್ಣಿನ ತುಂಡು, ಉಳ್ಳಾಗಡ್ಡಿಯ ತುಣುಕು, ಒಂದು ತರಹದ ಚಟ್ನಿಪುಡಿ, ಸಾಲಾಗಿ ತಾಟಿನ ದಂಡೆಗುಂಟ ಕುಳಿತಿರುತ್ತಿದ್ದವು. ಅನಂತರ ಒಂದು ಕಾಳಿನ ಪಲ್ಯ ಇನ್ನೊಂದು ತರಕಾರಿ ಇವೆಲ್ಲವನ್ನು ನೋಡುತ್ತಾ ಕೂಡುವುದು ಆಗುತ್ತಿರಲಿಲ್ಲ. ಅಷ್ಟು ಆಸೆ ಆಗುತ್ತಿತ್ತು. ಅಷ್ಟರಲ್ಲಿ ಬಿಸಿಬಿಸಿ ಚಪಾತಿ ಬರುತ್ತಿದ್ದವು"(ನಾಗಲೋಟಿಮಠ ಸ.ಜ., ೨೦೦೦, ಪುಟ ೩೩-೩೪). ಹೀಗೆ ಗಂಗಪ್ಪನ ಗುಣ

ಸ್ವಭಾವ, ಊಟದ ಗುಣವಿಶೇಷತೆಯನ್ನು ಈ ಬರಹದಲ್ಲಿ ಪ್ರತಿಬಿಂಬಿಸುತ್ತಾರೆ. ಊಟದ ಜೊತೆಗೆ ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯ, ಆರೋಗ್ಯದ ಸಂಗತಿ, ತಾತ್ವಿಕತೆ, ಸನ್ನಡತೆ ಮುಂತಾದವುಗಳನ್ನು ಗಂಗಪ್ಪನು ಉಣಬಡಿಸುತ್ತಿದ್ದ ಪರಿಯನ್ನೇ ಲೇಖಕರು ಆತ್ಮೀಯವಾಗಿ ಹೇಳಿಕೊಂಡಿದ್ದಾರೆ. ಗಂಗಪ್ಪನು ತಿಂಗಳಿಗೊಮ್ಮೆ ಕೊಡುತ್ತಿದ್ದ ಸಿಹಿ ಊಟವನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದವರಿಗೆ ಬಹುಮಾನ ನೀಡುವ ಪರಿಪಾಟವನ್ನು ಆತ ರೂಪಿಸಿಕೊಂಡಿದ್ದನೆಂದು ಪ್ರಬಂಧಕಾರರು ಉಲ್ಲೇಖಿಸುತ್ತಾರೆ. ಖಾನಾವಳಿ ಕಾಯಕದಲ್ಲಿ ಗಂಗಪ್ಪ ತೋರುತ್ತಿದ್ದ ನಿಷ್ಠೆ ಪ್ರಾಮಾಣಿಕತೆ ಹಾಗೂ ಸೇವಾತತ್ಪರತೆ ಬಗೆಗೆ ಪ್ರಬಂಧಕಾರರು ಹೀಗೆ ಬರೆಯುತ್ತಾರೆ. "ಒಬ್ಬ ಹುಡುಗ ಒಂದು ಸಲ ಉಣ್ಣುವುದನ್ನು ಬಿಟ್ಟರೆ ತನಗೆ ಶಾಪ ತಗಲೀತು" ಎನ್ನುವ ಗಂಗಪ್ಪನಲ್ಲಿ ಇಂದಿನ ಹೋಟಲಿನವರು ಸಿಕ್ಕಾಪಟ್ಟೆ ಹಣ ತೆಗೆದುಕೊಂಡು ಸೋಡಾ ಮಿಶ್ರಿತ ಅನ್ನ, ಕಲಬೆರಕೆ ಗೋಧಿಹಿಟ್ಟಿನ ಚಪಾತಿ, ಕಲುಶಿತ ಮೊಸರು, ನೀರಿನಂತಿರುವ ಸಾಂಬಾರು ಮುಂತಾದವುಗಳನ್ನು ನೆನಪಿಸಿಕೊಂಡರೆ ಗಂಗಪ್ಪನಂಥವರು ನಿಜವಾಗಿ ಬದುಕಿದ್ದಾರೋ ಅನಿಸುತ್ತದೆ(ಅದೇ, ಪುಟ ೩೭). ಖಾನಾವಳಿಯನ್ನು ಒಂದು ಉದ್ಯಮವೆಂದು ಭಾವಿಸದೆ ಕಾಯಕವೆಂದು ಭಾವಿಸಿದ್ದ ಗಂಗಪ್ಪನ ಉದಾತ್ತ ವ್ಯಕ್ತಿತ್ವವನ್ನು ಪ್ರಬಂಧಕಾರರು ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ಕೆ.ಎಸ್. ಭಗವಾನ್ ಅವರ 'ಪ್ರವಾಸದ ಪ್ರಯಾಸಗಳು' ಎಂಬ ಲಲಿತಪ್ರಬಂಧದಲ್ಲಿ ಹೋಟೆಲುಗಳಲ್ಲಿ ಕಂಡುಂಡ ಅನುಭವಗಳ ಕಥನವಿದೆ. ವಿದೇಶದ ತಾಂತ್ರಿಕ ಸಂಸ್ಥೆಗಳು ಮತ್ತು ಹೋಟೆಲುಗಳ ಅವಿನಾಭಾವ ಸಂಬಂಧದ ಕುರಿತಾದ ವಿವರಗಳಿವೆ. ಲಂಡನ್ನಿನ ಪೆಂಟಾದ ಹೋಟೆಲು ಹಾಗೂ ಸೌಂಥಾರಿಪ್ಟನ್ ಪಾರ್ಕ್ ಹೋಟೆಲುಗಳ ವಾಸ್ತವ್ಯದ ಬಗೆಗೆ ವಿವರಗಳಿವೆ. ಸಂಸ್ಥೆಯ ವ್ಯವಸ್ಥಾಪಕರು ಇಟಾಲಿಯನ್ ರೆಸ್ಟೋರೆಂಟ್‌ಗಳಲ್ಲಿ ಸಸ್ಯಾಹಾರಿ ತಿಂಡಿ-ತಿನಿಸುಗಳನ್ನು ಸೇವಿಸುವ ಸನ್ನಿವೇಶಗಳು ಪ್ರಬಂಧದಲ್ಲಿ ಚಿತ್ರಿತವಾಗಿದೆ. ವಸತಿಸಹಿತ ಹೋಟೆಲು ಸ್ವಾಗತಗಾರರು ತಮ್ಮಲ್ಲಿ ಸಿಕ್ಕುವ ಅವಕಾಶಗಳ ಬಗ್ಗೆ ವಿವರಿಸುವ ಕ್ರಮವು ಇಲ್ಲಿದೆ. ವಿದೇಶಿಯ ಹೋಟೆಲು ಮಾಲೀಕರು ಹಣ ಸಂಪಾದಿಸುವ ಸಂಗತಿಗಳ ಅನುಭವವು ಇಲ್ಲಿ ಮೂಡಿಬಂದಿವೆ. ಉಪ್ಪು, ಹುಳಿ, ಕಾರ ಹೊಂದಿದ್ದರೂ ಸಹ ದೇಶೀಯ ಹೋಟೆಲು ಕೊಡುವ ರುಚಿ ಸ್ವಾದ ಅಲ್ಲಿ ಸಿಗುವುದಿಲ್ಲ ಎಂದು ಪ್ರಬಂಧಕಾರರು ಪ್ರವಾಸದ ಸಂದರ್ಭದಲ್ಲಿನ ದೇಶ ವಿದೇಶಗಳ ಹೋಟೆಲುಗಳ ಗುಣಸ್ವಭಾವಗಳನ್ನು ಚಿತ್ರಿಸಿದ್ದಾರೆ.

ಎಸ್.ಎನ್. ಶಾಂತಲಾ ಅವರ 'ಪ್ರವಾಸೋದ್ಯಮ' ಎಂಬ ಬರಹವು ಲಲಿತಪ್ರಬಂಧ ಅಲ್ಲ ದಿದ್ದರೂ ಒಂದು ಜನಪ್ರಿಯ ಪ್ರಬಂಧವಾಗಿ ಪ್ರವಾಸೋದ್ಯಮದಲ್ಲಿ ಹೋಟೆಲಿಗೆ ಇರುವ ಸ್ಥಾನ ವೇನೆಂಬುದನ್ನು ವಿವರಿಸುತ್ತದೆ. ಲೇಖಕರ ಮಾತುಗಳ ಮೂಲಕವೇ ಇದನ್ನು ಗಮನಿಸಬಹುದಾಗಿದೆ. "ಪ್ರವಾಸಿ ಆಕರ್ಷಣೆ ಸ್ಥಳಗಳಲ್ಲಿ ದೊಡ್ಡದಾದ ಸುಸಜ್ಜಿತ ತಾರಾ ಹೋಟೆಲುಗಳನ್ನು

ಪ್ರವಾಸಿಗಳಿಗೆಂದೇ ನಿರ್ಮಿಸಲಾಗುತ್ತದೆ. ನಿರ್ಮಾಣದಿಂದ ಹಿಡಿದು ಹೋಟೆಲು ನಡೆಸುವವರಿಗೆ ಅದು ದೊರಕಿಸಿ ಕೊಡುವ ಉದ್ಯೋಗಾವಕಾಶಗಳು ಸ್ವಲ್ಪವಲ್ಲ. ಈ ಹೋಟೆಲುಗಳಲ್ಲಿ ಬರಿಯ ತಂಗುದಾಣದ ವ್ಯವಸ್ಥೆಯೇ ಅಲ್ಲದೇ ಊಟೋಪಚಾರಗಳ ವ್ಯವಸ್ಥೆ ಇರುತ್ತದೆ. ಈ ಕಾಲದಲ್ಲಿ ಊಟದ ವಿವಿಧ ಶೈಲಿಗಳು ಉದಾಹರಣೆಗೆ ಚೈನೀಸ್ ಫುಡ್, ನಾರ್ಥ್ ಇಂಡಿಯನ್ ಸ್ಟೈಲ್ ಮೊದಲಾದವು ಹಾಸುಹೊಕ್ಕಾಗಿವೆ. ವಿವಿಧ ತಿಂಡಿ–ತಿನಿಸುಗಳ ತಯಾರಿಕೆ ಅಗತ್ಯವಿದ್ದು, ಹಾಗೆ ಅವನ್ನು ತಯಾರಿಸಬಲ್ಲ ಜನರು ಬೇಕಾಗುವರು. ಈಚೆಗೆ ಹೋಟೆಲು ಮ್ಯಾನೇಜ್‌ಮೆಂಟ್ ಎಂಬ ವಿಷಯದಲ್ಲಿ ಡಿಪ್ಲೊಮಾ ಡಿಗ್ರಿಗಳನ್ನು ನೀಡುವ ವಿಶ್ವವಿದ್ಯಾಲಯಗಳಿವೆ. ಇವು ಹೋಟೆಲು ಉದ್ಯಮಕ್ಕೆ ತನ್ಮೂಲಕ ಪ್ರವಾಸೋದ್ಯಮಕ್ಕೆ ಪೂರಕವಾಗಿವೆ"(ಶಾಂತಲಾ ಎಸ್.ಎನ್., ೧೯೯೨, ಪುಟ ೧೮೫, ೧೮೬). ಹೀಗೆ ಪ್ರವಾಸೋದ್ಯಮದಲ್ಲಿ ಹೋಟೆಲು ನಿರ್ವಹಿಸುವ ಪಾತ್ರವನ್ನು ಪ್ರಬಂಧವು ವಿವರಿಸುತ್ತದೆ.

ಹೋಟೆಲಿನ ಪ್ರತಿನಿಧೀಕರಣದ ದೃಷ್ಟಿಯಿಂದ ಗಮನ ಸೆಳೆಯುವ ಇನ್ನೊಂದು ಸಾಹಿತ್ಯ ಪ್ರಕಾರವೆಂದರೆ ಪ್ರವಾಸಕಥನ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಅಮೆರಿಕದಲ್ಲಿ ಗೊರೂರು' ಎಂಬ ಪ್ರವಾಸಕಥನದಲ್ಲಿ ಅಮೆರಿಕದ ಹೋಟೆಲುಗಳ ವಿವರಗಳಿವೆ. ಲೇಖಕರು ತಮ್ಮ ಪ್ರವಾಸದ ವೇಳೆಯಲ್ಲಿ ಭೇಟಿ ನೀಡಿದ ಭೋಜನಾಲಯ, ಹೋಟೆಲುಗಳ ಸ್ವರೂಪ, ಲಕ್ಷಣ, ಆಹಾರಪದ್ಧತಿಗಳ ಕುರಿತು ಅತ್ಯಂತ ವಿನೋದಪೂರ್ಣವಾಗಿ ಹೇಳಿಕೊಂಡಿದ್ದಾರೆ. ಗೊರೂರರ ಮಾತುಗಳ ಮೂಲಕವೇ ನಾವಿದನ್ನು ಗಮನಿಸಬಹುದಾಗಿದೆ. "ಕೆಲವು ಕಾಲ ನಾವು ಕಾರ್ಯಕ್ರಮವನ್ನು ವೀಕ್ಷಿಸಿದ ನಂತರ ಅಲ್ಲಿಯ ಪ್ರತಿನಿಧಿಗಳು ಭೋಜನಗೃಹಕ್ಕೆ ಕರೆದುಕೊಂಡು ಹೋದರು. ನಾನು, ನೀವು ಒಳಕ್ಕೆ ಹೋಗಿ ನಾನು ಬರುವುದಿಲ್ಲ. ನಾನು ಸಸ್ಯಾಹಾರಿ ಎಂದೆ. ಅವರು ಸಸ್ಯಾಹಾರಿಗಳಿಗೂ ಅಲ್ಲಿ ಸ್ಥಳವಿದೆ. ಹಣ್ಣಿನ ರಸವನ್ನು ಕುಡಿಯಿರಿ. ನೀವು ಈ ಭೋಜನ ಗೃಹವನ್ನು ನೋಡಬೇಕು ಎಂದರು. ಆದರೆ, ಭೋಜನಗೃಹದ ಬಾಗಿಲಿಗೆ ಹೋದಾಗ ಅಲ್ಲಿಯ ಕಾವಲುಗಾರ ನನ್ನೊಬ್ಬನನ್ನು ಒಳಕ್ಕೆ ಬಿಡಲಿಲ್ಲ. ಇಲ್ಲಿ ಒಂದು ಸಮವಸ್ತ್ರ ಧರಿಸಬೇಕು ಎಂದ. ಸದ್ಯ ಬಿಡುಗಡೆಯಾಯಿತೆಂದು ನಾನು ಸಮಾಧಾನ ತಳೆದೆ. ಆದರೆ ಆಫ್ರಿಕಾದ ಮಿತ್ರರು ಬಿಡಲಿಲ್ಲ. ಆ ಉದ್ದೇಶಕ್ಕಾಗಿ ಅಲ್ಲಿಯೇ ಒಳಗೆ ದೊರೆಯುತ್ತಿದ್ದ ಒಂದು 'ಜಾಕೆಟ್' ಒಂದನ್ನು ಬಾಡಿಗೆಗೆ ತಂದನು. ನಾನು ನನ್ನ ಪಂಚೆಯ ಮೇಲೆಯೇ ಅದನ್ನು ಧರಿಸಿ ಒಳಕ್ಕೆ ಹೋದೆ. ಅವರು ಬೇಕಾದಂತೆ ಊಟ ಮಾಡಿದರು. ನಾನು ಬರಿ ಒಂದು ಬಟ್ಟಲು ಕಿತ್ತಲೆ ರಸ ಕುಡಿದೆ. ಬರುವಾಗ ನನ್ನ ಜಾಕೆಟ್ಟನ್ನು ಹಿಂದಕ್ಕೆ ವಸೂಲ್ಮಾಡಿಕೊಂಡರು"(ಗೊರೂರು ರಾಮಸ್ವಾಮಿ ಅಯ್ಯಂಗಾರ್, ೨೦೦೬, ಪುಟ ೩೭, ೩೮). ಅಮೆರಿಕದ ಮಂಡಲ ಉಪಾಹಾರ ಮಂದಿರವು ಪ್ರಕೃತಿ ಸೊಬಗಿನೊಂದಿಗೆ ಹಲವು ಜಾಹೀರಾತುಗಳು ಬಿಂಬಿತವಾದದ್ದು ಪ್ರವಾಸ ಕಥನಕಾರರಿಗೆ

ಕಂಡದ್ದು ಹೀಗೆ. "ಬೆಟ್ಟದ ಬುಡದಲ್ಲಿ ಒಂದು ಸಾಧಾರಣವಾದ ಕೆರೆ. ಆ ಕೆರೆಯ ತೀರದಲ್ಲಿ ಒಂದು ಅಸಾಧ್ಯವಾದ ಅನೇಕ ಅಂತಸ್ತುಗಳ ಭವ್ಯ ಹೋಟೆಲು. ಆ ಹೋಟೆಲಿನ ಜರ್ಬು ಆ ಬೆಟ್ಟಕ್ಕಿಂತ ಅಧಿಕ. ಆದರೆ ಬೆಟ್ಟ ಪ್ರಕೃತಿನಿರ್ಮಿತ ಜಾಹೀರಾತಲ್ದೆ ಬೆಟ್ಟದ ಹೆಸರಿನಲ್ಲಿ ಸೌಕರ್ಯಗಳಲ್ಲಿ ಹೋಟೆಲಿನ ಹೆಸರಿನಲ್ಲಿ"(ಅದೇ, ಪುಟ ೭೦). ಬರಹಗಾರರು ಹೋಟೆಲಿನ ವ್ಯವಹಾರ ಅದರ ರಮ್ಯತೆಯನ್ನು ಮನತುಂಬಿ ವರ್ಣಿಸಿದ್ದಾರೆ.

"ಅಮೆರಿಕ, ಕೆನಡಾಗಳ ಹೋಟೆಲುಗಳ ಪದ್ಧತಿಯು ನಮಗೆ ವಿಚಿತ್ರವೆನಿಸುತ್ತದೆ. ಯಾವೆಲ್ಲಾ ಹೋಟೆಲಿನಲ್ಲಿಯೂ ತಯಾರಾದ ತಿಂಡಿಗಳನ್ನು ರಾಶಿರಾಶಿಯಾಗಿ ಗಾಜುಗಳ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ತುಂಬಿಡುತ್ತಾರೆ. ಸಾಧಾರಣವಾಗಿ ೩೦–೪೦ ಬಗೆಗಳಿರುತ್ತವೆ. ಎಲ್ಲವನ್ನೂ ಪ್ಲಾಸ್ಟಿಕ್ ಹರಿವಾಣದಲ್ಲಿ ತುಂಬಿರುತ್ತಾರೆ. ಕಟ್ಟಡಗಳಲ್ಲಿ ಬೇರಾದಂತೆ ಮೇಜುಗಳೋ ಕುರ್ಚಿಗಳೋ ಇರುತ್ತವೆ. ಗಿರಾಕಿಗಳು ಬಂದು ಒಂದೊಂದು ತಟ್ಟೆ ತೆಗೆದುಕೊಂಡು ತಮಗೆ ಬೇಕಾದ ಸಾಮಾನುಗಳನ್ನು ತಟ್ಟೆಗೆ ಹಾಕಿಕೊಳ್ಳುತ್ತಾ ಸರಸರನೆ ಮುಂದುವರಿಯಬೇಕು. ಅಮೆರಿಕದಲ್ಲಿ ಜನಸಂಖ್ಯೆ ಕಡಿಮೆ ಇರುವುದರಿಂದ ನಮ್ಮೆದುರಿಗೆ ಬಂದು ಹಗುರವಾಗಿ ನಗುತ್ತಾ ತಿಂಡಿಗಳ ಹೆಸರುಗಳನ್ನೆಲ್ಲಾ ಹೇಳಿ ಬಿಸಿಯಾದುದು ಏನಾದರೂ ಇದೆಯೇ? ಎಂದರೆ ಅದಕ್ಕೇನು ಸಕ್ರಿ ಇದೆ"(ಅದೇ ಪುಟ ೭೧). ವ್ಯವಸ್ಥಾಪಕ ಮಾತಿನ ಚಮತ್ಕಾರವನ್ನು ಲೇಖಕರಲ್ಲಿ ಬೆರಗನ್ನುಂಟುಮಾಡುತ್ತದೆ.

ಏರೋಪ್ಲೇನ್ ಹೋಟೆಲುಗಳು, ರೈಲ್ವೆ ಸ್ಟೇಷನ್ ಹೋಟೆಲುಗಳು, ಬಸ್ಟ್ಯಾಂಡ್ ಹೋಟೆಲುಗಳನ್ನು ಲೇಖಕರು ಹೆಸರಿಸಿದ್ದಾರೆ. ತಿಂಡಿ ಸಂಗ್ರಹಿಸಿಡುವ ಬಗೆ, ಗ್ರಾಹಕರು ಆ ಪದಾರ್ಥಗಳನ್ನು ತಮ್ಮದಾಗಿಸಿಕೊಳ್ಳುವ ರೀತಿ ಇವುಗಳನ್ನು ಲೇಖಕರು ವಿನೋದಾತ್ಮಕವಾಗಿ ಚಿತ್ರಿಸಿದ್ದಾರೆ. ವಿಮಾನ ನಿಲ್ದಾಣಗಳಲ್ಲಿನ ಹೋಟೆಲುಗಳಲ್ಲಿ ತಿಂಡಿ–ತಿನಿಸು ಮಹಿಳೆಯರಿಂದ ಸರಬರಾಜು ಮಾಡುವ ಬಗೆಯನ್ನು ಚಿತ್ರಿಸಿದ್ದಾರೆ. ಆ ಹೋಟೆಲಿನಲ್ಲಿ ದೊರಕುವ ಆಹಾರಪದಾರ್ಥವು ಹಲವು ರೀತಿಯ ಅನುಭವಗಳನ್ನು ಗೊರೂರರು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ನಯಾಗಾರದ ಎ೧ ಹೋಟೆಲಿನ ಉತ್ತಮ ಕೊಠಡಿ, ಕಾಫಿ, ಸ್ಪೆಷಲ್ ಕಾಫಿ, ವೈಭವಯುತವಾದ ಸೌಲಭ್ಯಗಳನ್ನು ಲೇಖಕರು ವರ್ಣಿಸಿದ್ದಾರೆ. ಹೋಟೆಲಿನ ಪ್ರತಿಯೊಂದು ಕೊಠಡಿಯಲ್ಲಿ ಬೈಬಲ್, ಕ್ರೈಸ್ತಮತ ಪ್ರಚಾರದ ಮಾಸಪತ್ರಿಕೆ ಪ್ರಚಾರದ ಮನೋಭೂಮಿಕೆಯು ಇಲ್ಲಿ ಇಂಬು ಪಡೆದುಕೊಂಡಿದೆ. ಅಲ್ಲಿ ಸಿಗುವ ಬಿಸಿಯಾದ ಸಾರು, ಅನ್ನ, ಪಲ್ಯದ ಊಟ, ಬಿಳಿಪಿನ ಹಾಸಿಗೆಗಳು ಮನಸ್ಸಿಗೆ ಮುದ ನೀಡುವ ಪರಿಯು ಚಿತ್ರಿತವಾಗಿದೆ. ಸುಸಜ್ಜಿತ ಕಟ್ಟಡ, ಸಂಗೀತದ ನಿನಾದ, ಮಾಂಸಾಹಾರ ಸವಿಯಲು ಬಂದ ಗ್ರಾಹಕರು ಆನಂದ ಪಡುತ್ತಾರೆ. ಯುವಕ, ಯುವತಿಯರು ಸಂಗೀತ ಸೋಬಾನೆಗಳನ್ನು ಉಣಬಡಿಸುವ ಕಲಾಕೌಶಲ್ಯವನ್ನು ಇಲ್ಲಿ ಕಥನಕಾರರು ಹಿಡಿದಿಟ್ಟಿದ್ದಾರೆ. ರಾಣಿಗೋಸ್ಕರ ಜಲಪಾತ, ಹೋಟೆಲಿನಲ್ಲಿ ದೀಪೋತ್ಸವ, ಸಸ್ಯಾಹಾರ ಇವು ಬ್ರಿಟನ್ನಿನಲ್ಲಿ ಆಕರ್ಷಣೆಯ ಪ್ರಸಂಗಗಳಾಗಿದ್ದವು.

ಹೋಟೆಲು ಬೆಟ್ಟ ಗ್ರೇಸಿಯರ್ಸ್ ಪ್ರಕೃತಿಯ ಆಶ್ಚರ್ಯಕರ ವೈಚಿತ್ರಗಳಲ್ಲಿ ಒಂದು ಎಂಬುದು ಭೂಗೋಳಶಾಸ್ತ್ರಜ್ಞರ ಅಭಿಮತವಾಗಿದೆ. ಅಮೆರಿಕದಲ್ಲಿ ಹೋಟೆಲುಗಳ ಸ್ವರೂಪ ವೈವಿಧ್ಯ ಯಾಂತ್ರೀಕರಣಗೊಂಡ ತಿಂಡಿ–ತಿನಿಸುಗಳ ತಯಾರಿಕೆ ಮತ್ತು ವಿತರಣೆ ಹೋಟೆಲಿಗೆ ಬರುವ ಗ್ರಾಹಕರ ರೀತಿ–ರಿವಾಜು ಇತ್ಯಾದಿ ಸಂಗತಿಗಳನ್ನೆಲ್ಲಾ ಲೇಖಕರು ತಿಳಿಹಾಸ್ಯದೊಂದಿಗೆ ವಿವರಿಸುತ್ತಾರೆ.

ನಾಗತಿಹಳ್ಳಿ ಚಂದ್ರಶೇಖರ ಅವರ 'ಅಮೆರಿಕ! ಅಮೆರಿಕ! ಎಂಬ ಪ್ರವಾಸಕಥನದಲ್ಲೂ ಹೋಟೆಲಿನ ಪ್ರಸ್ತಾಪವಿದೆ. ಪ್ರವಾಸ ಸಂದರ್ಭದಲ್ಲಿ ಲೇಖಕರು ತಂಗಿದ್ದ ಪೆಂಟಾಮೌಂಟ್ ಹೋಟೆಲು, ಕಾಲ್‌ಬೋರ್ನ್ ಲಾಡ್ಜ್, ಬೆಸ್ಟ್ ವೆಸ್ಟರ್ನ್ ನ್ಯೂಯಾರ್ಕಿನ ನೈಟ್‌ಕ್ಲಬ್, ಗ್ರೀನ್ ಏಕರ್ಸ್ ಹೋಟೆಲು ಮುಂತಾದ ಹೋಟೆಲುಗಳ ಬಗೆಗೆ ಲೇಖಕರು ತಮ್ಮ ಪ್ರವಾಸ ಕಥನದಲ್ಲಿ ವಿವರಿಸುತ್ತಾರೆ.

ಅಮೆರಿಕದ ಕೆಲವು ಹೋಟೆಲುಗಳಲ್ಲಿ ಲಭ್ಯವಿರುವ ಐಶಾರಾಮಿ ಸೌಲಭ್ಯಗಳ ಬಗೆಗೆ ಲೇಖಕರು ಹೀಗೆ ಹೇಳಿಕೊಳ್ಳುತ್ತಾರೆ. "ಗಿರಾಕಿ ಬಯಸಿದ ಶೈಲಿಯ ಲೈಂಗಿಕ ಕ್ರಿಯೆ ವೀಡಿಯೋ ಹಾಕಿಸಿಕೊಳ್ಳಬಹುದು ನಮ್ಮ ಸಾಂಪ್ರದಾಯಿಕ ನಾಟಕಗಳಲ್ಲಿ ಸೂತ್ರಧಾರ ಬಂದು ಪ್ರೇಕ್ಷಕರನ್ನು ನಾಟಕ ನೋಡಲು ಅಣಿಗೊಳಿಸುವ ಹಾಗೆ. ಅನಂತರ ಮತ್ತೊಂದು ಬದಿಯಲ್ಲಿ ಲೈಂಗಿಕ ಸಾಹಿತ್ಯದ ಪ್ರದರ್ಶನ ಕಣ್ಣು ಕಿವಿ ಮನಸ್ಸನ್ನು ಹದಗೊಳಿಸಿ ಒಳಗಿನ ಬಲಿಪೀಠಕ್ಕೆ ಕೈ ಹಿಡಿದು ಕರೆದೊಯ್ಯುತ್ತಾಳೆ. ಅರೆನಗ್ನ ಸುಂದರಿ(ನಾಗತಿಹಳ್ಳಿ ಚಂದ್ರಶೇಖರ, ೧೯೯೭, ಪುಟ. ೧೯೭). ಹೀಗೆ ಪಾಶ್ಚಾತ್ಯ ಸಂಸ್ಕೃತಿಯ ಭಾಗವಾಗಿ ಹೋಟೆಲಿನ ಚಟುವಟಿಕೆಗಳು ಚಿತ್ರಣಗೊಂಡಿವೆ. ವಿವಿಧ ವ್ಯವಹಾರಸ್ಥರು, ಉದ್ಯೋಗಸ್ಥರು ಹೋಟೆಲಿನಲ್ಲಿ ಗಿರಾಕಿಗಳಾಗಿ ಬರುತ್ತಾರೆ. ಇಲ್ಲಿ ಮಾಲಕರ ಜಾಣ್ಮೆ ಮಹಿಳಾ ವ್ಯವಸ್ಥಾಪಕರು, ವಿವಿಧ ತಾತ್ವಿಕ ಚಿಂತಕರು, ಸಾಹಿತ್ಯಾಸಕ್ತರು ಇವರ ನೈಟ್‌ಕ್ಲಬ್ಬಿನಲ್ಲಿ ನಗೆಪಾಟಲಿಗೆ ಸಿಲುಕಿಕೊಳ್ಳುವ ಪ್ರಸಂಗವು ಇಲ್ಲಿದೆ. ಇಲ್ಲಿ ನೃತ್ಯಗಾರ್ತಿಯರು ತರ್ಕಬುದ್ಧಿಯನ್ನು ಬಳಸುತ್ತಾರೆ. ದೇಹನೃತ್ಯದ ಮೂಲಕ ಗಿರಾಕಿಗಳ ಮನಸ್ಸನ್ನು ಗೆಲ್ಲುತ್ತಾರೆ. ಅವಿವಾಹಿತ ಯುವತಿಯರು ನೈಟ್‌ಕ್ಲಬ್‌ಗಳಲ್ಲಿ ತುಂಬಿರುವ ಬಗೆಯನ್ನು ಲೇಖಕರು ಇಲ್ಲಿ ಚಿತ್ರಿಸಿದ್ದಾರೆ.

ಪ್ರಭುಶಂಕರ ಅವರ "ಅಮೆರಿಕದಲ್ಲಿ ನಾನು ಶಾಂತಿ" ಎಂಬ ಪ್ರವಾಸಕಥನದಲ್ಲೂ ಅಲ್ಲಿನ ಹೋಟೆಲುಗಳ ಸ್ಥಿತಿಗತಿಗಳ ಚಿತ್ರಣವಿದೆ. ನೂಯಾರ್ಕಿನ "ಪಿಟ್ಸ್ ರೆಸ್ಟೋರೆಂಟ್"ನ ನಗರ ವೈಭವವನ್ನು ಕುರಿತು ವಿವರಿಸಿದ್ದಾರೆ. ಪಿಟ್ಸ್‌ನಲ್ಲಿ ತಿಂಡಿಯನ್ನು ಸವಿಯುವುದೆಂದರೆ ಅಮೆರಿಕದ ಜನರಿಗೆ ಅಚ್ಚುಮೆಚ್ಚು. ಚಿಕಾಗೋ ನಗರದಲ್ಲಿ ಇದೊಂದು ಅತ್ಯಂತ ಪ್ರಸಿದ್ಧಿಗೆ ಪಾತ್ರವಾದ ರೆಸ್ಟೋರೆಂಟಾಗಿದೆ ಎಂದು ಲೇಖಕರು ಹೇಳುತ್ತಾರೆ. "ಕ್ಯಾಸಿನೊ" ಹೋಟೆಲುಗಳಲ್ಲಿ ಇಸ್ಪೀಟು ಆಟವನ್ನು, ಗಂಡಸರೂ, ಹೆಂಗಸರೂ ಮದ್ಯಪಾನ ಮಾಡುತ್ತಾ ಆಟವಾಡುವ ಬಗೆಯನ್ನು ವಿವರಿಸಿದ್ದಾರೆ. ಊಟ-ತಿಂಡಿಯನ್ನು ಸವಿಯುತ್ತಲೇ ಜೂಜಿನಲ್ಲಿ ತೊಡಗಿರುವ ಜನಗಳೇ ಹೆಚ್ಚು

ಇಲ್ಲಿ ಕಾಣಸಿಗುತ್ತಾರೆ. ಪ್ರಖ್ಯಾತವಾದ "....ಹೋಟೆಲಿ"ನ ವೈಭವವನ್ನು ಲೇಖಕರು ವಿವರಿಸುತ್ತಾರೆ. ಮೂವತ್ತು ಅಂತಸ್ತುಗಳ ಹೋಟೆಲು. ಇಡೀ ಹೋಟೆಲು ಸುತ್ತುವುದು ಗಮನಕ್ಕೆ ಬರದೆ ಹೊರಗಿನ ದೃಶ್ಯಗಳಾದ ಸಮುದ್ರದಲ್ಲಿ ಸಂಚರಿಸುವ ಹಡಗುಗಳು ಹಾಗೂ ಭಾರಿ ಕಟ್ಟಡಗಳಿಂದ ಸುತ್ತುತ್ತಿರುವ ಅನುಭವ ವ್ಯಕ್ತವಾದ ಬಗೆಯು ಇದೆ. ಇವುಗಳ ವಿವರಣೆಯ ಜೊತೆಗೆ ಊಟ ಮಾಡುವ ಬಗೆಯನ್ನು ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. 'ಇಂಟರ್ ನ್ಯಾಷನಲ್ ಫ್ಯಾನ್‌ಕೇಕ್ ಹೌಸ್'ನಲ್ಲಿ ಫ್ಯಾನ್‌ಕೇಕ್ ಖರೀದಿಸಲು ಕಾದುಕುಳಿತ ಜನ, ಅಲ್ಲಿ ದೊರೆಯುವ ದೋಸೆಗಳು, ಬೆಣ್ಣೆ, ಚೀಸ್, ಮ್ಯಾಪಲ್ ಸಕ್ಕರೆಯ ಕ್ಷೀರ ಹೀಗೆ ಹೋಟೆಲು ಗ್ರಾಹಕರಿಗೆ ತೃಪ್ತಿಪಡಿಸುವ ಗಳಿಗೆಯನ್ನು ವಿವರಿಸಿದ್ದಾರೆ. ಪ್ರತಿ ಊರಿನ ಹಾಗೂ ಪ್ರತಿ ಮೊಹಲ್ಲಾದಲ್ಲೂ ಸ್ಥಾಪಿತವಾದ ಫ್ಯಾನ್‌ಕೇಕ್ ಹೌಸ್‌ಗಳ ಬಗೆಗೆ ಉಲ್ಲೇಖಿಸಿದ್ದಾರೆ. ಸ್ಯಾನ್ ಫ್ರಾನ್ಸಿಸ್ಕೋದಲ್ಲಿನ "ಭಾರತೀಯ ಭೋಜನಶಾಲೆ" ಅಲ್ಲಿನ ತಂದೂರಿ ರೊಟ್ಟಿ, ಕೋಳಿ ಖಾದ್ಯಗಳ ಕುರಿತಾಗಿಯೂ ಲೇಖಕರು ತಮ್ಮ ಪ್ರವಾಸಕಥನದಲ್ಲಿ ವಿವರಿಸುತ್ತಾರೆ. ಜನ ಹೋಟೆಲಿಗೆ ಕರೆದುಕೊಂಡು ಹೋಗಿ ಊಟ ತಿಂಡಿ ಸವಿಯುವ ವಿವರಣೆಯು ಇಲ್ಲಿದೆ. ಚೀನಿಯರ 'ಕಾಸ್ಮೋಪ್ಲೀಸ್ ಟ್ರೇಡರ್ ವಿಕ್ಸ್' ಎಂಬ ಹೋಟೆಲಿನ ವಿವರಣೆಯು ಇಲ್ಲಿದೆ.

ಶಿವರಾಮ ಕಾರಂತ ಅವರ "ಅಪೂರ್ವ ಪಶ್ಚಿಮ" ಎಂಬ ಪ್ರವಾಸಕಥನವು ಹೋಟೆಲು ಚಿತ್ರಣದ ದೃಷ್ಟಿಯಿಂದ ಪ್ರಮುಖವಾದದ್ದಾಗಿದೆ. ಇಲ್ಲಿ ಹಲವು ಪಾಶ್ಚಾತ್ಯ 'ಹಡಗಿನ ಭೋಜನ ಗೃಹ' ಹಾಗೂ ನಗರಗಳಲ್ಲಿನ ಹೋಟೆಲುಗಳ ಕುರಿತ ಮಾಹಿತಿಗಳನ್ನು ಪ್ರವಾಸಕಥನ ಕಟ್ಟಿಕೊಟ್ಟಿದೆ. ಮೊದಲಿಗೆ ಜಲಮಾರ್ಗದ ಸಂದರ್ಭದಲ್ಲಿ ಹಡಗಿನ ಭೋಜನಗೃಹ ಹಾಗೂ ಬಾರ್‌ಗಳ ಅಸ್ತಿತ್ವವನ್ನು ಲೇಖಕರು ಕಟ್ಟಿಕೊಡುತ್ತಾರೆ. ಅಲ್ಲಿ ದೊರೆಯುವ ತಿಂಡಿ ತೀರ್ಥಗಳು ಮತ್ತು ಬಾರುಗಳ ಸುಸಜ್ಜಿತ ಕಟ್ಟಡ, ಅದರೊಳಗಿನ ವಿವಿಧ ಸಲಕರಣೆಗಳು ಇತ್ಯಾದಿ ವಿವರಗಳು ಈ ಪ್ರವಾಸಕಥನದಲ್ಲಿವೆ. ಭೋಜನಗೃಹದಲ್ಲಿ ಮೇಜಿಗೊಬ್ಬರಂತೆ ಇರುವ ಅಲ್ಲಿನ ವ್ಯವಸ್ಥಾಪಕರು ಶಾಖಾಹಾರಿ ಮತ್ತು ಮಾಂಸಾಹಾರಿ ಆಹಾರ ಪದಾರ್ಥ ಮುಂತಾದವುಗಳ ವಿವರವು ಇಲ್ಲಿದೆ. ಲೇಖಕರು ಪ್ರವಾಸ ಸಂದರ್ಭದಲ್ಲಿ ತಾವು ತಂಗಿದ್ದ ಲಂಡನ್ನಿನ 'ಅರ್ಲ್ಸ್‌ಕೋರ್ಟ್ ಲಾಸ್ಮನ್ ಹೋಟೆಲು', 'ಪ್ರಿಶ್‌ಗಾಟೆ ಶಾಖಾಹಾರಿ ರೆಸ್ಟೋರೆಂಟ್' ಇತ್ಯಾದಿ ಹೋಟೆಲುಗಳಲ್ಲಿ ತಿಂಡಿ-ತಿನಿಸುಗಳ ವೈವಿಧ್ಯ, ಅಲ್ಲಿನ ಸೇವಾವಿಧಾನ ಹಾಗೂ ಸೌಲಭ್ಯಗಳ ಬಗೆಗೆ ಆಕರ್ಷಕ ಮಾಹಿತಿಗಳನ್ನು ನೀಡುತ್ತಾರೆ. ಅಲ್ಲಿ ಲಭ್ಯವಿರುವ ತಿಂಡಿ-ತಿನಿಸುಗಳಿಗೆ ಸ್ಥಳೀಯ ಭಾಷೆಯಲ್ಲಿ ಬಳಸಲಾಗುವ ಪದಗಳನ್ನು ಉಲ್ಲೇಖಿಸುತ್ತಾರೆ. ಇಲ್ಲಿನ ಹೋಟೆಲುಗಳಲ್ಲಿ ಹಣವನ್ನು ಗಳಿಸುವ ಗ್ರಾಹಕರು ಒಂದೆಡೆಯಾದರೆ ಸ್ವ-ಇಚ್ಛೆಯಿಂದ ಧನಸಹಾಯ ಮಾಡುವ ಮಹಿಳಾ ಗ್ರಾಹಕರು ಇಲ್ಲಿ ಚಿತ್ರಿತ ವಾಗಿದ್ದಾರೆ. ಶಾಖಾಹಾರ ಹೋಟೆಲುಗಳಲ್ಲಿ ತಯಾರಾದ ವಿವಿಧ ತಿಂಡಿಗಳ ರುಚಿ ಹಾಗೂ

ಅವುಗಳು ತಯಾರಾಗುವ ಕಲೆಯನ್ನೇ ಲೇಖಕರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಇಲ್ಲಿನ ಹೋಟೆಲುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಯುರೋಪಿಯನ್ ಸ್ತ್ರೀಯರಿಗಿಂತ ಭಿನ್ನವಾಗಿ ಉಡುಗೆತೊಡುಗೆಗಳಲ್ಲಿ ಕಾಣುತ್ತಾರೆ.

ಪ್ಯಾರಿಸ್ ನಗರದ ಬಹುತೇಕ ಹೋಟೆಲುಗಳಲ್ಲಿ ಕಾಫಿ ಮತ್ತು ಹೆಂಡವನ್ನು ಒಂದೇ ಸ್ಥಳದಲ್ಲಿ ಮಾರುವ ಸನ್ನಿವೇಶವನ್ನು ಇಲ್ಲಿ ಚಿತ್ರಿಸಿದ್ದಾರೆ. ಈ ನಗರದಲ್ಲಿ ಬಗೆಬಗೆಯ ಮದ್ಯವನ್ನು ಪ್ರತಿಯೊಬ್ಬರು ಹೋಟೆಲು ಮತ್ತು ಕೆಫೆಗಳಲ್ಲಿ ಕುಡಿಯುವ ಸನ್ನಿವೇಶವನ್ನು ಚಿತ್ರಿಸಿದ್ದಾರೆ. 'ರುಂಡ್ ಪಾಂಟ್' ಹೋಟೆಲಿನಲ್ಲಿ ಹಿಂದಿ ಮಾತನಾಡುತ್ತಿದ್ದ ಭಾರತೀಯ ವ್ಯಕ್ತಿಯ ಬಗ್ಗೆ ಲೇಖಕರು ವಿವರಿಸುತ್ತಾರೆ. ಫ್ರಾನ್ಸಿನ ಎಲ್ಲಾ ಹೋಟೆಲುಗಳಲ್ಲಿ ಗ್ರಾಹಕರು ಚರ್ಚೆಗಳನ್ನು ಹಾಗೂ ಸಂಭಾಷಣೆಗಳನ್ನು ನಡೆಸುವ ಬಗೆಯು ಇಲ್ಲಿ ಚಿತ್ರಿತವಾಗಿದೆ. ಇಲ್ಲಿನ ಯುವತಿಯರು ಹೊಸಬರನ್ನು ಸ್ನೇಹ ಬಳಸಿ ರೆಸ್ಟೋರೆಂಟ್‌ಗಳಗೆ ಕರೆದೊಯ್ಯುವ ಹಾಗೂ ಕಿಸೆ ಬರಿದು ಮಾಡುವ ರೀತಿಯನ್ನು ಲೇಖಕರು ಇಲ್ಲಿ ವಿವರಿಸುತ್ತಾರೆ. ನಗರದ ಬಹುಪಾಲು ಹೋಟೆಲುಗಳಲ್ಲಿ ಕಾರ್ಮಿಕರು ನಾನಾ ಭಾಷೆಗಳನ್ನಾಡುವ ಬಗೆಯು ಇಲ್ಲಿದೆ.

"ಅಂಗೈಯಲ್ಲಿ ಯೂರೋ ಅಮೇರಿಕಾ" ಎಂಬುದು ಅನುಪಮಾ ನಿರಂಜನ ಅವರ ಪ್ರವಾಸಕಥನ. ಹೊರದೇಶಕ್ಕೆ ಪ್ರವಾಸ ಕೈಗೊಂಡಾಗ ಹೋಟೆಲನ್ನು ಆಶ್ರಯತಾಣವಾಗಿರಿಸಿಕೊಂಡ ಸಂದರ್ಭದಲ್ಲಿ ಪಡೆಯಬಹುದಾದ ಅನುಭವಗಳನ್ನು ಲೇಖಕಿ ಇಲ್ಲಿ ತೆರೆದಿಟ್ಟಿದ್ದಾರೆ. ಪ್ಯಾಲಿಸ್ಟೈನ್‌ದಲ್ಲಿ, ಇಟಲಿ ದೇಶದ ಹಣಕಾಸಿನ ವ್ಯವಹಾರದಲ್ಲಿ ಹೋಟೆಲಿನ ಪಾತ್ರ ಪ್ರಾಮುಖ್ಯತೆ ಪಡೆದುಕೊಂಡ ಬಗೆಯನ್ನು ಲೇಖಕರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ರೋಮ್ ನಗರದಲ್ಲಿನ ಪ್ರತಿಷ್ಠಿತ ಹೋಟೆಲು ಹಾಗೂ ಕೆಫೆಗಳಲ್ಲಿ ಕಾಫಿ ತಯಾರಿಕಾ ಯಂತ್ರಗಳ ಸ್ವರೂಪವನ್ನು ಲೇಖಕರು ವಿವರಿಸುತ್ತಾರೆ. ಇಲ್ಲಿ ವೈನ್ ನೀರಿಗಿಂತ ಅಗ್ಗದ ದರದಲ್ಲಿ ದೊರೆಯುತ್ತದೆ ಎಂಬುದನ್ನು ಲೇಖಕರು ಉಲ್ಲೇಖಿಸುತ್ತಾರೆ. 'ಸಾಕ್ರಟೀಸ್', 'ಪ್ಲೇಟೊ', 'ಅರಿಸ್ಟಾಟಲ್' ಮುಂತಾದ ತಾತ್ವಿಕ ಚಿಂತಕರು ಇಲ್ಲಿನ ಹೋಟೆಲುಗಳ ಆಶ್ರಯ ಪಡೆದ ಬಗೆಯನ್ನು ಲೇಖಕರು ವಿವರಿಸುತ್ತಾರೆ. 'ಪೈತಾಗೊರಸ್', 'ಲೆನಿನ್', 'ಥಾಮಸ್ ಮೆನ್' 'ಜೇಮ್ಸ್ ಜಾಯ್ಸ್' ಹಾಗೂ ಲೇಖಕರು, ಕಲಾವಿದರು, ಬುದ್ಧಿಜೀವಿಗಳು 'ಓಡಿಯನ್ ಹೋಟೆಲಿ'ನಲ್ಲಿ ಸಾಮಾನ್ಯವಾಗಿ ಸೇರುತ್ತಿದ್ದರೆಂದು ಇಲ್ಲಿ ಪ್ರಸ್ತಾಪಿಸಲಾಗಿದೆ.

ಫ್ರಾನ್ಸ್ ದೇಶದ 'ಡಿಚಾನ' ಹಳ್ಳಿಯ ಸಣ್ಣ ಮತ್ತು ದೊಡ್ಡ ಹೋಟೆಲುಗಳ ವಿವರಗಳು ಇಲ್ಲಿವೆ. ಇಲ್ಲಿನ ಬಹುಪಾಲು ಹೋಟೆಲುಗಳಲ್ಲಿ ಗ್ರಾಹಕರು ತಿಂಡಿ ತಿನಿಸುಗಳನ್ನು ಸ್ವಸಹಾಯ ಪದ್ಧತಿ ಮೂಲಕ ಪಡೆದ ವಿಧಾನವನ್ನು ಇಲ್ಲಿ ದಾಖಲಿಸಲಾಗಿದೆ. ಹೋಟೆಲುಗಳಲ್ಲಿ ನಡೆಯುವ ಡಾಲರ್, ಪೌಂಡುಗಳ ವಿನಿಮಯ, ಹೋಟೆಲಿಗೆ ಬರುವ ವಿದ್ಯಾರ್ಥಿಗಳ ದೇಹದಿಂದ ಹೊರಸೂಸುವ ಬಗೆಬಗೆಯ ಸೆಂಟ್ ಪರಿಮಳ, ಗ್ರಾಹಕರು ಸೇದುವ ಸಿಗರೇಟು ವಾಸನೆ

ಇತ್ಯಾದಿ ವಿವರಗಳು ಈ ಪ್ರವಾಸಕಥನದಲ್ಲಿದೆ. ಬುದ್ಧಿಜೀವಿಗಳು ಪ್ರಮುಖ ಸಿದ್ಧಾಂತಗಳ ವಾದ ಪ್ರತಿವಾದವನ್ನು ಇಲ್ಲಿ ಕಾಫಿ ಚೇರಿಯಾದಲ್ಲಿ ಮಂಡಿಸುವ ಪರಿಯನ್ನು ಲೇಖಕರು ಮನೋಜ್ಞವಾಗಿ ವಿವರಿಸಿದ್ದಾರೆ. ಇಲ್ಲಿಯೇ ಯುರೋಪಿನ ಸಿದ್ಧಾಂತ ರೂಪಿತವಾಗಿ ಸಾರ್ವತ್ರಿಕ ಮನ್ನಣೆ ಪಡೆದುದನ್ನು ಉಲ್ಲೇಖಿಸುತ್ತಾರೆ. ಫ್ರಾನ್ಸಿನ ಪ್ರಮುಖ ಕಾಂಬರಿಕಾರರಾದ 'ಸಾರ್ತ' ಹಾಗೂ 'ದಕೋವಾ' ವರ್ಣನೆಯನ್ನು ತಮ್ಮ ಬರಹಗಳಲ್ಲಿ ಪಡಿಮೂಡಿಸಿದ ಬಗೆಯನ್ನು ಲೇಖಕರು ಈ ಸಂದರ್ಭದಲ್ಲಿ ನೆನೆಪಿಸುತ್ತಾರೆ. ವಿವಿಧ ದೇಶಗಳ ಮಹಿಳೆಯರು ಹೋಟೆಲಿನಲ್ಲಿ ವ್ಯವಸ್ಥಾಪಕರಾಗಿ ಲಘುಬಗೆಯಿಂದ ಕೆಲಸ ಮಾಡುವುದನ್ನು ಇಲ್ಲಿ ಚಿತ್ರಿಸಿದ್ದಾರೆ. ವರ್ಣಭೇದ ನೀತಿಯನ್ನು ಬಹುಪಾಲು ಹೋಟೆಲುಗಳ ಮಾಲೀಕರು ಅನುಸರಿಸುತ್ತಿರುವುದನ್ನು ಲೇಖಕರು ಗುರುತಿಸಿದ್ದಾರೆ. 'ತಾಜ್ ಹೋಟೆಲಿ'ನಲ್ಲಿ ದೊರೆಯುವ ಭಾರತೀಯ ಶೈಲಿಯ ಆಹಾರ ಪದಾರ್ಥಗಳ ವಿವರಣೆಯು ಇಲ್ಲಿದೆ.

'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಎಂಬ ಜಿ.ಎಸ್. ಶಿವರುದ್ರಪ್ಪ ಅವರ ಪ್ರವಾಸಕಥನವು ಹೋಟೆಲಿನ ಚಿತ್ರಣದ ಮೂಲಕ ಗಮನ ಸೆಳೆಯುತ್ತದೆ. ತಾವು ತಂಗಿದ್ದ ಹೋಟೆಲು ಸಕಲ ಸೌಲಭ್ಯಗಳಿಂದ ಭವ್ಯವಾಗಿತ್ತೆಂದು ಹೇಳುವ ಲೇಖಕರು ಅಲ್ಲಿನ ಸೌಲಭ್ಯಗಳ ವಿವರಗಳನ್ನು ಕಟ್ಟಿಕೊಡುತ್ತಾರೆ. ಮಾಸ್ಕೋದ ಪ್ರಾಚ್ಯ ಭಾಷಾಬೋಧಕ ಸಂಸ್ಥೆಯ ಜೊತೆಗೆ ಹೋಟೆಲು ಹೊಂದಿದ ಅವಿನಾಭಾವ ಸಂಬಂಧವನ್ನು ವಿವರಿಸುತ್ತಾರೆ. ಸಾಂಸ್ಕೃತಿಕ ಕಾರ್ಯಕ್ರಮ, ನಾಟಕ ಕಲೆ, ವಿವಿಧ ಕಲಾಪ್ರದರ್ಶನಗಳ ಪ್ರತಿನಿಧಿಗಳಾಗಿ ಹೋಟೆಲು ಮಾಲೀಕರು ಇದ್ದುದನ್ನು ಲೇಖಕರು ತಿಳಿಸುತ್ತಾರೆ. ಬಹುಪಾಲು ಹೋಟೆಲು, ಕೆಫೆಗಳಲ್ಲಿ ಗ್ರಾಹಕರು ಊಟಕ್ಕೆ ಒಂದರಿಂದ ಎರಡು ಗಂಟೆ ಸಮಯ ನಿಗದಿ ಮಾಡುವುದನ್ನು ಉಲ್ಲೇಖಿಸುತ್ತಾರೆ. ವಿದೇಶಿ ಹೋಟೆಲುಗಳಲ್ಲಿ ಯಂತ್ರಗಳಿಂದ ಲೆಕ್ಕ ಮಾಡುವುದು ಹಾಗೂ ಇನ್ನುಳಿದ ಹೋಟೆಲುಗಳಲ್ಲಿ ಮಹಿಳಾ ಮಾಲೀಕರಿರುವುದನ್ನು ಲೇಖಕರು ವಿವರಿಸುತ್ತಾರೆ. ಬಗೆಬಗೆಯ ತಿಂಡಿ-ತಿನಿಸುಗಳಿಗಾಗಿ 'ನ್ಯಾಷನಲ್ ಕಫೆ'ಯಲ್ಲಿ ಸರತಿ ನಿಂತ ಗ್ರಾಹಕರ ಬಗ್ಗೆ ಲೇಖಕರು ವಿವರಿಸುತ್ತಾರೆ. ಇಲ್ಲಿನ ಪದಾರ್ಥ ಪಡೆಯುವುದೆಂದರೆ ಜನಸಾಮಾನ್ಯರಲ್ಲಿ ಪ್ರತಿಷ್ಠೆಯ ಮಾತಾಗಿರುವುದನ್ನು ಜನರಿಂದ ಕೇಳಿ ತಿಳಿಯುತ್ತಾರೆ. ಕೆಂಪು ಚೌಕದಲ್ಲಿರುವ ರಷ್ಯಾದ ಹೋಟೆಲು ಯುರೋಪಿನಲ್ಲಿಯೇ ದೊಡ್ಡದು ಹಾಗೂ ಮೂರು ಸಾವಿರ ಕೋಣೆ ಹೊಂದಿ ಆರು ಸಾವಿರ ಜನಕ್ಕೆ ವಸತಿ ಒದಗಿಸುತ್ತದೆ ಎನ್ನುತ್ತಾರೆ ಲೇಖಕರು.

ದೇ. ಜವರೇಗೌಡ ಅವರು ತಮ್ಮ 'ವಿದೇಶದಲ್ಲಿ ನಾಲ್ಕು ವಾರ' ಎಂಬ ಪ್ರವಾಸಕಥನ ದಲ್ಲಿ ಹೋಟೆಲು ಸಂಬಂಧಿತ ವಿವರಗಳನ್ನು ಚಿತ್ರಿಸಿದ್ದಾರೆ. 'ಮೈಸೂರು ಭವನ'ದಿಂದ ಆರಂಭವಾಗಿ ಬರ್ಲಿನ್ ನಗರದ 'ರೀಜೆಂಟ್ ಪ್ಯಾಲೆಸ್'ವರೆಗಿನ ವಿವಿಧ ಮಾದರಿ, ಶೈಲಿಗಳ ಹೋಟೆಲುಗಳ ಬಗೆಗೆ ಈ ಪ್ರವಾಸ ಕಥನದಲ್ಲಿ ದಾಖಲಿಸಲಾಗಿದೆ. ಜರ್ಮನಿಯ 'ಒಬೆರಾಯ್ ಹೋಟೆಲಿ'ನ ಔತಣಕೂಟದಲ್ಲಿ ಕಂಡುಂಡ ಅನುಭವಗಳನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ. ಈ ಹೋಟೆಲು ಹಾಗೂ

ಒಂದು ಪುಟ್ಟ ಜಗತ್ತಿನಂತೆ ಕಂಡದ್ದನ್ನು ಚಿತ್ರಿಸಿದ್ದಾರೆ. ಹೋಟೆಲು ಸುಸಜ್ಜಿತವಾದದ್ದು. ಇದರ ವ್ಯವಸ್ಥೆ ಇಂದ್ರ ಭವನವನ್ನು ನಾಚಿಸುವಂತದ್ದು ಎಂದು ಲೇಖಕರು ಹೇಳುತ್ತಾರೆ. ಗಯಟೆ, ಕಿಟ್ಟೆಲ್, ಗ್ರೀಮ್ ಸಹೋದರರು ಇದೇ ಹೋಟೆಲಲ್ಲಿ ಚರ್ಚೆ ನಡೆಸಿರುವುದನ್ನು ಉಲ್ಲೇಖಿಸುತ್ತಾರೆ. ಈ ಹೋಟೆಲಿನ ಸಹಭಾಗಿತ್ವದಲ್ಲಿ ಹಲವು ಕಾರ್ಯಕ್ರಮದ ಒಪ್ಪಂದದ ಕುರಿತು ವಿವರಿಸುತ್ತಾರೆ.

'ಮೆಟ್ರೋಪೋಲೊ' ಎಂಬ ಇನ್ನೊಂದು ಹೋಟೆಲಿನ ಗ್ರಾಹಕರು ಮೇಲಂಗಿಯನ್ನು ಕಳಚಿ ಒಳಗೆ ಪ್ರವೇಶ ಪಡೆಯುವ ವಿಶೇಷ ಪದ್ಧತಿ ಇದೆ ಎಂಬುದನ್ನು ಲೇಖಕರು ಪ್ರಸ್ತಾಪಿಸುತ್ತಾರೆ. ಶ್ರೇಷ್ಠ ಹಾಗೂ ವಿಶೇಷ ಅತಿಥಿಗಳಿಗೆ ಮೀಸಲಾಗಿರುವ 'ಉಕ್ರೇನ್ ಹೋಟೆಲ'ನ್ನು ಲೇಖಕರು ಇಲ್ಲಿ ಉಲ್ಲೇಖಿಸುತ್ತಾರೆ. ಇದೊಂದು ಆ ದೇಶದ ವಿಶೇಷ ಸಾಮಗ್ರಿಗಳಿಂದ ಆವೃತ್ತಗೊಂಡ ವಿಶಿಷ್ಟ ಅತಿಥಿಗೃಹ ಎನ್ನುವುದನ್ನು ಇಲ್ಲಿ ಉಲ್ಲೇಖಿಸಿದ್ದಾರೆ. 'ಅತಿಥಿಗೃಹ ರೆಸ್ಟೋರೆಂಟ್'ನಲ್ಲಿ ಊಟದ ವೇಳೆಯಲ್ಲಿನ ಚರ್ಚೆಯ ಭಾಗವಾಗಿ ಬೋರಿಸ್ ಹಾಗೂ ಲೇಖಕರ ಮಧ್ಯ ನಡೆಯುವ ಮಾತುಗಳಿವು. "ಬೋರಿಸ್ ಅವರಿಂದ ರಷ್ಯ ಸಮಾಜದ ವಿವರ ತಿಳಿಯಲು ಪ್ರಯತ್ನಿಸಿದೆವು. ಅವರು ಜಾರ್ಜಿಯಾ ಉಕ್ರೇನ್ ಮಿಶ್ರತಳಿಯಿಂದ ಹುಟ್ಟಿದವರಂತೆ ಆಫ್ರಿಕಾ ಖಂಡವನ್ನೂ, ಯುರೋಪಿನ ಬಹುಭಾಗವನ್ನು ಸುತ್ತಿದ್ದಾರೆ. ಅವರಿಗೆ ಸ್ವಂತದ್ದೇ ಮನೆಯೂ, ಒಂದು ಜಮೀನೂ ಇವೆ. ರಾಜಕೀಯ ಪಕ್ಷದ ಬಗ್ಗೆ ಬಿಚ್ಚುಮನಸ್ಸಿನಿಂದ ಮಾತಾಡಿದರು. ಅವರು ಕಮ್ಯೂನಿಸ್ಟ್ ಪಕ್ಷದ ಸದಸ್ಯರು, ಪಕ್ಷದ ಸದಸ್ಯರಲ್ಲಿದ್ದವರಿಗೆ ಸರಕಾರದ ಉಚ್ಚಸ್ಥಾನಗಳು ದೊರೆಯುವಂತಿಲ್ಲ. ಹೋಟೆಲಿಗೆ ಬಂದ ಜನ ತಿನ್ನುವ ರೀತಿ ಪ್ರಮಾಣಗಳನ್ನು ನೋಡಿ ದಿಗ್ಭ್ರಮೆಗೊಂಡಿದ್ದ ಗ್ರಾಮಾಂತರ ಜನರೂ ಹೀಗೆಯೇ ತಿನ್ನುವರೇ ಎಂದು ಪ್ರಶ್ನಿಸಿದೆ. ಇಷ್ಟು ವೈವಿಧ್ಯದ ಭಕ್ಷ್ಯ ಅಲ್ಲಿ ಸಿಗದಿದ್ದರೂ ಅವರು ಗಡದ್ದಾಗಿ ತಿನ್ನುತ್ತಾರೆಂದು ತಿಳಿಸಿದೆ(ಜವರೇಗೌಡ ದೇ., ೨೦೦೧, ಪು. ೩೧). ಕೀವ್ ನಗರದ ಹೋಟೆಲುಗಳು, ಅಕ್ಟೋಬರ್ ಸ್ಕೈ ಹೋಟೆಲು, ಕಾಕನಿಸ್, ಲೆನಿನ್ ಗ್ರ್ಯಾಡ್ ಹೋಟೆಲು, ರಶಿಯಾ ಹೋಟೆಲು, ರೈನರ್ ಹೋಟೆಲು, ಪ್ರೂಲಿಂಗ್ ಹೋಟೆಲು, ಜೂಮ್ ರಿಟ್ಟರ್ ಹೋಟೆಲು, ಹೌಸ್ ಮುಲ್ಲಿರ ಹೋಟೆಲು, ಮಾರ್ ಬರ್ಗ ಹೋಟೆಲು, ರೀಜೆಂಟ್ ಪ್ಯಾಲೆಸ್ ಹೋಟೆಲು ಹೀಗೆ ವಿದೇಶಿ ಹೋಟೆಲುಗಳ ಸ್ವರೂಪ ಶೈಲಿಗಳನ್ನು ಲೇಖಕರು ತಮ್ಮ ಪ್ರವಾಸಕಥನದಲ್ಲಿ ಕಟ್ಟಿಕೊಡುತ್ತಾರೆ.

ಪ್ರಭಾಕರ ಶಿಶಿಲ ಅವರ 'ದೇಶ ಯಾವುದಾದರೇನು?' ಎಂಬ ಪ್ರವಾಸಕಥನ ಕೂಡ ಹೋಟೆಲಿನ ಪ್ರತಿನಿಧೀಕರಣದ ದೃಷ್ಟಿಯಿಂದ ನಮಗಿಲ್ಲಿ ಪ್ರಸ್ತುತವೆನಿಸುತ್ತದೆ. ಇದರಲ್ಲೂ ವಿವಿಧ ನಗರಗಳಲ್ಲಿ ಹೋಟೆಲುಗಳ ವಿವರಣೆಯಿದೆ. 'ಸೆಂಟ್ ಮಿಷೆಲ್ ಹೋಟೆಲು' ಎದುರುಗಡೆ ಇರುವ ವಿಶ್ವವಿದ್ಯಾಲಯದ ನೈಟ್‌ಕ್ಲಬ್‌ಗಳು, ಅಲ್ಲಿ ಸುತ್ತಾಡುವ ಪ್ರೇಮದ ಯುವಜೋಡಿಗಳು, ಬೀದಿಗಳಲ್ಲಿ ಮಲಗುವ ನಿರಾಶ್ರಿತರು, ಬೆಳಿಗ್ಗೆ ಬೀದಿ ಶುದ್ಧೀಕರಿಸುವ ಜನರ ತಂಡ ಹೀಗೆ ಹೋಟೆಲಿನ ಮುಂಭಾಗದಲ್ಲಿ ಕಂಡುಬರುವ ದೃಶ್ಯಗಳನ್ನು ಲೇಖಕರು ಕಟ್ಟಿಕೊಡುತ್ತಾರೆ.

‘ಅಲೆಮಾರಿಯ ಅಂಡಮಾನ್’ ಮತ್ತು ‘ಮಹಾನದಿ ನೈಲ್’ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಪ್ರವಾಸಕಥನ. ಇಲ್ಲಿ ಪೋರ್ಟ್‌ಬ್ಲೇರ್ ನಗರದ ‘ಮೆಗಪಾಡ ನೆಸ್ಟ್’ ಎಂಬುದು ಹಕ್ಕಿಯ ಹೆಸರಿನ ಹೋಟೆಲಾಗಿದೆ. ಇದರ ಮಾಲೀಕತ್ವವು ಮಂಗಳೂರಿನ ಇಬ್ರಾಹಿಂನ ಕೈಯಲ್ಲಿತ್ತು. ಇಡೀ ನಗರದಲ್ಲಿಯೇ ಪ್ರಸಿದ್ಧಿಗೆ ಪಾತ್ರವಾದ ಈ ಹೋಟೆಲು ಮೀನು ಹಿಡಿಯುವ ದೋಣಿಗಳನ್ನು ಇಟ್ಟುಕೊಂಡಿದ್ದನೆಂದು ಲೇಖಕರು ಉಲ್ಲೇಖಿಸುತ್ತಾರೆ. ಕರ್ನಾಟದವರಿಗೆಲ್ಲಾ ಗಾಡ್‌ಫಾದರ್ ಎನಿಸಿಕೊಂಡಿದ್ದ ಇಬ್ರಾಹಿಂ ಅಲ್ಲಿನ ಕರ್ನಾಟಕ ಸಂಘದ ಮುಂದಾಳು ಆಗಿದ್ದನೆಂದು ಲೇಖಕರು ಪ್ರಸ್ತಾಪಿಸುತ್ತಾರೆ. ಹೋಟೆಲು ವ್ಯವಹಾರದ ಜೊತೆಗೆ ಪ್ರತಿದಿನ ಶಾಲಾಮಕ್ಕಳಿಗೂ ವ್ಯಾಯಾಮಕ್ಕೆಂದು ಬರುವ ಜನರಿಗೂ ತಿಂಡಿ ಪಟ್ಟಣಗಳನ್ನು ಪೂರೈಸುವ ಕಾಯಕದಲ್ಲೂ ಇಬ್ರಾಹಿಂ ನಿರತನಾಗಿದ್ದ ನೆಂದು ಲೇಖಕರು ಉಲ್ಲೇಖಿಸುತ್ತಾರೆ. ಇಬ್ರಾಹಿಂನ ಹೋಟೆಲಿನಲ್ಲಿ ಲಭ್ಯವಾಗುತ್ತಿದ್ದ ಮದರಾಸಿ ತರಕಾರಿಗಳಿಂದ ತಯಾರಿಸುತ್ತಿದ್ದ ರುಚಿರುಚಿಯಾದ ಸಾಂಬಾರು, ಸೀಗಡಿ ಮೀನಿನಿಂದ ಸಿದ್ಧಪಡಿಸ ಲಾಗುತ್ತಿದ್ದ ಬಗೆಬಗೆಯ ಖಾದ್ಯಗಳು ಇವನ್ನೆಲ್ಲ ಓದುಗರ ಬಾಯಲ್ಲಿ ನಿರೂರುವಂತೆ ಲೇಖಕರು ವಿವರಿಸಿದ್ದಾರೆ.

ಸಣ್ಣಕಥೆ-ಕಾದಂಬರಿ, ಲಲಿತಪ್ರಬಂಧ, ಪ್ರವಾಸಕಥನ, ಅಂಕಣಸಾಹಿತ್ಯ ಹಾಗೂ ಸಂಪಾದಕೀಯ ಬರಹಗಳಲ್ಲಿ ಹೋಟೆಲಿನ ಪ್ರತಿನಿಧೀಕರಣವು ಕಾಣಿಸಿಕೊಂಡಷ್ಟು ಪ್ರಮಾಣದಲ್ಲಿ ಕಾವ್ಯಪ್ರಕಾರದಲ್ಲಿ ಕಾಣಿಸಿಕೊಂಡಿಲ್ಲವೆಂದೇ ಹೇಳಬಹುದು. ಒಂದೆರಡು ಕವಿತೆಗಳಲ್ಲಿ ಪ್ರಾಸಂಗಿಕವಾಗಿ ಹೋಟೆಲು ಅಥವಾ ಹೋಟೆಲಿನ ಚಹಾ, ಕಾಫಿ, ತಿಂಡಿ-ತಿನಿಸುಗಳು ಪ್ರಸ್ತಾಪಗೊಂಡಿವೆ. ಬಿ.ಆರ್. ಲಕ್ಷ್ಮಣರಾವ್ ಅವರ ಗೋಪಿ ಮತ್ತು ಗಾಂಡಲೀನ ಎಂಬ ಕವನದಲ್ಲಿ ಹೋಟೆಲಿನ ಪ್ರಭೇದವಾದ ಜಾಲಿಬಾರಿನ ಸನ್ನಿವೇಶದ ಚಿತ್ರಣವಿದೆ”.

> ಜ್ವಾಲಿಮಾರು ಬಾರಿನಲ್ಲಿ ಪೋಲಿ ಹುಡುಗರು
> ಗುಂಡು ಗುಂಡು ಗಾಂಡಲೀನ
> ಕ್ಯಾಬರಿಸುತ್ತಾ
> ಬುರು ಬುರು ವಾದಿ ಗಿರಗಿರ ತಿರುಗುವ
> ಬೋಂಡವಾದ ಗೋವ
> ಅವನ ಹೆಂಡ ಹೊಟ್ಟೆಯ ಸುತ್ತುವರಿದು
> ಅವನ ಚೊಂಬು ಕೆನ್ನೆಯ ಸುತ್ತುವರಿದು
> ತನ್ನ ತೊಂಡೆ ತುಟಿಗಳನ್ನು ಚುಂಬಿಸಿದಾಗ
> ಜುಮ್ಮನ್ನಿಸಿ, ಗೋಪಿ ಅವಳು ಜಗಿದು ಹೀರುತ್ತಿದ್ದ ಚ್ಯೂಯಿಂಗ್ ಗಮ್ಮಾದ
> ಹಾ ವೆಂಕಟಲಕ್ಷ್ಮಿ ಎಂದು

ಧರ್ಮಪತ್ನಿಯ ನೆನೆದು ನೊಂದು
ನೆಂದು ಪರನಾರೀ ಪದ್ಮಂಗಳಿಗೆ ದಢಾರನೆ ಅಡ್ಡ ಬಿದ್ದನೊ?
ಅಥವಾ ಜಾರಿ ಬಿದ್ದನೋ? ಎನ್ನುವಲ್ಲಿ

ಎಂದು ಪ್ರಾರಂಭವಾಗುವ ಕವಿತೆಯು ಬಾರಿನಲ್ಲಿ ಸ್ನೇಹಿತರ ನಡುವೆ ನಡೆಯುವ ಚಟುವಟಿಕೆಗಳನ್ನು ವಿನೋದಪೂರ್ಣವಾಗಿ ಕಟ್ಟಿಕೊಡುತ್ತದೆ.

ನಾಟಕವು ಸಾಹಿತ್ಯದ ಇನ್ನೊಂದು ಪ್ರಮುಖ ಪ್ರಕಾರವಾಗಿದೆ. ಗಂಭೀರ ಅಧ್ಯಯನವನ್ನು ಬಯಸುವ ಕನ್ನಡದ ನಾಟಕಗಳಲ್ಲಿ ಹೋಟೆಲಿನ ಪ್ರತಿನಿಧೀಕರಣವು ಅಷ್ಟಾಗಿ ಕಾಣಸಿಗುವುದಿಲ್ಲ. ಆದರೆ ಕೆಲವು ಸಾಮಾಜಿಕ ನಾಟಕಗಳಲ್ಲಿ ಸನ್ನಿವೇಶ ನಿರ್ಮಾಣದ ಭಾಗವಾಗಿ ಹೋಟೆಲಿನ ಚಿತ್ರಣ ಗೊಂಡಿರುವುದುಂಟು.

ಮುಂಬಯಿ, ಹುಬ್ಬಳಿ ಮುಂತಾದೆಡೆಗಳಲ್ಲಿ ಹೋಟೆಲು ಉದ್ಯಮಿಯಾಗಿ ಬೆಳೆದ ವಿಠ್ಠಲ ವೆಂಕಟೇಶ ಕಾಮತ ಅವರ ಮರಾಠಿಯಲ್ಲಿ ರಚಿಸಿದ 'ಇಡ್ಲಿ, ಆರ್ಕಿಡ್ ಮತ್ತು ಆತ್ಮಬಲ' ಎಂಬ ಆತ್ಮಕಥನಾತ್ಮಕ ಮಾದರಿಯ ಕೃತಿಯನ್ನು ಅಕ್ಷತಾ ದೇಶಪಾಂಡೆಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಸಾಮಾನ್ಯ ಬಾಲಕನೊಬ್ಬನು ತನ್ನ ಆತ್ಮಬಲದಿಂದಾಗಿ ಮಹಾನ್ ಹೋಟೆಲು ಉದ್ಯಮಿಯಾಗಿ ರೂಪುಗೊಂಡ ಬಗೆಯನ್ನು ರೋಚಕವಾಗಿ ನಿರೂಪಿಸುವ ಕೃತಿಯಿದು.

ಹೀಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದು ಅನಿವಾರ್ಯ ಘಟಕವಾಗಿ ಹೋಟೆಲು ಸ್ಥಾಪನೆಗೊಂಡಿದೆ. ಸಣ್ಣಕಥೆ-ಕಾದಂಬರಿ, ಕಾವ್ಯ, ನಾಟಕ, ಲಲಿತಪ್ರಬಂಧ, ಪ್ರವಾಸಕಥನ, ಅಂಕಣ ಸಾಹಿತ್ಯ, ಸಂಪಾದಕೀಯ ಬರಹ ಮುಂತಾದ ಬಹುಪಾಲು ಪ್ರಕಾರಗಳಲ್ಲೂ ಹೋಟೆಲಿನ ಪ್ರತಿನಿಧೀಕರಣವು ವಿಭಿನ್ನ ಮಾದರಿಗಳಲ್ಲಿ ಕಂಡುಬರುತ್ತದೆ. ಇವಲ್ಲದೆ ಹೋಟೆಲು ಉದ್ಯಮಿಗಳ ಜೀವನಚರಿತ್ರೆ ಹಾಗೂ ಅಧುನಿಕತೆಗಳು ರಚನೆಗೊಂಡಿವೆ. ಹೋಟೆಲು ಉದ್ಯಮಿಗಳಿಗೆ ಅಭಿನಂದನಾ ಗ್ರಂಥಗಳು ಸಮರ್ಪಿತವಾಗಿವೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೇಳುವುದಾದರೆ ವಿವಿಧ ಪ್ರಕಾರಗಳ ಪೈಕಿ ಲಲಿತಪ್ರಬಂಧ, ಹರಟೆ, ಅಂಕಣಸಾಹಿತ್ಯ, ಸಂಪಾದಕೀಯ ಬರಹಗಳಂತ ಪ್ರಕಾರಗಳಲ್ಲಿ ಹೋಟೆಲು ಅಥವಾ ಹೋಟೆಲಿನ ಆಹಾರಪದಾರ್ಥಗಳು ಕೇಂದ್ರ ವಸ್ತುವಾಗಿ ಚಿತ್ರಣಗೊಂಡಿರುವುದು ವಿಶೇಷವೆನಿಸುತ್ತದೆ. ಇಂತಹ ಪ್ರಕಾರಗಳಲ್ಲಿ ತಿಳಿಹಾಸ್ಯ ಭರಿತ ವೈಚಾರಿಕ ದೃಷ್ಟಿಕೋನದ ಬರಹಗಳ ರೂಪದಲ್ಲಿ ಹೋಟೆಲು ಪ್ರತಿನಿಧೀಕರಣಗೊಂಡಿದೆ. ಅದೇ ರೀತಿ ಪ್ರವಾಸ ಕಥನಗಳಲ್ಲಿ ಪ್ರಾಸಂಗಿಕವಾಗಿ ಹೋಟೆಲು ಸ್ಥಾನ ಪಡೆದಿದೆ. ದೇಶ-ವಿದೇಶಗಳ ವಿವಿಧ ಊರುಗಳಿಗೆ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಲೇಖಕರು ತಾವು ತಂಗಿದ್ದ, ಆಹಾರ ಸೇವಿಸಿದ್ದ ಅಥವಾ ನೋಡಿದ ಹೋಟೆಲುಗಳ ಮಾಹಿತಿಗಳನ್ನು ದಾಖಲಿಸುತ್ತಾರೆ.

ಮೇಲಿನ ಸಮೀಕ್ಷೆಯನ್ನು ಗಮನಿಸಿದರೆ ಸಾಹಿತ್ಯ ಮತ್ತು ಹೋಟೆಲಿನ ಅಂತರ್‌ಸಂಬಂಧಗಳು ಕೆಲವು ಕಥನಸಾಹಿತ್ಯಕಷ್ಟೇ ಸೀಮಿತಗೊಳ್ಳದೆ ಇತರ ಪ್ರಕಾರಗಳಲ್ಲೂ ವಿವಿಧ ಬಗೆಗಳಲ್ಲಿ ಕಾಣಿಸಿ ಕೊಂಡಿರುವುದು ವ್ಯಕ್ತವಾಗುತ್ತದೆ. ಆದರೆ ಸಣ್ಣಕಥೆ-ಕಾದಂಬರಿಗಳಂತಹ ಕಥನಸಾಹಿತ್ಯ ಪ್ರಕಾರಗಳಲ್ಲಿ ಕಾಣಸಿಗುವ ಸಾಹಿತ್ಯ ಮತ್ತು ಹೋಟೆಲು ಅಂತರ್‌ಸಂಬಂಧದ ಸ್ವರೂಪವು ವಿಶಿಷ್ಟವಾಗಿರುತ್ತದೆ. ಕನ್ನಡದ ಸಣ್ಣಕಥೆ-ಕಾದಂಬರಿಗಳಲ್ಲಿ ಪರಿಕಲ್ಪನಾತ್ಮಕ ನೆಲೆಗಳಲ್ಲಿ ಹೋಟೆಲು ಪ್ರತಿನಿಧೀಕರಣಗೊಂಡಿರುವುದನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಕನ್ನಡ ಸಣ್ಣಕಥೆ-ಕಾದಂಬರಿಗಳಲ್ಲಿ ಹೋಟೆಲಿನ ಪ್ರತಿನಿಧೀಕರಣದ ಪರಿಕಲ್ಪನಾತ್ಮಕ ನೆಲೆಗಳನ್ನು ಶೋಧಿಸುವ ಪ್ರಯತ್ನವನ್ನು ಮುಂದಿನ ಅಧ್ಯಾಯಗಳಲ್ಲಿ ನಡೆಸಲಾಗಿದೆ.

ಅಧ್ಯಾಯ : ಮೂರು

# ಕನ್ನಡ ಕಥನಸಾಹಿತ್ಯದಲ್ಲಿ ಆಧುನೀಕರಣ ಪ್ರಕ್ರಿಯೆಯ ಭಾಗವಾಗಿ ಹೋಟೆಲಿನ ಚಿತ್ರಣ

೩.೧. ಆಧುನೀಕರಣ ಪ್ರಕ್ರಿಯೆಯ ಪ್ರತೀಕವಾಗಿ ಹೋಟೆಲುಗಳು

೩.೨. ಸಾಂಪ್ರದಾಯಿಕ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಸಂಘರ್ಷ

ಅಧ್ಯಾಯ : ಮೂರು

# ಕನ್ನಡ ಕಥನಸಾಹಿತ್ಯದಲ್ಲಿ ಆಧುನೀಕರಣ ಪ್ರಕ್ರಿಯೆಯ ಭಾಗವಾಗಿ ಹೋಟೆಲಿನ ಚಿತ್ರಣ

**ಪೀಠಿಕೆ**

ಪರಂಪರಾಗತ ಸಾಮಾಜಿಕ ವ್ಯವಸ್ಥೆಯೊಂದು ಆಧುನಿಕ ಮೌಲ್ಯಗಳಿಗೆ ಮುಖಾಮುಖಿಯಾದಾಗ ಪಲ್ಲಟಗೊಳ್ಳುವ ಕ್ರಮ ಕನ್ನಡ ಕಥನಸಾಹಿತ್ಯದಲ್ಲಿ ಒಂದು ಮುಖ್ಯವಸ್ತು. ವೈಚಾರಿಕ ಪರಂಪರೆಯೊಂದು ನಿಧಾನವಾಗಿ ಕಣ್ಣು ತೆರೆಯುತ್ತಿದ್ದ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸಣ್ಣಕಥೆ-ಕಾದಂಬರಿಗಳು ಬೆಳೆದುಬಂದವು. ವಿಶೇಷವಾಗಿ ಕನ್ನಡದ ಸಣ್ಣಕಥೆ-ಕಾದಂಬರಿಗಳು ಆಯಾ ಭೌಗೋಳಿಕ ಪರಿಸರದ ಪ್ರಾದೇಶಿಕತೆಯನ್ನು ಮೈಗೂಡಿಸಿಕೊಂಡು ಬೆಳೆದುಬಂದವು. ಪ್ರಾದೇಶಿಕ ಸಣ್ಣಕತೆ-ಕಾದಂಬರಿಗಳು ಒಟ್ಟು ತೃತೀಯ ಜಗತ್ತಿನ ಸಾಮಾಜಿಕ ಸ್ಥಿತ್ಯಂತರಗಳ ಕೆಲವು ಮೂಲಮಾದರಿಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತವೆ. ಕನ್ನಡದ ಕೆಲವು ಸಣ್ಣಕಥೆ-ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ ಪ್ರಧಾನವಸ್ತುವಾಗಿದೆ. ವಸಾಹತುಶಾಹಿ ತಂದ ಹೊಸ ಮೌಲ್ಯಗಳಿಗೆ ನಮ್ಮ ಸಮಾಜದ ಪ್ರತಿಕ್ರಿಯೆ ಏಕರೀತಿಯಾಗಿರಲಿಲ್ಲ. ನಮ್ಮ ಬಹುಮುಖಿ ಸಂಸ್ಕೃತಿಯು ವ್ಯಕ್ತಪಡಿಸಿದ ಪ್ರತಿಕ್ರಿಯೆಯೂ ಬಹುರೂಪಿಯಾಗಿತ್ತು. ಕೆಲವು ಬದಲಾವಣೆಗಳು ನಮ್ಮನ್ನು ತಲ್ಲಣಗೊಳಿಸುತ್ತವೆ. ಮತ್ತೆ ಕೆಲವು ಒಂದು ಬಗೆಯ ವಿಮೋಚನೆಯ ಭಾವವನ್ನು ಉಂಟುಮಾಡುತ್ತವೆ. ಕೆಲವನ್ನು ವಿರೋಧಿಸಿದರೆ ಮತ್ತೆ ಕೆಲವೊಂದಿಗೆ ರಾಜಿ ಮಾಡಿಕೊಳ್ಳಲಾಯಿತು. ಕೆಲವನ್ನು ಸ್ವಾಗತಿಸಿದರೆ ಮತ್ತೆ ಕೆಲವನ್ನು ಉಗ್ರವಾಗಿ ಪ್ರತಿಭಟಿಸಲಾಯಿತು. ಸ್ವಾಗತ-ರಾಜಿ-ಸಂಘರ್ಷಗಳಲ್ಲಿ ನಮ್ಮ ಕಥೆ-ಕಾದಂಬರಿಕಾರರು ಈ ಆಧುನಿಕ ಪ್ರಕ್ರಿಯೆಯನ್ನು ಕಥಾನಕವಾಗಿ ಪರಿವರ್ತಿಸಿದ್ದಾರೆ. ಸ್ವಕೀಯ ಮತ್ತು ಪರಕೀಯ ಸಂಸ್ಕೃತಿಗಳ ಮುಖಾಮುಖಿಯ ಸ್ವರೂಪ ಈ ಆಧುನಿಕತೆಯ ಒಂದು ಮುಖವಾಗಿದೆ. ನಮಗೆ ಆಧುನಿಕತೆ ಬಂದದ್ದು ನಮ್ಮ ಅನಿವಾರ್ಯತೆಯಿಂದಲ್ಲ. ಆದರೆ, ನಮ್ಮ

ವಾಸ್ತವತಾವಾದಿ ಪ್ರೇರಣೆಗಳಿಗೆ ಮೂಲ ಈ ಆಧುನಿಕತೆಯ ಪ್ರವೇಶದಿಂದಾಗಿ ಹುಟ್ಟಿದ ಹೊಸ ಪರಿಸ್ಥಿತಿಗಳು ನಮ್ಮನ್ನು ಸ್ಪಷ್ಟಪಡಿಸಿಕೊಳ್ಳುವ ಮಾನಸಿಕ ಅನಿವಾರ್ಯತೆ, ವಸಾಹತುಶಾಹಿ ತಂತ್ರಗಾರಿಕೆ, ಸುಧಾರಣೆ ಮತ್ತು ಆಕ್ರಮಣಗಳ ಮೂಲಕ ಪ್ರವೇಶವಾದ ಆಧುನಿಕತೆ ನಮ್ಮ ಸಾಮಾಜಿಕ ಸಂರಚನೆಗಳ ಮೇಲೆ, ನಮ್ಮ ಪರಂಪರಾಗತ ಮೌಲ್ಯಗಳ ಮೇಲೆ ಉಂಟುಮಾಡಿದ ಆಘಾತದ ಸ್ವರೂಪ ಕೂಡ ಸಂಕೀರ್ಣವಾಗಿದೆ. ಇತಿಹಾಸದುದ್ದಕ್ಕೂ ಪರಕೀಯ ಆಕ್ರಮಣಕ್ಕೆ ತುತ್ತಾಗುತ್ತಲೇ ಬಂದಿರುವ ಭಾರತೀಯ ಸಮಾಜ ಹಿಂದೆಂದೂ ಈ ಬಗೆಯ ಆಘಾತವನ್ನು ಎದುರಿಸಿರಲಿಲ್ಲ. ಇತರ ಸಂಸ್ಕೃತಿಗಳು ಹಿಂದೂ ಸಂಸ್ಕೃತಿಯೊಡನೆ ಒಂದು ಬಗೆಯ ಸಮಾನ ದೂರವನ್ನು ಉಳಿಸಿಕೊಂಡೇ ಬಂದಿದ್ದವು. ಕೆಲವು ಸಂದರ್ಭಗಳಲ್ಲಿ ದೇಶೀಯ ಸಂಸ್ಕೃತಿಗಳು ಮತ್ತು ವಿದೇಶಿಯ ಸಂಸ್ಕೃತಿಗಳು ಪರಸ್ಪರ ಪ್ರಭಾವಕ್ಕೆ ಒಳಗಾಗಿದ್ದರೂ ಅದು ಒಂದು ಸಮಾಜ ವ್ಯವಸ್ಥೆಯನ್ನು ಅಲುಗಾಡಿಸುವಷ್ಟು ಪ್ರಬಲವಾಗಿರಲಿಲ್ಲ, ಅರ್ಥಪೂರ್ಣ ಸಂಘರ್ಷವಾಗಿರಲಿಲ್ಲ ಎಂಬುದು ಟಿ.ಪಿ. ಅಶೋಕ ಅವರ ಅಭಿಮತವಾಗಿದೆ(ಅಶೋಕ ಟಿ.ಪಿ., ೨೦೦೪, ಪು.೮೬).



ಒಟ್ಟಾರೆ ಸಾಹಿತ್ಯ ಚರಿತ್ರೆಯನ್ನು ಪ್ರಾಚೀನ ಸಾಹಿತ್ಯ, ಮಧ್ಯಕಾಲೀನ ಸಾಹಿತ್ಯ ಮತ್ತು ಆಧುನಿಕ ಸಾಹಿತ್ಯ ಎಂಬುದಾಗಿ ಕಾಲಘಟ್ಟವನ್ನಾಧರಿಸಿ ವಿಭಾಗ ಮಾಡಿಕೊಳ್ಳಲಾಗಿದೆ. ಮೇಲ್ನೋಟಕ್ಕೆ ಇದು ಕೇವಲ ಕಾಲಘಟ್ಟವನ್ನಷ್ಟೇ ಆಧರಿಸಿದ ವಿಭಾಗಕ್ರಮ ಎಂದು ಭಾಸವಾಗಬಹುದು. ಆದರೆ ಹಾಗೆ ತಿಳಿಯುವುದು ತಪ್ಪಾಗುತ್ತದೆ. ಕಾಲಘಟ್ಟಗಳ ಜೊತೆಗೆ ಆಯಾಯ ಕಾಲಘಟ್ಟಗಳ ಸಾಹಿತ್ಯ ಕೃತಿಗಳಲ್ಲಿನ ವಿಶಿಷ್ಟ ಲಕ್ಷಣಗಳು ಈ ವಿಭಾಗ ಕ್ರಮಕ್ಕೆ ಕಾರಣಗಳಾಗುತ್ತವೆ. ಪ್ರಸ್ತುತ ಆಧುನಿಕ ಸಾಹಿತ್ಯವೆಂಬ ವಿಭಾಗವನ್ನು ಇಲ್ಲಿ ಉದಾಹರಿಸಬಹುದಾಗಿದೆ. ಕಾಲಘಟ್ಟಕ್ಕೆ ತಕ್ಕಂತೆ ವಸ್ತು, ಆಶಯ, ರೂಪ, ಭಾಷೆ, ತಂತ್ರ ಅದೇ ರೀತಿ ಸಾಹಿತ್ಯಿಕ ಲಕ್ಷಣ, ಪರಿಕರಗಳಲ್ಲೂ ಆಧುನಿಕತೆ ಕಾಣಿಸಿಕೊಂಡಿರುವುದರಿಂದಲೇ ಈ ಕಾಲಘಟ್ಟದ ಸಾಹಿತ್ಯವನ್ನು ನಾವು ಆಧುನಿಕ ಸಾಹಿತ್ಯವೆಂದು ಪರಿಗಣಿಸುತ್ತೇವೆ. ಅದರಂತೆ ದವಾಖಾನೆ, ರೈಲು, ರೈಲು ನಿಲ್ದಾಣ, ವಿಮಾನ, ವಿಮಾನ ನಿಲ್ದಾಣ, ಬಸ್ಸು, ಬಸ್ಸು ನಿಲ್ದಾಣ, ಆರಕ್ಷಕ ಠಾಣೆ, ನ್ಯಾಯಾಲಯ, ಕಾರಾಗೃಹ, ಮುದ್ರಣಾಲಯ, ಹಡಗು, ಹಡಗು ತಂಗುದಾಣ, ತಹಶೀಲ್ ಕಚೇರಿ, ಅಂಚೆ ಕಚೇರಿ, ರೇಡಿಯೋ, ಆಕಾಶವಾಣಿ, ದೂರದರ್ಶನ, ದೂರದರ್ಶನ ಕೇಂದ್ರ, ಶಿಕ್ಷಣ ಪದ್ಧತಿ-ಶಿಕ್ಷಣ ಸಂಸ್ಥೆಗಳು, ಹೋಟೆಲು ಮುಂತಾದ ಆಧುನಿಕತೆಯ ಘಟಕಗಳು ಸಾಹಿತ್ಯ ಪರಿಕರಗಳಾಗಿ ಆಧುನಿಕ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುತ್ತವೆ. ಕೆಲವು ಸಾಹಿತ್ಯ ಪ್ರಕಾರಗಳಲ್ಲಿ ಕೇಂದ್ರವಸ್ತುವಾಗಿ, ಇನ್ನೂ ಕೆಲವು ಪ್ರಕಾರಗಳಲ್ಲಿ ಸನ್ನಿವೇಶ ನಿರ್ಮಾಣದ ಘಟಕವಾಗಿ ಇಂತಹ ಪರಿಕರಗಳು ಸ್ಥಾನ ಪಡೆದಿರುತ್ತವೆ. ಸಾಹಿತ್ಯವನ್ನು ಆಧುನಿಕ ಗೊಳಿಸುವಲ್ಲಿ ಇವುಗಳ ಪಾತ್ರ ಮಹತ್ವದ್ದಾಗಿದೆ. ಇವುಗಳ ಪೈಕಿ ಹೋಟೆಲು ಆಧುನಿಕ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿಶೇಷ ಪ್ರಾತಿನಿಧ್ಯವನ್ನು ಪಡೆದುಕೊಂಡಿದೆ. ಸಣ್ಣಕಥೆ-ಕಾದಂಬರಿಗಳಂತ

ಕಥನಸಾಹಿತ್ಯ ಪ್ರಕಾರಗಳಲ್ಲಿ ಹೋಟೆಲು ಅನನ್ಯ ಭೂಮಿಕೆಯನ್ನು ನಿರ್ವಹಿಸುತ್ತದೆ. ಸಾರ್ವಜನಿಕ ವಲಯದಲ್ಲಿ ಆಧುನಿಕತೆಯ ಪ್ರತೀಕವಾಗಿ ಕಂಡುಬರುವ ಹೋಟೆಲು ಸಾಹಿತ್ಯವನ್ನು ಆಧುನೀಕರಣ ಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಕನ್ನಡ ಕಥನಸಾಹಿತ್ಯದ ಆರಂಭಿಕ ಘಟ್ಟದಿಂದಲೂ ಹೋಟೆಲಿನ ಪ್ರತಿನಿಧೀಕರಣ ಎದ್ದುಕಾಣುತ್ತದೆ. ಮೊದಲಘಟ್ಟದ ಸಣ್ಣಕಥೆಯಾದ ಪಂಜೆ ಮಂಗೇಶರಾಯರ 'ಕಮಲಪುರದ ಹೋಟ್ಲಿನಲ್ಲಿ' ಎಂಬುದು ಹೋಟೆಲಿನ ಶೀರ್ಷಿಕೆಯನ್ನು ಹೊಂದಿದ್ದು ಇಡೀ ಕಥೆಗೆ ಹೋಟೆಲಿನ ಸನ್ನಿವೇಶ ನಿರ್ಮಾಣವಿದೆ. ಅದೇ ರೀತಿ ಆರಂಭಘಟ್ಟದ ಕಾದಂಬರಿಗಳಲ್ಲೂ ಸನ್ನಿವೇಶ ನಿರ್ಮಾಣಕ್ಕೆ ಪೂರಕವಾಗಿ ಕಾಣಿಸಿಕೊಂಡ ಹೋಟೆಲು ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯ ವೇಳೆಗೆ ಆಶಯ ಮತ್ತು ಸಾಂಸ್ಕೃತಿಕ ಸಂಘರ್ಷವನ್ನು ಪ್ರತಿಪಾದಿಸುವ ಘಟಕವಾಗಿ ಬಳಕೆಗೊಳ್ಳತೊಡಗಿತು.

### ೩.೧. ಆಧುನೀಕರಣ ಪ್ರಕ್ರಿಯೆಯ ಪ್ರತೀಕವಾಗಿ ಹೋಟೆಲುಗಳು

ಮೊದಲಘಟ್ಟದ ಸಣ್ಣಕಥೆ ಪಂಜೆ ಮಂಗೇಶರಾಯರ 'ಕಮಲಪುರದ ಹೋಟ್ಲಿನಲ್ಲಿ' ಎಂಬುದು ಆಧುನಿಕತೆಯನ್ನು ಹೋಟೆಲಿನ ಹೆಸರಿನಿಂದಲೇ ಚಿತ್ರಿಸಿರುವ ವಿಶಿಷ್ಟವಾದ ಕಥೆಯಾಗಿದೆ. ವಸ್ತು, ಸನ್ನಿವೇಶ ನಿರ್ಮಾಣ, ಪಾತ್ರ ಚಿತ್ರಣ, ಭಾಷೆ, ಆಶಯ ಆಧುನಿಕತೆಯ ಭಾಗವಾಗಿ ಹೋಟೆಲಿನಲ್ಲಿ ಇವುಗಳು ಚಿತ್ರಣಗೊಂಡಿರುತ್ತವೆ. 'ಕಮಲಪುರದ ಹೋಟ್ಲಿನಲ್ಲಿ' ವಸ್ತುವನ್ನು ಕಥೆಗಾರರು ಆಧುನಿಕ ಬದುಕಿನ ಚಿತ್ರಣದ ಮೂಲಕ ಮುಖ್ಯವಾಗಿಸಿದ್ದಾರೆ. ಕಮಲಪುರದ ಬಂದರಿನ ಹೋಟೆಲಿನ ಯಜಮಾನ ಅಯ್ಯಂಗಾರರ ಆಧುನಿಕ ಬದುಕಿನ ರೀತಿ-ರಿವಾಜು, ಸಂಭ್ರಮ-ಸಂಕಷ್ಟ, ನೆಮ್ಮದಿ-ಉದ್ವೇಗ, ಅಡ್ಡಿ-ಆತಂಕ, ಬದುಕಿನ ಸಮಸ್ಯೆ ಸವಾಲುಗಳನ್ನು ಲೇಖಕರು ಆಧುನಿಕವಾಗಿ ಚಿತ್ರಿಸಿದ್ದಾರೆ.

ವ್ಯಾಸರಾಯ ಬಲ್ಲಾಳರ 'ಎರಡು ಧ್ರುವ' ಕಥೆಯು ಹೋಟೆಲಿನ ಚಿತ್ರಣದ ಮೂಲಕ ಆಧುನಿಕವಾದ ಹಲವು ಪರಿಕಲ್ಪನೆ ಹಾಗೂ ಪರಿಕರಗಳನ್ನು ಬಳಸಿಕೊಂಡಿದೆ. ನಗರದ ಹೋಟೆಲೊಂದರಲ್ಲಿ ಮಾಧವ ಮತ್ತು ಪಲ್ಲವಿ ಕೋಕೊ ಕೋಲಾ ಹೀರುತ್ತಾ ಪ್ರೇಮಸಲ್ಲಾಪದಲ್ಲಿ ತೊಡಗಿರುತ್ತಾರೆ. ಇಲ್ಲಿ ಗಂಡು ಮತ್ತು ಹೆಣ್ಣು ತಮ್ಮ ಪ್ರೇಮಭಾವಗಳನ್ನು ವ್ಯಕ್ತಪಡಿಸುವ ಸ್ಥಳವೆಂದರೆ ಆಧುನಿಕತೆಯ ಪ್ರತೀಕವಾದ ಹೋಟೆಲು, ಅದರಲ್ಲೂ ಆಧುನಿಕ ಶೈಲಿಯ ಪಾನೀಯವನ್ನು ಸೇವಿಸುತ್ತಾ ಅವರು ಪ್ರೇಮಾಭಿವ್ಯಕ್ತಿಯಲ್ಲಿ ತೊಡಗಿರುತ್ತಾರೆ. ಇದರಂತೆ ನಾಗರಿಕ ಸಮುದಾಯದಲ್ಲಿನ ಆಧುನಿಕ ಮನೋಭಾವಕ್ಕೆ ತಕ್ಕಂತೆ ಆಧುನಿಕವಾದ ಸನ್ನಿವೇಶ ನಿರ್ಮಾಣ ಕೂಡ ಕಥನಸಾಹಿತ್ಯದಲ್ಲಿ ನಡೆಯುತ್ತಿರುತ್ತದೆ. ಇಲ್ಲಿ ಆಫೀಸು, ಟೆಲಿಫೋನ್ ಇವುಗಳೊಂದಿಗೆ ಆಧುನಿಕ ಸಂಪರ್ಕವಾಗಿ ಹೋಟೆಲು ನಿರೂಪಿತವಾಗಿದೆ. ಮಾಧವನ ಕುಟುಂಬದ ದುಃಖದ ಸಂಗತಿಗಳನ್ನು ಮರೆಮಾಚಲು ಸಹಕಾರಿಯಾಗುವ ಘಟಕವಾಗಿ ಹೋಟೆಲು ಇಲ್ಲಿ ಚಿತ್ರಿತವಾಗಿದೆ.

'ಸಂಪಿಗೆಯ ಹೂವು' ವ್ಯಾಸರಾಯ ಬಲ್ಲಾಳರ ಪ್ರಮುಖ ಕಥೆಗಳಲ್ಲಿ ಒಂದಾಗಿದೆ. ಆಧುನಿಕತೆಯ ಪ್ರತೀಕವಾಗಿರುವ ಆಸ್ಪತ್ರೆ, ಕಾಲೇಜು ಇವುಗಳ ಸಾಲಿನಲ್ಲಿ ಹೋಟೆಲು ನಗರ ಪ್ರದೇಶದಲ್ಲಿ ಸ್ಥಾನ ಪಡೆದುಕೊಂಡಿರುತ್ತದೆ. ಯಶೋಧ ಹಾಗೂ ಪ್ರಭಾಕರನ 'ತಾಂಜ ಉಪಾಹಾರ ಮಂದಿರ'ದಲ್ಲಿ ಕಾಫಿ ಹೀರುತ್ತಾ ಪರೀಕ್ಷೆಯ ಉತ್ತಮ ಫಲಿತಾಂಶದ ಕ್ಷಣಗಳನ್ನು ಕಳೆಯುವ ಚಿತ್ರಣವಿದೆ. ಯಶೋಧ ಧೈರ್ಯಗುಂದಿದಾಗ ಮೈದುನನಾದ ಪ್ರಭಾಕರನು ಆಕೆಯ ಮನಪರಿವರ್ತನೆ ಮಾಡುವುದು ಇದೇ ಉಪಾಹಾರ ಮಂದಿರದಲ್ಲಿ. ಸಂಪ್ರದಾಯಸ್ಥ ಮನಸ್ಸಿಗೆ ಆಧುನಿಕ ವೈಚಾರಿಕ ಮನೋಭಾವನೆಗಳು ಗರಿಗದರುವ ಘಟಕವಾಗಿ ಉಪಾಹಾರ ಮಂದಿರ ಚಿತ್ರಿತವಾಗಿದೆ.

ಇದೇ ಲೇಖಕರ 'ಬೆಂಕಿಯ ನಾಲಿಗೆ' ಪ್ರಮುಖ ಕಥೆಗಳ ಸಾಲಿನಲ್ಲಿ ನಿಲ್ಲುವಂತದ್ದಾಗಿದೆ. ಆಫೀಸಿನ ಒತ್ತಡ, ಕೌಟುಂಬಿಕ ಕಲಹ, ನೌಕರಸ್ಥರ ಮನಸ್ಸಿನ ತಲ್ಲಣಗಳು ಇವೆಲ್ಲವುಗಳಿಗೆ ಆಧುನಿಕ ಸಂದರ್ಭದಲ್ಲಿ 'ರೆಸ್ಟೋರೆಂಟ್' ಶಾಂತತೆಯ ತಾಣವಾಗುವ ಬಗೆಯನ್ನು ಈ ಕಥೆಯಲ್ಲಿ ಚಿತ್ರಿಸಲಾಗಿದೆ.

ಅಮರೇಶ ನುಗಡೋಣಿ ಅವರ 'ಏ ದಿಲ್ ಮಾಂಗೆ ಮೋರ್' ಎಂಬ ಕಥೆಯಲ್ಲೂ ಆಧುನೀಕರಣ ಪ್ರಕ್ರಿಯೆಯ ಪ್ರತೀಕವಾಗಿ ಹೋಟೆಲು ಚಿತ್ರಿತವಾಗಿದೆ. ಆಧುನಿಕ ಮಹಿಳಾ ಸಂವೇದನೆಗೆ ಪುಷ್ಟಿ ಕೊಡುವ ನೆಲೆಯಲ್ಲಿ ಹೋಟೆಲು ಮಾಲೀಕಳಾದ ಹುಸೇನವ್ವ ಈ ಕಥೆಯಲ್ಲಿ ಚಿತ್ರಿತಳಾಗಿದ್ದಾಳೆ. ಹುಸೇನವ್ವನ ಹೋಟೆಲಿನಲ್ಲಿ ಆಧುನಿಕತೆಯನ್ನು ಪ್ರತಿನಿಧಿಸುವ ದಿನಪತ್ರಿಕೆ, ದೂರದರ್ಶನ, ನೋಟ್‌ಬುಕ್, ಕ್ರಿಕೆಟ್ ಆಟದ ಪರಿಕರಗಳು, ಸೈಕಲ್ಲು, ಬೈಕು, ಪೆಪ್ಸಿ ಬಾಟಲುಗಳು ಇರುವುದನ್ನು ಕಥೆಯಲ್ಲಿ ಪ್ರಸ್ತಾಪಿಸಲಾಗಿದೆ. ಅದೇ ರೀತಿ ಮಾಲೀಕರು ಮತ್ತು ಗ್ರಾಹಕರು ಬಳಸುವ ಆಧುನಿಕ ಶೈಲಿಯ ಭಾಷೆಯ ಬಗೆಗೂ ಉಲ್ಲೇಖಿಸಲಾಗಿದೆ. ಟೇಬಲ್, ಬೆಂಚು, ಫೋನ್, ಫ್ರಿಜ್ ಮುಂತಾದ ಆಧುನಿಕ ಸಲಕರಣೆಗಳನ್ನು ಹುಸೇನವ್ವನ ಹೋಟೆಲು ಹೊಂದಿತ್ತು. ವಶಾಹತುಶಾಹಿಯ ಪ್ರತಿರೂಪವಾಗಿರುವ ಕ್ರಿಕೆಟ್, ಮಲ್ಟಿನ್ಯಾಷನಲ್ ಕಂಪನಿ ಪಾನೀಯಗಳಂತಹ ಆಧುನಿಕ ವಿಷಯಗಳಿಗೂ ಹೋಟೆಲು ಇಂಬು ಕೊಟ್ಟಿತ್ತು. ದೃಶ್ಯ-ಶ್ರವ್ಯ ಮಾಧ್ಯಮಗಳಲ್ಲಿ ಬಳಸುವ ರನ್ನು, ರಿಕಾರ್ಡ್, ರನ್‌ಔಟ್, ವೈಡ್, ಬಾಲು, ಬ್ಯಾಟ್, ಸಿಕ್ಸ್, ಆಫ್‌ಸೈಡ್, ಲೆಗ್‌ಸೈಡ್, ನಾಟ್‌ಔಟ್, ಬೋಲ್ಡ್ ಮುಂತಾದ ತೀರಾ ಆಧುನಿಕವೆನ್ನಬಹುದಾದ ಕ್ರಿಕೆಟ್ ಪರಿಭಾಷೆಗಳು ಗ್ರಾಮೀಣ ಪ್ರದೇಶದ ಹುಸೇನವ್ವನ ಹೋಟೆಲಿನ ದೈನಂದಿನ ಭಾಷೆಯಲ್ಲಿ ಪ್ರವೇಶ ಪಡೆದಿವೆ. ಚುನಾಯಿತ ಜನಪ್ರತಿನಿಧಿಗಳ ಭಾಷಣ ಕಲೆ, ಊರಿಗೆ ಬರುವ ಬಸ್ಸಿನ ಕುರಿತಾದ ಮಾತುಕತೆಗಳು ಹೋಟೆಲಿನಲ್ಲಿ ಆಧುನಿಕ ಪರಿಸರವನ್ನು ನಿರ್ಮಾಣ ಮಾಡುತ್ತವೆ. ಆಧುನಿಕ ಕ್ರೀಡೆಯಾದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಆಡುವ ವೇಳೆ ಅದರ ಫಲಿತಾಂಶದ ಬಗೆಗೆ ಹೋಟೆಲಿನ ಗ್ರಾಹಕರು ಕಟ್ಟುವ ಬೆಟ್ಟಿಂಗ್

ಕೋಮುಗಲಭೆಗೆ ಎಡೆ ಮಾಡಿಕೊಡುವುದನ್ನೂ ಈ ಕಥೆಯಲ್ಲಿ ಚಿತ್ರಿಸಲಾಗಿದೆ. ಊರಲ್ಲಿ ಯುವಕ, ಯುವತಿಯರಲ್ಲಿ ಸಂಭವಿಸುವ ಅನೈತಿಕ ಸಂಬಂಧಗಳು ಆಧುನಿಕ ಮನಸ್ಸಿನ ಹೋಟೆಲು ಮಾಲೀಕಳಾದ ಹುಸೇನವ್ವನ ಸಮ್ಮುಖದಲ್ಲಿ ಬಗೆಹರಿಯುತ್ತಿದ್ದವು.

ಇದೇ ಲೇಖಕರ 'ಕಣ್ಣು ಮುಕ್ಕಾದ ಬೀಜಗಳು' ಎಂಬ ಇನ್ನೊಂದು ಕಥೆಯಲ್ಲಿ ಬರುವ ಶೆಟ್ಟಿ ಹೋಟೆಲು ಆಧುನಿಕ ವಿಚಾರಗಳ ಚಿಂತನೆಯ ತಾಣವಾಗಿ ಗಮನಸೆಳೆಯುತ್ತದೆ. ಆಧುನಿಕ ಕೃಷಿ ತಂತ್ರಜ್ಞಾನಗಳ ಕುರಿತು ಹೋಟೆಲಿನಲ್ಲಿ ಚರ್ಚೆ ನಡೆಯುತ್ತದೆ. ಕೂಲಿ ಕಾರ್ಮಿಕರ ಸಮಸ್ಯೆಯಿಂದ ಬೇಸತ್ತ ಜಮೀನ್ದಾರನು ಆಧುನಿಕ ಭತ್ತ ಕಟಾವಿನ ಯಂತ್ರ ತರಿಸಿಕೊಂಡು ಕಟಾವು ಕಾರ್ಯ ನಡೆಸಿದ ಬಗೆಗೆ ಹೋಟೆಲಿನ ಗ್ರಾಹಕರು ಪರಸ್ಪರ ಚರ್ಚಿಸುತ್ತಾರೆ.

ಚದುರಂಗರ '೧೯೪೭' ಎಂಬ ಕಥೆಯಲ್ಲಿ ಹೊಸ ಶಿಕ್ಷಣ ಪಡೆದ ಯುವಕರು ಹೋಟೆಲು ಗ್ರಾಹಕರಾಗುವ ಚಿತ್ರಣವಿದೆ. ದುಡಿಯುವವರ, ಕೂಲಿಕಾರರ, ಸ್ವಾತಂತ್ರ್ಯದ ಕಲ್ಪನೆ ಕುರಿತು ಹೋಟೆಲಲ್ಲಿ ಚರ್ಚಿಸುವ ವಿದ್ಯಾರ್ಥಿಗಳ ಮನೋಭಾವನೆ ಈ ಕಥೆಯಲ್ಲಿ ಮನೋಜ್ಞವಾಗಿ ಚಿತ್ರಿತವಾಗಿದೆ. ಇವರದ್ದೇ 'ಶವದ ಮನೆ' ಎಂಬ ಇನ್ನೊಂದು ಕಥೆಯಲ್ಲಿ ಹೋಟೆಲು ಮಾಣಿಯು ಆಧುನಿಕ ತಿಂಡಿ-ತಿನಿಸುಗಳನ್ನು ಪರಿಚಯಿಸುವ ಶೈಲಿ ವಂಕಟರಮಣಪ್ಪ ಹಾಗೂ ನಾರಾಯಣಪ್ಪ ಎಂಬ ಗ್ರಾಹಕರಲ್ಲಿ ನಗುವಿಗೆ ಕಾರಣವಾಗುತ್ತದೆ. 'ನಾಲ್ಕು ಮೊಳ ಭೂಮಿ' ಎಂಬ ಮತ್ತೊಂದು ಕಥೆಯಲ್ಲಿ ಲಾಯರ್ ಕೋರ್ಟಿನ ಸಮಯದಲ್ಲಿ ಹೋಟೆಲಿನ ಊಟದ ಶುಚಿ-ರುಚಿಯ ಬಗೆಗೆ ಮಾತನಾಡುವ ಸನ್ನಿವೇಶವಿದೆ.

ಯು.ಆರ್. ಅನಂತಮೂರ್ತಿ ಅವರ 'ಪ್ರಕೃತಿ' ಕಥೆಯಲ್ಲಿ ಸಂಕಪ್ಪಯ್ಯ ಮತ್ತು ಪಾರ್ವತಿ, ಸೀತಮ್ಮ ಮತ್ತು ನಾರಾಯಣ ಪ್ರಮುಖ ಪಾತ್ರಗಳಾಗಿ ಬಿಂಬಿತರಾಗಿದ್ದಾರೆ. ಕಥೆಯಲ್ಲಿ ಬರುವ ಹೋಟೆಲು ಸನ್ನಿವೇಶವು ಸಂಕಪ್ಪಯ್ಯನಿಗೆ ಪಾರಂಪರಿಕ ಬೇಸಾಯದಲ್ಲಿ ಹೊಲವುಳ್ಳವನಾಗಿರುತ್ತಾನೆ. ಅವನ ಹೆಂಡತಿ 'ಕೊಂಪೆವಾಸ' ಮನೆಯವರ ಸುಖಕ್ಕೆ ಆಗದ ಬೇಸಾಯ ಯಾಕೆ ಮಾಡಬೇಕೋ ಸೀತಮ್ಮ ಪ್ರಶ್ನಿಸುತ್ತಾಳೆ. ನಿರಂತರತೆ ಅವಳಿಗೊಂದು ಶಾಪ ಬದಲಾವಣೆಯಲ್ಲಿ ಅವಳು ಸುಖದ ಕನಸು ಕಾಣುತ್ತಾಳೆ. ಮಗ ನಾರಾಯಣನ ಹೋಟೆಲು ಕನಸುಗಳಿಗೂ ಬೆಂಬಲ ಸಾರುತ್ತಾಳೆ. ನಾರಾಯಣನಿಗೆ ಶಿವಮೊಗ್ಗದಲ್ಲಿ ಹೋಟೆಲಿಡುವ ಆಸೆ. ಅವನಿಗೂ ಮಲೆನಾಡಿನ 'ಕೊಂಪೆಯಲ್ಲಿ ಕೊಳೆಯೋಕೆ ಇಷ್ಟವಿಲ್ಲ. ಅಪ್ಪನ ಜೀವನಧರ್ಮವನ್ನು ಹಿಂಬಾಲಿಸಲು ಆತನು ಸಿದ್ಧನಿಲ್ಲ. ನಾರಾಯಣನ ಆಪೇಕ್ಷೆ ಕೇವಲ ವೈಯಕ್ತಿಕ ನೆಲೆಯದ್ದು ಅಲ್ಲ. ಅದೇ ಹಳ್ಳಿಯ ಶಾನುಬೋಗರು ತಮ್ಮ ಮಗ ಕಿಟ್ಟನಿಗೆ ಹೋಟೆಲಿಡಲು ಒಪ್ಪಿಗೆ ಕೊಟ್ಟಿದ್ದಾರೆ. ಅಷ್ಟೇಕೆ ಸೋದರಮಾವ ತನ್ನ ಸೋದರಳಿಯನನ್ನು ಶಿವಮೊಗ್ಗದಲ್ಲಿ ಹೋಟೆಲು ನಡೆಸಲು ಆಹ್ವಾನಿಸಿದ್ದಾರೆ. ಅಂದರೆ ಪರಂಪರಾಗತ

ಗ್ರಾಮೀಣ ಬದುಕು ಬದಲಾಗಲಾರಂಭಿಸಿದೆ. ನಗರೀಕರಣ, ಆಧುನೀಕರಣ ಪ್ರಕ್ರಿಯೆ ಆರಂಭವಾಗಿದೆ. ಈ ಸಾಮಾಜಿಕ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕಿಟ್ಟಣ್ಣ, ನಾರಾಯಣನಂತವರು ಉತ್ಸುಕರಾಗಿದ್ದಾರೆ. ಈ ಆಶಯವು 'ಸೂರ್ಯನ ಕುದುರೆ' ಕಥೆಯಲ್ಲೂ ಸುಬ್ಬನ ಪಾತ್ರದ ಮೂಲಕ ಅಭಿವ್ಯಕ್ತವಾಗುತ್ತದೆ. 'ಪ್ರಸ್ತ' ಕಥೆಯಲ್ಲಿನ ಪುಂಡರಿಕ, 'ಕ್ಲಿಪ್ ಜಾಯಿಂಟ್' ಕಥೆಯಲ್ಲಿ ಬರುವ ಕೇಶ, ಮಧು ಇವರೆಲ್ಲರು ಸಮಾನ ದುಃಖಿಗಳು ಪರಂಪರಾಗತ ಸಮಾಜದ ಕಟ್ಟುಪಾಡುಗಳನ್ನು ಮೀರುವ ಸಲುವಾಗಿ ಆಧುನಿಕ ಹೋಟೆಲು ವ್ಯವಹಾರದಲ್ಲಿ ಆಸಕ್ತಿವುಳ್ಳವರಾಗಿದ್ದಾರೆ'.

ಜಿ.ಎಸ್. ಸದಾಶಿವ ಅವರ 'ಮೀಸೆಯವರು' ಎಂಬ ಕಥೆಯು ಹೋಟೆಲು, ಅಂಗಡಿ, ಸಿನಿಮಾ, ಬೀದಿ-ದೀಪಗಳಂತಹ ಆಧುನಿಕರಣ ಪ್ರಕ್ರಿಯೆಯ ಘಟಕಗಳ ವಿವರಣೆಯೊಂದಿಗೆ ಪ್ರಾರಂಭವಾಗುತ್ತದೆ. "ಬೀದಿ ದೀಪಗಳು ಹತ್ತಿಕೊಂಡಿದ್ದು ಅಂಗಡಿ, ಸಿನಿಮಾ, ಹೋಟೆಲುಗಳು ನಿಯೋನ್ ಜಗ್ಗನೆ ಬಣ್ಣವನ್ನು ಚೆಲ್ಲಿದವು. ಕಪ್ಪುರಸ್ತೆಯ ಮೇಲೆ ಸರ್ರನೆ, ಬರ್ರನೆ ಓಡುತ್ತಿರುವ ವಾಹನಗಳ ತಲೆದೀಪಗಳು ಒಂದನ್ನು ಮತ್ತೊಂದು ಕತ್ತರಿಸುತ್ತಾ ಕೊನೆಯ ತಿರುವಿನವರೆಗೂ ಬೆಳಕಿನ ಪಟ್ಟಿಯನ್ನು ಕಟ್ಟಿದ್ದವು"(ದಿವಾಕರ ಎಸ್.(ಸಂ.), ೧೯೯೭, ಪು. ೪೧೩) ಎಂಬಂತಹ ಅಂಶಗಳನ್ನು ಆಧುನಿಕತೆಯ ಪ್ರತೀಕವಾಗಿ ಸದಾಶಿವ ಅವರು ಕಥೆಯಲ್ಲಿ ಚಿತ್ರಿಸಿದ್ದಾರೆ. ಹೀಗೆ ಹೋಟೆಲನ್ನು ಒಳಗೊಂಡಂತೆ ಆಧುನೀಕರಣ ಪ್ರಕ್ರಿಯೆಯ ಘಟಕಗಳ ಮೂಲಕ ಸನ್ನಿವೇಶವನ್ನು ನಿರ್ಮಾಣ ಮಾಡುವ ಬಗೆಯನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

ಮಾವಿನಕೆರೆ ರಂಗನಾಥರ 'ಉಳಿದದ್ದು ಆಕಾಶ' ಎಂಬ ಕಥೆಯಲ್ಲಿ 'ಶ್ರೀ ರಾಘವೇಂದ್ರ ಕಾಫಿ ಕ್ಲಬ್' ಆಧುನಿಕತೆಯ ಪ್ರತೀಕವಾಗಿ ಗಮನ ಸೆಳೆಯುತ್ತದೆ. ಕಾಫಿ ಕ್ಲಬ್ಬಿನ ಬಣ್ಣ ಕಳೆದು ಕೊಳ್ಳುತ್ತಿರುವ ಗೋಡೆಗಳ ಮೇಲೆ ರಾಜಕುಮಾರ, ಅಮಿತಾಬ್ ಬಚ್ಚನ್, ಬ್ರೂಸ್ ಲೀ ಕ್ಯಾಲೆಂಡರು ಗಳು ರಾರಾಜಿಸುತ್ತಿರುತ್ತವೆ. ಆಧುನೀಕರಣ ಪ್ರಕ್ರಿಯೆಯ ಪ್ರತೀಕವಾದ ಕಾಫಿ ಕ್ಲಬ್ಬಿಗೆ ಕ್ಯಾಲೆಂಡರುಗಳು ಇನ್ನಷ್ಟು ಆಧುನಿಕತೆಯ ಮೆರುಗನ್ನು ತಂದುಕೊಡುತ್ತವೆ.

ಬೇಲೂರು ರಾಮಮೂರ್ತಿ ಅವರ 'ಶೀನಣ್ಣನ ಟೀ ಅಂಗಡಿ' ಆಧುನೀಕರಣ ಪ್ರಕ್ರಿಯೆಯನ್ನು ಬಳಸಿಕೊಂಡಿರುವ ವಿಶಿಷ್ಟ ಕಥೆಯಾಗಿದೆ. ಟೀ ಅಂಗಡಿಯಲ್ಲಿ ದಿನಪತ್ರಿಕೆ, ಸಿನೆಮಾ, ನಟ-ನಟಿಯರ ಕಲ್ಪನೆ, ಕಂಪ್ಯೂಟರ್ ಜಗತ್ತಿನ ಪರಿಚಯ, ಗ್ರಾಮಕ್ಕೆ ಬರುವ ಬಸ್ಸು, ಸಂಸ್ಕರಣೆಗೊಂಡ ಟೀ ಪುಡಿಗಳ ವಾಸನೆ, ಟಿ.ವಿ., ಮೊಬೈಲ್, ಕಾರು, ಶೂಟಿಂಗ್ ಪ್ರಕ್ರಿಯೆ, ಫೋನಿನ ಆವಿಷ್ಕಾರ, ಸೌಂದರ್ಯವರ್ಧಕ ಮುಂತಾದ ಆಧುನಿಕ ವಸ್ತು-ವಿಷಯಗಳ ಚರ್ಚೆ ನಡೆಯುತ್ತಿರುತ್ತವೆ.

ಬಿ.ಎಲ್. ವೇಣು ಅವರ 'ಗೌರಿ ಮೆಸ್ಸು' ಆಧುನಿಕ ಶಿಕ್ಷಣಪದ್ಧತಿಯ ವಿಹಂಗಮ ನೋಟವನ್ನು ಕಟ್ಟಿಕೊಡುವ ಕಥೆಯಾಗಿದೆ. ಕೇವಲ ಅಧಿಕಾರಿಗಳಿಗೆ ಮತ್ತು ಶ್ರೀಮಂತರಿಗಷ್ಟೇ

ದಕ್ಕುತ್ತಿದ್ದ ಆಧುನಿಕ ಶಿಕ್ಷಣವು ಗೌರಿ ಮೆಸ್ಸಿನಲ್ಲಿ ಊಟ-ಉಪಾಹಾರ ಸೇವಿಸುತ್ತಿದ್ದ ರಾಮಮೂರ್ತಿ ಮಾಸ್ತರರ ಆಧುನಿಕ ವೈಚಾರಿಕತೆಯ ಪರಿಣಾಮವಾಗಿ ಸಾಮಾನ್ಯರಿಗೆ ದಕ್ಕುವಂತಾದುದರ ಚಿತ್ರಣವು ಈ ಕಥೆಯಲ್ಲಿದೆ. ಸ್ವತಃ 'ಗೌರಿ ಮೆಸ್ಸು' ಎಂಬುದೇ ಆಧುನಿಕತೆಯಿಂದ ಕೂಡಿದ ಪರಿಭಾಷೆಯಾಗಿದೆ. ಆಧುನಿಕ ಶಿಕ್ಷಣ ಪ್ರಕ್ರಿಯೆಯ ಭಾಗವಾದ ವೃತ್ತಿನಿರತ ಶಿಕ್ಷಕನು ಮೆಸ್ಸಿನಲ್ಲಿ ಊಟ-ಉಪಾಹಾರ ಸೇವಿಸುವ ಚಿತ್ರಣವಿದೆ.

ಜಿ.ವಿ. ಪ್ರಭು ಅವರ 'ಕೃಷ್ಣಭಟ್ಟರು ಹಾಗೂ ಅವರ ಹೋಟೆಲು ಉದ್ಯಮವು' ಎಂಬ ಕಥೆಯು ಆಧುನೀಕರಣ ಪ್ರಕ್ರಿಯೆಯ ದೃಷ್ಟಿಯಿಂದ ಪ್ರಸ್ತುತವೆನಿಸುತ್ತದೆ. ಕೃಷ್ಣಭಟ್ಟರು ವಿಟ್ಲ, ಕುಂದಾಪುರ, ಭಟ್ಕಳ, ಉಡುಪಿ ಮುಂತಾದ ಕಡೆಗಳಲ್ಲಿ ಸಾಂಪ್ರದಾಯಿಕ ಹೋಟೆಲು ನಡೆಸಿ ಇಪ್ಪತ್ತು ವರ್ಷಗಳ ಅನುಭವವುಳ್ಳವರಾಗಿದ್ದಾರೆ. ನಂತರ ಆಧುನಿಕ ನಗರವೆಂದು ಪ್ರಖ್ಯಾತಿ ಪಡೆದ ಬೆಂಗಳೂರಿನಲ್ಲಿ ಹೋಟೆಲು ಮಾಲೀಕರಾಗುವ ಮಹದಾಸೆಯುಳ್ಳವರಾಗುತ್ತಾರೆ. ಕೊನೆಗೂ ವಿಶ್ವದವರೆಲ್ಲರಿಗೂ ಬೆಂಗಳೂರು ಇಷ್ಟವಾಗುವಂತೆ ಕೃಷ್ಣಭಟ್ಟರಿಗೆ ಬಾಲ್ಯದಿಂದಲೂ ಇದ್ದ ಹಂಬಲ. ಅದು ಈಗ ಅವರ ಬೆಂಗಳೂರಿನ ಹೋಟೆಲು ಉದ್ಯಮದೊಂದಿಗೆ ಕೈಗೂಡಿತು. ಮೆಟ್ರೋ ರೈಲು, ನಗರಪಾಲಿಕೆ, ಗ್ಯಾಸ್ ಸಿಲೆಂಡರ್, ವೋಲ್ವಾ ಬಸ್ಸು ಇತ್ಯಾದಿ ಅತ್ಯಾಧುನಿಕ ಆವಿಷ್ಕಾರಗಳು ಕೃಷ್ಣಭಟ್ಟರ ಹೋಟೆಲು ಉದ್ಯಮದ ನೆಪದಲ್ಲಿ ಓದುಗರಿಗೆ ಪರಿಚಯವಾಗುತ್ತವೆ. ಬ್ರೇಕ್ ಫಾಸ್ಟ್, ಲಂಚ್, ಲೈಟ್ ಬಿಲ್ಲು, ವಾಟರ್ ಬಿಲ್ಲು, ಮಾರ್ಕೆಟ್, ಕ್ಯಾಶ್, ಬ್ಯಾಂಕ್, ಪಿಗ್ಮಿ, ಕರೆಂಟ್, ಟ್ರಕ್, ಆಧುನಿಕತೆಯನ್ನು ಪ್ರತಿನಿಧಿಸುವ ಶಬ್ದಗಳು ಹೋಟೆಲಿನಿಂದ ಭಟ್ಟರ ತಿಳುವಳಿಕೆಯ ಭಾಗವಾಗುತ್ತವೆ. ಕೃಷ್ಣಭಟ್ಟರಿಗೆ ಬೆಂಗಳೂರು ಮಹಾನಗರದಲ್ಲಿ ಆಧುನಿಕ ಸೌಲಭ್ಯಗಳಿಂದ ಕೂಡಿದ ಹೊಸ ಬಗೆಯ ತಿಂಡಿ-ತಿನಿಸುಗಳನ್ನು ಒಳಗೊಂಡು ಹೋಟೆಲೊಂದನ್ನು ಪ್ರಾರಂಭಿಸಬೇಕೆಂಬ ತೀವ್ರ ಹಂಬಲವಿತ್ತು.

ಕನ್ನಡದ ಆರಂಭಘಟ್ಟದ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳತೊಡಗಿದ ಆಧುನಿಕತೆಯು ನವೋದಯ ಕಾಲಘಟ್ಟದ ವೇಳೆಗೆ ವಿವಿಧ ಆಯಾಮಗಳನ್ನು ಪಡೆದುಕೊಂಡಿತು. ಅದರಂತೆ ಹೋಟೆಲಿನ ಪ್ರತಿನಿಧೀಕರಣ ಕೂಡ ನವೋದಯ ಕಾಲಘಟ್ಟದಲ್ಲೇ ಕನ್ನಡ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳತೊಡಗಿತು. ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯು ಹೋಟೆಲಿನ ಚಿತ್ರಣದ ಮೂಲಕ ಆಧುನಿಕ ಪ್ರಕ್ರಿಯೆಗೆ ಸಾಕ್ಷೀಭೂತವಾದ ಒಂದು ಕೃತಿಯಾಗಿದೆ. ಕಾದಂಬರಿಯಲ್ಲಿನ ಸನ್ನಿವೇಶದ ಕೇಂದ್ರಸ್ಥಳವಾದ ಕೋಡಿಹಳ್ಳಿಯನ್ನು ಆಧುನಿಕತೆಯು ಆದಾಗಲೇ ಪ್ರವೇಶಿಸಿ ಆಗಿತ್ತು. ಶೀನಮಯ್ಯನ ಮಕ್ಕಳು ಬೆಂಗಳೂರಿನಲ್ಲಿ ಹೋಟೆಲು ಆರಂಭಿಸುವುದರಿಂದಾಗಿ ಆಧುನಿಕ ಜಗತ್ತಿಗೆ ಹೊಂದುವಂತೆ ಆತನ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ನಿರೀಕ್ಷಿತವಾದ ಪರಿಣಾಮಗಳು ಆತನ ಮನಸ್ಸನ್ನು ಆಧುನಿಕತೆಗೆ ತೆರೆದುಕೊಳ್ಳುವಂತೆ ಮಾಡುತ್ತವೆ. ಮಕ್ಕಳ ಹೋಟೆಲಿನ

ಸಂಪಾದನೆಯಿಂದ ಆಧುನಿಕ ಮಾರ್ಗವನ್ನು ಶೀನಮಯ್ಯ ತನ್ನೂರಿನಲ್ಲಿ ಕಂಡುಕೊಳ್ಳುತ್ತಾನೆ. ಹಳ್ಳಿಯ ವ್ಯವಸಾಯಕ್ಕೆ ಬದಲಾಗಿ ನಗರದ ಹೋಟೆಲಿನ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುವ ಜನರು ಆರ್ಥಿಕವಾಗಿ ಸದೃಢಗೊಳ್ಳುವ ಚಿತ್ರಣವಿದೆ. ಸಾಂಪ್ರದಾಯಿಕ ಗ್ರಾಮೀಣ ವ್ಯವಸಾಯದ ಆದಾಯಕ್ಕಿಂತ ಆಧುನಿಕತೆಗೆ ಒಳಗಾಗಿ ನಗರದ ಹೋಟೆಲು ಉದ್ಯಮದಲ್ಲಿ ಶೀನಮಯ್ಯನ ಮಕ್ಕಳು ಸಫಲತೆ ಕಾಣುತ್ತಾರೆ. ಶೀನಮಯ್ಯನ ಮಕ್ಕಳಾದ ನರಸಿಂಹ ಮತ್ತು ಒರಟ ಆಧುನಿಕ ಪ್ರಕ್ರಿಯೆಗೆ ಒಳಗಾಗಿ ಹೋಟೆಲು ಮಾಲೀಕರಾದ ಚಿತ್ರಣವಿದೆ. ರಾಮ ಐತಾಳರ ಮಗ ಲಚ್ಚನು ಆಧುನಿಕತೆಗೆ ಒಳಗಾಗಿ ಹೋಟೆಲಿನ ಆಶ್ರಯದೊಂದಿಗೆ ಶಿಕ್ಷಣ ಪಡೆಯುವ ಚಿತ್ರಣವು ಇಲ್ಲಿದೆ. ಲಚ್ಚನ ವಿದ್ಯಾರ್ಥಿಜೀವನ ಹಾಗೂ ಅವನ ಕುಟುಂಬದವರ ಸಾಂಪ್ರದಾಯಿಕ ಆಚರಣೆಗಳಿಗೆ ಕುಂದಾಪುರದ ಹೋಟೆಲುಗಳಲ್ಲಿ ಆಧುನಿಕತೆಯ ಪ್ರತಿಕೂಲ ಸಂದರ್ಭವನ್ನು ಸೃಷ್ಟಿಸುತ್ತವೆ. ಉಡುಪಿಯಲ್ಲಿ ಮಧ್ಯಾಹ್ನ ಹೋಟೆಲಿನ ಊಟದ ವ್ಯವಸ್ಥೆ ಲಚ್ಚನನ್ನು ಆಧುನಿಕತೆಗೆ ಒಳಪಡಿಸುವ ಅಂಶವು ಪ್ರಾಮುಖ್ಯತೆಯಿಂದ ಕೂಡಿರುತ್ತದೆ. ಹೋಟೆಲು ಮತ್ತು ಹೋಟೆಲಿನ ಭಾಗವಾಗಿ ಗ್ರಾಹಕರಾಗಿ ಗುರುತಿಸಿಕೊಂಡ ಲಚ್ಚ, ರಾಮ ಐತಾಳ, ದಾಸಪ್ಪ ಮಾಸ್ತರ, ದಾಸಪ್ಪಯ್ಯ, ಪಡುಮೂನ್ನೂರು ಮುಂತಾದ ವ್ಯಕ್ತಿ ಮತ್ತು ಸ್ಥಳಗಳನ್ನು ಕಾದಂಬರಿಯಲ್ಲಿ ಆಧುನಿಕತೆಯ ಪ್ರತೀಕಗಳಾಗಿ ಚಿತ್ರಿಸಲಾಗಿದೆ. ಕಾರಂತರು ವ್ಯಕ್ತಿಗತ ಸಮಸ್ಯೆಯೊಂದನ್ನು ಮಾತ್ರ ಇಲ್ಲಿ ವಿಶ್ಲೇಷಿಸುತ್ತಿಲ್ಲ. ಸಾಂಪ್ರದಾಯಿಕ ವಾದಕ್ಕೆ ತಮ್ಮ ಆಧುನಿಕತೆಯ ಸ್ವರೂಪವನ್ನು ಸೂಚಿಸಿದ್ದಾರೆ. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಆಧುನಿಕತೆಯ ಪ್ರವೇಶದಿಂದಾಗಿ ಕೃಷಿಕ ಕುಟುಂಬವೊಂದು ಹೋಟೆಲು ಪ್ರಾರಂಭಿಸುವ ದರ್ಶನವಿದೆ. ಇಲ್ಲಿ ಆಧುನಿಕತೆಯ ಬಗ್ಗೆ ಸರಳ ನೈತಿಕ ನಿಲುವುಗಳು ಮುಖ್ಯವಾಗದೆ ಆಧುನಿಕ ಪ್ರಕ್ರಿಯೆಯಲ್ಲಿ ಅನಿವಾರ್ಯವಾಗಿ ಬದಲಾಗುವ ಬದುಕಿನ ಸ್ವರೂಪ ಕುರಿತ ಗಾಢ ಎಚ್ಚರ ಕುತೂಹಲಗಳು ತುಂಬಿಕೊಂಡಿರುತ್ತವೆ. ಸೀನಮಯ್ಯನಲ್ಲಾದ ಈ ಬದಲಾವಣೆಯನ್ನು ನೋಡುತ್ತಿದ್ದರೆ ಹೋಟೆಲೆಂಬ ಆಧುನಿಕತೆಯ ಪ್ರವೇಶ ಹಳೆಯ ಮೌಲ್ಯಗಳೊಂದಿಗೆ ಸೆಣಸಾಡಿ ಜಯ ಪಡೆದಿವೆ. ಈ ಸಂದರ್ಭದಲ್ಲಿ ರಾಮ ಐತಾಳರ ಹೊಂದಾಣಿಕೆ ಕಾಣುತ್ತದೆ. ಆದರೂ ಹಳೆಯ ಮೌಲ್ಯಗಳನ್ನು ಹೋಟೆಲೆಂಬ ಆಧುನಿಕ ಅಸ್ತ್ರವು ಈ ಎಲ್ಲಾ ಸಮಸ್ಯೆಗಳ ತಿಳಿವಿಗೆ ಕಾರಣವಾಗಿರುತ್ತದೆ.

ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹೋಟೆಲಿನ ಚಿತ್ರಣದ ಮೂಲಕ ಆಧುನಿಕತೆಗೆ ಒಗ್ಗಿಕೊಂಡ ಕೃತಿಯಾಗಿದೆ. ಮೊದಲು ಮಲೆನಾಡಿನ ಅಂತಕ್ಕೆ ವಿವಿಧ ಸೊಪ್ಪುಗಳಿಂದ ಮನೆಯಲ್ಲಿ ಚಹಾ ತಯಾರಿಸುತ್ತಿದ್ದಳು. ಮಲೆನಾಡಿಗೆ ಪಾದ್ರಿಗಳ ಆಗಮನ ಮತ್ತು ಅವರು ಕಾಫಿ ಪುಡಿಯನ್ನು ನಗರದಿಂದ ತಂದು ಆಕೆಗೆ ಕೊಡುತ್ತಿದ್ದರು. ಇದರಿಂದ ರುಚಿಕಟ್ಟಾದ ಕಾಫಿ ಮಾಡುವ ಕಲೆಯು ಜನರನ್ನು ಆಕರ್ಷಿಸಿತು. ಮನೆಯೇ ಕಾಫಿ ಹೋಟೆಲಾಗಿ

ಪರಿವರ್ತನೆಗೊಂಡಿರುತ್ತದೆ. ಆಕರ್ಷಿತರಾದ ಗ್ರಾಹಕರು ಮತ್ತೆ ಮತ್ತೆ ಆಕೆಯ ಹೋಟೆಲಿಗೆ ಬಂದು ಕಾಫಿ ಕುಡಿಯುವುದು ರೂಢಿಯಾಗುತ್ತದೆ. ಈಗ ಅಂತಕ್ಕನ 'ಕಾಫಿ ಹೋಟೆಲು' ಪಾದ್ರಿಗಳ ಮತ್ತು ಮಲೆನಾಡಿನ ಜನಸಾಮಾನ್ಯರ ದಣಿವಾರಿಸಿಕೊಳ್ಳುವ ಕೇಂದ್ರವಾಗಿರುವುದನ್ನು ಕಾದಂಬರಿಯು ಚಿತ್ರಿಸಿರುತ್ತದೆ.

ಶಾಂತಿನಾಥ ದೇಸಾಯಿ ಅವರ 'ಬೀಜ' ಕಾದಂಬರಿಯು ಆಧುನಿಕತೆಯ ಘಟಕವಾಗಿ ಹೋಟೆಲನ್ನು ಚಿತ್ರಿಸಿದೆ. ಕೃಷ್ಣಾಪುರಕ್ಕೆ ಆಧುನಿಕ ನಾಗರಿಕತೆ ಕಾಲಿಟ್ಟ ಸುಳಿವನ್ನು ಪ್ರಸ್ತಾಪಿಸುತ್ತದೆ. ವೈದ್ಯರು, ಕಾರ್ಖಾನೆ, ವಾಹನ, ದೊಡ್ಡ ಅಂಗಡಿಗಳು, ಬಾರ್, ಹೋಟೆಲುಗಳು ಚಿತ್ರಿತವಾಗಿವೆ. ವಸಂತನು ನಗರಗಳಲ್ಲಿ ಅಲೆದಾಡುವ ಸಂದರ್ಭದಲ್ಲಿ ಹೋಟೆಲನ್ನು ಪ್ರವೇಶ ಪಡೆದದ್ದು ಹಳ್ಳಿಯಲ್ಲಿ ಒಂದು ರೀತಿಯ ಹೊಸತನಕ್ಕೆ ಕಾರಣವಾದುದ್ದನ್ನು ಕಾದಂಬರಿಯು ಕಟ್ಟಿಕೊಡುತ್ತದೆ (ರಾಜಶೇಖರ ಹಳೆಮನೆ; ೨೦೧೧; ಪು. ೧೭೮) ಎಂಬುದನ್ನು ವ್ಯಕ್ತಪಡಿಸಿದ್ದಾರೆ. ಶ್ರೀಕೃಷ್ಣ ಆಲನಹಳ್ಳಿ ಅವರ 'ಪರಸಂಗದ ಗೆಂಡೆತಿಮ್ಮ' ಕಾದಂಬರಿಯಲ್ಲಿ ಆಧುನಿಕತೆಗೆ ಮರಂಕಿ ಮಾರುಹೋಗುವ ಚಿತ್ರಣವಿದೆ. ಮರಂಕಿ ಗಂಡನ ಮೌಢ್ಯತೆಯನ್ನು ಅತ್ತೆ ಬೀದಿಯಮ್ಮನ ಅಜ್ಞಾನವನ್ನು ಪರಂಪರಾಗತ ಮೌಢ್ಯವನ್ನು ಅರ್ಥ ಮಾಡಿಕೊಳ್ಳದೆ ಅಧುನಿಕ ಮೋಹಜಾಲದಲ್ಲಿ ತೇಲಿಹೋಗುತ್ತಾಳೆ. ಹೋಟೆಲು, ಸಿನಿಮಾ ಪಟ್ಟಣ ಎಂದರೆ ತನಗಿಂತಲೂ ಹೆಚ್ಚಾಗಿ ಕಾಣುವ ಪ್ರಸ್ತಾಪವಿದೆ.

ಶಂಕರ ಮೊಕಾಶಿ ಪುಣೇಕರ ಅವರ 'ಗಂಗವ್ವ ಗಂಗಾಮಾಯಿ' ಕಾದಂಬರಿಯಲ್ಲಿನ ಕಿಟ್ಟಿಯ ಜೀವನಶೈಲಿಯು ಹೋಟೆಲಿನ ಮೂಲಕ ಆಧುನಿಕತೆಗೆ ತೆರೆದುಕೊಳ್ಳುತ್ತದೆ. ಹೋಟೆಲಿನಲ್ಲಿ ತಿಂಡಿ-ಚಹಾ-ಪಾಣಿ ಸೇವಿಸಲು ಒಲ್ಲದ ಕಿಟ್ಟಿಯ ಮನವೊಲಿಸಿ ಹುಸೇನಿ ಅವುಗಳನ್ನು ಆತ ಸೇವಿಸುವಂತೆ ಮಾಡುತ್ತಾನೆ. ಅದರಂತೆ ಹೋಟೆಲು ಆಧುನೀಕರಣ ಪ್ರಕ್ರಿಯೆಯ ಪ್ರತೀಕವಾಗುವುದನ್ನು ಕಾದಂಬರಿಯ ಒಂದು ಸನ್ನಿವೇಶವು ಚಿತ್ರಿಸುತ್ತದೆ.

ಯು.ಆರ್. ಅನಂತಮೂರ್ತಿ ಅವರ 'ಸಂಸ್ಕಾರ' ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯರು ತಮ್ಮ ಬ್ರಾಹ್ಮಣ್ಯ ಕಳೆದುಕೊಂಡು ಹೊಸ ಮನುಷ್ಯರಾಗುವ ಪ್ರಕ್ರಿಯೆಯಲ್ಲಿ ಜಾತ್ರೆಯಲ್ಲಿ ಹೋಟೆಲಿಗೆ ಹೋಗಿ ಕಾಫಿ ಕುಡಿಯುತ್ತಾರೆ. ಆಧುನೀಕರಣ ಪ್ರಕ್ರಿಯೆಯಲ್ಲಿ ಈ ಸನ್ನಿವೇಶವು ವಿಶೇಷ ಮಹತ್ವನ್ನು ಪಡೆದುಕೊಳ್ಳುತ್ತವೆ. 'ಭಾರತೀಪುರ' ಕಾದಂಬರಿಯಲ್ಲಿನ ಜಗನ್ನಾಥನ ಪಾತ್ರಚಿತ್ರಣದ ವಿನ್ಯಾಸ ನೋಡಿದಾಗ ಹೋಟೆಲುಗಳು ಹಳ್ಳಿಯಲ್ಲಿ ಆಧುನೀಕರಣ ಪ್ರಕ್ರಿಯೆಗೆ ಕಾರಣವಾಗುವ ಒಂದು ಸಂಕೀರ್ಣ ಚಿತ್ರಣವನ್ನು ನೀಡುತ್ತದೆ. ವಿದೇಶದಿಂದ ಮರಳಿ ಬಂದ ಜಗನ್ನಾಥನು ಅಲ್ಲಿ ತಾನು ಪಡೆದ ಆಧುನಿಕವಾದ ಅನುಭವ-ವಿಚಾರಗಳನ್ನು ಊರಿನ ಹೋಟೆಲಿನಲ್ಲಿ ಟೀ ಕುಡಿಯುತ್ತಾ ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತಾನೆ. ಇಲ್ಲಿ ಜಗನ್ನಾಥನು ತನ್ನ ವರ್ಗಗುಣವನ್ನು ಕಳೆದುಕೊಳ್ಳುವ ಒಂದು ಸಣ್ಣ ಪ್ರಯತ್ನವೆಂದರೆ ವಾಸುವಿನೊಡನೆ ಹೋಟೆಲಿನಲ್ಲಿ ಕಾಫಿ ಕುಡಿಯುವುದು ಹೋಟೆಲು

ಆಧುನಿಕ ಸಮಾಜದ ಒಂದು ಪರಿವರ್ತಿತ ಪ್ರತಿಮೆಯಾಗಿ ಕಾದಂಬರಿಯಲ್ಲಿ ಬಿಂಬಿತವಾಗಿದೆ. ಪರಂಪರಾಗತ ಜೀವನಕ್ರಮವೊಂದಕ್ಕೆ ಆಧುನಿಕತೆಯ ಪ್ರವೇಶ. ಇಂಥ ಸೂಕ್ಷ್ಮ ವಿವರಗಳಲ್ಲಿ ಸೂಚಿತವಾಗಿರುತ್ತದೆ. ಹೀಗೆ ಕಾದಂಬರಿಯಲ್ಲಿ ಹೋಟೆಲಿನ ಸನ್ನಿವೇಶ ನಿರ್ಮಾಣವು ಆಧುನೀಕರಣ ಪ್ರಕ್ರಿಯೆಗೆ ಸಹಕಾರಿಯಾಗಿದೆ. ಭಾರತೀಯ ಪರಂಪರೆಯಲ್ಲಿ ವಸ್ತುವಿನಿಮಯ ಪದ್ಧತಿಗೆ ಬದಲಾಗಿ ಆಧುನೀಕರಣ ಪ್ರಕ್ರಿಯೆಯಿಂದಾಗಿ ಹಣಕಾಸಿನ ವಹಿವಾಟು ಪ್ರಾರಂಭವಾಗಿ ಹಳ್ಳಿಯ ಜನರಲ್ಲಿ ಹೊಸ ಸಂಚಲನ ಉಂಟಾದುದನ್ನು ಕಾದಂಬರಿಯು ಕಟ್ಟಿಕೊಡುತ್ತದೆ. ಗಾಡಿಯಲ್ಲಿ ಬಂದು ಬಹಳ ಸಂಭ್ರಮದಿಂದ ಪೇಟೆ ಸುತ್ತುವ ಹಳ್ಳಿಯ ಜನ ಎಲ್ಲಾ ಮುಗಿದ ಮೇಲೆ ಹೋಟೆಲಲ್ಲಿ ಭಜಿ ತಿಂದು, ಕಾಫಿ ಕುಡಿದು ಇನ್ನಷ್ಟು ಭಜಿ ಕಟ್ಟಿಸಿಕೊಂಡು ಹೋಗುತ್ತಾರೆ(ಅನಂತಮೂರ್ತಿ ಯು.ಆರ್., ೨೦೦೮, ಪು.೨). ಹೀಗೆ ಹೋಟೆಲಿನಿಂದಾಗಿ ಹಳ್ಳಿಯ ಜನರ ಜೀವನಶೈಲಿಯೇ ಬದಲಾದುದನ್ನು ಕಾದಂಬರಿಯು ಕಲಾತ್ಮಕವಾಗಿ ಚಿತ್ರಿಸುತ್ತದೆ. ಹೋಟೆಲು ಹಾಗೂ ಕ್ಷೌರಿಕರ ಅಂಗಡಿಗಳಲ್ಲಿ ಹೊಸತಲೆಮಾರಿನ ಜನರು ಅನಿವಾರ್ಯವಾಗಿ ಪ್ರವೇಶ ಪಡೆಯುವುದು ಕಂಡುಬರುತ್ತದೆ. ಹಳ್ಳಿಯ ಜನರು ನಗರಕ್ಕೆ, ಸಂತೆಗಾಗಿ ಬಂದು ಹೋಗುವವರಿಗೆ ಹೋಟೆಲು ಕೊಡುವ ಅನುಭವಗಳು ಚಿತ್ರಿತವಾಗಿವೆ. ಭಾರತೀಪುರ ಕಾದಂಬರಿಯಲ್ಲಿನ ಜಗನ್ನಾಥ, ವಾಸು ಹೊಸ ಶಿಕ್ಷಣಪದ್ಧತಿ ರೂಢಿಸಿಕೊಳ್ಳಲು ಹೋಟೆಲು ಸಹಕಾರಿಯಾಗಿದೆ. ವಿದ್ಯಾವಂತರು ಮತ್ತು ಪರದೇಶದಲ್ಲಿ ಅಲೆದಾಡಿದವರಿಗೆ ಜನಸಾಮಾನ್ಯರಿಗಿಂತ ವಿಶಿಷ್ಟ ಸ್ಥಾನ ಕಲ್ಪಿಸುವಲ್ಲಿ ಆಧುನಿಕವಾದ ಹೋಟೆಲುಗಳು ಪ್ರಮುಖ ಪಾತ್ರ ವಹಿಸಿದ್ದವು. ಜಗನ್ನಾಥ ಮತ್ತು ವಾಸು ಹೋಟೆಲಲ್ಲಿ ಕಾಫಿ ಕುಡಿಯುತ್ತಾ ತಮ್ಮ ಗತಜೀವನದ ನೆನಪುಗಳು ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. "ಕಾಫಿಯನ್ನು ಕುಡಿಯುತ್ತಾ ಜಗನ್ನಾಥನಿಗೆ ವಾಸು ಹೇಳಿದ. ಬಿ.ಎ. ಮುಗಿಸಿಲ್ಲ ಗೊತ್ತಿಲ್ಲ ಅಪ್ಪ ಮನೆಬಿಟ್ಟು ಓಡಿಸಿದ್ದು ಆಗ ನೀನು ಇಂಗ್ಲೆಂಡಿನಲ್ಲಿ ಓದಿ ನಾನು ನಾಟಕ ಸೇರಿದೆ. ಆಮೇಲೆ ಸ್ವತಃ ಕಂಪನಿ ಮಾಡಿದೆ(ಅನಂತಮೂರ್ತಿ ಯು.ಆರ್., ೨೦೦೮, ಪು.೧೩). ಹೀಗೆ ವಾಸುವಿನ ದೇಶಿ ಹಾಗೂ ಆಧುನಿಕತೆಯಿಂದ ಕೂಡಿದ ವೈಚಾರಿಕ ವಿಷಯಗಳ ಮಾತುಕತೆಗೆ ಹೋಟೆಲು ಆಶ್ರಯ ನೀಡುತ್ತದೆ. ಆಧುನಿಕತೆಯ ಪ್ರಭಾವದಿಂದಾಗಿ ಅಡಿಗರ ಮಗ ಪೌರೋಹಿತ್ಯ ನಿರಾಕರಿಸಿ ಆಧುನಿಕವಾದ ಹೋಟೆಲು ಕಾರ್ಮಿಕನಾದ ಚಿತ್ರಣವಿದೆ.

ದು.ನಿಂ. ಬೆಳಗಲಿ ಅವರ 'ಕಾತ್ರಾಳ ರತ್ನಿಯ ಚಾದಂಗಡಿ' ಕಾದಂಬರಿಯಲ್ಲಿ ಹೆಸರೇ ಸೂಚಿಸುವಂತೆ ಚಾದಂಗಡಿಯೇ ಎಲ್ಲಾ ಘಟನಾವಳಿ, ಸನ್ನಿವೇಶಗಳಿಗೆ ಕೇಂದ್ರಸ್ಥಾನವಾಗಿದೆ. ಈ ಕಾದಂಬರಿಯಲ್ಲಿ ಕಂಡುಬರುವ ಪಾತ್ರಗಳು ಸಂಸ್ಕೃತಿ, ಭಾಷೆ, ಸಾಂಸ್ಕೃತಿಕ ಅಂತಸ್ತುಗಳು ಆಧುನೀಕರಣಗೊಳ್ಳುವ ಕೇಂದ್ರವಾಗಿ ಚಾದಂಗಡಿ ಬೆಳೆದುನಿಂತಿದೆ. ಚಾದಂಗಡಿಯ ಆವರಣದೊಳಗಡೆ ಸೃಷ್ಟಿಯಾಗಿರುವ ವಸ್ತುವಿನ್ಯಾಸವು ಆಧುನಿಕತೆಯ ಲೇಪವನ್ನು ಪಡೆದುಕೊಂಡಿರುತ್ತದೆ. ಕಾದಂಬರಿ

ಪ್ರಕಾರದಲ್ಲಿ ಸಾಮಾಜಿಕ ಪ್ರಜ್ಞೆ ಪ್ರಮುಖ ಪಾತ್ರ ವಹಿಸುವುದರಿಂದ ಚಾದಂಗಡಿಯ ಮೂಲಕ ಆಧುನಿಕ ಆಲೋಚನಾಕ್ರಮವನ್ನು ಚಿತ್ರಿಸಲಾಗಿದೆ. ಪರಿಸರ ಅಲ್ಲಿನ ಸನ್ನಿವೇಶಗಳು ಆಧುನಿಕವಾಗಿ ಚಾದಂಗಡಿಯ ಮುಖಾಂತರ ಪ್ರಾಮುಖ್ಯತೆ ಪಡೆದುಕೊಂಡಿರುತ್ತವೆ. ರತ್ನಿಯ ಚಾದಂಗಡಿಯಲ್ಲಿ ಘಟಿಸುವ ವಿದ್ಯಮಾನಗಳ ಜೊತೆಜೊತೆಗೆ ಹೋಟೆಲು ಗ್ರಾಮೀಣ ಜನಜೀವನದ ಒಂದು ಆಧುನಿಕ ಪ್ರತೀಕವಾಗಿ ಕಂಡುಬರುತ್ತದೆ. ಹೋಟೆಲಿನ ಚಿತ್ರಣದ ಮೂಲಕ ಸಾಂಪ್ರದಾಯಿಕವಾಗಿರುವ ಸಂಸ್ಕೃತಿ, ಕೈಕಸುಬು, ನಂಬಿಕೆಗಳು ಆಧುನಿಕತೆಯಿಂದ ಕೂಡಿದ ಮೌಲ್ಯಗಳಾಗಿವೆ. ಸಮಕಾಲೀನ ಜನರ ನೈಜ ಜೀವನಶೈಲಿಗಳಿಗೆ ರತ್ನಿಯ ಚಾದಂಗಡಿಯು ಆಧುನಿಕ ಜೀವಕಳೆಯನ್ನೇ ತುಂಬಿರುತ್ತದೆ. ನಂದೂರಲ್ಲಿ ಸಂಭವಿಸುವ ಸಹಘಟನೆಗಳೆಲ್ಲವೂ ರತ್ನಿಯ ಚಾದಂಗಡಿಯ ಸಂಬಂಧದೊಂದಿಗೆ ಚಾಚೂ ತಪ್ಪದೇ ಆಧುನಿಕ ಪ್ರಕ್ರಿಯೆಯನ್ನು ಸಾಧಿಸಿಕೊಳ್ಳುತ್ತವೆ. ಈ ಮೂಲಕ ಕಾದಂಬರಿಯಲ್ಲಿ ಅತ್ಯಂತ ಸುಲಭವಾಗಿ ಸಂಘರ್ಷಗಳ ಸ್ವರೂಪವನ್ನು ವಿವೇಚಿಸುವ ಆಧುನಿಕ ತಾತ್ವಿಕ ನೆಲೆಯೊಂದು ಈ ಕಾದಂಬರಿಯಲ್ಲಿ ರೂಪಿತವಾಗಿದೆ. ತಾನು ಅನುಭವಿಸಿದ ಹಲವಾರು ಸಾಮಾಜಿಕ ಸಂಬಂಧಗಳ ಬೆಳಕಿನಲ್ಲಿ ವಿಧವೆ ರತ್ನಿಯು ಊರಿನ ವಿದ್ಯಮಾನಗಳನ್ನೆಲ್ಲಾ ಕೂಲಂಕಷವಾಗಿ ವಿಚಾರ ಮಾಡುತ್ತಾಳೆ. ತನ್ನ ಅನುಭವಗಳೊಂದಿಗೆ ಅರ್ಥಪೂರ್ಣವಾಗಿ ಗುದ್ದಾಡುತ್ತಾಳೆ. ಈ ಸೃಜನಶೀಲ ಚಡಪಡಿಕೆಗಳ ಸಮಾಜ ವೈಜ್ಞಾನಿಕತೆಗೆ, ತಾತ್ವಿಕ ಆಶಯಗಳಿಗೆ ಕಾದಂಬರಿಯು ಸಾಮಾಜಿಕ ಕಳಕಳಿಯನ್ನು ಪ್ರಕಟಪಡಿಸುತ್ತದೆ. ನಂದೂರ ಗ್ರಾಮದ ನಾಗಪ್ಪ, ಪಾಂಡು, ಮಹಾದೇವ, ಧರೆಗೌಡ, ಧಾನೇಶಿ ಗೌಡ, ತ್ರಿಪುರಾಂತಕ ಸ್ವಾಮಿ, ಗಂಗಾಧರಯ್ಯ, ಕಸ್ತೂರಿ, ಹರಿಜನ ಚಂದ್ರ, ಡಾಕ್ಟರ್ ಶ್ರೀಕಾಂತರ ಕತೆಗಳು ಆಧುನಿಕ ಸಾಮಾಜಿಕ ಪ್ರಕ್ರಿಯೆಗೆ ಹೆಚ್ಚು ಅಧಿಕೃತವಾಗುತ್ತವೆ.

ಬಸವರಾಜ ಕಟ್ಟೀಮನಿ ಅವರ 'ಖಾನಾವಳಿ ನೀಲಾ' ಕಾದಂಬರಿಯಲ್ಲಿ ಆಧುನಿಕತೆಯ ಪ್ರವೇಶದಿಂದಾಗಿ ಜಡಗೊಂಡ ಸಮಾಜವೊಂದು ಚಲಿಸಲು ಪ್ರಾರಂಭಿಸುವ ದರ್ಶನವಿದೆ. ನೀಲಾಳ ಸಮಸ್ಯೆ ಬಗೆಹರಿಯಲೇಬೇಕಾದ ಒತ್ತಾಯವು ಇಲ್ಲಿದೆ. ಕಾದಂಬರಿಯಲ್ಲಿ ಖಾನಾವಳಿಯು ಅನಿವಾರ್ಯವಾಗಿ ಬದಲಾಗುವ ಬದುಕಿನ ಆಯಾಮಗಳನ್ನು ಕಟ್ಟಿಕೊಡುತ್ತದೆ. ಹೋಟೆಲಿನ ಸನ್ನಿವೇಶ ಹಲವು ನೆಲೆಗಳಲ್ಲಿ ಸಂಭವಿಸುವ ಆಧುನೀಕರಣ ಪ್ರಕ್ರಿಯೆಯನ್ನು ಚಿತ್ರಿಸುತ್ತದೆ. ತೀರಾ ಮುಗ್ಧರಾದ ಮತ್ತು ತೀರಾ ಧೂರ್ತರಾದವರ ನಡುವಣ ಸಂಘರ್ಷ ಸರಳವಾದ ಶೋಷಕ-ಶೋಷಿತ ಸಂಬಂಧಗಳಲ್ಲಿ ಕಾದಂಬರಿ ಚಿತ್ರಿತವಾಗಿದೆ. ಪರಂಪರೆಯನ್ನು ಪ್ರತಿನಿಧಿಸುವ ತಾಯವ್ವ ಕ್ರಿಯಾಹೀನಳೂ, ದುರ್ಬಳಲೂ ಆಗಿದ್ದರೆ ಆಧುನಿಕತೆಯನ್ನು ಪ್ರತಿನಿಧಿಸುವ ಷಡಕ್ಷರಪ್ಪ ಕುತಂತ್ರ ಆಸೆಬುರಕನೂ ಆಗಿದ್ದಾನೆ. ತಾಯವ್ವನ ಖಾನಾವಳಿ ಉದ್ಯೋಗಸ್ಥರಿಗೆ ಪ್ರಾಮುಖ್ಯತೆಯ ಸ್ವರೂಪ ಆಧುನಿಕವಾದದ್ದಾಗಿದೆ. ಶ್ರೀಶೈಲನ ಹಸಿವು, ನೀರಡಿಕೆ, ನಿರುದ್ಯೋಗ ಸಮಸ್ಯೆ ಮುಂತಾದ ಸಮಸ್ಯೆಗಳಿಗೆ ಆಧುನಿಕತೆಯಿಂದ ಕೂಡಿದ ಉತ್ತರ ಕೊಡುವಂತೆ ಖಾನಾವಳಿಯ ಚಿತ್ರಣವಿದೆ.

ಹಸಿದವರಿಗೆ ಕಲ್ಪವೃಕ್ಷವಾಗಿ ಆಧುನಿಕ ಮನೋಭಾವನೆಯು ನೀಲಾಳ ಪರೋಪಕಾರದ ವ್ಯಕ್ತಿ ಚಿತ್ರಣವಿದೆ. ನೀಲಾ ಹಾಗೂ ಅವಳ ತಾಯಿಯಲ್ಲಿನ ಖಾನಾವಳಿಯ ಮುಖಾಂತರ ಅಲ್ಲಿಗೆ ಬರುವ ಯುವಕರಿಗೆ ಆಧುನಿಕ, ಶ್ರಮದಾಯಕ ಜೀವನಶೈಲಿಯನ್ನು ಕಲಿಸುತ್ತಾರೆ. ತಾಯವ್ವನ ಖಾನಾವಳಿ ಹಾಗೂ ಸುಬ್ಬಣ್ಣನ ಹೋಟೆಲು ಆಧುನಿಕತೆಯ ಭಾಗವಾಗಿ ಬಂದ ಸೋಷಿಯಲ್ ಸರ್ವಿಸ್ ಜೊತೆಗೂಡಿ ಕೆಲಸ ನಿರ್ವಹಿಸಿದ ಚಿತ್ರಣವಿದೆ.

ವ್ಯಾಸರಾಯ ಬಲ್ಲಾಳರ 'ವಾತ್ಸಲ್ಯ ಪಥ' ಕಾದಂಬರಿಯಲ್ಲಿ ಬಹುಪಾಲು ಪಾತ್ರಗಳು ಆಧುನಿಕ ಸಂಸ್ಥೆಯಾದ ಹೋಟೆಲಿನಲ್ಲಿ ತಾತ್ವಿಕ ಸಂಭಾಷಣೆಗಳಿಂದ ವ್ಯಕ್ತಿತ್ವ ರೂಪಿಸಿಕೊಳ್ಳುತ್ತವೆ. ಪ್ಯಾರಡೈಸ್, ರೆಸ್ಟೋರೆಂಟ್, ರೈಲು ಮುಂತಾದವುಗಳಿಂದ ಜನರಲ್ಲಿ ಬದಲಾದ ಬದುಕಿನ ಚಿತ್ರಣಗಳಿವೆ. ವಿಭಕ್ತ ಕುಟುಂಬಗಳ ಸದಸ್ಯರು ಆಪ್ತಮಾತುಕತೆ ತಾಣವಾಗಿ ಇರಾಣಿ ಹೋಟೆಲು ಚಿತ್ರಣಗೊಂಡಿದೆ. ವಿವಿಧ ಕಾರ್ಖಾನೆಗಳಲ್ಲಿನ ಮಹಿಳೆಯರಿಗೆ ಕೆಲಸದ ಒತ್ತಡಗಳಲ್ಲಿ ಉಪಾಹಾರ ಗೃಹಗಳು ನೆಮ್ಮದಿಯ ಕೇಂದ್ರಗಳಾಗಿ ನಿಲ್ಲುತ್ತವೆ. ಬಹುಪಾಲು ಆಧುನಿಕತೆಗೊಳಗಾದ ನಗರಗಳಲ್ಲಿ ಹೋಟೆಲುಗಳು ಪರಿಚಯವಿಲ್ಲದವರನ್ನು ಪರಿಚಯಿಸುವ ಕೇಂದ್ರಗಳಾಗಿವೆ. ಹೋಟೆಲುಗಳು ಸಂಪ್ರದಾಯಸ್ಥ ಹಾಗೂ ಆಧುನಿಕತೆಯ ಮನಸ್ಸುಗಳು ಪರಸ್ಪರ ಗೌರವ ವಿನಿಮಯವಾಗುವ ವೇದಿಕೆಗಳಾಗಿವೆ. ಹೋಟೆಲಿನಲ್ಲಿ ನೊಂದ ಮನಸ್ಸುಗಳಿಗೆ ಪರಿಹಾರಾತ್ಮಕ ಆಧುನಿಕ ವಿಚಾರ ಸರಣಿಗಳಿವೆ.

ಇದೇ ಲೇಖಕರ ಮತ್ತೊಂದು ಕಾದಂಬರಿ 'ಬಂಡಾಯ'ವು ಆಧುನೀಕರಣಕ್ಕೊಳಗಾದ ಹೋಟೆಲುಗಳು, ಖಾನಾವಳಿಗಳು, ಅಲ್ಲಿಗೆ ಬರುವ ಗ್ರಾಹಕರು ಮುಂತಾದವುಗಳನ್ನು ಚಿತ್ರಿಸುತ್ತದೆ. ಮೇಲ್ಚಾವಣಿಯಲ್ಲಿ ಪ್ರತಿಕೃತಿ, ಕಬ್ಬಿಣದ ಸರಳುಗಳ ಬಾಗಿಲು, ದೀಪಗಳ ಅಲಂಕಾರ, ಗೇಟುಗಳ ಮೇಲೆ ಕೆಂಪು ಪತಾಕೆಗಳು ಆಧುನಿಕ ಪ್ರತೀಕಗಳಾಗಿ ರೆಸ್ಟೋರೆಂಟ್‌ನಲ್ಲಿ ವಿಜೃಂಭಿಸುತ್ತವೆ. ಆ ರೆಸ್ಟೋರೆಂಟ್ ಬಳಿ ಆಧುನಿಕತೆಗೊಳಗಾದ ಜನರ ಸಂಘಟನಾತ್ಮಕ ಗುಂಪು ಘರ್ಷಣೆಗಳು ನಡೆಯುತ್ತಿರುತ್ತವೆ. ಮುಂಬಯಿ ನಗರದ ಹಾರ್ನಿಮನ್ ವೃತ್ತದಲ್ಲಿ ಬ್ಯಾಂಕ್, ಇನ್ಸೂರೆನ್ಸ್, ಪೆಟ್ರೋಲಿಯಂ, ಕೆಮಿಕಲ್ಸ್, ಸ್ಟೀಲ್, ಟೆಕ್ಸ್‌ಟೈಲ್ಸ್, ಸಿಮೆಂಟ್ ಕಾರ್ಖಾನೆಗಳಂತೆ ಹೋಟೆಲು ಆಧುನಿಕ ಸಂಕೇತದ ರೂಪದಲ್ಲಿ ಚಿತ್ರಿತವಾಗಿದೆ. ಸಿನಿಮಾ ಮಂದಿರಗಳು, ಕುಟೀರ ಕೈಗಾರಿಕಾ ಫ್ಯಾಶನ್ ಷೋಕೇಸ್‌ಗಳಂತೆಯೇ ಪಂಚತಾರಾ ಹೋಟೆಲುಗಳು ಪ್ರವಾಸೋದ್ಯಮವನ್ನು ಉತ್ತೇಜಿಸುವ ತಾಣಗಳಾಗಿವೆ. ಔದ್ಯೋಗೀಕರಣ, ನಗರೀಕರಣ, ವ್ಯಾಪಾರೀಕರಣಗಳ ಜೊತೆಗೆ ಹೋಟೆಲು ಕಾರ್ಮಿಕರ ಸಾಂಘಿಕ ಸಂಘರ್ಷವಿದೆ. ಇವರ ಇನ್ನೊಂದು 'ಹೆಜ್ಜೆ' ಕಾದಂಬರಿಯಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗಳಿಗೆ ಹೋಟೆಲು ಶಕ್ತಿಕೇಂದ್ರವಾಗಿ ಚಿತ್ರಣಗೊಂಡಿದೆ. ಪುರುಷೋತ್ತಮ ಹಾಗೂ ಶಾಸ್ತ್ರಿಗಳ ಸಂಭಾಷಣೆಯ ಮೂಲಕ ನಿರುದ್ಯೋಗ ಸಮಸ್ಯೆಗಳನ್ನು ಪರಿಹರಿಸುವ

ನೆಲೆಯಲ್ಲಿ ಹೋಟೆಲಿನ ಚಿತ್ರಣವನ್ನು ನಿರೂಪಕರು ತಂದಿದ್ದಾರೆ. ವರ್ಣಗಳನ್ನು ಮೀರಿ ಹೋಟೆಲು ಮಾಣಿಗಳು ಭಾರತದ ಪ್ರಮುಖ ನಗರಗಳಲ್ಲಿ ನೆಲೆಯೂರಿದ ಚಿತ್ರಣವಿದೆ. ಆಧುನಿಕ ಕುಟುಂಬ ವ್ಯವಸ್ಥೆ, ಅಲ್ಲಿನ ಊಟದ ಗುಣಮಟ್ಟ ಇವುಗಳೊಂದಗೆ 'ರಾಂ ಬರೋಸಾ' ಹಿಂದೂ ಹೋಟೆಲು ಚಿತ್ರಣವಾಗಿದೆ. ಆಧುನಿಕ ವ್ಯವಹಾರವಾದ ಹೋಟೆಲುಗಳ ಲಾಭ ನಷ್ಟಗಳ ಚರ್ಚೆಯನ್ನು ಬಹುಪಾಲು ಕಾದಂಬರಿಯ ಪಾತ್ರಗಳು ನಡೆಸಿವೆ. ಬಾಳೆಬರಯಲ್ಲಿ ವಿದ್ಯಾಧರ-ಶಂಕರನ ಹುಡುಕಾಟದ ಸಂದರ್ಭದಲ್ಲಿ ಬಸ್‌ಸ್ಟ್ಯಾಂಡ್, ಕಾಫಿ, ಹಂಡೆ, ಕಪಾಟು, ಕುರ್ಚಿ, ಬೆಂಚು ಹೋಟೆಲಿನಲ್ಲಿರುವ ವಸ್ತುಗಳ ಆಧುನಿಕತೆಯ ಪ್ರತೀಕವಾಗಿ ಚಿತ್ರಿತವಾಗಿವೆ. ಆಧುನಿಕ ಭರಾಟೆಯ ಬದುಕಿನಲ್ಲಿ ಜನರಲ್ಲಿ ಸಂಭವಿಸುವ ಆರ್ಥಿಕ ಸಂಕಷ್ಟಗಳಿಗೆ ಸ್ಪಂದಿಸುವ ನೆಲೆಯಲ್ಲಿ ಹೋಟೆಲು ಚಿತ್ರಿತವಾಗಿದೆ. ಆಧುನಿಕ ಜಗತ್ತಿನಲ್ಲಿ ಜನರಿಗೆ ಹೋಟೆಲು ಉದ್ಯಮದಿಂದ ಜೀವನ ರೂಪಿಸಿಕೊಳ್ಳುವ ಅನಿವಾರ್ಯದ ಪ್ರಸಂಗವಾಗಿದೆ. ಹೊಸ ಶಿಕ್ಷಣಪದ್ಧತಿಯು ಯುವಕರಲ್ಲಿ ಹೋಟೆಲುಗಳ ಆರಂಭಕ್ಕೆ ಪ್ರೇರಕಶಕ್ತಿಯಾಗಿ ನಿಂತಿರುತ್ತದೆ. ಶಾಸ್ತ್ರಿಗಳ ಮುಜುಗರದ ನಡುವೆ ಗಂಗಾಧರನ ಆಧುನಿಕ ಭವಿಷ್ಯವು ಹೋಟೆಲು ಸಹಯೋಗದಲ್ಲಿ ಒಂದು ಉದ್ಯಮವಾಗಿ ಬೆಳೆದುನಿಲ್ಲುತ್ತದೆ.

ಶ್ರೀ ಕೃಷ್ಣ ಆಲನಹಳ್ಳಿ ಅವರ 'ಭುಜಂಗಯ್ಯನ ದಶಾವತಾರಗಳು' ಎಂಬ ಕಾದಂಬರಿಯು ವ್ಯಕ್ತಿಯಲ್ಲಾದ ಬಹುಮುಖಿ ಬದಲಾವಣೆಗಳನ್ನು ಚಿತ್ರಿಸುತ್ತದೆ. ಇದರಲ್ಲಿ ಹೋಟೆಲಿನಿಂದಾಗಿ ಭುಜಂಗಯ್ಯನಲ್ಲಿನ ಹೊಸ ವ್ಯಕ್ತಿತ್ವ ವಿಕಾಸವಾದದ್ದನ್ನು ನಿರೂಪಕರು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಕುಟುಂಬದವರ, ಊರಿನವರ ಪ್ರೋತ್ಸಾಹ, ನಿಂದನೆ ನಡುವೆಯೇ ಅನೇಕ ದೃಷ್ಟಾಂತಗಳ ಮೂಲಕ ಹೋಟೆಲು ಆರಂಭಿಸುವ ಹೊಸ ಬಗೆಯ ಮಾನಸಿಕತೆಗೆ ಒಳಗಾಗುತ್ತಾನೆ. ಭುಜಂಗಯ್ಯನ ಹೋಟೆಲು ಆಧುನಿಕವಾಗಿ ರೂಪಿಸುವುದಕ್ಕೋಸ್ಕರ ಮಂಚಚಾರಿ, ಮಾದಿಗರ ಕೆಂಚ, ಚಲುವ ಆಪ್ತ ಗೆಳೆಯರು ಆಶ್ವಾಸನೆ ಕೊಡುತ್ತಾರೆ. ಕೂಡುರಸ್ತೆಯಲ್ಲಿ ಹೋಟೆಲು ಆರಂಭದಿಂದಾಗಿ ಬಸ್ಸು ಬಂದು ನಿಲ್ಲುವ ಸ್ಥಳವಾಗಿ ಮಾರ್ಪಟ್ಟಿತು. ಬಹುತೇಕ ಹಳ್ಳಿಗಳಲ್ಲಿ ಕಾಣಸಿಗುವ ಹೋಟೆಲುಗಳಿಗಿಂತ ಭಿನ್ನವಾಗಿ ಗಿರಾಕಿಗಳ ಪ್ರತ್ಯೇಕ ಕೊಠಡಿ, ಬೆಂಚುಗಳ ಅಳವಡಿಕೆ, ಇನ್ನೊಂದು ವಿರಾಮದ ಕೊಠಡಿ, ಆಧುನಿಕತೆಯನ್ನು ಬಿಂಬಿಸುವ ಹೋಟೆಲು ಮಾಲೀಕನಾಗಿ ರೂಪಿತನಾಗುತ್ತಾನೆ. ಭುಜಂಗಯ್ಯನಲ್ಲಿ ಮಾವ ಪರ್ವತಪ್ಪ ಮಠದ ಸ್ವಾಮಿಗಳ ಶೈಲಿಯಲ್ಲಿ ಪಾಪ-ಪುಣ್ಯಗಳ ಉಪದೇಶಕ್ಕೆ ಅವನ ಮನದಲ್ಲಿ ಹೋಟೆಲಿಡುವುದು ಕಿಂಚಿತ್ತು ಅಲುಗಾಡಲಿಲ್ಲ. ಭುಜಂಗಯ್ಯನಿಗೆ ಹೋಟೆಲಿನ ಕೆಲಸ ಕಾರ್ಯಗಳ ನಡುವೆ ಪಾರಂಪರಿಕ ಶಿವಪೂಜೆ ಮರೆತು ಹೋಗುತ್ತಿತ್ತು. ಹೋಟೆಲು ವ್ಯವಹಾರದಿಂದಾಗಿ ನಿತ್ಯವೂ ಹೊಸ ಹೊಸ ಮುಖಗಳನ್ನು ಕಾಣುವಂತಾಗುತ್ತಾನೆ. ಗ್ರಾಹಕರಾಡುವ ಹೊಸ ಹೊಸ ಆವಿಷ್ಕಾರಗಳ ಮಾತುಗಳನ್ನು ಕೇಳುವುದು ಕುತೂಹಲತೆಯಿಂದ ಕೂಡಿತ್ತು. ಲೋಕಾನುಭವಗಳ ವಿಸ್ತರಣೆಯೊಂದಿಗೆ ಆಧುನಿಕವಾಗಿರುವ ಮನುಷ್ಯರಿಗಿರಬೇಕಾದ ವ್ಯಕ್ತಿತ್ವ

ರೂಪಗೊಂಡಿತ್ತು. ಹೋಟೆಲು ವ್ಯವಹಾರದಿಂದಾಗಿ ಭುಜಂಗಯ್ಯ ಮತ್ತು ಆತನ ಮಕ್ಕಳ ಊಟೋಪಚಾರ, ಉಡುಗೆ ತೊಡುಗೆಗಳಲ್ಲಿ ಆಧುನಿಕತೆಯ ಪ್ರಭಾವವಾಗುತ್ತದೆ. ಹೋಟೆಲಿಗೆ ಗಾರೆ ಇಲ್ಲವೆ ಸಿಮೆಂಟ್ ಹಾಕಿಸುವ ಹೊಸ ಯೋಚನೆ ಭುಜಂಗಯ್ಯನಿಗೆ ಹೊಳೆಯುತ್ತದೆ.

ನಾಗಣ್ಣ ಶೆಟ್ಟಿ, ಗೋಪಾಲ, ಲಕ್ಷ್ಮಣರಾಯ ಬೆಂಗಳೂರಿನ ಆಧುನಿಕ ಸಲಕರಣೆಗಳಿಂದ ಕೂಡಿದ 'ಸೀತಾ ವಿಳಾಸ ಛತ್ರ'ದಲ್ಲಿ ತಂಗಿದ್ದ ನೆನಪುಗಳನ್ನು ಹಂಚಿಕೊಳ್ಳುವ ರೀತಿ ಅ.ನ.ಕೃ. ಅವರ 'ಸಂಧ್ಯಾರಾಗ' ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಸುಸಜ್ಜಿತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನ್ನಪೂರ್ಣೇಶ್ವರಿ ಲಾಡ್ಜ್ ವಸತಿ ಹಾಗೂ ಊಟದ ವ್ಯವಸ್ಥೆಯಿಂದಾಗಿ ಆಧುನಿಕ ತಲೆಮಾರಿನ ಜನರಿಗೆ ಹೇಗೆ ಅನುಕೂಲಸಿಂಧುವಾಗಿದೆ ಎಂಬುದನ್ನು ಮೇಲೆ ಹೆಸರಿಸಿದ ಈ ಪಾತ್ರಗಳ ಮೂಲಕ ಕಾದಂಬರಿಯಲ್ಲಿ ನಿರೂಪಿಸಲಾಗಿದೆ.

ಮೊಗಳ್ಳಿ ಗಣೇಶ್ ಅವರ 'ಅನಾದಿ' ಕಾದಂಬರಿಯಲ್ಲಿ ಹೋಟೆಲಿನ ಚಿತ್ರಣದ ಮೂಲಕ ಮೈಸೂರು ಪರಿಸರದ ಪ್ರಾದೇಶಿಕತೆಯನ್ನೂ ಆಧುನಿಕ ಸಮಾಜದ ಜನರ ವೈಚಾರಿಕತೆಯನ್ನೂ ಕಲಾತ್ಮಕವಾಗಿ ಕಟ್ಟಿಕೊಡಲಾಗಿದೆ. ಗ್ರಾಮೀಣ ಜನಜೀವನದ ಆಧುನಿಕ ಸಾಂಸ್ಕೃತಿಕ ಬೆಳವಣಿಗೆಗಳು ಹೋಟೆಲಿನ ಆವರಣದೊಳಗೆ ಚಿತ್ರಿತವಾಗುತ್ತವೆ. ತಾತನ ಹೋಟೆಲು ಹಳ್ಳಿಯ ಜನರ ಆಧುನಿಕ ಜಗತ್ತಿನ ಕಲ್ಪನೆಗಳು ಬಿಚ್ಚಿಕೊಳ್ಳುವ ವೇದಿಕೆಯಾಗಿದೆ. ಪಾರಂಪರಿಕ ವರ್ಣಾಶ್ರಮ ಪದ್ಧತಿಗೆ ಬದಲಾಗಿ ವೈಚಾರಿಕ ಸಿದ್ಧಾಂತಗಳನ್ನು ಚರ್ಚಿಸುವ ಮಂಟಪವಾಗಿ ತಾತನ ಹೋಟೆಲು ಚಿತ್ರಿತವಾಗಿದೆ. ಇಲ್ಲಿ ಅಮಾಸನ ಪಾತ್ರ, ಹೋಟೆಲಿನ ತಿಂಡಿ-ತೀರ್ಥಗಳ ಮೂಲಕ ಜಾತಿ, ಪಂಥ, ಧರ್ಮದವರಲ್ಲಿಯೂ ಆಧುನಿಕ ಕಾಲಘಟ್ಟದ ಸಮಾನತೆಯ ಸ್ವರೂಪದ ಆಶಯವನ್ನು ಮೂಡಿಸುತ್ತದೆ. ಸಜ್ಜನರ ಮತ್ತು ದುರ್ಜನರ ಕೂಟವಾಗಿಯೂ ತಾತನ ಹೋಟೆಲು ಆಧುನಿಕ ಜನರ ಆಶೋತ್ತರಗಳನ್ನು ಚಿತ್ರಿಸುತ್ತದೆ. ಗಂಡಸರಗಿಂತ ಹೆಂಗಸರು ಕಡಿಮೆಯಲ್ಲ ಎನ್ನುವ ಮಲ್ಲಜ್ಜಮ್ಮ ಹೋಟೆಲು ಮಾಲೀಕಳಾಗಿ ಈ ಕಾದಂಬರಿಯಲ್ಲಿ ಸಾಬೀತುಪಡಿಸುತ್ತಾಳೆ. ಮಲ್ಲಜ್ಜಮ್ಮನ ಹೋಟೆಲಿನಲ್ಲಿ ಮೈಸೂರು ಪ್ರಾದೇಶಿಕ ಭಾಷಾಶೈಲಿಯಲ್ಲಿ ಗ್ರಾಹಕರು ಮಾತನಾಡುವುದು ಚಿತ್ರಿತವಾಗಿದೆ. ಈ ಕಾದಂಬರಿಯಲ್ಲಿ ಎರಡು ಹೋಟೆಲುಗಳ ಮಾಲೀಕರ ವೈಷಮ್ಯವನ್ನು ದ್ವಿಗುಣಗೊಳಿಸುವ ಪಾತ್ರವಾಗಿ ಚಿತ್ರಿತವಾಗಿದೆ. ಗ್ರಾಮೀಣ ಹೋಟೆಲುಗಳಲ್ಲಿನ ಮಾಲೀಕ, ಗ್ರಾಹಕ, ಕಾರ್ಮಿಕರ ಸಾಂಪ್ರದಾಯಿಕ, ಮಾನಸಿಕ ಸಂಕಷ್ಟಗಳಿಗೆ ಬದಲಾಗಿ ಆಧುನಿಕ ಜೀವನೋಪಾಯ ಕ್ರಮವು ಇಲ್ಲಿ ಚಿತ್ರಿತವಾಗಿದೆ. ತಾತನ ಹಾಗೂ ಮಲ್ಲಜ್ಜಮ್ಮನ ಹೋಟೆಲುಗಳು ಆಧುನಿಕ ವ್ಯಾವಹಾರಿಕ ಮನಸ್ಸುಗಳ ಪೈಪೋಟಿಗೆ ಸಾಕ್ಷಿಯಾಗಿ ನಿಂತಿರುತ್ತವೆ. ಗ್ರಾಮಮಟ್ಟದಲ್ಲಿ ಮಹಿಳೆ ಆಧುನಿಕ ಜೀವನಕ್ರಮ ರೂಪಿಸಿಕೊಳ್ಳುವುದಕ್ಕೆ ಹಳ್ಳಿಗಳಲ್ಲಿ ಲವಲವಿಕೆ, ಆಲಸ್ಯ, ಮಾನಸಿಕ ಜಗತ್ತಿನ ಜನವರ್ಗ,

ಕೂಡುಕುಟುಂಬ ವ್ಯವಸ್ಥೆ ಮುಂತಾದವುಗಳಿಗೆ ಮಲ್ಲಜ್ಜಮನ ಮಾಲೀಕತ್ವದ ಹೋಟೆಲು ಉದಾಹರಣೆಯಾಗಿದೆ. ಸಹಜ ಹಾಗೂ ಕೃತಕ ಮನೋಭಾವನೆಗಳು ಹೋಟೆಲಿನಲ್ಲಿ ಆಧುನಿಕ ಸ್ವರೂಪದೊಂದಿಗೆ ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಆಧುನಿಕ ತಿಂಡಿ-ತೀರ್ಥಗಳನ್ನು ಬಾಳೆ ಎಲೆಯಂತಹ ದೇಶೀಯ ಪರಿಕರಗಳಲ್ಲಿ ಗ್ರಾಹಕರಿಗೆ ಉಣಬಡಿಸುವ ಚಿತ್ರಣದ ಮೂಲಕ ಕಾದಂಬರಿಯು ಪಾರಂಪರಿಕ ಜ್ಞಾನದ ಬಗೆಗೆ ಜಾಗೃತಿಯನ್ನು ಮೂಡಿಸುತ್ತದೆ. ಮಲ್ಲಜ್ಜಮ್ಮನ ಹೋಟೆಲು ಪಕ್ಷಿಗಳಿಗೂ ಆಶ್ರಯ ನೀಡುವುದರ ಮೂಲಕ ಜೀವಸಂಕುಲವೆಲ್ಲ ಸಮಾನವೆಂಬ ತೀರಾ ಆಧುನಿಕವಾದ ಆಶಯವನ್ನು ಕಾದಂಬರಿಯು ಬಿಂಬಿಸುತ್ತದೆ. ಮಲ್ಲಜ್ಜಮ್ಮನ ಚಟ್ನಿಯ ರುಚಿಕಟ್ಟು ಆಧುನಿಕ ಗ್ರಾಹಕರ ನಾಲಿಗೆಯಲ್ಲಿ ಕುಣಿಯುವಂತೆ ಇರುತ್ತಿತ್ತು. ಜಾಂಗೀರು, ಜಿಲೇಬಿ, ಬಾದುಷಾಹ ಹಳ್ಳಿಯ ಹೋಟೆಲುಗಳಲ್ಲಿ ಮೊಗಲ ಸಾಮ್ರಾಜ್ಯದ ಚಾರಿತ್ರಿಕ ಕಲ್ಪನೆಯನ್ನು ತೆರೆದಿಡುತ್ತವೆ. ಹೋಟೆಲು ಆಧುನಿಕವಾದ ತಾತ್ವಿಕತೆಯನ್ನು ಒಪ್ಪಿಕೊಂಡ ರೀತಿಯು ಇಲ್ಲಿ ಚಿತ್ರಿತವಾಗಿದೆ. ಆಧುನಿಕತೆಯನ್ನು ಮೀರಲು ಸಿದ್ಧರಿಲ್ಲದ ಗ್ರಾಹಕರ ಮನೋಸ್ಥಿತಿಯನ್ನು ಕಾದಂಬರಿಯು ಪ್ರತಿಪಾದಿಸುತ್ತದೆ. ಅಮಾಸನು ಸುತ್ತೇಳು ಹಳ್ಳಿಗಳ ಪಾರಂಪರಿಕ ವರ್ತಮಾನವನ್ನು ಹೋಟೆಲಿನಲ್ಲಿ ಆಧುನಿಕ ಶೈಲಿಯಲ್ಲಿ ಕಥೆ ಕಟ್ಟಿ ಹೇಳುವ ಸನ್ನಿವೇಶವನ್ನು ಕಾದಂಬರಿಯು ಚಿತ್ರಿಸುತ್ತದೆ. ಅಲ್ಲಿ ಇಂದಿರಾಗಾಂಧಿ ವ್ಯಕ್ತಿತ್ವ, ಆಕೆಯ ಕಾರ್ಯವೈಖರಿ, ತಾತ ಕೇಳಿದ ಭಾಷಣಗಳ ನೆನಪು ಇವೆಲ್ಲವೂ ಹೋಟೆಲಿಗೆ ಬರುವ ಗ್ರಾಹಕರನ್ನು ಹೊಸ ಬಗೆಯ ಚಿಂತನೆಗೆ ಹಚ್ಚುತ್ತಿದ್ದವು. ಹಳ್ಳಿಯ ಹೋಟೆಲಾದರೂ ರಾಷ್ಟ್ರಮಟ್ಟದಲ್ಲಿ ರೂಪಿತವಾದ ಹಲವಾರು ಆಧುನಿಕ ವಿಚಾರಗಳು ಅಲ್ಲಿ ಮಂಡಿತವಾಗುತ್ತಿದ್ದವು. ಹಳ್ಳಿಯ ಚಹಾದಂಗಡಿ ಯಜಮಾನರು ಸಾರ್ವಜನಿಕರ ಗೌರವಯುತ ಮಾತುಕಥೆಗಳಿಗೆ ಮನ್ನಣೆ ಕೊಡುತ್ತಿದ್ದರು. ಗ್ರಾಮೀಣ ಮಹಿಳೆಯರ ಮೋಸದಿಂದ ಏರ್ಪಟ್ಟ ಅನೇಕ ಸಂಬಂಧಗಳು ಆಧುನಿಕ ತಾತ್ವಿಕ ಸ್ವರೂಪದೊಂದಿಗೆ ಹೋಟೆಲಿನಲ್ಲಿ ಪರಿಹಾರ ಪಡೆದು ಕೊಳ್ಳುತ್ತಿದ್ದವು. ಚಹಾದಂಗಡಿಯಲ್ಲಿ ಗಿರಾಕಿಗಳು ಆಧುನಿಕ ಮಾಧ್ಯಮಗಳಲ್ಲಿ ಬಂದ ವಿಷಯದ ಕುರಿತಾಗಿಯೂ ಮಾತನಾಡಿಕೊಳ್ಳುತ್ತಿದ್ದರು. ತಾತನ ಹೋಟೆಲಿನ ಭಾಗವಾಗಿ ಕೆಂಚವ್ವನ ಸೂಲಗಿತ್ತಿ ಪರಂಪರೆ ಹಾಗೂ ಆಕೆಯ ಆಧುನಿಕ ಮನಸ್ಥಿತಿಯ ಕೆಲಸ ಕಾರ್ಯಗಳು ಕಾದಂಬರಿಯಲ್ಲಿ ಚಿತ್ರಿತವಾಗಿವೆ.

ಬೀಚಿಯವರ 'ಆರಿದ ಚಹಾ' ಕಾದಂಬರಿಯು ಹೋಟಲಿನ ಸನ್ನಿವೇಶ ನಿರ್ಮಾಣದ ಮೂಲಕ ಆಧುನೀಕರಣ ಪ್ರಕ್ರಿಯೆಯನ್ನು ಚಿತ್ರಿಸಿದೆ. ಹಡಗಲಿಯ ಉಡುಪಿ ಶ್ರೀಕೃಷ್ಣ ವಿಲಾಸ ಕಾಫಿ ಕ್ಲಬ್ ಹಾಗೇ ವೀರಶೈವ ಬ್ರಾಹ್ಮಣರ ಫಲಾಹಾರ ಮತ್ತು ಚಾ., ಕಾಫಿ ಹೋಟ್ಲು ಇವೆಲ್ಲವುಗಳಲ್ಲಿ ಆಧುನಿಕತೆಗೊಳಗಾದ ವ್ಯಕ್ತಿಗಳು ಮಾಲೀಕರಾಗಿರುವುದನ್ನು ವಿಶೇಷ ಮಾತಿನ

ಶೈಲಿಯ ಮೂಲಕ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಅದೇ ರೀತಿ ಬೆಂಗಳೂರಿನ ಹೋಟೆಲುಗಳ ಘಟನಾವಳಿಗಳನ್ನು ವಿವರಿಸುವುದರ ಮೂಲಕ ಲೇಖಕರು ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿಯನ್ನು ನವಿರಾಗಿ ಚಿತ್ರಿಸಿದ್ದಾರೆ. ಹಲವು ಪಾತ್ರಗಳ ಮೂಲಕ ಕಾದಂಬರಿಯಲ್ಲಿ ಆಧುನೀಕರಣ ಪ್ರಕ್ರಿಯೆಯನ್ನು ಲೇಖಕರು ಬಿಚ್ಚಿಟ್ಟಿದ್ದಾರೆ. ನಗರಗಳಲ್ಲಿ ಹೋಟೆಲುಗಳು ಗ್ರಾಹಕರ ಆಧುನಿಕ ಮನಸ್ಸಿಗೆ ತಕ್ಕಂತೆ ಊಟ-ವಸತಿ ಕಲ್ಪಿಸುವ ಚಿತ್ರಣಗಳಿವೆ. ಹೋಟೆಲುಗಳಲ್ಲಿನ ಗ್ರಾಹಕ ಹಾಗೂ ಕಾರ್ಮಿಕರ ಭಾಷಾಶೈಲಿಯು ಆಧುನಿಕ ವ್ಯಾವಹಾರಿಕತೆಯಿಂದ ಕೂಡಿದೆ. ಬೆಂಗಳೂರಿನ ಹೋಟೆಲು ಮಾಣಿಗಳು ಆಧುನಿಕತೆಗೆ ಸಿಲುಕಿಕೊಂಡ ಗ್ರಾಹಕರ ಮನೋಸ್ಥಿತಿಗೆ ತಕ್ಕಂತೆ ತಮ್ಮ ಮಾತುಗಾರಿಕೆಯಿಂದ ಸ್ಪಂದಿಸುತ್ತಾರೆ. ಉದ್ಯೋಗಸ್ಥರ ಬೇಕು ಬೇಡಗಳನ್ನು ಪೂರೈಸುವ ಆಧುನಿಕ ಕಲ್ಪವೃಕ್ಷಗಳಾಗಿ ಹೋಟೆಲುಗಳ ಚಿತ್ರಣವಿದೆ. ಸಿನಿಮಾ ತಾರೆಯರು, ಚಿಂತಕರು, ರಾಜಕಾರಣಿಗಳು, ಕ್ರೀಡಾಪಟುಗಳಿಗೆಂದೇ ಆಧುನೀಕರಣಗೊಂಡ ನಗರಗಳಲ್ಲಿ ಎಷ್ಟೋ ಹೋಟೆಲುಗಳು ಸ್ಥಾಪಿತವಾಗಿವೆ. ನಗರಪ್ರದೇಶದಲ್ಲಿರುವ ಆಧುನಿಕ ಸೌಲಭ್ಯ ಹೊಂದಿದ ಹೋಟೆಲುಗಳಲ್ಲಿ ರಘುನಾಥ ಅನುಸೂಯರು ತಿಂಡಿ-ತಿನಿಸುಗಳನ್ನು ಸೇವಿಸುವ ಸನ್ನಿವೇಶವು ಇಲ್ಲಿ ಚಿತ್ರಣಗೊಂಡಿದೆ. ಈ ಸಂದರ್ಭದಲ್ಲಿ ಅವರು ಆಧುನಿಕ ಬದುಕಿನಲ್ಲಿ ಸಂಭವಿಸುವ ಕಷ್ಟ ಸುಖಗಳ ಚಿತ್ರಣವಿದೆ. ಪ್ರವಾಸಿಗರು, ಟ್ಯಾಕ್ಸಿ ಚಾಲಕರ ಆಧುನಿಕ ಮನಸ್ಥಿತಿಗೆ ಅನುಗುಣವಾಗಿ ಹೋಟೆಲು ಮಾಲೀಕರು-ಕಾರ್ಮಿಕರು ಕಾರ್ಯ ನಿರ್ವಹಿಸುವ ಪರಿಯು ಇಲ್ಲಿ ಚಿತ್ರಿತವಾಗಿದೆ. ಆಧುನಿಕ ಆರ್ಥಿಕ ತಿಳುವಳಿಕೆಯು ಹೋಟೆಲುಗಳ ವ್ಯವಹಾರದ ಮೂಲಕ ಚಿತ್ರಿತವಾಗುತ್ತದೆ.

ಆಧುನಿಕತೆಯ ಪ್ರತೀಕವಾಗಿ ಬಹುತೇಕ ನಗರ ಹೋಟೆಲುಗಳಲ್ಲಿ ಫ್ಯಾಮಿಲಿ ರೂಮ್‌ಗಳು ಇರುವ ವಾಸ್ತವ ಸಂಗತಿಯನ್ನು ಕಾದಂಬರಿಯು ಚಿತ್ರಿಸುತ್ತದೆ. ಆಧುನೀಕರಣಗೊಂಡ ನಗರದ ಹೋಟೆಲುಗಳಲ್ಲಿ ಗ್ರಾಹಕರ ಅಭಿರುಚಿಗೆ ತಕ್ಕಂತೆ ಊಟೋಪಚಾರಗಳ ಲಭ್ಯತೆಯ ಬಗೆಗೂ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಆಧುನಿಕ ಹೋಟೆಲಿನಲ್ಲಿ ತಯಾರಾಗುವ ಆಧುನಿಕ ತಿಂಡಿ-ತಿನಿಸುಗಳು ಕೌಟುಂಬಿಕ ಮಟ್ಟದಲ್ಲಿ ಬೀರುವ ದುಷ್ಪರಿಣಾಮಗಳನ್ನು ವಿವರಿಸಲಾಗಿದೆ. ಹೀಗೆ ಹೋಟೆಲುಗಳ ಮೂಲಕ ಹಳ್ಳಿ ಹಾಗೂ ನಗರಗಳಲ್ಲಿ ಸಂಭವಿಸುವ ಆಧುನೀಕರಣ ಪ್ರಕ್ರಿಯೆಯನ್ನು ವಿನೋದಪೂರ್ಣವಾಗಿ ಚಿತ್ರಿಸುವ ಕಾದಂಬರಿಯು ಓದುಗರನ್ನು ಗಂಭೀರ ಚಿಂತನೆಗೆ ಹಚ್ಚುತ್ತದೆ.

ಒಟ್ಟಾರೆಯಾಗಿ ಕನ್ನಡದ ಸಣ್ಣಕಥೆ, ಕಾದಂಬರಿಗಳಲ್ಲಿ ಹೋಟೆಲಿನ ಚಿತ್ರಣವು ಸನ್ನಿವೇಶ ನಿರ್ಮಾಣಕ್ಕಾಗಿ ಮಾತ್ರ ಬರುತ್ತವೆಂದು ಹೇಳಲಾಗದು ಸನ್ನಿವೇಶ ನಿರ್ಮಾಣದ ಜೊತೆಗೆ ಅದುವೇ ಒಂದು ಪಾತ್ರವಾಗಿಬಿಡುತ್ತದೆ. ಅಷ್ಟು ಮಾತ್ರವಲ್ಲದೆ ಆಧುನಿಕತೆಯ ಪ್ರತೀಕವಾಗಿರುವ ಹೋಟೆಲು ವಿವಿಧ ನೆಲೆಗಳಲ್ಲಿ ಆಧುನೀಕರಣ ಪ್ರಕ್ರಿಯೆಯ ಭಾಗವಾಗಿಯೂ ಸಣ್ಣಕಥೆ, ಕಾದಂಬರಿ

ಗಳಲ್ಲಿ ಚಿತ್ರಣಗೊಂಡಿರುವುದನ್ನು ನಾವು ಗಮನಿಸಬಹುದು. ಗ್ರಾಮೀಣ ಪ್ರದೇಶದ ಹೋಟೆಲುಗಳಲ್ಲಿ ಪಾರಂಪರಿಕ ಶ್ರೇಣೀಕರಣ ವ್ಯವಸ್ಥೆಯ ಕುರುಹುಗಳು ಕಂಡುಬಂದರೆ ನಗರಪ್ರದೇಶದ ಹೋಟೆಲುಗಳಲ್ಲಿ ಆಧುನಿಕತೆಯ ವಿವಿಧ ಗುಣಲಕ್ಷಣಗಳು ಕಂಡುಬರುತ್ತವೆ. ಈ ಎರಡೂ ಬಗೆಯ ವೈರುಧ್ಯಗಳನ್ನು ಕನ್ನಡದ ಕಥೆ, ಕಾದಂಬರಿಗಳು ಸಶಕ್ತವಾಗಿ ಪಡಿಮೂಡಿಸಿವೆ.

### ೩.೨. ಸಾಂಪ್ರದಾಯಿಕ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಸಂಘರ್ಷ

ನಮ್ಮ ಸಾಂಪ್ರದಾಯಿಕ ಮನಸ್ಸುಗಳು ಯಾವುದೇ ರೀತಿಯ ಆಧುನಿಕತೆಯನ್ನು ಸುಲಭವಾಗಿ ಸ್ವೀಕರಿಸಲು ಸಿದ್ಧವಿರುವುದಿಲ್ಲ. ಆಧುನಿಕತೆಗೆ ಒಗ್ಗಿಕೊಳ್ಳಲು, ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ವ್ಯಕ್ತಿಗಳಿಗೆ ಒಂದು ಬಗೆಯ ಮಾನಸಿಕ ಸಿದ್ಧತೆ ಬೇಕಾಗುತ್ತದೆ. ಅದಕ್ಕಾಗಿ ಒಂದಿಷ್ಟು ಕಾಲಾವಕಾಶವೂ ಬೇಕಾಗುತ್ತದೆ. ಗ್ರಾಮೀಣ ಸಂಸ್ಕೃತಿಗೆ ವಿಶೇಷ ಮಹತ್ವವುಳ್ಳ ಭಾರತದಂತಹ ದೇಶದಲ್ಲಿ ಆಧುನಿಕತೆಗೆ ತೆರೆದುಕೊಳ್ಳುವ ಹಂತದಲ್ಲಿ ನಮ್ಮ ಸಾಂಪ್ರದಾಯಿಕ ಮನಸ್ಸುಗಳು ಹಲವು ಬಗೆಯ ಸಂಕಷ್ಟಗಳಿಗೆ ಒಳಗಾದದ್ದು ಉಂಟು. ಈಗಾಗಲೇ ಗಮನಿಸಿದಂತೆ ಹೋಟೆಲು ಎಂಬುದು ಆಧುನಿಕತೆಯ ಒಂದು ಘಟಕವಾಗಿ ಸಾರ್ವಜನಿಕ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ಮಾನವ ಸಮಾಜದ ಆಧುನೀಕರಣ ಪ್ರಕ್ರಿಯೆಯಲ್ಲೂ ಹೋಟೆಲಿನ ಪಾತ್ರ ಮಹತ್ವದ್ದಾಗಿದೆ. ಸಾರ್ವಜನಿಕ ಸಮಾಜ ಮತ್ತು ಬದುಕನ್ನು ಆಧುನೀಕರಣಗೊಳಿಸಿದ ಪ್ರಮುಖ ಘಟಕಗಳಲ್ಲಿ ಒಂದಾದ ಹೋಟೆಲು ಸಾಹಿತ್ಯದ ಆಧುನೀಕರಣ ಪ್ರಕ್ರಿಯೆಯಲ್ಲೂ ಪ್ರಮುಖ ಪಾತ್ರ ವಹಿಸಿದೆ. ಹಾಗಾಗಿ ಹೋಟೆಲುನಂತಹ ಆಧುನಿಕತೆಯ ಘಟಕವು ಸಾರ್ವಜನಿಕ ಬದುಕಿನಲ್ಲಿ ಪ್ರವೇಶ ಪಡೆದಾಗ ನಮ್ಮ ಗ್ರಾಮೀಣ ಸಾಂಪ್ರದಾಯಿಕ ಮನಸ್ಸುಗಳಲ್ಲಿ ಸಂಭವಿಸಿದ ತಾಕಲಾಟ ಮತ್ತು ಸಂಘರ್ಷಗಳನ್ನು ಕನ್ನಡದ ಸಣ್ಣಕಥೆ-ಕಾದಂಬರಿಗಳು ಕಲಾತ್ಮಕವಾಗಿ ಕಟ್ಟಿಕೊಟ್ಟಿವೆ.

ಭಾರತೀಯ ಪರಂಪರೆಯಲ್ಲಿ ಅನ್ನದಾನಕ್ಕೆ ವಿಶೇಷ ಮಹತ್ವವಿತ್ತು. ಆದರೆ ಆಧುನಿಕ ಜಗತ್ತಿಗೆ ಹೋಟೆಲು ಎಂಬ ಆಧುನಿಕತೆಯ ಘಟಕವು ಕಾಲಿರಿಸಿದಾಗ ಅಲ್ಲಿ ಅನ್ನದಾನದ ಪರಂಪರೆಗೆ ವ್ಯತಿರಿಕ್ತವಾದ ಅನ್ನವಿಕ್ರಯದ ಉದ್ಯಮವು ಪ್ರಾರಂಭವಾಯಿತು ಎನ್ನಬಹುದು. ಹೀಗೆ ಅನ್ನದಾನದ ಪರಂಪರೆಯಿಂದ ಅನ್ನವಿಕ್ರಯದ ಉದ್ಯಮಕ್ಕೆ ಸ್ಥಿತ್ಯಂತರಗೊಳ್ಳುವಲ್ಲಿ ಹೋಟೆಲಿನ ಪಾತ್ರ ಮಹತ್ವದ್ದಾಗಿದೆ. ಇದರಂತೆ ಹೋಟೆಲು ಉದ್ಯಮದ ಮೂಲಕ ಅನ್ನದಾನದ ಪರಂಪರೆಯಿಂದ ಅನ್ನವಿಕ್ರಯದ ಆಧುನಿಕತೆಗೆ ಅನಿವಾರ್ಯವಾಗಿ ಒಗ್ಗಿಕೊಳ್ಳಬೇಕಾದ ಹಂತದಲ್ಲಿ ನಮ್ಮ ಸಾಂಪ್ರದಾಯಿಕ ಮನಃಸ್ಥಿತಿಗಳು ಹಲವು ಬಗೆಯ ಸಂಘರ್ಷಗಳಿಗೆ ಒಳಗಾಗಿವೆ. ಇಂತಹ ಸಂಘರ್ಷಗಳಿಗೂ ಕನ್ನಡದ ಸಣ್ಣಕಥೆ-ಕಾದಂಬರಿಗಳು ಕಲಾತ್ಮಕ ಅಭಿವ್ಯಕ್ತಿಯನ್ನು ನೀಡಿವೆ.

ಸಾಂಪ್ರದಾಯಿಕ ಭಾರತೀಯ ಸಮಾಜವು ಜಾತಿವ್ಯವಸ್ಥೆಯೊಂದಿಗೆ ಬೆಳೆದುಬಂದುದಾಗಿದೆ. ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದ ಸಮಾಜ ನಮ್ಮದು. ಆಧುನಿಕ

ಸಮಾಜದಲ್ಲೂ ಇಂತಹ ಜಾತೀಯ ಶ್ರೇಣೀಕರಣ ವ್ಯವಸ್ಥೆಯನ್ನು ಪೂರ್ತಿಯಾಗಿ ನಿವಾರಿಸಲು ಅಥವಾ ನಿರಾಕರಿಸಲು ನಮ್ಮಿಂದ ಸಾಧ್ಯವಾಗಿಲ್ಲ. ನಮ್ಮ ಗ್ರಾಮೀಣ ಪರಿಸರದಲ್ಲಿ ಹೋಟೆಲಿನಂತಹ ಆಧುನಿಕತೆಯ ಘಟಕದಲ್ಲೂ ಜಾತೀಯ ಶ್ರೇಣೀಕರಣದ ಪಾಲನೆಯಾಗುತ್ತಿರುವುದು ಒಂದು ವಿಪರ್ಯಾಸವೆಂದೇ ಹೇಳಬಹುದು. ಮೇಲ್ಜಾತಿಯ ಜನರು ತಮ್ಮ ಮನೆಗಳಲ್ಲಿ ಪಾಲಿಸುತ್ತಿದ್ದ ಶ್ರೇಣೀಕರಣ ವ್ಯವಸ್ಥೆಯನ್ನು ಹೋಟೆಲುಗಳಲ್ಲೂ ಪಾಲಿಸತೊಡಗಿದ್ದನ್ನು ಆಧುನಿಕತೆಯ ಆರಂಭದ ದಿನಮಾನಗಳಲ್ಲಿ ಕಾಣಬಹುದಾಗಿತ್ತು. ಗ್ರಾಮೀಣ ಪರಿಸರದ ಹೋಟೆಲುಗಳಲ್ಲಿ ಅಸ್ಪೃಶ್ಯ ಸಮುದಾಯ ಗಳ ಗ್ರಾಹಕರಿಗೆ ಪ್ರತ್ಯೇಕ ತಟ್ಟೆ, ಲೋಟಗಳ ವ್ಯವಸ್ಥೆ ಇದ್ದುದನ್ನು ತೀರಾ ಇತ್ತೀಚಿನ ದಶಕಗಳವರೆಗೂ ನಾವು ಗುರುತಿಸಬಹುದಾಗಿತ್ತು. ಅಂತಹ ತಟ್ಟೆ, ಲೋಟಗಳನ್ನು ಸ್ವತಃ ಅವರೇ ತೊಳೆದು ನಿಗದಿಪಡಿಸಿದ ಜಾಗದಲ್ಲಿ ಇರಿಸುವ ವ್ಯವಸ್ಥೆ ಇತ್ತು. ಇದು ಆಧುನಿಕತೆಯ ಘಟಕದೊಳಗಡೆ ಪಾಲಿಸಿಕೊಂಡು ಬರಲಾಗುತ್ತಿದ್ದ ಒಂದು ಬಗೆಯ ಸಾಂಪ್ರದಾಯಿಕತೆ ಎನ್ನಬಹುದು. ಪರಂಪರೆ ಯಿಂದ ಆಧುನಿಕತೆಯತ್ತ ಹೊರಳುವ ಈ ಸಂಕ್ರಮಣ ಸ್ಥಿತಿಯಲ್ಲಿ ಸಂಭವಿಸಬಹುದಾಗಿದ್ದ ಸಾಂಸ್ಕೃತಿಕ ಮುಖಾಮುಖಿ, ಸಂಘರ್ಷಗಳಿಗೂ, ಅದೇ ರೀತಿ ಆಧುನಿಕತೆಯ ಘಟಕವಾದ ಹೋಟೆಲಿನೊಳಗೆ ಪಾಲಿಸಲಾಗುತ್ತಿದ್ದ ಸಾಂಪ್ರದಾಯಿಕತೆಗೂ ಕನ್ನಡದ ಸಣ್ಣಕಥೆ-ಕಾದಂಬರಿಗಳು ಕಲಾತ್ಮಕ ರೂಪವನ್ನು ನೀಡಿವೆ.

ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲಿನ ವಿದ್ಯಮಾನಗಳು ಹೋಟೆಲಿಗೆ ಸಂಬಂಧಪಟ್ಟಂತೆ ನಡೆಯುತ್ತವೆ. ಭುಜಂಗಯ್ಯನಿಗೆ ಸ್ನೇಹಿತರಿಂದ ಹೋಟೆಲಿಡುವ ಸಲಹೆ ಬಂದಾಗ ಆತನಲ್ಲಿ ಒಂದು ಬಗೆಯ ಮಾನಸಿಕ ಸಂದಿಗ್ಧತೆಗಳು ಏರ್ಪಡುತ್ತವೆ. ಸಾಂಪ್ರದಾಯಿಕ ವೃತ್ತಿಯಿಂದ ಹೋಟೆಲು ಉದ್ಯಮಕ್ಕೆ ಸ್ಥಿತ್ಯಂತರಗೊಳ್ಳುವ ಸಂದರ್ಭದ ಈ ಸಂದಿಗ್ಧತೆಯು ಒಂದರ್ಥದಲ್ಲಿ ಸಾಂಸ್ಕೃತಿಕ ಸಂಘರ್ಷವೂ ಹೌದು. ಕಾದಂಬರಿಯಲ್ಲಿನ ಮಾತುಗಳ ಮೂಲಕವೇ ಈ ಸಂಘರ್ಷದ ಸ್ವರೂಪವನ್ನು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. "ಅದ್ಯಾಕಣ್ಣ ಈ ದುರ್ಬುದ್ಧಿ ಬಂತು ನಿಂಗೆ? ನಾವು ಸಿವಾಚಾರದವ್ರಾಗಿ ಯಾವ್ಯಾವ ಜಾತಿಯವ್ರೂ ಬಂದು ಕುಡಿಯೋ ಎಂಜಲು ಲೋಟ ತೋಳಿಬ್ಯಾಕ? ಇರೋನೊಬ್ಬ ನೀನು ನಿಂಗೆ ನಿಮ್ಮಪ್ಪ ಮಡಗಿರೊ ಆಸ್ತಿನೆ ಸಾಕಪ್ಪ?"(ಶ್ರೀಕೃಷ್ಣ ಆಲನಹಳ್ಳಿ, ೧೯೭೮, ಪುಟ ೧೪). ಭುಜಂಗಯ್ಯನು ಹೋಟೆಲು ಪ್ರಾರಂಭಿಸುವ ಪ್ರಸ್ತಾಪವನ್ನು ಮುಂದಿಟ್ಟಾಗ ಆತನ ಸ್ನೇಹಿತರು ವ್ಯಕ್ತಪಡಿಸುವ ಈ ಪ್ರತಿಕ್ರಿಯೆಯ ಮಾತುಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷದ ಸುಳಿವುಗಳಿವೆ. ನಮ್ಮ ಸಾಂಪ್ರದಾಯಿಕ ಮನಸ್ಸುಗಳು ಈ ರೀತಿಯ ಆಧುನಿಕವಾದ ಹೋಟೆಲು ಉದ್ಯಮವನ್ನು ಸ್ವೀಕರಿಸಲು ಸಿದ್ಧವಿಲ್ಲದಿರುವುದನ್ನು ಈ ಸನ್ನಿವೇಶವು ಕಲಾತ್ಮಕವಾಗಿ ಪಡಿಮೂಡಿಸುತ್ತದೆ. ಭುಜಂಗಯ್ಯನು ಆಧುನಿಕತೆಗೆ ಒಳಗಾಗುವುದನ್ನು ಸಾಂಪ್ರದಾಯಿಕ ಮನಸ್ಸುಗಳು ಈ ರೀತಿಯಲ್ಲಿ ನಿರಾಕರಿಸುತ್ತವೆ.

'ಭುಜಂಗಯ್ಯ ಹೋಟೆಲಿಡುವ ಸುದ್ದಿ ಕ್ಷಣಾರ್ಧದಲ್ಲಿ ಮಾದಳ್ಳಿಯ ಉದ್ದಗಲಕ್ಕೂ ಹರಡಿತು. ಅವನ ಧರ್ಮಪತ್ನಿಯಾದ ಪಾರ್ವತಿಯೂ, ಅವನ ತಾಯಿಯಾದ ದೇವೀರಮ್ಮನು ಎದೆ ಬಡಿದುಕೊಂಡು ಅಳತೊಡಗಿದರು. ಇವರ ದುಃಖದ ಕಾರಣವನ್ನು ಅರಿಯದ ಮಕ್ಕಳು ಕೂಡ ದೊಡ್ಡದಾಗಿ ರಾಗ ತೆಗೆದವು. ಇವರ ಮೂರ್ಖತನಕ್ಕೆ ಹೇಸಿದ ಭುಜಂಗಯ್ಯ ಗದರಿಸಿದಷ್ಟು ಅವರ ಅಳು ತೀವ್ರವಾಗತೊಡಗಿತು"(ಅದೇ, ಪುಟ ೧೮). ನಮ್ಮ ಸಾಂಪ್ರದಾಯಿಕ ಮನಸ್ಸುಗಳು ಯಾವುದೇ ರೀತಿಯ ಆಧುನಿಕತೆಯನ್ನು ಸುಲಭವಾಗಿ ಸ್ವೀಕರಿಸಲು ಸಿದ್ಧವಿಲ್ಲದಿರುವುದನ್ನು ಕಾದಂಬರಿಯು ಪುನಃ ಸಾಕ್ಷೀಕರಿಸುತ್ತದೆ.

ಭುಜಂಗಯ್ಯನು ಜಾತಿವ್ಯವಸ್ಥೆಯ ಶ್ರೇಣೀಕರಣವನ್ನು ಪಾಲಿಸಿಕೊಂಡು ಬಂದ ಸಮಾಜದ ಎದುರಿಗೆ ಆಧುನಿಕ ತಾಕಲಾಟವು ಮೂಡಿದ ಕ್ಷಣಗಳು "ತಾನು ಹೋಟೆಲಿಡುವುದು ತಪ್ಪೇ? ಸರಿಯೇ? ಅದರಿಂದ ತನ್ನ ಘನತೆ ಗೌರವ ಹಾಳಾಗಿ ತಾನು ನಾಕು ಜನರ ಎದುರು ತಲೆಬಗ್ಗಿಸಿ ನಡೆಯಬೇಕಾದ ಸ್ಥಿತಿಯೇನಾದರೂ ಬರುತ್ತದೆಯೇ? ಬೇರೆ ಜಾತಿಯ ಜನ ಬಂದರೆ ಅವರು ತಿಂದು ಕುಡಿದ ತಟ್ಟೆ ಬಟ್ಟಲನ್ನು ತಾನು ತೊಳೆದರೆ ತಾನೇ ಜನ ಆಡಿಕೊಳ್ಳುವುದು ಬದಲಾಗಿ ಯಾರಾದರೂ ಒಬ್ಬ ಹುಡುಗನನ್ನು ಈ ಕೆಲಸಕ್ಕೆ ಇಟ್ಟುಕೊಂಡರಾಯಿತು"(ಅದೇ, ಪುಟ ೧೫). ಇಂತಹ ಸಾಂಪ್ರದಾಯಿಕ ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ನಿರಾಕರಿಸಲು ಅಥವಾ ಒಪ್ಪಿಕೊಳ್ಳಲು ಭುಜಂಗಯ್ಯನಿಗೆ ಸಾಧ್ಯವಿಲ್ಲದಾಗಿದೆ. ಗ್ರಾಮೀಣ ಸಂಸ್ಕೃತಿ ಆಧುನಿಕತೆಗೆ ತೆರೆದುಕೊಳ್ಳುವ ಭುಜಂಗಯ್ಯನ ಮನಸ್ಸಿನಲ್ಲಿ ಸಾಂಪ್ರದಾಯಿಕ ಸಂಘರ್ಷ ಏರ್ಪಡುತ್ತದೆ.

ಪಾರ್ವತಿ ಆಧುನಿಕತೆಯನ್ನು ಸ್ವೀಕರಿಸಲು ನಿರಾಕರಿಸಿದವಳು. ಒಂದಿಷ್ಟು ಕಾಲಾನಂತರದಲ್ಲಿ ಪರಿವರ್ತನೆಗೊಂಡಿದ್ದನ್ನು ಕಾದಂಬರಿ ಹೀಗೆ ವಿವರಿಸುತ್ತದೆ. "ತನ್ನ ಗಂಡ ಸಾಕ್ಷಾತ್ ದೇವರೆ ಸರಿ ಎಂದುಕೊಂಡ ಪಾರ್ವತಿಗೆ ಹೋಟೆಲಿಟ್ಟಿದ್ದು ತಪ್ಪೇನೂ ಆಗಲಿಲ್ಲ ಎನಿಸಿತು. ಯಾರು ಏನೆಂದುಕೊಂಡರೆ ತಮಗೇನಂತೆ? ತಮಗೆ ಇಲ್ಲದಿದ್ದಾಗ ಯಾರೂ ಕೊಡುವುದಿಲ್ಲ. ಭಾವಣಿಸುವುದೂ ಇಲ್ಲ. ಹೋಟೆಲಿಟ್ಟರೆ ಇಷ್ಟು ಲಾಭ ಬರುತ್ತೆ ಅನ್ನುವುದು ತನಗೆ ಮೊದಲೇ ತಿಳಿದಿದ್ದರೆ ತಾನು ಗಂಡನ ಜೊತೆ ಜಗಳಾವಾಡುತ್ತಲೇ ಇರಲಿಲ್ಲ"(ಅದೇ, ಪುಟ ೪೮). ಹೋಟೆಲು ಉದ್ಯಮದ ಲಾಭಾಂಶವನ್ನು ನೋಡಿ ಪಾರ್ವತಿಯು ಆಧುನೀಕರಣ ಹಂತದಲ್ಲಿನ ಸಂಘರ್ಷದ ಪಾತ್ರವಾಗಿ ಗಮನ ಸೆಳೆಯುತ್ತಾಳೆ.

ಸಂಪ್ರದಾಯಸ್ಥನಾದ ಭುಜಂಗಯ್ಯನ ಮಾವನ ಮನಸ್ಥಿತಿಯು ತನ್ನ ಅಳಿಯನು ಹೋಟೆಲು ಪ್ರಾರಂಭಿಸುವುದನ್ನು ವಿರೋಧಿಸುತ್ತದೆ. "ಪರ್ವತಪ್ಪ ಅಳಿಯನನ್ನು ಕೂರಿಸಿಕೊಂಡು ತಮ್ಮಂಥ ಮರ್ಯಾದಸ್ಥರು ಹೋಟೆಲಿಡುವುದು ಕೀಳು. ಕೀಳು ಜನ ಕುಡಿದು ತಿಂದ ಲೋಟ, ತಟ್ಟೆ

ತೊಳೆಯುವುದು ಅಂದರೆ ತಮ್ಮ ಘನತೆ ಗೌರವವೆಲ್ಲ ಮಣ್ಣು ಪಾಲಾಗುತ್ತೆ ಎಂದು ಎಚ್ಚರಿಸಿದರು. ಅಲ್ಲದೆ ಸುತ್ತ ಏಳೂರಿನ ಕಟ್ಟೆಮನಿಯ ಯಜಮಾನ ಅನಿಸಿಕೊಂಡ ತನ್ನಂಥವನ ಅಳಿಯ ಹೋಟೆಲಿಟ್ಟ ಅಂದರೆ ಜನ ಆಡಿಕೊಳ್ಳದೆ ಇರುತ್ತಾರೆಯೇ? ಪರ್ವತಪ್ಪ ಅಳಿಯನಿಗೆ ಗಿಳಿಗೆ ಹೇಳುವ ಹಾಗೆ ಪರಿಪರಿಯಾಗಿ ಹೇಳಿದರು. ಅಲ್ಲದೆ ಮಠದ ಸ್ವಾಮಿಗಳ ಶೈಲಿಯಲ್ಲಿ ಪಾಪ ಪುಣ್ಯಗಳ ಉಪದೇಶಾಮೃತವನ್ನೂ ಧಾರೆಯೆರೆದರು. ಏನೆಲ್ಲ ಆದರೂ ಭುಜಂಗಯ್ಯನ ಮನದಲ್ಲಿ ಅಚಲವಾಗಿ ಬೇರೂರಿದ್ದನ್ನು ಕಿಂಚಿತ್ತು ಅಲುಗಾಡಿಸಲಾಗಲಿಲ್ಲ"(ಅದೇ, ಪುಟ ೨೩). ಹೀಗೆ ಪರ್ವತಪ್ಪನ ಸಾಂಪ್ರದಾಯಿಕ ಮನಸ್ಸು ಆಧುನಿಕತೆಯನ್ನು ಸುಲಭವಾಗಿ ಸ್ವೀಕರಿಸಲಾರದ ಹಾಗೂ ಭುಜಂಗಯ್ಯನು ಆಧುನಿಕತೆಯನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಈ ಎರಡು ಬಗೆಯ ಮಾನಸಿಕ ಸಂಘರ್ಷವನ್ನು ಇಲ್ಲಿ ಕಾಣಬಹುದಾಗಿದೆ.

ಆಧುನಿಕತೆಯ ಘಟಕವಾಗಿ ಸಾರ್ವಜನಿಕ ಬದುಕಿನಲ್ಲಿ ಹೋಟೆಲು ಪ್ರಾಮುಖ್ಯತೆ ಪಡೆದಿರುವುದನ್ನು ಪಾರ್ವತಿಯ ಸ್ವಭಾವದಲ್ಲಿ ಹೀಗೆ ವ್ಯಕ್ತವಾಗುತ್ತದೆ. "ಹೋಟೆಲು ಕಡೆ ಬೆಳಗಿಂದ ಕಾಲಾಕಿಲ್ಲಿ ಮಂಜ ಒಬ್ಬನೆ, ಏನಾಯಿತೊ, ಎಂತೊ ಎಂದು ಎದ್ದು ನಿಂತ ಗಂಡ ಹೋಟೆಲು ಹೆಸರು ಎತ್ತಿದ್ದಕ್ಕೆ ಪಾರ್ವತಿ ಈ ಮೊದಲು ಹಾಗೆ ಮುಖ ಕಿವುಚಲಿಲ್ಲ. ಭುಜಂಗಯ್ಯನೂ ಹೆಂಡತಿಯಲ್ಲಿ ಆಗಿರುವ ಇಂಥ ಬದಲಾವಣೆಯನ್ನು ಗಮನಿಸಿದೆ ಇರಲಿಲ್ಲ. ಪಾರ್ವತಿ ಮಕ್ಕಳ ಜೊತೆ ತಾನೂ ಹೋಟೆಲು ಮೂಲಕವೇ ಊರಿಗೆ ಹೊರಟಳು. ಹೋಟೆಲು ಪ್ರಾರಂಭವಾದ ದಿನದಿಂದ ಅವಳು ಅತ್ತಕಡೆ ತಿರುಗಿ ಕೂಡ ನೋಡಿರಲಿಲ್ಲ"(ಅದೇ, ಪುಟ ೪೧). ಆಧುನಿಕತೆಯ ಒಂದು ಘಟಕವಾಗಿ ಹೋಟೆಲು ಪಾರ್ವತಿಯ ಸಾಂಪ್ರದಾಯಿಕ ಬದುಕಿನಲ್ಲೂ ಪ್ರಾಮುಖ್ಯತೆ ಪಡೆದುಕೊಂಡಿರುತ್ತದೆ.

ಹೋಟೆಲು ಎಂಬ ಆಧುನಿಕ ಘಟಕದಲ್ಲಿ ಪಾರ್ವತಿಯ ಮಾನಸಿಕ ಸಂಘರ್ಷ ಸಾರ್ವಜನಿಕ ಬದುಕಿನೊಂದಿಗೆ ನಿರ್ಭಿಡತೆಯಿಂದ ಹೀಗೆ ಬದಲಾದದ್ದು "ಏನು ಪಾರ್ವತಿ ನಿನ್ನ ಗಂಡ ಪೋಟ್ಲಲಿಟ್ಟವನಂತೆ ಎಂದು ಕೇಳಿಬಿಟ್ಟರೆ ಎಂಬ ಭಯ ಕಾಡುತ್ತಿತ್ತು. ಆದರೆ ಈಗ ಆ ಅಳುಕಿರಲಿಲ್ಲ. ಕೆಲವು ಸಣ್ಣಮನಸ್ಸಿನವರು ಹೋಟೆಲಿಟ್ಟ ಹೊಸದರಲ್ಲಿ ಹಂಗಿಸಿ ಆಡಿದ್ದೂ ಉಂಟು. ಆಗ ತನಗೆ ಭೂಮಿ ಬಾಯಿಬಿಟ್ಟು ನುಂಗಿಕೊಂಡು ಬಿಡಬಾರದೆ ಅನ್ನಿಸುತ್ತಿತ್ತು. ಅದರಿಂದಾಗಿಯೇ ತಾನೂ ಗಂಡನ ಕೆಲಸಕ್ಕೆ ಕೆಂಡ ಕಾರುತ್ತಿದ್ದುದು"(ಅದೇ, ಪು.೫೦). ಮಾನವ ಸಮಾಜದಲ್ಲಿ ಹೋಟೆಲಿನ ಆಧುನೀಕರಣ ಪ್ರಕ್ರಿಯೆಯೂ ಮಹತ್ವದ್ದಾಗಿರುತ್ತದೆ. ಪಾರ್ವತಿ ಆಧುನಿಕತೆಗೆ ತೆರೆದುಕೊಂಡ ನಂತರ ಸಾಂಪ್ರದಾಯಿಕ ಮನಸ್ಸಿನಲ್ಲಿ ಹೊಸ ಆಶೋತ್ತರಗಳಿಗೆ ಒಳಗಾಗುತ್ತಾಳೆ.

ಹೋಟೆಲಿನಂಥ ಆಧುನಿಕತೆಯ ಘಟಕದಲ್ಲಿ ದೊಡ್ಡಮಠದ ಸ್ವಾಮಿಗಳು ಆಶೀರ್ವಚನಕ್ಕೆಂದು ಪ್ರವೇಶ ಪಡೆದಾಗ ನಮ್ಮ ಗ್ರಾಮೀಣ ಸಾಂಪ್ರದಾಯಿಕ ಮನಸ್ಸುಗಳು ಪರಿವರ್ತನೆಯ ಹಾದಿ

ತುಳಿಯುವುದು. "ಹೆಣ್ಣುಮಕ್ಕಳಾದಿಯಾಗಿ ಸರ್ವರನ್ನೂ ಆಶೀರ್ವಚನದಿಂದ ಜನ ಸಮೃದ್ಧವಾದ ಊರಿಂದ ನಿರ್ಗಮಿಸುವ ಮುಂಚೆ ಭುಜಂಗಯ್ಯನ ಹೋಟೆಲಿಗೂ ಪಾದ ಬೆಳೆಸಿ ಅವನು ತನ್ನ ಹೊಸ ಕಾಯಕದಲ್ಲಿ ಜಯ ಗಳಿಸುವಂತೆ ಹರಿಸಿದರು. ಭುಜಂಗಯ್ಯ ಹೋಟೆಲಿಟ್ಟಿದ್ದಕ್ಕೆ ಹಗುರವಾಗಿ ಮಾತನಾಡಿದ್ದವರು ಅದರಲ್ಲೂ ಅವನ ಸ್ವಂತ ಮಾವ ಚಿಕ್ಕಳ್ಳಿಯ ಪರ್ವತಪ್ಪನ ಆದಿಯಾಗಿ ಎಲ್ಲರೂ ಬೆಕ್ಕಸ ಬೆರಗಾದರು"(ಅದೇ, ಪುಟ ೮೫). ಭುಜಂಗಯ್ಯನ ದಶಾವತಾರಗಳು ಕಾದಂಬರಿಯಲ್ಲಿ ಸಾರ್ವಜನಿಕರ ಬದುಕನ್ನು ಆಧುನೀಕರಣಗೊಳಿಸುವಲ್ಲಿ ಹೋಟೆಲು ಪ್ರಮುಖ ಪಾತ್ರ ವಹಿಸುತ್ತದೆ. ಒಟ್ಟಾರೆಯಾಗಿ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲಿ ಲಿಂಗಾಯತನಾದ ಭುಜಂಗಯ್ಯ ಹೋಟೆಲು ಪ್ರಾರಂಭಿಸುತ್ತೇನೆಂದಾಗ ಇಡೀ ಲಿಂಗಾಯತ ಸಮುದಾಯ ಪ್ರತಿರೋಧಿಸುತ್ತದೆ. ಇನ್ನೊಬ್ಬರ ಮುಸುರೆ ತೊಳೆಯುವುದು ಲಿಂಗಾಯತ ಜನಾಂಗಕ್ಕೆ ಅಪಮಾನ ಎಂದೇ ಭಾವಿಸಲಾಗಿತ್ತು. ಹೆಂಡತಿ, ಅಮ್ಮ, ಅತ್ತೆ, ಮಾವ ಭುಜಂಗಯ್ಯನ ಹೋಟೆಲನ್ನು ತಿರಸ್ಕರಿಸುವ ಹಠ ತೊಟ್ಟಿದ್ದರು. ಆದರೆ ಉತ್ಪಾದನೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಹೋಟೆಲು ಮಾಡಿತು. ಆಧುನಿಕತೆಯ ಪರಿಣಾಮದಿಂದಾಗಿ ಜಾತಿ ವ್ಯವಸ್ಥೆಯ ಸ್ವರೂಪವೇ ಬದಲಾಯಿತು. ಬ್ರಾಹ್ಮಣರು, ಲಿಂಗಾಯತರು ಜಾತಿಯ ಕಟ್ಟಳೆಗಳನ್ನು ಅಷ್ಟೊಂದು ಕಟ್ಟುನಿಟ್ಟಿನಿಂದ ಪಾಲಿಸುತ್ತಿದ್ದರು. ಹೋಟೆಲಿನಿಂದಾಗಿ ಸ್ವಲ್ಪ ಸಡಿಲಗೊಳಿಸಲು ಪ್ರಯತ್ನಿಸಿದರು. ಮೇಲುನೋಟಕ್ಕೆ ಜಾತಿವ್ಯವಸ್ಥೆ ಸಡಿಲಗೊಂಡಂತೆ ಕಾಣುತ್ತದೆ. ಆದರೆ ಮೇಲ್ವರ್ಗದವರನ್ನು ಮತ್ತಷ್ಟು ಭದ್ರತೆವುಳ್ಳವರನ್ನಾಗಿ ಮಾಡಿತು. ಕೆಳಸಮುದಾಯಗಳ ಹೀನಾಯ ಪರಿಸ್ಥಿತಿಯಲ್ಲಿ ದುಡಿಯುವ ಅವಕಾಶಗಳು ಹೆಚ್ಚಾದವು. ಕೆಳಸಮುದಾಯಗಳು ತಮ್ಮ ಸಮಾನತೆಯ ಹಕ್ಕನ್ನು ಕೇಳಲು ಹೋಟೆಲು ಒಂದು ದಾರಿಯಾಗಿ ಪರಿಣಮಿಸಿತು. ಸಮಾಜದಲ್ಲಿ ತಮ್ಮನ್ನು ಸಮಾನರಂತೆ, ಮನುಷ್ಯರಂತೆ ಕಾಣಬೇಕೆಂಬ ಚಳುವಳಿಗಳೇ ನಡೆದವು. ಇದು ಆಧುನಿಕತೆಯ ಸಂಘರ್ಷದ ಘಟ್ಟ. ಇಂತಹ ಸಂಘರ್ಷದಿಂದ ಮೇಲ್ವರ್ಗದ ಸಮುದಾಯ ಅನುಕೂಲತೆಯನ್ನು ಪಡೆದು ಮತ್ತಷ್ಟು ಆರ್ಥಿಕ ಸಬಲತೆಯನ್ನು ಹೊಂದಿದವು. ಆಧುನಿಕತೆಯ ಘಟಕವಾದ ಹೋಟೆಲಲ್ಲೂ ಸಾಂಪ್ರದಾಯಿಕ ಜಾತಿ ಶ್ರೇಣೀಕರಣ ವ್ಯವಸ್ಥೆ ಪಾಲನೆಯಾಗುತ್ತಿತ್ತೆಂಬುದಕ್ಕೆ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲಿಯೂ ಉದಾಹರಣೆಗಳು ಸಿಗುತ್ತವೆ. ಕಾದಂಬರಿಯಲ್ಲಿ ಸ್ಕೂಲಿನ ಹರಿಜನ ಮೇಷ್ಟ್ರೊಬ್ಬರು ಬಂದು ಹೋಟೆಲಲ್ಲಿ ರಾಜಾರೋಷವಾಗಿ ಎಲ್ಲರೇದರು ತಿಂಡಿ ತಿಂದು ಟೀ ಕುಡಿದು ಹೋಗುತ್ತಾರೆ. ಅವರು ತಿಂದು ಕುಡಿದ ಲೋಟ ತಟ್ಟೆಗಳನ್ನು ಎಲ್ಲದರ ಜೊತೆಗೆ ಬೇರೆಸಿ ಇಟ್ಟಿದ್ದನ್ನು ಲಿಂಗಾಯತ ಕೇರಿಯುದ್ದಕ್ಕೂ ದ್ಯಾವಣ್ಣ ಡಂಗೂರ ಹೊಡೆಯುತ್ತಾರೆ. ಆ ರಾತ್ರಿಯೇ ಇದನ್ನರಿತ ಮುಖಂಡರೆಲ್ಲರೂ ಸೇರುತ್ತಾರೆ. ದ್ಯಾವಣ್ಣನ ಜೊತೆ ಇದ್ದ ಇನ್ನಿಬ್ಬರು ಕೇರಿ ಹುಡುಗರನ್ನು ಕರೆಸುತ್ತಾರೆ. ಅವನಲ್ಲೊಬ್ಬ ಮಾಲೀಕರಿಗೆ ಅವನ್ಯಾವ ಜಾತಿಯವನೆಂಬುದನ್ನು ತಿಳಿಯದಿದ್ದದ್ದನ್ನು ಅವರ ಎದುರಿಗೆ ಪ್ರಸ್ತಾಪಿಸುತ್ತಾನೆ ಇದರಿಂದ ತೃಪ್ತರಾಗದೆ ಮಡಿವಂತರು ತಕ್ಷಣ ಲಿಂಗಾಯತ

ಆಚಾರರ ಕೇರಿಯಿಂದ ಉರುಪನ ಸಂಬಂಧಿಕರನ್ನು ಕರೆಸುತ್ತಾರೆ. ಅವರೆದುರಿನಲ್ಲಿಯೇ ಉರುಪನಿಗೆ ಏನಾದರೂ ಭಜಂಗಯ್ಯನ ಹೋಟೆಲಲ್ಲಿ ಕೆಲಸ ಮಾಡಿದರೆ ಕುಲದಿಂದ ಹೊರಗಿಡುವ ಸಂಗತಿಯನ್ನು ತಿಳಿಸುತ್ತಾರೆ. ಲಿಂಗಾಯತ ಕುಲಕ್ಕೆ ಸೆರಿದವರು ಹೋಟೆಲು ಪ್ರವೇಶಿಸದಂತೆ ಕಟ್ಟಪ್ಪಣೆ ಮಾಡುತ್ತಾರೆ. ಊರಿನವರ್‍ಯಾರು ಭುಜಂಗಯ್ಯನ ಕೃಷಿ ಮತ್ತು ಹೋಟೆಲು ಕೆಲಸಕ್ಕೆ ಹೋಗದಂತೆ ತಾಕಿತ್ತು ಮಾಡುತ್ತಾರೆ. ಹೋಟೆಲು ಮುಚ್ಚುವಂತೆ ಭುಜಂಗಯ್ಯನಿಗೆ ರುದ್ರಪ್ಪ ದರ್ಪದ ಮಾತನಾಡುತ್ತಾನೆ. ಭುಜಂಗಯ್ಯ ಅಂಜದೆ ಅಳುಕದೆ ಹೋಟೆಲು ಮುಚ್ಚದಿರುವ ಉತ್ತರವನ್ನು ಕೊಡುತ್ತಾನೆ. ರುದ್ರಪ್ಪನ ಭಂಟರುಗಳು ಅವರ ಯಜಮಾನ ಆದೇಶದಂತೆ ಹೋಟೆಲು ಹಾಳು ಮಾಡುತ್ತಾರೆ. ಕರೀಗೌಡರು ಸ್ವಲ್ಪ ಭುಜಂಗಯ್ಯನ ಪರವಾಗಿ ವಾದಿಸುತ್ತಾರೆ. ಹೀಗೆ ಹೋಟೆಲಲ್ಲಿ ನಡೆದ ಸಣ್ಣ ವಿಷಯವು ಜಾತಿಯ ಕಲಹದ ಸ್ವರೂಪ ಪಡೆದಿರುತ್ತದೆ.

ಹೋಟೆಲು ಪ್ರಾರಂಭದಿಂದಾಗಿ ಸಾಂಪ್ರದಾಯಿಕ ಮನಸ್ಸು ಹೋಟೆಲು ಸಂಸ್ಕೃತಿಗಳೊಳಗಿನ ಸಂಘರ್ಷಕ್ಕೆ ಇನ್ನೊಂದು ಬಗೆಯ ಅಯಾಮವು ಇದೆ. ಮನೆಯ ಸಾಂಪ್ರದಾಯಿಕ ಆಹಾರ ಪದ್ಧತಿಗಿಂತ ಹೋಟೆಲಿನ ತಿಂಡಿ-ತಿನಿಸುಗಳು ಹೆಚ್ಚು ರುಚಿಕರ ಎಂಬ ಭಾವನೆಯು ವ್ಯಾಪಿಸಿದ್ದುಂಟು. 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲೂ ಇದಕ್ಕೆ ಪೂರಕವೆನ್ನಬಹುದಾದ ಸನ್ನಿವೇಶಗಳಿವೆ. ಪುಟ್ಟವ್ವನು ಭುಜಂಗಯ್ಯನಿಗೆ 'ಎಸ್ಟಾದ್ರು ವೋಟ್ಲಿಟ್ಟರೂ ನಿಮ್ಗೆ ನಮ್ಮನೆ ಉಪ್ಪಿಟ್ಟು ಇಷ್ಟೆ ಆಗ್ತದೋ ಇಲ್ಲೋ'(ಅದೇ, ಪುಟ ೧೧೦). ಇಲ್ಲಿ ಸಾಂಪ್ರದಾಯಿಕ ಮನೆ ಊಟಕ್ಕೂ ಹೋಟೆಲಿನ ತಿಂಡಿ-ತಿನಿಸುಗಳಿಗೂ ನಡುವಿರುವ ಒಂದು ಬಗೆಯ ಸಂಘರ್ಷದ ಸುಳಿವು ಗೋಚರವಾಗುತ್ತದೆ.

ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿನ ರಾಮ ಐತಾಳರು ತಮ್ಮ ಸಾಂಪ್ರದಾಯಿಕತೆಯನ್ನು ಮೀರಲು ಸಾಧ್ಯವಾಗದ ಮನಸ್ಥಿತಿಯು ಈ ರೀತಿಯಲ್ಲಿ ವ್ಯಕ್ತಗೊಳ್ಳುತ್ತದೆ. "ನಿನಗೆ ಮರುಳು ಶೀನಮಯ್ಯ, ಯಾವ್ಯಾವ ಜಾತಿಯವರು ತಿಂದು ಬಿಟ್ಟ ಎಂಜಲನ್ನು ತೆಗೆಯಲಿಕ್ಕೆ ದೇವರು ನಮಗೆ ಬ್ರಾಹ್ಮಣ ಜನ್ಮ ಕೊಟ್ಟಿದ್ದೇನು? ಹೇರ್ಳೆಯವರಿಗೇನು? ಅನ್ನವನ್ನು ಮಾರಿ ಹಣ ಸಂಪಾದಿಸಿದರೂ ಚಿಂತೆಯಿಲ್ಲ. ಒಟ್ಟಿನಲ್ಲಿ ಮನೆಗೆ ಉಪ್ಪರಿಗೆ ಬಿದ್ದರಾಯಿತು"(ಶಿವರಾಮ ಕಾರಂತ, ೨೦೧೦, ಪುಟ ೯೫). ಭಾರತೀಯ ಪರಂಪರೆಯಲ್ಲಿ ಅನ್ನದಾನಕ್ಕೆ ವಿಶೇಷ ಮಹತ್ವವಿತ್ತು. ಆದರೆ ಆಧುನಿಕ ಜಗತ್ತಿಗೆ ಹೋಟೆಲು ಎಂಬ ಆಧುನಿಕತೆಯ ಘಟಕವು ಕಾಲಿರಿಸಿದಾಗ ಅಲ್ಲಿ ಅನ್ನದಾನದ ಪರಂಪರೆಗೆ ವ್ಯತಿರಿಕ್ತವಾದ ಅನ್ನವಿಕ್ರಯದ ಕ್ರಿಯೆ ಪ್ರಾರಂಭವಾದದ್ದನ್ನು ರಾಮ ಐತಾಳರು ವಿವರಿಸುತ್ತಾರೆ.

ಅನ್ನದಾನದ ಪರಂಪರೆಯುಳ್ಳ ಸಮಾಜವೊಂದು ಹೋಟೆಲ್ ಉದ್ಯಮದ ಮೂಲಕ ಅನ್ನವಿಕ್ರಮಯದ ಆಧುನಿಕತೆಗೆ ಅನಿವಾರ್ಯವಾಗಿ ಒಗ್ಗಿಕೊಳ್ಳಬೇಕಾದ ಸಂದರ್ಭದಲ್ಲಿನ ಸಾಂಸ್ಕೃತಿಕ

ಸಂಘರ್ಷ, ಮಾನಸಿಕ ತೊಳಲಾಟ ಹಾಗೂ ಅವುಗಳಿಗೆ ಕೊಟ್ಟುಕೊಳ್ಳುವ ಸಾಂದರ್ಭಿಕ ಸಮರ್ಥನೆ ಇತ್ಯಾದಿಗಳನ್ನು ಶೀನಮಯ್ಯನ ಮಾತುಗಳಲ್ಲಿ ಗುರುತಿಸಬಹುದಾಗಿದೆ. "ಐತಾಳರೇ ಹೇರ್ಳೆಯವರು ಹೋಟೆಲು ಬೆಂಗಳೂರಿಗೆ ತೀರಾ ಹೆಸರಾದ ಹೋಟೆಲು. ತಿರುಪತಿಗೆ ಹೋದವರು ಅಲ್ಲಿ ಹೊಕ್ಕು ಬಂದವರು ಹೇಳುತ್ತಾರೆ. ಬೆಂಗಳೂರು ಸಿಟಿಯಲ್ಲೇ ಅಂಥಾ ಮರ್ಯಾದೆಯಂತೆ ಅವರಿಗೆ. ನೀವೇ ಹೇಳಿ ಮನೆಯಲ್ಲಿ ಕುಳಿತರೆ ಹೊಟ್ಟೆ ತುಂಬಿತೆ? ಬರೀ ಎಂಟು ಮುಡಿ ಗದ್ದೆ ಇರುವುದು ನನಗೆ. ಅದರಲ್ಲಿ ಬೆಳೆದರೆ ಏನು ಬಂದಿತು? ನಾನು ಕಣ್ಮುಚ್ಚಿ ಮನೆ ಪಾಲಾದರೆ ಬರುವುದೆಷ್ಟು? ತಲಾ ಒಂದರ ಎರಡು ಮುಡಿ ಗದ್ದೆ. ನಾಳೆ ನಾನು ಕಣ್ಣು ಮುಚ್ಚಿದರೆ ಅದರಿಂದ ಅವುಗಳು ಏನು ಜೀವನ ಮಾಡಿಯಾವು. ಎಲ್ಲ ಅಪದ್ಧರ್ಮ ವಿಶ್ವಾಮಿತ್ರನು ಬರಗಾಲಕ್ಕೆ ನಾಯಿ ಮಾಂಸ ತಿಂದನಂತೆ. ಅಂಥವರಿಗೆ ಕಾಲಗತಿಯಿಂದ ಹೀಗಾಯಿತಂತೆ. ನೀವು ಅನ್ನ ಮಾರುವುದು ಅನ್ನುತ್ತೀರಿ. ಅನ್ನ ಮಾರುವುದೇನು ಕಡಿಮೆ. ಅಕ್ಕಿ ಮಾರುವುದೇನು? ಹೆಚ್ಚು ಕುಚಲಕ್ಕಿಯನ್ನು ಭತ್ತ ಬೇಯಿಸಿ ಮುಸುರೆ ಮಾಡಿಯೇ ಮಾಡುವುದಿಲ್ಲವೇ"(ಅದೇ, ಪುಟ ೯೫-೯೬). ಶೀನಮಯ್ಯ ಮತ್ತು ಐತಾಳರ ನಡುವಿನ ಈ ಸಂಭಾಷಣೆಯಲ್ಲಿ ಅನ್ನ ಮಾರಾಟದ ಬಗೆಗಿನ ನಿರಾಕರಣೆ ಮತ್ತು ಸಮರ್ಥನೆಗಳೆರಡೂ ಗೋಚರಿಸುತ್ತವೆ. ಇದು ಸಾಂಪ್ರದಾಯಿಕ ಮತ್ತು ಆಧುನಿಕ ಮನಸ್ಸಿನೊಳಗಿನ ಸಂಘರ್ಷಕ್ಕೆ ಸಾಕ್ಷೀಭೂತವಾಗುತ್ತದೆ.

ಸಾಂಪ್ರದಾಯಿಕ ಭಾರತೀಯ ಸಮಾಜವು ಜಾತಿವ್ಯವಸ್ಥೆಯೊಂದಿಗೆ ಬೆಳೆದುಬಂದದ್ದಾಗಿದೆ. ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದ ಸಮಾಜ ನಮ್ಮದು. ಆಧುನಿಕ ಸಮಾಜದಲ್ಲಿ ಇಂತಹ ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ಪೂರ್ತಿಯಾಗಿ ನಿರಾಕರಿಸಲು ಸಾಧ್ಯವಾಗದಿದ್ದುದನ್ನು ಮರಳಿ ಮಣ್ಣಿಗೆ ಕಾದಂಬರಿಯಲ್ಲಿನ ಈ ವಿವರಗಳಲ್ಲಿ ನೋಡಬಹುದಾಗಿದೆ. "ಸುಬ್ರಾಯಿ ಉಪಾಧ್ಯಾಯರ ಕೋಟ ಜಾತಿಯವರ ಊಟದ ಹೋಟೆಲು ಪ್ರಾರಂಭವಾಗಿರಲಿಲ್ಲ. ಮನಸ್ಸಿಲ್ಲದ ಮನಸ್ಸಿನಿಂದ ಅವನನ್ನು ಕೋಟೇಶ್ವರದ ನಾರಾಯಣ ಗೋಟರ ಹೋಟೆಲಿನಲ್ಲಿ ಇರಿಸಿದರು. ಲಚ್ಚ-ಕೋಟ ಹೋದರೂ ಗೋಟ ಸಿಕ್ಕಿತಲ್ಲ ಎಂದು ಚೇಷ್ಟೆ ಮಾಡಿ ಸೇರಿದನು"(ಅದೇ, ಪುಟ ೧೬೦). ಹೀಗೆ ರಾಮ ಐತಾಳರು ಆಧುನಿಕತೆಗೆ ಅನಿವಾರ್ಯವಾಗಿ ಜಾತಿ ಮೀರಿ ಒಗ್ಗಿಕೊಳ್ಳಬೇಕಾದ ಹಂತದಲ್ಲಿ ಅವರ ಸಾಂಪ್ರದಾಯಿಕ ಮನಸ್ಥಿತಿ ಈ ರೀತಿಯ ಸಂಘರ್ಷಗಳಿಗೆ ಒಳಗಾಗುತ್ತದೆ.

ಸಾಂಪ್ರದಾಯಿಕ ಸಮಾಜವು ಜಾತಿವ್ಯವಸ್ಥೆಯೊಂದಿಗೆ ಬೆಳೆದು ಬಂದದ್ದನ್ನು ಲಚ್ಚ ವರಟನನ್ನು ಉದ್ದೇಶಿಸಿ ಹೇಳುವ ಈ ಮಾತುಗಳಲ್ಲಿ ವ್ಯಕ್ತವಾಗುತ್ತದೆ. "ಹೊ... ನಿನಗೆಲ್ಲ ಭಾರಿ ಜಾತಿ ಉಂಟು. ಬೆಂಗಳೂರಿನಲ್ಲಿ ಯಾರ್‍ಯಾರು ತಿಂದ ಎಂಜಲು ಮುಸುರೆ ತಿಕ್ಕುವವರಿಗೆ"(ಅದೇ, ಪುಟ ೧೪೪). ಸಾಂಪ್ರದಾಯಿಕ ಸಮಾಜವು ಹೋಟೆಲಿನ ಪ್ರಾರಂಭದ ಮೂಲಕ ಆಧುನಿಕತೆಗೆ

ತೆರೆದುಕೊಳ್ಳುವ ಹಂತದಲ್ಲಿ ತಲೆದೂರಬಹುದಾದ ಸಾಂಸ್ಕೃತಿಕ ಸಂಘರ್ಷಕ್ಕೆ ಲಚ್ಚನ ಮಾತುಗಳು ಕನ್ನಡಿ ಹಿಡಿಯುತ್ತವೆ.

ಗ್ರಾಮೀಣ ಪರಿಸರದಲ್ಲಿ ಹೋಟೆಲಿನಂತಹ ಆಧುನಿಕ ಘಟಕದಲ್ಲೂ ಜಾತಿಯ ಶ್ರೇಣೀಕರಣ ವ್ಯವಸ್ಥೆ ಪಾಲನೆಯಾಗುತ್ತಿರುವುದನ್ನು ಕಾದಂಬರಿಯ ಈ ವಿವರಗಳು ಸಾಕ್ಷೀಕರಿಸುತ್ತವೆ. "ಕುಂದಾಪುರ ದಲ್ಲಿ ಯಾರ್‍ಯಾರ ಹೋಟೆಲಿನ ಕೂಳು ತಿಂದಿರಬೇಕು? ಒಮ್ಮೆ ಮಗುವಿಗೆ ಹುಷಾರಿಲ್ಲವಾದರೆ ಯಾರು ನೋಡಿಕೊಳ್ಳಬೇಕು? ಅಲ್ಲಿಂದ ಇಲ್ಲಿಗೆ ಕರೆತರಬೇಡವೆ? ನಿತ್ಯವೂ ಮಗುವಿಗೆ ಎಣ್ಣೆ ಹಾಕಿ ತಲೆ ಬಾಚುವವರು ಬೇಡವೆ? ಅವನನ್ನು ಮೀಯಿಸುವವರು ಬೇಡವೆ? ಇವೆಲ್ಲವೂ ಹೋಟೆಲಲ್ಲಿ ಇದ್ದರೆ ನಡೀದಿತೆ?"(ಅದೇ, ಪುಟ ೧೪೫). ಹೀಗೆ ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ಬರುವ ಸರಸ್ವತಿಯು ತಮ್ಮ ಮನೆಯಲ್ಲಿ ಪಾಲಿಸುತ್ತಿದ್ದ ವಿಧಿ-ವಿಧಾನಗಳು ಹೋಟೆಲಲ್ಲಿ ಸಾಧ್ಯವಾಗದ ರೀತಿಯನ್ನು ಬಿಚ್ಚಿಡುತ್ತಾಳೆ. ಒಟ್ಟಾರೆ ಕೋಡಿ ಗ್ರಾಮದಲ್ಲಿ ವಾಸ ಮಾಡುವ ರಾಮ ಐತಾಳರು ಮತ್ತು ಶೀನಮಯ್ಯರು ಇವರು ಅನ್ನದಾನವನ್ನು ಶ್ರೇಷ್ಠವಾದದ್ದೆಂದು ನಂಬಿದವರೇ ಈಗ ಹೋಟೆಲಿಟ್ಟು ಅನ್ನ ಮಾರಿ ಹಣ ಸಂಪಾದಿಸುತ್ತಿದ್ದಾರೆ. ಇವರಿಗೆ ಹೋಟೆಲಿಟ್ಟು ಅನ್ನ, ನೀರು ಮಾರಿ ಹಣ ಸಂಪಾದನೆ ಮಾಡುವಾಗ ಪರಂಪರೆಯ ಮೌಲ್ಯಗಳು ಕಾಣಲಿಲ್ಲ. ಶೀನಮಯ್ಯನಿಗೆ ಹೋಟೆಲು ಹಣ ಗಳಿಸಲಿಕ್ಕೆ ಒಂದು ದಾರಿ. ಅದರ ಆಚೆಗೆ ಧರ್ಮ ಕರ್ಮದ ಬಗ್ಗೆ ಯೋಚಿಸುವುದಿಲ್ಲ. ಹೋಟೆಲು ನಡೆಸುವುದು ಪ್ರಾರಂಭದಲ್ಲಿ ಮರ್ಯಾದೆಗೇಡಿತನ ಕೆಲಸವಾಗಿತ್ತು. ಅನ್ನ ಮಾರುವುದು ಅತ್ಯಂತ ಪಾಪ ಎಂದು ಭಾವಿಸಲಾಗಿತ್ತು. ಯಾವಾಗ ಅದು ಹಣ ಗಳಿಸುವ ಉದ್ಯಮವಾಯಿತು. ಬ್ರಾಹ್ಮಣ ಸಮುದಾಯ ಆ ಉದ್ಯಮಕ್ಕೆ ಕೈ ಹಾಕಿತು. ಇವತ್ತಿಗೂ ಉಡುಪಿ ಬ್ರಾಹ್ಮಣ ಹೋಟೆಲುಗಳು ಎಲ್ಲಾ ಕಡೆ ತಮ್ಮ ಸ್ಥಾನವನ್ನು ಉಳಿಸಿಕೊಂಡು ಬಂದಿವೆ. ಈ ಹೋಟೆಲು ದೊಡ್ಡ ಉದ್ಯಮವಾಗಿ ಬಂಡವಾಳಶಾಹಿಗಳ ಒಂದು ಭಾಗವಾಗಿದೆ. ಅನ್ನದ ಉತ್ಪಾದಕ ಕೃಷಿಕ, ಕೃಷಿಕನಿಗೆ ಇರದ ಅನುಕೂಲ, ಸವಲತ್ತು, ಶ್ರೀಮಂತಿಕೆ ಹೋಟೆಲು ಉದ್ಯಮಗಳಿಗೆ ದಕ್ಕಿರುತ್ತದೆ. ಹೋಟೆಲು ಜಾತಿಯ ಕಟ್ಟುಗಳನ್ನು ಸಡಿಲಿಸಲು ಒಂದು ಸಾಧನವಾಗಿ ಬಳಕೆಯಲ್ಲಿದೆ. ಅನ್ಯಜಾತಿಯವರ ಹೋಟೆಲುಗಳಲ್ಲಿ ಆಹಾರ ಸೇವಿಸುವುದರ ಬಗೆಗೆ ಸಾಂಪ್ರದಾಯಿಕ ಜಾತಿಯ ಶ್ರೇಣೀಕರಣ ವ್ಯವಸ್ಥೆಯಲ್ಲಿ ಯಾವ ರೀತಿಯ ನಿಲುವು ಇತ್ತೆಂದು ಭುಜಂಗಯ್ಯನ ದಶಾವತಾರಗಳು ಕಾದಂಬರಿಯ ಸನ್ನಿವೇಶವೊಂದರಲ್ಲಿ ವ್ಯಕ್ತವಾಗುತ್ತದೆ. ಕಾದಂಬರಿಯ ನಾಯಕನಾದ ಭುಜಂಗಯ್ಯನು ತಾನು ಹೋಟೆಲಿಡುವ ಪೂರ್ವದಲ್ಲಿ ಕೃಷಿಕ ವೃತ್ತಿಯಲ್ಲಿದ್ದಾಗಿನ ಒಂದು ಸನ್ನಿವೇಶವಿದು. "ಆದರೆ ಕೋಟೆಗೂ ಮೈಸೂರಿಗೂ ಹೋದಾಗ ಅದು ತಮ್ಮ ಲಿಂಗಾಯತರ ಹೋಟೆಲುಗಳು ಸಿಕ್ಕದಿದ್ದಾಗ ಬ್ರಾಹ್ಮಣರ ಹೋಟೆಲಲ್ಲಿ ಶಿವಪೂಜೆಯಿಲ್ಲದೆ ತಿಂದುಬಿಟ್ಟಿದ್ದು ಒಂದೆರಡು ಸಲ ತಪ್ಪು ಮಾಡಿದೆನೆಂಬ ಭಯಕ್ಕೆ ಒಳಗಾಗಿದ್ದರೂ ಕ್ರಮೇಣ ಆ ಭಯದಿಂದ ಮುಕ್ತನಾಗಿದ್ದ"

(ಶ್ರೀಕೃಷ್ಣ ಆಲನಹಳ್ಳಿ, ೧೯೭೭; ಪುಟ ೬). ಹೀಗೆ ಆಧುನಿಕ ಸಮಾಜದಲ್ಲೂ ಇಂತಹ ಒಳಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ಪೂರ್ತಿಯಾಗಿ ಭುಜಂಗಯ್ಯನಿಗೆ ನಿರಾಕರಿಸಲು ಸಾಧ್ಯವಾಗಿಲ್ಲ.

ವ್ಯಾಸರಾಯ ಬಲ್ಲಾಳರ 'ಹೆಜ್ಜೆ' ಕಾದಂಬರಿಯು ಹೋಟೆಲಿನ ಚಿತ್ರಣದ ಮೂಲಕ ಸಾಂಪ್ರದಾಯಿಕತೆ ಮತ್ತು ಆಧುನಿಕತೆಗೊಳಗಿನ ಮುಖಾಮುಖಿಯನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ಪುರುಷೋತ್ತಮ ಆಚಾರ್ಯರು ಸಾಂಪ್ರದಾಯಿಕ ಮನಸ್ಸನ್ನು ಪ್ರತಿನಿಧಿಸುವ ಪಾತ್ರ ಅನ್ನುವುದನ್ನು ಈ ಸಂಭಾಷಣೆಯಿಂದ ತಿಳಿಯಬಹುದಾಗಿದೆ. "ಶಾಸ್ತ್ರಿಗಳೇ ಕಾಲ ಬದಲಾಗುತ್ತ ಇದೆ. ಈಗ ನೋಡಿ, ಸಂಸ್ಕೃತ ಕಲಿತ ಮಾಣಿಗಳೆಲ್ಲ ಬದುಕುವ ದಾರಿ ಹೇಗೆಂದು ಮದರಾಸಿಗೋ, ಬೆಂಗಳೂರಿಗೋ ಹೋಟೆಲಕ್ಕೆಂದು ಹೋಗ್ತಾ ಇವೆ"(ವ್ಯಾಸರಾಯ ಬಲ್ಲಾಳ, ೨೦೦೦, ಪುಟ ೨೫). ಪಾರಂಪರಿಕ ಪೌರೋಹಿತ್ಯ ಮಾಡಬೇಕಿದ್ದ ಯುವಕರು ಆಧುನಿಕತೆಗೆ ಒಳಗಾಗಿರುವುದರಿಂದ ಸಂಪ್ರದಾಯಸ್ಥ ಮನಸ್ಸುಗಳು ಆತಂಕಕ್ಕೆ ಒಳಗಾಗುವುದನ್ನು ಈ ಸನ್ನಿವೇಶವು ಚಿತ್ರಿಸುತ್ತದೆ.

'ರಾಂ. ಬರೋಸಾ ಹಿಂದೂ ಹೋಟೆಲ'ಲ್ಲಿ ಸಾವಿತ್ರಿಯ ತಂದೆಯಾಡುವ ಮಾತುಗಳು ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿಯನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸುತ್ತವೆ. "ನಮ್ಮ ಜಿಲ್ಲೆಯ ಮೋನಪ್ಪ ಶೆಟ್ಟಿ ಎಂಬುವರದ್ದು ಹೋಟೆಲು ಎಂದು ನಕ್ಕಾಗ ತಾಯಿ ಒಮ್ಮಿಗೇ ಸಿಟ್ಟಿಗೆದ್ದು ಅಯ್ಯೋ ಶೂದ್ರರ ಹೋಟೆಲೇ? ಇಲ್ಲಿಗೇಕೆ ನಮ್ಮನ್ನು ಕರೆದುಕೊಂಡು ಬಂದದ್ದು ಎಂದು ಅರ್ಧದಲ್ಲೇ ಊಟ ನಿಲ್ಲಿಸಿದಾಗ ತಂದೆ ಇಲ್ಲಿ ಜಾತಿಗೀತಿ ಯಾರು ನೋಡಲ್ಲ ರುಕ್ಮಿಣಿ. ಹಾಗೆ ನೋಡಿಕೊಂಡಿದ್ದರೆ ಬದುಕಲಿಕ್ಕೂ ಸಾಧ್ಯವಿಲ್ಲ. ಹಸಿದ ಹೊಟ್ಟೆಗೆ ಊಟ ಬೇಕಾದರೆ ಹತ್ತಿರದ ಹೋಟಲೇ ಬೇಕು"(ಅದೇ, ಪುಟ ೨೯). ಹೀಗೆ ಸಾವಿತ್ರಿ ತಾಯಿಯ ಸಂಪ್ರದಾಯಸ್ಥ ಮನಸ್ಸಿನ ಆತಂಕ, ತಂದೆಯ ಜಾತಿಕಟ್ಟಳೆ ಮೀರುವ ಮನೋಭಾವ ಈ ಎರಡರೊಳಗಿನ ಸಾಂಸ್ಕೃತಿಕ ಸಂಘರ್ಷ ಇಲ್ಲಿ ಮೈದಾಳುತ್ತದೆ.

ಸ್ವಾತಂತ್ರ್ಯ ಪಡೆದ ಆಧುನಿಕ ಸಮಾಜದಲ್ಲೂ ಸಂಪ್ರದಾಯಸ್ಥರು ವರ್ಣವ್ಯವಸ್ಥೆ ಮೀರಲು ಸಾಧ್ಯವಿಲ್ಲದ್ದನ್ನು ಈ ಸಂಭಾಷಣೆಯು ತಿಳಿಯಪಡಿಸುತ್ತದೆ. "ಎಲ್ಲಾರು ಸಮಾನರೆನ್ನುವ ಗಾಂಧಿ, ನಮ್ಮಲ್ಲ ಬದಲಾವಣೆಯ ಗಾಳಿ ಬೀಸಿದೆಯೆಂದಲ್ಲದೆ ಸ್ವಾತಂತ್ರ್ಯದ ಹೆಸರಿನಿಂದ ಬ್ರಾಹ್ಮಣ ಧರ್ಮವನ್ನು ಪಾಲಿಸುವುದನ್ನು ಬಿಟ್ಟು ಜಿಲ್ಲೆಯ ಮಾಣಿಗಳೆಲ್ಲ ಹೋಟೆಲು ಇಟ್ಟು ದುಡ್ಡು ಸಂಪಾದಿಸಲು ಮದರಾಸಿಗೋ, ಬೆಂಗಳೂರಿಗೋ ಹೋಗಿ ಅನ್ನ ವಿಕ್ರಯ ಮಾಡುತ್ತಿರುವುದು" (ಅದೇ, ಪುಟ ೪೫). ಸಂಪ್ರದಾಯಸ್ಥ ಮನಸ್ಸುಗಳಲ್ಲಿ ಆಧುನಿಕತೆಯನ್ನು ವಿರೋಧಿಸುವ ಸಂಘರ್ಷದ ಮನೋಭಾವವಿರುವುದನ್ನು ಮೇಲಿನ ಮಾತುಗಳು ಸ್ಪಷ್ಟಪಡಿಸುತ್ತವೆ.

ಇದೇ ಕಾದಂಬರಿಯಲ್ಲಿ ಬರುವ ಪಾರ್ವತಿ ಮತ್ತು ಶಂಕರರ ಸಂಭಾಷಣೆಯ ಸನ್ನಿವೇಶದಲ್ಲಿ ಪಾರ್ವತಿ ಆಡುವ ಮಾತುಗಳು ಹೋಟೆಲಿನ ಬಗೆಗಿನ ಆಕೆಯ ಸಾಂಪ್ರದಾಯಿಕ ಮನಸ್ಥಿತಿಯನ್ನು ತೆರೆದಿಡುತ್ತದೆ. "ಆ ವೇಣುವಿನ ಜತೆಗೆ ಗಾಂಧಿ ಆಶ್ರಮಕ್ಕೆ ಹೋಗಲಿ. ಹೋಟೆಲಿನ ಪಾತ್ರೆ ತೊಳೆಯಲು ಬೇಡ ಎಂದಳು. ಈಗ ಸಿಟ್ಟಿಗೇರಿದ ಶಂಕರ ಏನು ರಂಡೆ ನಿನ್ನ ಗಂಡನಿಗೆ ಸಹಾಯವಾಗುವ ಕೆಲಸ ಬಿಟ್ಟು ಮಾಣು ಆ ಸೂಳೆಯ ತಮ್ಮನ ಜತೆಗೆ ಆ ಗಾಂಧಿ ಹಿಂದೆ ಹೋಗಬೇಕೆ" (ಅದೇ, ಪುಟ ೧೬೫). ಶಂಕರನಲ್ಲಿರುವ ಆಧುನಿಕತೆಗೆ ತೆರೆದುಕೊಳ್ಳುವ ಮನಸ್ಥಿತಿಯನ್ನು ಪಾರ್ವತಿಯ ಸಾಂಪ್ರದಾಯಿಕ ಮನಸ್ಸು ಒಪ್ಪುವುದಿಲ್ಲ.

ಇದೇ ಕಾದಂಬರಿಯಲ್ಲಿನ ಗಂಗಾಧರನ ತಂದೆಯ ಸಂಪ್ರದಾಯಸ್ಥ ಮನಸ್ಸಿನ ತಳಮಳವು ಈ ರೀತಿಯದು. "ಇದ್ದುದರಲ್ಲಿಯೇ ಗಂಗಾಧರನೇ ತುಸು ಮುಂಗೋಪಿಯೂ, ಹಟಮಾರಿಯೂ ಆಗಿದ್ದರೂ ಪರಂಪರೆಗೆ ಗೌರವ ಕೊಟ್ಟು ತನ್ನ ನಂತರವೂ ಸುಗ್ಗಿ ಪದವು ಶಾಸ್ತ್ರಿಗಳ ಮನೆತನದ ಗೌರವಕ್ಕೆ ಚ್ಯುತಿ ಬಾರದಂತೆ ನಡೆದುಕೊಂಡು ಹೋಗುವನೆಂದು ತಿಳಿದಿದ್ದಾನೆ. ಆತ ತಮಗೆ ರುಚಿಸಿದ ಹೋಟೆಲು ವ್ಯವಸಾಯಕ್ಕೆ ಒಗ್ಗಿ ಸುಳ್ಳು ಹೇಳಿ, ತನ್ನ ಅನುಮತಿಯನ್ನು ಪಡೆಯದೆ ಮನೆ ಬಿಟ್ಟು ಹೋಗಿದ್ದಾನೆ"(ಅದೇ, ಪುಟ ೧೯೬). ಗಂಗಾಧರನು ತಂದೆಯ ಸಾಂಪ್ರದಾಯಿಕ ಮನಸ್ಥಿತಿಯ ಆಶೋತ್ತರಗಳಿಗೆ ಹೋಟೆಲು ಉದ್ಯಮಕ್ಕೆ ಒಗ್ಗಿಕೊಳ್ಳುವುದರ ಮೂಲಕ ತೆರೆ ಬೀಳಿಸುತ್ತಾನೆ.

ಪರಂಪರೆ ಮತ್ತು ಆಧುನಿಕತೆಯ ಸಂಕ್ರಮಣ ಸ್ಥಿತಿಯಲ್ಲಿ ನಮ್ಮ ಸಾಂಪ್ರದಾಯಿಕ ಜಾತಿವ್ಯವಸ್ಥೆ ಹೇಗೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುತ್ತದೆಂಬುದಕ್ಕೆ ಕಾದಂಬರಿಯಲ್ಲಿ ಬರುವ ವಿದ್ಯಾಧರ ಮತ್ತು ಶಶಿಧರರ ಸಂಭಾಷಣೆಯು ಕನ್ನಡಿ ಹಿಡಿಯುತ್ತದೆ. "ಅಣ್ಣನ ಹೋಟೆಲು ಬೆಳೀತಾ ಇರತ್ತೆಂತ ತಿಳಕೋ. ಉಡುಪಿ ಬ್ರಾಹ್ಮಣರ ಹೋಟೆಲೇ ಆದರೂ ಬ್ರಾಹ್ಮಣರ ಹುಡುಗರೇ ಕೆಲಸಕ್ಕೆ ಸಿಕ್ತಾರಂತ ಗ್ಯಾರಂಟಿ ಏನೂ ಇಲ್ಲ. ಈಗ ಬ್ರಾಹ್ಮಣ ಶೂದ್ರ ಪ್ರಜ್ಞೆ ಅನುಕೂಲ ಸಿಂಧು ಆಗುತ್ತೆ. ಬ್ರಾಹ್ಮಣರಲ್ಲದಿದ್ದರೂ ಒಂದು ಜನಿವಾರ ಸಿಕ್ಕಿಸಿ ಯಾರಿಂದಾದರೂ ಕೆಲಸ ಮಾಡಿಸಿ ಕೊಳ್ಳೋಣ ಅಂತ ಕಾಣೋದು ಸಾಧ್ಯ"(ಅದೇ, ಪುಟ ೨೧೫). ಆಧುನಿಕತೆಯನ್ನು ಪ್ರತಿನಿಧಿಸುವ ಹೋಟೆಲುಗಳಲ್ಲಿ ಸಾಂಪ್ರದಾಯಿಕ ಪರಂಪರೆಯಿಂದ ಜಾತಿಯನ್ನು, ಸಂಕ್ರಮಣ ಸ್ಥಿತಿ ತರುವ ಸುಳಿವುಗಳನ್ನು ಕಾದಂಬರಿ ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ.

ಆಧುನಿಕ ಘಟಕವಾದ ಹೋಟೆಲಿನಲ್ಲೂ ನಮ್ಮ ಸಾಂಪ್ರದಾಯಿಕ ಮನಸ್ಸುಗಳು ಹೇಗೆ ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ಪಾಲಿಸಿಕೊಂಡು ಬರುತ್ತವೆ ಎಂಬುದಕ್ಕೆ ಕಾದಂಬರಿಯ ಒಂದು ಸನ್ನಿವೇಶವು ಸಾಕ್ಷೀಭೂತವಾಗುತ್ತದೆ. "ಶಶಿ ಹೇಳಿದ ಹಾಗೆ ಈಗ ಎಲ್ಲಾ ಒಂದೇ

ಅನ್ನುವವರಿಗೆ ಜಾತಿಗೀತಿಯ ಪ್ರಶ್ನೆಯೇ ಇಲ್ಲ. ನಮ್ಮ ಹೋಟೆಲಲ್ಲೂ ಇದು ಶುರುವಾಗಿದೆ. ಹೊಲೆಯರನ್ನು ಹೊರಗಿರಿ ಎಂದರೆ ಯಾಕೆ? ಎಂದು ಕೇಳುವರೇ ಎಲ್ಲಾ ಸರಕಾರದ ಬೆಂಬಲ ಅವರಿಗಿದೆಯೆಂದಾದ ಮೇಲೆ ಎಲ್ಲರೂ ಹೆದರಬೇಕಾಗುತ್ತದೆ. ಆದರೆ ನಾನು ಇದಕ್ಕೊಂದು ಉಪಾಯ ಮಾಡಿದ್ದೇನೆ. ಒಂದು ಮೂಲೆಯಲ್ಲಿ ಬೇರೆ ಒಂದು ಬೆಂಚು ಹಾಕಿಸಿದ್ದೇನೆ. ಅವರಿಗೆ ಕಾಫಿ ಸಪ್ಲಾಯಿ ಮಾಡಲಿಕ್ಕೆ ಈ ಸಲ ಊರಿನಿಂದ ಒಬ್ಬಿಬ್ಬರು ಶೂದ್ರ ಹುಡುಗರನ್ನು ಕರೆದುಕೊಂಡು ಹೋಗುತ್ತೇನೆ. ಅಲ್ಲ ಅಣ್ಣಾ ಉಡುಪಿ ಬ್ರಾಹ್ಮಣರ ಹೋಟೆಲಿನಲ್ಲಿ ತಿಂಡಿ, ಕಾಫಿ ಸಪ್ಲಾಯಿ ಮಾಡೋದಿಕ್ಕೆ ಶೂದ್ರರ ಹುಡುಗರೇ? ಅಯ್ಯೋ ಅದಕ್ಕೇನು? ಆ ಹುಡುಗರ ಜಾತಿ ಯಾರು ಕೇಳ್ತಾರೆ. ಬೇಕಾದರೆ ಜನಿವಾರ ಕಟ್ಟಿ ಅವುಗಳ ಕುತ್ತಿಗೆಗೆ ನೇತುಹಾಕಿದರೆ ಸರಿ ಬ್ರಾಹ್ಮಣರ ಹಾಗೆ ಆಗುತ್ತಾರೆ" (ಅದೇ, ಪುಟ ೨೩೪). ಮೇಲ್ಜಾತಿಯವರ ಮನೆಗಳಲ್ಲಿ ಪಾಲಿಸುತ್ತಿದ್ದ ಜಾತಿವ್ಯವಸ್ಥೆಯನ್ನು ಸಾರ್ವಜನಿಕವಾದ ಹೋಟೆಲುಗಳಲ್ಲೂ ಪಾಲಿಸುವಂತದ್ದನ್ನು ಕಾದಂಬರಿಯ ಈ ಸನ್ನಿವೇಶವು ಚಿತ್ರಿಸುತ್ತದೆ.

ಶಂಕರ ಮೊಕಾಶಿ ಪುಣೇಕರರ 'ಗಂಗವ್ವ ಗಂಗಾಮಾಯಿ' ಕಾದಂಬರಿಯಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷವು ಚಿತ್ರಿತವಾಗಿದೆ. ವಸಂತರಾಯನು ಸಂಪ್ರದಾಯವನ್ನು ಮೀರುವ ಪಾತ್ರವಾಗಿ ಚಿತ್ರಿತನಾಗಿದ್ದಾನೆ. ಕಿಟ್ಟಿಯ ಬಗೆಗೆ ಆತನಲ್ಲಿ ಉಂಟಾದದ್ದು ಕ್ಯಾಂಟೀನಿನಲ್ಲಿ ಚಹಾ ಸೇವಿಸಲಾರದ್ದು, ಫಳಾರ ಸೇವಿಸದೇ ಇರುವ ಸನ್ನಿವೇಶವು ಈ ಕಾದಂಬರಿಯಲ್ಲಿದೆ. ಆಧುನಿಕ ಚಿಂತನೆಯಂತೆ ಚಹಾ ಫಳಾರ ಸೇವಿಸುವುದು ಅಷ್ಟೊಂದು ಮಹತ್ವದ್ದಾಗಿರಲಿಲ್ಲ. ಆದರೆ ಗಂಗವ್ವನಂತಹ ಬ್ರಾಹ್ಮಣ ಕುಟುಂಬಗಳಿಗೆ ಆ ಕಾಲದಲ್ಲಿ ಇದು ಸಂಪ್ರದಾಯದ ಪಾಲನೆಯಾಗಿತ್ತು. ಕುಟುಂಬದ ನಿಯಮದಂತೆ ಸಾರ್ವಜನಿಕವಾಗಿ ಬೇರೆಲ್ಲೂ ಕೂಡ ಚಹಾ ಸೇವಿಸುತ್ತಿರಲಿಲ್ಲ. ಚಹಾ ಫಳಾರ ಸೇವಿಸಿದ ಯುವಕರ ಬದುಕು ಬದುಕೇ ಅಲ್ಲ ಎಂಬ ಭಾವನೆಯು ಹೊಸ ತಲೆಮಾರಿನ ಯುವಕರದಾಗಿತ್ತು. ಸಂಪ್ರದಾಯವನ್ನು ಧಿಕ್ಕರಿಸಿ ಆಧುನಿಕ ಬದುಕಿನಂತೆ ಚಹಾದಂಗಡಿ, ಕ್ಯಾಂಟೀನುಗಳಲ್ಲಿ ಫಳಾರ ಸೇವಿಸುವ ಹೆಬ್ಬಯಕೆಯನ್ನು ಕೆಲವರು ಹೊಂದಿದ್ದರು.

ಮೊಗಳ್ಳಿ ಗಣೇಶ್ ಅವರ 'ಅನಾದಿ' ಕಾದಂಬರಿಯಲ್ಲಿ ಹೋಟೆಲಿನ ಚಿತ್ರಣದ ಮೂಲಕ ಸಂಪ್ರದಾಯ ಪಾಲನೆ ಬಗೆಯನ್ನು ವಿವರಿಸಲಾಗಿದೆ. ಕಾಕನ ಹೋಟೆಲಿನಲ್ಲಿ ಸನ್ನಿವೇಶವೊಂದರ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. "ಇದೇ ಅಮಾಸೆಯೇನು ಎಂಬ ಅನುಮಾನ ಬರುವಂತೆ ಕಾಕನ ಹೋಟೆಲು ಮೂಲೆಯಲ್ಲಿ ಎಲ್ಲರಿಗಿಂತಲೂ ಕೆಳಗೆ ದೂರದಲ್ಲಿ ಕುಳಿತು ದೀನನಾಗಿ ನೋಡುತ್ತಾ ಇನ್ನೊಂದಿಷ್ಟು ಟೀ ಕುಡಿಯಲು ಕೊಡುವರೋ ಏನೋ ಎಂದು ನಿರೀಕ್ಷಿಸುತ್ತಿದ್ದ" (ಮೊಗಳ್ಳಿ ಗಣೇಶ್, ೨೦೦೪, ಪುಟ ೮). ತಳಸಮುದಾಯದವನಾದ ಅಮಾಸನ ದೈನೇಶಿ

ಸ್ಥಿತಿಯು ಈ ಸನ್ನಿವೇಶದಿಂದ ವ್ಯಕ್ತವಾಗುತ್ತದೆ. ಹೋಟೆಲಲ್ಲಿಯೂ ಸಾಂಪ್ರದಾಯಿಕ ಜಾತಿವ್ಯವಸ್ಥೆ ಪಾಲನೆಯಾಗುತ್ತಿರುವುದನ್ನು ಅಮಾಸನ ಸ್ಥಾನವು ಗೊತ್ತುಪಡಿಸುತ್ತದೆ.

ಹೋಟೆಲಲ್ಲಿ ಜಾತಿ ಶ್ರೇಣೀಕರಣ ಪಾಲನೆಯಾಗುತ್ತಿರುವುದನ್ನು ಕ್ಯಾತಣ್ಣನ ಮತ್ತು ಅಮಾಸನ ಈ ಮಾತುಗಳು ಇನ್ನಷ್ಟು ಖಚಿತಪಡಿಸುತ್ತವೆ. "ನಮಗೆ ಅವನು ಆಳುಮಗನಾಗಿದ್ದರೂ ನಮ್ಮನ್ನು ಅವನು ಮುಟ್ಟಿಸಿಕೊಳ್ಳುವಂತಿರಲಿಲ್ಲ. ಹೋಟೆಲಲ್ಲಿ ಅವನಿಗಾಗಿಯೇ ಒಂದು ಲೋಟವನ್ನು ಪ್ರತ್ಯೇಕವಾಗಿ ಮರೆಯ ಮೂಲೆಯಲ್ಲಿ ಇಡಲಾಗಿತ್ತು. ನಾವೇ ಅಸ್ಪೃಶ್ಯರೆಂದರೆ ನಮಗಿಂತಲೂ, ನಮಗೂ ಅಸ್ಪೃಶ್ಯರಿದ್ದಾರಲ್ಲಾ ಎಂಬ ಚೋದ್ಯವು ಮನಸ್ಸಿಗೆ ಅಂಟಿತ್ತು. ಅಂತಹ ರಮ್ಯಕಥೆಗಳ ಮಾಂತ್ರಿಕನಿಗೆ ನಮ್ಮವರು ಮಡಿಮೈಲಿಗೆ ಆಚರಿಸುತ್ತಿದ್ದರು. ಅಮಾಸೆಗೆ ಅದರಿಂದ ಬೇಸರವೇ ಆಗುತ್ತಿರಲಿಲ್ಲ. ಅಯ್ಯೋ ಒಳಗೆ ಕುಳಿತರೇನು, ಹೊರಗೆ ಕುಳಿತರೇನು ಎಲ್ಲಾ ಭೂಮಿಯ ಮೇಲೆ ತಾನೇ ಕೂರುವುದು"(ಅದೇ). ಹೀಗೆ ಕ್ಯಾತಣ್ಣನು ಸಂಪ್ರದಾಯವನ್ನು ಮೀರುವ ಪ್ರಯತ್ನ ಮಾಡುತ್ತಾನೆ. ಅಮಾಸನು ಸಂಪ್ರದಾಯ ಮತ್ತು ಆಧುನಿಕತೆಗಳಿಗೆ ಮಿಗಿಲಾದದ್ದು ಪ್ರಕೃತಿ ಎಂಬುದನ್ನು ತಿಳಿಹಾಸ್ಯದೊಂದಿಗೆ ತಿಳಿಯಪಡಿಸುತ್ತಾನೆ.

ಕಾದಂಬರಿಯು ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳೊಳಗಿನ ವೈಚಾರಿಕ ಮುಖಾಮುಖಿ ಅಥವಾ ಸಂಘರ್ಷಕ್ಕೂ ಆಸ್ಪದ ಕಲ್ಪಿಸಿದೆ ಎನ್ನಬಹುದು. ಈಗಾಗಲೇ ಕ್ಯಾತಣ್ಣನ ಮಾತುಗಳಲ್ಲಿ ಇಂತಹ ವೈಚಾರಿಕ ಸಂಘರ್ಷಕ್ಕೆ ಸುಳಿವುಗಳಿವೆ. ಅದೇ ರೀತಿ ಮುಂದೆ ಹೋಟೆಲು ಮಾಲೀಕನಾದ ತಾತನು ಗ್ರಾಹಕರೊಂದಿಗೆ ಆಡುವ ಮಾತುಗಳಲ್ಲೂ ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿ ಪ್ರತಿಪಾದಿತವಾಗುತ್ತದೆ. "ಮಾಯ ಕಥೆಗಾರನಿಗೆ ನಾನು ಇಡೀ ಹೋಟೆಲಲ್ಲಿ ಇರುವುದನ್ನೆಲ್ಲ ಕೊಟ್ಟುಬಿಡಲು ಆಶಿಸುತ್ತಿದ್ದೆ. ಅವನನ್ನು ಹೊರಗೆ ಕೂರಿಸಲು ನನಗೆ ಎಳ್ಳಷ್ಟು ಇಷ್ಟವಿರಲಿಲ್ಲ. ಅವನೂ ಎಲ್ಲರಂತೆ ಒಳಗೆ ಬಂದು ನಮ್ಮ ಮಧ್ಯೆಯೇ ಕೂತು ಸಹಜವಾಗಿ ನಗುನಗುತ್ತಾ ಮಾತನಾಡಬೇಕು ಎಂದು ಯಾವತ್ತೂ ನಾನು ಆಸೆಪಡುತ್ತಿದ್ದೆ. ತಾತ ಅಂತಹ ಭಾವನೆಯನ್ನೇ ಹೊಂದಿದ್ದನಾದರೂ ಗಿರಾಕಿಗಳ ಮುಖ ನೋಡಿ ಹೊರಗೆ ಕೂರಿಸಲಾಗುತ್ತಿತ್ತು. ಯಾರು ಹೋಟೆಲಲ್ಲಿ ಇಲ್ಲದಿದ್ದಾಗ ಆತ ಬಂದರೆ ನೀನು ಇಲ್ಲಿ ತನಕ ಒಳಗೆ ಬಂದರೆ ಮಾತ್ರ ನಿನಗೆ ತಿಂಡಿ ಕೊಡುವುದು ಎಂದು ನಾನು ಹಠ ಹಿಡಿಯುತ್ತಿದ್ದೆ. ಅಮಾಸನೂ ಲಕ್ಷ್ಮಣರೇಖೆಯನ್ನು ದಾಟುತ್ತಿರಲಿಲ್ಲ. ಅಂಗೆಲ್ಲ ಬರಬಾರ್ದು ಕನಪ್ಪಾ(ಅದೇ, ಪುಟ ೫೬) ಎನ್ನುತ್ತಿದ್ದ. ಒಟ್ಟಾರೆಯಾಗಿ ಅನಾದಿ ಕಾದಂಬರಿಯು ಹೋಟೆಲಿನ ಪ್ರತಿನಿಧೀಕರಣದ ಮೂಲಕ ನಮ್ಮ ಸಮಾಜದಲ್ಲಿ ಆಧುನೀಕರಣ ಪ್ರಕ್ರಿಯೆಯ ಹಂತದಲ್ಲಿ ನಡೆಯಬಹುದಾದ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ಪ್ರತಿಪಾದಿಸುತ್ತದೆ. ಸಂಪ್ರದಾಯವನ್ನು ಮೀರಿ ಆಧುನಿಕತೆಗೆ ತೆರೆದುಕೊಳ್ಳಬೇಕೆಂಬ ವೈಚಾರಿಕ

ಮನಸ್ಸುಗಳ ನಡುವೆಯೇ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುವ ಪಾರಂಪರಿಕ ಮನಸ್ಸುಗಳು ಇವೆ ಎಂಬುದನ್ನು ಕಾದಂಬರಿಯು ಕಲಾತ್ಮಕವಾಗಿ ನಿರೂಪಿಸುತ್ತದೆ.

ದು.ನಿಂ. ಬೆಳಗಲಿಯವರ 'ಕಾತ್ರಾಳ ರತ್ನಿಯ ಚಾದಂಗಡಿ' ಹಳ್ಳಿ ಬದುಕನ್ನು ಚಿತ್ರಿಸುವ ಕಾದಂಬರಿಯಾಗಿದೆ. ಹಳ್ಳಿಯ ಹೋಟೆಲುಗಳಲ್ಲಿ ಜಾತಿಯ ವ್ಯವಸ್ಥೆಯನ್ನು ನಿವಾರಿಸಿ ಆಧುನಿಕತೆಗೆ ತೆರೆದುಕೊಳ್ಳುವ ಸುಳಿವುಗಳನ್ನು ಕಾದಂಬರಿಯು ಮನೋಜ್ಞವಾಗಿ ಚಿತ್ರಿಸಿದೆ. ಕಾದಂಬರಿಯಲ್ಲಿ ಬರುವ ರತ್ನ ಮತ್ತು ಧರಪ್ಪಗೌಡರ ಮಗನ ಸಂಭಾಷಣೆಯ ಮೂಲಕ ಇದನ್ನು ಇನ್ನಷ್ಟು ಮನನ ಮಾಡಿಕೊಳ್ಳಬಹುದಾಗಿದೆ. "ತಮ್ಮ ನಾಮನ್ಯಾವ್ರು ಅದಃ ಹೊಸದಾಗಿ ಹೋಟೆಲು ಚಾಲು ಮಾಡದಾಗ ನಿಮ್ಮಪ್ಪ ಇನಾ ಕಾಂಗ್ರೆಸದಾಗ ಇದ್ರು. ಹೋಟೆಲದಾಗ ಹರಿಜನ್ರು ಬಂದ್ರ ಕರ್ರ್ಕೋಬೇಕು... ಹೊರಗೆ ಕುಂಡ್ರಿಸಿ ಅವ್ರಿಗೆ ಬ್ಯಾರೇ ಕಪ್ಪ - ಬಸ್ಯಾಗ ಚಾ ಕೊಡಬಾರ್ದು - ಅವ್ರಿಗೆ ಒಳಗಿನ ಕಪ್ಪಾ ಬಸೀನ ಕೊಡಬೇಕು... ಸರ್ಕಾರ ಕಾಯ್ದೆ ಮಾಡೇತಿ ಅಂತ ತಾಕೀತ ಮಾಡಿದ್ರು... ಆದರೂ ಪೈಲೇನಃ ನಮ್ಮಲ್ಲಿ ಎಲ್ಲಾ ಜಾತೀ ಮಂದಿ ಬರ್ತಿದ್ರು. ಇನಾ ಊರಿನ ಎಡ್ಡ ಹೋಟೆಲದಾರ ಹರಿಜನ ಮಂದೀನ ಬರಗೂಡುದುಲ್ಲ... ಇದೇ ಧರಪ್ಪಗೌಡ್ರಿಗೂ ಗೊತ್ತೈತಿ... ನೀಂವ ಪಂಚಾಯ್ತಿ ಮೆಂಬರ್ರು, ಕಾಯ್ದೆ ಬಲ್ಲಾವು... ಈಗ ಜನತಾ ಸರ್ಕಾರ ಮತ್ತು ಹರಿಜನರನ್ನ ಹೋಟೆಲದಾಗ ಕರ್ರ್ಕೊಬ್ಯಾಡ್ರಿ ಅಂತ ಹೊಸ ಕಾಯ್ದಿಗಿಯ್ದೆ ಮಾಡೇತೇನು"(ಬೆಳಗಲಿ ದು.ನಿಂ., ೧೯೯೮, ಪುಟ ೪೧). ಆಧುನಿಕತೆಯ ಘಟಕವಾದ ಹೋಟೆಲಿನಲ್ಲಿ ಪಾರಂಪರಿಕವಾದ ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ಪಾಲಿಸುವುದರ ಬಗೆಗೆ ರತ್ನಿಯು ತೊರುವ ವೈಚಾರಿಕ ಪ್ರತಿರೋಧವು ಆಕೆಯ ಈ ಮಾತುಗಳಿಂದ ಸ್ಪಷ್ಟವಾಗುತ್ತವೆ.

ಕಾದಂಬರಿಯಲ್ಲಿ ರತ್ನಿಯದು ಕೇವಲ ವ್ಯಾಪಾರಿ ಮನೋಭಾವದ ಪಾತ್ರವಷ್ಟೇ ಅಲ್ಲ. ಚಾದಂಗಡಿ ಮಾಲೀಕಳಾದ ರತ್ನಿಯು ಕೆಲವೊಮ್ಮೆ ತೀರಾ ವೈಚಾರಿಕ ನೆಲೆಗಟ್ಟಿನಲ್ಲಿ ಮಾತನಾಡುತ್ತಾಳೆ. ಸಾಂಪ್ರದಾಯಿಕ ಜಾತಿಪದ್ಧತಿಯ ಬಗೆಗೆ ಪ್ರತಿರೋಧ ವ್ಯಕ್ತಪಡಿಸುವ ರತ್ನಿಯು ಆಚಾರವಂತರು ತಮ್ಮ ಮಡಿ ಮೈಲಿಗೆಯನ್ನು ಬಿಡುವುದರ ಬಗೆಗೂ ವಿನೋದಪೂರ್ಣವಾಗಿ ಪ್ರತಿಕ್ರಿಯಿಸುತ್ತಾಳೆ. ಮಠದ ಸ್ವಾಮಿಗಳು ಆಕೆ ಚಾದಂಗಡಿಗೆ ಬಂದು ಅಲ್ಲಿ ತಿಂಡಿ ತಿಂದ ಸಂದರ್ಭದಲ್ಲಿ ರತ್ನ ಆಡುವ ಮಾತುಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. "ಸ್ವಾಮ್ಯಾರ ಮಠದವ್ರು ಆಚಾರವಂತ ಸ್ವಾಮಿಗೋಳು ಹೋಟೆಲಕ ಬರೋದುಲ್ಲ - ನೀವು ಮಠದವ್ರಂತ ಹೇಳ್ತಿರಿ... ಮಡಿ-ಮೈಲಿಗೆ ಅಂತೀರಿ, ನಿಮದೆಂತಾ ಮಠಾರೀ? ಒಂದಿಷ್ಟು ಆತನನ್ನು ಕೆಣಕಿದಂತೆ ರತ್ನಾ ನಗೆಯನ್ನು ತಡೆದುಕೊಂಡು ಗಂಭೀರವಾಗಿ ಕೇಳಿದ್ದಳು"(ಅದೇ, ಪುಟ ೭೨). ಈ ಎರಡೂ ಸನ್ನಿವೇಶಗಳು ವಿಭಿನ್ನ ವೈಚಾರಿಕ ನೆಲೆಗಟ್ಟಿನಲ್ಲಿ ಮೂಡಿಬಂದಿವೆ ಎನಿಸಿದರೂ ಹೋಟೆಲಿನ ಚಿತ್ರಣದ ಮೂಲಕ

ಪ್ರತಿಪಾದಿತವಾಗುವ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷಕ್ಕೆ ಉತ್ತಮ ಉದಾಹರಣೆ ಎನಿಸುತ್ತವೆ.

ಕಾದಂಬರಿಯಲ್ಲಿ ರಾಜಪ್ಪ ಸಾಂಪ್ರದಾಯಿಕ ಜಾತಿವ್ಯವಸ್ಥೆಯನ್ನು ವಿರೋಧಿಸುವ ಈ ಮಾತುಗಳು "ಎಲ್ಲಾ ಜಾತಿಗಳು ಒಂದು ಎನ್ನುವ ಸಾರ್ವಜನಿಕ ಸಭೆಗಳಲ್ಲಿಯ ಮುಖಂಡರ ಮಾತಾಗಲಿ 'ಇವನಾರವ ಇವನಾರವ' ಎಂಬ ಬಸವಣ್ಣನ ವಚನವನ್ನು ಪ್ರವಚನೆ-ಪುರಾಣದಲ್ಲಿ ಉದಾಹರಿಸುವ ಸ್ವಾಮಿಗಳ ನುಡಿಯಾಗಲಿ ಎಲ್ಲವೂ ಸುಳ್ಳು"(ಅದೇ, ಪುಟ ೧೬೫). ಈ ಎಲ್ಲಾ ಪ್ರಸಂಗಗಳೇ ಅನುಭವದಿಂದ ರಾಜಪ್ಪ 'ರತ್ನಾ' ಚುನಾವಣೆಯಲ್ಲಿ ರಾಜಕೀಯ ಸ್ಟಂಟ್ ಮಾಡುವ ಮುಖಂಡರಿಗಿಂತ, ಶ್ರಾವಣ ತಿಂಗಳಲ್ಲಿ ಮಾತುಗಳನ್ನು ಮಾರಿ ಹೊಟ್ಟೆ ಹೊರೆಯುವ ಸ್ವಾಮಿಗಳಿಗಿಂತ ಎತ್ತರದವಳಾಗಿ ಕಾಣುತ್ತಿದ್ದಳು. ಜಾತಿ ರಾಜಕೀಯ ಸಾಂಸ್ಕೃತಿಕ ಸಂಘರ್ಷದೊಂದಿಗೆ ಚಾದಂಗಡಿ ಮಾಲಕಿ ರತ್ನಾಳನ್ನು ಗೌರವಿಸುವ ನುಡಿಗಳಿವು.

ಗ್ರಾಮೀಣ ಪರಿಸರದ ಹೋಟೆಲುಗಳಲ್ಲಿ ಆಧುನಿಕ ಮಾದರಿಯಲ್ಲಿ ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ಹೇಗೆ ಪಾಲಿಸಿಕೊಂಡು ಬರಲಾಗುತ್ತಿತ್ತು ಎಂಬುದನ್ನು ವ್ಯಾಸರಾವ ನಿಂಜೂರರ 'ಶ್ರೀ ಚಾಮುಂಡೇಶ್ವರಿ ಭವನ' ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ಈ ವ್ಯವಸ್ಥೆಯು ಸಮಾಜದೊಳಗೆ ಇದೆ ಎಂಬುದನ್ನು ಕಾದಂಬರಿಯ ಈ ವಿವರಗಳಿಂದ ತಿಳಿಯಬಹುದಾಗಿದೆ. "ಲೇಡೀಸ್ ರೂಮು ಮಾತ್ರ ಚಾಮುಂಡೇಶ್ವರಿ ಭುವನದ ವಿಶೇಷತೆಯಲ್ಲ. ಚುನಾವಣೆಯಲ್ಲಿ ನಿಮ್ನವರ್ಗದವರಿಗೆ ಕಾದಿರಿಸಿದ ಸ್ಥಾನಗಳಿದ್ದಂತೆ ಚಾಮುಂಡೇಶ್ವರಿಯಲ್ಲಿ ಹರಿಜನ ಬಂಧುಗಳಿಗಾಗಿಯೇ ನಿರ್ಮಿತವಾದ ಮಳೆ ಮಾಡಿನಿಂದ ಕಂಗೊಳಿಸುವ ಪ್ರತ್ಯೇಕ ರೂಮಿದೆ. ಅದರಲ್ಲೂ ಬೆಂಚು, ಟೇಬಲ್ಲು ಇವೆ. ಬೇರೆ ಹೋಟೆಲುಗಳಲ್ಲಿ ಪ್ರಚಲಿತವಿದ್ದ ಕ್ರಮದಂತೆ ಹರಿಜನರು ಹೋಟೆಲಿನ ಹೊರಗೆ ಕುಕ್ಕರಗಾಲು ಹಾಕಿ ಕೂತು ಹಾಳೆಯ ಟೋಪಿಯಲ್ಲೋ, ತೆಂಗಿನ ಗೆರಟೆಯಲ್ಲೋ ಚಹ ಹಿಡಿದು ಕುಡಿಯಬೇಕಿಲ್ಲ. ಮೇಲ್ಜಾತಿಯ ಹರಿಜನರಿಗೆ ಗ್ಲಾಸು, ಕೆಳಗಣ ವರ್ಗದವರಿಗೆ ಅಲ್ಯೂಮಿನಿಯಂ ದಬರಿ ಇವೆ. ಈ ಎಲ್ಲಾ ಸೌಕರ್ಯಗಳಿಂದಾಗಿ ನಿಮ್ನವರ್ಗದ ಬಂಧುಗಳೂ ಸಹ ಶಿವಳ್ಳಿ ಬ್ರಾಹ್ಮಣರ ಹೋಟೆಲಲ್ಲಿ ಮರ್ಯಾದೆಯಿಂದ ಕುಳಿತು ಚಹಾ ಕುಡಿಯುವ ಸೌಭಾಗ್ಯ ಪಡೆಯುವಂತಾಗಿದೆ"(ವ್ಯಾಸರಾವ ನಿಂಜೂರ್, ೨೦೦೨, ಪುಟ ೧೨). ಆಧುನಿಕತೆಯ ಜತೆಜತೆಗೆ ಸಂಪ್ರದಾಯವು ಪಾಲನೆಯಾಗುತ್ತಿರುವ ಸಾಂಸ್ಕೃತಿಕ ವೈಚಾರಿಕದ ನೆಲೆಗಳನ್ನು ಕಾದಂಬರಿಯ ಈ ಮಾತುಗಳು ಸಶಕ್ತವಾಗಿ ನಿರೂಪಿಸುತ್ತವೆ.

ಜಾತಿಯ ಶ್ರೇಣೀಕರಣ ವ್ಯವಸ್ಥೆಯುಳ್ಳ ಗ್ರಾಮೀಣ ಪರಿಸರದಲ್ಲಿ ಬ್ರಾಹ್ಮಣರ ಹೋಟೆಲಿಗಿರುವ ಮಹತ್ವವನ್ನು ಕಾದಂಬರಿಯ ಸನ್ನಿವೇಶ ಒಂದು ವಿನೋದಪೂರ್ಣವಾಗಿ ಪ್ರತಿಪಾದಿಸುತ್ತದೆ. "ಮನೆಯಲ್ಲಿ ವಾಸು, ಹೊರಗೆ ವಾಸಪ್ಪಯ್ಯ, ಪರಸ್ಥಳದಲ್ಲಿ ವಾಸುದೇವರಾವ್ ಆಗಿದ್ದ ಈ

ಕುಳವಾರಿ ವಾಸುಭಟ್ಟರಾಗಿದ್ದು ಚಾಮುಂಡೇಶ್ವರಿಯ ಮಾಲೀಕರಾದ ಮೇಲೆಯೇ ಸದರೀ ವಾಸಪ್ಪಯ್ಯನಿಗೆ ಭಟ್ಟರೆನಿಸಿಕೊಳ್ಳುವುದರಲ್ಲಿ ಅಷ್ಟೊಂದು ಆನಂದವಿರಲಿಲ್ಲವಾದರೂ ಕೆಳಜಾತಿಯ ಜನಗಳು ಜನಿವಾರವಿದ್ದ ಗಾಣಿಗರು, ವಿಶ್ವಕರ್ಮರು, ಕೊಂಕಣಸ್ಥರು, ಮರಾಠಿ, ಸಿಂಪಿಗರು, ಶೇರೆಗಾರರು ಹೀಗೆ ಎಲ್ಲರನ್ನೂ ಬ್ರಾಹ್ಮಣವರ್ಗದಲ್ಲಿ ಪರಿಗಣಿಸುವ ಪೈಕಿ ಅದರಲ್ಲೂ ಚಾಮುಂಡೇಶ್ವರಿಗೆ 'ಶಿವಳ್ಳಿ ಬ್ರಾಹ್ಮಣರ' ಎಂದು ಬೋರ್ಡಿನಲ್ಲಿ ವಿಶೇಷಣವಿದೆ. ಬ್ರಾಹ್ಮಣರಾದ ಮೇಲೆ ಭಟ್ಟರು ಎಂದು ಕರೆಯುವುದರಲ್ಲೇನು ತಪ್ಪು ಎಂದು ವಾಸಪ್ಪಯ್ಯನನ್ನು ವಾಸುಭಟ್ಟರಾಗಿ ಮಾರ್ಪಡಿಸಿದ್ದರು. ದಂಥೆಗಿಳಿದ ಮೇಲೆ ಭಟ್ಟರಾದರೇನು, ಶಟ್ಟರಾದೇನು"(ಅದೇ, ಪುಟ ೨೦). ಇತರೆಡೆಗಳಲ್ಲಿ ವಾಸು, ವಾಸಪ್ಪಯ್ಯ, ವಾಸುದೇವರಾವ್ ಎಂಬುದಾಗಿ ಕರೆಸಿಕೊಳ್ಳುತ್ತಿದ್ದ ಶ್ರೀ ಚಾಮುಂಡೇಶ್ವರಿ ಭವನದ ಮಾಲಕ ಹೋಟೆಲು ಸ್ಥಾಪನೆಯಾದ ಮೇಲೆ ವಾಸುದೇವ ಭಟ್ಟ ಎಂದು ಕರೆಸಿಕೊಳ್ಳುವುದರ ಮೂಲಕ ಹೆಸರಿನಲ್ಲಿರುವ ಶ್ರೇಷ್ಠತೆಯ ವ್ಯಸನ ವ್ಯಕ್ತವಾಗುತ್ತದೆ.

ವಾಸುದೇವ ಭಟ್ಟರ ತಂದೆ ಸೀನಪ್ಪಯ್ಯನು ಸಾಂಪ್ರದಾಯಿಕ ಮನಸ್ಸಿನಲ್ಲಿ ಉಂಟಾದ ಹೋಟೆಲು ಉದ್ಯಮದ ಬಗೆಗೆ ಭಾವನಾತ್ಮಕ ಸಂಘರ್ಷಕ್ಕೆ ಈಡಾಗಿರುವುದು ಹೀಗೆ "ಹೌದೇನ ವಾಸ್ದೇವ ನಮ್ಮ ವಂಶದಲ್ಲಿ ಯಾರೂ ಮಾಡದಂತಹ ಕೆಲಸ ಮಾಡಿ ನನ್ನ ಹೆಸರಿಗೆ ಮಸಿ ಹಚ್ಚಿದೆಯಲ್ಲ... ಹೀಗೆ ಮಾಡುವುದಕ್ಕಿಂತ ಒಂಚೂರ ವಿಷ ನನಗೆ ನೀನು ತಂದು ಕೊಡಬಹುದಾಗಿತ್ತ. ಕಲಿಯಲ್ಲಿಕ್ಕಂತೂ ನಿನಗೆ ದಾಡಿಯಾಯಿತು ಹೋಗಲಿ ಇರುವ ಒಂದಿಷ್ಟು ಗದ್ದೆಯನ್ನು ಸಾಗುವಳಿ ಮಾಡಿಕೊಂಡು ಮರ್ಯಾದೆಯಿಂದ ಬಿದ್ದಿರಬಹುದಾಗಿತ್ತಲ್ಲ. ಬ್ರಾಹ್ಮಣನಾಗಿ ಹುಟ್ಟಿ ಅನ್ನ ಮಾರುವ, ತಟ್ಟೆ ತೊಳೆಯುವ ಕೆಲಸಕ್ಕೆ ಯಾವ ಪುರುಷಾರ್ಥ ಸಾಧಿಸಲಿಕ್ಕಂತ ಹೇಳು ನೋಡುವ" (ಅದೇ, ಪುಟ ೩೪). ಹೀಗೆ ವಾಸುದೇವ ಭಟ್ಟರು ಅನ್ನದಾನ ಮಾಡಬೇಕಾಗಿದ್ದವನು ಅನ್ನ ಮಾರುವ ಆಧುನಿಕತೆಗೆ ಒಳಗಾಗಿರುವುದು ಸೀನಪ್ಪಯನಲ್ಲಿ ಆತಂಕ ಸೃಷ್ಟಿಸುತ್ತದೆ.

ಸೀನಪ್ಪನ ಸಂಪ್ರದಾಯಸ್ಥ ಮನಸ್ಸು ಹಾಗೂ ವಾಸಪ್ಪಯ್ಯನ ಆಧುನಿಕತೆಗೆ ತೆರೆದುಕೊಂಡ ಮನಸುಗಳೊಳಗಿನ ಸಾಂಸ್ಕೃತಿಕ ಸಂಘರ್ಷಕ್ಕೆ ಸಾಕ್ಷೀಭೂತವೆನಿಸುವ ಇನ್ನಷ್ಟು ವಿವರಗಳನ್ನು ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ. "ಹೋಟೆಲಲ್ಲಿ ಇದ್ದುದೇನೂ ಹೌದು ಅಪ್ಪಯ್ಯ. ಆದರೆ ನೀವಂದುಕೊಂಡಂತೆ ಇಲ್ಲಿ ಎಂಜಲು ಗ್ಲಾಸು ಎತ್ತುತ್ತಿರಲಿಲ್ಲ ಗಲ್ಲೆಯಲ್ಲಿದ್ದೆ. ತಾನು ಗ್ಲಾಸು ತೊಳೆದಿದ್ದೆಯಾದರೂ ಪ್ರಕೃತಿ ಮ್ಯಾನೇಜರಾಗಿದ್ದದ್ದಲ್ಲವೇ"(ಅದೇ, ಪುಟ ೩೪). ಆಧುನಿಕತೆಯನ್ನು ಬರಮಾಡಿಕೊಳ್ಳುವ ವಾಸುದೇವ ಭಟ್ಟರ ಸಮರ್ಥನೆಯ ಮಾತುಗಳಿವು.

ಇದಕ್ಕೆ ಪ್ರತ್ಯುತ್ತರವಾಗಿ ಸೀನಪ್ಪಯ್ಯನ್ನಾಡುವ ಮಾತುಗಳಲ್ಲಿ ಸಾಂಪ್ರದಾಯಿಕತೆಯನ್ನು ಬಿಟ್ಟುಕೊಡದ ಪಾರಂಪರಿಕ ಧೋರಣೆಯಿದೆ. "ಹೋಟ್ಲು ಅಂದ ಮೇಲೆ ಮುಗಿಯಿತು ಗಲ್ಲವಾಗಲಿ, ಸಪ್ಲಾö್ಯ ಆಗಲಿ, ತಟ್ಟೆ ತೊಳೆಯುವುದಾಗಲಿ ಎಲ್ಲಾ ಒಂದೇ. ಸೆರಗು ಹಾಸುವ ಸೂಳೆ ತಾನು

ಬ್ರಾಹ್ಮಣರ ಜತೆ ಮಾತ್ರ ಮಲಗಿದ್ದು ಎಂದರೆ ಅವಳಿಗೆ ಗರತಿತನ ಬರುತ್ತದಾ. ಥೂ ನಿನ್ನ ಜನ್ಮಕ್ಕಿಷ್ಟು ಬೆಂಕಿ ಹಾಕಿತು, ಈ ಹೋಟ್ಲೆಗಿಂತ ಹಜಾಮತನ, ಇಲ್ಲ ವೇಶ್ಯಾವಾಟಿಕೆ ನಡೆಸುವುದು ಮೇಲು ಅಂತ ಅನ್ನಲಿಲ್ಲವೇ ನಾನು? ಹೋಟ್ಲು ಮಾಡ್ತಾನಂತ"! ಅದರ ಬದಲು ಕೈಯಲ್ಲಿರುವ ದುಡ್ಡನ್ನು ವಡ ಭಾಂಡೇಶ್ವರ ದೇವರ ಡಬ್ಬಿಗಾದರೂ ಹಾಕಿಬಿಡು. ದೇವಸ್ಥಾನದ ಜೀರ್ಣೋದ್ಧಾರ ಕ್ಕಾದರೂ ಒಂದಿಷ್ಟು ಸಹಾಯವಾದೀತು(ಅದೇ, ಪುಟ ೩೯). ಹೀಗೆ ಸಂಪ್ರದಾಯದ ಪ್ರತಿನಿಧಿಯಾದ ತಂದೆ ಹಾಗೂ ಆಧುನಿಕತೆಯ ಪ್ರತಿನಿಧಿಯಾದ ಮಗನ ನಡುವಿನ ಮಾತು ಪ್ರತಿ ಮಾತುಗಳಲ್ಲಿ ಸಾಂಸ್ಕೃತಿಕ ಸಂಘರ್ಷವು ಸ್ಪಷ್ಟವಾಗಿ ಗೋಚರವಾಗುತ್ತವೆ.

ಇಲ್ಲಿ ತಂದೆ ಮತ್ತು ಮಗನ ನಡುವಿನ ಸಾಂಸ್ಕೃತಿಕ ಸಂಘರ್ಷವನ್ನು ತಿಳಿಗೊಳಿಸಿ ಸನ್ನಿವೇಶವನ್ನು ಸಮತೋಲನಪಡಿಸುವ ಪಾತ್ರವಾಗಿ ಸೀನಪ್ಪಯ್ಯನ ಸಹೋದರಿಯಾದ ಭಾಗ್ಯಮ್ಮ ಕಂಡುಬರುತ್ತಾಳೆ. "ವಾಸುದೇವ ಊರಲ್ಲೇ ಎಲ್ಲಾದರೂ ಹೋಟೆಲು ಇಟ್ಟರೆ ಊರಿನ ಜನ ನಾಲ್ಕು ದಿನ ಮಾತಾಡಿಯಾರು. ಮಾತಾಡಿದರೆ ಅಡಿಕೊಳ್ಳಲಿ. ಅವರ ಮನೆಯ ಅನ್ನವೇನು ತಾನು ಉಣ್ಣುವದಿಲ್ಲವಲ್ಲ! ಇವನಿಗೆ ಒಳ್ಳೆ ಸಂಪಾದನೆಯಾದರೆ ಮತ್ತೆ ಅದೇ ಜನ ಸಲಾಮು ಹೊಡೆಯಲಾರಂಭಿಸುತ್ತದೆ. ಈಗ ಕಟ್ಟಾ ವೈದಿಕರಾದ ರಾಮಾಚಾರ್ಯರ ಮಗ ಮೈಸೂರಲ್ಲಿ ಹೋಟೆಲಿಟ್ಟು ಮೆರೆಯುವುದಿಲ್ಲವೇ? ಮೊದಮೊದಲು ರಾಮಾಚಾರ್ಯರನ್ನು ಕಂಡು ಮೂಗು ಮುರಿಯುತ್ತಿದ್ದ ಜನ, ಅವರ ರೇಶ್ಮೆಯ ರುಮಾಲು, ಧೋತರ ಬೆರಳಲ್ಲಿ ಉಂಗುರ ಇವನ್ನೆಲ್ಲ ಕಂಡು ಬರಬೇಕು ಆಚಾರ್ರೆ ಬರಬೇಕು" ಎಂದು ಸ್ವಾಗತಿಸುವುದಿಲ್ಲವೇ?"(ಅದೇ, ಪುಟ ೪೬). ಕಟ್ಟಾ ವೈದಿಕ ಸಂಪ್ರದಾಯಸ್ಥಳಾದ ಭಾಗತ್ತೆಯ ಅಳಿಯ ಆಧುನಿಕತೆಯಿಂದ ಒದಗಬಹುದಾದ ಪ್ರತಿಷ್ಠೆಯ ವಿಷಯವನ್ನು ಮುಂದಿಟ್ಟುಕೊಂಡು ಸೀನಪ್ಪಯ್ಯನ ಮನಃಪರಿವರ್ತಿಸುವುದು ಇಲ್ಲಿ ಚಿತ್ರಿತವಾಗಿದೆ.

'ಜನಪ್ರಿಯ ಸಾಹಿತ್ಯ'ವೆಂದು ಪರಿಗಣಿಸಲಾದ ಕೆಲವು ಕಾದಂಬರಿಗಳಲ್ಲೂ ಹೋಟೆಲು ಉದ್ಯಮದಿಂದಾಗಿ ಸಾಂಪ್ರದಾಯಿಕ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಸಂಘರ್ಷ ಉಂಟಾಗುವುದನ್ನು ಚಿತ್ರಿಸಿವೆ. ಕೆ.ಟಿ.ಗಟ್ಟಿ ಅವರ 'ಮೃತ್ಯೋರ್ಮಾ ಅಮೃತಂಗಮಯ', 'ಪುನರಪಿ ಜನನ' ಇದಕ್ಕೆ ಸೂಕ್ತ ಉದಾಹರಣೆಯಾಗಿವೆ. 'ಮೃತ್ಯೋರ್ಮಾ ಅಮೃತಂಗಮಯ' ಕಾದಂಬರಿಯಲ್ಲಿ ಮನೋಹರನು ಸಾಂಪ್ರದಾಯಿಕತೆಯನ್ನು ವಿರೋಧಿಸುತ್ತಾನೆ. ಸುರೇಂದ್ರನನ್ನೇ ತನ್ನ ಮನೆಗೆ ಕರೆದುಕೊಂಡು ಬಂದ ಮನೋಹರನಲ್ಲಿ ಉಂಟಾದ ಹೋಟೆಲಲ್ಲಿ ಪಾಲನೆಯಾಗುವ ಮಡಿ ಮೈಲಿಗೆಯ ವಿಚಾರದ ಮಾತುಗಳು ಈ ರೀತಿಯಲ್ಲಿ ವ್ಯಕ್ತವಾಗುತ್ತವೆ. "ಹೋಟೆಲಲ್ಲಿ ಯಾರ್ಯಾರು ಮಾಡಿದ್ದು ಆಗುತ್ತೆ ನೂರಾರು ಜನ ಕಚ್ಚಿ ಕುಡಿದ ಗ್ಲಾಸು, ತಿಂದ ತಟ್ಟೆ ಆಗುತ್ತೆ. ಬ್ರಾಹ್ಮಣರ ಹೋಟೆಲು ಎಂದು ಬೋರ್ಡು ಇದ್ದರೆ ಸಾಕು. ಆದರೆ ನಮ್ಮ ಮನೆಯಲ್ಲಿ ಒಂದು ಲೋಟ ಕೂಡ

ಕುಡಿಯೋಕಾಗಲ್ಲ. ನಾವು ಶೂದ್ರರು, ನೀವು ಬ್ರಾಹ್ಮಣರು ಅಂತ ತೋರಿಸಿಕೊಳ್ಳುವುದಕ್ಕೆ(ಗಟ್ಟಿ ಕೆ.ಟಿ., ೨೦೧೧, ಪುಟ ೧೯). ಹೀಗೆ ಮನೋಹರನ ಮಾತುಗಳಲ್ಲಿ ಸುರೇಂದ್ರನಲ್ಲಿರುವ ಮಡಿ ಮೈಲಿಗೆ ವಿಚಾರಗಳನ್ನು ಸಡಿಲಿಸುವ ಶಕ್ತಿಯಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಜಾತಿ ವ್ಯವಸ್ಥೆಯನ್ನು ವೈಚಾರಿಕತೆಯಿಂದ ಸಡಿಲಿಸುವ ಕೇಂದ್ರವಾಗಿ ಹೋಟೆಲಿನ ಚಿತ್ರಣವಿದೆ.

ಇದೇ ಲೇಖಕರ 'ಪುನರಪಿ ಜನನ' ಕಾದಂಬರಿಯು ಹೋಟೆಲಿನ ಪ್ರಸ್ತಾಪದೊಂದಿಗೆ ಸಾಂಪ್ರದಾಯಿಕತೆಯನ್ನು ವಿರೋಧಿಸುತ್ತದೆ. ಇಲ್ಲಿ ರಾಮಭಟ್ಟರು ಶೂದ್ರಳೊಬ್ಬಳನ್ನು ಮನೆಯ ಅಡುಗೆಗಾಗಿ ನೇಮಿಸಿಕೊಂಡಾಗ ಅವರು ಸಂಪ್ರದಾಯವನ್ನು ಮೀರುವ ಮನಸ್ಥಿತಿಯ ಮಾತುಗಳು ಇವೆ". ಬ್ರಾಹ್ಮಣರ ಹೋಟೆಲೆಂದರೆ ಸರಿ, ಯಾರೋ ಮಾಡಿದ ಅಡುಗೆಯಾದರೂ ಆಗುತ್ತೆ. ಯಾರೋ ಉಂಡು ತಿಂದ ತಟ್ಟೆಗಳಾದರೂ ಆಗುತ್ತವೆ. ಮನೆಯಲ್ಲಿ ಶೂದ್ರಳೊಬ್ಬಳು ನಿರ್ಮಲವಾಗಿ ಅಡಿಗೆ ಮಾಡಿಕೊಟ್ಟಿದ್ದು ಆಗುವುದಿಲ್ಲ(ಗಟ್ಟಿ ಕೆ.ಟಿ., ೨೦೧೨, ಪುಟ ೧೧೭). ಮಡಿವಂತರ ಟೀಕೆಗೆ ರಾಮಭಟ್ಟರು ಹೋಟೆಲಿನ ಚಿತ್ರಣವನ್ನು ಪ್ರಸ್ತಾಪಿಸುತ್ತಾರೆ. ಅಲ್ಲಿ ಊಟ ತಯಾರು ಮಾಡುವವರ, ಪೂರೈಕೆಯಾಗುವ ತಟ್ಟೆ, ಲೋಟಗಳ ಬಗೆಗೆ ರಾಮಭಟ್ಟರು ಉತ್ತರಿಸುತ್ತಾರೆ.

ಕಾದಂಬರಿಗಳಲ್ಲೂ ಹೋಟೆಲಿನ ಚಿತ್ರಣದ ಮೂಲಕ ಸಾಂಪ್ರದಾಯಿಕ ವ್ಯವಸ್ಥೆ ಹಾಗೂ ಪರಂಪರೆ ಮತ್ತು ಆಧುನಿಕತೆಗಳೊಳಗಿನ ಸಂಘರ್ಷಗಳು ಪ್ರತಿಪಾದಿತವಾದಂತೆ ಸಣ್ಣಕಥೆಗಳಲ್ಲೂ ನಿರೂಪಿತವಾಗಿದೆ. ಯು.ಆರ್. ಅನಂತಮೂರ್ತಿ ಅವರ 'ಪ್ರಕೃತಿ' ಕಥೆಯಲ್ಲಿ ತಂದೆ ಸಂಕಪ್ಪಯ್ಯ ಮತ್ತು ಮಗ ನಾರಾಯಣರ ನಡುವಿನ ಸಂಭಾಷಣೆಯಲ್ಲೂ ಹೋಟೆಲು ಎಂಬುದು ಪರಂಪರೆ ಆಧುನಿಕತೆಯೊಳಗಿನ ಸಾಂಸ್ಕೃತಿಕ ಮುಖಾಮುಖಿಗೆ ಕಾರಣವಾಗಿರುವುದನ್ನು ಕಾಣಬಹುದಾಗಿದೆ. "ಹೋಟೆಲಿಡುವುದು ಸಾಧ್ಯವಿಲ್ಲ. ಲಾಗ ಹಾಕಲಿ ಬೇಕಾದರೆ. ವರ್ಷದಲ್ಲಿ ಬರುವ ಅನಂತ, ಗೌರಿ, ಗಣೇಶ ಎಲ್ಲಾ ಹಬ್ಬಗಳನ್ನು ಮನೆತನದ ಮುಖ್ಯಸ್ಥರಾಗಿ ನಡೆಸುವ ಈಗ ಚೋಟುದ್ದ ಹುಡುಗಿ ಆ ಆಶೆಬುರುಕ ಹೆಂಡತಿ ಮಾತು ಕಟ್ಟಿಕೊಂಡು ವಂಶಪಾರಂಪರ್ಯವಾಗಿ ಗುಡ್ಡಗಳ ಜೊತೆ ಬೆಳೆಸಿದ ತೋಟಗದ್ದೆ ಪರಬಾರೆ ಮಾಡುವುದೆ? ಅದೂ ವೈದಿಕ ಬ್ರಾಹ್ಮಣನಿಗೆ ಅಯೋಗ್ಯವಾದ ಅನ್ನ ವಿಕ್ರಯಕ್ಕಾಗಿ ಆದುದ್ದಾಗಲಿ ನೋಡಿಯೇ ಬಿಡುವ ಎಂಬ ಪರಂಪರೆಯ ಬಗೆಗೆ ಒಲವುಳ್ಳ ತಂದೆ ಸಂಕಪ್ಪಯ್ಯನ ಈ ಮಾತುಗಳಿಗೆ ಪ್ರತಿಯಾಗಿ ಮಗ ನಾರಾಯಣನಾಡುವ ಮಾತುಗಳಲ್ಲಿ ಆಧುನಿಕತೆಗೆ ತೆರೆದುಕೊಳ್ಳುವ ತುಡಿತವಿದೆ. 'ನಾನು ನೋಡುಕೋತೀನಮ್ಮ ಇವರ ಒಣ ಜಬರದಸ್ತಿ. ಇನ್ನು ನನ್ನ ಮೇಲೆ ನಡೆಯದು. ನಾನು ಕಿಟ್ಟಣ್ಣ ಶಿವಮೊಗ್ಗದಲ್ಲಿ ನಿನ್ನ ಅಣ್ಣನ ಜೊತೆ ಹೋಟೆಲಿಟ್ಟಿದ್ದಕ್ಕೆ ಆಕಾಶ ತಲೆ ಮೇಲೆ ಕಳಚಿಕೊಳ್ಳಲಿ ಬೇಕಾದರೆ"(ಅನಂತಮೂರ್ತಿ ಯು.ಆರ್., ೨೦೦೭, ಪುಟ ೯೫-೯೬). ಸಂಕಪ್ಪಯ್ಯನ ಸಂಪ್ರದಾಯದ ಗಟ್ಟಿತನಕ್ಕೆ ಕಟ್ಟುಬಿದ್ದು ಆಧುನಿಕ ಸಂಚಲನದ ಹೋಟೆಲನ್ನು ವಿರೋಧಿಸುವುದನ್ನು ಕಥೆ ಕಲಾತ್ಮಕವಾಗಿ ಚಿತ್ರಿಸಿದೆ. ಪಾರಂಪರಿಕ

ಕೃಷಿಕ ಬದುಕಿನಲ್ಲಿ ನೆಮ್ಮದಿ ಮತ್ತು ಸ್ವಾವಲಂಬನೆ ಅಡಗಿದೆ ಎಂಬುದು ಸಂಕಪ್ಪಯ್ಯನ ಧೋರಣೆಯಾಗಿದೆ. "ಶಿಖಂಡಿ ನರಪೇತಲಗಳು ಹೋಟೆಲಿಟ್ಟಂತಲ್ಲ. ತಿಳಿಕೊಳ್ಳಲಿ ಸೊಂಟದಲ್ಲಿ ದಮ್ಮಿರದ ಈ ಬೇವರ್ಶಿಗಳು ಕಿತ್ತಳೆ ತೋಟದಲ್ಲಿ ಯಾಕೆ ಹಣ್ಣಾಗರೋ ನೋಡಿಯೇ ಬಿಡುವ. ಹೋಟೆಲಿಟ್ಟು ದುಡ್ಡು ಸಂಪಾದಿಸುತ್ತಾರಂತೆ, ಸುಲಭವಂತೆ ನನ್ನನ್ನು ನಡುಗಿಸುವ ದಮ್ಮಿದೆಯೇ ಇವರಿಗೆ"(ಅನಂತಮೂರ್ತಿ ಯು.ಆರ್., ೨೦೦೭, ಪುಟ ೯೭). ಸಾಂಪ್ರದಾಯಿಕ ಕೃಷಿಕ ಬದುಕಿನಿಂದ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಬಹುದೆಂಬ ಆಶಯ ಈ ಮಾತುಗಳಲ್ಲಿವೆ.

ಸಂಪ್ರದಾಯದ ಬಗೆಗೆ ನಂಬಿಕೆಯುಳ್ಳ ಸಂಕಪ್ಪಯ್ಯನಿಗೆ ಆಧುನಿಕ ವ್ಯವಸ್ಥೆಯ ಪ್ರತೀಕವಾದ ಹೋಟೆಲನ್ನು ನಡೆಸುವುದರ ಬಗೆಗೆ ವಿರೋಧವಿದ್ದರೆ ಅದೇ ವೈದಿಕ ಪರಂಪರೆಯ ಪ್ರತಿನಿಧಿಯಾದ ಶಾನುಭೋಗರಿಗೆ ಹೋಟೆಲನ್ನು ಪ್ರಾರಂಭಿಸುವುದರ ಬಗೆಗೆ ಸಹಮತವಿರುವುದು ಅವರ ಮಾತುಗಳಿಂದ ಸ್ಪಷ್ಟವಾಗುತ್ತದೆ. "ಈ ಕಿತ್ತಾಳೆ ತೋಟದ ವಿಷಯಾನೆ ತೆಗೊಳ್ಳಬೇಕಾದರೆ? ಸಂಕಪ್ಪಯ್ಯ ಯಾಕೆ ಹೇಳಬಂದೆ ಅಂದರೆ ನನ್ನ ಮಗ ಕಿಟ್ಟಿ, ನಿಮ್ಮ ಮಗ ಸೇರಿ ಹೋಟೆಲು ತೆಗೆಯಬೇಕೆಂದಿದ್ದಾರಂತೆ. ಯಾಕೆ ಹೇಳಬೇಕೆಂದರೆ ಈ ವ್ಯವಸಾಯದಲ್ಲಿ ಏನೂ ಲಾಭ ಇಲ್ಲ. ಗುಡ್ಡಕ್ಕೆ ಸುಮ್ಮನೆ ತಲೆ ಚಚ್ಚಿಕೊಳ್ಳುವುದರ ಬದಲು ಹೋಟೆಲಿಟ್ಟರೆ ಪಾಯಿದ ಹೆಚ್ಚು"(ಅದೇ, ಪುಟ ೯೯). ಹೋಟೆಲಿಡುವ ಪ್ರಸಂಗವನ್ನು ಕೇಂದ್ರೀಕರಿಸಿಕೊಂಡು ತಲೆಮಾರುಗಳ ನಡುವಿನ ಸಂಘರ್ಷವನ್ನು ನಿರೂಪಿಸುವುದು ಇಲ್ಲಿನ ಪ್ರಮುಖ ಆಶಯವಾಗಿದೆ. ಇಂತಹ ಸಂಘರ್ಷವು ಕೇವಲ ಹಳೆಯ ಮತ್ತು ಹೊಸ ತಲೆಮಾರುಗಳಲ್ಲಿ ನಡೆಯದೆ, ಕೆಲವೊಮ್ಮೆ ಹಳೆಯ ತಲೆಮಾರುಗಳಿಗೆ ಸೇರಿದ ವಿಭಿನ್ನ ಮನೋಭಾವಗಳ ನಡುವೆಯು ಸಂಘರ್ಷ ಏರ್ಪಡುತ್ತವೆ ಎಂಬುದಕ್ಕೆ ಕಥೆಯಲ್ಲಿ ಬರುವ ಸಂಕಪ್ಪಯ್ಯ ಮತ್ತು ಶಾನುಭೋಗರು ಸಾಕ್ಷೀಭೂತರಾಗುತ್ತಾರೆ. ಹೀಗೆ ಒಂದು ಸಮಾಜದಲ್ಲಿ ಹೋಟೆಲಿನಿಂದ ಆಗುತ್ತಿರುವ ಬದಲಾವಣೆಗಳನ್ನು ಒಂದು ಕುಟುಂಬದಲ್ಲಿ ಆಗುತ್ತಿರುವ ಬದಲಾವಣೆಗಳಲ್ಲಿ ಧ್ವನಿಸುವ ಮಹತ್ವಾಕಾಂಕ್ಷೆ ಇದೆ ಅಥವಾ ಅದನ್ನು ಹೀಗೂ ಹೇಳಬಹುದು. ಒಂದು ಕುಟುಂಬದಲ್ಲಿ ಆಗುತ್ತಿರುವ ಬದಲಾವಣೆಗಳಲ್ಲಿ ಸಾಂಪ್ರದಾಯಿಕ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಸಂಘರ್ಷದ ಪ್ರಕ್ರಿಯೆಯನ್ನು ಲೇಖಕರು ಕಾಣಬಲ್ಲವರಾಗಿದ್ದಾರೆ. ಅವಕಾಶ ಸೀಮಿತವಾಗಿದ್ದರೂ ಆಶಯ ದೊಡ್ಡದಾಗಿದೆ. ಸ್ಥೂಲ ವಿನ್ಯಾಸ, ಸೂಕ್ಷ್ಮ ವಿನ್ಯಾಸಗಳು ಬೆರೆಯುವ ಹದದಲ್ಲಿ ಈ ಕಥೆಯ ಕಲೆಗಾರಿಕೆಯಿದೆ. ಈ ವಿನ್ಯಾಸ ಅನಂತಮೂರ್ತಿ ಕಥೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ ಎಂಬ ಟಿ.ಪಿ. ಅಶೋಕರ ಮಾತುಗಳಲ್ಲಿ ಸಾಂಪ್ರದಾಯಿಕ ವ್ಯವಸ್ಥೆ ಮತ್ತು ಸಾಂಸ್ಕೃತಿಕ ಸಂಘರ್ಷದ ಒಳಸೂಕ್ಷ್ಮಗಳು ಅರ್ಥವಾಗುತ್ತವೆ.

ಇದೇ ಲೇಖಕರ ಪ್ರಸ್ತ ಕಥೆಯಲ್ಲಿ ಬರುವ ನೇತ್ರಾ ಮತ್ತು ಪುಂಡರೀಕರ ಸಂಭಾಷಣೆಯಲ್ಲೂ ಹೋಟೆಲಿಡುವುದರ ಮೂಲಕ ಪಾರಂಪರಿಕವಾದ ಪೌರೋಹಿತ್ಯವನ್ನು ಬಿಟ್ಟು ಆಧುನಿಕವಾದ

ಹೋಟೆಲು ಉದ್ಯಮಕ್ಕೆ ತೆರೆದುಕೊಳ್ಳುವ ಸುಳಿವುಗಳಿವೆ. "ಈ ಹಾಳು ಬ್ರಾಹ್ಮಣಾರ್ಥ ಸಂಭಾವನೆ ಬಿಟ್ಟು ಹೋಟೆಲಿಡಿ. ಗಣಪ್ಪಯ್ಯನನ್ನು ನೋಡಿ ಬೇಕಾದರೆ"(ಅದೇ, ಪುಟ ೧೭೭). ಹೋಟೆಲು ಉದ್ಯಮದ ಮೂಲಕ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕೆಂಬ ಹಂಬಲ ನೇತ್ರಾವತಿ ಯಲ್ಲಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ಹೀಗೆ ಸೀತಕ್ಕನ ತಮ್ಮ ಪುಂಡರೀಕ ಸಂಭಾವಿತ ಬ್ರಾಹ್ಮಣ. ಹೋಟೆಲಿಟ್ಟು ಹೊಸ ಬದುಕಿಗೆ ಹೊರಳುವ ಹಂಬಲವಿಟ್ಟು ಕೊಂಡವನು. ತನ್ನ ದಾರಿಗೆ ತನ್ನ ತಾಯಿಯೂ, ಅಕ್ಕನೂ ಅಡ್ಡಿಯೆಂದು ತಿಳಿದವನು. ಪುಂಡರೀಕನಿಗೆ ತನ್ನ ಸ್ಥಿತಿಯ ಅರಿವು ಅಷ್ಟಿಷ್ಟು ಇದೆ. ತನ್ನ ಹಿರಿಯರು ಪೋಷಿಸಿಕೊಂಡು ಬಂದ ಮೌಲ್ಯವ್ಯವಸ್ಥೆ ತನ್ನ ಬಾಳನ್ನು ಕುಂದಿಸಿರುವ ಅನುಭವವೂ ಇದೆ. ಆದರೆ ಅದೇ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆ ತನ್ನ ಅಕ್ಕನ ಬಾಳನ್ನೂ ಮುಟ್ಟುಸಿರುವ ಕಟುಸತ್ಯವನ್ನೇ ಅವನು ತನ್ನ ಸ್ಥಿತಿಯಿಂದ ಜಿಗಿದು ಕಾಣಲಾರ. ತನ್ನ ಸಹಜೀವಿಯೂ ಕೊನೆಯ ಪಕ್ಷ ತನ್ನಷ್ಟೇ ದುಃಖಿತಳೆಂಬ ಸಹಾನುಭೂತಿ ಕೂಡ ಅಷ್ಟಾಗಿ ಕಾಣುವುದಿಲ್ಲ. ಅವನು ಸೀತಕ್ಕನನ್ನು ಸುತ್ತುವರಿದಿರುವ ವ್ಯವಸ್ಥೆ ಒಂದು ಭಾಗ ಅಷ್ಟೇ.

ಸಾ.ರಾ. ಅಬೂಬಕ್ಕರ್ ಅವರ 'ಮೂಲೆ ಮುಟ್ಟಿದ ಹುಳು' ಕಥೆಯಲ್ಲಿ ಸಂಪ್ರದಾಯಸ್ಥ ತಾಯಿಯ ಜೊತೆ ಸಂಘರ್ಷಕ್ಕಿಳಿದು ಹೋಟೆಲಿನಲ್ಲಿ ದೊರೆಯುವ ಆಧುನಿಕ ರೀತಿಯ ಉಪಾಹಾರಕ್ಕೆ ಹಂಬಲಿಸುವ ಯುವಕನ ಮನಸ್ಥಿತಿಯನ್ನು ಬಿಂಬಿಸಲಾಗಿದೆ. ನಿನ್ನ ಇಡ್ಲಿ ಮತ್ತು ಬೇಳೆ ಸಾರು ನನಗೆ ಬೇಡ. ನಾನು ಹೋಟೆಲಲ್ಲಿ ತಿಂಡಿ ತಿನ್ತೇನ. ಐದು ರೂಪಾಯಿ ಕೊಡು ಎನ್ನುತ್ತಾ ಇಡ್ಲಿ ತಟ್ಟೆಯನ್ನು ಆಚೆಗೆ ತಳ್ಳಿದನು(ಸಾ.ರಾ. ಅಬೂಬಕ್ಕರ್, ೨೦೧೦, ಪುಟ ೬೦). ಇದರಂತೆ ಆಧುನಿಕ ಘಟಕವಾದ ಹೋಟೆಲು ಕೇವಲ ಮಾಲೀಕರ ಕುಟುಂಬ ಸದಸ್ಯರೊಳಗೆ ಮಾತ್ರ ಸಾಂಸ್ಕೃತಿಕ ಸಂಘರ್ಷವನ್ನು ಉಂಟುಮಾಡದೆ ಬಳಕೆದಾರ ಅಥವಾ ಗ್ರಾಹಕರ ಕುಟುಂಬ ಸದಸ್ಯರೊಳಗೆ ಮಾತ್ರ ಸಾಂಸ್ಕೃತಿಕ ಸಂಘರ್ಷವನ್ನು ಉಂಟುಮಾಡುತ್ತೆಂಬುದು ಈ ಸನ್ನಿವೇಶದಿಂದ ಸ್ಪಷ್ಟವಾಗುತ್ತದೆ.

ಯಶವಂತ ಚಿತ್ತಾಲರ 'ತ್ರಯೋದಶ ಪುರಾಣ' ಕಥೆಯು ಹೋಟೆಲಿನ ಚಿತ್ರಣದೊಂದಿಗೆ ಮೂಡಿಬಂದಿದೆ. ಇಡೀ ಕಥೆಯ ಆವರಣದೊಳಗಡೆ ಹೋಟೆಲಿನ ದಿನನಿತ್ಯದ ವಿವಿಧ ಕೆಲಸಗಳು ತಿಂಡಿ-ತೀರ್ಥಗಳ ವಿವರಗಳು ಇವೆಲ್ಲ ಹಾಸುಹೊಕ್ಕಾಗಿವೆ. ಇದು ಹೋಟೆಲು ಕಾರ್ಮಿಕರ ಮನಸ್ಥಿತಿಗಳನ್ನು ವಿವರಿಸುವ ಕಥೆಯಾಗಿದೆ. ಮುಖ್ಯವಾಗಿ ಗಣೇಶ ಮತ್ತು ಗೋಪಾಲ ಎಂಬ ಹೋಟೆಲು ಕಾರ್ಮಿಕರಿಬ್ಬರ ಸಂಭಾಷಣೆಯ ಮೂಲಕ ಜಾತಿವ್ಯವಸ್ಥೆಯ ವಿನ್ಯಾಸವನ್ನು ಇದು ಬಿಚ್ಚಿಡುತ್ತವೆ. "ನಮ್ಮ ಅಪ್ಪ ಹೇಳುತ್ತಾನೆ. ನಿಮ್ಮ ಜಾತೀನೇ ಬಹಳ ಕೆಟ್ಟದಂತೆ... ಮೂರು ಸಾವಿರ ವರ್ಷಗಳಿಂದ ನೀವು ಉಳಿದೆಲ್ಲ ಜಾತಿಯವರ ಶೋಷಣೆ ಮಾಡುತ್ತ ಬಂದೀರಂತೆ... ಗೋಪಾಲನ ಮಾತುಗಳು ಗಣೇಶನನ್ನು ತುಂಬ ಅಸ್ವಸ್ಥಗೊಳಿಸಿದವು. ಮಾತುಗಳಿಗಿಂತ ಅವುಗಳಲ್ಲಿ ಇದೆಯೆಂದು ಅನ್ನಿಸಿದ ದ್ವೇಷ ಹೆಚ್ಚು ಕಾಡಿತ್ತು. ಹೇಗೆ ಉತ್ತರಿಸಬೇಕು ಎನ್ನುವುದು ತಿಳಿಯದೇ

'ಏನೋಪ್ಪಾ ನನಗೀಗ ಬರೇ ಹದಿಮೂರು ವರ್ಷ ವಯಸ್ಸು' ಎಂದ. ಈ ದನಿಯಲ್ಲಿ ಅವನಿಗೆ ಗೊತ್ತಾಗುವ ಮೊದಲೇ ಒಂದು ಬಗೆಯ ದೈನ್ಯ, ಭಯ ಬಂದು ಸೇರಿಕೊಂಡಿದ್ದವು. ಗೋಪಾಲನಿಗೆ ಮಾತ್ರ ಅವುಗಳ ಅರಿವಾಗಲಿಲ್ಲ. ಮುಂದಿನ ತನ್ನ ಮಾತುಗಳಿಗೆ ಈ ಉತ್ತರದ ಅವಶ್ಯಕತೆಯೇ ಇದ್ದಿರಲಿಲ್ಲ ಎನ್ನುವ ಹಾಗೆ 'ನೀವು ಹಾರುವರು ಮಾತಿನಲ್ಲಿ ಜಾಣರು' ಎಂದ ಗಣೇಶನ ಮಾತಿನ ಅರ್ಥ ತಿಳಿಯದೆ ಕಿರಿಕಿರಿ ಆದಂತೆಯೂ ಇತ್ತು. ಆ ಮಾತುಗಳ ಅರ್ಥ ಸ್ವತಃ ಆಡಿದ ಗಣೇಶನಿಗೆ ಆಗಿತ್ತೆಂದಲ್ಲ. ಇಷ್ಟೇ-ನಿನ್ನ ಆರೋಪದ ಅರ್ಥ ನನಗಾಗುತ್ತಿಲ್ಲವಪ್ಪ ಎನ್ನುವ ದಾಟಿಯಲ್ಲಿ ಬಂದ ಮಾತುಗಳು. ಅವು ಹುಟ್ಟಿಕೊಂಡ ಸಂದರ್ಭದಿಂದಲೇ ಆಡಿದವನ ಸಣ್ಣವಯಸ್ಸಿನ ಬುದ್ಧಿಗೆ ಹೊಳೆದದ್ದಕ್ಕಿಂತ ಹೆಚ್ಚಿನ ಅರ್ಥ ಧ್ವನಿಸಿದ್ದವು. ಮೂರು ಸಾವಿರ ವರ್ಷಗಳ ಇತಿಹಾಸದ ಕಲ್ಪನೆ ಹದಿಮೂರು ವರ್ಷದ ಚಿಕ್ಕ ಹುಡುಗನ ಅನುಭವದ, ಪ್ರಜ್ಞೆಯ ಆಳವಿನ ಆಚೆಯದಾಗಿತ್ತು. ಗೋಪಾಲ ಹಿಂದೆಗೆಯಲಿಲ್ಲ. ಮಗ್ಗಲು ಬದಲಿಸಿ ಗೆಳೆಯನೊಡನೆ ಬೆನ್ನು ತಿರುವುತ್ತಿದ್ದಾಗ "ದುಷ್ಟರ ಶುದ್ಧ ಬ್ರಾಹ್ಮಣ ಸೂಳೆಮಕ್ಕಳು ಎಂದ. ಕೇಳಿದ ಗಣೇಶ ವಿಹ್ವಲನಾದ. ಕೇಳಿದ್ದು ಬರಿಯ ಐದು ಶಬ್ದಗಳಾಗಿದ್ದವು ಎಂದು ತೋರಲಿಲ್ಲ. ಏಕೆಂದರೆ ಅವುಗಳ ಹಿಂದೆಯೇ ಕರುಳಲ್ಲಿ ಸೇರಿಕೊಂಡ ನಡುಕವನ್ನು ತಡೆಯಲು ಹೊದಿಕೆಯನ್ನು ಗಟ್ಟಿಯಾಗಿ ಅವಚಿ ಹಿಡಿಯಬೇಕಾಯಿತು"(ಯಶವಂತ ಚಿತ್ತಾಲ, ೨೦೦೭, ಪುಟ ೭೧). ಈ ಸಂಭಾಷಣೆಯು ಹೋಟೆಲಲ್ಲಿ ಕೆಲಸ ಮಾಡಿ ರಾತ್ರಿ ಮಲಗಿದ ಸಮಯದಲ್ಲಿ ನಡೆದ ಸಂದರ್ಭವು ಈ ಕಥೆಯಲ್ಲಿ ಚಿತ್ರಿತವಾಗಿದೆ.

ಜಾತಿವ್ಯವಸ್ಥೆಯ ಬಗೆಗೆ ಅದೇ ರೀತಿ ತನ್ನ ಬ್ರಾಹ್ಮಣ ಕುಲದ ಬಗೆಗೆ ಗಣೇಶನ ಮನಸ್ಸಿನಲ್ಲಿ ಉಂಟಾಗುವ ತಾಕಲಾಟಗಳು ಅವನ ಸ್ವಗತದ ಮಾತುಗಳಿಂದ ಸ್ಪಷ್ಟವಾಗುತ್ತವೆ. "ಗೋಪಾಲನಿಗೆ ನಾನು ಬ್ರಾಹ್ಮಣನೆಂದು ಗೊತ್ತಾದದ್ದು ಹೇಗೆ? ಕೊರಳಲ್ಲಿ ಜನಿವಾರ ಇದ್ದದ್ದಕ್ಕೆ ನಾನು ಬ್ರಾಹ್ಮಣನಲ್ಲವೆ? ಹರಿದೊಗೆದು ಬಿಟ್ಟರೆ ಹೇಗೆ? ಅಪ್ಪ-ಅಮ್ಮರ ನೆನಪಿಗಿದ್ದದ್ದು ಅದೊಂದೇ. ಜನಿವಾರದ ಹೊರತಾಗಿ ಒಂದೆಳೆಯ ಬಂಗಾರದ ಚೈನು ಇತ್ತು. ಏನಾಯ್ತು? ಗಣೇಶನರಿಯ ಮೇಲಾಗಿ ಹೋಟೆಲ್ಲಿನ ಒಡೆಯನಾದ ಶೆಟ್ಟಿಗೆ ತಾನು ಬ್ರಾಹ್ಮಣ ಹುಡುಗನೆಂಬುದರ ಬಗ್ಗೆ ಅಭಿಮಾನವಿದ್ದಂತಿತ್ತು. ಯಾಕೆಂಬುದು ಮಾತ್ರ ತಿಳಿಯಲಿಲ್ಲ. ತನ್ನ ಹೋಟೆಲ್ಲುಗಳಲ್ಲಿ ಹತ್ತು-ಹದಿನೈದು ಮಂದಿ ಬ್ರಾಹ್ಮಣ ಮಾಣಿಗಳಿದ್ದಾವೆ ನೋಡಿ ಎಂದು ಯಾರೊಡನೆಯೋ ತುಂಬ ಜಂಬದಿಂದ ಹೇಳಿಕೊಂಡಿದ್ದನ್ನು ಕೇಳಿದ್ದೆ. ಬಹುಶಃ ತನ್ನನ್ನು ಅನ್ವಯಿಸಿ ಹೇಳಿರಬೇಕು"(ಅದೇ, ಪುಟ ೭೨). ಒಟ್ಟಾರೆಯಾಗಿ ಈ ಕಥೆಯಲ್ಲಿ ಹೋಟೆಲು ಕಾರ್ಮಿಕರ ಮಾತುಕತೆ ಮತ್ತು ಸ್ವಗತಗಳ ಮೂಲಕ ಜಾತಿವ್ಯವಸ್ಥೆಯ ಕುರಿತಾದ ನಂಬಿಕೆ ಹಾಗೂ ಭಾವನೆಗಳನ್ನು ಕಥೆಗಾರರು ಬಿಚ್ಚಿಟ್ಟಿದ್ದಾರೆ.

ಆಧುನಿಕ ಸಾಹಿತ್ಯದ ಪ್ರಮುಖ ಪ್ರಕಾರಗಳಾದ ಸಣ್ಣಕಥೆ ಮತ್ತು ಕಾದಂಬರಿಗಳು ಸಮಕಾಲೀನ ಸಂದರ್ಭದ ಬಹುತೇಕ ಎಲ್ಲಾ ಸಾಮಾಜಿಕ ವಿದ್ಯಮಾನಗಳಿಗೂ ಕಲಾತ್ಮಕ ಅಭಿವ್ಯಕ್ತಿಯನ್ನು ನೀಡಿವೆ. ಆಧುನಿಕಪೂರ್ವದಿಂದ ಆಧುನಿಕ ಕಾಲಘಟ್ಟಕ್ಕೆ ಹೊರಳುವ ಸಂಕ್ರಮಣಾವಸ್ಥೆಯಲ್ಲಿ ನಮ್ಮ ಸಮಾಜವು ಹಲವಾರು ಇಕ್ಕಟ್ಟು-ಬಿಕ್ಕಟ್ಟುಗಳನ್ನು ಎದುರಿಸಿದೆ. ನಮ್ಮ ನಡುವಿನ ಕೆಲವು ಆಧುನಿಕ ಮನಸ್ಸುಗಳು ಆಧುನಿಕತೆಯನ್ನು ಸಹಜವಾಗಿ ಸ್ವೀಕರಿಸಿದರೆ ಇನ್ನೂ ಕೆಲವು ಸಾಂಪ್ರದಾಯಿಕ ಮನಸ್ಸುಗಳು ಅಷ್ಟೊಂದು ಸುಲಭವಾಗಿ ಆಧುನಿಕತೆಯನ್ನು ಸ್ವೀಕರಿಸಲಿಲ್ಲ. ಹಾಗಾಗಿ ಸಂಪ್ರದಾಯ ಮತ್ತು ಆಧುನಿಕತೆಯ ವಿಚಾರದಲ್ಲಿ ಸಾಂಪ್ರದಾಯಿಕ ಮನಸ್ಸುಗಳಿಗೂ, ಆಧುನಿಕ ಮನಸ್ಸುಗಳಿಗೂ ನಡುವೆ ಸಂಘರ್ಷ ಏರ್ಪಡುವ ಸನ್ನಿವೇಶವು ನಿರ್ಮಾಣವಾಯಿತು. ಆಧುನೀಕರಣ ಪ್ರಕ್ರಿಯೆಯ ಹಂತದಲ್ಲಿ ಇಂತಹ ಸಂಘರ್ಷಗಳು ಸರ್ವೇಸಾಮಾನ್ಯವೆನ್ನಬಹುದು.

ಆಧುನಿಕ ಕಥನಸಾಹಿತ್ಯ ಪ್ರಕಾರಗಳಾದ ಸಣ್ಣಕಥೆ ಮತ್ತು ಕಾದಂಬರಿಗಳು ವಶಾಹತುಶಾಹಿ ಅನುಭವದ ಅಭಿವ್ಯಕ್ತಿಯೊಂದಿಗೆ ಕನ್ನಡವು ಸೇರಿದಂತೆ ಒಟ್ಟಾರೆ ಭಾರತೀಯ ಭಾಷೆಗಳ ಸಾಹಿತ್ಯಕ್ಷೇತ್ರಕ್ಕೆ ಕಾಲಿರಿಸಿದವೆನ್ನಬಹುದು. ಆಧುನಿಕ ಅನುಭವಗಳಿಗೆ ಅಭಿವ್ಯಕ್ತಿ ನೀಡುವ ಸಂದರ್ಭದಲ್ಲಿ ಆಧುನಿಕ ಸಮಾಜದ ತಲ್ಲಣಗಳು ಈ ಸಾಹಿತ್ಯ ಪ್ರಕಾರಗಳಲ್ಲಿ ಸೃಜನಾತ್ಮಕ ರೂಪವನ್ನು ಪಡೆದುಕೊಂಡಿವೆ. ಆಧುನಿಕತೆಯ ಘಟಕಗಳಲ್ಲೊಂದಾದ ಹೋಟೆಲು ಆಧುನೀಕರಣ ಪ್ರಕ್ರಿಯೆಯ ಭಾಗವಾಗಿ ಸಣ್ಣಕಥೆ ಮತ್ತು ಕಾದಂಬರಿಗಳಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪಾರಂಪರಿಕ ಅನ್ನದಾನದ ಕೇಂದ್ರವಾಗಿದ್ದ ಅನ್ನಛತ್ರದ ಜಾಗದಲ್ಲಿ ವಶಾಹತುಶಾಹಿ ಅನುಭವದಿಂದಾಗಿ ಆಧುನಿಕವಾದ ಹೋಟೆಲು ಕಾಣಿಸಿಕೊಂಡಿತು. ಅನ್ನದಾನದ ಪರಂಪರೆಯು ಅನ್ನವಿಕ್ರಯದ ಉದ್ಯಮವಾಗಿ ಸ್ಥಿತ್ಯಂತರಗೊಂಡಿತು. ಇಂತಹ ಸ್ಥಿತ್ಯಂತರವನ್ನು ಪರಂಪರೆಯಲ್ಲಿ ನಂಬಿಕೆ ಇರಿಸಿಕೊಂಡಿದ್ದ ಕೆಲವು ಸಾಂಪ್ರದಾಯಿಕ ಮನಸ್ಸುಗಳಿಗೆ ಸುಲಭವಾಗಿ ಜೀರ್ಣಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಸಂಕ್ರಮಣ ಕಾಲಘಟ್ಟದ ಸಾಂಸ್ಕೃತಿಕ ಮತ್ತು ಸಾಮಾಜಿಕ ವಿದ್ಯಮಾನ ಹಾಗೂ ಸಂಘರ್ಷಗಳನ್ನು ಕನ್ನಡದ ಸಣ್ಣಕಥೆ ಮತ್ತು ಕಾದಂಬರಿಗಳು ಸಶಕ್ತವಾಗಿ ಪಡಿಮೂಡಿಸಿವೆ. ಗ್ರಾಮೀಣ ಪ್ರದೇಶದ ಹೋಟೆಲುಗಳಿಗಂತೂ ಆಯಾಯ ಪ್ರದೇಶಗಳ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಿಂದ ಸುಲಭವಾಗಿ ಪಾರಾಗಲು ಸಾಧ್ಯವಾಗಲಿಲ್ಲ. ಸಮಾಜದಲ್ಲಿದ್ದ ಜಾತೀಯ ಶ್ರೇಣೀಕರಣ ವ್ಯವಸ್ಥೆಯ ಛಾಯೆ ಹೋಟೆಲುಗಳ ಮೇಲೂ ಬೀಳಲಾರಂಭಿಸಿತು. ಸಾಮಾನ್ಯವಾಗಿ ಬ್ರಾಹ್ಮಣ ಮತ್ತು ಲಿಂಗಾಯತರಂತಹ ಸಮಾಜದ ಮೇಲ್ವರ್ಗದ ಸಮುದಾಯದವರು ಹೋಟೆಲಿಡುತ್ತಿದ್ದುದರಿಂದ ಅವರ ಸಾಮಾಜಿಕ ಮನೋಧರ್ಮದಿಂದಾಗಿಯೋ ಅಥವಾ ಗ್ರಾಹಕರ ಮನೋಧರ್ಮದಿಂದಾಗಿಯೋ ಗ್ರಾಮೀಣ ಪ್ರದೇಶದ ಹೋಟೆಲುಗಳಲ್ಲೂ ಒಂದು ಬಗೆಯ ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ಪಾಲಿಸಲಾಗುತ್ತಿತ್ತು. ಸಂಕ್ರಮಣ ಕಾಲಘಟ್ಟದ ಈ ಸಂಕೀರ್ಣ ಸ್ಥಿತಿಗತಿಗಳನ್ನು ಸೂಕ್ಷ್ಮಜ್ಞರಾದ ಸಣ್ಣಕಥೆ-ಕಾದಂಬರಿಗಳ ಲೇಖಕರು ಸಮರ್ಥವಾಗಿಯೇ ಗ್ರಹಿಸಿ ಅವುಗಳಿಗೂ ಸಾಹಿತ್ಯಿಕ ಅಭಿವ್ಯಕ್ತಿ

ನೀಡಿದ್ದಾರೆ. ಆಧುನಿಕತೆಯ ಘಟಕವಾದ ಗ್ರಾಮೀಣ ಪ್ರದೇಶದ ಹೋಟೆಲುಗಳಲ್ಲಿ ಪಾಲನೆಯಾಗುತ್ತಿರುವ ಸಾಂಪ್ರದಾಯಿಕ ವ್ಯವಸ್ಥೆಯನ್ನೂ ಹೋಟೆಲಿಡಲು ಒಲ್ಲದ ಸಾಂಪ್ರದಾಯಿಕ ಮನಸ್ಸುಗಳ ತಲ್ಲಣ-ಸಂಘರ್ಷಗಳನ್ನೂ ಕನ್ನಡದ ಸಣ್ಣಕಥೆ-ಕಾದಂಬರಿಗಳು ಮನೋಜ್ಞವಾಗಿ ಚಿತ್ರಿಸಿವೆ. ಕಾದಂಬರಿಗಳಂತೂ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಆಕರಗಳಾಗಬಲ್ಲ ರೀತಿಯಲ್ಲಿ ಇಂತಹ ವಿದ್ಯಮಾನ ಹಾಗೂ ಅನುಭವಗಳಿಗೆ ಕಲಾತ್ಮಕ ಅಭಿವ್ಯಕ್ತಿಯನ್ನು ನೀಡಿವೆ.[೧]

**ಅಡಿಟಿಪ್ಪಣಿ**

೧. ಹೀಗಿದ್ದಾಗಲೂ ಕನ್ನಡದ ಕೆಲವು ಸಣ್ಣಕಥೆ–ಕಾದಂಬರಿಗಳು ಜಾತಿ ವರ್ಗಗಳ ಅಸಮಾನತೆಯನ್ನು ಮರೆತು ಹೋಟೆಲಿನಲ್ಲಿ ಒಟ್ಟಿಗೆ ಕುಳಿತು ಚಹಾ ಕುಡಿಯುವುದನ್ನೂ ಪ್ರಾಸಂಗಿಕವಾಗಿ ಚಿತ್ರಿಸಿವೆ. ಯು.ಆರ್. ಅನಂತಮೂರ್ತಿಯವರ ಸಂಸ್ಕಾರ, ಭಾರತೀಪುರ ಮುಂತಾದ ಕಾದಂಬರಿಗಳಲ್ಲಿನ ನಿರ್ದಿಷ್ಟ ಸನ್ನಿವೇಶಗಳು ಇದಕ್ಕೆ ಉದಾಹರಣೆಯಾಗುತ್ತವೆ. ಸಂಸ್ಕಾರ ಕಾದಂಬರಿಯಲ್ಲಿ ಬ್ರಾಹ್ಮಣನಾದ ಪ್ರಾಣೇಶಚಾರ್ಯನು ಸಂಪ್ರದಾಯವನ್ನು ಮೀರಿ ಹೋಟೆಲಿನಲ್ಲಿ ಚಹಾ ಸೇವಿಸುತ್ತಾನೆ. ಭಾರತೀಪುರ ಕಾದಂಬರಿಯಲ್ಲಿ ಬ್ರಾಹ್ಮಣನಾದ ಜಗನ್ನಾಥನು ತನ್ನ ಸ್ನೇಹಿತನಾದ ಅನ್ಯಜಾತಿಯ ವಾಸುವಿನ ಜೊತೆಗೆ ಹೋಟೆಲಿನಲ್ಲಿ ಕುಳಿತು ಚಹಾ ಕುಡಿಯುತ್ತಾನೆ.

ಅಧ್ಯಾಯ : ನಾಲ್ಕು

# ಕಥನಸಾಹಿತ್ಯದಲ್ಲಿ ಗ್ರಾಮೀಣ ಪರಿಸರದ ಸ್ಥಿತ್ಯಂತರದ ಪ್ರತೀಕವಾಗಿ ಹೋಟೆಲಿನ ಚಿತ್ರಣ

೪.೧. ಮಾಲೀಕರ ನೆಲೆಯಲ್ಲಾಗುವ ಸ್ಥಿತ್ಯಂತರ
೪.೨. ಕಾರ್ಮಿಕರ ನೆಲೆಯಲ್ಲಾಗುವ ಸ್ಥಿತ್ಯಂತರ
೪.೩. ಗ್ರಾಹಕರ ನೆಲೆಯಲ್ಲಾಗುವ ಸ್ಥಿತ್ಯಂತರ
೪.೪. ಒಟ್ಟು ಪರಿಸರದಲ್ಲಾಗುವ ಸ್ಥಿತ್ಯಂತರ

ಅಧ್ಯಾಯ : ನಾಲ್ಕು

# ಕಥನಸಾಹಿತ್ಯದಲ್ಲಿ ಗ್ರಾಮೀಣ ಪರಿಸರದ ಸ್ಥಿತ್ಯಂತರದ ಪ್ರತೀಕವಾಗಿ ಹೋಟೆಲಿನ ಚಿತ್ರಣ

ನಮ್ಮ ಗ್ರಾಮೀಣ ಪ್ರದೇಶವು ಕಾಲಕ್ರಮೇಣ ನಾನಾ ಬಗೆಯ ಸ್ಥಿತ್ಯಂತರಗಳಿಗೆ ಒಳಗಾಗುತ್ತಿರುವುದನ್ನು ವಿವಿಧ ಲೇಖಕರು ಸಣ್ಣಕಥೆ-ಕಾದಂಬರಿಗಳಲ್ಲಿ ಹೋಟೆಲಿನ ಚಿತ್ರಣದ ಮೂಲಕ ಅಭಿವ್ಯಕ್ತಿಪಡಿಸಿದ್ದಾರೆ. ಹೋಟೆಲು ಸಂಸ್ಕೃತಿ ಎಂಬುದೇ ಒಂದರ್ಥದಲ್ಲಿ ಆಧುನೀಕರಣ ಪ್ರಕ್ರಿಯೆಯ ಭಾಗವಾಗಿದೆ. ಗ್ರಾಮೀಣ ಪರಿಸರದಲ್ಲಿ ಹೋಟೆಲುಗಳು ಮುಖ್ಯವಾಗಿ ನಾಲ್ಕು ನೆಲೆಗಳಲ್ಲಿ ಸ್ಥಿತ್ಯಂತರವನ್ನು ಉಂಟುಮಾಡಿವೆ. ಅಂತಹ ಸ್ಥಿತ್ಯಂತರದ ಪ್ರಕ್ರಿಯೆಯನ್ನು ಕನ್ನಡದ ಸಣ್ಣಕಥೆ-ಕಾದಂಬರಿಗಳು ಕಲಾತ್ಮಕವಾಗಿ ಕಟ್ಟಿಕೊಡುತ್ತವೆ. ನಾಲ್ಕು ನೆಲೆಗಳಲ್ಲಾಗುವ ಆ ಸ್ಥಿತ್ಯಂತರಗಳೆಂದರೆ, ೧. ಮಾಲೀಕರ ನೆಲೆಯಲ್ಲಾಗುವ ಸ್ಥಿತ್ಯಂತರ, ೨. ಕಾರ್ಮಿಕರ ನೆಲೆಯಲ್ಲಾಗುವ ಸ್ಥಿತ್ಯಂತರ, ೩. ಗ್ರಾಹಕರ ನೆಲೆಯಲ್ಲಾಗುವ ಸ್ಥಿತ್ಯಂತರ, ೪. ಒಟ್ಟಾರೆ ಪರಿಸರದಲ್ಲಾಗುವ ಸ್ಥಿತ್ಯಂತರ.

### ೪.೧. ಮಾಲೀಕರ ನೆಲೆಯಲ್ಲಾಗುವ ಸ್ಥಿತ್ಯಂತರ

ಕಥನಸಾಹಿತ್ಯವು ಕಾಲಕಾಲಕ್ಕೆ ಹೊಸ ರೂಪಗಳನ್ನು ಪಡೆದುಕೊಂಡು ವೈವಿಧ್ಯಮಯವಾಗಿ ಬೆಳೆದುಬಂದಿದೆ. ಕನ್ನಡದ ಸಣ್ಣಕಥೆ-ಕಾದಂಬರಿಗಳು ಹೋಟೆಲಿನ ಚಿತ್ರಣದ ಮೂಲಕ ವ್ಯಕ್ತಿ, ಸಮಾಜ, ಪರಿಸರದ ನೆಲೆಯಲ್ಲಾದ ಸ್ಥಿತ್ಯಂತರವನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತವೆ. ಯಾವುದೇ ಸ್ಥಿತ್ಯಂತರಕ್ಕೂ ಎರಡು ಮುಖ್ಯವಾದ ಮುಖಗಳಿರುತ್ತವೆ. ಒಂದು ಇತ್ಯಾತ್ಮಕ ಸ್ಥಿತ್ಯಂತರ ಅಥವಾ ಪ್ರಗತಿಯನ್ನು ಸಾಧಿಸುವುದು. ಇನ್ನೊಂದು ನೇತ್ಯಾತ್ಮಕ ಸ್ಥಿತ್ಯಂತರ ಅಥವಾ ಅವನತಿಯನ್ನು ಹೊಂದುವುದು. ಹೋಟೆಲು ಉದ್ಯಮಕ್ಕೆ ಸಂಬಂಧಪಟ್ಟಂತೆಯೂ ಈ ಎರಡು ಬಗೆಯ ಸ್ಥಿತ್ಯಂತರಗಳು ನಡೆಯಬಹುದಾಗಿದೆ. ಹೋಟೆಲಿನ ಮಾಲೀಕರ ನೆಲೆಯಿಂದ ನೋಡಿದಾಗಲೂ

ಇಂತಹ ಸ್ಥಿತ್ಯಂತರಗಳು ಉಂಟಾಗುವುದನ್ನೇ ಗಮನಿಸಬಹುದಾಗಿದೆ. ಹೋಟೆಲಿನ ವಿವರಗಳೇ ಜೀವಾಳವಾಗಿ ಬರುವಂತಹ ಸಣ್ಣಕಥೆ-ಕಾದಂಬರಿಗಳು ಈ ಬಗೆಯ ಸ್ಥಿತ್ಯಂತರಗಳನ್ನು ಅರ್ಥ ಪೂರ್ಣವಾಗಿ ಅಭಿವ್ಯಕ್ತಿಪಡಿಸಿವೆ. ಕಾದಂಬರಿ ಪ್ರಕಾರವಂತೂ ಸಮಾಜಶಾಸ್ತ್ರೀಯ ವಿದ್ಯಮಾನಗಳಿಗೆ ಕಲಾತ್ಮಕ ರೂಪ ನೀಡಿದ ಸಶಕ್ತ ಸಾಹಿತ್ಯ ಪ್ರಕಾರವಾದ್ದರಿಂದ ಹೋಟೆಲು ಉದ್ಯಮದ ಏಳು-ಬೀಳುಗಳನ್ನು ಒಟ್ಟಾರೆ ಪರಿಸರದ ಮೇಲೆ ಹೋಟೆಲು ವ್ಯವಹಾರವು ಬೀರುವ ಪರಿಣಾಮವನ್ನು ಅರ್ಥಪೂರ್ಣವಾಗಿ ಕಟ್ಟಿಕೊಡುತ್ತದೆ.

ಆಧುನೀಕರಣ ಪ್ರಕ್ರಿಯೆಯ ಭಾಗವಾಗಿರುವ ಹೋಟೆಲು ಉದ್ಯಮದಿಂದ ಅದರ ಮಾಲೀಕರ ಬದುಕಿನಲ್ಲಾಗುವ ಏಳು-ಬೀಳುಗಳನ್ನು ಕನ್ನಡದ ಹಲವಾರು ಕಥೆಗಳು-ಕಾದಂಬರಿಗಳು ಚಿತ್ರಿಸುತ್ತವೆ. ಅ.ನ.ಕೃ. ಅವರ 'ಸುಂದರೂ ಸಂಸಾರ' ಹೋಟೆಲು ಮಾಲೀಕರ ನೆಲೆಗೆ ಉದಾಹರಿಸಬಹುದಾದ ಕಾದಂಬರಿಯಾಗಿದೆ. ಇಲ್ಲಿ ಹೋಟೆಲು ಮಾಲೀಕರಾದ ಚಲುವಯ್ಯಂಗಾರರು ಸರಕಾರಿ ಅಧಿಕಾರಿಗಳ ಮತ್ತು ಗ್ರಾಹಕರ ಕಿರುಕುಳದಿಂದ ಮನಸ್ತಾಪಕ್ಕೀಡಾಗುತ್ತಾರೆ. ಆದಿಕೇಶವಲು ಎಂಬ ಫುಡ್ ಇನ್ಸ್‌ಪೆಕ್ಟರ್ ಇಬ್ಬರು ಆಳುಗಳೊಂದಿಗೆ ಹೋಟೆಲು ಪ್ರವೇಶಿಸುವುದು. ಆದಿಕೇಶವಲು ಫೈಲ್ ಓಪನ್ ಮಾಡಿ ಸಾರ್ವಜನಿಕರ ದೂರುಗಳ ವಿವರಣೆ ನೀಡುವುದು. ಬಚ್ಚಲಿನ ನೀರು ಪಕ್ಕದ ಮನೆಗೆ ನುಗ್ಗುವುದನ್ನು ವಾಯುಮಾಲಿನ್ಯಕ್ಕೆ ಈಡುಮಾಡುವ ಹೊಗೆಯು ಹೊರ ಹೋಗುವುದು, ಬಗೆಬಗೆಯ ದೋಸೆಗಳಿಗೆ ಕೋಳಿಮೊಟ್ಟೆ ಬೆರೆಸುವ ವಿಚಾರಗಳನ್ನು ತಿಳಿದ ಚಲುವಯ್ಯಂಗಾರ ತಬ್ಬಿಬ್ಬಾಗುತ್ತಾನೆ. ನಂತರದಲ್ಲಿ ಗ್ರಾಹಕರಾದ ಶ್ರೀನಿವಾಸ ಮತ್ತು ಲೋಕಾಭಿರಾಮರ ಕಪಟತನಕ್ಕೆ ಒಳಗಾಗಿ ಚಲವಯ್ಯಂಗಾರ ಹಣ ಕಳೆದುಕೊಳ್ಳುತ್ತಾನೆ. ಇವರಲ್ಲಿ ಇದೇ ಸಮಯ ಸಾಧಿಸಿ ಕೆಲವು ಗಿರಾಕಿಗಳು ಉಪಾಹಾರ ಸೇವಿಸಿ ಹಣ ಕೊಡದಿರುವ ಸಂದರ್ಭವನ್ನು ಚಲುವಯ್ಯಂಗಾರ ಎದುರಿಸಬೇಕಾಗಿ ಬರುತ್ತದೆ. ಹೀಗೆ ಹೋಟೆಲು ಮಾಲೀಕನಾಗಿ ಚಲುವಯ್ಯಂಗಾರರು ಅಧಿಕಾರಿ ವ್ಯವಸ್ಥೆ ಸಾರ್ವಜನಿಕ ವ್ಯವಸ್ಥೆಯೊಂದಿಗೆ ಸೆಣಸಾಡುವ ಪ್ರಮೇಯ ಇಲ್ಲಿ ಏರ್ಪಡುತ್ತದೆ.

ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲಿ ಕಥಾನಾಯಕನಾದ ಭುಜಂಗಯ್ಯನ ವ್ಯಕ್ತಿ ಬದುಕಿನ ವಿವಿಧ ಆಯಾಮಗಳನ್ನು ಎಳೆಎಳೆಯಾಗಿ ಚಿತ್ರಿಸುತ್ತದೆ. ಈ ಕಾದಂಬರಿಯು ಹೋಟೆಲು ವೃತ್ತಿಬದುಕಿನ ಸ್ಥಿತ್ಯಂತರಕ್ಕೆ ಉತ್ತಮ ಉದಾಹರಣೆ ಯಾಗಿದೆ. ಭುಜಂಗಯ್ಯ ಮತ್ತು ಸಹಪ್ರಯಾಣಿಕನ ಸಂಭಾಷಣೆಯ ಮೂಲಕ ಹೋಟೆಲು ಸ್ಥಾಪನೆಯಿಂದಾಗಿ ಮಾದಳ್ಳಿಯ ಸಾಮಾನ್ಯ ಕೃಷಿಕ ವ್ಯಕ್ತಿಯೊಬ್ಬನ ಬದುಕಿನಲ್ಲಾದ ಸ್ಥಿತ್ಯಂತರವು ಕಾದಂಬರಿಯಲ್ಲಿ ಎಳೆಯೆಳೆಯಾಗಿ ಬಿಚ್ಚಿಕೊಳ್ಳುತ್ತವೆ. "ಅಲ್ಲ, ಎಲ್ಲೆಲ್ಲೋ ವೋಟ್ಲು ಅಂತ ಇಡ್ತಾ ಅವ್ರೆ, ಈ ಜಾಗದಲ್ಲಿ ಯಾಕೆ ಇಡಬ್ಯಾಡ್ದು? ದಿನ ಇಷ್ಟೊಂದು ಯಾಪಾರ ಆಯ್ತದಪ್ಪಾ"(ಶ್ರೀಕೃಷ್ಣ ಆಲನಹಳ್ಳಿ, ೧೯೭೮, ಪುಟ ೧೩) ಎಂದಾಗ ಸಹ ಪ್ರಯಾಣಿಕನ ಮಾತುಗಳಿಂದ ಭುಜಂಗಯ್ಯನು

ಹೋಟೆಲು ಪ್ರಾರಂಭಿಸುವುದರ ಕಡೆಗೆ ಪ್ರೇರಿತನಾಗುತ್ತಾನೆ. ಊರ ಜನರ ವಿರೋಧದ ನಡುವೆಯೂ ಅಜ್ಜಪ್ಪನು ಹೆಂಡದಂಗಡಿ ಪಾಲುದಾರನಾದಂತೆ ತಾನೇಕೆ ಹೋಟೆಲನ್ನು ಪ್ರಾರಂಭಿಸಬಾರದು ಎಂಬ ಆಲೋಚನೆ ಭುಜಂಗಯ್ಯನಲ್ಲಿ ಮೂಡುತ್ತದೆ. ಹಾಗೆಂದುಕೊಂಡ ಭುಜಂಗಯ್ಯನು ಹೋಟೆಲು ಆರಂಭಿಸುವುದರ ಕಡೆಗೆ ಗಮನ ಹರಿಸುತ್ತಾನೆ. ಅಜ್ಜಪ್ಪನು ಆರ್ಥಿಕ ಸಹಾಯ ಮಾಡುವ ಭರವಸೆಯನ್ನು ನೀಡುತ್ತಾನೆ. "ಮಾದಳ್ಳಿ ಕ್ರಾಸಿಗೆ ಚಿರಪರಿಚಿತ ವ್ಯಕ್ತಿಯಾಗಿ ಹೋಟೆಲು ಆರಂಭದ ನಂತರ ಭುಜಂಗಯ್ಯ ರೂಪುಗೊಳ್ಳುತ್ತಾನೆ. ಹಾಗೆಯೇ ಅಜ್ಜಪ್ಪನು ಕೂಡುರಸ್ತೆಯ ಆಚೆಗಿರುವ ತನ್ನ ಹೊಲದಲ್ಲಿ ಭುಜಂಗಯ್ಯನಿಗೆ ಹೋಟೆಲಿಡಲು ಒಪ್ಪಿಗೆ ಸೂಚಿಸುತ್ತಾನೆ. ಸ್ವಲ್ಪ ಹಣ ಸಾಲದ ರೂಪದಲ್ಲಿ ಭುಜಂಗಯ್ಯನಿಗೆ ಕೊಡುವುದಾಗಿ ತಿಳಿಸುತ್ತಾನೆ. ಭುಜಂಗಯ್ಯನಲ್ಲಿದ್ದ ಜನ ಏನೆನ್ನುತ್ತಾರೋ ಎಂಬ ಅನುಮಾನವನ್ನು ಬೇರುಸಹಿತ ಕಿತ್ತೊಗೆದು ಅನೇಕ ದೃಷ್ಟಾಂತಗಳ ಮೂಲಕ ಹೋಟೆಲಿಡುವುದರಲ್ಲಿ ಯಾವುದೇ ತಪ್ಪಿಲ್ಲವೆಂಬುದನ್ನು ಮನವರಿಕೆ ಮಾಡಿಕೊಟ್ಟ(ಅದೇ, ಪುಟ ೧೭). ಅಜ್ಜಪ್ಪನು ಭುಜಂಗಯ್ಯನಲ್ಲಿ ಈಗಾಗಲೇ ಹೋಟೆಲಿಡುವ ನಿರ್ಧಾರವನ್ನು ಇನ್ನಷ್ಟು ಗಟ್ಟಿಗೊಳಿಸುತ್ತಾನೆ. ಲಿಂಗಜಾಂಬ ಬಸ್ಸಿನ ಮಾಲೀಕ ತಮ್ಮ ಜಾತಿಯವನೆನ್ನುವುದು ತಿಳಿದ ತಕ್ಷಣವೇ ಅವನನ್ನು ಕರೆದು ಸತ್ಕರಿಸುವ ಯೋಚನೆ ಭುಜಂಗಯ್ಯನಲ್ಲಿ ಒಡಮೂಡುತ್ತದೆ.

ಹೋಟೆಲು ಆರಂಭದಿಂದಾಗಿ ಅವನ ವೃತ್ತಿಬದುಕಿನಲ್ಲಿ ಹೊಸತಿರುವು ಉಂಟಾಗುತ್ತದೆ. ಬರುಬರುತ್ತ ಭುಜಂಗಯ್ಯನಲ್ಲಿ ಉಡುಗೆ–ಭಾಷೆ ಹೋಟೆಲಿಟ್ಟ ದಿನದಿಂದ ಸುಧಾರಿಸತೊಡಗಿದವು. ಸಾರ್ವಜನಿಕರಿಗೆ ಪ್ರಿಯವಾಗಬಲ್ಲ ನುಡಿಮುತ್ತುಗಳನ್ನು ಕಲಿಯತೊಡಗಿದನು. ಬಸ್ಸಿಗಾಗಿ ಕಾಯುವ ಪ್ರಯಾಣಿಕರು ಹಾಗೂ ಊರಿನ ಅಕ್ಕಪಕ್ಕದ ಜನರು ಭುಜಂಗಯ್ಯನ ಖಾಯಂ ಗ್ರಾಹಕರಾದರು. ಹಿಂದಿನ ಕೃಷಿಕ ಚಟುವಟಿಕೆಗಳಲ್ಲಿ ಕಂಡರಿಯದ ಆರ್ಥಿಕ ಪ್ರಗತಿಯನ್ನು ಹೋಟೆಲು ಉದ್ಯಮದಲ್ಲಿ ಸಾಧಿಸುತ್ತಾನೆ. ಹೋಟೆಲು ಕೆಲಸಗಳ ಒತ್ತಡದಲ್ಲಿ ಭುಜಂಗಯ್ಯನಲ್ಲಾದ ಆರ್ಥಿಕ ಸುಧಾರಣೆಯನ್ನು ಅಜ್ಜಪ್ಪನಿಗೆ ತಿಳಿಸುವುದನ್ನು ಇಲ್ಲಿ ಕಾಣಬಹುದಾಗಿದೆ. "ತನ್ನ ಇಷ್ಟು ದಿನದ ವ್ಯವಹಾರವನ್ನು ಒಟ್ಟಾಗಿ ಲೆಕ್ಕ ಹಾಕಿದಾಗಲೇ ಭುಜಂಗಯ್ಯನಿಗೆ ತನಗೆ ಒಂದು ತಿಂಗಳಲ್ಲಿ ಸುಮಾರು ಮುನ್ನೂರೈವತ್ತು ರೂಪಾಯಿ ಲಾಭ ಬಂದದ್ದು ಅರಿವಾದದ್ದು"(ಅದೇ, ಪುಟ ೪೭–೪೮). ಹೋಟೆಲು ವ್ಯವಹಾರದಿಂದಾಗಿ ಆತನ ಕೃಷಿ ಬದುಕಿನಲ್ಲೂ ಸ್ವಲ್ಪ ಪ್ರಮಾಣದ ಏರುಪೇರುಗಳಾಗುತ್ತವೆ. ಭುಜಂಗಯ್ಯ ಮತ್ತು ಆತನ ಮಡದಿಯ ನಡುವೆ ನಡೆಯುವ ಮಾತುಕತೆಯನ್ನು ಇಲ್ಲಿ ಉದಾಹರಿಸಬಹುದಾಗಿದೆ. "ಪಾರ್ವತಿ ಅಡುಗೆ ಮನೆಯ ಚೌಕಟ್ಟಿಗೆ ಒರಗಿ ನಿಂತಿದ್ದವಳು ಹೊಲಗೆಲಸದ ವಿಷಯ ನೇರವಾಗಿಯೇ ಕೇಳಿದಳು. ಭುಜಂಗಯ್ಯನ ಗಂಟಲಲ್ಲಿ ತುತ್ತು ನಿಂತಂತಾಗಿ ಚೊಂಬಿನಿಂದ ನೀರನ್ನು ಎತ್ತಿ ಕುಡಿದು ನಿಧಾನವಾಗಿ ಹೆಂಡತಿಯತ್ತ ತಿರುಗಿದ. ನಡುಮನೆಯ ಅರೆಗತ್ತಲಲ್ಲಿ ಪಾರ್ವತಿ ಪ್ರಶ್ನೆಯಂತೆ ನಿಂತಿದ್ದಳು. ಮಳೆ ಬಿದ್ದರೆ ಬಿತ್ತನೆ, ಹರಟೆ ಇತ್ಯಾದಿ

ಕೆಲಸಗಳ ಬಗೆಗೆ ಅವನು ಯೋಚಿಸಿಯೇ ಇರಲಿಲ್ಲ. ಸರಿಯಾದ ಸಮಯಕ್ಕೆ ಎಚ್ಚರಿಸಿದ ಪಾರ್ವತಿಯ ಒಳ್ಳೆಯತನಕ್ಕೆ ಒಳಗೇ ಆನಂದ ಪಡುತ್ತ, ಇವತ್ತೆ ತಾನೊಬ್ಬ ಆಳನ್ನ ಜೀತಕ್ಕಿರಿಸಿಕೊಳ್ಳಲು ಪ್ರಯತ್ನಿಸುವುದಾಗಿ ಭರವಸೆ ಕೊಟ್ಟ. ತಟ್ಟನೇ ಪಾರ್ವತಿ ಆಳು ಮಾಡಿದ್ದು ಹಾಳೇ ಹಾಗಂತ ಅವರನ್ನ ನಂಬ್ಕಂಡು ಕುಂತ್ರ"(ಅದೇ, ಪುಟ ೩೨) ಎಂದಳು. ಕೊನೆಗೂ ಭುಜಂಗಯ್ಯನು ತನ್ನ ಕೃಷಿ ಚಟುವಟಿಕೆಗಳಿಗಾಗಿ ಆಳೊಬ್ಬನನ್ನು ಗೊತ್ತುಮಾಡಿಕೊಳ್ಳುತ್ತಾನೆ. ಇದು ಆತ ಹೋಟೆಲು ವ್ಯವಹಾರವನ್ನು ಪ್ರಾರಂಭಿಸಿರುವುದರಿಂದ ಉಂಟಾದ ಪರಿಣಾಮವೆನ್ನಬಹುದು. ಹೋಟೆಲು ವ್ಯವಹಾರದಲ್ಲಿ ಸದಾ ತೊಡಗಿಸಿಕೊಂಡದ್ದರಿಂದ ಭುಜಂಗಯ್ಯನಿಗೆ ಹಿಂದಿನಂತೆ ತನ್ನ ಕೃಷಿ ಚಟುವಟಿಕೆಗಳಲ್ಲಿ ನಿರತನಾಗಲು ಸಾಧ್ಯವಾಗುವುದಿಲ್ಲ. ಅನಿವಾರ್ಯವೆಂಬಂತೆ ಕೆಲಸದಾಳೊಬ್ಬನನ್ನು ನೇಮಿಸಿಕೊಳ್ಳುತ್ತಾನೆ.

ಆತನ ಪಾರಂಪರಿಕ ಮನಸ್ಥಿತಿ ಪಲ್ಲಟಗೊಂಡು ಕ್ರಮೇಣ ಪ್ರಗತಿಪರ ಶಕ್ತಿ ಮೂಡುತ್ತದೆ. "ರಾತ್ರಿ ವೇಳೆಯಲ್ಲೂ ನಿದ್ದೆಗೆ ಬದಲಾಗಿ ಆತ ಹೋಟೆಲು ವ್ಯವಹಾರದ ಬಗೆಗೆ ಆಲೋಚನೆ ಮಾಡುತ್ತಾನೆ. ಹೋಟೆಲಿನ ಗ್ರಾಹಕರು ಮತ್ತು ಊರ ಜನರು ಆತನಲ್ಲಿರಿಸಿದ ನಂಬಿಕೆಯಿಂದಾಗಿ ಭುಜಂಗಯ್ಯನು ಭಾವಪರವಶನಾಗುತ್ತಾನೆ. ಹೋಟೆಲಿನಲ್ಲಿ ತಿಂಡಿ-ತಿನಿಸುಗಳ ಬಗೆಗೆ ಮಕ್ಕಳಲ್ಲಿ ಆಶಾಭಾವನೆಗಳು ಗರಿಗೆದರಲು ಭುಜಂಗಯ್ಯ ಕಾರಣೀಭೂತನಾಗುತ್ತಾನೆ. ಹೋಟೆಲಿನ ಕೆಲಸ-ಕಾರ್ಯಗಳ ಒತ್ತಡದಿಂದಾಗಿ ಹಿಂದಿನಂತೆ ಈಗ ತನ್ನ ಮನೆಯಲ್ಲಿ ಶಿವಪೂಜೆಯನ್ನು ನಡೆಸಲು ಆತನಿಗೆ ಸಾಧ್ಯವಾಗುತ್ತಿಲ್ಲ. ಮೂಲತಃ ರಾಗಿಹಿಟ್ಟು ಹುಳಿಸಾರಿಗಿಂತ ಹೋಟೆಲಿನ ತಿಂಡಿ-ತೀರ್ಥಗಳಿಗೆ ಮಹತ್ವ ಕೊಡುತ್ತಾನೆ. ಮಾದಾಪುರ ಗೇಟಿನಿಂದ ಮಾದಳ್ಳಿ ಕ್ರಾಸಿಗೆ ಬಸ್ಸು ನಿಲ್ಲಿಸುವ ಮಟ್ಟಕ್ಕೆ ಭುಜಂಗಯ್ಯ ಪ್ರಚಾರ ಪಡೆದಿದ್ದ. ಸಾಂಪ್ರದಾಯಿಕ ಶಿವಪೂಜೆ ಮಾಡುತ್ತಿದ್ದವನು ಹೋಟೆಲು ವ್ಯವಹಾರದಿಂದ ವೈಚಾರಿಕ ಭಕ್ತಿಮಾರ್ಗಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುತ್ತಾನೆ. ಭುಜಂಗಯ್ಯ ಗ್ರಾಮದಲ್ಲಿ ಸಂಘಜೀವಿಯಾಗಿ ಜನಸಾಮಾನ್ಯರ ಮನಸ್ಸಿನಲ್ಲಿ ನೆಲೆ ನಿಲ್ಲುತ್ತಾನೆ. ಆಧುನಿಕತೆಯ ಪ್ರಭಾವದಿಂದುಂಟಾಗುವ ಪರಿಣಾಮಗಳನ್ನು ವಿಶ್ಲೇಷಿಸಿ ಹೇಳುವ ಮಟ್ಟಕ್ಕೆ ಬೆಳವಣಿಗೆ ಹೊಂದಿದ್ದ. ಕೋಟೆ ಮತ್ತು ಮೈಸೂರಿಗೆ ಸಂಚರಿಸುವ ಜನ "ಮಾದಳ್ಳಿಯಲ್ಲಿ ತಿಂಡಿ ತಿಂದರಾಯ್ತು" ಅನ್ನುವ ಮಟ್ಟಕ್ಕೆ ಅವನ ಹೋಟೆಲು ಪ್ರಸಿದ್ಧಿ ಪಡೆದಿತ್ತು. ಹಳ್ಳಿಯಲ್ಲಿನ ಮೂಢನಂಬಿಕೆ ಕಂದಾಚಾರಕ್ಕೆ ಬದಲಾಗಿ ನವನಾಗರಿಕತೆಗೆ ಸಾಕ್ಷಿಯಂತೆ ಜೀವನ ರೂಪಿಸಿಕೊಂಡಿದ್ದನು. ಕಾರ್ಮಿಕರ ಸಾಂಪ್ರದಾಯಿಕ ಉಡುಗೆ-ತೊಡುಗೆಗೆ ಬದಲಾಗಿ ಆಧನಿಕತೆಯನ್ನು ಪ್ರತಿನಿಧಿಸುವ ಬಟ್ಟೆ-ಬರೆಗಳನ್ನು ಹಾಕಿಕೊಳ್ಳುವ ಸ್ಥಿತಿಗೆ ತಲುಪಿದ್ದನು. ಊರಿನ ಗುರುಹಿರಿಯರ ದೃಷ್ಟಿಯಲ್ಲಿ ಸೇವಾಸಕ್ತಿಯಿಂದ ಕಲಿಪುರುಷನಾಗಿ ಮಾರ್ಪಟ್ಟಿದ್ದನು. ಮಕ್ಕಳ ಪಾಲನೆ ಪೋಷಣೆಯಲ್ಲಿ ಹೆಚ್ಚಿನ ಉತ್ಸಾಹವನ್ನು ತೋರಿಸುತ್ತಿದ್ದನು. ವ್ಯವಸಾಯದಲ್ಲಿ ಕಂಡರಿಯದ ಆರ್ಥಿಕ ಪ್ರಗತಿಯನ್ನು ಭುಜಂಗಯ್ಯನು ಹೋಟೆಲು ವ್ಯವಹಾರದ

ಮೂಲಕ ಸಾಧಿಸುತ್ತಾನೆ. ವ್ಯವಸಾಯಗಾರನಾಗಿ ಇದುವರೆಗೆ ಸಂಪಾದಿಸಿದುದಕ್ಕಿಂತ ಹೆಚ್ಚಿನ ಆದಾಯವನ್ನು ಆತ ಹೋಟೆಲು ಉದ್ಯಮದ ಮೂಲಕ ಕೇವಲ ಒಂದೇ ವರ್ಷದಲ್ಲಿ ಸಂಪಾದಿಸುತ್ತಾನೆ. ಅವನ ತಂದೆ ಸತ್ತಾಗಿನಿಂದಲೂ ಇದನ್ನು ಕಂಡಿರಲಿಲ್ಲ. ಇದು ಹೋಟೆಲು ಉದ್ಯಮದಿಂದಲೇ ಎಂಬುದು ಸಾಬೀತಾಗುತ್ತದೆ. ಹೋಟೆಲು ವ್ಯವಹಾರದ ಪ್ರಗತಿಯಿಂದಾಗಿ ಆತ ಕ್ರಮೇಣ ಮುನಿಸಿಕೊಂಡಿದ್ದ ತನ್ನ ಮಡದಿಯ ವಿಶ್ವಾಸವನ್ನು ಗಳಿಸುತ್ತಾನೆ. ಮನೆಗೆ ಹೋಗಲು ಸಮಯದ ಅಭಾವ ಹೋಟೆಲು ಆರಂಭವಾದಾಗಿನಿಂದ ಕಾಡುತಿತ್ತು. ಭುಜಂಗಯ್ಯ ಸಂಘಜೀವಿಯಾಗಿ ಜನಸಾಮಾನ್ಯರ ಮನಸ್ಸಿನಲ್ಲಿ ನೆಲೆ ನಿಲ್ಲುತ್ತಾನೆ.

ದಿನ ಕಳೆದಂತೆ ಮಳೆ ಚೆನ್ನಾಗಿ ಬಂದದ್ದರಿಂದ ಭುಜಂಗಯ್ಯನ ಹೋಟಲಿನ ಗಿರಾಕಿಗಳು ಹೊಲದ ಬಿತ್ತನೆ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ಹಾಗಾಗಿ ಮಳೆ ಬರುವ ಪೂರ್ವದ 'ಕೆಂಡಗಣ್ಣೇಶ್ವರ ಪ್ರಸನ್ನ ಫಲಾಹಾರ ಮಂದಿರ' ಮಳೆ ಬಂದಾಗಿನಿಂದ ಬಣಗುಡುವಂತಾಗಿತ್ತು. ಆಕಸ್ಮಿಕ ಮಳೆ ಬಂದಾಗಿನಿಂದ ಊರ ಜನರೆಲ್ಲಾ ಬಿತ್ತನೆ ಕಾರ್ಯದಲ್ಲಿ ತೊಡಗಿದ್ದರಿಂದ ಯಾರೊಬ್ಬರು ಹೋಟೆಲಿಗೆ ಬರಲಾಗಲಿಲ್ಲ. ಕಂತೆ ಭಿಕ್ಷೆಗೆ ಹೆಸರಾಗಿದ್ದ ಹಂಪಾಪುರದ ತಂಬೂರಿ ಅಯ್ನೋರು ಮತ್ತು ಮೈಸೂರಿನ ಬಳೆಶೆಟ್ಟರು ಹೋಟೆಲಿಗೆ ಕಾಯಂ ಸದಸ್ಯರಾಗಿದ್ದರು. ಕೊಟ್ಟಿಗಾಲ, ಕ್ಯಾತನಹಳ್ಳಿ, ಹೊಸಳ್ಳಿ, ಸರಗೂರು ದಾರಿ ಕೂಡುವ ಜಾಗದಲ್ಲಿ ಹೋಟೆಲು ಇದ್ದುದರಿಂದ ಅಲ್ಲಿ ಬಂದು ಸೇರುತ್ತಿದ್ದರು. ದಿನ ಕಳೆದಂತೆ ವ್ಯವಸಾಯದಲ್ಲಿ ಪುರುಸೊತ್ತಾಗಿತ್ತು. ಮತ್ತೆ ಭುಜಂಗಯ್ಯನ ಅದೃಷ್ಟ ಕುಲಾಯಿಸಿತು. ಯಾವ ಗಳಿಗೆಯಲ್ಲಿ ಹೋಟೆಲ ತೆರೆದನೋ ಅದು ಆತನಿಗೆ ಕಲ್ಪವೃಕ್ಷವೇ ಆಗತೊಡಗಿತು. ಪರಿಹಾಸ್ಯ ಮಾಡಿದ್ದ ಮಾದಳ್ಳಿಯ ಗಣ್ಯರು ಕೂಡ ಹೋಟೆಲಿನಿಂದ ಭುಜಂಗಯ್ಯನಲ್ಲಾದ ಬದಲಾವಣೆ ಕಂಡು ಒಳಗೊಳಗೆ ಅಸೂಯೆಗೆ ಒಳಗಾಗಿದ್ದರು. ಊರ ಜನ ಏನೇ ಅನ್ನಲಿ-ಬಿಡಲಿ ಯಾವುದಕ್ಕೂ ಭುಜಂಗಯ್ಯ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಕಾಯಕವೇ ಕೈಲಾಸವೆಂಬ ಅಣ್ಣನವರ ಹೇಳಿಕೆಯೊಂದನ್ನು ಹೋಟೆಲಿನಲ್ಲಿ ಪಾಲಿಸತೊಡಗಿದನು. ಒಟ್ಟಾರೆಯಾಗಿ ಹೊಗಳಿಕೆಗೂ ಹಿಗ್ಗದ ತೆಗಳಿಕೆಗೂ ಕುಗ್ಗದ ಭುಜಂಗಯ್ಯನ ಸದಾ ಕ್ರಿಯಾಶೀಲ ಪ್ರವೃತ್ತಿ ಹೋಟೆಲು ಉದ್ಯಮದಿಂದಾಗಿ ಇನ್ನಷ್ಟು ತೀವ್ರವಾಗಿತ್ತು. ನಿತ್ಯವೂ ಹೊಸಹೊಸ ಮುಖಗಳನ್ನು ಹೋಟೆಲಲ್ಲಿ ಕಾಣುವುದು. ಅವರಾಡಿದ ಮಾತುಗಳನ್ನು ಗಲ್ಯಾದ ಮೇಲೆ ಕುಳಿತು ಕೇಳುವುದು ಭುಜಂಗಯ್ಯನಿಗೆ ಪ್ರಿಯವಾಗಿತ್ತು. ಲೋಕಾನುಭವವು ವಿಸ್ತರಿಸಿ ದೊಡ್ಡವರಿಗೆ ಇರಬೇಕಾದ ವ್ಯಕ್ತಿತ್ವ ಅವನಲ್ಲಿ ರೂಪುಗೊಂಡಿತ್ತು. ಹೋಟೆಲಿನ ಆರಂಭದಿಂದಾಗಿ ತಿಂಗಳಿಗೊಂದು ಸಲ ದಾಡಿ ಮಾಡಿಸಿಕೊಳ್ಳುವವನು ವಾರಕ್ಕೊಮ್ಮೆ ನಿಗದಿಪಡಿಸಿದ್ದನು. ಮಕ್ಕಳ ಉಡುಗೆ-ತೊಡುಗೆ ಹಾಗೂ ಊಟೋಪಚಾರಗಳಲ್ಲಿ ಊರ ಮಕ್ಕಳಿಗಿಂತ ಭಿನ್ನವಾಗತೊಡಗಿದ್ದವು. ಭುಜಂಗಯ್ಯನ ಹೋಟೆಲು ಕೂಡುರಸ್ತೆಗೆ ಹೊಸಕಳೆ ತಂದುಕೊಟ್ಟಿತ್ತು. ಧಾರಾಕಾರ ಮಳೆಯಲ್ಲಿಯೂ ಸಹ ಭುಜಂಗಯ್ಯನ ಹೋಟೆಲು ಮಾತ್ರ ಜೇನುಗೂಡಿನಂತೆ ಗಿಜುಗುಡುತ್ತಿತ್ತು.

ಒಂದು ದಿನ ಭುಜಂಗಯ್ಯ ನಿತ್ಯಕರ್ಮಗಳನ್ನು ಮುಗಿಸಿ ಹೋಟೆಲಿನಲ್ಲಿ ಸುತ್ತಾಡುತ್ತಾ ತನ್ನ ಕೂಲಿಮಠದಲ್ಲಿನ ವಿದ್ಯಾಭ್ಯಾಸದ ಬಾಲ್ಯದ ನೆನಪುಗಳನ್ನು ಮೆಲುಕು ಹಾಕುತ್ತಾನೆ. ದೊಡ್ಡ ಮಠದ ಸ್ವಾಮಿಗಳ ಆಗಮನಕ್ಕೆ ಮನೆಯ ಶೃಂಗಾರ ಮಾಡಿದ್ದನ್ನು ನೋಡಿ ಊರ ಜನರು ಆಶ್ಚರ್ಯಪಟ್ಟಿದ್ದರು. ಭುಜಂಗಯ್ಯ ಹೋಟೆಲಿಟ್ಟು ಮೂರು ತಿಂಗಳಲ್ಲೇ ಅನುಕೂಲಸ್ಥನಾಗಿದ್ದನು. ಸ್ವಾಮಿಗಳು ಹೋಟೆಲಿಗೆ ಬಂದು ಶುಭ ಹಾರೈಸುತ್ತಾರೆ. ಊರವರು ಮತ್ತು ಮಾವ ಪರ್ವತಪ್ಪ ಹೋಟೆಲಿಟ್ಟ ಕೆಲಸದ ಬಗೆಗೆ ಹಗುರವಾಗಿ ಮಾತನಾಡಿದರು. ಇದನ್ನು ಕಂಡು ಅವರು ಬೆರಗಾಗುತ್ತಾರೆ. ಗಿರಾಕಿಗಳ ಖುಷಿಗಾಗಿ ಭುಜಂಗಯ್ಯನ ಹೋಟೆಲಲ್ಲಿ ಗ್ರಾಮೋಫೋನು ರಾರಾಜಿಸತೊಡಗಿತು. ಮುಂದೆ ಭುಜಂಗಯ್ಯನು ಸಿಂಗಾರಿಯ ಜಮೀನನ್ನು ಎರಡು ಸಾವಿರಕ್ಕೆ ಕೊಂಡುಕೊಳ್ಳುತ್ತಾನೆ. ಹೋಟೆಲು ವ್ಯವಹಾರದಿಂದಾಗಿ ಭುಜಂಗಯ್ಯ ಊರಿನ ಉಳಿದ ಕೋಮಿನ ಹಾಗೂ ಬಡ ಲಿಂಗಾಯತರ ದೃಷ್ಟಿಯಲ್ಲಿ ಗಣ್ಯವ್ಯಕ್ತಿಯಾಗಿದ್ದನು. ಹೀಗೆ ಹೋಟೆಲು ವ್ಯವಹಾರವು ಇನ್ನೊಂದು ನೇತ್ಯಾತ್ಮಕ ತಿರುವನ್ನು ಉಂಟುಮಾಡುತ್ತದೆ. ಭುಜಂಗಯ್ಯ ಬಳೆಶೆಟ್ಟರ ಮಗಳಾದ ಸುಶೀಲೆಯನ್ನು ಮದುವೆಯಾಗಿ ಹೋಟೆಲಿನ ರೂಮಿನಲ್ಲಿ ಸಂಸಾರ ಹೂಡಿದ ಸಂಗತಿ ಮಾದಳ್ಳಿಯ ವೀರಶೈವ ಸಮಾಜಕ್ಕೆ ಆಘಾತವನ್ನುಂಟು ಮಾಡುತ್ತದೆ. ಭುಜಂಗಯ್ಯನ ಹೋಟೆಲಲ್ಲಿ ಹರಿಜನ ಹೊಸಮೇಷ್ಟ್ರು ಪ್ರವೇಶದಿಂದಾಗಿ ಲಿಂಗಾಯತರು ಆತನನ್ನು ಜಾತಿಯಿಂದ ಹೊರಗಿಡುತ್ತಾರೆ. ಭುಜಂಗಯ್ಯನ ಹೋಟೆಲು ಅಥವಾ ಅವನ ಕೃಷಿಗೆ ಸಂಬಂಧಿಸಿದ ಕೆಲಸಗಳಿಗೆ ಹೋಗದಂತೆ ಊರ ಜನರಿಗೆ ತಾಕೀತು ಮಾಡುತ್ತಾರೆ. ಭುಜಂಗಯ್ಯ ಮತ್ತು ರುದ್ರಪ್ಪನ ನಡುವೆ ಜಗಳವೇ ಸಂಭವಿಸುತ್ತದೆ. ಇದರಿಂದಾಗಿ ಭುಜಂಗಯ್ಯನ ಹೋಟೆಲು ಸುಟ್ಟು ಭಸ್ಮವಾಗುತ್ತದೆ. ಸುಟ್ಟುಹೊದ ಹೋಟೆಲನ್ನು ಮತ್ತೆ ಕಟ್ಟುವ ಹಾಗೂ ಸುಟ್ಟವರ ಎದೆ ಮೆಟ್ಟುವ ಹಾಗೆ ಹೋಟೆಲು ನಡೆಸುವ ಮಾತನಾಡಿದಾಗ ಮುದ್ದೇಗೌಡರು ಸಮ್ಮತಿಸುವುದಿಲ್ಲ. ಇನ್ನು ಹೋಟೆಲು ಸಹವಾಸವೇ ಬೇಡ ಇರುವ ಸಿಂಗಾರಿಯ ಹೊಲವೇ ಸಾಕು. ಗೌಡರ ಮಾತೇ ಸರಿಕಂಡು ಭುಜಂಗಯ್ಯ ಸಹಮತ ವ್ಯಕ್ತಪಡಿಸುತ್ತಾನೆ.

ಒಟ್ಟಾರೆಯಾಗಿ ಹೋಟೆಲು ವ್ಯವಹಾರದಿಂದಾಗಿ ಸ್ಥಿತ್ಯಂತರಕ್ಕೊಳಗಾದ ಭುಜಂಗಯ್ಯನ ಗ್ರಾಮೀಣ ಬದುಕಿನ ಸಂಕೀರ್ಣತೆಯನ್ನು ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ಕನ್ನಡ ಕಥನ ಸಾಹಿತ್ಯವು ಹೋಟೆಲು ಮಾಲೀಕರ ಬದುಕಿನ ಸ್ಥಿತ್ಯಂತರವನ್ನು ವಿವಿಧ ಸ್ವರೂಪಗಳಲ್ಲಿ ಕಟ್ಟಿಕೊಟ್ಟಿದೆ.

ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಚಿತ್ರಿತವಾದ ಹೋಟೆಲು ಮಾಲೀಕರ ಬದುಕಿನ ಸ್ಥಿತ್ಯಂತರವು ತೀರಾ ವಿಭಿನ್ನವಾದದ್ದು. ಶೀನಮಯ್ಯನ ಮಕ್ಕಳಾದ ವರಟ, ನರಸಿಂಹ ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ಹೋಟೆಲು ಸ್ಥಾಪಿಸುತ್ತಾರೆ. ಗ್ರಾಮೀಣ ಪ್ರದೇಶದಿಂದ

ನಗರಕ್ಕೆ ತೆರಳಿ ಹೋಟೆಲು ಉದ್ಯಮದಲ್ಲಿ ಏಳಿಗೆಯನ್ನು ಸಾಧಿಸುತ್ತಾರೆ. ಊರಿನ ಇತರರಿಗಿಂತ ಭಿನ್ನರೀತಿಯಲ್ಲಿ ಅವರ ಕುಟುಂಬದವರು ಜೀವನ ಸಾಗಿಸುತ್ತಾರೆ. ಶೀನಮಯ್ಯನ ಮಕ್ಕಳಲ್ಲಾದ ಆರ್ಥಿಕ ಪ್ರಗತಿಯನ್ನು ರಾಮ ಐತಾಳರು ಕಂಡು ಬೆರಗಾಗುತ್ತಾರೆ. ಪೂಜಾರಿಯ ಆಸ್ತಿಯನ್ನು ಐತಾಳರು ಖರೀದಿಸಿದ ಸುದ್ದಿಯಿಂದ ಶೀನಮಯ್ಯನು ವಿಚಲಿತನಾಗುತ್ತಾನೆ. ತನ್ನ ಮಕ್ಕಳ ಸಂಪಾದನೆಯಿಂದ ಒಂದು ದಿವಸ ಊರನ್ನು ಖರೀದಿ ಮಾಡಿಯೇನು ಎಂಬುದಾಗಿ ಶೀನಮಯ್ಯ ಛಲ ತೊಡುತ್ತಾನೆ. ಅದಕ್ಕೆ ಸಮನಾಗಿ ಅವನ ಇಬ್ಬರು ಮಕ್ಕಳೂ, ಬಾವನೂ ಸೇರಿ ಮಾಡಿದ ಶ್ರೀಲಕ್ಷ್ಮಿನರಸಿಂಹ ಪ್ರಸನ್ನ ಬಳೆಪೇಟೆಯ ಹೋಟೆಲು ಬಹು ವಿಜೃಂಭಣೆಯಿಂದ ನಡೆಯತೊಡಗಿತ್ತು. ಅವನ ಮಗ ನರಸಿಂಹ ಪತ್ರ ಬರೆದಂತೆ ಈಗೀಗ ಕೆಂಗೇರಿ, ಬಿಡದಿಗಳಿಂದಲೂ ನಮ್ಮ ಹೋಟೆಲಿನ ಸ್ಪೆಷಲ್ ದೋಸೆ ತಿನ್ನಲು ಜನರು ಬರುತ್ತಾರೆ. ಇತ್ತ ಶೀನಮಯ್ಯನು ಹಿಗ್ಗಿನಿಂದ ತನ್ನ ಎರಡು ಮಕ್ಕಳನ್ನು ಕಳುಹಿಸುವುದರ ಜೊತೆಗೆ ಉಪನಯನವಾದ ಮೂರು ಮತ್ತು ನಾಲ್ಕನೇ ಮಗ ವರಟನನ್ನು ಕಳುಹಿಸಿದ. ಎಲ್ಲರೂ ಮನೆಯವರೇ ಹೋಟೆಲಲ್ಲಿ ಇದ್ದರೆ ನಂಬಿಕೆಗೆ ನಂಬಿಕೆಯೂ ಆಯಿತು. ಮುಷ್ಟಿ ಮುಷ್ಟಿ ರೂಪಾಯಿಗಳನ್ನು ಮುನಾಫೆಯಾಗಿ ದೋಚಬಹುದು ಎಂಬುದು ಶೀನಮಯ್ಯನ ಖಂಡಿತ ತಿಳುವಳಿಕೆಯಾಗಿತ್ತು(ಶಿವರಾಮ ಕಾರಂತ, ೨೦೧೦, ಪುಟ ೧೧೫). ಶೀನಮಯ್ಯನ ಹಿರಿಯ ಹುಡುಗರು ಬೆಂಗಳೂರನ್ನು ಸೇರಿದ ಆರೆಂಟು ವರ್ಷಗಳೊಳಗಾಗಿ ಈ ನಾಲ್ವರು ಬೆಂಗಳೂರನ್ನು ಸೇರಿದರು. ಅವರ ಬಳೆಪೇಟೆಯ ಹೋಟೆಲು ಬಲಿತ ಬಳಿಕ ತರಗುಪೇಟೆ, ಚಿಕ್ಕಪೇಟೆಗಳಲ್ಲೂ ಕಿರುಹೋಟೆಲುಗಳನ್ನು ಮರಿಹಾಕಿತು(ಅದೇ, ಪುಟ ೧೧೬). ಹೀಗೆ ಶೀನಮಯ್ಯನ ಮಕ್ಕಳು ಮತ್ತು ಭಾವರು ಹೋಟೆಲು ಉದ್ಯಮದಲ್ಲಿ ಪ್ರಗತಿಯನ್ನು ಸಾಧಿಸುತ್ತಾರೆ. ಎರಡು ಮೂರು ವರ್ಷ ಊರಿಗೆ ಬಾರದ ನರಸಿಂಹನು ಒಂದು ದಿನ ಊರಿಗೆ ಬರುತ್ತಾನೆ. ನರಸಿಂಹನಿಂದಲೇ ಬೆಂಗಳೂರಿನ ಮೂರು ಹೋಟೆಲುಗಳ ವೈಭವವನ್ನು ಕೇಳಿ ಹಳ್ಳಿಯಲ್ಲಿದ್ದ ಶೀನಮಯ್ಯರು ಹಿಗ್ಗುತ್ತಾರೆ. ಹೀಗೆ ಬದಲಾದುದು ನರಸಿಂಹ ದೇವರ ಕೃಪೆ ಎಂಬುದಾಗಿ ಕಲ್ಪಿಸಿಕೊಳ್ಳುತ್ತಾರೆ. ನರಸಿಂಹ ಹೋಟೆಲಿನ ಕೆಲಸ-ಕಾರ್ಯಗಳಲ್ಲಿ ಕರಗತಗೊಂಡು ಸಕಲ ವ್ಯವಸ್ಥೆಯುಳ್ಳ ಮಾಲೀಕನಾಗಿ ಹೊರಹೊಮ್ಮಿದ್ದನು. ಹೀಗೆ ಶೀನಮಯ್ಯನ ಮಕ್ಕಳೂ ಹೋಟೆಲು ಮಾಲೀಕರಾಗಿ ಹಳ್ಳಿಯಲ್ಲಿನ ಜನರ ದೃಷ್ಟಿಯಲ್ಲಿ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗುತ್ತಾರೆ.

ಒಟ್ಟಾರೆಯಾಗಿ ನೋಡುವುದಾದರೆ ಹೋಟೆಲು ಆರಂಭಕ್ಕಿಂತ ಮೊದಲು ಸಣ್ಣ ಭೂ ಹಿಡುವಳಿ ಹಾಗೂ ಪೌರೋಹಿತ್ಯವು ಶೀನಮಯ್ಯನ ಕುಟುಂಬದ ಜೀವನೋಪಾಯವಾಗಿತ್ತು. ಆತನ ಮಕ್ಕಳು ನಗರದಲ್ಲಿ ಹೋಟೆಲು ಪ್ರಾರಂಭಿಸಿದ ನಂತರ ಶೀನಮಯ್ಯನ ಹಳ್ಳಿಯ ಬದುಕಿನಲ್ಲಿ ಸರ್ವರಂಗಗಳಲ್ಲಿಯೂ ಗಮನಾರ್ಹ ಬದಲಾವಣೆ ಉಂಟಾಯಿತು. ಸಾಮಾಜಿಕ, ಔದ್ಯೋಗಿಕ, ಆರ್ಥಿಕ ರಂಗಗಳಲ್ಲಿ ಅವನು ಊರಲ್ಲಿ ಪ್ರಗತಿಯನ್ನು ಸಾಧಿಸುವಂತಾಯಿತು.

ಕಾದಂಬರಿಯಲ್ಲಿನ ಕಿಟ್ಟಿ ಉಪಾಧ್ಯಾಯ ಮತ್ತೊಬ್ಬ ಹೋಟೆಲು ಮಾಲೀಕನಾಗಿ ಕಂಡು ಬರುತ್ತಾನೆ. ಹೋಟೆಲು ಆರಂಭದಿಂದಲೇ ಸುಬ್ರಾಯ ಉಪಾಧ್ಯಾಯನ ಮಗ ಕಿಟ್ಟಿಯು ಅದರ ಯಜಮಾನನಾಗಿದ್ದ. ಗುಡಿಸಿಲಿನಂತಹ ಕಟ್ಟಡದಲ್ಲಿ ಹೋಟೆಲಿನ ಅಡುಗೆ ಮನೆ ಛಾವಣಿ ಎಲ್ಲವೂ ಅಡಕಗೊಂಡಿತ್ತು. ಇಲ್ಲಿಯೇ ರಾಮ ಐತಾಳರ ಮಗ ಲಕ್ಷ್ಮೀ ನಾರಾಯಣನ ವಿದ್ಯಾಭ್ಯಾಸದ ಕಾರಣಕ್ಕಾಗಿ ಹೋಟೆಲಿನ ಆಶ್ರಯ ಪಡೆದುಕೊಂಡಿದ್ದನು. ಕಿಟ್ಟಿ ಬೇರೆ ಹೋಟೆಲಿನಂತವನಲ್ಲ, ಆತ ಅಡುಗೆ ಮಾಡುವುದರಲ್ಲಿ ಉತ್ತಮ ಕೌಶಲ ಹೊಂದಿದ್ದನು. ಹೋಟೆಲಿಗೆ ಬರುವ ಶಾಲಾ ಹುಡುಗರು ಹಾಗೂ ಗಿರಾಕಿಗಳನ್ನು ಕಿಟ್ಟಿ ಆತ್ಮೀಯವಾಗಿ ಕಾಣುತ್ತಿದ್ದನು. ಹೋಟೆಲಿನಲ್ಲಿ ವಿದ್ಯಾಭ್ಯಾಸದ ಸಲುವಾಗಿ ಗ್ರಾಹಕನಾಗಿದ್ದ ಐತಾಳರ ಮಗ ಲಕ್ಷ್ಮೀನಾರಾಯಣನ ಬಗೆಗೆ ಹೆಚ್ಚು ಮುತುವರ್ಜಿ ವಹಿಸುತ್ತಿದ್ದನು. ದಿನಗಳೆದಂತೆ ಕಿಟ್ಟಣ್ಣನ ಹೋಟೆಲು ಮೂರು ವರ್ಷಗಳಲ್ಲಿ ಲಾಭದಾಯಕವಾಗಿ ಸಾಗಿತ್ತು. ಹಾಗಾಗಿ ಅನುಕೂಲವಾಗಿರುವ ಬಾಡಿಗೆ ಮನೆಯೊಂದನ್ನು ಹಿಡಿಯಲು ಆತ ಮುಂದಾಗುತ್ತಾನೆ. ಮುಂದೆ ಮದುವೆಯನ್ನು ಮಾಡಿಕೊಳ್ಳುತ್ತಾನೆ.

ಕಾದಂಬರಿಯಲ್ಲಿನ ಸನ್ನಿವೇಶಗಳ ಮೂಲಕ ಕಿಟ್ಟಿಯ ಹೋಟೆಲು ವ್ಯವಹಾರದ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. "ನೀವು ಎಲ್ಲೆಲ್ಲಿ ಯಾವ ಯಾವ ಜಾತಿಯವರಲ್ಲಿ ಕಾಫಿ-ತಿಂಡಿ ತಿನ್ನುವ ಬದಲು ನಾನೇ ಹೋಟೆಲಿನ ಏರ್ಪಾಡು ಮಾಡುತ್ತೇನೆ ಎಂದು ತನ್ನಲ್ಲಿಗೆ ಬರುವವರಿಗೆ ಹೇಳತೊಡಗಿದನು. ಬೆಂಗಳೂರಿಗೆ ಹೋಗಿ ಬಂದ ಒಬ್ಬ ಗೆಳೆಯನನ್ನು ಕೂಡಿಕೊಂಡು ಊಟದ ಮಗ್ಗುಲಿಗೇನೇ ಕಾಫಿ ಹೋಟೆಲೊಂದನ್ನು ಸ್ಥಾಪಿಸಿದನು"(ಅದೇ, ಪುಟ ೧೭೪). ಸಂಪ್ರದಾಯಸ್ಥರ ಆಗಿನ ಕಾಲದಲ್ಲಿ ಕೋಟಾ ಬ್ರಾಹ್ಮಣರನ್ನು ಕೊಂಕಣಸ್ಥರ ಹೋಟೆಲಿನಿಂದ ಕಾಯ್ದಂಥ ಮಹಾಧರ್ಮ ಕಾರ್ಯ ಕಿಟ್ಟನಿಗೆ ಸಲ್ಲುತ್ತದೆ.

ಇದುವರೆಗೆ ಅಭಿವೃದ್ಧಿಯತ್ತ ಸಾಗುತ್ತಿದ್ದ ಕಿಟ್ಟಿಯ ಹೋಟೆಲು ವ್ಯವಹಾರ ಮುಂದೆ ಕಾರಣಾಂತರಗಳಿಂದಾಗಿ ಸ್ವಲ್ಪ ಹಿನ್ನಡೆಯಾಗುತ್ತದೆ. ಕಿಟ್ಟುವಿನ ಮಡದಿಯ ಸಂಗವನ್ನು ಲಚ್ಚನ ಗೆಳೆಯ ಜನ್ನಾ ಸಾಧಿಸಿಕೊಂಡಿದ್ದನು. ಮತ್ತೊಂದು ಕಡೆ ಕಿಟ್ಟುವಿನ ಹೋಟೆಲಿನ ಕಥೆ ತೀರಾ ಕೆಟ್ಟಿತ್ತು. ಕಾಫಿ ಹೋಟೆಲಿನ ಪಾಲುದಾರಿಕೆಯು ಸಮನಾಗಿ ನಡೆಯುತ್ತಿರಲಿಲ್ಲ. ಅದನ್ನು ಮುಚ್ಚುತ್ತಾನೆ. ಇದರಿಂದ ಊಟದ ಹೋಟೆಲಿನಲ್ಲಿಯೇ ಹಗಲೆಲ್ಲ ಇರಬೇಕಾಯಿತು. ಇದರಿಂದಾಗಿ ಕಿಟ್ಟಿಯ ಹೆಂಡತಿ ಜಲಜಮ್ಮನ ಯಜಮಾನಿಕೆಯು ಅರ್ಧ ಕಿಟ್ಟುವಿನ ಕೈಯಲ್ಲಿ ಬಂದು ತಲುಪಿದವು. ಗ್ರಾಹಕರಾಗಿದ್ದ ಲಚ್ಚ-ಜನ್ನನಲ್ಲಿ ಅನುಮಾನ ಅಸೂಯೆಗಳು ಕೆರಳಿ ಜಲಜಮ್ಮನನ್ನು ಕಾರಣವಿಲ್ಲದೆ ಕಿಟ್ಟಿ ಹೋಟೆಲಲ್ಲಿ ಹೊಡೆಯುತ್ತಿದ್ದನು. ಹೆಂಡತಿಯೆಂಬ ಮಾನಸಿಕ ಕ್ಲೇಶವು ಬೆಳೆಯುತ್ತದೆ. ಕಿಟ್ಟಿಯ ವ್ಯಾವಹಾರಿಕ ಮನಸ್ಸಿನ ಮೇಲೆ ಬೀರಿದ ಪರಿಣಾಮವನ್ನು ಇಲ್ಲಿ ಗಮನಿಸಬಹುದಾಗಿದೆ. "ತನ್ನ ಮಡದಿಯ ಮೇಲೆ ಬಹಿರಂಗವಾಗಿ ರೇಗಿದರೆ ನಾಳೆ ಹೋಟೆಲನ್ನು ಮುಚ್ಚಿ ತಾನು

ಅಡುಗೆ ಕೆಲಸಕ್ಕೆ ಹೋಗಬೇಕಾದೀತು. ಈ ವಿಚಾರ ತಂದೆ ಸುಬ್ರಾಯ ಉಪಾಧ್ಯಾಯರಿಗೆ ತಿಳಿದರೆ ಇನ್ನೊಂದು ಮರುಮದುವೆಯೇ ಆಗಬೇಕಾದೀತು. ಅಂತು ಹೋಟೆಲಿನ ಸಂಪಾದನೆಗೊಂದು ಕೊನೆ ಬರುವಂತೆ ಕಂಡಿತು. ಆದುದರಿಂದ ಇದ್ದ ಸ್ಥಿತಿಯಲ್ಲಿ ತೃಪ್ತಿಯನ್ನು ಕಾಣಲು ಅವನು ತನ್ನ ಮನಸ್ಸನ್ನು ಅಡ್ಡಹಾದಿಗೆ ಹರಿಯಬಿಟ್ಟನು"(ಅದೇ, ಪುಟ ೧೭೮). ಇಲ್ಲಿ ಮುಖ್ಯವಾಗಿ ಕಿಟ್ಟಪ್ಪನಿಗೆ ಜಲಜೆಯಲ್ಲಿನ ಹಕ್ಕಿನಿಂದ ದೊರೆತ ಪ್ರೇಮ ಕುಸಿದು ಕಾಮವು ತನ್ನ ಸೇಡು ತೀರಿಸಿಕೊಂಡದ್ದನ್ನು ಗಮನಿಸ ಬಹುದಾಗಿದೆ.

ಲಕ್ಷ್ಮೀನಾರಾಯಣನು ಹೋಟೆಲು ಮಾಲೀಕನಾಗಿ ಹಲವು ಸಂಕಷ್ಟಗಳಿಗೆ ಈಡಾದದ್ದನ್ನು ಕಾದಂಬರಿಯು ಚಿತ್ರಿಸಿರುತ್ತದೆ. ಮಾನಸಿಕವಾಗಿ ಸಾಲದ ಒತ್ತಡದಿಂದ ನಾಗವೇಣಿಯ ತಂದೆ ಕೊಟ್ಟ ಹಣಕ್ಕೆ ಅವನು ತೊಂದರೆ ಕೊಡಲು ತೊಡಗಿದನು. ಇದರಿಂದ ಅವಳು ತನ್ನ ಹಣವನ್ನು ದಂಡವಾಗಿ ಅವನಿಗೆ ಕೊಡಬೇಕಾಗಿ ಬಂತು. ಈ ದಂಡದ ಹಿಂದೆ ಇನ್ನೂ ಎರಡು ಮೂರು ವಾರೆಂಟುಗಳು ಬಂದವು. ಲಕ್ಷ್ಮೀನಾರಾಯಣನು ಬೌರಿಂಗ್‌ಪೇಟೆಯಲ್ಲಿ ಹೋಟೆಲುಗಳನ್ನು ತೆರೆದು ಮಾಡಿದ ಸಾಲಗಳು, ಬಳ್ಳಾರಿಯಲ್ಲಿದ್ದಾಗ ಮಾಡಿದ ಸಾಲಗಳು ಎಲ್ಲವೂ ಕ್ರಮೇಣವಾಗಿ ಊರಿಗೆ ಬೆನ್ನಟ್ಟಿ ಬಂದವು. ಅಲ್ಲಿಂದ ಸಾಲದ ತಗಾದೆಗಳು ಹಾಗೂ ಜೈಲಿಗೆ ಕಳುಹಿಸುವ ಬೆದರಿಕೆಗಳು ಹೊರಟವು.

ವಕೀಲರು ಮಗಳ ಮನೆಗೆ ಬಂದು ಹೋಟೆಲು ಮಾಲೀಕನಾಗಿ ಲಕ್ಷ್ಮೀನಾರಾಯಣನ ಸ್ಥಿತಿಗತಿಯನ್ನು ಅವನ ಕುಟುಂಬಸ್ಥರಲ್ಲಿ ಈ ಮುಂದಿನಂತೆ ವ್ಯಕ್ತಪಡಿಸುತ್ತಾರೆ. "ಅಲ್ಲ, ಮೈಸೂರು ಬೆಂಗಳೂರಿಗೆ ಹೋದಲ್ಲಿ ಹೋಟೆಲನ್ನು ಇರಿಸುವುದು ಸಾಲ ಮಾಡುವುದು, ಜುಗಾರಿ ಮತ್ತೊಂದು ಎಂದು ಸಾಲ ಮಾಡಿ ಓಡುವುದು. ಇದೇ ಕೆಲಸ ನಡೆದಿದೆಯಂತೆ. ಮೊನ್ನೆ ನಾನು ಇಲ್ಲದಾಗ ನಮ್ಮ ಸದಾಶಿವನನ್ನು ಅರಸಿಕೊಂಡು ಬಂದನಂತೆ. ಕೊನೆಗೆ ಊರಿಗೆ ಬರಲು ಮೋಟಾರಿಗೆ ಹಣ ಬೇಕೆಂದು ಅವನನ್ನು ಕೇಳಿ ಐದು ರೂಪಾಯಿ ಕೊಂಡು ಹೋದನಂತೆ"(ಅದೇ, ಪುಟ ೨೨೧). ಹೀಗೆ ವಿವಿಧೆಡೆಗಳಲ್ಲಿ ಹೋಟೆಲು ಮಾಲೀಕನಾಗಿ ಸಾಲಗಾರನಾಗಿರುವ ಸನ್ನಿವೇಶವನ್ನು ಕಾದಂಬರಿಯು ಚಿತ್ರಿಸುತ್ತದೆ.

ಹೀಗೆ ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ಮುಖ್ಯವಾಗಿ ಗ್ರಾಮೀಣ ಪ್ರದೇಶಕ್ಕೆ ಸೇರಿದ ಮೂರು ವಿವಿಧ ಕುಟುಂಬಗಳ ಹೋಟೆಲು ವ್ಯವಹಾರಗಳ ಏಳು-ಬೀಳುಗಳ ಕಥೆಯಿದೆ.

ಬಸವರಾಜ ಕಟ್ಟೀಮನಿ ಅವರ 'ಬೀದಿಯಲ್ಲಿ ಬಿದ್ದವಳು' ಕಾದಂಬರಿಯಲ್ಲಿ ಬಸಲಿಂಗವ್ವ ಚಾದಂಗಡಿ ಮಾಲಕಿಯಾಗಿದ್ದಾಳೆ. ಆಕೆ ಅನಾಥೆಯಾಗಿದ್ದ ಯಮುನಾಳ ಹಸಿವನ್ನು ಇಂಗಿಸುವುದರ ಮೂಲಕ ತನ್ನ ಉದಾರಗುಣವನ್ನು ಮೆರೆಯುತ್ತಾಳೆ. ನಾಲ್ಕು ಗುಡಿಸಲುಗಳ ನಡುವಿದ್ದ ಸಣ್ಣ

ಗಲ್ಲಿಯಲ್ಲಿ ಚಾದಂಗಡಿ ಇಟ್ಟುಕೊಂಡಿದ್ದ ಬಸಲಿಂಗವ್ವ ಅಲ್ಲೇ ಯಮುನಾಳಿಗೂ ಆಶ್ರಯ ನೀಡುತ್ತಾಳೆ. ಸ್ವಂತ ಮಕ್ಕಳಿಲ್ಲದ ಬಸಲಿಂಗವ್ವ ಅನಾಥೆಯಾಗಿದ್ದ ಯಮುನಾಳನ್ನು ತನ್ನ ಮಗಳೆಂದು ಭಾವಿಸಿ ಸಲಹುತ್ತಾಳೆ. ತನ್ನ ಚಾದಂಗಡಿಯಲ್ಲಿ ಇತರೆ ಗಿರಾಕಿಗಳು ನಡೆಸುತ್ತಿದ್ದ ಇಸ್ಪೀಟಾಟ ಹಾಗೂ ಇನ್ನಿತರ ಕಾನೂನುಬಾಹಿರ ಚಟುವಟಿಕೆಗಳತ್ತ ಗಮನ ಹರಿಸದಂತೆ ಯಮುನಾಳಲ್ಲಿ ಆತ್ಮಸ್ಥೈರ್ಯ ತುಂಬುತ್ತಾಳೆ. ಒಟ್ಟಾರೆ ಬಸಲಿಂಗವ್ವ ಚಾದಂಗಡಿಯ ಮುಖೇನ ಯಮುನಾಳ ಜೀವನದ ಅಸ್ತಿತ್ವ ಕಾಪಾಡಿಕೊಳ್ಳಲಿಕ್ಕೆ ಸಹಾಯಕಳಾಗಿ ನಿಲ್ಲುತ್ತಾಳೆ. ಬಸಲಿಂಗವ್ವ ಕೇವಲ ಹೋಟೆಲು ವ್ಯವಹಾರಕ್ಕೆ ಸೀಮಿತವಾಗದೆ ಮಾನವೀಯ ಗುಣಗಳನ್ನು ಅಳವಡಿಸಿಕೊಂಡಿರುತ್ತಾಳೆ. ಹೀಗೆ ಚಾದಂಗಡಿ ಮಾಲೀಕಳಾದ ಬಸಲಿಂಗವ್ವನು ಅನಾಥೆಯಾದ ಯಮುನಾಳಿಗೆ ಆಶ್ರಯ ಕೊಡುವುದರ ಮೂಲಕ ಮಕ್ಕಳಿಲ್ಲದ ಕೊರಗನ್ನು ನೀಗಿಸಿಕೊಳ್ಳುತ್ತಾಳೆ. ಇದು ಚಾದಂಗಡಿಯ ಮುಖೇನ ಆಕೆಯ ಬದುಕಿನಲ್ಲಾದ ಒಂದು ಸ್ಥಿತ್ಯಂತರವೆನ್ನಬಹುದು.

ನಾ. ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯಲ್ಲಿ ಸಾಂಪ್ರದಾಯಿಕ ಕೃಷಿಕರು ಆಧುನಿಕ ಪ್ರತೀಕವಾದ ಹೋಟೆಲು ಮಾಲೀಕರಾಗಿರುವುದನ್ನು ಚಿತ್ರಿಸಲಾಗಿದೆ. ಕಾದಂಬರಿಯಲ್ಲಿ ಬರುವ ತ್ಯಾಂಪಣ್ಣ ರೈ, ಸುಂದರ ಹೆಗ್ಡೆ, ರಮಾನಂದ ಹಾಗೂ ಪ್ರಶಾಂತ ಮುಂತಾದವರು ಮುಂಬಯಿ ನಗರದಲ್ಲಿ ಹೋಟೆಲುಗಳ ಮಾಲೀಕರಾಗಿರುತ್ತಾರೆ. ಅವರು ತುಳುನಾಡಿನ ಗ್ರಾಮಗಳಲ್ಲಿ ಕೃಷಿಕರಾಗಿದ್ದವರು. ಅವರು ಹೋಟೆಲು ಮಾಲೀಕರಾಗಿರುವ ಸಂಗತಿ ಒಂದು ರೀತಿಯ ಸ್ಥಿತ್ಯಂತರವಾಗಿದೆ. ಈ ನಾಲ್ವರು ಹೋಟೆಲು ಮಾಲೀಕರು ಸಾಂತೇರುಗುತ್ತಿನ ಸ್ವರೂಪವನ್ನು ಬದಲಾಯಿಸಿ ಬಿಡುತ್ತಾರೆ. ನಾಲ್ಕು ಮಂದಿ ಪ್ರತಿಷ್ಠಿತ ಹೋಟೆಲುಗಳ ಮಾಲೀಕರಾಗಲು ಹಳ್ಳಿಯ ಸಂಕಷ್ಟದ ಅನುಭವಗಳೇ ಕಾರಣೀಭೂತವಾಗಿರುತ್ತವೆ. ಸುಂದರ ಸಾಂತರುಗುತ್ತಿನಿಂದ ಮುಂಬಯಿಗೆ ಹೋಗಿ ಹದಿನೈದು ವರ್ಷದಲ್ಲಿ ಮೂರು ಹೋಟೆಲುಗಳ ಮಾಲೀಕನಾದದ್ದು ಊರ ಜನರ ಮನಸ್ಸಿಗೆ ಸಂತಸ ತಂದಿತು. ನಾಲ್ಕನೆಯ ಹೋಟೆಲು 'ಲೇಡಿಜ್ ಬಾರ್' ಮಾಲೀಕನಾದಾಗ ತಾಯಿ ಅಂಬಕ್ಕ ಬೆರಗಾಗುತ್ತಾಳೆ. ಏಳನೆಯ ಹೋಟೆಲು 'ಸಾಂತೇರು ಗ್ರೂಫ್ ಆಫ್ ಹೋಟೆಲ್ಸ್' ಉದ್ಘಾಟನೆಯಾದದ್ದು, ಆಮಂತ್ರಣ ಪತ್ರಿಕೆಯಲ್ಲಿ ಹಳ್ಳಿ ಮನೆಯ ಛಾಯಾಚಿತ್ರ ಅಚ್ಚು ಹಾಕಿಸಿದ್ದು ಊರವರಲ್ಲಿ ಮತ್ತೆ ಮತ್ತೆ ನೋಡುವ ಸನ್ನಿವೇಶವನ್ನು ನಿರ್ಮಾಣ ಮಾಡಿತು. ಅಂಬಕ್ಕನ ಮಗಳ ಗಂಡ ರಮಾನಂದನು ಹೋಟೆಲು ಮಾಲೀಕನಾಗಿ ಕಾರನ್ನು ಖರೀದಿಸಿದ್ದಂತೂ ಅಂಬಕ್ಕನಿಗೆ ಮುಗಿಲು ಮುಟ್ಟುವಷ್ಟು ಸಂತೋಷವಾಗಿತ್ತು. ನಗರದ ಈ ಎಲ್ಲಾ ಹೋಟೆಲುಗಳ ಮಾಲೀಕರು ಸಾಂತೇರುಗುತ್ತಿನ ಅಂಬಕ್ಕನ ಕುಟುಂಬ ವರ್ಗದವರೇ ಆಗಿದ್ದರು. ಇವರೆಲ್ಲರೂ ಹಳ್ಳಿ ಮೂಲದವರಾಗಿ ನಗರ ಪ್ರದೇಶದಲ್ಲಿ ಹೋಟೆಲು ಪ್ರಾರಂಭಿಸಿ ತಮ್ಮ ಊರಿನ ಮನೆ ಮತ್ತು ಊರಿನ ಅಭಿವೃದ್ಧಿಗೆ ಕಾರಣೀಭೂತರಾಗಿರುತ್ತಾರೆ.

ಇತ್ತ ಊರಲ್ಲಿ ಮುಸ್ಲಿಂ ಸಮುದಾಯದ ವ್ಯಕ್ತಿಯೊಬ್ಬನು ತನ್ನ ಗ್ರಾಮೀಣ ಪರಿಸರದಲ್ಲೇ ಹೋಟೆಲು ವ್ಯವಹಾರದಲ್ಲಿ ತೊಡಗಿದ್ದನ್ನು ನಿರೂಪಿಸುತ್ತದೆ. ಇಲ್ಲಿ ಆದಂ ಕುಟ್ಟಿಯ ಆರ್ಥಿಕ ಸಹಾಯದಿಂದ ರಘು, 'ರಾಘವೇಂದ್ರ ಭವನ'ದ ಮಾಲೀಕನಾಗಿ ಇಡೀ ಗ್ರಾಮದ ಕರಕುಶಲ ಕರ್ಮಿಗಳಲ್ಲಿ, ಕೃಷಿ ನಿರತ ಕೆಲಸಗಾರರಲ್ಲಿ ಹೊಸ ಆಶಾಭಾವನೆಗಳನ್ನು ಅರಳಿಸುತ್ತಾನೆ. ಹೀಗೆ ತುಳುನಾಡು ಕೃಷಿಸಂಸ್ಕೃತಿಯಿಂದ ಪಲ್ಲಟಗೊಂಡು ನಗರ ಮತ್ತು ಗ್ರಾಮೀಣ ಪರಿಸರದಲ್ಲಿ ಹೋಟೆಲುಗಳ ಮಾಲೀಕರಾಗಿದ್ದನ್ನು ಅವರು ತಮ್ಮ ಊರುಗಳ ಸರ್ವಾಂಗೀಣ ಪ್ರಗತಿಗೆ ಕಾರಣರಾಗಿರುವುದನ್ನು ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ.

ದು.ನಿಂ. ಬೆಳಗಲಿ ಅವರ 'ಕಾತ್ರಾಳ ರತ್ನಿಯ ಚಾದಂಗಡಿ' ಕಾದಂಬರಿಯು ಹೋಟೆಲು ಮಾಲೀಕರ ಬದುಕಿನ ಸ್ಥಿತ್ಯಂತರಕ್ಕೆ ಸೂಕ್ತ ಉದಾಹರಣೆಯಾಗಿದೆ. ಮೊದಲು ರತ್ನಾಳ ಗಂಡ ನಂದೂರಿನಲ್ಲಿ ಊರು ಬಿಟ್ಟು ಬಂದು ಚಿಕ್ಕ ಗುಡಿಸಲಲ್ಲಿ ಚಾದಂಗಡಿ ಪ್ರಾರಂಭಿಸಿದ್ದರು. ಅವನ ಸಾವಿನ ನಂತರದ ಹೋಟೆಲು ಮಾಲೀಕಳಾದ ರತ್ನಿಯು ಕಾದಂಬರಿಯ ನಾಯಕಿಯಾಗಿದ್ದಾಳೆ. ಗ್ರಾಮೀಣ ಪ್ರದೇಶದ ಹೆಣ್ಣುಮಗಳೊಬ್ಬಳು ಮಾಲೀಕಳಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸುವುದೇ ಇಲ್ಲಿನ ಬಹುಮುಖ್ಯ ಸ್ಥಿತ್ಯಂತರವೆನ್ನಬಹುದು. ಕಾಲ ಬದಲಾಗಿದೆ. ರಾಜಕೀಯ, ಸಾಮಾಜಿಕ ಸೌಲಭ್ಯಗಳು ಅನುಕೂಲವಾಗಿವೆ. ಆಧುನಿಕತೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ವ್ಯಾಪಿಸಿದೆ. ಆದರೆ ಹಳ್ಳಿಗಾಡಿನವರ ಗುಣ–ದೋಷಗಳಲ್ಲಿ ವಿಶೇಷ ಬದಲಾವಣೆ ಕಾಣುವುದಿಲ್ಲ. ಸ್ವಾತಂತ್ರ್ಯ ಪೂರ್ವದ ಒಂದು ಬಗೆಯ ಊಳಿಗಮಾನ್ಯ ಪದ್ಧತಿ ಹೊಸ ಕಾನೂನುಗಳಿಂದ ಅಳಿದು ಹೋದಂತೆ ಮೇಲ್ನೋಟಕ್ಕೆ ಕಾಣುತ್ತಿತ್ತು. ಇನ್ನೊಂದು ರೀತಿಯಲ್ಲಿ ಅದೇ ಊಳಿಗಮಾನ್ಯ ಪದ್ಧತಿ ಗ್ರಾಮೀಣ ಪ್ರದೇಶಗಳಲ್ಲಿ ತಲೆಯೆತ್ತಿ ಅಲ್ಲಿ ಅಶಾಂತಿಯನ್ನು ಹರಡುತ್ತಿರುವುದು ಸಾಮಾನ್ಯ ಸಂಗತಿಯಾಗಿತ್ತು. ಇಲ್ಲಿ ರತ್ನಾಳಿಗೆ ತನ್ನ ವೈಯಕ್ತಿಕ ಬದುಕಿನ ಚಿಂತೆಗಿಂತ ಸಾಮಾಜಿಕ ಕಾಳಜಿಯೇ ಅಧಿಕವಾಗಿತ್ತು. ಆಕೆ ಒಂದು ಹಳ್ಳಿಗಾಡಿನ ಅನಕ್ಷರಸ್ಥೆಯಾಗಿದ್ದರೂ ವಿಚಾರವಾದಿ ಯಾಗಿದ್ದಳು. ನಂದೂರ ಗ್ರಾಮಜೀವನದ ನೆಮ್ಮದಿಗೆ ಕಂಟಕಪ್ರಾಯರಾಗಿದ್ದವರ ಬಗೆಗೆ ತಲೆ ಕೆಡಿಸಿಕೊಂಡು ಹಗಲು–ರಾತ್ರಿ ಚಾದಂಗಡಿ ಮಾಲೀಕಳು ಕುದಿಯುತ್ತಿದ್ದಳು. ಒಳಿತಿನ ಸಾಕಾರಮೂರ್ತಿ ಯಾಗಿದ್ದ ರತ್ನಾಳ ಮಾಲೀಕತ್ವದ ಚಾದಂಗಡಿಯೇ ಈ ಕಥೆಯ ಅನೇಕ ಕವಲುದಾರಿಗಳಿಗೆ ನ್ಯಾಯ ನಿರ್ಣಯ ಕೊಡುವ ಮಟ್ಟಕ್ಕೆ ಬೆಳೆದಿತ್ತು. ಊರಿನ ವಿದ್ಯಮಾನಗಳನ್ನು ಕುರಿತು ಚರ್ಚಿಸುವುದಕ್ಕಾಗಿ ಪ್ರತ್ಯೇಕ ಸಮಯವನ್ನು ಮೀಸಲಿಡುತ್ತಿದ್ದ ಆಕೆಯಲ್ಲಿ ಅತ್ಯುತ್ತಮ ಸಮಯಪ್ರಜ್ಞೆಯು ಜಾಗೃತವಾಗಿತ್ತು. ಚಾದಂಗಡಿಯ ಮಾಲೀಕಳಾಗಿದ್ದರಿಂದ ಆತ್ಮವಿಶ್ವಾಸ, ಧೈರ್ಯ ಇವುಗಳಿಗೆ ಜೀವ ಕೊಡುವ ಹಾಗೆ ಆಕೆ ಪರಿಪಕ್ವವಾಗಿದ್ದಳು. ಚಾದಂಗಡಿಯ ಭಾಗವಾಗಿ ಹಲವು ಗ್ರಾಹಕರ ಬೆಂಬಲದೊಂದಿಗೆ ರತ್ನಾಳಲ್ಲಿ ನವಚೈತನ್ಯ ಮೂಡಿದಂತಾಗಿತ್ತು. ಗ್ರಾಹಕರು ಊರಿನ ವಿದ್ಯಮಾನಗಳ

ಕುರಿತು ಚರ್ಚಿಸುವ ಸಂದರ್ಭದಲ್ಲಿ ರತ್ನಿಯು ಅವರೊಂದಿಗೆ ಧ್ವನಿಗೂಡಿಸುತ್ತಿದ್ದಳು. ಘಟನೆಯ ಬಗ್ಗೆ ತನ್ನದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಳು. ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರಕ್ಕೆ ಸಹಾಯ ಮಾಡುವ ಮನಸ್ಥಿತಿ ಅವಳಲ್ಲಿ ಬೆಳೆದಿತ್ತು. ಚಾದಂಗಡಿಗೆ ಬಂದ ಬಹುತೇಕ ಗ್ರಾಹಕರನ್ನು ಅವಕಾಶವಾದದಿಂದ ಆದರ್ಶವಾದಿಗಳನ್ನಾಗಿ ಮಾರ್ಪಡಿಸುವ ಗುಣವು ಆಕೆಯಲ್ಲಿತ್ತು. ಊರಿನಲ್ಲಿ ಘಟಿಸುವ ಸಂಘರ್ಷಗಳಿಗೆ ಸಹಾನುಭೂತಿ ವ್ಯಕ್ತಪಡಿಸುತ್ತಿದ್ದಳು. ಚಾದಂಗಡಿ ಮಾಲೀಕಳಾಗಿ ಆರ್ಥಿಕ, ಮಾನಸಿಕ, ಬೌದ್ಧಿಕ ಸುಧಾರಣೆಯನ್ನು ವ್ಯಕ್ತಿತ್ವದಲ್ಲಿ ಹೊಂದಿದ್ದಳು.

ವ್ಯಾಸರಾವ್ ನಿಂಜೂರ ಅವರ 'ಶ್ರೀಚಾಮುಂಡೇಶ್ವರಿ ಭವನ' ಕೃತಿಯು ಹೆಸರೇ ಸೂಚಿಸು ವಂತೆ ಹೋಟೆಲಿನ ಚಿತ್ರಣವುಳ್ಳ ಇನ್ನೊಂದು ಮಹತ್ವದ ಕಾದಂಬರಿಯಾಗಿದೆ. ಶ್ರೀಚಾಮುಂಡೇಶ್ವರಿ ಭವನ ಎಂಬ ಹೋಟೆಲು ಕೆಮ್ಮಣ್ಣುವಿನ ಹಾಗೂ ಆಸುಪಾಸಿನ ಹಳ್ಳಿ ಜನರ ಆಕರ್ಷಣೆಯ ಕೇಂದ್ರವಾಗಿದೆ. ಇದರ ಮಾಲೀಕತ್ವದಲ್ಲಿ ಬೆಳೆದು ನಿಂತವರು ವಾಸುದೇವ ಭಟ್ಟರು. ಹೋಟೆಲು ಮಾಲೀಕನಾದದ್ದರಿಂದ ಹಳ್ಳಿಯ ಗ್ರಾಹಕರ ಹಾಗೂ ಜನಸಾಮಾನ್ಯರ ಜೊತೆ ಮಾತನಾಡುವ ಕಲೆ ಅವರಿಗೆ ಕರಗತವಾಗಿತ್ತು. ಭವನದಲ್ಲಿ ಗ್ರಾಮೀಣ ಜನರ ಸಹಜ ಮಾತುಕತೆಗಳಿಗೆ ಭಟ್ಟರು ವೈಚಾರಿಕತೆಯ ಹಾಗೂ ತಾತ್ವಿಕತೆಯ ಲೇಪ ಕೊಡುವಂತಾಗಿದ್ದರು. ನಗರಪ್ರದೇಶಗಳ ಕೆಲವು ಹೋಟೆಲು ಮಾಲೀಕರ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡಿದ್ದರು. ಗ್ರಾಮೀಣ ಪ್ರದೇಶದ ಹೋಟೆಲು ಮಾಲೀಕರಲ್ಲಿ 'ಶ್ರೀ ಚಾಮುಂಡೇಶ್ವರಿ ಭವನ'ದ ವಾಸುದೇವಭಟ್ಟರೆಂಬ ಅಭಿಪ್ರಾಯ ಅಲ್ಲಿಗೆ ಬರುವ ಗ್ರಾಹಕರಲ್ಲಿತ್ತು. ಭವನಕ್ಕೆ ಬರುವ ಮಹಿಳಾ ಗ್ರಾಹಕರಿಗೆ ವಾಸುದೇವಭಟ್ಟರು ಲಿಂಗಸಮಾನತೆಯ ಸಾಕಾರಮೂರ್ತಿಯಂತೆ ಭಾಸವಾಗು ತ್ತಿದ್ದರು. ಬಹುಧರ್ಮೀಯ ಉದ್ಯೋಗಸ್ಥ ಮಹಿಳಾಮಣಿಗಳ ವಿಶ್ವಾಸವನ್ನು ಗಳಿಸಿಕೊಂಡಿದ್ದರು. ಭವನದ ನಿರ್ವಹಣೆಯಲ್ಲಿ ವಾಸುದೇವಭಟ್ಟರು ಧರ್ಮಾತೀತ ಮತ್ತು ಜಾತ್ಯತೀತ ಮನೋಭಾವವನ್ನು ಹೊಂದಿದವರಾಗಿದ್ದರು.

ಚಾಮುಂಡೇಶ್ವರಿ ಭವನದ ಮಾಲೀಕರಾಗಿ ವಾಸುದೇವಭಟ್ಟರು ಹಳ್ಳಿಯ ರೂಢಿಯನ್ನು ತುಸುವಾದರೂ ಸಡಿಲಿಸುವ ಒಂದು ಸಾಧನ ಮಾಡಿಕೊಂಡಿದ್ದಾರೆ. ಮಾಲೀಕ ವಾಸುದೇವ ಭಟ್ಟರ ಹೋಟೆಲಿನ ವ್ಯವಹಾರದ ಮೂಲಕ ಲೇಖಕರು ಅವರ ಗ್ರಾಮೀಣ ಪರಿಸರಪ್ರಜ್ಞೆಯನ್ನು ಕಾದಂಬರಿಯಲ್ಲಿ ದಾಖಲಿಸಿದ್ದಾರೆ. ಹೋಟೆಲಿನ ನಿತ್ಯ ಪ್ರವೇಶಿಸುವ ಗ್ರಾಹಕರ ಸ್ವಭಾವದ ಚಿತ್ರಣವಿದೆ. ತಂದೆ ಸೀನಪ್ಪಯ್ಯ ಜಮದಗ್ನಿಯ ಅವತಾರವೆನಿಸಿದರೂ ಕುಟುಂಬವ್ಯವಸ್ಥೆ ಕೆಡದಂತೆ ವಾಸುದೇವಭಟ್ಟರು ಹೋಟೆಲು ಮಾಲೀಕರಾಗಿ ಕೆಮ್ಮಣ್ಣುವಿನಲ್ಲಿ ಪರಿವರ್ತನೆ ಹೊಂದುತ್ತಾರೆ. ಮುಂದೆ ವಾಸುದೇವಭಟ್ಟರು ಹೋಟೆಲು ಮಾಲೀಕರಾಗಿ ಹಲವು ಸಂಕಷ್ಟಗಳಿಗೆ ಈಡಾಗುತ್ತಾರೆ. ಕ್ರಿಶ್ಚಿಯನ್ ಲೂಸಿಯ ಅತ್ಯಾಚಾರದ ಅಪವಾದಕ್ಕೀಡಾಗಿ ಊರಿನ ಜಾತಿಯವರ ಕೆಂಗಣ್ಣಿಗೆ ಗುರಿಯಾಗುತ್ತಾರೆ. ಹೋಟೆಲಿಗೆ ಯಾರೂ ಹೋಗದಂತೆ ಅವರ ಜಾತಿಯವರು ಕಟ್ಟಳೆ ವಿಧಿಸುತ್ತಾರೆ.

ಧರ್ಮದ ಹೆಸರಿಗೆ ಕಳಂಕ ತಂದ ವ್ಯಕ್ತಿಯಾಗಿ ಊರವರಿಗೆ ಚರ್ಚೆಯ ವಿಷಯ ವಸ್ತುವಾಗುತ್ತಾರೆ. ಊರಿನ ಪ್ರಮುಖರು ಜಾತಿ ಮತ್ತು ಧರ್ಮದಿಂದ ದಿಗ್ಬಂಧನವನ್ನು ವಿಧಿಸುತ್ತಾರೆ. ಹೀಗೆ ಹೋಟೆಲು ವ್ಯವಹಾರದ ಮೂಲಕ ಮಾಲೀಕರಾದ ವಾಸುದೇವಭಟ್ಟರು ತಮ್ಮ ಬದುಕಿನಲ್ಲಿ ಹಲವು ಸ್ಥಿತ್ಯಂತರಗಳಿಗೆ ಒಳಗಾಗುತ್ತಾರೆ.

ವ್ಯಾಸರಾಯ ಬಲ್ಲಾಳರ 'ಹೆಜ್ಜೆ' ಕಾದಂಬರಿಯಲ್ಲಿ ಗಂಗಾಧರ ಹೋಟೆಲು ಮಾಲೀಕನಾಗಿರುತ್ತಾನೆ. ವಾಸ್ತವವಾಗಿ ಸಕಲೇಶಪುರದ ಹೋಟೆಲಿಗೆ ಪೂರ್ವಸಿದ್ಧತೆಯನ್ನು ಚೆನ್ನಾಗಿಯೇ ಮಾಡಿಕೊಂಡಿದ್ದ. ಇದಕ್ಕೆ ನೆರವಿಗೆ ಬಂದವರು ಅವನ ಹೆಂಡತಿ, ತಂದೆ. ಅಲ್ಲಿ ಹೋಟೆಲಿಗೆಂದೇ ಹೇಳಿ ಮಾಡಿಸಿದಂತಿದ್ದ ಎರಡು ದೊಡ್ಡ ಕೋಣೆಗಳು ತೋಟಕ್ಕೆ ಅಂಟಿಕೊಂಡಿದ್ದವು. ಇದರಿಂದ ನಿಶ್ಚಯಿಸಿದ ಶುಭಸಂದರ್ಭದಲ್ಲಿ ಗಂಗಾಧರನ 'ಬ್ರಾಹ್ಮಣರ ಉಡುಪಿ ಹೋಟೆಲು' ಆರಂಭಿಸಿದನು. ಶಾಸ್ತ್ರಿಗಳ ಹಿರಿಯ ಮಗನಾಗಿ ಸಂಪ್ರದಾಯಗಳಿಗೆ ತೋರಿಕೆಯ ಗೌರವವನ್ನು ಅಷ್ಟೇ ಆತ ಕೊಡುತ್ತಿದ್ದನು. ಹೋಟೆಲು ವ್ಯವಹಾರದ ಆರ್ಥಿಕ ಲಾಭದಿಂದಾಗಿ ಗಂಗಾಧರ ತಕ್ಕಮಟ್ಟಿನ ಗೌರವವನ್ನು ಸಂಪಾದಿಸಿಕೊಂಡಿದ್ದನು. ಹೋಟೆಲು ಕೆಲಸಕ್ಕೆ ತಾನು ಸಾಲದೆಂಬಂತೆ ಇನ್ನೂ ಎರಡು ಹುಡುಗರನ್ನು ಇಟ್ಟುಕೊಳ್ಳುವ ಹಾಗೆ ವ್ಯವಹಾರದಲ್ಲಿ ಆತ ಪ್ರಗತಿಯನ್ನು ಸಾಧಿಸಿದ್ದನು.

ಮೊಗಳ್ಳಿ ಗಣೇಶ್ ಅವರ 'ಅನಾದಿ' ಕಾದಂಬರಿಯು ಹೋಟೆಲು ಮಾಲೀಕರ ನೆಲೆಯಲ್ಲಾಗುವ ಸ್ಥಿತ್ಯಂತರವನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ಗಂಡನಿಲ್ಲದಿದ್ದರೂ ಮಲ್ಲಜ್ಜಮ್ಮ ಹೋಟೆಲಿನ ಮಾಲೀಕಳಾಗಿ ರುಚಿಯಾದ ತಿಂಡಿ ತಯಾರಿಸುವ ಕಲೆಯಲ್ಲಿ ಪರಿಣತಳಾಗಿದ್ದಳು. ಗಂಡನ ಅನುಪಸ್ಥಿತಿ ನಿಭಾಯಿಸಿಕೊಳ್ಳುವಂತೆ ಆಕೆ ಮಾರ್ಪಾಡುಗೊಂಡಿದ್ದಳು. ಊರಿನಲ್ಲಿ ಒಂಟಿ ಮಹಿಳೆಯಾಗಿದ್ದರೂ ಹೋಟೆಲು ಪ್ರಾರಂಭಿಸುವುದರ ಮೂಲಕ ಮಲ್ಲಜ್ಜಮ್ಮ ಜೀವನೋಪಾಯ ಕಂಡುಕೊಂಡಿದ್ದಳು. ಹಳ್ಳಿಯಲ್ಲಿ ಗ್ರಾಹಕರು ದೋಸೆ ಚಟ್ನಿಯ ಮಹಿಮೆ ಕೊಂಡಾಡುವಂತೆ ತಿಂಡಿ–ತಿನಿಸುಗಳ ತಯಾರಿಕೆಯಲ್ಲಿ ಆಕೆ ಪರಿಣತಿಯನ್ನು ಹೊಂದಿದ್ದಳು. ಹೋಟೆಲಿನಲ್ಲಿ ಪಕ್ಷಿಗಳ ಕೂಟವನ್ನು ಸ್ಥಾಪಿಸಿ ಅವುಗಳ ಸಂತತಿ ಬೆಳೆಯಲು ಕಾರಣಳಾಗಿದ್ದಳು. ಚಾದಂಗಡಿಯ ಕೆಲಸಕಾರ್ಯಗಳಿಗಾಗಿ ಮುಂಜಾನೆ ಊರಿನ ಜನರಿಗಿಂತ ಮೊದಲೇ ಎಚ್ಚರಗೊಳ್ಳುವ ಪರಿಪಾಟ ಬೆಳೆಸಿಕೊಂಡಿದ್ದಳು. ಹೋಟೆಲಿನ ಕೆಲಸ ಕಾರ್ಯಗಳಲ್ಲಿ ತಾಪತ್ರಯಗಳು ಬಂದೊದಗಿದರೂ ಸಾಕುಮಗಳು ಲಕ್ಷ್ಮಿಯ ಬಗೆಗೆ ಮಮಕಾರವು ಕಡಿಮೆಯಾಗಿರಲಿಲ್ಲ. ಅವಳ ತಂದೆ ತಾಯಿಗಳಿಗಿಂತ ಮಲ್ಲಜ್ಜಮ್ಮಳ ಪ್ರೀತಿಗೆ ಪಾತ್ರಳಾಗಿದ್ದಳು. ಹೀಗೆ ವಿಧವೆಯಾದ ಮಲ್ಲಜ್ಜಮ್ಮಳು ತನ್ನ ಸ್ವಂತ ಪರಿಶ್ರಮದಿಂದ ಗ್ರಾಮೀಣ ಪ್ರದೇಶದಲ್ಲಿ ಹೋಟೆಲೊಂದನ್ನು ಪ್ರಾರಂಭಿಸಿ ಬದುಕನ್ನು ಕಟ್ಟಿಕೊಂಡುದು ಹೆಣ್ಣೊಬ್ಬಳ ಸ್ವಾವಲಂಬನೆಯ ಬದುಕಿಗೆ ಉತ್ತಮ ಉದಾಹರಣೆಯಾಗಿ ನಿಲ್ಲುತ್ತದೆ. ತನ್ನ ಸ್ವಂತ ಪರಿಶ್ರಮದಿಂದಲೇ ಆಕೆ ಬದುಕಿನಲ್ಲಿ ಸ್ಥಿತ್ಯಂತರವನ್ನು ಹೊಂದುತ್ತಾಳೆ.

ಮಲ್ಲಜ್ಜಮ್ಮನ ಹೋಟೆಲು ಮೇಲ್ಜಾತಿಗೆ ಸೀಮಿತವಾಗಿತ್ತು. ಇನ್ನೊಂದು ತಾತನ ಹೋಟೆಲು ಕೆಳವರ್ಗದವರಿಗಾಗಿ ಪ್ರಾರಂಭವಾಗಿತ್ತು. ಇದರ ಮೂಲಕ ತಾತ ಸಿಹಿತಿಂಡಿಗಳನ್ನು ಮಾಡುವುದರಲ್ಲಿ ಪ್ರಾವೀಣ್ಯತೆ ಪಡೆದವನಾಗಿದ್ದನು. ಬರುಬರುತ್ತಾ ಸಿಹಿತಿಂಡಿಗಳಿಗೆ ಗ್ರಾಹಕರು ಮನಸೋಲುವ ಹಾಗೆ ತಾತ ತಯಾರಿಸುತ್ತಿದ್ದ. ಇದರಿಂದ ವ್ಯಾಪಾರ ಭರದಿಂದ ಸಾಗಿ ಲಾಭದಂಶವನ್ನು ಪಡೆಯುವಂತಾಗಿದ್ದನು. ತಾತನು ಊರಿನ ವಿದ್ಯಮಾನಗಳ ಬಗೆಗೆ ಕಥೆ ಕಟ್ಟಿ ಹೇಳುತ್ತಿದ್ದ. ಅಮಾಸನ ಕಥನಶೈಲಿಗೆ ಆತ ಮಾರುಹೋಗಿದ್ದನು. ಈತನ ಹೋಟೆಲಿನಲ್ಲಿ ಜಾತ್ಯತೀತತೆ ಎದ್ದು ಕಾಣುತಿತ್ತು. ತಾತ ರಾಷ್ಟ್ರೀಯ ನಾಯಕಿ ಇಂದಿರಾ ಗಾಂಧಿಯ ವಿಷಯವನ್ನು ಕರಗತ ಮಾಡಿಕೊಂಡು ಗಿರಾಕಿಗಳಿಗೆ ಉಪನ್ಯಾಸ ಮಾಡುವ ಹಾಗೆ ಬೆಳೆದುನಿಂತಿದ್ದನು. ತಾತ ಪರರ ನಿಂದನೆ ಮಾಡುವಂತಹ ಗಿರಾಕಿಗಳಿಗೆ ಹಿತನುಡಿಗಳಿಂದಲೇ ತಿದ್ದುವಂತ ಜಾಣ್ಮೆಯನ್ನು ಕರಗತ ಮಾಡಿಕೊಂಡಿದ್ದನು. ತನ್ನ ಹೋಟೆಲಿಗೆ ಅಗತ್ಯಕ್ಕಿಂತ ಜಾಸ್ತಿ ಗಿರಾಕಿಗಳು ಬರುವ ಹಾಗೆ ಶುಚಿತ್ವದ ಆಹಾರ ತಯಾರಿಕೆಯಲ್ಲಿ ಪಾರಂಗತನಾಗಿದ್ದನು. ಕೋಳಿ ಕೂಗುವ ಮೊದಲು ತಾತನ ಹೋಟೆಲಿನ ಚಟುವಟಿಕೆಗಳು ಗರಿಗೆದರಿಕೊಳ್ಳುತ್ತಿದ್ದವು. ಪ್ರಸ್ತುತ ವಿವರಣೆಯಿಂದ ತಿಳಿದುಬರುವಂತೆ ತಾತನು ತನ್ನ ಹೋಟೆಲಿನ ಮೂಲಕ ತಾನು ಸುಧಾರಣೆಯಾಗುವುದರ ಜೊತೆಗೆ ಹೋಟೆಲಿಗೆ ಬರುವ ಗ್ರಾಹಕರನ್ನು ಸುಧಾರಣೆಯ ಹಾದಿಯತ್ತ ಕೊಂಡೊಯ್ಯಲು ಶ್ರಮಿಸುತ್ತಿದ್ದನು.

'ಜನಪ್ರಿಯ ಸಾಹಿತ್ಯ'ವೆಂದು ಪರಿಗಣಿತವಾದ ಕೆಲವು ಕಾದಂಬರಿಗಳಲ್ಲೂ ಹೋಟೆಲು ಮಾಲೀಕರ ಬದುಕಿನ ಸ್ಥಿತ್ಯಂತರವನ್ನು ಚಿತ್ರಿಸಲಾಗಿದೆ. ಕೆ.ಟಿ. ಗಟ್ಟಿ ಮತ್ತು ನಾ. ಡಿಸೋಜಾ ಅವರ ಕೆಲವು ಕಾದಂಬರಿಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ. ಕೆ.ಟಿ. ಗಟ್ಟಿ ಅವರ 'ಅಮುಕ್ತ' ಕಾದಂಬರಿಯಲ್ಲಿ ಹಳ್ಳಿ ಹೋಟೆಲೊಂದರ ಚಿತ್ರಣವಿದೆ. ಉತ್ತಮನು ಮದಾಪುರದಲ್ಲಿ ಹೋಟೆಲಿನ ಮಾಲೀಕನಾಗಿ ವ್ಯವಹಾರ ನಡೆಸುತ್ತಿದ್ದನು. ಸ್ನೇಹಿತನಾದ ಮಧು ಅವನಿಗೆ ಹೋಟೆಲಲ್ಲಿ ಪಾಲುದಾರನಾಗಿರುತ್ತಾನೆ. ನಂತರದಲ್ಲಿ ಉತ್ತಮನೇ ಹೋಟೆಲು ಮಾಲೀಕನಾಗುತ್ತಾನೆ. ಮಧುವಿನ ಕೆಲವು ಅವಾಂತರಗಳಿಂದಾಗಿ ಉತ್ತಮನು ತೊಂದರೆಗೀಡಾಗುತ್ತಾನೆ. ಅನೈತಿಕ ಚಟುವಟಿಕೆಗಳಿಗೆ ಸದಾ ಪೀಡಿಸುವ ಮಧುವಿನ ವ್ಯಕ್ತಿತ್ವಕ್ಕೆ ಬೇಸತ್ತು ಹೋಟೆಲನ್ನು ಬಿಟ್ಟು ಜೈಲು ಪಾಲಾಗುವ ಉತ್ತಮನಿಗೆ ಅವನತಿಯು ಪ್ರಾಪ್ತವಾಗಿರುತ್ತದೆ. ಹೀಗೆ ಕಾದಂಬರಿಯು ಹಳ್ಳಿಯ ವ್ಯಕ್ತಿಯೋರ್ವನು ಹೋಟೆಲು ಮಾಲೀಕನಾಗಿ ಅಲ್ಲಿನ ವ್ಯವಹಾರದ ಮತ್ತು ತನ್ನ ಬದುಕಿನ ಅವನತಿಯನ್ನು ಕಾಣುವುದನ್ನು ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ. ಹೋಟೆಲು ವ್ಯವಹಾರದಿಂದಾಗಿ ಮಾಲೀಕನೊಬ್ಬನ ಬದುಕಿನಲ್ಲಾಗುವ 'ಏಳುಬೀಳು'ಗಳೆರಡನ್ನು ಕಾದಂಬರಿಯು ಚಿತ್ರಿಸುತ್ತದೆ.

ನಾ. ಡಿಸೋಜಾ ಅವರ 'ಹರಿಯುವ ನದಿ' ಕಾದಂಬರಿಯಲ್ಲಿ ಹೋಟೆಲು ಮಾಲೀಕರ ಸ್ಥಿತ್ಯಂತರದ ಬದುಕಿನ ಚಿತ್ರಣವಿದೆ. ದಾಮೋದರ ಕಾಮತರ ತಂದೆ ಮರ್ತ್ಯಪ್ಪನವರು ಮಾವಿನಕುರುವಿ

ನಲ್ಲಿ ಹೋಟೆಲೊಂದನ್ನು ನಡೆಸುತ್ತಿದ್ದರು. ಅಣ್ಣ ತಮ್ಮಂದಿರೊಳಗೆ ನಡೆದ ಜಗಳದಿಂದಾಗಿ ಅವರು ಊರುಬಿಟ್ಟು ಗುಂಡಬೋಳಕ್ಕೆ ಬರುತ್ತಾರೆ. ಕೇವಲ ಒಂದು ಪಾಣಿ ಪಂಚೆ ಅಡುಗೆ ಸೌಟಿನೊಂದಿಗೆ ಗುಂಡಬೋಳೆಗೆ ಬಂದ ಮರ್ತ್ಯಪ್ಪನವರು ದೇವಸ್ಥಾನವೊಂದರಲ್ಲಿ ಅಡುಗೆ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಗುಂಡಬೋಳ ದೇವಾಲಯದಲ್ಲಿ ಅಡುಗೆಗಾಗಿ ಸೇರಿದ್ದವರು. ನಂತರ ಅಲ್ಲಿಂದ ಬಿಟ್ಟು ಸಣ್ಣಜಾಗವೊಂದನ್ನು ಖರೀದಿಸಿ ಚಾ ದುಕಾನ ಹಾಕುತ್ತಾರೆ. ಆಗ ವ್ಯಾಪಾರವು ಕಡಿಮೆಯಿತ್ತು. ಅವರ ಚಾ ದುಕಾನಿಗೆ ಜನ ಪವಾಣೇ ಫೋವ್, ಕಾಸಾ ಚಾವ್ ಎಂಬ ಹೆಸರನ್ನು ಇಟ್ಟಿದ್ದರು. ಮರ್ತ್ಯಪ್ಪ ಪಾವಾಣಿ ಅವಲಕ್ಕಿ ಕಾಸಿನ ಚಾ ಮಾರಿಯೇ ಮನೆ ಕಟ್ಟಿಸಿದ್ದರು. ಅವರು ಹೀಗೆಂದು ದುಕಾನನ್ನು ಬದಲಾಯಿಸಲಿಲ್ಲ. ಅದೇ ಹಿಂದಿನ ಒಲೆ, ಅಡಿಕೆ ದಬ್ಬೆಯ ಬೆಂಚು, ಅವರು ಉಡುತ್ತಿದ್ದಿದ್ದು ಅದೇ ಪಾಣೇ ಪಂಚೆ. ಹೀಗಿರುವಾಗಲು ಮರ್ತ್ಯಪ್ಪ ಕಾಮತರು ಗಿರಾಕಿಗಳನ್ನು ಚೆನ್ನಾಗಿಯೇ ಇರಿಸಿಕೊಂಡಿದ್ದರು. ಪ್ರತಿಯೊಬ್ಬರ ಹೆಸರು ಹಿಡಿದು ಕೂಗುತ್ತ, ಮೋಸ ಮಾಡದೆ ಚಾ-ಕಾಫಿ, ಅವಲಕ್ಕಿ, ಖಾರಾಸೇವಾ ಮಾಡಿಕೊಡುತ್ತಾ ಅಲ್ಲಿ ಉಳಿದವರು ಮರ್ತ್ಯಪ್ಪ ಕಾಮತರು. ಬರುಬರುತ್ತಾ ಮರ್ತ್ಯಪ್ಪ ಅಧ್ಯಾತ್ಮದೆಡೆಗೆ ವಾಲುತ್ತಾರೆ. ತಾನು ಏನೇ ಮಾಡಲಿ ತನ್ನ ಪಾಲಿನದು ತನಗೆ ಸಿಗುತ್ತದೆ. ಹೆಚ್ಚಿನದನ್ನು ತಾನು ಬಯಸಿದರೂ ಅದು ಸಿಗಲಾರದು. ಅದರ ಬಗ್ಗೆ ತಾನು ಯೋಚಿಸಬಾರದು ಎಂಬ ಸಿದ್ಧಾಂತಕ್ಕೆ ಅವರು ಬಂದು ಮುಟ್ಟಿದ್ದರು. ಈ ಸಿದ್ಧಾಂತ ಅವರನ್ನು ಗುಂಡಬೋಳೆಯ ದೇವಾಲಯಕ್ಕೆ ಕಟ್ಟಿ ಹಾಕಿತ್ತು. ಹೆಂಡತಿಯ ಸಾವಿನ ನಂತರ ಮಗನ ಮದುವೆಯಾಗಿ ಅವನ ಹೆಂಡತಿ ಶಕುಂತಲೆ ಮನೆಗೆ ಬಂದ ಮೇಲೆ ಮರ್ತ್ಯಪ್ಪ ಕಾಮತರು ಚಾ ದುಕಾನನ್ನು ಮಗನಿಗೆ ವಹಿಸಿಕೊಟ್ಟು ಮನೆ ತೊರೆಯುತ್ತಾರೆ. ಮಗ ಸೊಸೆ ತಮ್ಮಲ್ಲಿಗೆ ಬಂದು ಎಷ್ಟೇ ಹೇಳಿದರೂ ಅವರು ಕೇಳುವ ಸ್ಥಿತಿಯು ಅವರಲ್ಲಿರಲಿಲ್ಲ. ಗುಂಡಬೋಳ ಹಳ್ಳಿಯ ದುಕಾನಿನ ಮೂಲಕ ಮರ್ತ್ಯಪ್ಪ ಕಾಮತರ ವ್ಯಕ್ತಿತ್ವದಲ್ಲಾದ ಮಹತ್ವದ ಬದಲಾವಣೆಯನ್ನು ಕಾದಂಬರಿಯು ತಾತ್ವಿಕತೆಯಿಂದ ಕಟ್ಟಿಕೊಟ್ಟಿದೆ. ಮುಲ್ಕಿ ಶಾಲೆಯ ಓದನ್ನು ನಿಲ್ಲಿಸಿ ತಂದೆಯ ದುಕಾನಿನಲ್ಲಿ ಕೆಲಸ ಮಾಡುತ್ತಿದ್ದ ದಾಮೋದರ ಕಾಮತ ಈಗ ಅದೇ ದುಕಾನಿನ ಮಾಲೀಕನಾಗುತ್ತಾನೆ. ಆತನಿಗೆ ಹೋಟೆಲಿನ ಬಗ್ಗೆ ಅಂತಹ ಅಭಿಮಾನ ಇರಲಿಲ್ಲ. ಅವನ ಶಾಲೆಯ ಹುಡುಗರು ತನ್ನ ಹೋಟೆಲನ್ನು ಕಂಡು ನಗುತ್ತಾರೆ ಅನ್ನುವುದು ಅವನ ಪುಕಾರ. ಹೊನ್ನಾವರ, ಕುಮಟಗಳಿಗೆ ದಾಮೋದರ ಅಲ್ಲಿನ ಹೋಟೆಲುಗಳನ್ನು ನೋಡುತ್ತಾನೆ. ಗುಂಡಬೋಳೆ ಹೋಟೆಲು ಕೂಡ ಹಾಗೆಯೇ ಇರಬಾರದೇಕೆ ಎಂದು ದಾಮೋದರ ಕಾಮತ ಬಯಸುತ್ತಾನೆ. ಆಗಲೇ ಇಲ್ಲಿ ದುಕಾನಿಗೆ ಬರುವ ಜನರ ಸಂಖ್ಯೆ ಕಡಿಮೆ ಆಯಿತು. ದೋಣಿಗಳಲ್ಲಿ ಮೀನು ಬರುವುದು ನಿಂತು ಸೈಕಲ್ಲುಗಳಲ್ಲಿ ಮನೆ ಮನೆಗೆ ಮೀನು ಬರತೊಡಗಿತು(ನಾ. ಡಿಸೋಜ; ೨೦೦೯; ಪುಟ. ೪೧-೪೨). ಗುಂಡಬೋಳೆಯ ದುಕಾನು ತನ್ನ ಅಸ್ತಿತ್ವವನ್ನು

ಕಡಿಮೆಗೊಳಿಸುತ್ತಾ ಬರುತ್ತದೆ. ಪ್ರಯಾಣದಲ್ಲಿ ನದಿಯನ್ನು ತೊರೆದು ಬಸ್ಸುಗಳಲ್ಲಿ ಜನರ ಪ್ರಯಾಣ, ಸರಕುಗಳ ಸಾಗಾಣಿಕೆಯ ದೋಣಿಗಳು ಮಾಯವಾದದ್ದು, ಹಳ್ಳಿಯ ಮೇಲುತುದಿಯಲ್ಲಿ ರಸ್ತೆ ಬಂದದ್ದು, ಅಲ್ಲಿಗೆ ಹೋಗಿ ಬಸ್ಸಿಗೆ ಪ್ರಯಾಣಿಕರು ಕಾಯುವುದರಿಂದ ಚಾ ದುಕಾನು ವ್ಯವಹಾರದಲ್ಲಿ ಹಿಮ್ಮುಖವಾಗಿತ್ತು. ಇದನ್ನರಿತ ದಾಮೋದರ ಕಾಮತರಲ್ಲಿ ಒಂದು ರೀತಿಯ ಆತಂಕವು ಸೃಷ್ಟಿಯಾಗುತ್ತದೆ. ಅವಲಕ್ಕಿ, ಖಾರಾಸೇವಾ ಬೆಳಿಗ್ಗೆ ಮಾಡಿದ್ದು ಸಂಜೆಯವರೆಗೆ ಉಳಿದಿದ್ದು ದುಕಾನಿನ ದುಸ್ಥಿತಿಗೆ ಸಾಕ್ಷಿಯಾಗುತ್ತದೆ. ಹಾಗಾಗಿ ದಾಮೋದರ ಕಾಮತ ತನ್ನ ದುಕಾನನ್ನು ಮೇಲೆ ಗುಂಡಬೋಳಗೆ ಸ್ಥಳಾಂತರಿಸುತ್ತಾನೆ. ಕಾದಂಬರಿಯಲ್ಲಿ ತಂದೆ ಮತ್ತು ಮಗನ ಎರಡು ತಲೆಮಾರುಗಳು ನಡೆಸಿದ ಹೋಟೆಲು ವ್ಯವಹಾರದ ಚಿತ್ರಣವಿದೆ. ತಂದೆಯಾದ ಮರ್ತ್ಯಪ್ಪ ಕಾಮತರು ಮಾವಿನಕುರುವೆಯಲ್ಲಿದ್ದ ತಮ್ಮ ಮೂಲ ಹೋಟೆಲನ್ನು ಗುಂಡಬೋಳೆಗೆ ಸ್ಥಳಾಂತರಿಸುತ್ತಾನೆ. ಕ್ರಮೇಣ ಅಧ್ಯಾತ್ಮದತ್ತ ಒಲವು ತೋರಿ ತಮ್ಮ ಮಗನಾದ ದಾಮೋದರ ಕಾಮತನು ತನ್ನ ಹೋಟೆಲು ವ್ಯವಹಾರದಲ್ಲಿ ಲಾಭ ಕಡಿಮೆಯಾದಾಗ ಮೇಲಿನ ಗುಂಡಬೋಳೆಗೆ ಹೋಟೆಲನ್ನು ಸ್ಥಳಾಂತರಿಸುತ್ತಾನೆ. ಹೀಗೆ ತಂದೆ ಮತ್ತು ಮಗ ಇಬ್ಬರು ಹೋಟೆಲು ವ್ಯವಹಾರದಲ್ಲಾದ ಸ್ಥಿತ್ಯಂತರ ಹಾಗೂ 'ಏಳುಬೀಳು'ಗಳನ್ನು ಕಾದಂಬರಿಯು ನಿರೂಪಿಸುತ್ತದೆ.

ಕಾದಂಬರಿಗಳಂತೆಯೇ ಸಣ್ಣಕಥೆಗಳಲ್ಲಿಯೂ ಹೋಟೆಲು ಮಾಲೀಕನ ಸ್ಥಿತ್ಯಂತರವನ್ನು ಕಟ್ಟಿಕೊಡಲಾಗಿದೆ. ಕನ್ನಡದ ಆರಂಭಘಟ್ಟದ ಕಥೆಗಳಲ್ಲೊಂದಾದ ಪಂಜೆಮಂಗೇಶರಾಯರ 'ಕಮಲಪುರದ ಹೋಟ್ಲಿನಲ್ಲಿ' ಎಂಬ ಕಥೆಯು ಹೋಟೆಲು ಮಾಲೀಕರ ಸ್ಥಿತ್ಯಂತರಕ್ಕೆ ನಿದರ್ಶನವಾಗಿದೆ. ಈ ಕಥೆಯ ಶೀರ್ಷಿಕೆಯೇ ಗ್ರಾಮೀಣ ಪರಿಸರದ ಪ್ರತೀಕವಾಗಿ ಕಂಡುಬರುತ್ತದೆ. ಪೂರ್ಣಸ್ವಾಮಿ ಅಯ್ಯಂಗಾರರು ಇದರ ಮಾಲೀಕರಾಗಿದ್ದಾರೆ. ಪಾರಂಪರಿಕ ವೃತ್ತಿಬದುಕಾದ ಹೋಟೆಲು ಉದ್ಯಮದಲ್ಲಿಯೇ ಸಾಂಸ್ಕೃತಿಕವಾಗಿ ಗುರುತಿಸಿಕೊಂಡಿದ್ದಾರೆ. ಶ್ರೀರಂಗಪಟ್ಟಣ, ತಿರುಪತಿ, ಜಗನ್ನಾಥ, ರಾಮೇಶ್ವರ ಮುಂತಾದೆಡೆಗಳಿಗೆ ಕೈಗೊಂಡ ಯಾತ್ರೆಗಳ ಮೂಲಕ ಸಂಪಾದಿಸಿದ ಹಣದಿಂದ ಹೋಟೆಲು ಸ್ಥಾಪಿಸಿ ಶಾಶ್ವತ ಜೀವನವನ್ನು ರೂಪಿಸಿಕೊಂಡಿದ್ದರು. ಪರೋಪಕಾರ ಗುಣ ಮತ್ತು ಸಾಂಸ್ಕೃತಿಕ ಸಂಗತಿಗಳ ಚರ್ಚೆಯ ಮೂಲಕ ಗ್ರಾಮದಲ್ಲಿನ ಜನರಿಗೆ ಅನುಭವದ ಆಧಾರಸ್ತಂಭವಾಗುತ್ತಾರೆ. ಅಯ್ಯಂಗಾರರು ದೇಶದ ಹಲವು ಭಾಷೆಗಳ ಸ್ವರೂಪವನ್ನು ಹೋಟೆಲಿನ ಪ್ರಾರಂಭದಿಂದ ತಿಳಿದವರಾಗಿದ್ದರು. ಸಮಾಜದ ವಿವಿಧ ಸ್ತರದ ಜನರ ಪ್ರವೇಶದಿಂದಾಗಿ ಅಯ್ಯಂಗಾರರಲ್ಲಿ ಹೊಸ ಅನುಭವಗಳು ಮನೆ ಮಾಡಿಕೊಂಡಿದ್ದವು. ಅಯ್ಯಂಗಾರರು ಗ್ರಾಮದಲ್ಲಿ ಘಟಿಸುವ ಸುದ್ದಿಗಳನ್ನು ಆಕರ್ಷಕವಾಗಿ ಹೇಳುವುದರ ಜೊತೆಗೆ ಲಾಭವನ್ನು ಸಂಪಾದಿಸುತ್ತಾರೆ. ಕಥೆಯ ಉದ್ದಕ್ಕೂ ಹೋಟೆಲಿನ ಮಾಲೀಕರಾದ ಅಯ್ಯಂಗಾರರದು ಒಂದು ಸಾಮಾನ್ಯ ವ್ಯಕ್ತಿತ್ವದ ಬರಿ ಚಾಳಿನ ಪಾತ್ರವಾಗಿದೆ. ಹಳ್ಳಿಯ ಹೋಟೆಲಿನ ಮಾಲೀಕರಾಗಿ ಪಾಪಪ್ರಜ್ಞೆ, ಪಾಪ-ಪುಣ್ಯ,

ಪರೋಪಕಾರ ಬ್ರಹ್ಮಚರ್ಯ, ಸಂಭಾವಿತನ, ಪ್ರತ್ಯುಪಕಾರಗುಣ, ಆಧುನಿಕ ಪ್ರಜ್ಞೆ, ಅನಾಥತೆ, ಋಣಾನುಬಂಧ, ಸಜ್ಜನಿಕೆ, ನ್ಯಾಯಪರತೆ, ಭಾವನಾತ್ಮಕತೆ ಮುಂತಾದವುಗಳು ಅಯ್ಯಂಗಾರರ ವ್ಯಕ್ತಿತ್ವದಲ್ಲಿ ಧನಾತ್ಮಕವಾಗಿ ಬೆಳೆಯಲಾರಂಭಿಸಿದ್ದವು. ಹೀಗೆ ಸ್ವಂತ ಬಂಧು-ಬಳಗ ಯಾರೂ ಇಲ್ಲದ ಪೂರ್ಣಸ್ವಾಮಿ ಅಯ್ಯಂಗಾರರು ತಮ್ಮ ಹೋಟೆಲು ವೃತ್ತಿಜೀವನದಲ್ಲಿ ಅಲ್ಲಿಗೆ ಬರುವ ಗಿರಾಕಿಗಳ ಒಡನಾಟದ ಮೂಲಕ ವೈಯಕ್ತಿಕವಾದ ತಮ್ಮ ಒಂಟಿತನವನ್ನು ನಿವಾರಿಸಿಕೊಂಡು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳುತ್ತಾರೆ.

ಯು.ಆರ್. ಅನಂತಮೂರ್ತಿ ಅವರ 'ಪ್ರಸ್ತ' ಕಥೆಯಲ್ಲಿ ಈಗಾಗಲೇ ಹೋಟೆಲು ಮಾಲೀಕ ನಾಗಿರುವ ಗಣಪ್ಪಯ್ಯ ಮತ್ತು ಮುಂದೆ ಹೋಟೆಲು ಮಾಲೀಕನಾಗಬೇಕೆಂಬ ಕನಸನ್ನು ಹೊತ್ತು ಕೊಂಡಿರುವ ಪುಂಡರೀಕರ ಸ್ಥಿತ್ಯಂತರದ ಬದುಕು ಕಲಾತ್ಮಕವಾಗಿ ಮೂಡಿಬಂದಿದೆ. ಕುಡುಮಲ್ಲಿಗೆ ಗ್ರಾಮದಲ್ಲಿ ಗಣಪ್ಪಯ್ಯ ಹೋಟೆಲು ಮಾಲೀಕನಾದ ಚಿತ್ರಣವು ಇಲ್ಲಿದೆ. ಗಣಪ್ಪಯ್ಯನನ್ನು ಹುಡುಕಲೆಂದೇ ಬಂದ ಶೀನಮಯ್ಯ ಮತ್ತು ಪುಂಡರೀಕರು ಆತನ ಗ್ರಾಮಮಟ್ಟದ ಹೋಟೆಲಿನ ವೈಭವವನ್ನು ಕಂಡು ಬೆಕ್ಕಸಬೆರಗಾಗುತ್ತಾರೆ. ಇದನ್ನು ಕಂಡ ಪುಂಡರೀಕನಲ್ಲಿಯೂ ಹೋಟೆಲು ಮಾಲೀಕನಾಗುವ ಆಸೆ ಚಿಗುರತೊಡಗಿತು. ಪುಂಡರೀಕನ ತಂದೆ ಮುಂದೆ ಹಲವು ಬಾರಿ ಹೋಟೆಲು ಆರಂಭಿಸುವ ತನ್ನ ಕಲ್ಪನೆಗಳ ಕುರಿತು ಹೇಳಿಕೊಂಡಿದ್ದನು. ಊರು ಬಿಟ್ಟು ಹೋಗಿ ಹೋಟೆಲು ಮಾಲೀಕನಾಗಿರುವ ಗಣಪ್ಪಯ್ಯನ ಕುರಿತು ಶ್ಯಾಮಭಟ್ಟರು ಮತ್ತು ಶೀನಮಯ್ಯರು ಚರ್ಚೆ ಮಾಡುವಾಗ ಪುಂಡರೀಕನ ಕಿವಿ ಚುರುಕಾಗುತ್ತದೆ. ಹೀಗೆ ಗಣಪ್ಪಯ್ಯನು ಗ್ರಾಮೀಣ ಪ್ರದೇಶದಲ್ಲಿ ಹೋಟೆಲು ಮಾಲೀಕನಾಗಿ ಸಾಧಿಸಿದ ಪ್ರಗತಿಯು ಹಳ್ಳಿಯಲ್ಲಿ ಪೌರೋಹಿತ್ಯ ನಡೆಸಿಕೊಂಡು ಬರುತ್ತಿದ್ದ ಪುಂಡರೀಕನಲ್ಲೂ ತಾನು ಹೋಟೆಲು ಮಾಲೀಕನಾಗಬೇಕೆಂಬ ಆಸೆಗೆ ಪ್ರೇರಣೆಯನ್ನು ನೀಡುತ್ತದೆ.

ಅಮರೇಶ ನುಗಡೋಣಿ ಅವರ 'ಏ ದಿಲ್ ಮಾಂಗೆ ಮೋರ್' ಕಥೆಯು ಚಾದಂಗಡಿ ಮಾಲೀಕರಲ್ಲಿ ಆದಂತಹ ಸ್ಥಿತ್ಯಂತರವನ್ನು ವಿವರಿಸುತ್ತದೆ. ಚಾದಂಗಡಿಯ ಮುಖ್ಯಕೇಂದ್ರ ಮಾಲೀಕಳಾದ ಹುಸೇನವ್ವ, ಇಲ್ಲಿ ಚಾದಂಗಡಿ ಮಾಲೀಕಳಾಗಿರುವುದೇ ಆಕೆಯ ಬದುಕಿನ ಪ್ರಮುಖ ಸ್ಥಿತ್ಯಂತರವೆನ್ನಬಹುದು. ಹೆಣ್ಣುಮಗಳೊಬ್ಬಳು ಸ್ವಂತ ಇಚ್ಛಾಶಕ್ತಿಯಿಂದ ಸ್ವಾವಲಂಬನೆಯ ಬದುಕನ್ನು ಹೇಗೆ ಕಟ್ಟಿಕೊಳ್ಳಬಹುದೆಂಬುದಕ್ಕೆ ಹುಸೇನವ್ವ ಮಾದರಿಯಾಗಿ ನಿಲ್ಲುತ್ತಾಳೆ. ಹಳ್ಳಿಯ ಚಾದಂಗಡಿ ಗ್ರಾಹಕರಲ್ಲಿ ನೈತಿಕ ಛಲವನ್ನು ತುಂಬುವ ಬೌದ್ಧಿಕ ಮಟ್ಟವು ಆಕೆಯಲ್ಲಿತ್ತು. ಗ್ರಾಮದಲ್ಲಿ ದಿನಪತ್ರಿಕೆ ಓದುಗರಿಗೆ ಚಾದಂಗಡಿ ಮೂಲಕ ಹುಸೇನವ್ವ ಆಶ್ರಯದಾತಳಾಗಿದ್ದಳು.

ಇದೇ ಕಥೆಗಾರರ 'ಕಾಗಿಕೂಟ' ಎಂಬ ಕಥೆಯು ಹೋಟೆಲು ಮಾಲೀಕರಲ್ಲಾದ ಸ್ಥಿತ್ಯಂತರವನ್ನು ಬಿಂಬಿಸುತ್ತದೆ. ಇದು ಹೈದರಾಬಾದ್ ಕರ್ನಾಟಕದ ಹಳ್ಳಿಯನ್ನು ಪ್ರತಿನಿಧಿಸುವ

ಕಥೆಯಾಗಿದೆ. ಚಾದಂಗಡಿ ಮಾಲಿಂಗನು ಮಾಲೀಕನಾಗುವುದರೊಂದಿಗೆ ಹೆಣ್ಣಿನ ಪ್ರೇಮವು ಅವನಲ್ಲಿ ವ್ಯಕ್ತವಾಗುತ್ತದೆ. ಮಾಲಿಂಗನ ಲೈಂಗಿಕ ಉನ್ಮಾದದ ಮಾನಸಿಕ ಸ್ಥಿತಿಯು ಗ್ರಾಹಕಳಾಗಿ ಬರುತ್ತಿದ್ದ ಸುವ್ವಿಯನ್ನು ಆತ ಮೋಹಿಸುವಂತೆ ಮಾಡುತ್ತದೆ. ಹೊಟ್ಟೆಪಾಡಿಗಾಗಿ ಹೋಟೆಲು ಮಾಲೀಕನಾದ ಮಾಲಿಂಗನ ಬದುಕಿನ ಸ್ಥಿತ್ಯಂತರವು ಆತನ ಇತರ ಕಲ್ಯಾಣ ಗುಣಗಳೊಂದಿಗೆ ಕಥೆಯಲ್ಲಿ ಚಿತ್ರಿತವಾಗಿದೆ. ಮಾಲಿಂಗ ಸುವ್ವಿಯ ಕಲ್ಪನೆಯಲ್ಲಿ ಮೈಮರೆತರೆ ಚಾದಂಗಡಿಯ ಪರಿವೆಯೇ ಇಲ್ಲದಂತೆ ಇರುತ್ತಿದ್ದನು. ಚಾದಂಗಡಿಗೆ ಸುವ್ವಿಯ ಆಗಮನವೇ ಆತನನ್ನು ಉತ್ಸಾಹ ಸಡಗರದಿಂದ ಸಂಭ್ರಮಿಸುವಂತೆ ಮಾಡುತ್ತಿತ್ತು. ಮಾಲಿಂಗ ಅವಳ ಮೈಮಾಟವನ್ನು ಗುಣಗಾನ ಮಾಡುವುದರಲ್ಲಿಯೇ ಹೆಚ್ಚು ಸಮಯ ಕಳೆಯುತ್ತಿದ್ದನು.

ಮಾವಿನಕೆರೆ ರಂಗನಾಥ್ ಅವರ 'ಉಳಿದದ್ದು ಆಕಾಶ' ಕಥೆಯಲ್ಲಿ ಬರುವ ರಾಮ ಐತಾಳರು 'ಶ್ರೀ ರಾಘವೇಂದ್ರ ಕಾಫಿ ಕ್ಲಬ್ಬಿ'ನ ಮಾಲೀಕರಾಗಿದ್ದರು. ಇವರು ದೋಸೆ ಮಾಡುವ ಕಲೆಯಲ್ಲಿ ನಿಷ್ಣಾತರಾಗಿದ್ದರು. ನಾರಾಯಣ ಜೋಯಿಸ ಮತ್ತು ಆತನ ಹೆಂಡತಿ ಹೋಟೆಲಿಗೆ ಗ್ರಾಹಕರಾಗಿ ಆಗಮಿಸುತ್ತಾರೆ. ನಾರಾಯಣ ಜೋಯಿಸನ ಹೆಂಡತಿಯ ನಗುಮುಖಕ್ಕೆ ಐತಾಳರು ಮಾರುಹೋಗುತ್ತಾರೆ. ಎರಡನೇ ಬಾರಿ ಗ್ರಾಹಕರಾಗಿ ಬಂದಾಗ ಜೋಯಿಸನ ಹೆಂಡತಿ ಅದೇ ನಗುಮುಖದಿಂದ ಹೋಟೆಲನ್ನು ಮಾರುತ್ತೀರಾ ಎಂದು ಐತಾಳರನ್ನು ಕೇಳುತ್ತಾರೆ. ಆಕೆಯ ಗಂಡ ಜೋಯಿಸ ನಗಾಡುತ್ತಾನೆ. ಪಾರ್ವತಿಯ ಮಾತಿನಿಂದ ಒಂದು ಕ್ಷಣ ವಿಚಲಿತರಾದ ಐತಾಳರು ಮರುಕ್ಷಣ ಅದರಿಂದ ಸುಧಾರಿಸಿಕೊಂಡು ತಮ್ಮನೊಂದಿಗೆ ಸೇರಿ ಬೆಂಗಳೂರಿನಲ್ಲಿ ಹೋಟೆಲೊಂದನ್ನು ಪ್ರಾರಂಭಿಸಬೇಕೆಂಬ ತಮ್ಮ ಮಹದಾಸೆಯನ್ನು ನೆನಪಿಸಿಕೊಳ್ಳುತ್ತಾರೆ. ಅದರಂತೆ ಹಳ್ಳಿಯ ಹೋಟೆಲನ್ನು ಮಾರಾಟ ಮಾಡಲು ನಿರ್ಧರಿಸುತ್ತಾರೆ. ಇನ್ನೊಂದು ಬುಧವಾರ ಜೋಯಿಸ ಪಾರ್ವತಿ ದಂಪತಿಗಳು ಐತಾಳರ ಕುರ್ಚಿ, ಪಾತ್ರೆ, ಒಲೆ, ಸ್ಟವ್, ಇತ್ಯಾದಿಗಳನ್ನು ಹದಿನೈದು ಸಾವಿರಕ್ಕೆ ಕೊಂಡುಕೊಳ್ಳುತ್ತಾರೆ. ಮರುದಿನ ಜೋಯಿಸ ಮತ್ತು ಪಾರ್ವತಿ ಹೋಟೆಲಿನ ಸ್ವಚ್ಛತೆ-ತಿಂಡಿ-ತಿನಿಸುಗಳ ತಯಾರಿಕೆಯಲ್ಲಿ ತೊಡಗುತ್ತಾರೆ. ಸುತ್ತಲಿನ ಊರುಗಳ ಜನರಿಗೆ ಪಾರ್ವತಮ್ಮನ ಹೋಟೆಲಿನ ದೋಸೆ ಬಾಯಲ್ಲಿ ನೀರೂರುವಂತೆ ಮಾಡಿತ್ತು. ಬರುಬರುತ್ತ 'ರಾಘವೇಂದ್ರ ಕಾಫಿ ಕ್ಲಬ್ಬಿ'ಗೆ ಬದಲಾಗಿ 'ಪಾರ್ವತಮ್ಮ ಹೋಟೆಲು' ಎಂದು ಜನಜಿತವಾಯಿತು. ಹೋಟೆಲಿನ ಗೋಡೆಗಳ ಮೇಲೆ ಸಿನಿಮಾ ಹೀರೋಗಳ ಭಾವಚಿತ್ರಗಳು ರಾರಾಜಿಸತೊಗಿದವು. ಮಗದೊಂದು ದಿನ ಜೋಯಿಸ ಮತ್ತು ಪಾರ್ವತಿ ಹೋಟೆಲು ವ್ಯವಹಾರದಿಂದಾಗಿ ದೇವಪುರದಲ್ಲಿ ಮನೆಯೊಂದನ್ನು ಬಾಡಿಗೆಗೆ ಹಿಡಿಯುತ್ತಾರೆ. ಈ ಕಥೆಯಲ್ಲಿ ಹೋಟೆಲು ಮಾಲೀಕ ಮತ್ತು ಗ್ರಾಹಕರಿಬ್ಬರ ಬದುಕಿನ ಸ್ಥಿತ್ಯಂತರಗಳು ಚಿತ್ರಣವಾಗಿವೆ. ಮೊದಲ ಹಂತದಲ್ಲಿ ರಾಘವೇಂದ್ರ ಕಾಫಿ ಕ್ಲಬ್ಬಿನ ಮಾಲೀಕರಾಗಿದ್ದ ಐತಾಳರು ತಮ್ಮ ಹೋಟೆಲಿಗೆ ಗ್ರಾಹಕರಾಗಿ ಬಂದ ಪಾರ್ವತಿ

ಮತ್ತು ಜೋಯಿಸರಿಗೆ ಅದನ್ನು ಮಾರಾಟ ಮಾಡುವುದರ ಮೂಲಕ ತಮ್ಮ ಹೋಟೆಲು ವ್ಯವಹಾರವನ್ನು ಕೊನೆಗೊಳಿಸುತ್ತಾರೆ. ಎರಡನೇ ಹಂತದಲ್ಲಿ ಐತಾಳರಿಂದ ಹೋಟೆಲನ್ನು ಖರೀದಿಸಿದ ಪಾರ್ವತಿ ಮತ್ತು ಜೋಯಿಸರು ಪ್ರಗತಿಯನ್ನು ಸಾಧಿಸುತ್ತಾರೆ.

ಬೇಲೂರು ರಾಮಮೂರ್ತಿಯವರ 'ಶೀನಣ್ಣನ ಟೀ ಅಂಗಡಿ' ಎಂಬ ಕಥೆಯು ಗ್ರಾಮೀಣ ಹೋಟೆಲು ಮಾಲೀಕರ ಸ್ಥಿತ್ಯಂತರದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ತನ್ನ ಟೀ ಅಂಗಡಿಗೆ ಬರುವ ಸಿನಿಮಾ ನಟ-ನಟಿಯರ ಪ್ರೀತಿ ವಿಶ್ವಾಸಗಳನ್ನು ಶೀನಣ್ಣ ಗಳಿಸಿಕೊಂಡಿದ್ದಾನೆ. ಟೀ ಅಂಗಡಿ ಮಾಲೀಕತ್ವದಿಂದಾಗಿ ಶೀನಣ್ಣ ನಗರ ಜೀವನದ ಕಡೆಗೆ ಮಾರುಹೋಗುವಂತೆ ಪರಿವರ್ತನೆಗೊಳ್ಳುತ್ತಾನೆ. ಪತ್ರಿಕಾ ಮಾಧ್ಯಮಗಳಲ್ಲಿನ ಸುದ್ದಿ ಸಮಾಚಾರಗಳ ಬಗೆಗೆ ಗ್ರಾಹಕರು ಚರ್ಚಿಸುವ ವೇದಿಕೆಯಾಗಿ ಶೀನಣ್ಣನ ಟೀ ಅಂಗಡಿ ಪರಿಣಮಿಸಿದೆ. ದೂರದ ನಗರ ಜನ ಜೀವನಕ್ಕಿಂತ ಆಸುಪಾಸಿನ ಗ್ರಾಮೀಣ ಜನರ ಬದುಕಿನ ಸ್ವರೂಪಕ್ಕೆ ಮೆರುಗು ಕೊಡುವ ಮನೋಭಾವ ಶೀನಣ್ಣನಲ್ಲಿತ್ತು. ದೇಶದ ಮಹಾನಗರ ಹಾಗೂ ಮಹನೀಯರ ಸುದ್ದಿಗಳನ್ನು ಬಿತ್ತರಿಸುವ ಮಾಧ್ಯಮಗಳು ಹಳ್ಳಿಯ ಸಾಮಾನ್ಯ ಜನರ ದೈನಂದಿನ ಚಟುವಟಿಕೆಗಳ ಹಿರಿಮೆಯನ್ನು ಯಾಕೆ ಬಿತ್ತರಿಸುವುದಿಲ್ಲ ಎಂದು ಪ್ರಶ್ನಿಸುವ ಮನೋವೃತ್ತಿ ಶೀನಣ್ಣನದಾಗಿತ್ತು. ಟೀಗೆಂದೇ ಸೀಮಿತವಾಗಿದ್ದ ಶೀನಣ್ಣನ ಅಂಗಡಿಯು ಕ್ರಮೇಣ ಸವಿರುಚಿಯ ತಿಂಡಿ-ತಿನಿಸುಗಳನ್ನು ತಯಾರಿಸುವ ಹಂತಕ್ಕೆ ಬೆಳೆದುನಿಂತಿತ್ತು. ಜನಸಾಮಾನ್ಯರಿಗೆಂದೇ ಪ್ರಾರಂಭವಾಗಿದ್ದ ಟೀ ಅಂಗಡಿ ಕ್ರಮೇಣ ರಾಜಕೀಯ ವ್ಯಕ್ತಿಗಳನ್ನು ಆಕರ್ಷಿಸುವ ಸ್ಥಳವಾಗಿತ್ತು. ಟೀ ಅಂಗಡಿಯ ಮೂಲಕ ಬರುವ ಆರ್ಥಿಕ ಮೂಲದಿಂದಲೇ ವಾಸಕ್ಕೆ ಸ್ವಂತ ಮನೆ ಪಡೆಯುವಲ್ಲಿ ಶೀನಣ್ಣ ಸಫಲನಾಗಿದ್ದನು.

ಜಿ.ವಿ. ಪ್ರಭು ಅವರ 'ಕೃಷ್ಣಭಟ್ಟರು ಹಾಗೂ ಅವರ ಹೋಟೆಲು ಉದ್ಯಮವು' ಎಂಬ ಸಣ್ಣಕಥೆಯಲ್ಲಿ ಶೀರ್ಷಿಕೆ ಹೇಳುವಂತೆ ಕೃಷ್ಣಭಟ್ಟರು ಹೋಟೆಲು ಮಾಲೀಕರಾಗುತ್ತಾರೆ. ಊರಿನ ಗ್ರಾಮೀಣ ಪರಿಸರದಲ್ಲಿ ಹೋಟೆಲೊಂದನ್ನು ನಡೆಸುತ್ತಿರುತ್ತಾರೆ. ಅವರಿಗೆ ಅನ್ನಪೂರ್ಣೇಶ್ವರಿ ವರಪುತ್ರ ಅನ್ನದಾತನೆನಿಸಿಕೊಳ್ಳುವ ಹಂಬಲವಿತ್ತು. ಬೆಂಗಳೂರಿನಲ್ಲಿ ತಾನು ಒಂದು ಹೋಟೆಲು ಪ್ರಾರಂಭಿಸಬೇಕೆಂಬುದು ಕೃಷ್ಣಭಟ್ಟರ ಮಹದಾಸೆ. ಕಥೆಯ ಸನ್ನಿವೇಶವೊಂದರಲ್ಲಿ ಅವರ ಈ ಮಹದಾಸೆಯು ವ್ಯಕ್ತವಾಗುತ್ತದೆ. "ಕೃಷ್ಣಭಟ್ಟರಿಗೆ ಜೀವನದಲ್ಲಿ ಇರುವುದು ಒಂದೇ ಒಂದು ಮಹದಾಸೆ. ಅದು ರಾಷ್ಟ್ರದ ಪಿ.ಎಂ. ಆಗಬೇಕು ಅಥವಾ ರಾಜ್ಯದ ಸಿ.ಎಂ. ಆಗಬೇಕು ಅಥವಾ ಕನಿಷ್ಠ ರಾಜಕೀಯ ಪುಢಾರಿಯಾಗಬೇಕು ಅಂತಾ ಖಂಡಿತಾ ಅಲ್ಲ. ಇಂಥ ಕುಲಗೆಟ್ಟ ಅಪವಿತ್ರ ಪದವಿ ಸ್ಥಾನಮಾನವನ್ನು ಪಡೆಯಬೇಕೆಂದು ಅವರು ಕನಸು ಮನಸಿನಲ್ಲೂ ಬಯಸಿದವರಲ್ಲ ಇವೆಲ್ಲವುಗಳಿಗಿಂತ ಶ್ರೇಷ್ಠವಾದ ಅನ್ನಪೂರ್ಣೇಶ್ವರಿಯ ವರಪುತ್ರ ಅನ್ನದಾತನೆನಿಸಿಕೊಳ್ಳುವ

ಬಿರುದಾಂಕಿತ ಉತ್ತಮ ಕೆಲಸ. ತಾನು ಒಬ್ಬ ಒಂದು ಹೋಟೆಲು ಮಾಣಿಯಾಗಬೇಕು-ಅದೂ ಬೆಂಗಳೂರಿನಲ್ಲೇ ಹೋಟೆಲು ಒಂದನ್ನು ಪ್ರಾರಂಭಿಸಬೇಕೆಂಬುದು ಕೃಷ್ಣಭಟ್ಟರ ಮಹದಾಸೆ. ಭಟ್ಟರಿಗೆ ಈ ಹಿಂದೆ ವಿಟ್ಲದಲ್ಲಿ ಒನ್ ಮ್ಯಾನ್ ಶೋ ಹೋಟೆಲು ನಡೆಸಿ ಇಪ್ಪತ್ತು ವರ್ಷಗಳ ಸುದೀರ್ಘ ಅನುಭವವಿದೆ. ಬ್ರಹ್ಮಚಾರಿಯಾಗಿ ಉಳಿದ ಕೃಷ್ಣಭಟ್ಟರಿಗಿರುವ ಒನ್ ಮ್ಯಾನ್ ಶೋ ಹೋಟೆಲು ನಡೆಸುವುದರಲ್ಲಿ ಅವರ ಕೌಶಲ್ಯವು ಚಾಕಚಕ್ಯತೆಯಿಂದ ಕೂಡಿತ್ತು. ಆ ಅನುಭವವನ್ನು ನಗರದ ಹೋಟೆಲುಗಳಲ್ಲಿ ಪ್ರದರ್ಶಿಸಬೇಕೆಂದುಕೊಂಡಿದ್ದರು. ಅದರಂತೆಯೇ ವಿಶ್ವದವರೆಲ್ಲರಿಗೂ ಬೆಂಗಳೂರು ಇಷ್ಟವಾಗುವಂತೆ ಕೃಷ್ಣಭಟ್ಟರಿಗೂ ಬೆಂಗಳೂರಿನಲ್ಲಿ ನೆಲೆಸುವ ಹಂಬಲ ಬಾಲ್ಯದಿಂದಲೂ ಇತ್ತು. ಅದು ಈಗ ಅವರ ಹೋಟೆಲು ಉದ್ಯಮದೊಂದಿಗೆ ಕೈಗೂಡಿತ್ತು. ಭಟ್ಟರಿಗೆ ಬೆಂಗಳೂರಿಗೆ ಬಂದ ಅನಂತರ ಅರಿವಾಗಿತ್ತು. ಇಲ್ಲಿ ಅನ್ಯಭಾಷಿಕರು ತುಂಬಿದ್ದಾರೆ. ಸಾಲದೆಂಬಂತೆ ಅಮೆರಿಕಾದಿಯಾಗಿ ಪ್ರಪಂಚದಲ್ಲಿರುವ ಸಕಲ ಜನಜಾತಿಗೆ ಬೆಂಗಳೂರು ಬೀಡಾಗಿದೆ"(ತುಷಾರ ಮೇ ೨೦೧೨, ಪುಟ. ೧೭). ಹೀಗೆ 'ಉಡುಪಿ ಶ್ರೀಕೃಷ್ಣ ದರ್ಶಿನಿ' ಹೋಟೆಲು ಆರಂಭವಾಗುತ್ತದೆ. ಮರುದಿನವೇ ಬೈಟು ಕಾಫಿ ಒಂದಿಬ್ಬರ ಬೋಣಿಗೆಯಷ್ಟೇಯಾಗಿತ್ತು. ಕೃಷ್ಣಭಟ್ಟರು ಹಲವು ತಾಪತ್ರಯಗಳನ್ನೇ ಅನುಭವಿಸುತ್ತಾರೆ. ಮುನ್ಸಿಪಾಲ್ಟಿ ಪರವಾನಗಿ ಅಧಿಕಾರಿಯ ಆರ್ಭಟ ಐದುನೂರರ ಎರಡು ನೋಟುಗಳಲ್ಲದೆ ತಿಂಡಿ-ತಿನಿಸುಗಳನ್ನು ಫ್ರೀಯಾಗಿ ಪಡೆಯುತ್ತಾನೆ. ನಂತರ ನಗರಪಾಲಿಕೆ ಆರೋಗ್ಯಾಧಿಕಾರಿ ಬಂದು ಅವರು ಅದೇ ರಾಗ ತೆಗೆದಾಗ ಅವರಿಗೂ ಅದೇ ಸನ್ಮಾನವನ್ನು ಕೊಡುತ್ತಾರೆ. ಇನ್ನು ಗ್ಯಾಸನ್ನು ಸರಬರಾಜು ಮಾಡುವ ಹುಡುಗನಿಗೆ ೨೦ ರೂಪಾಯಿ ಹಾಗೂ ಫ್ರೀಯಾಗಿ ಬೇಡಿದ ತಿಂಡಿಯನ್ನು ತಯಾರಿಸುತ್ತಾರೆ. ಮತ್ತೆ ನಾಡಹಬ್ಬ ಧರ್ಮದ ಹೆಸರಿನಲ್ಲಿ ಚಂದಾದಾರರಿಗೆ ಹಣ ಕೊಡಬೇಕಾಗಿ ಬಂತು. ಹಾಗೆಯೇ ಪಿಗ್ಮಿಯವರು ಫ್ರೀಯಾಗಿ ಊಟ ಮಾಡುವುದು, ಹಾಲು ಸರಬರಾಜು ಮಾಡುವವರು, ಚಹಾಪುಡಿ ಸರಬರಾಜು ಮಾಡುವವರು, ವಾಟರ್‌ಬಿಲ್ ತೆಗೆದುಕೊಳ್ಳುವವರು, ಲೈಟ್‌ಬಿಲ್ ತೆಗೆದುಕೊಳ್ಳುವವರು, ತರಕಾರಿ ತರುವವರು, ಮನೆಯ ಯಜಮಾನರು, ನೀರು ತರುವವರು, ಪಾಲಿಕೆ ಕಾರ್ಮಿಕರು, ಬ್ಯಾಂಕ್ ಮ್ಯಾನೇಜರ್ ಹೀಗೆ ಅಸಂಖ್ಯಾತ ನಾನ್ ಗ್ರಾಹಕರು ಅವರು ಬಂದ ಸಮಯಕ್ಕೆ ತಿಂಡಿ, ಊಟ, ಕಾಫಿ, ಟೀ ಫ್ರೀಯಾಗಿ ಕತ್ತರಿಸಿ ಹೋಗುತ್ತಿದ್ದರು. ಹೀಗೆ ಗ್ರಾಮೀಣ ಪ್ರದೇಶವಾದ ವಿಟ್ಲದಲ್ಲಿ ಹೋಟೆಲು ನಡೆಸುತ್ತಿದ್ದ ಕೃಷ್ಣಭಟ್ಟರು ಮಹತ್ವಾಕಾಂಕ್ಷಿಯಂತೆ ಬೆಂಗಳೂರು ನಗರದಲ್ಲಿ ಹೋಟೆಲೊಂದನ್ನು ಪ್ರಾರಂಭಿಸುತ್ತಾರೆ. ಆದರೆ, ಅಲ್ಲಿನ ಪರಿಸ್ಥಿತಿಗಳು ಅವರಿಗೆ ಪ್ರತಿಕೂಲವಾಗಿ ಪರಿಣಮಿಸಿದ್ದರಿಂದ ಬೆಂಗಳೂರು ಹೋಟೆಲನ್ನು ಮುಚ್ಚಿ ಮರಳಿ ತಮ್ಮ ಊರಲ್ಲೇ ಹೋಟೆಲನ್ನು ಪುನರಾರಂಭಿಸುತ್ತಾರೆ. ಇದು ಪ್ರಸ್ತುತ ಕಥೆಯಲ್ಲಿ ಚಿತ್ರಿತವಾದ ಮಾಲೀಕರ ಸ್ಥಿತ್ಯಂತರದ ಬಗೆಯಾಗಿದೆ.

ಬಿ.ಎಲ್. ವೇಣು ಅವರ 'ಗೌರಿ ಮೆಸ್ಸು' ಎಂಬ ಕಥೆಯಲ್ಲಿ ಹೆಣ್ಣುಮಗಳೊಬ್ಬಳು ಮೆಸ್ಸಿನ ಮಾಲೀಕಳಾಗಿರುವುದು ಚಿತ್ರಿತವಾಗಿದೆ. ಮೂಬಳ್ಳಿ ಬಸ್‌ಸ್ಟಾಂಡಿನಲ್ಲಿ ಗೌರಿ ಮೆಸ್ಸು ಒಂದೇ ಇರುವುದರಿಂದ ಜನಪ್ರಿಯವಾಗಿತ್ತು. ಇಲ್ಲಿ ಟಿಫಿನ್ ಮತ್ತು ಊಟ ಪೂರೈಸುತ್ತಿದ್ದುದರಿಂದ ಟಿಫಿನ್ ರೂಂ ಮೆಸ್ಸು ಇವುಗಳಿಂದ ಗೌರಿ ಡಬಲ್ ರೋಲ್ ಮಾಲೀಕಳಾಗಿದ್ದಳು. ದಿನಕ್ಕೆ ಐದಾರು ಬಸ್ಸುಗಳಲ್ಲಿ ಬರುವ ಪ್ರಯಾಣಿಕರಿಗೆ ಊಟ-ತಿಂಡಿ ಕೊಟ್ಟು ಸಂಪಾದಿಸಿದ ಲಾಭದಲ್ಲಿ ಮನೆಯ ಒಟ್ಟು ಖರ್ಚು-ವೆಚ್ಚ ತೊಂದರೆ ಇಲ್ಲದಂತೆ ನಿಭಾಯಿಸುತ್ತಿದ್ದಳು. ಗೌರಿಯು ಉತ್ತಮ ಮೈಮಾಟ ತುಂಬಿಕೊಂಡಿದ್ದರಿಂದ ಗ್ರಾಹಕರು ಶುಚಿ-ರುಚಿಗೆ ಮಹತ್ವ ಕೊಡದೆ ಅವಳಿಗೆ ಮಹತ್ವ ಕೊಡುತ್ತಿದ್ದರು. ಕುರಿಡಿಹಳ್ಳಿಯಲ್ಲಿ ತಾಜಾ ಉಡುಪಿ ಹೋಟೆಲು ಇದ್ದರೂ ಬಸ್ಸಿನ ಚಾಲಕ ಮತ್ತು ನಿರ್ವಾಹಕರಿಗೆ ಗೌರಿ ಮೆಸ್ಸು ಅಚ್ಚುಮೆಚ್ಚಾಗಿತ್ತು. ಮೆಸ್ಸಿಗೆ ಗ್ರಾಹಕರಾಗಿ ಬರುವ ಅತಿರಥ-ಮಹಾರಥರ ಕಣ್ಣುಗಳಿಗೆ ಮತ್ತು ಹೊಟ್ಟೆಗೆ ಈ ಎರಡು ಬಗೆಯ ಹಸಿವನ್ನು ಗೌರಿ ಮೆಸ್ಸು ನಿಭಾಯಿಸುತ್ತಿತ್ತು. ನಂತರ ಗ್ರಾಹಕರಾಗಿ ಮೆಸ್ಸಿಗೆ ಬಂದ ಹೊಸ ಮೇಸ್ತ್ರಿ ರಾಮಮೂರ್ತಿಯನ್ನು ಗೌರಿ ಮೆಸ್ಸು ಸೆಳೆದುಕೊಳ್ಳದೆ ಇರಲಿಲ್ಲ. ಮೊದಲು ಮೆಸ್ಸಿಗೆ ಬರುತ್ತಿದ್ದ ಗ್ರಾಹಕರು ಗೌರಿಯ ಅಂದಚಂದಕ್ಕೆ ಮಾರುಹೋಗಿದ್ದರು. ಇದಕ್ಕೆ ವ್ಯತಿರಿಕ್ತವಾಗಿ ಗೌರಿಯು ಮೆಸ್ಸಿಗೆ ಗ್ರಾಹಕನಾಗಿ ಬಂದ ರಾಮಮೂರ್ತಿಯ ಮೈಮಾಟಕ್ಕೆ ಮೆಸ್ಸಿನ ಮಾಲಕಿ ಮಾರುಹೋಗುತ್ತಾಳೆ. ಗೌರಿಯು ಮೊದಲಿಗೆ ಮೆಸ್ಸಿಗೆ ಗ್ರಾಹಕರಾಗಿ ಬರುತ್ತಿದ್ದವರ ಬಗೆಗೆ ಕೀಳರಿಮೆ ಮನೋಭಾವ ತೋರುತ್ತಿದ್ದರು. ರಾಮಮೂರ್ತಿಯು ಗೌರಿಯ ಮನಸ್ಸಿನ ತುಂಬೆಲ್ಲಾ ಆವರಿಸಿಕೊಂಡದ್ದನ್ನು ಆಕೆ ಊಟ ಬಡಿಸುವಾಗ ತೋರ್ಪಡಿಸುತ್ತಾಳೆ. ಊಟ ಬಡಿಸುವಾಗ ತನ್ನ ಅಂಗಾಂಗಗಳನ್ನು ಆತನಿಗೆ ಪ್ರದರ್ಶಿಸುವುದರ ಮೂಲಕ ಗಮನ ಸೆಳೆಯುತ್ತಾಳೆ. ರಾಮಮೂರ್ತಿ ಊಟದ ಶುಚಿ ರುಚಿಯ ಬಗೆಗೆ ಹೊಗಳಿದಾಗ ಗೌರಿ ಹಿರಿಹಿರಿ ಹಿಗ್ಗುತ್ತಿದ್ದಳು. ಗೌರಿ ಹಾಗೂ ರಾಮಮೂರ್ತಿ ಪ್ರೇಮಕ್ಕೆ ತಿರುಗಿ ವಿವಾಹಬಂಧನಕ್ಕೆ ಪರಸ್ಪರ ಒಪ್ಪಿಕೊಳ್ಳುವ ಸನ್ನಿವೇಶವನ್ನು ಮೂಬಳ್ಳಿಯ ಮೆಸ್ಸಿನ ಮುಖೇನ ಆಕೆಯ ಮನಸ್ಸಿನಲ್ಲಿ ಉಂಟಾದ ಪಲ್ಲಟಗಳನ್ನು ಇಲ್ಲಿ ಚಿತ್ರಿಸಲಾಗಿದೆ.

ಗೌರಿಗೂ ರಾಮಮೂರ್ತಿ ಮೇಸ್ತ್ರಿಗೂ ಪ್ರೇಮಾಂಕುರವಾಗುತ್ತದೆ. ಅವರಿಬ್ಬರ ಪ್ರೇಮ ವ್ಯವಹಾರವು ಹೋಟೆಲಿನ ಸಹಾಯಕರಿಗಾಗಲೀ ಊರವರಿಗಾಗಲೀ ಗೊತ್ತಿಲ್ಲದೇ ಗುಪ್ತರೀತಿಯಲ್ಲಿ ಮುಂದುವರಿಯುತ್ತದೆ. ಪ್ರೇಮಿಗಳಾದ ಗೌರಿ ಮತ್ತು ರಾಮಮೂರ್ತಿ ಮದುವೆಯಾಗುವ ನಿರ್ಧಾರಕ್ಕೆ ಬಂದು ಒಂದು ದಿನ ಊರು ಬಿಟ್ಟು ಹೊರಡುತ್ತಾರೆ. ಆದರೆ, ಅದೇ ವೇಳೆಗೆ ಗೌರಿಯ ಮಾವನಾದ ಕೊಟ್ರೇಸಿಗೆ ಸಂದೇಹ ಉಂಟಾಗಿ ಅವರನ್ನು ಹಿಂಬಾಲಿಸುತ್ತಾನೆ. ಮೋಟಾರು ಸೈಕಲಿನಲ್ಲಿ ಹೊರಟಿದ್ದ ಗೌರಿ ಮತ್ತು ಮೇಷ್ಟ್ರು ಕಡೆಗೆ ಕೊಟ್ರೇಸಿಯು ಕಲ್ಲನ್ನು ಎಸೆಯುತ್ತಾನೆ.

ಅವರಿಬ್ಬರು ಕೆಳಗೆ ಬೀಳುತ್ತಾರೆ. ಆಗ ಗೌಡರು ಮತ್ತು ಶಾನುಭೋಗರ ಬೆಂಬಲಿಗರೆಲ್ಲಾ ಸೇರಿ ಅವರನ್ನು ಹೊಡೆಯುತ್ತಾರೆ. ಗಾಯಗೊಂಡು ಬಿದ್ದಿದ್ದ ಅವರಿಬ್ಬರನ್ನು ಪರೀಕ್ಷಿಸಲು ಡಾಕ್ಟರರನ್ನು ಕರೆಸುತ್ತಾರೆ. ಡಾಕ್ಟರು ಪರೀಕ್ಷೆ ಮಾಡಿ ಅವರಿಬ್ಬರು ಸತ್ತು ಹೋಗಿದ್ದಾರೆ ಎಂದು ಹೇಳುತ್ತಾರೆ. ಡಾಕ್ಟರು ಮಾತು ನಂಬಿದ ಜನರು ಆ ದೇಹಗಳನ್ನು ಊರ ಹೊರಗಿದ್ದ ಮರ ಒಂದಕ್ಕೆ ನೇತು ಹಾಕುತ್ತಾರೆ. ಮರುದಿನ ಬಂದು ನೋಡಿದಾಗ ಮರದಲ್ಲಿ ನೇತುಹಾಕಿದ್ದ ದೇಹಗಳು ಮಾಯ ವಾಗಿದ್ದವು. ಆಗ ಅವರಿಬ್ಬರು ಸತ್ತಿರಲಿಲ್ಲ. ವೈದ್ಯರು ಸುಳ್ಳು ಹೇಳಿರಬೇಕು. ಹಾಗಾಗಿ ನೇತು ಹಾಕಿದ ಅವರು ಅಲ್ಲಿಂದ ಬಿಡಿಸಿಕೊಂಡು ಹೋಗಿರಬೇಕು. ಎಂಬ ಸಂದೇಹ ಜನರಲ್ಲಿ ಮೂಡುತ್ತದೆ. ಹೀಗೆ ಗೌರಿಯು ನಡೆಸುತ್ತಿದ್ದ ಮೆಸ್ಸಿನ ಕಾರಣದಿಂದಾಗಿ ಅವಳ ಬದುಕಿನಲ್ಲಿ ಗಮನಾರ್ಹ ಸ್ಥಿತ್ಯಂತರ ಉಂಟಾಗುತ್ತದೆ. ಇದು ಸತ್ಪರಿಣಾಮವನ್ನು ಉಂಟುಮಾಡದಿದ್ದರೂ ಬದುಕಿನಲ್ಲಾಗುವ ಸ್ಥಿತ್ಯಂತರವೆಂಬ ಕಾರಣಕ್ಕೆ ಇಲ್ಲಿ ಮುಖ್ಯವಾಗುತ್ತದೆ.

ಮೇಲೆ ಗಮನಿಸಿದ ಕನ್ನಡದ ಸಣ್ಣಕಥೆ–ಕಾದಂಬರಿಗಳು ಹೋಟೆಲು ಮಾಲೀಕರ ಜೀವನದಲ್ಲಾದ ವಿವಿಧ ಬಗೆಯ ಸ್ಥಿತ್ಯಂತರಗಳನ್ನು ಹಲವು ನೆಲೆಗಳಲ್ಲಿ ಚಿತ್ರಿಸಿವೆ. ಕೆಲವು ಮಾಲೀಕರು ತಮ್ಮ ಹೋಟೆಲು ವ್ಯವಹಾರದಲ್ಲಿ ಪ್ರಗತಿ ಸಾಧಿಸಿದರೆ ಇನ್ನು ಕೆಲವರು ಅವನತಿಯತ್ತ ಸಾಗುತ್ತಾರೆ. ಇನ್ನೂ ಕೆಲವು ಮಾಲೀಕರು ಒಂದು ಹಂತದವರೆಗೆ ಪ್ರಗತಿಯನ್ನು ಸಾಧಿಸಿ ನಂತರದಲ್ಲಿ ಅವನತಿ ಹೊಂದಿದ ಉದಾಹರಣೆಗಳೂ ಇವೆ. ಇಲ್ಲಿ ಗಮನಿಸಿದ ಬಹುಪಾಲು ಸಣ್ಣಕಥೆ–ಕಾದಂಬರಿಗಳು ಗ್ರಾಮೀಣ ಪ್ರದೇಶದ ಹೋಟೆಲು ಮಾಲೀಕರ ಬದುಕಿನ ಸ್ಥಿತ್ಯಂತರವನ್ನು ಚಿತ್ರಿಸುವಂಥವು. ಆದರೆ, ಒಂದೆರಡು ಕೃತಿಗಳಲ್ಲಿ ಗ್ರಾಮೀಣ ಪ್ರದೇಶದ ವ್ಯಕ್ತಿಗಳು ನಗರಗಳಿಗೆ ಹೋಗಿ ಅಲ್ಲಿ ಹೋಟೆಲು ಮಾಲೀಕರಾಗಿ ಅದರಿಂದ ಸಂಪಾದಿಸಿದ ಹಣದಲ್ಲಿ ತಮ್ಮ ಗ್ರಾಮೀಣ ಪ್ರದೇಶದ ಮನೆ ಮತ್ತು ಪರಿಸರವನ್ನು ಅಭಿವೃದ್ಧಿಪಡಿಸಿದ ಉದಾಹರಣೆಗಳು ಇಲ್ಲಿವೆ.

### ೪.೨. ಕಾರ್ಮಿಕರ ನೆಲೆಯಲ್ಲಾಗುವ ಸ್ಥಿತ್ಯಂತರ

ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಹೋಟೆಲು ಕಾರ್ಮಿಕನಾಗಿದ್ದ ನರಸಿಂಹನು ಕ್ರಮೇಣ ಹೋಟೆಲು ಮಾಲೀಕನಾಗುವ ಸ್ಥಿತ್ಯಂತರದ ಬದುಕು ಕಲಾತ್ಮಕವಾಗಿ ಮೂಡಿ ಬಂದಿದೆ. ನರಸಿಂಹನು ಬೆಂಗಳೂರಿಗೆ ಹೆರ್ಳೆಯವರ ಹೋಟೆಲಲ್ಲಿ ಮಾಣಿಯಾಗಿ ಕೆಲಸ ಮಾಡುತ್ತಿದ್ದು, ಹೀಗೆ ಹೋಟೆಲು ಮಾಣಿ ಕೆಲಸದ ಮೂಲಕ ಸಂಪಾದಿಸಿದ ಹಣದಿಂದ ಊರಿನಲ್ಲಿರುವ ತನ್ನ ಪೂರ್ವಿಕರ ಮನೆಯನ್ನು ನವೀಕರಣಗೊಳಿಸುತ್ತಾನೆ. ಮುಂದೆ ತನ್ನ ಭಾವನ ಜೊತೆ ಸೇರಿಕೊಂಡು ಬೆಂಗಳೂರಿನಲ್ಲೇ ಮೂರು ಹೋಟೆಲುಗಳ ಮಾಲೀಕನಾಗುತ್ತಾನೆ.

ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯ ಕಥಾನಾಯಕ ನಾದ ಭುಜಂಗಯ್ಯನು ಆರಂಭದಲ್ಲಿ ಮೈಸೂರಿನ ಹೋಟೆಲೊಂದರಲ್ಲಿ ಕಾರ್ಮಿಕನಾಗಿ ಕೆಲಸ

ಮಾಡುತ್ತಿದ್ದು, ನಂತರದಲ್ಲಿ ತನ್ನ ಹಳ್ಳಿಗೆ ಮರಳಿ ಸ್ವತಃ ಹೋಟೆಲು ಮಾಲೀಕನಾಗುತ್ತಾನೆ. ಭುಜಂಗಯ್ಯನು ತನ್ನ ಭೂತಕಾಲವನ್ನು ಮೆಲುಕು ಹಾಕುವ ಸನ್ನಿವೇಶದ ಮೂಲಕ ನಾವಿದನ್ನು ತಿಳಿದುಕೊಳ್ಳಬಹುದಾಗಿದೆ. "ತಾನೊಮ್ಮೆ ಅಪ್ಪನ ಮೇಲೆ ಕೋಪಗೊಂಡು ಕೆಲವು ದಿನ ಮನೆ ಬಿಟ್ಟು ಹೋಗಿದ್ದನ್ನು ತನ್ನ ಮಾವ ಈಗ ಎತ್ತಿ ಆಡಿದ್ದು ತಾನು ಹೋಗಿದ್ದು ನಿಜ. ಅದನ್ನು ಯಾರಾದರೂ ಹೇಳಿದಾಗ ತನಗೇಕೆ ಇಷ್ಟು ಕೋಪ? ನೀರಿನ ಗಾಡಿಯನ್ನು ಕಟ್ಟಿಕೊಂಡು ಕೊಳದ ಕಡೆ ಹೊರಟ ಭುಜಂಗಯ್ಯನಿಗೆ ಬೇರೆ ಯಾವುದರ ಪರಿವೆಯೂ ಇದ್ದಂತಿರಲಿಲ್ಲ. ತಾನು ಯಾರಿಂದಲೂ ಯಾವ ಮಾತನ್ನೂ ಕೇಳಿಸಿಕೊಂಡವನಲ್ಲ. ತನ್ನ ಅಪ್ಪನೇ ಅಂದದ್ದನ್ನು ಸಹಿಸದೆ ತಾನೇ ಆಗ ಮನೆ ಬಿಟ್ಟಿದ್ದು. ಸುಮಾರು ದಿನ ಎಲ್ಲೆಲ್ಲೋ ಸುತ್ತಿ ಕಡೆಗೆ ಮೈಸೂರಿನ ಹೋಟೆಲೊಂದರಲ್ಲಿ ಕೆಲಸಕ್ಕೆ ಸೇರಿದ್ದು. ತನ್ನ ಊರವರೊಬ್ಬರ ಕಣ್ಣಿಗೆ ಬಿದ್ದು ಅವರು ಏನು ಮಾಡಿದರೂ ಬಿಡದೆ ಅಲ್ಲಿಂದ ಎಳೆದು ತಂದದ್ದು, ಇದಾದ ಮೇಲೆ ಅಪ್ಪ ಇನ್ನು ಯಾವತ್ತೂ ಮನೆ ಬಿಟ್ಟು ಹೋಗದಂತೆ ಆಣೆ ಪ್ರಮಾಣ ಮಾಡಿಸಿಕೊಂಡಿದ್ದು-ಎಲ್ಲಾ ಚಿತ್ರಗಳು ಭುಜಂಗಯ್ಯನ ಕಣ್ಣಿಗೆ ಕಟ್ಟತೊಡಗಿದವು. ಮೈಸೂರು ಹೋಟೆಲೊಂದರಲ್ಲಿ ತನ್ನನ್ನು ಕರೆದು ತಂದ ವ್ಯಕ್ತಿ ಊರ ತುಂಬ ತನ್ನ ಬಗ್ಗೆ ತಾನು ಮಾಡುತ್ತಿದ್ದ ವೃತ್ತಿಯ ವಿವರಗಳನ್ನು ವ್ಯಾಖ್ಯಾನಿಸಿದ್ದ. ಇದರಿಂದಾಗಿ ಅಪ್ಪ ತನ್ನನ್ನು ಮಠಕ್ಕೆ ಕರೆದುಕೊಂಡು ಹೋಗಿ ಸ್ವಾಮಿಗಳಿಂದ ಶುದ್ಧಗೊಳಿಸಿ ಲಿಂಗಧಾರಣೆ ಮಾಡಿಸಿದ್ದರು(ಶ್ರೀಕೃಷ್ಣ ಆಲನಹಳ್ಳಿ, ೧೯೭೮, ಪುಟ. ೨೪). ಈ ಘಟನೆ ನಡೆದು ಎಷ್ಟೋ ವರ್ಷಗಳ ಬಳಿಕ ಭುಜಂಗಯ್ಯನು ತನ್ನ ಊರಿನಲ್ಲಿ ಸ್ವಂತ ಹೋಟೆಲೊಂದನ್ನು ನಡೆಸುತ್ತಾನೆ.

ಇದೇ ಕಾದಂಬರಿಯಲ್ಲಿ ಗುರುಮಲ್ಲ, ಮಂಜ, ಶಿವು ಮತ್ತು ಗಡ್ಡ ಉರುಪ ಎಂಬ ಕಾರ್ಮಿಕರ ಸ್ವಾರಸ್ಯಕರ ಪಾತ್ರಗಳಿವೆ. ಅವರಲ್ಲಿ ಗುರುಮಲ್ಲನು ಮೈಸೂರು ಹೋಟೆಲೊಂದರಲ್ಲಿ ಮಾಣಿಯಾಗಿ ಕೆಲಸ ಮಾಡುತ್ತಿದ್ದು, ಭುಜಂಗಯ್ಯನು ಅವನನ್ನು ತಿಂಡಿ ತಯಾರಿಸಲೆಂದು ತನ್ನ ಹೋಟೆಲಿಗೆ ಕರೆತರುತ್ತಾನೆ. ವಿಭಿನ್ನ ವ್ಯಕ್ತಿತ್ವಗಳುಳ್ಳ ಹೋಟೆಲು ಕಾರ್ಮಿಕರ ಬದುಕಿನ ಏಳು-ಬೀಳುಗಳನ್ನು ಕಾದಂಬರಿಯು ರಸವತ್ತಾಗಿ ಚಿತ್ರಿಸುತ್ತದೆ.

ನಾ. ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯು ಸಾಂತೇರುಗುತ್ತಿನ ಯುವಕರು ಹೋಟೆಲು ಕಾರ್ಮಿಕರಾಗಿ ನಂತರದಲ್ಲಿ ಮಾಲೀಕರಾದ ಸ್ಥಿತಿಯನ್ನು ಚಿತ್ರಿಸಿದೆ. ಸಾಂತೇರುಗುತ್ತಿನ ಬಾಬು ಪೂಜಾರಿಯ ಮಗ, ಕೃಷ್ಣಭಟ್ಟರ ಒಕ್ಕಲುಗಳ ಮಕ್ಕಳು ನಗರದ ಹೋಟೆಲು ಕೆಲಸಕ್ಕಿದ್ದು ಆರ್ಥಿಕವಾಗಿ ಪ್ರಗತಿ ಹೊಂದಿರುತ್ತಾರೆ. ನಂತರ ಬಾಬು ಪೂಜಾರಿಯ ಮಗ ಮುಂಬಯಿ ನಗರದಲ್ಲಿ ಹೋಟೆಲು ಪ್ರಾರಂಭಿಸುತ್ತಾನೆ. ಅಲ್ಲಿನ ಆದಾಯದಿಂದ ಊರಿನಲ್ಲಿರುವ ಮನೆಯ ಖರ್ಚುವೆಚ್ಚವನ್ನು ಉತ್ತಮ ರೀತಿಯಲ್ಲಿ ನಿಭಾಯಿಸುತ್ತಿರುತ್ತಾನೆ. ಕೃಷ್ಣಭಟ್ಟರು ಒಕ್ಕಲು ಮಕ್ಕಳು ಬಿಜಾಪುರದಲ್ಲಿ ಸತತವಾಗಿ ಹೋಟೆಲು ಕೆಲಸದಿಂದ ಒಳ್ಳೆಯ ಸಂಭಾವನೆಯನ್ನು ಪಡೆಯುತ್ತಿರುತ್ತಾರೆ.

ಬಂದ ಸಂಭಾವನೆ ಕ್ರೋಢೀಕರಿಸಿ ನಗರದಲ್ಲಿಯೇ ಹೋಟೆಲೊಂದನ್ನು ಪ್ರಾರಂಭಿಸಿರುತ್ತಾರೆ. ಇದು ಅವರ ಚಾಣಾಕ್ಷತನ ಮತ್ತು ದುಡಿಮೆಯ ಫಲದಿಂದ ಸಾಧ್ಯವಾಗಿರುತ್ತದೆ. ನಗರದಲ್ಲಿ ಒಕ್ಕಲು ಮಗಳು ಹೋಟೆಲೊಂದನ್ನು ಆರಂಭಿಸಿದ್ದು ಸಾಂತೇರುಗುತ್ತಿನಲ್ಲಿ ದೊಡ್ಡ ಸುದ್ದಿಗೆ ಕಾರಣವಾಗುತ್ತದೆ. ಹೀಗೆ ತುಳುನಾಡಿನ ಕೃಷಿಕ ಒಕ್ಕಲುಗಳ ಮಕ್ಕಳು ಹೋಟೆಲು ಮಾಲೀಕರಾಗಿ ರುವುದೇ ಒಂದು ಬಗೆಯ ಗ್ರಾಮೀಣ ಪರಿಸರದಲ್ಲಿ ಸ್ಥಿತ್ಯಂತರಕ್ಕೆ ಕಾರಣವಾಗುತ್ತದೆ. ಅವರು ಆರ್ಥಿಕವಾಗಿ, ಬೌದ್ಧಿಕವಾಗಿ, ಸಾಮಾಜಿಕವಾಗಿ, ಹಳ್ಳಿಯ ಕಾರ್ಮಿಕರಾಗಿ ಮಾಲೀಕರಾದದ್ದರಿಂದ ಅವರ ಕುಟುಂಬವರ್ಗದವರಲ್ಲಿ ಸಂತಸದ ಕ್ಷಣಗಳು ಉಂಟಾದದ್ದನ್ನು ಕಾದಂಬರಿಯು ಕಲಾತ್ಮಕತೆ ಯಿಂದ ಬಿಚ್ಚಿಟ್ಟಿದೆ.

ದು.ನಿಂ. ಬೆಳಗಲಿ ಅವರ 'ಖಾತ್ರಾಳ ರತ್ನಿಯ ಚಾದಂಗಡಿ' ಕಾದಂಬರಿಯಲ್ಲೂ ಕಾರ್ಮಿಕರ ಸ್ಥಿತ್ಯಂತರದ ಬದುಕಿನ ಚಿತ್ರಣವಿದೆ. ರತ್ನಿಯ ಚಾದಂಗಡಿಯಲ್ಲಿ ತಿಂಡಿ–ತಿನಿಸು ತಯಾರಿಸುವ ಗಂಗಪ್ಪ, ಮಾಣಿ ಕೆಲಸ ಮಾಡುತ್ತಿದ್ದ ನರೂನ್, ಕಸ–ಮುಸುರೆ ಕೆಲಸ ಮಾಡುತ್ತಿದ್ದ ಸೀತವ್ವ ಮುಂತಾದ ಕಾರ್ಮಿಕರಿದ್ದು ಇವರೆಲ್ಲರ ಬದುಕಿನಲ್ಲಿ ಹೇಳಿಕೊಳ್ಳುವಂತಹ ಸ್ಥಿತ್ಯಂತರಗಳೇನು ಉಂಟಾಗುವುದಿಲ್ಲ. ಅನಕ್ಷರಸ್ಥನಾಗಿದ್ದ ನರೂನ್ ಮಾತ್ರ ಹೋಟೆಲಿನ ಗೋಡೆಗಳಲ್ಲಿ ಅಂಟಿಸಿದ್ದ ಚಿತ್ರಪಟಗಳನ್ನು ನೋಡಿ ನೋಡಿ ಅಕ್ಷರಗಳನ್ನು ಕಲಿತುಕೊಳ್ಳುತ್ತಾನೆ. ಆ ಮೂಲಕ ಚಾದಂಗಡಿಗೆ ಅವಶ್ಯವಿದ್ದ ಸಾಮಾನುಗಳನ್ನು ಪಟ್ಟಿ ಮಾಡಿಕೊಂಡು ತರುವಷ್ಟರಮಟ್ಟಿಗೆ ಸುಧಾರಣೆಗೊಳ್ಳುತ್ತಾನೆ.

ಕೆ.ಟಿ. ಗಟ್ಟಿ ಅವರ 'ಪುನರಪಿ ಜನನ' ಹೋಟೆಲು ಕಾರ್ಮಿಕರ ಚಿತ್ರಣವುಳ್ಳ ಕಾದಂಬರಿ ಯಾಗಿದೆ. ಶಂಕರಭಟ್ಟ ಮತ್ತು ಖಾಸಿಮರು ಗ್ರಾಹಕರಾಗಿ ಮುಂಬಯಿ ಹೋಟೆಲೊಂದರಲ್ಲಿ ವಾಸ್ತವ್ಯ ಹುಡಿರುತ್ತಾರೆ. ಆಗ ಆಕಸ್ಮಿಕವಾಗಿ ಶಂಕರಭಟ್ಟ ಸಾವಿಗೀಡಾಗುತ್ತಾನೆ. ಖಾಸಿಮನು ಮಡಿವಂತರ ಮಧ್ಯ ಬದುಕಲಿಕ್ಕಾಗಿ ಬ್ರಾಹ್ಮಣ ಶಂಕರಭಟ್ಟನಾಗಿ ಮಾರುವೇಷ ಧರಿಸಿ ವಿಶ್ವಾಸ ಗಳಿಸುತ್ತಾನೆ. ಅಲ್ಲದೇ ಪ್ರತಿಷ್ಠಿತ ಹೋಟೆಲೊಂದರಲ್ಲಿ ಕಾರ್ಮಿಕನಾಗಿ ಕೆಲಸಕ್ಕೆ ಸೇರಿಕೊಳ್ಳುತ್ತಾನೆ. ಮಾಲೀಕರು, ಗ್ರಾಹಕರು ನಂಬುವಂತೆ ಕೃತಕ ಜನಿವಾರ ಧಾರಣ ಮಾಡಿಕೊಳ್ಳುತ್ತಾನೆ. ಖಾಸಿಮನು ಶಂಕರಭಟ್ಟನಾಗಿ ಹೋಟೆಲು ಕಾರ್ಮಿಕನಾದುದನ್ನು ಕಾದಂಬರಿಯು ಚಿತ್ರಿಸುತ್ತದೆ.

ಪೂರ್ಣಚಂದ್ರತೇಜಸ್ವಿ ಅವರ 'ಚಿದಂಬರ ರಹಸ್ಯ' ಕಾದಂಬರಿಯಲ್ಲೂ ಹೋಟೆಲು ಕಾರ್ಮಿಕರ ಬದುಕಿನ ಸ್ಥಿತ್ಯಂತರವು ಮೂಡಿಬಂದಿದೆ. ಹಾಸನ ಜಿಲ್ಲೆಯ ಹಳ್ಳಿ ಹೋಟೆಲೊಂದರಲ್ಲಿ ಕಾರ್ಮಿಕನಾಗಿ ಮ್ಯಾಶಿಯನ್ ಮುತ್ತು ಚಿತ್ರಿತನಾಗಿದ್ದಾನೆ. ಹೋಟೆಲಿಗೆ ಬರುವ ಗ್ರಾಹಕರಿಂದ ಬಣ್ಣ ಬಣ್ಣದ ಕ್ಯಾಮರವನ್ನು ಕಡಿಮೆ ಬೆಲೆಗೆ ತೆಗೆದುಕೊಳ್ಳುತ್ತಾನೆ. ನಂತರದಲ್ಲಿ ಅವುಗಳನ್ನು ಹೆಚ್ಚಿನ ಬೆಲೆಗೆ ಮಾರುತ್ತಾನೆ. ಗ್ರಾಹಕರು ಮುತ್ತುಗೆ ಅಪರೂಪಕ್ಕೆ ಕೊಟ್ಟ ವಸ್ತುಗಳನ್ನು ದೊಡ್ಡ

ಮಟ್ಟದ ಬೆಲೆಗೆ ಮಾರಿ ಹಣ ಸಂಪಾದಿಸುವುದನ್ನು ಪ್ರಸ್ತುತ ಕಾದಂಬರಿಯು ಚಿತ್ರಿಸುತ್ತದೆ. ಹೀಗೆ ಹೋಟೆಲು ಕಾರ್ಮಿಕನಾಗಿದ್ದ ಮ್ಯಾಥ್ಯೂಸ್ ಮುತ್ತು ಕಾರ್ಮಿಕನಾಗಿದ್ದುಕೊಂಡೆ ತನ್ನ ಚಾಕಚಕ್ಯತೆ ಯಿಂದಾಗಿ ಸ್ಥಿತಿವಂತನಾಗುತ್ತಾನೆ.

ಯಶವಂತ ಚಿತ್ತಾಲರ 'ತ್ರಯೋದಶ ಪುರಾಣ' ಕತೆಯು ಹೋಟಲಿನ ಚಿತ್ರಣದೊಂದಿಗೆ ಮೂಡಿ ಬಂದಿದೆ. ಇಡೀ ಕತೆಯ ಆವರಣದೊಳಗೆ ಹೋಟೆಲಿನ ದಿನನಿತ್ಯದ ವಿವಿಧ ಕೆಲಸಗಳು ತಿಂಡಿ–ತಿನಿಸುಗಳ ವಿವರಗಳು ಇವೆಲ್ಲಾ ಹಾಸುಹೊಕ್ಕಾಗಿವೆ. ಇದು ಹೋಟೆಲು ಕಾರ್ಮಿಕರ ಮನಸ್ಥಿತಿಗಳನ್ನು ವಿವರಿಸುವ ಕತೆಯಾಗಿದೆ. ಮುಖ್ಯವಾಗಿ ಗಣೇಶ ಮತ್ತು ಗೋಪಾಲ ಎಂಬ ಹೋಟೆಲು ಕಾರ್ಮಿಕರಿಬ್ಬರ ಸಂಭಾಷಣೆಯ ಮೂಲಕ ಜಾತಿವ್ಯವಸ್ಥೆಯ ವಿನ್ಯಾಸವನ್ನು ಇದು ಬಿಚ್ಚಿಡುತ್ತದೆ. "ನಮ್ಮ ಅಪ್ಪ ಹೇಳುತ್ತಾರೆ ನಿಮ್ಮ ಜಾತೀನೇ ಬಹಳ ಕೆಟ್ಟದಂತೆ, ಮೂರು ಸಾವಿರ ವರ್ಷಗಳಿಂದ ನೀವು ಉಳಿದೆಲ್ಲಾ ಜಾತಿಯವರ ಶೋಷಣೆ ಮಾಡುತ್ತಾ ಬಂದೀರಂತೆ". ಗೋಪಾಲನ ಮಾತುಗಳು ಗಣೇಶನನ್ನು ಅಸ್ವಸ್ಥಗೊಳಿಸಿದವು. ಮಾತುಗಳಿಗಿಂತ ಅವುಗಳಲ್ಲಿ ಇದೆಯೆಂದು ಅನ್ನಿಸಿದ ದ್ವೇಷ ಹೆಚ್ಚು ಕಾಡಿತ್ತು. ಹೇಗೆ ಉತ್ತರಿಸಬೇಕು ಎನ್ನುವುದು ತಿಳಿಯದೇ "ಏನೋಪಾ, ನನಗೀಗ ಬರೀ ಹದಿಮೂರು ವರ್ಷ ವಯಸ್ಸು ಎಂದ. ಈ ದನಿಯಲ್ಲಿ ಅವನಿಗೆ ಗೊತ್ತಾಗುವ ಮೊದಲೇ ಒಂದು ಬಗೆಯ ದೈನ್ಯ, ಭಯ ಬಂದು ಸೇರಿಕೊಂಡಿದ್ದವು". ಗೋಪಾಲನಿಗೆ ಮಾತ್ರ ಅವುಗಳ ಅರಿವಾಗಲಿಲ್ಲ. ಮುಂದಿನ ತನ್ನ ಮಾತುಗಳಿಗೆ ಈ ಉತ್ತರದ ಅವಶ್ಯಕತೆಯೇ ಇರಲಿಲ್ಲ ಎನ್ನುವ ಹಾಗೆ 'ನೀವು ಹಾರುವರು ಮಾತಿನಲ್ಲಿ ಜಾಣರು' ಎಂದ. ಗಣೇಶನ ಮಾತಿನ ಅರ್ಥ ತಿಳಿಯದೇ ಕಿರಿಕಿರಿ ಆದಂತೆಯೂ ಇತ್ತು. ಈ ಮಾತುಗಳ ಅರ್ಥ ಸ್ವತಃ ಆಡಿದ ಗಣೇಶನಿಗೆ ಆಗಿತ್ತೆಂದಲ್ಲ. ಇಷ್ಟೇ ನನ್ನ ಆರೋಪದ ಅರ್ಥ ನನಗಾಗುತ್ತಿಲ್ಲವಪ್ಪಾ ಎನ್ನುವ ಧಾಟಿಯಲ್ಲಿ ಬಂದ ಮಾತುಗಳು. ಅವು ಹುಟ್ಟಿಕೊಂಡ ಸಂದರ್ಭದಿಂದಲೇ ಆಡಿದವನ ಸಣ್ಣ ವಯಸ್ಸಿನ ಬುದ್ಧಿಗೆ ಹೊಳೆದದ್ದಕ್ಕಿಂತ ಹೆಚ್ಚಿನ ಅರ್ಥ ಧ್ವನಿಸಿದ್ದವು. ಮೂರು ಸಾವಿರ ವರ್ಷಗಳ ಇತಿಹಾಸದ ಕಲ್ಪನೆ ಹದಿಮೂರು ವರ್ಷದ ಚಿಕ್ಕ ಹುಡುಗನ ಅನುಭವದ ಪ್ರಜ್ಞೆಯ ಅಳವಿನ ಆಚೆಯದಾಗಿತ್ತು. ಗೋಪಾಲ ಹಿಂದೆಗೆಯಲಿಲ್ಲ. ಮಗ್ಗಲು ಬದಲಿಸಿ ಗೆಳೆಯನೆಡೆಗೆ ಬೆನ್ನು ತಿರುವುತ್ತಿದ್ದಾಗ 'ದುಷ್ಟರು ಶುದ್ಧ ಬ್ರಾಹ್ಮಣ ಸೂಳೆಮಕ್ಕಳು' ಎಂದೇ ಕೇಳಿದ. ಗಣೇಶ ವಿಹ್ವಲನಾದ: ಕೇಳಿದ್ದು ಬರಿಯ ಐದು ಶಬ್ದಗಳಿದ್ದವು ಎಂದು ತೋರಲಿಲ್ಲ. ಏಕೆಂದರೆ ಅವುಗಳ ಹಿಂದೆಯೇ ಕರುಳಲ್ಲಿ ಸೇರಿಕೊಂಡ ನಡುಕವನ್ನು ತಡೆಯಲು ಹೊದಿಕೆಯನ್ನು ಗಟ್ಟಿಯಾಗಿ ಅವಚಿ ಹಿಡಿಯಬೇಕಾಯಿತು"(ಯಶವಂತ ಚಿತ್ತಾಲ, ೨೦೦೭, ಪುಟ ೭೧). ಇಲ್ಲಿ ಗೋಪಾಲನಾಡಿದ ಕುಹಕದ ಮಾತುಗಳಿಂದ ಗಣೇಶನ ಮನಸ್ಸು ವಿಹ್ವಲಗೊಳ್ಳುತ್ತದೆ. ಹೀಗಾಗಿ ಗ್ರಾಮೀಣ ಪ್ರದೇಶದಿಂದ ದೂರದ ಮುಂಬಯಿಗೆ ಬಂದು ಹೋಟೆಲು ಕಾರ್ಮಿಕನಾಗಿ ದುಡಿಯುತ್ತಿದ್ದ ಗಣೇಶನು ಸಹ ಕಾರ್ಮಿಕನ ನಿಂದನೆಯ

ಮಾತುಗಳಿಗೆ ಬೇಸತ್ತು ತನ್ನ ಹೋಟೆಲು ಕೆಲಸವನ್ನು ಬಿಟ್ಟು ಮರಳಿ ತಂದೆ-ತಾಯಿಗಳು ನೆಲೆಸಿದ್ದ ಕೊಲ್ಲಾಪುರಕ್ಕೆ ತೆರಳುತ್ತಾನೆ.

ಯು.ಆರ್. ಅನಂತಮೂರ್ತಿಯವರ 'ಬರ' ಕಥೆಯಲ್ಲಿ ಹೋಟೆಲು ಕಾರ್ಮಿಕನಾದ ಭೀಮೋಜಿಯ ವರ್ಣರಂಜಿತವಾದ ಬದುಕಿನ ಚಿತ್ರಣವಿದೆ. ಹಳ್ಳಿಯಿಂದ ಬೊಂಬಾಯಿಗೆ ಕದ್ದು ಓಡಿಹೋದ ಪ್ರಸಂಗವಿದೆ. ಭೀಮೋಜಿ ನಗರಪ್ರದೇಶದಲ್ಲಿ ಹಲವು ರೀತಿಯ ಕೆಲಸ ಮಾಡುತ್ತಾನೆ. ಮುಂದೆ ಹೋಟೆಲಲ್ಲಿ ಪಿಂಪ್, ಮಾಣಿ, ಕೊನೆಗೆ ಕ್ಯಾಶಿಯರಾಗಿ ಮಾಲೀಕನಿಗೆ ಆಪ್ತನಾಗುತ್ತಾನೆ. ಭೀಮೋಜಿ ಕ್ಯಾಶಿಯರ್ ಆದದ್ದರಿಂದ ಪ್ರತಿನಿತ್ಯ ಕ್ಯಾಶ್ ಬಾಕ್ಸಿನಿಂದ ಹಣ ತೆಗೆದು ಜೇಬು ತುಂಬಿಸಿಕೊಳ್ಳುತ್ತಾನೆ. ಇದರಿಂದ ಸಾಯಂಕಾಲ ಸ್ಕೂಲಿಗೆ ಹೋಗಿ ಓದಿ ಕಾಲೇಜು ಮುಗಿಸುತ್ತಾನೆ. ಕೈಯಲ್ಲಿಷ್ಟು ಕಾಸು ಮಾಡಿಕೊಂಡು ತನ್ನ ಹಳ್ಳಿಗೆ ಮರಳುತ್ತಾನೆ. ಬಂದಾದ ನಂತರ ಸೋದರಮಾವನ ಮಗಳನ್ನು ಮದುವೆಯಾಗುತ್ತಾನೆ. ಜೊತೆಗೆ ಲಾ ಪಾಸು ಮಾಡಿ ಕೂಲಿಕಾರರ ಸಂಘದಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾನೆ. ಇಲ್ಲಿ ಹೋಟೆಲು ಕಾರ್ಮಿಕನಾಗಿ ನೈತಿಕತೆ-ಅನೈತಿಕತೆಯ ಗೋಡವೆಯಿಲ್ಲದೆ ಪರಿಶ್ರಮ ಪಟ್ಟು ದುಡಿದು ಹಂತಹಂತವಾಗಿ ಪ್ರಗತಿಯನ್ನು ಸಾಧಿಸಿದ ವ್ಯಕ್ತಿಯೊಬ್ಬನ ಚಿತ್ರಣವಿದೆ.

ಮೇಲೆ ಗಮನಿಸಿದ ಸಣ್ಣಕಥೆ-ಕಾದಂಬರಿಗಳಲ್ಲಿ ಹೋಟೆಲು ಕಾರ್ಮಿಕರು ಶ್ರಮಪಟ್ಟು ಸ್ಥಿತಿವಂತರೆನಿಸಿದ ಚಿತ್ರಣವಿದ್ದರೆ, ಇನ್ನೂ ಕೆಲವಡೆಗಳಲ್ಲಿ ಹೋಟೆಲು ಕಾರ್ಮಿಕರ ಸಂಕಷ್ಟದ ಬದುಕಿನ ಚಿತ್ರಣವು ಇರುವುದುಂಟು. ಉದಾಹರಣೆಗಾಗಿ ಕುಂ.ವೀರಭದ್ರಪ್ಪನವರ 'ಕೊಟ್ರೇಶಿ ಕನಸು' ಕಾದಂಬರಿಯಲ್ಲಿನ ಸನ್ನಿವೇಶವೊಂದನ್ನು ಗಮನಿಸಬಹುದು. ಗ್ರಾಮೀಣ ಪರಿಸರದ ಹೋಟೆಲೊಂದರಲ್ಲಿ ಮಲ್ಲಯ್ಯನೆಂಬ ಗ್ರಾಹಕನಾಡಿದ ಹಲ್ಕ ಮಾತುಗಳು ಹೋಟೆಲು ಮಾಣಿಗೆ ಕರ್ಣ ಕಠೋರವೆನಿಸುತ್ತದೆ. "ಅರೆ, ಸುವ್ವರ್ ಕೀ ಬಚ್ಚೆ, ಕೂಗಿದ್ದು ಕೇಳಿಸಿಲಿಲ್ವಾ ಕಿವಿಗೇನಾಗೈತಿ ಧಾಡಿ"(ವೀರಭದ್ರಪ್ಪ ಕುಂ., ೨೦೧೦, ಪುಟ ೧೫೧) ಎಂಬ ಗ್ರಾಹಕನ ಬೈಗುಳಗಳ ಧಾಟಿಯನ್ನು ಹೋಟೆಲು ಮಾಣಿಗೆ ಸಹಿಸಲು ಸಾಧ್ಯವಾಗಲಿಲ್ಲ. ಈಗಾಗಲೇ ಇಂತಹ ಹಲವು ವಿಷಮ ಪರಿಸ್ಥಿತಿಗಳನ್ನು ಆತ ಎದುರಿಸಿ ಸಹಿಸಿಕೊಂಡಿದ್ದಾಗಿದೆ. ಅಪ್ಪ ಮಾಡಿದ ಸಾಲ ತೀರಿಸಲಿಕ್ಕಾಗಿ ಆತ ಹೋಟೆಲು ಮಾಣಿಯಾಗಿ ದುಡಿಯುತ್ತಿದ್ದನು. ಇಲ್ಲಿ ಸಪ್ಲೈ ಕೆಲಸ ಕಲಿತುಕೊಂಡು ಹೊಸಪೇಟೆಗೋ, ದಾವಣಗೆರೆಗೋ ಓಡಿ ಹೋಗಿ ಅಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಸೇರಿಕೊಳ್ಳುವ ಆಸೆ. ನೂರಾರು ರೂಪಾಯಿ ಸಂಪಾದಿಸಿ ಅಪ್ಪ ಕುಡಿತದಿಂದ ಕಳೆದಿರುವ ಆಸ್ತಿಯನ್ನು ಮರಳಿ ಪಡೆಯುವುದು. ಹೀಗೆ ಗ್ರಾಮೀಣ ಪರಿಸರದ ಯುವಕನೋರ್ವನು ಕಾರ್ಮಿಕನಾಗಿ ಸಂಕಷ್ಟಕ್ಕೀಡಾದದ್ದನ್ನು ಕಾದಂಬರಿಯು ಬಿಚ್ಚಿಟ್ಟಿದೆ.

ನಿಜಜೀವನದಲ್ಲಿ ಕೆಲವು ಹೋಟೆಲು ಕಾರ್ಮಿಕರು ಶ್ರಮಪಟ್ಟು ದುಡಿದು ಸ್ಥಿತಿವಂತರಾದರೆ ಇನ್ನೂ ಕೆಲವರು ಮತ್ತಷ್ಟು ಸಂಕಷ್ಟದ ಸ್ಥಿತಿಯನ್ನು ಅನುಭವಿಸುತ್ತಾರೆ. ಬಹುತೇಕ ಕನ್ನಡದ

ಸಣ್ಣಕಥೆ–ಕಾದಂಬರಿಗಳು ಗ್ರಾಮೀಣ ಪರಿಸರದ ಹೋಟೆಲು ಕಾರ್ಮಿಕರು ಸ್ಥಿತಿವಂತರಾಗಿ ಬೆಳೆದುದನ್ನು ಚಿತ್ರಿಸುತ್ತವೆ. ಎಲ್ಲೋ ಅಲ್ಲೊಂದು ಇಲ್ಲೊಂದರಂತೆ ಕೃತಿಗಳು ಮಾತ್ರ ಹೋಟೆಲು ಕಾರ್ಮಿಕರ ಸಂಕಷ್ಟದ ಬದುಕನ್ನು ಚಿತ್ರಿಸುತ್ತವೆ. ಆದರೆ ನಗರಪ್ರದೇಶದ ಹೋಟೆಲುಗಳ ಸಂದರ್ಭದಲ್ಲಿ ಇದಕ್ಕೆ ತೀರ ಭಿನ್ನವಾದ ಸನ್ನಿವೇಶಗಳನ್ನು ಕನ್ನಡದ ಸಣ್ಣಕಥೆ–ಕಾದಂಬರಿಗಳು ಪಡಿಮೂಡಿಸಿವೆ. ನಗರಪ್ರದೇಶದ ಕಾರ್ಮಿಕರ ಸಂಕಷ್ಟದ ಬದುಕಿನ ಚಿತ್ರಣಕ್ಕೆ ಕನ್ನಡದ ಸಣ್ಣಕಥೆ–ಕಾದಂಬರಿಗಳಲ್ಲಿ ಹೆಚ್ಚಿನ ಅವಕಾಶ ದೊರೆತಿದೆ ಎನ್ನಬಹುದು.

### ೪.೩. ಗ್ರಾಹಕರ ನೆಲೆಯಲ್ಲಾಗುವ ಸ್ಥಿತ್ಯಂತರ

ಸಾಮಾಜಿಕ ಬದುಕಿನಲ್ಲಿ ಊಟ–ಉಪಚಾರಗಳಿಗಾಗಿ ಹೋಟೆಲಿಗೆ ಬರುವ ಗ್ರಾಹಕರ ಬದುಕಿನಲ್ಲೂ ಹೋಟೆಲಿನ ಕಾರಣದಿಂದಾಗಿ ಕೆಲವು ಸ್ಥಿತ್ಯಂತರಗಳಾಗುವುದುಂಟು. ಇದರಲ್ಲೂ ಇತ್ಯಾತ್ಮಕ ಸ್ಥಿತ್ಯಂತರ ಮತ್ತು ನೇತ್ಯಾತ್ಮಕ ಸ್ಥಿತ್ಯಂತರಗಳೆಂದು ಎರಡು ಮುಖಗಳಿರುತ್ತವೆ. ಹೋಟೆಲಿಗೆ ಬರುವ ಇತರ ಗ್ರಾಹಕರ ಸಂಪರ್ಕದಿಂದಾಗಿ ಗ್ರಾಹಕನೊಬ್ಬನು ತನ್ನ ಬದುಕನ್ನು ರೂಢಿಸಿಕೊಳ್ಳುವ ಸಾಧ್ಯತೆ ಇದೆ. ಅದೇ ರೀತಿ ಹೋಟೆಲಿನ ತಿಂಡಿ–ತಿನಿಸುಗಳಿಗಾಗಿ ಕೈಯಲ್ಲಿದ್ದ ದುಡ್ಡನ್ನೆಲ್ಲಾ ವ್ಯಯಿಸುವ ಸಂದರ್ಭವೂ ಇದೆ. ಈ ಬಗೆಯ ಸ್ಥಿತ್ಯಂತರಗಳು ಹೋಟೆಲಿನ ಕಾರಣದಿಂದಾಗಿ ಸಂಭವಿಸುವುದರಿಂದ ನಮಗಿಲ್ಲಿ ಪ್ರಸ್ತುತವೆನಿಸುತ್ತವೆ. ಕನ್ನಡದ ಕೆಲವು ಸಣ್ಣಕತೆ–ಕಾದಂಬರಿಗಳು ಹೋಟೆಲು ಗ್ರಾಹಕರ ಬದುಕಿನಲ್ಲಾಗುವ ಇಂತಹ ಸ್ಥಿತ್ಯಂತರಗಳನ್ನು ಕಲಾತ್ಮಕವಾಗಿ ಕಟ್ಟಿಕೊಟ್ಟಿವೆ.

ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಹೋಟೆಲಿನ ಗ್ರಾಹಕರ ಬದುಕು ಸ್ಥಿತ್ಯಂತರಕ್ಕೊಳಗಾಗುವ ಸನ್ನಿವೇಶವಿದೆ. ಶಿಕ್ಷಣದ ಸಲುವಾಗಿ ಲಚ್ಚನು ತನ್ನ ಪಡಮುನ್ನೂರಿಂದ ಪಕ್ಕದ ಪಟ್ಟಣವಾದ ಕುಂದಾಪುರಕ್ಕೆ ಹೋಗಬೇಕಾಗಿ ಬಂತು. ಅಲ್ಲಿ ಅನಿವಾರ್ಯವಾಗಿ ಹೋಟೆಲಿನ ಊಟ–ಉಪಾಹಾರಗಳನ್ನು ಅವನು ಸೇವಿಸಬೇಕಾಗಿ ಬಂತು. ನಿರಂತರವಾಗಿ ಹೋಟೆಲಿನ ಊಟ–ಉಪಾಹಾರಗಳನ್ನು ಸೇವಿಸುವುದರಿಂದ ಆತನ ಆರೋಗ್ಯವು ಹದಗೆಟ್ಟಿತ್ತು. ಜೊತೆಗೆ ನಾನಾ ದುಶ್ಚಟಗಳಿಗೆ ಬಲಿಯಾಗಿ ರೋಗಪೀಡಿತನಾಗುತ್ತಾನೆ. ಇದರಿಂದಾಗಿ ಆತನ ವೈವಾಹಿಕ ಜೀವನವು ತೊಂದರೆಗೊಳಗಾಗುತ್ತದೆ. ಲಚ್ಚನು ಮುಂದೆ ಗೋಟರ ಹೋಟೆಲನ್ನು ಬಿಟ್ಟು ಕಿಟ್ಟಿಯ ಹೋಟೆಲಿನಲ್ಲಿ ಊಟ–ಉಪಾಹಾರವನ್ನು ಸೇವಿಸಲು ಪ್ರಾರಂಭಿಸುತ್ತಾನೆ. ಅಲ್ಲಿಯೂ ಸಮಸ್ಯೆಗಳು ಅವನನ್ನು ಬೆಂಬಿಡದೆ ಕಾಡುತ್ತವೆ. ಹೀಗೆ ಲಚ್ಚನ ಪಾತ್ರದ ಮೂಲಕ ಹೋಟೆಲು ಗ್ರಾಹಕನೊಬ್ಬನ ಬದುಕಿನಲ್ಲಾಗುವ ನೇತ್ಯಾತ್ಮಕ ಸ್ಥಿತ್ಯಂತರವನ್ನು ಕಾದಂಬರಿಯು ಇಲ್ಲಿ ಪಡಿಮೂಡಿಸಿದೆ.

ಮುಂದೆ ಲಚ್ಚನು ವಿವಿಧೆಡೆಗಳಲ್ಲಿ ಸ್ವಂತ ಹೋಟೆಲುಗಳನ್ನು ಪ್ರಾರಂಭಿಸುತ್ತಾನೆ. ಆದರೆ ಅಲ್ಲಿಯೂ ಅವನು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅನೇಕ ಕಡೆ ಸಾಲ–ಸೋಲ ಮಾಡಿ ನಷ್ಟವನ್ನು ಅನುಭವಿಸುತ್ತಾನೆ. ಹೀಗೆ ಪ್ರಾರಂಭದಲ್ಲಿ ಓರ್ವ ಹೋಟೆಲು

ಗ್ರಾಹಕನಾಗಿ ಕಾಣಿಸಿಕೊಂಡ ಲಕ್ಷ್ಮಿನಾರಾಯಣ(ಲಚ್ಚ)ನು ಕಾದಂಬರಿಯಲ್ಲಿ ಮುಂದೆ ಓರ್ವ ಹೋಟೆಲು ಮಾಲೀಕನಾಗಿ ಸ್ಥಿತ್ಯಂತರಗೊಳ್ಳುತ್ತಾನೆ. ಆದರೆ ಗ್ರಾಹಕನಾಗಿಯೂ ಮಾಲೀಕನಾಗಿಯೂ ಫಲಪ್ರದ ಬದುಕನ್ನು ಕಟ್ಟಿಕೊಳ್ಳಲು ಆತನಿಂದ ಸಾಧ್ಯವಾಗುವುದಿಲ್ಲ.

ಕೆ.ಪಿ. ಪೂರ್ಣಚಂದ್ರತೇಜಸ್ವಿ ಅವರ 'ಸ್ವರೂಪ', 'ಜುಗಾರಿ ಕ್ರಾಸ್' ಕಾದಂಬರಿಗಳಲ್ಲಿ ಹೋಟೆಲಿನ ಗ್ರಾಹಕರ ಮನಸ್ಸಿನಲ್ಲಾದ ತಳಮಳಗಳನ್ನು ಚಿತ್ರಿಸುತ್ತವೆ. ಸ್ವರೂಪ ಕಾದಂಬರಿಯಲ್ಲಿನ ಶ್ರೀನಿವಾಸನು ಹೋಟೆಲಿನ ಗ್ರಾಹಕನಾಗಿ ಪ್ರವೇಶ ಪಡೆಯುತ್ತಾನೆ. ಮೈಸೂರಿನ ಕಾಫಿ ಕ್ಲಬ್ಬೊಂದರಲ್ಲಿ ಕುಳಿತು ಏಕಾಕಿತನ ಹಾಗೂ ಅಭಿವ್ಯಕ್ತಿ ಭಾಷೆಯ ತೊಡಕಿನ ಪ್ರಶ್ನೆಗಳನ್ನು ಕುರಿತು ಚಿಂತಿಸುತ್ತಾನೆ. ಅಲ್ಲಿ ಮೌನವು ಬೆನ್ನುಹತ್ತಿ ಬಂದಂತೆ ಅವನಿಗೆ ಭಾಸವಾಗುತ್ತದೆ. ಅದೇ ಸಮಯಕ್ಕೆ ವಿಕಾರ ರೂಪದ ಭಿಕ್ಷುಕ ಬಂದು ಇವನೆಡೆಗೆ ಕೈಚಾಚುತ್ತಾನೆ. ಭಿಕ್ಷುಕ ಮೂಕನಿರಬೇಕು ಎಂಬ ಅನಿಸಿಕೆಯ ಜೋತೆಗೆ ಅಪರಿಚಿತ ಭಯವು ಅವನಲ್ಲಿ ಆವರಿಸುತ್ತದೆ. ಕೂಡಲೇ ಭಿಕ್ಷುಕನನ್ನು ಹೋಟೆಲಿನಿಂದ ಹೊರಹಾಕುವಂತೆ ಮಾಲೀಕನಿಗೆ ಸೂಚಿಸುತ್ತಾನೆ. ಹೀಗೆ ಶ್ರೀನಿವಾಸನು ಹೋಟೆಲಿನ ಗ್ರಾಹಕನಾದ ಸಂದರ್ಭದಲ್ಲಿ ಎದುರಿಸಿದ ಘಟನೆಗಳನ್ನು ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ಜುಗಾರಿ ಕ್ರಾಸ್ ಕಾದಂಬರಿಯಲ್ಲಿ ಸುರೇಶ ಮತ್ತು ಗೌರಿ ಹೋಟೆಲೊಂದರಲ್ಲಿ ಪ್ರವೇಶಿಸುವ ಸನ್ನಿವೇಶವಿದೆ. ಸುರೇಶ ಹಾಗೂ ಗೌರಿ ಸ್ನಾಕ್ ಬಾರಿನ ಫ್ಯಾಮಿಲಿ ರೂಮಿನಲ್ಲಿ ಕುಳಿತು ೧,೫೬,೮೦೦ ರೂಪಾಯಿಗಳನ್ನು ಎಣಿಸುವುದು ಕಂಡು ಗೌರಿ ಗಾಬರಿಗೊಳ್ಳುತ್ತಾಳೆ. ಕಾದಂಬರಿಯು ದಂಪತಿಗಳೀರ್ವರ ಮನಸ್ಸಿನಲ್ಲಾದ ಉತ್ಸಾಹ ಹಾಗೂ ಆಶ್ಚರ್ಯದ ಸನ್ನಿವೇಶಗಳನ್ನು ಕಟ್ಟಿಕೊಟ್ಟಿದೆ.

ಶ್ರೀಕೃಷ್ಣ ಆಲನಹಳ್ಳಿ ಅವರ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲೂ ಹೋಟೆಲು ಗ್ರಾಹಕರ ಸ್ಥಿತ್ಯಂತರದ ಬದುಕಿನ ಚಿತ್ರಣವಿದೆ. ಬಳೆಶೆಟ್ಟರು ಭುಜಂಗಯ್ಯನ ಹೋಟೆಲಿನ ಖಾಯಂ ಗ್ರಾಹಕರಾಗುತ್ತಾರೆ. ತನ್ನ ಮಗಳಿಗೆ ತಾನು ಯೋಗ್ಯನಾದ ವರನೊಬ್ಬನನ್ನು ಹುಡುಕುವುದಾಗಿ ಹೋಟೆಲಿಗೆ ಬರುವ ಇತರ ಗ್ರಾಹಕರ ಜೊತೆಗೂ ಮಾಲೀಕನಾದ ಭುಜಂಗಯ್ಯನ ಜೊತೆಗೂ ಪ್ರಸ್ತಾಪಿಸುತ್ತಾರೆ. ಮುಂದೆ ಹೋಟೆಲಿಗೆ ಬರುವ ಇತರ ಗ್ರಾಹಕರೊಂದಿಗೆ ಸೇರಿ ಇಸ್ಪೀಟಾಟದ ಚಟವನ್ನು ರೂಢಿಸಿಕೊಳ್ಳುತ್ತಾರೆ. ಮಗಳಾದ ಸುಶೀಲೆಗೂ ಈ ಚಟದಿಂದ ಅವರನ್ನು ಮುಕ್ತರಾಗಿಸಲು ಸಾಧ್ಯವಾಗುವುದಿಲ್ಲ. ಹೋಟೆಲು ಗ್ರಾಹಕರಾದುದರಿಂದಲೇ ಬಳೆಶೆಟ್ಟರ ಬದುಕಿನಲ್ಲಿ ಇಂತಹ ನೇತ್ಯಾತ್ಮಕ ಸ್ಥಿತ್ಯಂತರ ಉಂಟಾಗುತ್ತದೆ. ಸುಶೀಲೆ ದೇವರ ಸಮ್ಮುಖದಲ್ಲಿ ಮಾಲೆ ಬದಲಾಯಿಸಿ ಭುಜಂಗಯ್ಯನ ಎರಡನೇ ಹೆಂಡತಿಯಾಗುತ್ತಾಳೆ. ಇದರಿಂದಾಗಿ ಭುಜಂಗಯ್ಯನ ಹೋಟೆಲಲ್ಲಿ ಮಾದಳ್ಳಿಯ ವೀರಶೈವ ಜನಾಂಗದವರು ಯಾರೂ ಹೋಗಬಾರದೆಂದು ಕಟ್ಟಪ್ಪಣೆ ಮಾಡಲಾಯಿತು. ಇದನ್ನು ಮೀರಿ ಈಗಾಗಲೇ ಹೋಟೆಲಲ್ಲಿ ಟೀ ಕುಡಿಯುವ, ತಿಂಡಿ ತಿನ್ನುವ ಅಭ್ಯಾಸ ಮಾಡಿಕೊಂಡವರು ಗುರುಹಿರಿಯರ ಕಟ್ಟಳೆಯನ್ನು ಮೀರಿ ಹೋಟೆಲಿನ ಗ್ರಾಹಕರಾಗುತ್ತಾರೆ.

ಮದುವೆಯಾದ ಮೇಲೆ ಸುಶೀಲೆ ತಾನೇ ಎಲ್ಲ ಖರ್ಚುವೆಚ್ಚಗಳ ಜವಾಬ್ದಾರಿ ಹೋಟೆಲಿನ ಕೆಲಸಗಳನ್ನು ನಿರ್ವಹಿಸುತ್ತಾಳೆ. ಇತ್ತೀಚೆಗೆ ಗಲ್ಲಾದ ಮೇಲೆ ಕೂರುತ್ತಿದ್ದಳು. ಗ್ರಾಹಕರಲ್ಲಿ ಅವಳು ಹೋಟೆಲಿನ ಒಂದು ಭಾಗ ಅನ್ನುವಂತೆ ಭಾವನೆ ಮೂಡಿತ್ತು.

ಬಿ.ಎಲ್. ವೇಣು ಅವರ 'ಗೌರಿ ಮೆಸ್ಸು' ಕತೆಯಲ್ಲಿ ರಾಮಮೂರ್ತಿ ಗ್ರಾಹಕನಾಗಿ ಚಿತ್ರಿತನಾಗಿದ್ದಾನೆ. ಇಲ್ಲಿ ಹಳ್ಳಿಯ ರೊಟ್ಟಿ, ಸಾಂಬಾರು ನಗರದ ಹೋಟೆಲಿಗಿಂತ ಗೌರಿ ಮೆಸ್ಸಿನಲ್ಲಿ ಗಮನ ಸೆಳೆಯುತ್ತವೆ. ಹಬ್ಬ-ಹರಿದಿನಗಳಲ್ಲಿ ಮೆಸ್ಸು ಬಂದಾದಾಗಲೂ ರಾಮಮೂರ್ತಿ ಕ್ಯಾರಿಯರ್ ಮೂಲಕ ತಂದು ಸೇವಿಸುವ ಪರಿಪಾಟ ಬೆಳೆಸಿಕೊಂಡನು. ಒಂದೊಂದು ಸಲ ರಾತ್ರಿ ಊಟ ಒಯ್ಯಲು ಬಂದಾಗ ಗೌರಿಯ ಅಂದ-ಚಂದವನ್ನು ಓರೆಗಣ್ಣಿನಿಂದ ನೋಡಿ ಸವಿಯುತ್ತಿದ್ದುದನ್ನು ಒಂದು ದಿನ ತನ್ನ ಮನಸ್ಸಿನ ಇಚ್ಛೆಯನ್ನು ಗೌರಿಯೊಂದಿಗೆ ವ್ಯಕ್ತಪಡಿಸುತ್ತಾನೆ. ಅವಳು ಜಾತಿಯ ಬಗ್ಗೆ ಕ್ಯಾತೆ ತೆಗೆದಾಗ ಮನುಷ್ಯ ಕುಲದ ಮಹಿಮೆಯನ್ನು ತಿಳಿಸುತ್ತಾನೆ. ತನ್ನ ಜೊತೆ ಹೊರಟು ಬರುವುದಾದರೆ ಮದುವೆಯಾಗುವ ಭರವಸೆಯನ್ನು ಕೊಡುವುದಾಗಿ ಗೌರಿಯೊಂದಿಗೆ ಹೇಳುತ್ತಾನೆ. ನಗರದಲ್ಲಿ ನೆಲೆ ನಿಲ್ಲುವ ತನ್ನ ಭಾವನೆಯನ್ನು ವ್ಯಕ್ತಪಡಿಸುತ್ತಾನೆ. ಅವಳು ಒಪ್ಪಿದಾಗ ಭಾಷೆ ಪಡೆಯುತ್ತಾನೆ. ಇದಾದಾಗ ಮನಸ್ಸಿನಲ್ಲಿ ತಾಕಲಾಟದಿಂದಾಗಿ ಪಾಠಪ್ರವಚನದಲ್ಲಿ ಇಚ್ಛಾಶಕ್ತಿಯಲ್ಲಿ ಕೊರತೆಯುಂಟಾಗುತ್ತದೆ. ಗೌರಿಯು ತನ್ನನ್ನೂ ಪ್ರೇಮಿಸಿರುವುದನ್ನು ಆಕ್ಷಣವನ್ನು ಮಾನವೀಯ ನೆಲೆಯಲ್ಲಿ ಪ್ರಶ್ನಿಸಿಕೊಳ್ಳುತ್ತಾನೆ. ದಿನ ನಿಗದಿ ಮಾಡಿದಂತೆ ಗೌರಿ ಮೆಸ್ಸಿನಿಂದ ಆಕೆ ಬಂದಾಗಿನ ಕ್ಷಣವಂತೂ ಸ್ವರ್ಗದ ಬಾಗಿಲು ತೆರೆದಂತೆ ರಾಮಮೂರ್ತಿಯಲ್ಲಿ ಭಾಸವಾಗುತ್ತದೆ. ಹೀಗಿರುವಾಗ ಗೌರಿಯ ಸೋದರಮಾವನಾದ ಕೊಟ್ರೇಸಿಯು ಓಡಿಹೋಗುವ ಸಂದರ್ಭದಲ್ಲಿ ಇಬ್ಬರನ್ನು ಓಡಾಡಿ ಬಡಿದನು. ಗೌಡರ ಸಲಹೆಯಂತೆ ಅವರ ಸಂಗಡಿಗರು ಹುಣಸೆ ಮರಕ್ಕೆ ಇಬ್ಬರನ್ನೂ ಕಟ್ಟುತ್ತಾರೆ. ನಂತರವೂ ಊರಿನ ಜನ ಹಾಗೂ ಕೊಟ್ರನು ಹಿಗ್ಗಾಮುಗ್ಗಾ ಕಲ್ಲನ್ನು ಅವರ ಮೇಲೆ ಎಸೆಯುತ್ತಾರೆ. ಕೇರಿಯ ತುಕ್ರನಾದಿಯಾಗಿ ಎಲ್ಲರೂ ಸವೆಸತೊಡಗಿದರು. ಅವರು ಮಾತ್ರ ರಕ್ತದಲ್ಲಿ ತೊಯ್ದು ಹೀನಾಯ ಸ್ಥಿತಿಯಲ್ಲಿ ಧ್ವನಿ ಕಳೆದುಕೊಂಡಿದ್ದರು. ಇದಾದ ನಂತರ ನಿದ್ದೆ ಬಾರದೆ ಕೊಟ್ರೇಸಿ ಮರದ ಕಡೆಗೆ ಬಂದಾಗ ಕಟ್ಟಿದ ಶವಗಳು ನಾಪತ್ತೆ ಹಾಗೂ ಅವರು ತಂದ ಬೈಕು ನಾಪತ್ತೆಯಾಗಿತ್ತು. ಹೀಗೆ ಗೌರಿ ಮೆಸ್ಸಿನಲ್ಲಿ ನಿತ್ಯ ಊಟ ಮಾಡಲು ಬರುತ್ತಿದ್ದ ರಾಮಮೂರ್ತಿ ಮೇಷ್ಟ್ರು ಗೌರಿಯ ಮೋಹಕ್ಕೊಳಗಾಗಿ ಪರಸ್ಪರ ಪ್ರೀತಿಸುವುದರಿಂದ ಹೋಟೆಲು ಗ್ರಾಹಕನಾಗಿ ಬಂದ ಆತನ ಬದುಕಿನಲ್ಲಿ ಮಹತ್ವದ ಸ್ಥಿತ್ಯಂತರ ಉಂಟಾಗುತ್ತದೆ.

ಮಾವಿನಕೆರೆ ರಂಗನಾಥ್ ಅವರ 'ಉಳಿದದ್ದು ಆಕಾಶ' ಕತೆಯಲ್ಲಿ ಐತಾಳರ 'ರಾಘವೇಂದ್ರ ಕಾಫಿ ಕ್ಲಬ್ಬಿ'ಗೆ ಗ್ರಾಹಕರಾಗಿ ಬಂದ ನಾರಾಯಣ ಜೋಯಿಸ ಮತ್ತು ಪಾರ್ವತಿ ದಂಪತಿಗಳು ಅದೇ ಹೋಟೆಲನ್ನು ಖರೀದಿ ಮಾಡಿ ಮಾಲೀಕರಾಗಿ ಸ್ಥಿತ್ಯಂತರಗೊಳ್ಳುವ ಸನ್ನಿವೇಶದ ಚಿತ್ರಣವಿದೆ.

ಮುಂದಿನ ಹಂತದಲ್ಲಿ ಕತೆಯು ಹೋಟೆಲು ಮಾಲೀಕರಾಗಿ ಸ್ಥಿತ್ಯಂತರಗೊಂಡ ನಾರಾಯಣ ಜೋಯಿಸ ಮತ್ತು ಪಾರ್ವತಿಯರ ಬದುಕಿನ ಸಂಕೀರ್ಣತೆಯನ್ನು ಚಿತ್ರಿಸುತ್ತದೆ. ತನ್ನ ಫಲವತ್ತಾದ ಜಮೀನನ್ನು ಮಾರಾಟ ಮಾಡಬೇಕಾದ ಅನಿವಾರ್ಯ ಸ್ಥಿತಿ ಬಂದುದಕ್ಕಾಗಿಯೋ ಏನೋ ಖಿನ್ನತೆಗೊಳಗಾದ ನಾರಾಯಣ ಜೋಯಿಸನು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. 'ಪಾರ್ವತಮ್ಮ' ಹೋಟೆಲಿನ ಮಾಲೀಕಳೆನಿಸಿಕೊಂಡ ಆತನ ಮಡದಿ ಪಾರ್ವತಿಯು ತನ್ನ ಹೋಟೆಲು ವ್ಯವಹಾರದಲ್ಲಿ ಪ್ರಗತಿಯನ್ನು ಸಾಧಿಸುತ್ತಾಳೆ. ಹೀಗೆ ಗ್ರಾಹಕರಾಗಿ ಬಂದವರು ಹೋಟೆಲಿನ ಮಾಲೀಕರಾಗಿ ಸ್ಥಿತ್ಯಂತರ ಗೊಳ್ಳುವ ಸನ್ನಿವೇಶವನ್ನು ಕಟ್ಟಿಕೊಡುವ ಪ್ರಸ್ತುತ ಕತೆಯು ಆ ಸ್ಥಿತ್ಯಂತರದೊಳಗಿನ ಸಂಕೀರ್ಣತೆಯನ್ನು ಅನಾವರಣಗೊಳಿಸುತ್ತದೆ.

ಒಟ್ಟಾರೆಯಾಗಿ ನೈಜ ಬದುಕಿನಲ್ಲಿ ಗ್ರಾಹಕರಾದವರಿಗೆ ಹೋಟೆಲೆಂಬುದು ಒಂದು ಅನಿವಾರ್ಯ ಸಾಧನವೆಂಬುದನ್ನು ಚಿತ್ರಿಸಿರುವ ಕನ್ನಡದ ಸಣ್ಣಕಥೆ-ಕಾದಂಬರಿಗಳು ಕೆಲವೆಡೆಗಳಲ್ಲಿ ಹೋಟೆಲು ಸಂಬಂಧದೊಂದಿಗೆ ಬೆರೆತುಕೊಂಡಂತಿರುವ ಗ್ರಾಹಕರ ಬದುಕಿನ ಏಳು-ಬೀಳುಗಳನ್ನು ಪಡಿಮೂಡಿಸಿದ್ದುಂಟು. ವ್ಯಾವಹಾರಿಕವಾಗಿ ನೋಡಿದರೂ ಕೂಡ ಹೋಟೆಲೊಂದರ ಪ್ರಗತಿಯು ಕಾರ್ಮಿಕರು, ಮಾಲೀಕರು ಮತ್ತು ಗ್ರಾಹಕರ ಪೂರಕ ಸಂಬಂಧದ ಮೇಲೆ ಅವಲಂಬಿತವಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಇದಕ್ಕೆ ತಕ್ಕಂತೆ ಕನ್ನಡದ ಕಥನಸಾಹಿತ್ಯವು ಗ್ರಾಮೀಣ ಪರಿಸರದ ಹೋಟೆಲು ಬದುಕನ್ನು ಕಲಾತ್ಮಕವಾಗಿ ಅಭಿವ್ಯಕ್ತಿಪಡಿಸಿದೆ.

### ೪.೪. ಒಟ್ಟು ಪರಿಸರದಲ್ಲಾಗುವ ಸ್ಥಿತ್ಯಂತರ

ಗ್ರಾಮೀಣ ಪರಿಸರದ ಹೋಟೆಲುಗಳ ಕಾರಣದಿಂದಾಗಿ ಮಾಲೀಕರ, ಗ್ರಾಹಕರ ಕಾರ್ಮಿಕರ ಬದುಕಿನಲ್ಲಿ ಮಾತ್ರವಲ್ಲದೆ ಒಟ್ಟಾರೆ ಪರಿಸರದಲ್ಲೂ ಸ್ಥಿತ್ಯಂತರ ಉಂಟಾಗುತ್ತದೆ. ಹೋಟೆಲಿಗೆ ದಿನನಿತ್ಯ ಬಂದುಹೋಗುವ ಗ್ರಾಹಕರಿಂದಾಗಿ ನಿರ್ದಿಷ್ಟ ಗ್ರಾಮೀಣ ಪರಿಸರದ ಚಿತ್ರಣವೇ ಬದಲಾಗುವುದುಂಟು. ನಗರದಿಂದ ಓಡಾಡುವ ಬಸ್ಸುಗಳು ಕೆಲವೊಮ್ಮೆ ಹೋಟೆಲು ಪರಿಸರವನ್ನು ತಂಗುದಾಣವನ್ನಾಗಿ ಮಾಡಿಕೊಳ್ಳುವುದುಂಟು. ವೃತ್ತಪತ್ರಿಕೆ, ರೇಡಿಯೋ, ದೂರದರ್ಶನಗಳಂಥ ಆಧುನಿಕ ಮಾಧ್ಯಮಗಳು ಹೋಟೆಲಿನ ಮೂಲಕ ಜನರಿಗೆ ಲಭ್ಯವಾಗುವುದುಂಟು. ಇದರಿಂದ ಹೋಟೆಲಿನ ಮೂಲಕ ಗ್ರಾಮೀಣ ಪ್ರದೇಶವೊಂದು ನಗರೀಕರಣ ಪ್ರಕ್ರಿಯೆಗೆ ಸಹಜವಾಗಿಯೇ ಒಳಗಾಗುತ್ತದೆ. ಹೋಟೆಲಿನ ಕಾರಣದಿಂದಾಗಿ ಗ್ರಾಮೀಣ ಪ್ರದೇಶವು ಸ್ಥಿತ್ಯಂತರಗೊಳ್ಳುವುದಕ್ಕೆ ಇನ್ನೊಂದು ಮುಖವೂ ಇದೆ. ಗ್ರಾಮೀಣ ಪ್ರದೇಶದ ವ್ಯಕ್ತಿಗಳು ನಗರಪ್ರದೇಶದಲ್ಲಿ ಹೋಟೆಲನ್ನು ನಡೆಸಿ ಅಲ್ಲಿ ಗಳಿಸಿದ ಆದಾಯದಿಂದ ಗ್ರಾಮೀಣ ಪ್ರದೇಶವಾದ ತಮ್ಮ ಊರನ್ನು ಅಥವಾ ಅಲ್ಲಿನ ತಮ್ಮ ಮನೆಯನ್ನು ಸುಧಾರಣೆಗೊಳಪಡಿಸುವ ಸಂದರ್ಭಗಳಿವೆ. ಹೀಗೆ ಹೋಟೆಲಿನ

ಕಾರಣದಿಂದಾಗಿ ಗ್ರಾಮೀಣ ಪರಿಸರವು ಹಲವು ಬಗೆಗಳಲ್ಲಿ ಸ್ಥಿತ್ಯಂತರಗೊಳ್ಳುವುದನ್ನು ಕನ್ನಡದ ಸಣ್ಣಕತೆ–ಕಾದಂಬರಿಗಳು ಅಷ್ಟೇ ಪರಿಣಾಮಕಾರಿಯಾಗಿ ಪಡಿಮೂಡಿಸಿವೆ.

ಶಿವರಾಮ ಕಾರಂತ ಅವರ 'ಮರಳಿ ಮಣ್ಣಿಗೆ' ಕಾದಂಬರಿಯು ಹೋಟೆಲಿನ ಕಾರಣದಿಂದಾಗಿ ಪಡಮುನ್ನೂರು ಮತ್ತು ಮಣ್ಣೂರಿನ ಗ್ರಾಮೀಣ ಪರಿಸರದಲ್ಲಾದ ಸ್ಥಿತ್ಯಂತರವನ್ನು ಪಡಿಮೂಡಿಸಿದೆ. ಸೀನಮಯ್ಯನ ಮಕ್ಕಳಾದ ನರಸಿಂಹ ಮತ್ತು ವರಟ ನಗರದ ಹೋಟೆಲು ಉದ್ಯಮದಿಂದಾಗಿ ಮಣ್ಣೂರಿನ ತಮ್ಮ ಮನೆ ಪರಿಸರವನ್ನು ಅಭಿವೃದ್ಧಿಪಡಿಸುತ್ತಾರೆ. ಮನೆಗೆ ಹಂಚು ಮತ್ತು ಕೆತ್ತನೆಯ ಅಲಂಕಾರಿಕವಾದ ದೊಡ್ಡ ಹೆಬ್ಬಾಗಿಲನ್ನು ಕೆತ್ತಿಸಿದ್ದಾರೆ. ಇದರಿಂದಾಗಿ ಬೇರೆಯವರ ದೃಷ್ಟಿಯಲ್ಲಿ ಶೀನಮಯ್ಯರಾಗಿ ಬಿಂಬಿತರಾಗುತ್ತಾರೆ. ಊರಲ್ಲಿ ನಾಲ್ಕು ನಮಸ್ಕಾರಗಳು ಬರತೊಡಗುತ್ತವೆ. ನರಸಿಂಹನಿಂದ ಬೆಂಗಳೂರಿನ ಹೋಟೆಲಿನ ಕೆಲಸದಿಂದ ಪ್ರತಿ ತಿಂಗಳೂ ಐವತ್ತು ರೂಪಾಯಿಗಳು ಮನಿಯಾರ್ಡರು ಬರತೊಡಗುತ್ತದೆ. ಇದರಿಂದಾಗಿ ಶೀನಮಯ್ಯನು ಅದರಿಂದ ಒಳ್ಳೆಯ ಆಸ್ತಿ ಖರೀದಿಸುವ ಯೋಚನೆಗೆ ಈಡಾಗುತ್ತಾನೆ. ಇದಾದ ನಂತರ ಆಸ್ತಿಯ ಮೇಲೆ ಸಾಲ ಮತ್ತು ಕ್ರಯಕ್ಕೆ ಆದರೂ ಸಹ ಹಣ ಪೂರೈಸುತ್ತಾನೆ. ಊರ ಜನರಿಂದ ಕೇಳಿ ಆಸ್ತಿಯನ್ನು ಕೊಳ್ಳುವುದಕ್ಕೆ ಇತರರಿಗಿಂತ ಜಾಸ್ತಿ ಬೆಲೆ ಕೊಟ್ಟು ಖರೀದಿಸಲಿಕ್ಕೆ ಗಿರಾಕಿಗಳ ಹುಡುಕಾಟದಲ್ಲಿ ತೊಡಗುತ್ತಾನೆ. ಮಣ್ಣೂರಿನಲ್ಲಿ ಹಾಗೇ ಐದು ಎಕರೆ ಗದ್ದೆಯನ್ನು ಕೊಂಡುಕೊಳ್ಳುತ್ತಾನೆ. ಶೀನಮಯ್ಯನು ಹಂಗು, ಹೆದರಿಕೆ ಇಲ್ಲದೆ ಗ್ರಾಮದಲ್ಲಿ ಆಸ್ತಿ ಖರೀದಿಯನ್ನು ಮುಂದುವರಿಸುತ್ತಾನೆ. ಆಸ್ತಿ ಮಾಡುವ ಕ್ರಮವು ಗ್ರಾಮದಲ್ಲಿ ಶೀನಮಯ್ಯನದಾಗಿರುತ್ತದೆ. ದಿನೇ ದಿನೇ ಕಾಸು ಮನೆ ಸೇರುವುದರಿಂದ ಹತ್ತೆಂಟು ರೂಪಾಯಿಗಳಿಂದ ಸಾವಿರದವರೆಗೆ ಸಾಲ ಕೇಳುವ ಜನ ಬರತೊಡಗುತ್ತಾರೆ. ಸುತ್ತೆಂಟು ಹಳ್ಳಿಗಳಿಗೆ ಭಾರಿ ಮನುಷ್ಯನಾಗಿ ಬೆಳೆಯತೊಡಗುತ್ತಾನೆ. ವೈದಿಕರ ಮತ್ತು ಗುರಿಕಾರರ ಮದುವೆ ಮುಂಜಿ ಹಾಗೂ ಪಂಕ್ತಿಯಲ್ಲೂ ಅಗ್ರಪಟ್ಟಕ್ಕೆ ಏರುತ್ತಾನೆ. ಇತ್ತ ತಾತ್ಕಾಲಿಕ ಸಾಲಗಳು ಹಾಗೂ ಚಕ್ರಬಡ್ಡಿಯ ಸಾಲಗಳಿಂದ ಮಾರಿಬಲೆಯ ಮೊಗೇರರು ಶೀನಮಯ್ಯನನ್ನು ಕಂಡರೆ ಸಲಾಮು ಹಾಕತೊಡಗುತ್ತಾರೆ. ಒಮ್ಮೆ ನೆರ ಊರ ಗುರಿಕಾರರ ಮಗಳ ಲಗ್ನದಲ್ಲಿ ವಿಶೇಷ ಮಾನ್ಯತೆ ಶೀನಮಯ್ಯರಿಗೆ ದೊರೆಯುತ್ತದೆ. ಇದಾದ ಮೇಲೆ ಹಳ್ಳಿಯ ಕಾಳಿಗೆಯಲ್ಲಿ ಸಕ್ಕರೆಯ ಪಾನಕವನ್ನು ಎರಡು ಬಾರಿ ಕೊಡುತ್ತಾರೆ. ಗುರಿಕಾರ ಮದುವೆಯನ್ನು ನರ್ತಕಿಯರಿಂದ ಸಲಾಮು ಹಾಕಿಸುವ ಪದ್ಧತಿಗೆ ಅನುಗುಣವಾಗಿ ಶೀನಮಯ್ಯರಿಗೆ ಹದಿನೆಂಟು ಸಲಾಮು ಮದುವೆಯಲ್ಲಿ ಮಾಡಿಸಿ ಕೊಳ್ಳುತ್ತಾರೆ. ಮೂವತ್ತಾರು ರೂಪಾಯಿ ಹಣವನ್ನು ಆ ಹೆಂಗಳೆಯರಿಗೆ ಶೀನಮಯ್ಯ ಕೊಡುತ್ತಾನೆ.

ಮಣ್ಣೂರಿನ ಇತರೆ ಕುಟುಂಬಗಳಿಗಿಂತ ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಶೀನಮಯ್ಯರು ವಿಭಿನ್ನವಾಗಿ ಗುರುತಿಸಿಕೊಳ್ಳುತ್ತಾರೆ. ಮಣ್ಣೂರಿನ ಶೀನಮಯ್ಯನ ಮಕ್ಕಳಿಂದಾದ ಆರ್ಥಿಕ ಪ್ರಗತಿಯು ಪಡಮೂನ್ನೂರಿನ ರಾಮಐತಾಳರಲ್ಲಿ ಬೆರಗನ್ನುಂಟು ಮಾಡುತ್ತದೆ. ತನ್ನ

ಮಕ್ಕಳಲ್ಲಾದ ಆರ್ಥಿಕ ಬೆಳವಣಿಗೆಯಿಂದಾಗಿ ಶೀನಮಯ್ಯ ಗ್ರಾಮವನ್ನು ಖರೀದಿಸುವ ಕಲ್ಪನೆಯ ಛಲ ತೊಡುತ್ತಾನೆ. ಬೆಂಗಳೂರಿನಲ್ಲಿ ಹೋಟೆಲು ನಡೆಸಿ ಅದರಿಂದ ದೊರೆತ ಲಾಭದಿಂದ ತಮ್ಮ ಮನೆ ಮತ್ತು ಪರಿಸರದಲ್ಲಾದ ಬೆಳವಣಿಗೆಯನ್ನು ಕಂಡು ಶೀನಮಯ್ಯರು ಹಿಗ್ಗುತ್ತಾರೆ. ನರಸಿಂಹ ದೇವರ ಕೃಪೆಯಿಂದ ತಾನು ಈ ರೀತಿ ಬದಲಾದೆನೆಂದು ಅವರು ಭಾವಿಸುತ್ತಾರೆ. ಮಕ್ಕಳು ಹೋಟೆಲು ಮಾಲೀಕರಾದುದರಿಂದ ಶೀನಮಯ್ಯ ತನ್ನೂರಿನ ಅಷ್ಟೂ ಜನರ ನಡುವೆ ಗಮನಾರ್ಹ ವ್ಯಕ್ತಿಯಾಗಿ ಪರಿಗಣಿತನಾಗುತ್ತಾನೆ. ಹೀಗೆ ಶೀನಮಯ್ಯನ ಮಕ್ಕಳು ಹೋಟೆಲಿಟ್ಟು ಮಾಲೀಕರಾದುದರಿಂದ ಮಣ್ಣೂರಿನ ಪರಿಸರದಲ್ಲಿ ಶೀನಮಯ್ಯನ ಸ್ಥಾನಮಾನಗಳು ಹೆಚ್ಚಾಗುತ್ತವೆ.

ಶ್ರೀಕೃಷ್ಣ ಆಲನಹಳ್ಳಿ ಅವರ 'ಭುಜಂಗಯ್ಯನ ದಶಾವತಾರಗಳು' ಎಂಬ ಕಾದಂಬರಿಯಲ್ಲೂ ಮಾದಳ್ಳಿಯ ಪರಿಸರದಲ್ಲಾದ ಬದಲಾವಣೆಯು ಚಿತ್ರಿತವಾಗಿದೆ. ಮಾದಳ್ಳಿ ಕ್ರಾಸಿನಲ್ಲಿ ಹೋಟೆಲು ಆರಂಭವಾದದ್ದರಿಂದ ಊರೂರಿಗೆ ತೆರಳಲು ಬಸ್ಸಿಗಾಗಿ ಕಾಯುವ ಮಂದಿಗೆ ಅದೊಂದು ತಂಗುದಾಣವಾದಂತಿತ್ತು. ನಗರದಿಂದ ಓಡಾಡುತ್ತಿದ್ದ-ಬಸ್ಸು ಕೂಡ ಭುಜಂಗಯ್ಯನ ಹೋಟೆಲು ಮುಂಭಾಗದಲ್ಲೇ ತನ್ನ ಹೊಸ ನಿಲುಗಡೆಯನ್ನು ಆರಂಭಿಸುತ್ತದೆ. ಬಸ್ಸಿನ ಮೂಲಕ ನಗರ ಸಂಸ್ಕೃತಿಯು ಗ್ರಾಮಕ್ಕೆ ಬರುವಂತಾಯಿತು. ನಗರದಲ್ಲಿ ಲಭ್ಯವಾಗುವ ವೃತ್ತಪತ್ರಿಕೆ ಹಾಗೂ ಇನ್ನಿತರೆ ಸಾಮಗ್ರಿಗಳು ಬಸ್ಸಿನ ಮೂಲಕ ಪೂರೈಕೆಯಾಗತೊಡಗುತ್ತವೆ. ಇದರಿಂದಾಗಿ ತಾಯ್ನಾಡು ಪತ್ರಿಕೆಯನ್ನು ಓದಲು ಪ್ರಾರಂಭಿಸುತ್ತಾರೆ. ಭುಜಂಗಯ್ಯನಲ್ಲಿ ಬಸ್ಸಿನ ಕಂಡಕ್ಟರು ವಿಕ್ಟರ್ ಪೇಪರ್ ಓದುವ ಹವ್ಯಾಸವನ್ನು ಬೆಳೆಸಿದ್ದನು. ಇದರಿಂದ ಯಾವ ಊರಲ್ಲಿ ಏನೇನು ಬೆಳವಣಿಗೆಗಳಾಗುತ್ತವೆ. ಯಾವ ಯಾವ ಹೊಸ ಕಾನೂನುಗಳು ಬರುತ್ತವೆ, ಹಳೆಯ ಕಾನೂನುಗಳು ಬದಲಾವಣೆ ಗೊಳಗಾಗುತ್ತವೆ, ಈ ಎಲ್ಲಾ ಸಂಗತಿಗಳನ್ನು ಪತ್ರಿಕೆಗಳಿಂದ ಭುಜಂಗಯ್ಯ ತಿಳಿಯುತ್ತಿದ್ದನು. ಇನ್ನೊಬ್ಬ ಹೋಟೆಲು ಗ್ರಾಹಕನಾಗಿದ್ದ ರಾಜಪ್ಪ ಮಾತ್ರ ಕುದುರೆ ಜೂಜಿನ ಸುದ್ದಿ ಬಂದಾಗ ಮಾತ್ರ ಪತ್ರಿಕೆ ಹಿಡಿದು ತನ್ಮಯನಾಗುತ್ತಿದ್ದನು. ಪ್ರತಿ ದಿನ ಹೋಟೆಲಲ್ಲಿ ರಮ್ಮಿ ಆಡುತ್ತಿದ್ದ ಇವರು ಒಂದೊಂದು ಸಲ ಮೂರೆಲೆ ಆಟಕ್ಕೂ ಇಳಿಯುತ್ತಿದರು. ಆಟದಿಂದ ಮನೆ ಮಾಡು ಕಳೆದುಕೊಂಡ ಕೆಲವರ ಸ್ಥಿತಿಗತಿ ಭುಜಂಗಯ್ಯನ ಗಮನಕ್ಕೆ ಬಂದಿದ್ದವು. ಇದರಿಂದಾಗಿ ಭುಜಂಗಯ್ಯ ಆ ಆಟಕ್ಕೆ ಹೋಟೆಲಲ್ಲಿ ಅವಕಾಶ ಕೊಟ್ಟಿರಲಿಲ್ಲ. ಭುಜಂಗಯ್ಯನ ಹೋಟೆಲು ಆರಂಭದಿಂದಾಗಿ ಮೈಸೂರಿಗೆಂದು ಕೋಟೆಯಲ್ಲಿ ಬಸ್ಸು ಹತ್ತುವ ಪ್ರಯಾಣಿಕರು ಮಾದಳ್ಳಿಯಲ್ಲಿ ತಿಂಡಿ ತಿಂದರಾಯಿತು ಎಂದು ಇಲ್ಲಿಗೆ ಬಂದಾಗ ಭುಜಂಗಯ್ಯ ಹೋಟೆಲಲ್ಲಿ ತಿಂಡಿ ತಿನ್ನುತ್ತಿದ್ದರು. ಬಸ್ಸಿನ ವಿಕ್ಟರನೂ ಸಹ 'ಮಾದಳ್ಳಿ ಇಂದ್ರಭವನ ಬಂತು ಇಳೀರಿ, ಇಳೀರಿ' ಎಂಬ ತಮಾಷೆಯ ಕೂಗು ಪ್ರಯಾಣಿಕರನ್ನು ಪುಸಲಾಯಿಸುತ್ತಿತ್ತು. ಬಸ್ಸಿನ ವಿಕ್ಟರನ ಸಹವಾಸದಿಂದ ಭುಜಂಗಯ್ಯ ನಾಗರಿಕನಾಗ ತೊಡಗುತ್ತಾನೆ. ಇಲ್ಲಿಯವರೆಗೆ ಚಡ್ಡಿಯಲ್ಲಿ ಎಲ್ಲಾ ಕೆಲಸಕಾರ್ಯಗಳನ್ನು ನಿಭಾಯಿಸುತ್ತಿದ್ದವನು

ಪಂಚೆ ಉಡತೊಡಗಿದನು. ಹೀಗಿರುವಾಗ ದಿನದಿನಕ್ಕೂ ಭುಜಂಗಯ್ಯನ ಹೋಟೆಲು ಅಭಿವೃದ್ಧಿಯಿಂದ ಮಾದಳ್ಳಿ ಕೂಡುರಸ್ತೆಗೆ ಹೊಸ ಕಳೆಯು ರಾರಾಜಿಸತೊಡಗಿತು. ಇತ್ತ ಊರ ಸಾಮಾನ್ಯ ಜನರಲ್ಲಿಯೂ ಹೋಟೆಲಲ್ಲಿ ಟೀ ಕುಡಿಯುವ ಅಭ್ಯಾಸ ಉಂಟಾಗುತ್ತದೆ. ಬಸ್ಸಿನ ಸಿಬ್ಬಂದಿಗಳು ಹೋಟೆಲಿನ ಸಾಮಾನುಗಳನ್ನು ಮೈಸೂರಿನಿಂದ ತರುತ್ತಾರೆ. ಹೀಗೆ ಹೋಟೆಲು ಮಾದಳ್ಳಿಯಲ್ಲಿ ಸ್ಥಾಪನೆಗೊಂಡದ್ದರಿಂದ ಈ ರೀತಿಯ ಪರಿವರ್ತನೆಗೆ ಕಾರಣವಾಗುತ್ತದೆ. ನಂತರ ಗ್ರಾಮೀಣ ಪರಿಸರದ ಕೃಷಿ ಚಟುವಟಿಕೆಗಳ ಮೇಲೂ ಅಗಾಧವಾದ ಪರಿಣಾಮವನ್ನು ಹೋಟೆಲು ಬೀರ ತೊಡಗುತ್ತದೆ. ದೊಡ್ಡ ಮಠದ ಸ್ವಾಮಿಗಳು ಭುಜಂಗಯ್ಯನ ಹೊಸ ಕಾಯಕವೆಂದು ಆಶೀರ್ವಾದದ ನುಡಿಗಳನ್ನಾಡಿದ್ದು ಮಾದಳ್ಳಿಯ ಜನರನ್ನು ಬೆರಗುಗೊಳಿಸಿತ್ತು. ಮೈಸೂರಿಗೆಂದು ಕೋಟೆಯಲ್ಲಿ ಬಸ್ಸು ಹತ್ತುವ ಪ್ರಯಾಣಿಕರು ಮಾದಳ್ಳಿಯ ಹೋಟೆಲಲ್ಲಿ ತಿಂಡಿ ಸೇವಿಸುವ ಪರಿಪಾಟ ಬೆಳೆಸಿಕೊಳ್ಳತೊಡಗುತ್ತಾರೆ. ಭುಜಂಗಯ್ಯ ಕೃಷಿಕ ಅಷ್ಟೇ ಅಲ್ಲದೆ ಬಾಲ್ಯದ ಹೋಟೆಲು ಕಾರ್ಮಿಕ ವೃತ್ತಿಯಿಂದ ಹೋಟೆಲು ಮಾಲೀಕನಾದದ್ದು ಊರ ಜನರಿಗೆ ಕುತೂಹಲಕರ ಸಂಗತಿಯಾಗಿರುತ್ತದೆ. ಭುಜಂಗಯ್ಯನ ಹೋಟೆಲು ದಿನದಿಂದ ದಿನಕ್ಕೆ ಹೊಸ ಆಧುನಿಕ ಸಲಕರಣೆಗಳನ್ನು ಹೊಂದು ತ್ತಿರುವುದು ಹಳ್ಳಿಯ ಗ್ರಾಹಕರು ಮತ್ತು ಸಾರ್ವಜನಿಕರಲ್ಲಿ ಬೆರಗನ್ನುಂಟುಮಾಡಿತ್ತು. ಇಲ್ಲಿಗೆ ಬರುವ ತಾಯ್ನಾಡು ಪತ್ರಿಕೆಯನ್ನು ಊರವರು ಪರಿಚಯ ಮಾಡಿಕೊಳ್ಳುತ್ತಾರೆ. ಅದರಲ್ಲೂ ಈ ಎರಡು ಆಧುನಿಕ ವ್ಯಸನಗಳು ಮಾಲೀಕನಾದ ಭುಜಂಗಯ್ಯನಲ್ಲಿ ಪರಿಣಾಮ ಬೀರಿದ್ದವು. ಗ್ರಾಮೋಫೋನ್ ನೀಡುವ ಸಂಗೀತವನ್ನು ಹೋಟೆಲಿಗೆ ಬರುವ ಗ್ರಾಹಕರು ಮೈಮರೆತು ಕುಳಿತು ಆಲಿಸುತ್ತಿದ್ದರು. ಇವುಗಳಲ್ಲದೆ ಕರಿಸಿದ್ದಿ ಮತ್ತು ಆಕೆಯ ಮೈದುನ ಬೆಟ್ಟನಾಯಕನ ಅನೈತಿಕ ಸಂಬಂಧದ ಬಗೆಗೆ ಭುಜಂಗಯ್ಯ ತೀರ್ಪು ಕೊಟ್ಟದ್ದು ಊರವರಲ್ಲಿ ಆನಂದವನ್ನುಂಟು ಮಾಡಿತ್ತು. ಪ್ರತಿನಿತ್ಯವೂ ಹೋಟೆಲಲ್ಲಿ ಇಸ್ಪೀಟಾಟಕ್ಕೆ ಸೇರುವುದು ಊರವರಲ್ಲಿ ಸರ್ವೇಸಾಮಾನ್ಯ ಚಟುವಟಿಕೆ ಯಾಗಿತ್ತು. ಮಿಡಲ್ ಸ್ಕೂಲ್ ಮೇಷ್ಟ್ರೊಬ್ಬರು ಹೋಟೆಲು ಗೋಡೆಗಳಲ್ಲಿನ ಭಿತ್ತಿಚಿತ್ರಗಳನ್ನು ತಿಂಡಿ ತಿನ್ನುವಾಗ ಕಣ್ಣ ತುಂಬಾ ನೋಡಿ ಆನಂದ ಪಡುತ್ತಾರೆ. ಭುಜಂಗಯ್ಯನ ಹೋಟೆಲು ದೇವರ ಫೋಟೋಗಳಿಗೆ ಸೀಮಿತವಾಗದೆ ಗಾಂಧಿಯಂತಹ ರಾಷ್ಟ್ರೀಯ ನೇತಾರ ಮಗುವೊಂದಕ್ಕೆ ಮುತ್ತು ಕೊಡುವ ಫೋಟೋ ಮೇಷ್ಟ್ರಿಗೆ ಇನ್ನಷ್ಟು ಸಂತಸವನ್ನುಂಟು ಮಾಡುತ್ತದೆ. ಇತ್ತ ಭುಜಂಗಯ್ಯನು ಸಹ ದೇವರ ಫೋಟೋಗಳಿಗೆ ಪೂಜೆ ಸಲ್ಲಿಸುವ ಹಾಗೆ ಗಾಂಧಿಯ ಫೋಟೋಕ್ಕೂ ಸಲ್ಲಿಸುತ್ತಿದ್ದನು. ಇದನ್ನು ಗಮನಿಸಿದ ಮೇಷ್ಟ್ರು ಗಾಂಧಿಯ ಆತ್ಮಕಥೆಯನ್ನು ಹೇಳಿಕೊಟ್ಟು ಭುಜಂಗಯ್ಯನಲ್ಲಿ ರಾಷ್ಟ್ರೀಯತೆಯ ಮನೋಭಾವನೆಯನ್ನು ಇಮ್ಮಡಿಗೊಳಿಸುತ್ತಾರೆ. ಇಷ್ಟಕ್ಕೆ ಸೀಮಿತ ವಾಗದೆ ಭುಜಂಗಯ್ಯನ ಹೋಟೆಲಲ್ಲಿ ರಾಗಾಲಾಪದ ಗ್ರಾಮೋಫೋನು ಹಳ್ಳಿಯ ಯುವಜನತೆಯಲ್ಲಿ ಆನಂದ ಕ್ಷಣಗಳನ್ನುಂಟು ಮಾಡಿತ್ತು. ಹೋಟೆಲಲ್ಲಿ ಹಳ್ಳಿಯ ಯುವಜನತೆಯ ಪ್ರತೀಕವಾಗಿರುವ

ರಾಜನಲ್ಲಿ ಆನಂದದ ಕ್ಷಣಗಳು ಉಂಟಾದ ಪರಿಯು ಕಾದಂಬರಿಯ ಈ ಸನ್ನಿವೇಶದಿಂದ ಸ್ಪಷ್ಟವಾಗುತ್ತದೆ. "ಭುಜಂಗಯ್ಯನ ಹೋಟೆಲಲ್ಲಿ ಗ್ರಾಮೋಫೋನ್ ಹಾಕುವುದಕ್ಕೆ ಕುತೂಹಲದಿಂದ ನೋಡುತ್ತಾ ಅದರಿಂದ ಕೇಳಿ ಬರುವ ಹಾಡಿಗೆ ರಾಜ ತಲೆದೂಗುತ್ತಾನೆ. ಅವನಿಗೆ ಪರಮ ಅದ್ಭುತವೆಂದರೆ ಒಂದು ಯಂತ್ರ ಹೇಗೆ ಹಾಡುತ್ತೆ ಅನ್ನುವುದು. ಅದರ ಬಗ್ಗೆ ತಿಳಿಯಲು ಒಂದು ಸಲ ಅವನು ಸ್ಕೂಲಲ್ಲಿ ಹೆಡ್ಮಾಷ್ಟ್ರನ್ನು ಕೇಳಿದ್ದ. ಅವರಿಗೂ ತಕ್ಷಣ ಏನೂ ತೋಚದೆ ರಾಜನ ಪ್ರಶ್ನೆಗೆ ಬೆರಗಾಗಿ ಕಡೆಗೂ ಏನೋ ಒಂದು ಹೇಳಿದ್ದರು. ಅದರಿಂದ ತೃಪ್ತನಾಗದ ರಾಜ ತಾನು ಮೈಸೂರಿಗೆ ಹೋಗಿ ಓದಲು ಸೇರಿದರೆ ಮಾತ್ರ ತನಗೆ ಇದೆಲ್ಲ ಗೊತ್ತಾಗುವುದೆಂದು ಮೈಸೂರಿನ ಕನಸು ಕಾಣತೊಡಗಿದ್ದ"(ಶ್ರೀಕೃಷ್ಣ ಆಲನಹಳ್ಳಿ, ೧೯೯೮, ಪುಟ ೧೨೦). ಹೀಗೆ ಗ್ರಾಮೀಣ ಪರಿಸರದ ಶಾಲಾ ಮಗುವಿನಲ್ಲಿ ಯಂತ್ರದ ಆವಿಷ್ಕಾರದಿಂದಾಗಿ ನಗರಪ್ರದೇಶದ ಪರಿಸರವು ಕಣ್ಣಮುಂದೆ ನಿಲ್ಲುತ್ತದೆ. ಇಂತಹ ಹಳ್ಳಿಯಲ್ಲಿ ಬದಲಾವಣೆಯ ಸುಳಿವುಗಳನ್ನು ಕಾದಂಬರಿ ಕಟ್ಟಿಕೊಡುತ್ತಾ ಹೋಗುತ್ತದೆ. ಹೋಟೆಲಲ್ಲಿ ಇಸ್ಪೀಟಾಟದಿಂದಾಗಿ ಬಳೆಶೆಟ್ಟರು ಬಳೆ ವ್ಯವಹಾರದ ದುಡ್ಡನ್ನು ಮಾದಳ್ಳಿಯ ಹೋಟೆಲಲ್ಲಿ ಸೋಲುತ್ತಾರೆ. ಇದನ್ನರಿತ ಭುಜಂಗಯ್ಯನು ಸ್ವಂತದ ದುಡ್ಡನ್ನು ಕೊಟ್ಟು ಆತ ಕಳೆದುಕೊಂಡಿದ್ದ ಮನಸ್ಥಿತಿಯನ್ನು ತಿಳಿಗೊಳಿಸುತ್ತಾನೆ. ಮಾದಳ್ಳಿಯ ಹೋಟೆಲನ್ನು ಈ ಇಸ್ಪೀಟಾಟದಿಂದ ಮುಕ್ತಗೊಳಿಸುತ್ತಾನೆ. ಹೀಗಿರುವಾಗ ಮಗದೊಂದು ಸಮಸ್ಯೆಯಾದ ಸುಶೀಲೆಯನ್ನು ಮದುವೆಯಾಗುವ ಮಹತ್ವದ ಘಟನೆ ಭುಜಂಗಯ್ಯನಲ್ಲಿ ಏರ್ಪಟ್ಟಿರುತ್ತದೆ. ಇದರಿಂದಾಗಿ ಊರಿನ ವೀರಶೈವ ಸಮಾಜದವರಲ್ಲಿ ಇನ್ನಷ್ಟು ಆತನ ಬಗೆಗೆ ಮುನಿಸಿಗೆ ಕಾರಣವಾಗುತ್ತದೆ. ಹೋಟೆಲು ಪ್ರಗತಿ ಪಡೆದಂತೆ ಭುಜಂಗಯ್ಯನ ವೈಯಕ್ತಿಕ ಬದುಕು, ಜಾತಿಯವರು ಬಹಿಷ್ಕರಿಸುವ ಮಟ್ಟಕ್ಕೆ ಬಂದು ತಲುಪುತ್ತದೆ. ಅವನ ಕುಟುಂಬದ ಸದಸ್ಯಳಾದ ತಾಯಿ ದೇವೀರವ್ವನ ಕಣ್ಣಿನಲ್ಲಿ ಸುಶೀಲೆ ಕಳಂಕಿತಳಾಗಿ ಬಿಂಬಿತವಾಗುತ್ತಾಳೆ. ಊರಿನಲ್ಲಿ ಹೋಟೆಲು ಆರಂಭಿಸಿ ಈಗಾಗಲೇ ಊರಿನವರ ಕೆಂಗಣ್ಣಿಗೆ ಗುರಿಯಾದದ್ದು ಮತ್ತೆ ಈ ಸಮಸ್ಯೆಯನ್ನು ತಾಯಿ ಭುಜಂಗಯ್ಯನಿಗೆ ನಿಂದನಾತ್ಮಕ ವಿವರಣೆ ನೀಡುತ್ತಾಳೆ.

ಹೀಗೆ ಹೋಟೆಲು ಆರಂಭದಿಂದ ಭುಜಂಗಯ್ಯನ ಊರಾದ ಮಾದಳ್ಳಿಯ ಪರಿಸರದಲ್ಲಿನ ಬದಲಾವಣೆಯನ್ನು ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ.

ನಾ. ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯಲ್ಲಿ ಹೋಟೆಲಿನಿಂದಾಗಿ ಸಾಂತೇರು ಗುತ್ತಿನ ಗ್ರಾಮೀಣ ಪರಿಸರದ ಸ್ವರೂಪವು ಬದಲಾದದ್ದನ್ನು ಚಿತ್ರಿಸುತ್ತದೆ. ಮೂಲತಃ ಕೃಷಿಯಿಂದಾಗಿ ಪ್ರಸಿದ್ಧಿ ಪಡೆದಿದ್ದ ಸಾಂತೇರುಗುತ್ತಿನ ಪರಿಸರವು ಕ್ರಮೇಣ ಕಾರ್ಖಾನೆ, ಬೀಡಿ ಕಟ್ಟುವ ಕಂಪನಿ, ಹೋಟೆಲು ಮುಂತಾದ ವ್ಯಾವಹಾರಿಕ ಸಂಸ್ಕೃತಿಗೆ ಒಳಗಾಗುತ್ತದೆ. ಹಳ್ಳಿಯ ತ್ಯಾಂಪಣ್ಣ ರೈ ಮುಂಬಯಿಗೆ ಹೋಗಿ ಎರಡು ಹೋಟೆಲುಗಳ ಸಾಹುಕಾರನಾಗಿದ್ದನ್ನು ಮತ್ತೊಂದು ಹೋಟೆಲು

ತೆರೆಯುವುದಕ್ಕೆ ಊರ ಹುಡುಗರು ಬೇಕೆಂದು ಕರೆಸಿಕೊಳ್ಳುತ್ತಾನೆ. ಅವು ಹೋಟೆಲಲ್ಲಿ ಸಪ್ಲೆ ಮಾಡಲಿಕ್ಕೆ ಮತ್ತು ಕ್ಲೀನಿಂಗ್ ಕೆಲಸಕ್ಕೆ ಕರೆಸಿಕೊಳ್ಳುತ್ತಾನೆ. ಹೋದವರಲ್ಲಿ ಬಾಬು ಪೂಜಾರಿಯ ಮಗನು ಒಬ್ಬನು.

ತ್ಯಾಂಪಣ್ಣ ರೈಗಳ 'ವಿಹಾರ ಲಂಚ್ ಹೋಂ'ನಲ್ಲಿ ಬಾಬು ಪೂಜಾರಿಯ ಮಗ ಎರಡು ವರ್ಷ ಕೆಲಸಕ್ಕಿರುತ್ತಾನೆ. ನಂತರ ಹೋಟೆಲು ಕಾರ್ಮಿಕರ ಯೂನಿಯನ್ ಕಟ್ಟಲು ಹೋಗಿ ತ್ಯಾಂಪಣ್ಣ ರೈಗಳ ಅವಹೇಳನೆಗೆ ಒಳಗಾಗುತ್ತಾನೆ. ತ್ಯಾಂಪಣ್ಣ ರೈಗಳು ಆತನನ್ನು ಹೋಟೆಲು ಬಿಡಿಸುತ್ತಾರೆ. ನಂತರ ಆತನು ಸತತ ಹತ್ತು ವರ್ಷ ನಗರ ಹೋಟೆಲಲ್ಲಿ ಇದ್ದದ್ದು ಸಾಂತೇರುಗುತ್ತಿನಲ್ಲಿ ಎರಡು ಕುಟುಂಬದವರ ಬಾಯಲ್ಲಿತ್ತು. ತ್ಯಾಂಪಣ್ಣ ರೈಗಳ ಹೋಟೆಲಿನಲ್ಲಿನ ಕೆಲಸದ ಅನುಭವದಿಂದಲೇ ಅವನು ಭೀವಂಡಿಯಲ್ಲಿ ಹೊಸ ಹೋಟೆಲನ್ನು ಪ್ರಾರಂಭಿಸುತ್ತಾನೆ. ಆಮೇಲೆ ಪವಾಯಿಯಲ್ಲಿ ಲಾರ್ಸನ್ ಎಂಡ್ ಟಬ್ರೊ ಕಂಪನಿಯ ಕ್ಯಾಂಟೀನುಗಳನ್ನು ತ್ಯಾಂಪಣ್ಣ ರೈಗಳು ಪೂಜಾರಿಗೆ ಶಿಫಾರಸ್ಸು ಮಾಡಿ ಕೊಡಿಸುತ್ತಾರೆ. ಆಗ ಅವನು ನಾಲ್ಕು ಕ್ಯಾಂಟೀನುಗಳ ಮಾಲೀಕ ಮತ್ತು ಒಂದು ಹೋಟೆಲಿನ ಮಾಲೀಕ ಎಂಬುದು ಊರಲ್ಲಿ ಮನೆ ಮನೆಗೂ ಸುದ್ದಿ ಹರಡಿ ಕೊಳ್ಳುತ್ತದೆ.

ಗ್ರಾಮೀಣ ಪರಿಸರದ ಸಂಕಪ್ಪ ಹೆಗ್ಡೆ, ಕಾಂತಪ್ಪ, ಬಾಲಕೃಷ್ಣ ಎಂಬ ಮೂವರು ಗಾಂಧಿ ವಾದದ ಪ್ರಭಾವಕ್ಕೆ ಒಳಗಾಗಿ ಮುಂಬಯಿಗೆ ಹೋದ ಸಂದರ್ಭದಲ್ಲಿ ಅವರು ತ್ಯಾಂಪಣ್ಣ ರೈ ಅವರ 'ವಿಹಾರ ಲಂಚ್ ಹೋಂ'ನ ವಿಳಾಸವನ್ನು ತಮ್ಮವರಿಗೆ ಕೊಡುತ್ತಾರೆ.

ಸಾಂತೇರುಗುತ್ತಿನ ಇನ್ನೋರ್ವ ಸದಸ್ಯನಾದ ಸುಂದರ ಹೆಗ್ಡೆಯು ಮುಂಬಯಿಯಲ್ಲಿ ಹೋಟೆಲು ಉದ್ಯಮವನ್ನು ಆರಂಭಿಸುತ್ತಾನೆ. ಸಾಂತೇರುಗುತ್ತಿನಿಂದ ಮುಂಬಯಿಗೆ ಹೋಗಿ ಸುಂದರನು ಹದಿನೈದು ವರ್ಷಗಳಾಗಿರುತ್ತವೆ. ಬರಬರುತ್ತಾ ಮತ್ತೆ ಮೂರು ಹೋಟೆಲುಗಳ ಮಾಲೀಕನಾಗಿರುತ್ತಾನೆ. ಅಲ್ಲಿಯೇ 'ಲೇಡಿಜ್ ಬಾರ್' ನಾಲ್ಕನೆಯ ಹೋಟೆಲನ್ನು ಹಳ್ಳಿಯ ಪರಿಸರದ ಸುಂದರ ಆರಂಭಿಸಿರುತ್ತಾನೆ. ಇದು ಗ್ರಾಮೀಣ ಪರಿಸರದಲ್ಲಿ ಬೆಳೆದ ಅವನ ತಾಯಿಯಾದ ಅಂಬಕ್ಕನಿಗೆ ಇಷ್ಟವಾಗುವುದಿಲ್ಲ. ಸುಂದರ ತಾಯಿಗೆ ತನ್ನ ಸೋದರಮಾವ ನಗರದ ಹೋಟೆಲು ಆರಂಭಿಸಿದ್ದನ್ನು ಉದಾಹರಿಸಿ ಆಕೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡಿರುತ್ತಾನೆ. ಬರಬರುತ್ತಾ ಸಾಂತೇರುಗುತ್ತಿನ ಯುವಕ ಸುಂದರ 'ಸಾಂತೇರು ಗ್ರೂಫ್ ಆಫ್ ಹೋಟೆಲ್ಸ್' ಎಂಬ ಸರಣಿಯಾಗಿ ಏಳನೆಯ ಹೋಟೆಲನ್ನು ಆರಂಭಿಸುತ್ತಾನೆ. ಇದರ ಉದ್ಘಾಟನಾ ಆಮಂತ್ರಣ ಪತ್ರ ಕಂಡು ಗ್ರಾಮದಲ್ಲಿದ್ದ ಅಂಬಕ್ಕ ಸಂತಸಪಡುತ್ತಾಳೆ. ಅದರಲ್ಲಿ ತಮ್ಮ ಗುತ್ತಿನ ಮನೆಯ ಚಿತ್ರವನ್ನು ಬರೆಯಿಸಿದ್ದನು. ಸಾವಿರಗಟ್ಟಲೆ ಹಣ ವ್ಯಯ ಮಾಡಿ ಪ್ರತಿಷ್ಠಿತ ಕಲಾವಿದನಿಂದ ಅದನ್ನು ಮಾಡಿಸಿದ್ದನ್ನು ಅಂಬಕ್ಕ ಕೇಳಿ ತಿಳಿಯುತ್ತಾಳೆ.

ಅಂಬಕ್ಕನ ಮಗಳ ಗಂಡ ರಮಾನಂದನು ಹಳ್ಳಿಯವನು. ಅವನು ಮುಂಬಯಿ ನಗರದಲ್ಲಿ ಮತ್ತೊಬ್ಬ ಹೋಟೆಲು ಮಾಲೀಕನಾಗಿರುತ್ತಾನೆ. ಅಂಬಕ್ಕನ ಮಗಳು ಶಾರದೆಯು ತಮ್ಮ ಹೋಟೆಲಿನ ವ್ಯವಹಾರದ ಪ್ರಗತಿಯನ್ನು ಸಾಂತೇರುಗುತ್ತಿನಲ್ಲಿರುವ ತಾಯಿ ಅಂಬಕ್ಕನಿಗೆ ಪತ್ರದ ಮೂಲಕ ತಿಳಿಸುತ್ತಾಳೆ. ತಾವು ಸಾಂತೇರುಗುತ್ತಿನಲ್ಲಿರುವ ತಾಯಿ ಅಂಬಕ್ಕನಿಗೆ ತಮ್ಮ ಸ್ವಂತ ಕಾರಲ್ಲಿ ಬರುವುದಾಗಿಯೂ ತಾಯಿಗೆ ತಿಳಿಸುತ್ತಾಳೆ. ಕೃಷ್ಣಭಟ್ಟರ ಒಕ್ಕಲುಗಳ ಮಕ್ಕಳು ಹೋಟೆಲು ಕಾರ್ಮಿಕರಾಗಿ ಆರ್ಥಿಕವಾಗಿ ಪ್ರಗತಿ ಹೊಂದಿ ಸಾಂತೇರುಗುತ್ತಿನಲ್ಲಿ ಜನರ ಪ್ರೀತಿಗೆ ಪಾತ್ರರಾಗಿದ್ದರು.

ಕಾದಂಬರಿಯಲ್ಲಿ ಸಾಂತೇರುಗುತ್ತಿನ ಆಧುನಿಕ ಹೋಟೆಲು ಉದ್ಯಮಕ್ಕೆ ಗ್ರಾಮೀಣ ಕೃಷಿಕರು ಪಲ್ಲಟಗೊಂಡದ್ದು ಇಲ್ಲಿ ವಿಶೇಷವಾಗಿದೆ. ಮೊದಲನೆಯದಾಗಿ ವೆಂಕಪ್ಪ ಹೆಗ್ಡೆ, ಶೀನಪ್ಪ ಹೆಗ್ಡೆ, ಸಂಕಪ್ಪ ಹೆಗ್ಡೆ ಈ ಮೂರು ತಲೆಮಾರುಗಳವರು ಹೋಟೆಲಿನ ಉದ್ಯಮದಲ್ಲಿರುವ ಚಿತ್ರಣವು ಕಾದಂಬರಿಯಲ್ಲಿದೆ. ಇಲ್ಲಿನ ಶಾಂತಕ್ಕ ಮತ್ತು ಅಂಬಕ್ಕರ ಪಾತ್ರಗಳು ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಹೋಟೆಲು ಉದ್ಯಮವನ್ನು ವಿರೋಧಿಸುವ ಪಾರ್ವತಿ ಮತ್ತು ಸರಸ್ವತಿ ಪಾತ್ರಗಳನ್ನು ನೆನಪಿಗೆ ತರುವಂತಿವೆ. ಸಾಂತೇರುಗುತ್ತಿನ ಕುಟುಂಬದ ಸದಸ್ಯರು ಅನಿವಾರ್ಯ ಕಾರಣಗಳಿಂದಾಗಿ ತಮ್ಮ ಪಾರಂಪರಿಕ ಕೃಷಿಬದುಕು ಪಲ್ಲಟಗೊಂಡಾಗ ಅದಕ್ಕೆ ಪರ್ಯಾಯವಾಗಿ ಮುಂಬಯಿ ನಗರದಲ್ಲಿ ಹೋಟೆಲು ಉದ್ಯಮವನ್ನು ಪ್ರಾರಂಭಿಸಿ ಹೊಸ ಬದುಕು ಕಟ್ಟಿಕೊಂಡಿದನ್ನು ಕಾದಂಬರಿಯು ಕಲಾತ್ಮಕವಾಗಿ ಚಿತ್ರಿಸುತ್ತದೆ.

ಪ್ರಸ್ತುತ ಕಾದಂಬರಿಯಲ್ಲಿ ತುಳುನಾಡಿನ ಬಂಟ, ಬಿಲ್ಲವ ಮೊದಲಾದ ಸಮುದಾಯದವರು ಮುಂಬಯಿಯಲ್ಲಿ ಹೋಟೆಲು ಉದ್ಯಮ ಪ್ರಾರಂಭಿಸಿದ್ದನ್ನು ಹೇಳುವುದರ ಜೊತೆಯಲ್ಲಿ ಮುಸ್ಲಿಂ ಸಮುದಾಯದ ವ್ಯಕ್ತಿಯೊಬ್ಬನು ತನ್ನ ಗ್ರಾಮೀಣ ಪರಿಸರದಲ್ಲೇ ಹೋಟೆಲು ವ್ಯವಹಾರದಲ್ಲಿ ತೊಡಗಿಕೊಂಡಿದ್ದನ್ನು ನಿರೂಪಿಸುತ್ತದೆ. ಇಲ್ಲಿ ಆದಂ ಕುಟ್ಟಿಯು ಹೊಸ ಅಂಗಡಿಯಲ್ಲಿ ಬೀಡಿ ಕಟ್ಟುವ ಬ್ರಾಂಚು, ದಿನಿಸಿ ಅಂಗಡಿ ಇವುಗಳ ಜೊತೆಗೆ ಕಾಫಿ, ಚಹಾ ಪೂರೈಸುತ್ತಾ ಜನಪ್ರಿಯತೆ ಗಳಿಸುತ್ತಾನೆ. ಹಂತ ಹಂತವಾಗಿ ಆದಂ ಕುಟ್ಟಿಯು ಒಂಬತ್ತು ಕೆರೆಯಲ್ಲಿ ಕೂಲಿ ಕಾರ್ಮಿಕನಾದ ಮಹಾಬಲ ನಾಯ್ಕನ ಮಗ ರಾಘುವಿಗೆ ಹೋಟೆಲು ಆರಂಭಿಸುವಂತೆ ಪ್ರೇರೇಪಿಸುತ್ತಾನೆ. ರಾಘು ಮುಂಬಯಿ ನಗರದ ಹೋಟೆಲೊಂದರಲ್ಲಿ ಕಾರ್ಮಿಕನಾಗಿ ನುರಿತ ಅನುಭವ ಹೊಂದಿದ್ದನ್ನು ಅರಿತು 'ರಾಘವೇಂದ್ರ ಭವನ'ದ ಮಾಲೀಕನನ್ನಾಗಿಸುತ್ತಾನೆ. ಹೊಸ ಅಂಗಡಿ 'ರಾಘವೇಂದ್ರ ಭವನ'ದಲ್ಲಿ ಒಂಬತ್ತು ಕೆರೆ ಗ್ರಾಮದ ಕೂಲಿ ಕಾರ್ಮಿಕರು, ಮಾಜಿ ಗೇಣಿದಾರರು, ಗುತ್ತಿನ ಮೂಲದಾಳುಗಳು ಪ್ರತಿದಿನ ಸಂಜೆ ಹೊತ್ತು ತಮ್ಮ ಕೆಲಸ ಮುಗಿದ ಮೇಲೆ ಹೋಟೆಲಿಗೆ ಬರಲು ಪ್ರಾರಂಭಿಸುತ್ತಾರೆ. ಕೆಲವರಿಗೆ ತಮ್ಮ ಕೆಲಸದಿಂದುಂಟಾದ ಮೈ ಕೈ ನೋವಿಗೆ ಸಾರಾಯಿ ದಿವ್ಯ ಔಷಧವಾಗಿ ಪರಿಣಮಿಸಿತ್ತು. ಮತ್ತೆ ಕೆಲವರಿಗೆ ರಾತ್ರಿಯ ನಿದ್ರೆಗೆ ಸೇಂದಿ ಸೇವನೆ

ಬೇಕಾಗಿರುತ್ತಿತ್ತು. ಈ ಎಲ್ಲಾ ಆಸಕ್ತಿಗಳಿಗೂ ಆದಂ ಕುಟ್ಟಿಯ ಪ್ರೇರಣೆ ಪಡೆದುಕೊಂಡ 'ರಾಘವೇಂದ್ರ ಭವನ'ದ ಚಹಾ, ಕಾಫಿ ಪರ್ಯಾಯವಾಗಿ ನಿಲ್ಲುತ್ತದೆ. ಬಹುತೇಕರಿಗೆ ಚಹಾ ಕುಡಿಯದಿದ್ದರೆ ತಲೆನೋವು ಬರುತ್ತದೆ ಎನ್ನುವ ಮಾತುಗಳು ಕೇಳಿ ಬರಲಾರಂಭಿಸಿರುತ್ತವೆ. ಊರಿನ ಜನರ ಮಲಬದ್ಧತೆಗೆ ಕಾಫಿ ಒಳ್ಳೆಯದು ಎಂಬ ಉಪದೇಶವು ಆಗಿತ್ತು. ಇದರಿಂದ 'ರಾಘವೇಂದ್ರ ಭವನ'ವು ಗ್ರಾಹಕರ ಆಪೇಕ್ಷೆಗೆ ತಕ್ಕಂತೆ ಚಹಾ, ಕಾಫಿ ಪೂರೈಸುತ್ತಿರುವುದನ್ನು ಕಂಡು ಆದಂ ಕುಟ್ಟಿಯು ಸಂತಸ ಪಡುತ್ತಾನೆ.

ಒಟ್ಟಿನಲ್ಲಿ 'ಉಲ್ಲಂಘನೆ' ಕಾದಂಬರಿಯು ಹೋಟೆಲುಗಳ ಚಿತ್ರಣದ ಮೂಲಕ ಒಟ್ಟಾರೆ ಗ್ರಾಮೀಣ ಪರಿಸರದಲ್ಲಾದ ಸ್ಥಿತ್ಯಂತರವನ್ನು ಎರಡು ಪ್ರಮುಖ ನೆಲೆಗಳಲ್ಲಿ ಕಟ್ಟಿಕೊಡುತ್ತದೆ. ಸಾಂತೇರುಗುತ್ತಿನ ಸದಸ್ಯರು ಹೋಟೆಲು ಉದ್ಯಮದಲ್ಲಿ ತೊಡಗಿಕೊಳ್ಳುವುದೇ ಪಾರಂಪರಿಕ ಕೃಷಿ ಸಂಸ್ಕೃತಿಯ ಪಲ್ಲಟದ ಕಾರಣದಿಂದಾಗಿ. ಭೂ-ಮಸೂದೆ ಕಾಯ್ದೆಯಿಂದಾದ ಪರಿಣಾಮಗಳು, ಆಳುಮಕ್ಕಳ ಅಲಭ್ಯತೆ, ಮಾತೃಮೂಲೀಯ ಸಂಸ್ಕೃತಿ ಮತ್ತು ಅಳಿಯಕಟ್ಟಿನಲ್ಲಾಗುವ ವಿಘಟನೆಗಳು ಇತ್ಯಾದಿ ಕಾರಣಗಳಿಂದಾಗಿ ಗ್ರಾಮೀಣ ಪ್ರದೇಶದ ಪಾರಂಪರಿಕ ವೃತ್ತಿಗೆ ಪರ್ಯಾಯವಾಗಿ ಗುತ್ತಿನ ಹೊಸ ತಲೆಮಾರಿನ ಸದಸ್ಯರು ಹೋಟೆಲು ಉದ್ಯಮದ ಮಾರ್ಗವನ್ನು ಕಂಡುಕೊಳ್ಳುತ್ತಾರೆ. ಇದು ಸ್ಥಿತ್ಯಂತರದ ಪ್ರಮುಖ ನೆಲೆಯಾದರೆ ಹೋಟೆಲು ಉದ್ಯಮದ ಮೂಲಕ ಗ್ರಾಮೀಣ ಪರಿಸರವೊಂದರ ಯುವಪೀಳಿಗೆಯು ಆಧುನಿಕ ಬದುಕಿಗೆ ತೆರೆದುಕೊಳ್ಳುವುದು ಇಲ್ಲಿನ ಸ್ಥಿತ್ಯಂತರದ ಇನ್ನೊಂದು ನೆಲೆಯಾಗಿದೆ.

ದು.ನಿಂ. ಬೆಳಗಲಿಯವರ 'ಕಾತ್ರಾಳ ರತ್ನಿಯ ಚಾದಂಗಡಿ' ಕಾದಂಬರಿಯಲ್ಲೂ ಹೋಟೆಲಿನ ಮುಖಾಂತರ ನಂದೂರಿನ ಪರಿಸರದಲ್ಲಾದ ಬದಲಾವಣೆಯು ಚಿತ್ರಿತವಾಗಿದೆ. ಬಸ್ಸು ನಂದೂರಿನ ಚಾದಂಗಡಿಯ ಮುಂದೆ ಬಂದು ನಿಲ್ಲುವ ಸನ್ನಿವೇಶದೊಂದಿಗೆ ಕಾದಂಬರಿಯು ಪ್ರಾರಂಭವಾಗುತ್ತದೆ. ಆ ಮೂಲಕ ಆರಂಭದಲ್ಲೇ ಕಾದಂಬರಿಯು ಊರಿನ ಸ್ಥಿತ್ಯಂತರದ ಸುಳಿವನ್ನು ನೀಡುತ್ತದೆ.

ರತ್ನಳ ಚಾದಂಗಡಿ ಚಾಹ, ತಿಂಡಿ, ಗುಟಕಾ ಮುಂತಾದ ಹವ್ಯಾಸಗಳಿಗೆ ವಿಶೇಷ ಸ್ಥಳವಾಗಿ ಪರಿಣಮಿಸುತ್ತದೆ. ನಂದೂರಿನ ಪಕ್ಕದ ಗ್ರಾಮಗಳಿಗೆಲ್ಲ ಸಕಲ ಸೌಲಭ್ಯಗಳನ್ನು ಪೂರೈಸುವ ಮಟ್ಟಕ್ಕೆ ರತ್ನಳ ಚಾದಂಗಡಿ ಸಾರ್ವಜನಿಕರಲ್ಲಿ ಚಿರಪರಿಚಿತವಾಗಿತ್ತು. ಬಿಸನಾಳ, ಜಮಖಂಡಿಗೆ ಸಂಚರಿಸುವ ಬಸ್ಸು ಇಲ್ಲಿ ನಿಲ್ಲುವುದರಿಂದ ಪ್ರಯಾಣಿಕರಿಗೆಲ್ಲ ಚಾದಂಗಡಿಯೇ ನಿಲ್ದಾಣವಾಗಿತ್ತು. ಸಿನೆಮಾ, ಪಲ್ಲಕ್ಕಿ ಉತ್ಸವಗಳ, ಪುರಾಣ ಪ್ರವಚನಗಳ ಪ್ರಾರಂಭ ಮುಕ್ತಾಯ, ವೇದಾಂತ ಪರಿಷತ್ತು ಲಕ್ಷದೀಪೋತ್ಸವ, ಪಟ್ಟಾಭಿಷೇಕ, ಕಳಸಾರೋಹಣ, ನಟ–ನಟಿಯರ ಭಾವಚಿತ್ರ, ಮಹಾಸ್ವಾಮಿಗಳ ಕಿರೀಟಸಹಿತ–ರಹಿತ ಮುಖಗಳು, ಜಂಗಿ ಕುಸ್ತಿ ಪೈಲ್ವಾನರ ಮುಖದರ್ಶನ ಮುಂತಾದವು ಚಾದಂಗಡಿ ಗೋಡೆ ಮತ್ತು ಬಾಗಿಲಲ್ಲಿ ರಾರಾಜಿಸತೊಡಗುತ್ತವೆ.

'ಕಲಿಯಿರಿ ಕಲಿಸಿರಿ', 'ಹೆಬ್ಬೆಟ್ಟಿನ ಸಹಿ ಬಾಳಿಗೆ ಕಹಿ', 'ಹೆಣ್ಣೊಬ್ಬಳು ಕಲಿತರೆ ದೇಶ ಕಲಿತಂತೆ' ಎಂಬಿತ್ಯಾದಿ ಸರಕಾರ ರೂಪಿಸುವ ಶಿಕ್ಷಣಕ್ಕೆ ಸಂಬಂಧಪಟ್ಟ ಯೋಜನೆಗಳ ಪ್ರಾಥಮಿಕ ತಿಳುವಳಿಕೆಯು ಚಾದಂಗಡಿಯಲ್ಲಿನ ಭಿತ್ತಿಪತ್ರಗಳಿಂದ ಗ್ರಾಹಕರು ಪಡೆಯುವಂತಾಗುತ್ತದೆ. 'ಐನೂರು ರೂಪಾಯಿ ಗೆಲ್ಲಿರಿ' ಆರೋಗ್ಯ ಶಿಕ್ಷಣದ ಬಗೆಗೂ ಗ್ರಾಹಕರು ಮತ್ತು ಸಾರ್ವಜನಿಕರಲ್ಲಿ ಚಾದಂಗಡಿ ಗೋಡೆಗಳಲ್ಲಿ ಬರೆಯಿಸಿರುವ ಉಕ್ತಿಗಳು ವಿಶ್ವಾಸವನ್ನು ಮೂಡಿಸುತ್ತವೆ. ಇವುಗಳಲ್ಲದೆ ಕೃಷಿ ಚಟುವಟಿಕೆಗಳ ಬಗ್ಗೆ ತಿಳಿಸುವ ಸಲಹೆಗಳೂ ಕೂಡ ರತ್ನಾಳ ಚಾದಂಗಡಿ ಗೋಡೆಯು ಜ್ಞಾನದ ಆಗರವಾಗಿ ಪರಿಣಮಿಸುತ್ತದೆ. ಮೊದಮೊದಲು ಚೆನ್ನಪ್ಪ, ಸಿದ್ರಾಮಪ್ಪ ಅರಕೇರಿ ಇದ್ದದ್ದು ರತ್ನಳ ಕಾರ್ಯವೈಖರಿಯಿಂದ ಕಾತ್ರಾಳ ರತ್ನಿಯ ಚಾದಂಗಡಿ ಎಂದು ನಂದೂರಿನ ಜನರ ನಾಲಗೆಯಲ್ಲಿ ರಾರಾಜಿಸತೊಡಗಿತು. ಜನರು ಗ್ರಾಮದ ಹೆಸರಿಗೆ ಬದಲಾಗಿ ಕಾತ್ರಾಳ ರತ್ನಿಯ ಚಾದಂಗಡಿಯ ಮೂಲಕ ಗುರುತಿಸಿಕೊಂಡವರೇ ಊರಲ್ಲಿ ಜಾಸ್ತಿ ಇದ್ದರು. ಮೇಲಿಂದ ಮೇಲೆ ಬರುವ ಕಂಡಕ್ಟರಾದಿಯಾಗಿ ಪ್ರಯಾಣಿಕರು ರತ್ನವ್ವನ ವಿನೋದ, ಹರಟೆ ಇತ್ಯಾದಿಗಳ ಬಗೆಗೆ ಮಾರುಹೋಗಿದ್ದರು. ಮುಂಜಾನೆ ಹೊತ್ತಿಗೆ ಬರುವ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಿಂದ ಊರಿನ ಜನರು ಹೊಸ ವಿದ್ಯಮಾನಗಳನ್ನು ಓದಿ ತಿಳಿದುಕೊಳ್ಳಲು ಆರಂಭಿಸುತ್ತಾರೆ. ನಂದೂರಿನಲ್ಲಿ ಕೌಟುಂಬಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಂಘರ್ಷದ ವಿದ್ಯಮಾನಗಳು ಘಟಿಸಿದಾಗ ಚಾದಂಗಡಿಯಲ್ಲಿ ಇತ್ಯರ್ಥವಾಗುತ್ತಿದ್ದವು. ಹಳ್ಳಿಯ ಬಡವರ, ಅವಕಾಶವಂಚಿತರ, ಶಿಕ್ಷಣದಿಂದ ಹಿಂದುಳಿದವರ ಬಗೆಗೆ ಚಾದಂಗಡಿ ಮಾಲೀಕಳು ಮುತುವರ್ಜಿ ವಹಿಸುತ್ತಿದ್ದಳು. ಗ್ರಾಮದಲ್ಲಿ ಸುದ್ದಿಗಳು ಹೇಗೆ ದಿನಕ್ಕೊಂದು ರೂಪ ಪಡೆಯುತ್ತವೆ ಎನ್ನುವುದಕ್ಕೆ ಕಾದಂಬರಿಯಲ್ಲಿನ ರಾಯಣ್ಣನ ಅನೈತಿಕ ಸಂಬಂಧದ ಸಂಗತಿ ಸಾಕ್ಷೀಭೂತವಾಗುತ್ತದೆ. ಕಮಲ ಅತ್ಯಾಚಾರಕ್ಕೊಳಗಾಗಿ ಹೀನಾಯ ಸ್ಥಿತಿ ಅನುಭವಿಸುವ ರೀತಿಯನ್ನು ಹೋಟೆಲಿನ ಮಾಲೀಕಳಾದ ರತ್ನವ್ವ ತನ್ನ ಮಗಳಂತೆ ಭಾವಿಸಿ ಸಮಜಾಯಿಸುತ್ತಾಳೆ. ಹೀಗಿರುವಾಗ ಚಾದಂಗಡಿಯ ವ್ಯವಹಾರದಿಂದಾಗಿ ಇಂತಹ ಹೀನಾಯ ಪರಿಸ್ಥಿತಿಯುಳ್ಳವರಿಗೆ ಸಹಾಯಹಸ್ತ ನೀಡುವ ಪ್ರಸಂಗವು ನಡೆಯುತ್ತದೆ. ಹೀಗೆ ನಂದೂರಿನ ದೈವದವರು ಬಗೆಹರಿಸದೆ ಇರುವ ಸಮಸ್ಯೆಗಳನ್ನು ಚಾದಂಗಡಿಯಲ್ಲಿ ರತ್ನವ್ವ ನ್ಯಾಯ ನಿರ್ಣಯಗಳನ್ನು ಮಾಡುತ್ತಿದ್ದಳು. ಹೀಗೆ ನಂದೂರಿನಲ್ಲಿ ರತ್ನಿಯ ಚಾದಂಗಡಿಯು ಇರುವುದರಿಂದಾಗಿ ಅಲ್ಲಿ ನಗರದಿಂದ ಬರುವ ಬಸ್ಸಿನ ನಿಲುಗಡೆಯು ಆರಂಭವಾಗುತ್ತದೆ. ಚಾದಂಗಡಿ ಮತ್ತು ಬಸ್ಸಿನ ಸಂಯೋಗದಿಂದಾಗಿ ನಂದೂರಿನ ಗ್ರಾಮೀಣ ಪರಿಸರವು ಹಲವು ಬಗೆಯ ಸ್ಥಿತ್ಯಂತರಗಳಿಗೆ ಒಳಗಾಗುತ್ತದೆ.

ವ್ಯಾಸರಾವ್ ನಿಂಜೂರ್ ಅವರ 'ಶ್ರೀಚಾಮುಂಡೇಶ್ವರಿ ಭವನ' ಕಾದಂಬರಿಯಲ್ಲೂ ಕೆಮ್ಮಣ್ಣುವಿನ ಪರಿಸರದಲ್ಲಾದ ಬದಲಾವಣೆಯು ಪಡಿಮೂಡಿದೆ. ಕೆಮ್ಮಣ್ಣುವಿನಲ್ಲಿ ಆಣೆ, ಪಾವಾಣೆ,

ಪೈಸೆಗಳ ಚಲಾವಣೆ ಕಾಲ ಕಳೆದುಹೋದ ಸಂದರ್ಭದಲ್ಲಿ ಶ್ರೀಚಾಮುಂಡೇಶ್ವರಿ ಭವನ ಎಂಬ ಹೋಟೆಲು ಆರಂಭವಾಗುತ್ತದೆ. ಈಗಾಗಲೇ ಊರಿನ ನಾಗರಿಕರು ತಮ್ಮ ಒಟ್ಟಾರೆ ಬದುಕಿನಲ್ಲಿ ಸಿಹಿ ಕಹಿ ಎರಡನ್ನೂ ಅನುಭವಿಸಿದ್ದರು. ಮನೆಯಲ್ಲಿ ಮಾಡುವ ಪಾರಂಪರಿಕ ತಿಂಡಿ ತಿನಿಸುಗಳ ಜೊತೆಗೆ ಗ್ರಾಮೀಣ ಪರಿಸರದಲ್ಲಿ ಈಗಾಗಲೇ ಇದ್ದ ಸಣ್ಣ ಪುಟ್ಟ ಹೋಟೆಲುಗಳ ಕೆಲವು ತಿಂಡಿ ತಿನಿಸುಗಳಷ್ಟೇ ಊರಿನ ಜನರಿಗೆ ಪರಿಚಿತವಾಗಿತ್ತು. ಹೀಗಿರುವಾಗ ಕೋಟಂಬೈಲು ಶೀನಪ್ಪಯ್ಯನವರ ಮಗನಾದ ವಾಸಪ್ಪಯ್ಯನ "ಶ್ರೀ ಚಾಮುಂಡೇಶ್ವರಿ ಭವನ, ಶಿವಳ್ಳಿ ಬ್ರಾಹ್ಮಣರ ಟೀ-ಕಾಫಿ ಕ್ಲಬ್ ಮಾಲೀಕರು ಕೆ.ವಾಸುದೇವರಾವ್" ಎಂದು ಸ್ಥಾಪಿತವಾಗುತ್ತದೆ. 'ಊಟ ತಯಾರಿದೆ' ಎನ್ನುವ ಸಣ್ಣ ಅಕ್ಷರಗಳಲ್ಲಿ ಬರೆಸಿದ ಬೋರ್ಡನ್ನು ನೋಡಿ ಊರಿಗೆ ಊರು ಬೆರಗುಗೊಳ್ಳುತ್ತದೆ. ಕೆಮ್ಮಣ್ಣುವಿನಲ್ಲಿ ಅತ್ಯಂತ ಆಧುನಿಕವಾದ ಹೋಟೆಲು ಎಂಬುದು ಊರಿನವರಲ್ಲಿ ಮನೆ ಮಾಡಿಕೊಳ್ಳುತ್ತದೆ.

'ಶ್ರೀಚಾಮುಂಡೇಶ್ವರಿ ಭವನ' ಕೋಟಂಬೈಲು ಸಂತೆಮಾಳಕ್ಕೆ ಸಮೀಪ ಹತ್ತು ಮಾರು ದೂರ ಇರುವುದರಿಂದ ಗುರುವಾರ ಗಿರಾಕಿಗಳ ಸಂತಸಕ್ಕೆ ಪಾತ್ರವಾಗಿತ್ತು. ಹೋಟೆಲು ಮಾಲೀಕರಂತೂ ಪುರುಸೊತ್ತಿಲ್ಲದಂತೆ ಗ್ರಾಹಕರ ಬೇಕು-ಬೇಡಗಳನ್ನು ಪೂರೈಸುತ್ತಿದ್ದರು. ಸಂತೆಯ ದಿನದಲ್ಲಿ ಇರುವಾಗ ಬಿಡಿದಿನಗಳಲ್ಲಿಯೂ ವ್ಯಾಪಾರ ಅಂದುಕೊಂಡದ್ದಕ್ಕಿಂತ ಜಾಸ್ತಿಯಾಗುತ್ತಿತ್ತು. ಊರಿನ ಮಾರಿಬಲಿ ನೀರಿಗೆ ಬಿಡುವ ಜನರಿಗೆ ವಾಸಪ್ಪಯ್ಯನ ಹೋಟೆಲು ಅನುಕೂಲ ಸಿಂಧುವಾಗಿ ಪರಿಣಮಿಸುತ್ತದೆ. ಕೆಮ್ಮಣ್ಣುವಿನ ಕೃಷಿಕ ಗ್ರಾಹಕರು ಬೆಳಗ್ಗೆ ಮೂರು ಗಂಟೆಗೆ ಬಂದು ತಮ್ಮ ಹಸಿವನ್ನು ಹಿಂಗಿಸಿಕೊಳ್ಳುವುದರ ಮೂಲಕ ಶ್ರೀ ಚಾಮುಂಡೇಶ್ವರಿ ಭವನದ ದೈನಂದಿನ ಚಟುವಟಿಕೆಯು ಆರಂಭವಾಗುತ್ತಿತ್ತು. ಬೆಳಗಿನ ಹತ್ತು ಗಂಟೆಯ ತನಕ ಗ್ರಾಹಕರು ಮನತಣಿಯುವಂತೆ ತಮ್ಮ ಹಸಿವನ್ನು ಹಿಂಗಿಸಿಕೊಳ್ಳುತ್ತಿದ್ದರು. ಸಾಯಂಕಾಲ ನಾಲ್ಕರ ಬಸ್ಸು ಬರುವಾಗಿನಿಂದ ಸಂಜೆ ಏಳರ ತನಕ ಗ್ರಾಹಕರ ಉಪಾಹಾರ ಸೇವನೆಗೆ ಎಡೆ ಮಾಡಿಕೊಡುತ್ತಿತ್ತು. ಮಧ್ಯಾಹ್ನದ ಸಮಯದಲ್ಲಿ ಸ್ವಲ್ಪ ಬಿಡುವು ಸಿಗುವುದರಿಂದ ಚಹ ಕಾಫಿ ಬಂದ್ ಮಾಡಿ ಊಟದ ಗ್ರಾಹಕರಿಗೆ ಮಹತ್ವ ಕೊಡುತ್ತಾರೆ. ಆಯುರ್ವೇದ ವೈದ್ಯಶಾಲೆಯ ಡಾಕ್ಟರರು, ಕಾಂಪೌಂಡರು, ಮಾಧ್ಯಮಿಕ ಶಾಲೆಯ ನಾಲ್ಕೈದು ಮಾಸ್ತರರಿಗೆ ಊಟದ ಖಾಯಂ ವ್ಯವಸ್ಥೆಯನ್ನು ಕಲ್ಪಿಸುತ್ತದೆ. ಇವರಲ್ಲದೆ ಕೆಲಸದಿಂದ ಮರಳುವ ಮೋಗೇರರು, ಚಹ ಕಾಫಿ ಪುಡಿಯ ಏಜೆಂಟರು, ಮನೆಗೆ ಹೋಗಲು ಅಷ್ಟು ಆತುರ ತೋರಿಸದೆ ಬಟ್ಟೆ ಮಾರುವವರು, ಸೋಡಾ ಅಂಗಡಿಗಳ ಮಾಲೀಕರನ್ನು ಊಟದ ಗ್ರಾಹಕರಾಗುವಂತೆ ಹೋಟೆಲು ಗಮನ ಸೆಳೆದುಕೊಂಡಿತ್ತು. ಇಲ್ಲಿನ ನಾಲ್ಕಾಣೆ ಪ್ಲೇಟು ಊಟವು ಮಂದಿಯ ಮನಸ್ಸನ್ನು ಸೂರೆಗೊಂಡಿತ್ತು. ಶ್ರೀಚಾಮುಂಡೇಶ್ವರಿ ಭವನ ಮೋಗೇರರು ಮಾತ್ರ ತಮ್ಮ ದಿನವಿಡೀ ಶ್ರಮದಾಯಕ ಕೆಲಸದಿಂದಾಗಿ ಆರಾಣೆಯ ಇಡೀ ಊಟ ಮಾಡಿ ಹಸಿವನ್ನು ಹಿಂಗಿಸಿಕೊಳ್ಳತೊಡಗುತ್ತಾರೆ.

ವಾಸುಭಟ್ಟರ ಹೋಟೆಲು ಕೆಮ್ಮಣ್ಣಿನಂತಹ ಊರಿನಲ್ಲಿ ಒಂದು ಪುಟ್ಟ ಕ್ರಾಂತಿಯನ್ನುಂಟು ಮಾಡುತ್ತದೆ. ಮೊದಲು ಕೆಮ್ಮಣ್ಣಿನ ಹೋಟೆಲುಗಳು ಚಪ್ಪರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಅಲ್ಲಿ ಸಿಗುವ ಅವಲಕ್ಕಿ, ಹಲಸು ಸಜ್ಜಿಗೆ, ವಡೆ, ಬಂಡೆ ಕಲ್ಲಿನಂತಹ ಇಡ್ಲಿ, ತಗಡಿನಂತಹ ದೋಸೆ, ಹೆಚ್ಚೆಂದರೆ ಶಿರವನ್ನು ಗ್ರಾಹಕರು ಪಡೆಯುತ್ತಿದ್ದರು. ಶ್ರೀಚಾಮುಂಡೇಶ್ವರಿ ಭವನದ ಮೂಲಕ ವಾಸುಭಟ್ಟರು ಗ್ರಾಹಕರ ಅಭಿರುಚಿಯನ್ನು ಮನಗಂಡು ಬಗೆಬಗೆಯ ತಿಂಡಿತಿನಿಸುಗಳನ್ನು ತಯಾರಿಸಿ ಪೂರೈಸತೊಡಗುತ್ತಾರೆ. ಗೋಡಂಬಿ ಭರಿತ ಬೊಂಬಾಯಿ ರವಾ ಉಪ್ಪಿಟ್ಟು, ಖಾರ ಅವಲಕ್ಕಿ, ಮುಸುಕು ವಡೆ. ಬಿಸಿಬೇಳೆಬಾತ್, ಇಡ್ಲಿ ಈರುಳ್ಳಿ ಸಾಂಬಾರ್, ರವಾದೋಸೆ, ತುಪ್ಪದ ದೋಸೆ, ಉತ್ತಪ್ಪ, ಬೆಣ್ಣೆ ಮಸಾಲೆದೋಸೆ, ಪೇಪರ್‌ದೋಸೆ, ಸೆಟ್‌ದೋಸೆ, ಕೇಸರಿಬಾತ್, ಜಾಂಗೀರು, ಹೋಳಿಗೆ, ಪೇಣೂರಿ, ಬಾದೂಷಾ, ಮೋಹನ ಲಾಡು, ಬೂಂದಿ ಲಾಡು, ತರಕಾರಿ ಬೋಂಡ, ಮೈಸೂರು ಬೋಂಡ, ಪಕೋಡ, ಬರ್ಫಿ, ಬಟಾಟೆವಡೆ, ಮೊಸರುವಡೆ ಹೀಗೆ ಊರಿನ ಜನ ಈವರೆಗೆ ಕಾಣಲಾರದ ಕೇಳಲಾರದ ತಿನ್ನಲಾರದ ರುಚಿಯಾದ ತಿಂಡಿತಿನಿಸುಗಳನ್ನು ಶ್ರೀಚಾಮುಂಡೇಶ್ವರಿ ಭವನದಲ್ಲಿ ಗ್ರಾಹಕರಾಗಿ ಪಡೆಯುತ್ತಾರೆ. 'ಡಡಡಾಂ ಡಿಡಿಡೀಂ' 'ಲಾರಲಪ್ಪ ಲಾರಾಲಪ್ಪ' ಮತ್ತು ಸೋಡ ರಾಜಕುಮಾರಿ ಸೋಡಾ ಮುಂತಾದ ಆಧುನಿಕ ಖ್ಯಾತ ಸಿನಿಮಾ ಗಾಯನಗಳನ್ನು ಪಂಚಾಯಿತಿ ಆಫೀಸಿನಿಂದ ಮಕ್ಕಳು ಕೇಳಿಸಿಕೊಳ್ಳುತ್ತಿದ್ದರು. ವಾಸಪ್ಪಯ್ಯನ ವಾಕ್‌ಚಾತುರ್ಯ ಪ್ರದರ್ಶನವು ಪ್ರತಿದಿನ ಕೇಳಿ ಅಚ್ಚರಿಪಡುತ್ತಿದ್ದರು.

ಭಟ್ಟರ ನಾಲಿಗೆ ಮಾತ್ರವಲ್ಲ, ಕೈಗುಣ ಸಹ ಬಾರಿ ಖ್ಯಾತಿ ಪಡೆದಿತ್ತು. ಅವರು ಮನಸ್ಸಿಟ್ಟು ಮಾಡಿದ ಚಹಕ್ಕೆ ಸಾಟಿಯಾಗುವ ಚಹ ನಗರ ಮತ್ತು ಪಟ್ಟಣಗಳಲ್ಲಿ ದೊರೆಯುವುದಿಲ್ಲ ಎನ್ನುವುದು ಊರಿನ ಗ್ರಾಹಕರ ಅಭಿಪ್ರಾಯವಾಗಿತ್ತು. ತಿಂಡಿಗೆ ತಕ್ಕಂತೆ ಅದರ ಬೆಲೆಯು ಇದ್ದದ್ದನ್ನು ತೋರುಗೊಡದೆ ಅಚ್ಚುಕಟ್ಟು ಹಾಗೂ ರುಚಿಗೆ ಊರವರು ಮಾರುಹೋಗಿದ್ದರು.

ಒಟ್ಟಾರೆಯಾಗಿ ಕೆಮ್ಮಣ್ಣುವಿನಲ್ಲಿ ಈಗಾಗಲೇ ಇದ್ದ ಹಲವು ಚಿಕ್ಕ ಹೋಟೆಲುಗಳಿಗಿಂತ ಭಿನ್ನವಾಗಿ ಸೌಲಭ್ಯವುಳ್ಳ ಸುಸಜ್ಜಿತ ಹೋಟೆಲೆಂದು 'ಶ್ರೀಚಾಮುಂಡೇಶ್ವರಿ ಭವನ' ಪ್ರಸಿದ್ಧಿಯನ್ನು ಪಡೆಯುತ್ತದೆ. ಈ ಪ್ರಸಿದ್ಧಿ ಮತ್ತು ಗ್ರಾಹಕರ ರುಚಿಗೆ ತಕ್ಕಂತೆ ಹೊಸ ಬಗೆಯ ತಿಂಡಿ ತಿನಿಸುಗಳನ್ನು ಹೋಟೆಲಿನಲ್ಲಿ ಪೂರೈಸಲಾಗುತ್ತಿತ್ತು.

ಇದೇ ಲೇಖಕರ 'ತೆಂಕನಿಡಿಯೂರಿನ ಕುಳವಾರಿಗಳು' ಕಾದಂಬರಿಯು ಹೋಟೆಲಿನಿಂದ ತೆಂಕನಿಡಿಯೂರಿನಲ್ಲಾದ ಬದಲಾವಣೆಯನ್ನು ಚಿತ್ರಿಸಿದೆ. ತೆಂಕನಿಡಿಯೂರಿನಲ್ಲಿ ಏಕೈಕ ಪಂಚತಾರಾ ಹೋಟೆಲು ಎಂದೇ 'ತಟ್ಟಿ ಹೋಟೆಲು' ಪ್ರಸಿದ್ಧಿ ಪಡೆದಿತ್ತು. 'ಶ್ರೀ ವೀರಭದ್ರ ವಿಲಾಸ', 'ಶಿವಳ್ಳಿ ಬ್ರಾಹ್ಮಣರ ಟೀ-ಕಾಫಿ ಕ್ಲಬ್', 'ಪ್ರೊಪ್ರೈಟರ್ ಕೆ. ಶಿವರಾಮ ರಾವ್' ಎನ್ನುವುದು ನೆಪಮಾತ್ರಕ್ಕೆ ಬೋರ್ಡು ತೂಗಾಡುತ್ತಿತ್ತು. ಅಪ್ಪಿ-ತಪ್ಪಿ 'ವೀರಭದ್ರ ವಿಲಾಸ' ಎಲ್ಲಿದೆ ಎಂದು ಪರ ಊರಿನವರು

ಕೇಳಿದರೆ ಅದು ಎಲ್ಲಿದೆ ಎಂದು ಅವರು ಪ್ರಶ್ನಿಸಿಕೊಳ್ಳುತ್ತಿದ್ದರು. ಆದರೆ 'ತಟ್ಟಿ ಹೋಟೆಲು' ಎಲ್ಲಿದೆ ಎಂದಾಗ ಊರವರೆಲ್ಲರಿಗೂ ಗೊತ್ತು ಎಂದು ಊರ ಜನ ಎನ್ನುತ್ತಿದ್ದರು. ಶಿವರಾಮ ರಾವ್ ಅವರ 'ತಟ್ಟಿ ಹೋಟೆಲು' ತೆಂಕನಿಡಿಯೂರಿನಲ್ಲಿ ಅಷ್ಟು ಪ್ರಸಿದ್ಧಿಯನ್ನು ಗಳಿಸಿತ್ತು. 'ತಟ್ಟಿ ಹೋಟೆಲಿ'ನ ಭಟ್ಟರು ಅನ್ನುವಂತಹದು ಎಳೆ ಮಕ್ಕಳಿಗೂ ಸಹ ಊರಲ್ಲಿ ಗೊತ್ತಿತ್ತು. ದುಗ್ಗಪ್ಪ ಹೆಗ್ಗಡೆಯವರ ಕಾಲಿಯಿದ್ದ ಮುರುಕಲು ಉಗ್ರಾಣದಲ್ಲಿ ಭಟ್ಟರ ಹೋಟೆಲು ಇದ್ದದ್ದರಿಂದ ಅದು ತಟ್ಟಿ ಹೋಟೆಲೆಂದು ಊರವರ ಬಾಯಲ್ಲಿ ಚಿರಸ್ಥಾಯಿಯಾಗಿತ್ತು. 'ಶ್ರೀ ವೀರಭದ್ರ ವಿಲಾಸ'ದಲ್ಲಿ ಮುಂಜಾನೆ ಬೆಳಕು ಹರಿಯುವ ಮೊದಲು ಬುತ್ತಿ ಹಿಡಿದು ದಂಡೋಣೆ, ಮಾರಿಬಲೆಯ ಬುಟ್ಟಿಗೆ ರಟ್ಟೆ ಕೊಡುವ ಬೆಸ್ತರ ಕಲಾಸಿಗಳು, ಪಟ್ಟಾಂಗ ಹೊಡೆಯಲು ಬರುವ ಊರ ಮಂದಿ, ಬಾಳೆ ಎಲೆಯಲ್ಲಿ ಇಡ್ಲಿ, ಉಪ್ಪಿಟ್ಟು ತಿಂದು ತಾವು ತಂದ ಕಂಚಿನ ಲೋಟದಲ್ಲಿ ಬಿಸಿ ಬಿಸಿ ಚಹಾವನ್ನು ಮರೆಯಲ್ಲಿ ಕುಡಿಯುವ ಬ್ರಾಹ್ಮಣ ಯುವಕರು, ಮಡಿವಂತ ಹೆಂಗಸರು, ತರಕಾರಿ, ಮೀನು ಮಾರುವ ಬಾಯಮ್ಮಗಳು, ಮೊಗೇರ್ತಿಯರು, ಕೃಷಿ ಕೆಲಸಗಳಿಗೆ ತೆರಳುವ ಆಳುಗಳು, ಕಮ್ಮಾರ, ಬಡಿಗ, ಬಂಗಾರದ ಕೆಲಸದ ವಿಶ್ವಕರ್ಮರು, ಮಗ್ಗಗಳಲ್ಲಿ ಕೆಲಸ ಮಾಡುವ ನೇಕಾರರು(ವ್ಯಾಸರಾವ್ ನಿಂಜೂರ, ೨೦೧೬, ಪುಟ ೩೯). ಹೀಗೆ ಹತ್ತು ಗಂಟೆಯವರೆಗೆ ಮನತಣಿಯುವಂತೆ ಉಪಾಹಾರ ಸೇವನೆ ಮಾಡಿ ಮುಂದಿನ ಕಾರ್ಯದಲ್ಲಿ ತೊಡಗಲು ಅಣಿಗೊಳ್ಳುತ್ತಿದ್ದರು. ಚಹಾ ಮಾಡುವಾಗಲಂತೂ ಅದು ಹೊರಸೂಸುವ ಪರಿಮಳದಿಂದ ಗಿರಾಕಿಗಳ ಮೂಗು ನೆಟ್ಟಗಾಗುತ್ತಿದ್ದವು. ಈ ನೊರೆ-ನೊರೆಯಾದ ಚಹಾದ ರುಚಿ ಕಂಡವರು ಮಲ್ಪೆ, ಉಡುಪಿ ಹೋಟೆಲುಗಳಲ್ಲೂ ಇಲ್ಲ ಎಂಬುದು ತೆಂಕನಿಡಿಯೂರಿನ ಗ್ರಾಹಕರ ಸರ್ವಾನುಮತದ ಅಭಿಪ್ರಾಯವಾಗಿತ್ತು.

ತೆಂಕನಿಡಿಯೂರಿನಲ್ಲಿ ದುಗ್ಗಪ್ಪ ಶೆಟ್ಟಿಯವರಿಗೆ ಈ ಹಿಂದೆ ಸಿಗುತ್ತಿದ್ದಕ್ಕಿಂತಲೂ ಹೆಚ್ಚಿನ ಗೌರವವನ್ನು ತಟ್ಟಿ ಹೋಟೆಲಿನ ಶಿವರಾಮರಾವ್ ನೀಡುತ್ತಾರೆ. ತಟ್ಟಿ ಹೋಟೆಲಿನಲ್ಲಿ ಗ್ಲಾಸು ತೊಳೆಯುವ ಸಮಯದಲ್ಲಿ ಸಿನಿಮಾ ನಟ ನಟಿಯ ಈಜುಡುಗೆಯ ಚಿತ್ರ ನೋಡಿ ಸಂಭ್ರಮಿಸಿದ ಸನ್ನಿವೇಶವೊಂದು ಕಾದಂಬರಿಯಲ್ಲಿ ಚಿತ್ರಿತವಾಗುತ್ತದೆ. ದುಗ್ಗಪ್ಪ ಶೆಟ್ಟರ ಮಗ ಶಂಭು ಒಂದು ಹೆಣ್ಣಿನ ಸಂಗ ಮಾಡಿ ಊರು ಬಿಟ್ಟು ಮುಂಬಯಿಗೆ ಹೋದ ವಿಷಯವು ತಟ್ಟಿ ಹೋಟೆಲಿನ ಗ್ರಾಹಕರಲ್ಲಿ ಆನಂದದಾಯಕವಾಗಿ ಚರ್ಚೆಗೊಳಪಟ್ಟಿತ್ತು. ಸುಂದರ ಜಲರಾಶಿ, ಪಟ್ಟೆಯ ಪೈರು, ತೆಂಗು ತಂಗು, ಗಿಡ ಗಂಟಿ, ನಾಗ, ಅಶ್ವತ್ಥ, ಪಂಜುರ್ಲಿ, ಭೂತ, ಒಕ್ಕಲುಗಳು, ಹಟ್ಟಿಯ ದನಗಳು, ಕೋಣಗಳು ಮುಂತಾದ ವಿಶೇಷತೆಗಳಲ್ಲಿ ತಟ್ಟಿ ಹೋಟೆಲನ್ನು ಒಂದಾಗಿ ಊರಿನ ಜನರು ಭಾವಿಸಿದ್ದರು. ಈಗಾಗಲೇ ನಿಂಜೂರರು ಹೋಟೆಲಿನ ಮೂಲಕ ಜಾಜು ಮಾಸ್ತರ, ಬಾಳಿಗ ಮಾಸ್ತರ, ವಾಸುದೇವಭಟ್ಟರು, ಸ್ಟೈಲಾ ಟೀಚರ್, ದಾಯ್ಜುನಾಯ್ಕ, ಪೆಸ್ತುನಾಯ್ಕ

ಮುಂತಾದವರನ್ನು ಹಳ್ಳಿಯ ಜನರಿಗೆ ತಿಳಿಯಪಡಿಸಿದ್ದಾರೆ. ಕಾದಂಬರಿಯನ್ನು ತೆಂಕೆನಿಡಿಯೂರಿನ ತಟ್ಟಿ ಹೋಟೆಲು ಗ್ರಾಹಕರಿಗೆ ಜಿಲ್ಲಾ ನಾಯ್ಕ, ದುಗ್ಗಪ್ಪ ಹೆಗ್ಡೆ, ದುಗ್ಗಪ್ಪ ಶೆಟ್ಟಿ, ಪಾಂಚಾ, ತನಿಯಾ ಮುಂತಾದವರು ತಮ್ಮ ಉತ್ಕಟ ಆಸೆಯನ್ನು ಇಮ್ಮಡಿಗೊಳಿಸಿಕೊಂಡ ಪ್ರಸಂಗಗಳು ತೆಂಕನಿಡಿಯೂರಿನ ಕುಳವಾರಿಗಳು ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಊರಿನ ಗಣ್ಯವ್ಯಕ್ತಿಗಳು ಜನ ಸಾಮಾನ್ಯರು, ಸದ್ಗುಣಗಳು, ದುರ್ಗುಣಗಳು ಇವುಗಳಿಗೆ ನ್ಯಾಯನಿರ್ಣಯ ಕೈಗೊಳ್ಳುವ ನೆಲೆಯಲ್ಲಿ ತಟ್ಟಿ ಹೋಟೆಲು ಕೇಂದ್ರವಾಗಿ ಊರಿನ ಜನರಿಗೆ ವರದಾನವಾದುದನ್ನು ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ.

ಹೀಗೆ ಮುಂಬಯಿ ಮಹಾನಗರದಲ್ಲಿದ್ದುಕೊಂಡು ತಮ್ಮ ಹುಟ್ಟೂರಿನ ಗ್ರಾಮೀಣ ಪರಿಸರದ ಬದುಕನ್ನು ಹೋಟೆಲು ಚಿತ್ರಣದ ಮೂಲಕ ಕಟ್ಟಿಕೊಡುವ ಕತೆ ವ್ಯಾಸರಾವ್ ನಿಂಜೂರ್ ಅವರಿಗೆ ಸಿದ್ಧಿಸಿದುದನ್ನು ಈ ಎರಡು ಕಾದಂಬರಿಗಳ ಸಂದರ್ಭದಲ್ಲಿ ಗಮನಿಸಬಹುದಾಗಿದೆ. ಹೋಟೆಲಿನ ಕಾರಣದಿಂದಾಗಿ ಗ್ರಾಮೀಣ ಪರಿಸರದ ಜನಜೀವನವು ಸ್ಥಿತ್ಯಂತರಗೊಳ್ಳುವುದನ್ನು ಲೇಖಕರು ಇಲ್ಲಿ ಕಲಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಅದರ ಜೊತೆಗೆ ದಕ್ಷಿಣ ಕನ್ನಡದ ವಿವಿಧ ಸಮುದಾಯದವರು ಗ್ರಾಮ ಬಿಟ್ಟು ಮುಂಬಯಿ ಸೇರಿ, ಬಳಿಕ ಹಳ್ಳಿಯ ತಮ್ಮ ಕುಟುಂಬವನ್ನು ಉತ್ತಮ ಸ್ಥಿತಿಯತ್ತ ತಂದದ್ದನ್ನು ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ.

ಮೊಗಳ್ಳಿ ಗಣೇಶ್ ಅವರ 'ಅನಾದಿ' ಕಾದಂಬರಿಯಲ್ಲಿ ಗ್ರಾಮೀಣ ಪರಿಸರವು ಹೋಟೆಲು ಮಾಲೀಕರ, ಗ್ರಾಹಕರ ಮನಸ್ಥಿತಿಯಿಂದಾಗಿ ಭಿನ್ನರೂಪ ಪಡೆದುಕೊಳ್ಳುವುದನ್ನು ಚಿತ್ರಿಸಲಾಗಿದೆ. ಹೋಟೆಲು ಮಾಲೀಕರ ಜೀವನಶೈಲಿ, ಕಾರ್ಮಿಕರ ಜೀವನಶೈಲಿ, ಗ್ರಾಹಕರ ಜೀವನಶೈಲಿಯ ಮೂಲಕ ಜನರಲ್ಲಾದ ಬದಲಾವಣೆಯನ್ನು ಕಾದಂಬರಿಯು ಬಿಂಬಿಸಿದೆ. ಊರಲ್ಲಿ ಈಗಾಗಲೇ ಇದ್ದ ಮೇಲು-ಕೀಳು, ಶ್ರೀಮಂತ-ಬಡವ, ಪ್ರಾದೇಶಿಕ ಭಾಷೆಯ ವೈಖರಿಯಲ್ಲಿ ದ್ವಂದ್ವಾತ್ಮಕತೆಯನ್ನು ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ. ಮೇಲ್ಜಾತಿಯವರು, ಕೆಳಜಾತಿಯವರ ಬಗೆಗೆ ಹೋಟೆಲಲ್ಲಿ ಗ್ರಾಹಕರಾಗಿ ಬಂದವರು ಅನುಸರಿಸುವುದು ಮತ್ತೆಮತ್ತೆ ಊರವರಲ್ಲಿ ಯೋಚಿಸುವಂತೆ ಮಾಡುತ್ತಿದ್ದರು. ಮೇಲುಕೇರಿಯಲ್ಲಿ ಮಲ್ಲಜ್ಜಮ್ಮನ ಹೋಟೆಲು ಮಡಿವಂತಿಕೆಯಿಂದ ನಡೆಯುತ್ತಿದ್ದದನ್ನು ಊರ ಜನರು ಮನವರಿಕೆ ಮಾಡಿಕೊಂಡಿದ್ದರು. ಊರಲ್ಲಿ ಜಾತಿಯ ಹಂಗಿಲ್ಲದೆ ನಡೆಯುವ ತಾತನ ಹೋಟೆಲು ಮಗದೊಂದು ಆಶಾಭಾವನೆಯನ್ನು ಮೂಡಿಸಿತ್ತು. ತಾತನ ಹೋಟೆಲಲ್ಲಿ ಚಾಕರಿ ಮಾಡುತ್ತಿದ್ದವನು ಉದ್ದೇಶಪೂರ್ವಕವಾಗಿ ಮಲ್ಲಜ್ಜಮ್ಮನ ಹೋಟೆಲಿಗೆ ಬಂದದ್ದಲ್ಲದೆ ಆಕೆಯನ್ನು ಕೆಣಕುವ ಸಂದರ್ಭವು ಊರವರಲ್ಲಿ ಆತಂಕ ಸೃಷ್ಟಿಸುವ ನೆಲೆಯಲ್ಲಿರುತ್ತಿತ್ತು. ಮಲ್ಲಜ್ಜಮ್ಮ ಗಂಡನಿಲ್ಲದ ಹೆಣ್ಣೊಬ್ಬಳು ಹೋಟೆಲಲ್ಲಿ ರುಚಿಯಾದ ತಿಂಡಿ ಮಾಡುವ ಕಲೆಯನ್ನು ಕಂಡು ಊರಿನ ಗ್ರಾಹಕರು ಆಕೆಯ ಆತ್ಮಸ್ಥೈರ್ಯವನ್ನು ಕೊಂಡಾಡುತ್ತಿದ್ದರು. ಮಲ್ಲಜ್ಜಮ್ಮನ ಹೋಟೆಲಲ್ಲಿ

ಉದಾರತೆಯಿಂದ ಊರಿನ ಇತರ ಗ್ರಾಹಕರಿಗೆ ತಿಂಡಿ ತಿನಿಸು ಕೊಟ್ಟು ಹಣ ಬಾರದಿದ್ದಾಗ ವಸೂಲಿ ಮಾಡುವ ಪ್ರಸಂಗವು ಜನರಲ್ಲಿ ನಗುವನ್ನುಂಟು ಮಾಡುತ್ತಿತ್ತು. ಮಲ್ಲಜ್ಜಮ್ಮನ ಹೋಟೆಲಲ್ಲಿಯ ದೋಸೆ ಚಟ್ನಿಯ ರುಚಿ ಕಂಡು ಊರವರ ನಾಲಗೆಗಳು ಕುಣಿಯುತ್ತಿದ್ದವು. ಕಾಯಿ, ಕಡ್ಲೆ, ಮೆಣಸಿನಕಾಯಿ, ಮೆಣಸು, ಬೆಳ್ಳುಳ್ಳಿ, ಪುದೀನ, ಕೊತ್ತಂಬರಿ ಸೊಪ್ಪುಗಳನ್ನೆಲ್ಲ ಹದವಾಗಿ ಬೆರೆಸಿ ರುಬ್ಬಿ ಇಡ್ಲಿ, ದೋಸೆಗೆ ಚಟ್ನಿಯ ಪೂರೈಕೆಯಂತೂ ಊರಿನ ಜನರ ಬಾಯಲ್ಲಿ ನೀರೂರುವಂತೆ ಮಾಡುತ್ತಿತ್ತು. ತಾತ ಚನ್ನಪಟ್ಟಣದ ಸಾಬರ ಸ್ನೇಹದಿಂದಾಗಿ ಜಿಲೇಬಿ, ಜಾಂಗೀರು, ಬಾದೂಷ ಮಾಡುವ ಕಲೆಯು ಊರಿನ ಗ್ರಾಹಕರು ಮಲ್ಲಜ್ಜಮ್ಮ ಹೋಟೆಲಿನ ಬಗ್ಗೆ ಉದಾಸೀನಗೊಳಿಸಿತ್ತು. ಸುತ್ತೇಳು ಊರುಗಳ ಸ್ವರೂಪವನ್ನು ರಸವತ್ತಾಗಿ ಹೇಳುವ ಅಮಾಸೆಯ ಕಥನಶೈಲಿಗೆ ಊರಿನವರು ಮೈಮರೆತು ಅಂಗಡಿಯಲ್ಲಿ ಕೇಳುತ್ತಿದ್ದರು. ಹೀಗೆ ಮೈಸೂರು ಪ್ರಾದೇಶಿಕ ಹಳ್ಳಿಯೊಂದರಲ್ಲಿ ಹೋಟೆಲು ಆರಂಭವಾದದ್ದರಿಂದ ಜನರ ಬದುಕು, ಆಚಾರ, ದೇಶಪ್ರೇಮದ ಸ್ವರೂಪವು ಬದಲಾವಣೆಯೊಂದಿಗೆ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ಈಗಾಗಲೇ ಗಮನಿಸಿದಂತೆ, ಆಧುನಿಕರಣ ಪ್ರಕ್ರಿಯೆಯ ಭಾಗವಾಗಿ ಪ್ರವರ್ತಿಸುವ ಹೋಟೆಲು ಗ್ರಾಮೀಣ ಪರಿಸರದ ಸ್ಥಿತಿಗತಿಗಳನ್ನು ಬದಲಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದರಂತೆ ಕನ್ನಡದ ಕಥನಸಾಹಿತ್ಯವು ಗ್ರಾಮೀಣ ಪರಿಸರದಲ್ಲಾಗುವ ಸ್ಥಿತ್ಯಂತರವನ್ನಾಗಲಿ, ಆಧುನೀಕರಣ ಪ್ರಕ್ರಿಯೆಯನ್ನಾಗಲಿ, ನಗರೀಕರಣ ಪ್ರಕ್ರಿಯೆಯನ್ನಾಗಲಿ ಚಿತ್ರಿಸುವ ಸಂದರ್ಭದಲ್ಲಿ ಅವುಗಳಿಗೆಲ್ಲ ಹಿನ್ನೆಲೆಯಾಗಿ ಹೋಟೆಲನ್ನು ಬಳಸಿಕೊಂಡಿರುವುದನ್ನು ನಾವು ಕಾಣುತ್ತೇವೆ. ಸಣ್ಣ ಕಥೆಗಿಂತಲೂ ಹೆಚ್ಚಾಗಿ ಕಾದಂಬರಿಗಳಲ್ಲಿ ಈ ಬಗೆಯ ಹೋಟೆಲಿನ ಚಿತ್ರಣಕ್ಕೆ ವಿಶೇಷ ಪ್ರಾತಿನಿಧ್ಯ ದೊರೆತಿರುವುದನ್ನು ಕಾಣಬಹುದಾಗಿದೆ.

ಅಧ್ಯಾಯ : ಐದು

# ಆಧುನಿಕ ನಗರಸಂಸ್ಕೃತಿ ಮತ್ತು ನಗರಪ್ರಜ್ಞೆಯ ಸಂಕೇತವಾಗಿ ಹೋಟೆಲುಗಳು

ಅಧ್ಯಾಯ : ಐದು

# ಆಧುನಿಕ ನಗರಸಂಸ್ಕೃತಿ ಮತ್ತು ನಗರಪ್ರಜ್ಞೆಯ ಸಂಕೇತವಾಗಿ ಹೋಟೆಲುಗಳು

ಗ್ರಾಮೀಣ ಪ್ರದೇಶದ ಹೋಟೆಲುಗಳಿಗೂ ನಗರಪ್ರದೇಶದ ಹೋಟೆಲುಗಳಿಗೂ ವಿನ್ಯಾಸ, ಸ್ವರೂಪ, ಲಕ್ಷಣ, ಸೌಲಭ್ಯ ಹಾಗೂ ನಿರ್ವಹಣೆಯಲ್ಲಿ ವ್ಯತ್ಯಾಸಗಳಿರುತ್ತವೆ. ಗ್ರಾಮೀಣ ಪ್ರದೇಶದ ಹೋಟೆಲುಗಳು ಕೇವಲ ಚಹಾ, ಊಟೋಪಚಾರಗಳಿಗೆ ಅಷ್ಟೇ ಸೀಮಿತವಾಗಿದ್ದರೆ ನಗರ ಪ್ರದೇಶದ ಹೋಟೆಲುಗಳು ವಸತಿ ಸೌಲಭ್ಯಗಳನ್ನು ಹೊಂದಿರುತ್ತವೆ. ಗ್ರಾಮೀಣ ಪರಿಸರದ ಹೋಟೆಲುಗಳಿಗೆ ಬಹುಮಟ್ಟಿಗೆ ಆಯಾಯ ಊರುಗಳವರೆ ಗಿರಾಕಿಗಳಾಗಿದ್ದರೆ, ನಗರ ಪ್ರದೇಶದ ಹೋಟೆಲುಗಳಿಗೆ ಪರ ಊರಿನವರು ಗಿರಾಕಿಗಳಾಗಿರುತ್ತಾರೆ. ನಗರಪ್ರದೇಶದ ಜೀವನಶೈಲಿಗೆ ಅನುಗುಣವಾಗಿ ಅಲ್ಲಿನ ಹೋಟೆಲುಗಳ ಸೌಲಭ್ಯಗಳು ವಿಶೇಷವಾಗಿರುತ್ತವೆ. ಗ್ರಾಮೀಣ ಪರಿಸರದ ಹೋಟೆಲುಗಳ ಮಾಲೀಕರು ಮತ್ತು ಗ್ರಾಹಕರು ಬಹುಮಟ್ಟಿಗೆ ಪರಸ್ಪರ ಪರಿಚಿತರಾಗಿದ್ದರೆ ನಗರಪ್ರದೇಶದ ಹೋಟೆಲುಗಳ ಮಾಲೀಕರು ಮತ್ತು ಗ್ರಾಹಕರು ಪರಸ್ಪರ ಅಪರಿಚಿತರಾಗಿರುವ ಸಂದರ್ಭಗಳೇ ಹೆಚ್ಚು. ಹೀಗೆ ವಿವಿಧ ಆಯಾಮಗಳಿಂದ ವಿಶಿಷ್ಟವಾಗಿರುವ ನಗರಪ್ರದೇಶದ ಹೋಟೆಲುಗಳು ಕನ್ನಡದ ಅನೇಕ ಸಣ್ಣಕಥೆ-ಕಾದಂಬರಿಗಳಲ್ಲಿ ಇಂತಹ ಬಹುಆಯಾಮಗಳೊಂದಿಗೆ ಚಿತ್ರಿತವಾಗಿವೆ.

ಕಥನಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡ ನಗರಪ್ರದೇಶದ ಹೋಟೆಲುಗಳ ವಿಶಿಷ್ಟ ಸಂಸ್ಕೃತಿಯು ನಗರಗಳಿಗೆ ಸಾಮಾನ್ಯವಾದ ಜೀವನಶೈಲಿಯು ಪ್ರತ್ಯೇಕವಾಗಿರುತ್ತದೆ. ಇದನ್ನು ನಗರಸಂಸ್ಕೃತಿಯೆಂದು ಕರೆಯಬಹುದಾಗಿದೆ. ಹೊಸ ಬಗೆಯ ತಿಂಡಿ-ತಿನಿಸುಗಳು, ಕೈಯ ಬದಲಾಗಿ ಚಮಚಗಳ ಮೂಲಕ ಊಟ-ತಿಂಡಿಗಳನ್ನು ಸೇವಿಸುವ ವಿಧಾನ, ಗುಂಪಾಗಿ ಮೇಜಿನ ಮುಂದೆ ಕುಳಿತು ಊಟ-ತಿಂಡಿ ಸೇವಿಸುವಾಗ ಪಾಲಿಸಬೇಕಾದ 'ಟೇಬಲ್ ಮ್ಯಾನರ್ಸ್', ಸ್ಟಾರ್ ಹೋಟೆಲುಗಳ ಕಲ್ಪನೆ, ಆಧುನಿಕ

ಮಾದರಿಯ ಲಾಡ್ಜಿಂಗ್ ಸೌಲಭ್ಯಗಳು ಮುಂತಾದವುಗಳೆಲ್ಲಾ ಹೋಟೆಲುಗಳಲ್ಲಿ ನಗರಸಂಸ್ಕೃತಿಯ ಭಾಗಗಳೆನಿಸುತ್ತವೆ. ಹೋಟೆಲುಗಳ ಹೆಸರುಗಳು, ಅದೇ ರೀತಿ ಹೋಟೆಲುಗಳಲ್ಲಿ ಬಳಸುವ ಮಾತಿನ ಪರಿಭಾಷೆ ಇತ್ಯಾದಿಗಳಲ್ಲೂ ನಗರಸಂಸ್ಕೃತಿಯ ಅಭಿವ್ಯಕ್ತಿಯನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ ಗ್ರಾಮೀಣ ಪ್ರದೇಶದ ಹೋಟೆಲುಗಳು, ಕನ್ನಡದ ಸಣ್ಣಕಥೆ-ಕಾದಂಬರಿಗಳೇ ಪ್ರತಿಪಾದಿಸುವಂತೆ 'ಶ್ರೀ ಚಾಮುಂಡೇಶ್ವರಿ ಭವನ', 'ರಾಘವೇಂದ್ರ ಭವನ', 'ಶ್ರೀ ಕೆಂಡಗಣೇಶ್ವರ ಪ್ರಸನ್ನ', 'ಖಾತ್ರಾಳ ರತ್ನಿಯ ಚಾದಂಗಡಿ', 'ವೀರಶೈವರ ಫಲಾಹಾರ ಮಂದಿರ', 'ಶೀನಣ್ಣನ ಟೀ ಅಂಗಡಿ', 'ಗೌರಿ ಮೆಸ್ಸು', 'ಬಸಲಿಂಗವ್ವನ ಚಾದಂಗಡಿ', 'ಮಲ್ಲಜ್ಜಮ್ಮನ ಹೋಟೆಲು', 'ತಾತನ ಹೋಟ್ಲು', 'ಹುಸೇನವ್ವನ ಹೋಟೆಲು', 'ಶೆಟ್ಟಿ ಹೋಟೆಲು', 'ಶಿವಯ್ಯನ ಹೋಟ್ಲು', 'ಕಮಲಪುರದ ಹೋಟ್ಲು', 'ಗಣಪ್ಪಯ್ಯನ ಹೋಟೆಲು', 'ಬೋಂಡಾ ಸಿದ್ದಪ್ಪನ ಚಾದಂಗಡಿ', 'ಗಂಗವ್ವನ ಹೋಟ್ಲು', 'ಮಾಲಿಂಗನ ಚಾದಂಗಡಿ' ಇತ್ಯಾದಿ ಹೆಸರುಗಳನ್ನು ಹೊಂದಿದ್ದರೆ ನಗರಪ್ರದೇಶದ ಹೋಟೆಲುಗಳು 'ಇರಾಣಿ ರೆಸ್ಟೋರೆಂಟ್', 'ಹೋಟೆಲ ಬ್ಲೂ', 'ಉಡುಪಿ ಶ್ರೀಕೃಷ್ಣ ವಿಲಾಸ', 'ಬ್ರಾಹ್ಮಣರ ಕಾಫಿ ಕ್ಲಬ್', 'ವೀರಶೈವ ಕಾಫಿ ಫಳಾರ ಮತ್ತು ಚಾ-ಕಾಫಿ ಹೋಟ್ಲು', 'ರಾಂ ಬರೋಸಾ ಹಿಂದೂ ಹೋಟೆಲು', 'ಪುರೋಹಿತ ಹೋಟೆಲು', 'ಕಾಮತ್ ಹೋಟೆಲು', 'ಶ್ರೀಕೃಷ್ಣ ಭವನ', 'ಆನಂದ ಭವನ', 'ಖೇಮರಾಜ ಭವನ', 'ಯದುಗಿರಿ ಭವನ', 'ತಾಂಜ ಉಪಾಹಾರ ಗೃಹ', 'ಉಡುಪಿ ರೆಸ್ಟೋರೆಂಟ್', 'ಕಾಂಟಿನೆಂಟಲ್ ಬಾರ್', 'ಸನ್ಮಾನ ರೆಸ್ಟೋರೆಂಟ್', 'ಕೃಷ್ಣ ವಿಲಾಸ, ಉಡುಪಿ ಶ್ರೀಕೃಷ್ಣ ವಿಲಾಸ ಕಾಫಿ, ಕ್ಲಬ್ ಮತ್ತು ಊಟದ ಹೋಟೆಲು', 'ಪವಿತ್ರ ಹೋಟೆಲು', 'ದರ್ಬಾರ ಹೋಟೆಲ', 'ಪವಿತ್ರ ಬಾರ್ ಅಂಡ್ ರೆಸ್ಟೋರೆಂಟ್', 'ಪಾರಿಜಾತ ಹೋಟೆಲು', 'ಮರ್‌ಮಿಡ್ ಬಾರ್', 'ಪಾರಿಜಾತ ಬಾರ್ ಅಂಡ್ ರೆಸ್ಟೋರೆಂಟ್', 'ಸಾಂತೇರು ಗ್ರೂಪ್ ಆಫ್ ಹೋಟೆಲ್ಸ್', 'ಲೆಜಿಡ್ ಬಾರ್', 'ವಿಹಾರ ಲಂಚ್ ಹೊಂ', 'ಅಯ್ಯಂಗಾರಿ ಹೋಟೆಲು', 'ಮೂರ್ತಿ ಚುರುಮುರಿ ಹೋಟೆಲು' ಇತ್ಯಾದಿ ಹೆಸರುಗಳನ್ನು ಹೊಂದಿರುತ್ತವೆ. ಕನ್ನಡದ ಸಣ್ಣಕಥೆ-ಕಾದಂಬರಿಗಳಲ್ಲಿ ಚಿತ್ರತವಾದ ನಗರಪ್ರದೇಶದ ಹೋಟೆಲುಗಳ ಮಾಲೀಕರು, ಕಾರ್ಮಿಕರು ಮತ್ತು ಗ್ರಾಹಕರು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಿಂದ ಬಂದವರಾಗಿರುತ್ತಾರೆ. ಹಾಗಾಗಿ ಅನೇಕ ಸಂದರ್ಭಗಳಲ್ಲಿ ನಗರವಾಸಿಗಳಾದ ಅವರಿಗೆ ತಮ್ಮ ತಾಯ್ನಾಡಿನ ನೆನಪು ಕಾಡುತ್ತಿರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿನ ಸಹಬಾಳ್ವೆ-ಸಮೂಹ ಜೀವನಕ್ಕೂ ನಗರಪ್ರದೇಶಗಳಲ್ಲಿನ ವ್ಯಕ್ತಿಪ್ರಜ್ಞೆ ಹಾಗೂ ನಿಷ್ಕಾಳಜಿತನಗಳಿಗೂ ಆಗಾಗ ಸಂಘರ್ಷ ಏರ್ಪಡುತ್ತದೆ. ನಗರಪ್ರದೇಶದ ಒತ್ತಡದ ಬದುಕಿಗೂ ಗ್ರಾಮಜೀವನದ ನಿರಾಳ ಬದುಕಿಗೂ ನಡುವಿನ ಅಂತರವು ಆಗಾಗ ನಗರವಾಸಿಗಳ ಸ್ಮೃತಿಪಟಲಗಳಲ್ಲಿ ಹಾದುಹೋಗುತ್ತದೆ. ಹೋಟೆಲಿನ ಮಾಲೀಕರು ಕಾರ್ಮಿಕ ಅಥವಾ ಗ್ರಾಹಕರ ಪಾತ್ರಗಳಾಗಿರುವ ಸಣ್ಣಕಥೆ-ಕಾದಂಬರಿಗಳಲ್ಲಿ ಅಭಿವ್ಯಕ್ತಿಗೊಂಡ ಸ್ಮೃತಿ ಅನುಭವಗಳನ್ನು ನಗರಪ್ರಜ್ಞೆಯೆಂದು ಪರಿಗಣಿಸಬಹುದು. ಹೋಟೆಲಿನ ಚಿತ್ರಣವುಳ್ಳ ಕನ್ನಡದ ಕೇಲವು

ಸಣ್ಣಕಥೆ-ಕಾದಂಬರಿಗಳನ್ನು ಪರಿಶೀಲಿಸುವುದರ ಮೂಲಕ ಅಲ್ಲಿ ಅಭಿವ್ಯಕ್ತಿಗೊಂಡ ನಗರಸಂಸ್ಕೃತಿ ಮತ್ತು ನಗರಪ್ರಜ್ಞೆಯ ಸ್ವರೂಪವನ್ನು ಕಂಡುಕೊಳ್ಳಬಹುದಾಗಿದೆ.

ಪಂಜೆ ಮಂಗೇಶರಾಯರ 'ಕಮಲಪುರದ ಹೋಟ್ಲಿನಲ್ಲಿ' ಎಂಬ ಕಥೆಯು ಗ್ರಾಮೀಣ ಪರಿಸರದ ಕಥಾವಸ್ತುವನ್ನು ಒಳಗೊಂಡಿದೆ. ಕಥೆಯಲ್ಲಿ ಚಿತ್ರಿತವಾಗಿರುವ ನಗರಸಂಸ್ಕೃತಿ ಮತ್ತು ನಗರಪ್ರಜ್ಞೆಯ ಸಂಕೇತವಾಗಿರುವ ಹೋಟೆಲಿನ ಹೊರವಲಯದಲ್ಲಿ ನಡೆಯುವ ಕೆಲವೊಂದು ಸನ್ನಿವೇಶಗಳು ಇಲ್ಲಿನ ನಗರಪ್ರಜ್ಞೆಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಅದೇನೆಂದರೆ ಘಟ್ಟದ ಮೇಲಿನ ಕಾಫಿಯ ಮೂಟೆಗಳನ್ನು ಸಮುದ್ರದಲ್ಲಿ ನಿಂತಿರುವ ಹಡಗುಗಳಿಗೆ ಆಳುಗಳು ಸಾಗಿಸುವ ಚಿತ್ರ, ರಾಶಿ ಹಾಕಿದ ಅಕ್ಕಿಯ ಮೂಟೆಗಳನ್ನು ಎಣಿಸಿ ಎಣಿಸಿ ವರ್ತಕನೊಬ್ಬ ತನ್ನ ಆಳುಗಳನ್ನು ಕರೆಯುತ್ತಿರುವುದು. ಹಲವು ಮಂದಿ ವರ್ತಕರು ಮುಂಬಯಿನಿಂದ ಬಂದ ಜೀನ್ಸ್ ಬಟ್ಟೆಗಳನ್ನು ಹಡಗಿನಿಂದ ಇಳಿಸುತ್ತಿರುವುದು, ಗೃಹಸ್ಥರು ಗುಂಪು ಕಟ್ಟಿಕೊಂಡು ವಾಯುವಿಹಾರಕ್ಕೆ ಬರುವುದು, ಸರಕಾರದ ವಿವಿಧ ಇಲಾಖಾ ಗುಮಾಸ್ತರು ವಾಯುವಿಹಾರಕ್ಕೆ ಬರುವುದು, ಇವರೆಲ್ಲಾ ಹೋಟೆಲಿನಲ್ಲಿ ತಿಂಡಿ ತಿಂದು ತಮ್ಮ ತಮ್ಮ ಚಟುವಟಿಕೆಗಳಿಗೆ ವಿದಾಯ ಹೇಳಿ ತೆರಳುವುದು ಇವೇ ಮೊದಲಾದ ಸನ್ನಿವೇಶಗಳು ಕಥೆಯಲ್ಲಿ ನಗರಸಂಸ್ಕೃತಿಯ ದ್ಯೋತಕವಾಗಿವೆ.

ಯು.ಆರ್. ಅನಂತಮೂರ್ತಿಯವರು 'ಖೋಜರಾಜ' ಕಥೆಯಲ್ಲಿ ನಗರಪ್ರದೇಶದ ಹೋಟೆಲಿನ ಸನ್ನಿವೇಶವನ್ನು ಚಿತ್ರಿಸಿದ್ದಾರೆ. ಪ್ರೇಮಧಾರಿತ ಮಾತುಗಳನ್ನು ರಾಜಣ್ಣ ಮತ್ತು ಅರುಂಧತಿ ಇಬ್ಬರೂ ನಗರದ ಹೋಟೆಲಿನಲ್ಲಿ ಇತರ ಗ್ರಾಹಕರ ಪರಿವಿಲ್ಲದೇ ಹಾಡುತ್ತಿದ್ದರು. ಗಂಡಸಿನ ಕಾಮುಕ ಮನಸ್ಸನ್ನು ಹಾಗೂ ಹೆಣ್ಣು ಹೆದರಿಕೆಯಿಂದ ನಿರಾಕರಿಸುವ ಸನ್ನಿವೇಶವು ಬೆಂಗಳೂರಿನ ಹೋಟೆಲೊಂದರಲ್ಲಿ ಏರ್ಪಡುತ್ತದೆ. ಈ ಕಥೆಯು ಹೋಟೆಲಿನ ಮೂಲಕ ನಗರ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತದೆ. 'ಕ್ಲಿಪ್ ಜಾಯಿಂಟ್' ನಗರಪ್ರದೇಶದ ಹೋಟೆಲಿನ ಚಿತ್ರಣವುಳ್ಳ ಅನಂತಮೂರ್ತಿಯವರ ಮತ್ತೊಂದು ಕಥೆಯಾಗಿದೆ. 'ಮರ್‌ಮೆಡ್ ಬಾರ್' ಎನ್ನುವ ಹೆಸರೇ ನಗರಕೇಂದ್ರಿತ ಕಲ್ಪನೆಯನ್ನು ತರುತ್ತದೆ. ಕೇಶವ ತನ್ನ ತಾತ್ವಿಕವಾದ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಬಾರೊಂದು ನೆರವಾದದ್ದು, ಈ ಸನ್ನಿವೇಶದ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. "ತನ್ನ ಜೀವನದ ಪ್ರತಿಕ್ಷಣವನ್ನು ಡೈರಿಯಲ್ಲಿ ಮುಂಚಿನಂತೆ ಬರೆದಿಟ್ಟಂತೆ ವಿವೇಚಿಸಿ ಜೀವಿಸುತ್ತಾನೆ. ಸಭ್ಯನ ಮುಖ್ಯ ಗುರಿ. ತನ್ನಿಂದ ಪರರಿಗೆ ನೋವಾಗಬಾರದು, ಅನ್ಯಾಯವಾಗಬಾರದು, ಹಂಗಿನಲ್ಲಿ ಇರುವುದು ಬೇಡ, ಇಡುವುದು ಬೇಡ, ಮೊದಲಿನ ಬೀಯರನ್ನು ನಾನು ಕೊಂಡು ತಂದರೆ ಎರಡನೆಯದನ್ನು ಸ್ಟೂ ಆರ್ಟನ ಕೊಳ್ಳುತ್ತಿದ್ದ. ಊಟಕ್ಕೆ ಕರೆದರೆ ತಿರುಗಿ ಕರೆಯುತ್ತಿದ್ದ"(ಅನಂತಮೂರ್ತಿ ಯು.ಆರ್., ೨೦೦೭, ಪು.೨೮೫). ಹೀಗೆ ಸ್ಟೂ ಆರ್ಟನ ಉದಾತ್ತವಾದ ವ್ಯಕ್ತಿತ್ವವನ್ನು ಕೇಶವ ಗುಣಗಾನಕ್ಕೆ ನಗರದ ಬಾರೊಂದು ಅವಕಾಶ ಕಲ್ಪಿಸುತ್ತದೆ. ಇದೇ ಲೇಖಕರ 'ಸೂರ್ಯನ ಕುದುರೆ' ಕಥೆಯಲ್ಲಿ ನಿರೂಪಕರೇ ಪಾತ್ರವಾಗಿ

ಮಾತನಾಡಲು ನಗರದ ಬಾರೊಂದು ಸ್ಥಳಾವಕಾಶ ಕಲ್ಪಿಸಿಕೊಡುತ್ತದೆ. ವೈನಿನ ರುಚಿಯನ್ನು ಸವಿಯುತ್ತಾ ನಿರೂಪಕರು ಅಮೆರಿಕದ ನಗರವೊಂದರ ಬಾರ್‌ನಲ್ಲಿ ಚೇನಾದ ವಾತಾವರಣ ಸೃಷ್ಟಿಗೊಂಡಿದ್ದನ್ನು ಶ್ರೀನಿವಾಸನಿಗೆ ಕಥೆ ಕಟ್ಟಿ ಹೇಳುವ ಸನ್ನಿವೇಶವು ಈ ಕಥೆಯಲ್ಲಿ ಮೂಡಿಬಂದಿದೆ.

ಚದುರಂಗರು 'ತುಳಸಿ' ಕಥೆಯಲ್ಲಿ ನಗರವನ್ನು ಪ್ರತಿನಿಧಿಸುವ 'ಕೃಷ್ಣಭವನ' ಎಂಬ ಹೆಸರಿನ ಹೋಟೆಲನ್ನು ಚಿತ್ರಿಸಿದ್ದಾರೆ. ಮುಸ್ಲಿಂ ಬಾಂಧವರಿಬ್ಬರು ಮುನಿಸಿಕೊಂಡು ಬಂದು ಕೃಷ್ಣಭವನದಲ್ಲಿ ತಿಂಡಿ-ತಿನಿಸು ಸೇವಿಸಿ ಆಪ್ತರಾಗುವ ಸನ್ನಿವೇಶವೊಂದು ಈ ಕಥೆಯಲ್ಲಿದೆ. ಇದೇ ಕಥೆಯಲ್ಲಿ ಬುಡನಸಾಬಿಯು ತನ್ನ ವ್ಯವಹಾರದ ಖುಷಿ ಪಡುವುದಕ್ಕೆ 'ದರ್ಬಾರ ಹೋಟೆಲು' ಒದಗಿಸಿದ ಆಧುನಿಕ ಸೌಲಭ್ಯಗಳು ನಗರಸಂಸ್ಕೃತಿಗೆ ಕಾರಣೀಭೂತವಾಗುತ್ತವೆ. ಇದೇ ಲೇಖಕರ 'ಶವದ ಮನೆ' ಕಥೆಯಲ್ಲಿ ನಗರ ಹೋಟೆಲೊಂದರ ಮಾಣಿ ತಿಂಡಿ-ತಿನಿಸುಗಳನ್ನು ಹೆಸರಿಸುವ ನಗರ ಭಾಷಾಶೈಲಿಯು ವೆಂಕಟರಮಣಪ್ಪ ಮತ್ತು ನಾರಾಯಣರನ್ನು ಖುಷಿಪಡಿಸುತ್ತದೆ. 'ಕಾಳಿ' ಕಥೆಯಲ್ಲಿಯು 'ಆನಂದ ಭವನ'ದ ಮಸಾಲೆದೋಸೆ ಸಿಂಗ್ರಯ್ಯನ ಮನಸೆಳೆದಿತ್ತು. ಮಡದಿ ಹಸಿವನ್ನು ನಿಯಂತ್ರಿಸುವ ಹಾಗೂ ಮಗಳಾದ ಕಾಳಿ ಹಸಿವಿಗೆ ತತ್ತರಿಸುವ ಸ್ಥಿತಿಯನ್ನು ಸಿಂಗ್ರಯ್ಯ ಮೆಲಕು ಹಾಕಲು ನಗರ ಹೋಟೆಲೊಂದು ವೇದಿಕೆಯಾಗುತ್ತದೆ. 'ನಾಲ್ಕು ಮೊಳ ಭೂಮಿ' ಕಥೆಯಲ್ಲಿ ಕೋರ್ಟಿನ ಸಮಯದಲ್ಲಿನ ಲಾಯರನ ಹಸಿವನ್ನು ನಗರದ ಹೋಟೆಲು ಇಂಗಿಸುತ್ತದೆ.

ವ್ಯಾಸರಾಯ ಬಲ್ಲಾಳರು 'ಕಾಡುಮಲ್ಲಿಗೆ' ಕಥೆಯಲ್ಲಿ ಮುಂಬಯಿ ನಗರ ಹೋಟೆಲೊಂದರ ಮಾಣಿಯು ಕೆಲಸ ನಿರ್ವಹಿಸುವ ಬಗೆಯನ್ನು ಚಿತ್ರಿಸಿದ್ದಾರೆ. ನಗರದ ಹೋಟೆಲಲ್ಲಿ ಉಪಾಹಾರಗಳನ್ನು ವಿಭಿನ್ನ ರೀತಿಯ ಹೆಸರುಗಳಿಂದ ಕರೆಯುವ ಸನ್ನಿವೇಶ, ಹೋಟೆಲಲ್ಲಿ ಸರಾಗವಾಗಿ ತಿಂಡಿ ಪೂರೈಸುವ ಹುಡುಗರ ಚಾಕಚಕ್ಯತೆ, ನಗರಪ್ರದೇಶದ ಹೋಟೆಲುಗಳಲ್ಲಿ ಲಭ್ಯವಿರುವ ಕಡಕ್ ಮಸಾಲೆದೋಸೆ, ಇಡ್ಲಿ, ದೋಸೆ ಇದಕ್ಕೆಂದೇ ತಯಾರಿಸಿದ ಸಾಂಬಾರ್, ಬಟಾಟೆ ವಡೆ, ತಿಂಡಿ-ತಿನಿಸುಗಳನ್ನು ಕೂಗುವ ಮಾಣಿಯ ಭಾಷಾ ಕೌಶಲ್ಯ ಮತ್ತು ಕಾರ್ಯವೈಖರಿ ಇವುಗಳನ್ನು ಕಥೆಯು ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ. ಮೇಜು, ಗಾಜಿನ ಗ್ಲಾಸು, ಕ್ಯಾಶ್ ಕೌಂಟರ್, ಟೇಬಲಿಗೊಬ್ಬರಂತೆ ವ್ಯವಸ್ಥಾಪಕರ ನಿಯೋಜನೆ, ತಿಂಡಿ ತಯಾರಕರು. ಮುಂಬಯಿ ನಗರದ ಹೋಟೆಲು ಹೊಂದಿದ ವ್ಯವಸ್ಥೆಯನ್ನು ಕಥೆಯು ಮನೋಜ್ಞವಾಗಿ ಚಿತ್ರಿಸಿದೆ. ದೋ ಇಡ್ಲಿ ಸಾಂಬರ್, ದೋ ಬಟಾಟೆ ವಡೆಯನ್ನು ಮಸಾಲಾ ಬನಾವೋ ಮಸಾಲಾ, ಏನು ಕೊಡಲಿ ಸಾರ್, ಇನ್ನೇನು ಬೇಕು ಸಾರ್, ಕ್ಯಾ ದೇನಾ ಸಾಬ್, ಹೀಗೆ ಗ್ರಾಮೀಣ ಪ್ರದೇಶಕ್ಕಿಂತ ಭಿನ್ನವಾಗಿ ಬಳಸುವ ಭಾಷಾಶೈಲಿ ಮತ್ತು ಹೊಸ ಬಗೆಯ ತಿಂಡಿ-ತಿನಿಸುಗಳ ಪರಿಚಯವನ್ನು 'ಕಾಡುಮಲ್ಲಿಗೆ' ಕಥೆಯು ಮಾಡಿಕೊಡುತ್ತದೆ. ಮಾಲೀಕರು, ಕಾರ್ಮಿಕರು ಹಾಗೂ ಗ್ರಾಹಕರ ನಡುವೆ ಏರ್ಪಡುವ ಸಂಬಂಧಗಳು ಹೋಟೆಲಲ್ಲಿ ಅಗತ್ಯಕ್ಕೆ ತಕ್ಕಂತೆ ಬೆಳೆದಿರುತ್ತವೆ. ಗ್ರಾಹಕರು ತಿಂಡಿ ತಿಂದಾದ ಮೇಲೆ

ಬಿಲ್ ತೆಗೆದುಕೊಂಡು ಹಣ ಸಂದಾಯ ಮಾಡುವ ರೀತಿಯನ್ನು ನಗರದ ಹೋಟೆಲು ಸಂಸ್ಕೃತಿ ಎಂಬುದು ಈ ಕಥೆಯು ಖಚಿತಪಡಿಸಿದೆ.

ಇದೇ ಲೇಖಕರ 'ಎರಡು ಧ್ರುವ' ಕಥೆಯಲ್ಲಿ ಮುಂಬಯಿ ನಗರ ಹೋಟೆಲೊಂದರಲ್ಲಿ ಮಾಧವನು ವಾಸ್ತವ್ಯ ಹೂಡಿದ್ದ ಸನ್ನಿವೇಶವನ್ನು ಚಿತ್ರಿಸಿರುತ್ತಾರೆ. ಇದೇ ಸಂದರ್ಭದಲ್ಲಿ ನಗರಪ್ರದೇಶದ ಹೋಟೆಲಿನ ಸ್ವರೂಪವನ್ನು ಕಟ್ಟಿಕೊಡುತ್ತಾರೆ. ಹೋಟೆಲಲ್ಲಿ ವಿವಿಧ ರಾಜ್ಯಗಳ ಗ್ರಾಹಕರು ಸಂಗೀತ, ಇಸ್ಪೀಟಾಟದಂತಹ ಮನೋರಂಜನೆಗಳಿಗೆ ಇಂಬುಕೊಟ್ಟು ಸಂಭ್ರಮಿಸುತ್ತಿದ್ದರು. ಹೋಟೆಲಿನಲ್ಲಿದ್ದ ಮಾಧವನಿಗೆ ಇವುಗಳಿಂದ ಮನಸ್ಸಿನಲ್ಲಿ ಕಿರಿಕಿರಿ ಉಂಟಾಗುತ್ತದೆ. ಇವೆಲ್ಲದರ ನಡುವೆ ಮಾಧವನು ಅಗಲಿದ ಮಡದಿ ರಂಜಿತಳ ಕಲ್ಪನೆಯಲ್ಲಿ ಯಾತನೆಯನ್ನು ಅನುಭವಿಸುತ್ತಿದ್ದನು. ಇಂತಹ ಸಂಕಷ್ಟಗಳಿದ್ದರೂ ಮಾಧವ ಮತ್ತೊಬ್ಬ ಪ್ರೇಯಸಿ ಪಲ್ಲವಿ ಜೊತೆಗೂಡಿ ಹೋಟೆಲೊಂದರಲ್ಲಿ 'ಕೋಲಾ' ಸೇವಿಸುವುದರೊಂದಿಗೆ ಕಹಿ ನೆನಪುಗಳಿಗೆ ತೆರೆ ಬೀಳಿಸುತ್ತಾನೆ. ಮತ್ತೆ ಮಾಧವ ವಾಸ್ತವ್ಯ ಹೂಡಿದ್ದ ಹೋಟೆಲಿಗೆ ಬಂದಾಗ ಮದ್ರಾಸ್ ಕಲಾವಿದನೊಬ್ಬ ಪಕ್ಕದ ಕೋಣೆಯಲ್ಲಿ ಸಂಗೀತ ಬೈಟಕ್ ಆರಂಭಿಸುತ್ತಾನೆ. ನಗರಸಂಸ್ಕೃತಿಯ ಮತ್ತೊಂದು ಸಂಕೇತವಾದ ಇಸ್ಪೀಟಾಟದ ಸನ್ನಿವೇಶವು ಹೋಟೆಲಲ್ಲಿ ರಂಗೇರಿ ನಡೆಯುತ್ತಿತ್ತು. ಇದನ್ನು ಲೆಕ್ಕಿಸದೇ ಹತ್ತು ಗಂಟೆಗಳ ಸುಖನಿದ್ರೆಯಿಂದ ನಗರದಲ್ಲಿ ಅಲೆದಾಡಿದ ಆಯಾಸವನ್ನು ಆತ ತಿಳಿಗೊಳಿಸಿಕೊಳ್ಳುತ್ತಾನೆ. ಹೀಗೆ 'ಎರಡು ಧ್ರುವ' ಕಥೆಯು ಮುಂಬಯಿ ಮಹಾನಗರದ ಹೋಟೆಲೊಂದರಲ್ಲಿ ಮಾಧವನಿಗಾಗುವ ಅನುಭವಗಳನ್ನು ಚಿತ್ರಿಸುವುದರ ಮೂಲಕ ನಗರಪ್ರಜ್ಞೆಯನ್ನು ಅಭಿವ್ಯಕ್ತಿಪಡಿಸುತ್ತದೆ.

ಇದೇ ಲೇಖಕರ 'ಸಂಪಿಗೆ ಹೂವು' ಕಥೆಯಲಿ ಹೋಟೆಲಿನ ಚಿತ್ರಣದ ಮೂಲಕ ನಗರಪ್ರಜ್ಞೆಯನ್ನು ಅಭಿವ್ಯಕ್ತಪಡಿಸಲಾಗಿದೆ. ಕಥೆಯಲ್ಲಿ ಪ್ರಸ್ತಾಪವಾಗಿರುವ 'ತಾಂಜ ಉಪಾಹಾರ ಗೃಹ'ವು ನಗರಸಂಸ್ಕೃತಿಯ ಪ್ರತೀಕವಾಗಿ ಕಂಡುಬರುತ್ತದೆ. ಕಥೆಯಲ್ಲಿನ ನಿರ್ದಿಷ್ಟ ಸನ್ನಿವೇಶ ಮತ್ತು ಪ್ರಭಾಕರ-ಯಶೋಧೆಯರ ನಡುವೆ ನಡೆಯುವ ಮಾತುಕತೆಯ ಮೂಲಕ ಇದನ್ನು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. "ಸಿನೆಮಾ ಆಯಿತು ಅತ್ತಿಗೆ ಕಾಫಿ ಬೇಕೇನು? ತಾಂಜ ಹತ್ತಿರದಲ್ಲೇ ಇದೆ. ನಿನಗೇನಾದರೂ ಹುಚ್ಚು ಗಿಚ್ಚು ಹಿಡಿದಿದೆಯಾ ಪ್ರಭಾಕರ, ಹಾಗೇ ನನಗೆ ಕಾಫಿ ಕುಡಿಯಲೇಬೇಕೆಂದಿದ್ದರೆ ಈಗ ನಾವು ಮನೆಗೆ ಹೋಗುವುದಿಲ್ಲವೇ? ಮನೆಯ ಕಾಫಿ ನಿತ್ಯ ಇದ್ದದ್ದೆ ಅತ್ತಿಗೆ, ಪರೀಕ್ಷೆ ಪಾಸಾದ ಸಂಭ್ರಮಕ್ಕೆ ಹೊರಗಿನ ಕಾಫಿಯ ರುಚಿ ನೋಡೋಣ ಎಂದು ಹೇಳಿದ ಅಷ್ಟೆ. "ಪ್ರಭಾಕರ ಮತ್ತು ಯಶೋಧೆ ಪ್ರಧಾನ ಇಚ್ಛೆಯನ್ನು ಮಾತಿನಲ್ಲಿ ವಿರೋಧಿಸಿದರೂ 'ತಾಂಜ ಉಪಾಹಾರ ಗೃಹ'ಕ್ಕೆ ಹೋಗದೆ ಉಳಿಯಲಿಲ್ಲ. ಪ್ರಭಾ ಕಾಫಿ ಎಂದಾಗ ತಾನು ಮಜ್ಜಿಗೆ ಎಂದಿದ್ದಳು. ಕಾಫಿ ಕುಡಿಯುತ್ತಿದ್ದಂತೆಯೇ ಪ್ರಭಾಕರ ಕೇಳಿದ್ದ ಸಂಪಿಗೆ ಹೂವು ಮುಡಿದುಕೊಳ್ಳಬಾರದೆ? ಅತ್ತಿಗೆ ಇಷ್ಟು ಕನ್ಸ್‌ರ್ವೆಟಿವ್ ಆದರೆ ಹೇಗೆ? ಯಶೋಧೆಗೆ ಆ ಪ್ರಶ್ನೆಗಿಂತಲೂ ಆ ಮಾತು ಆಡಿದ್ದೆ

ಪ್ರಭಾಕರನ ಧೈರ್ಯ ಹೆಚ್ಚು ಆಶ್ಚರ್ಯವನ್ನುಂಟು ಮಾಡಿತ್ತು. ಎರಡು ವರ್ಷಕಾಲ ಗಂಡನೊಡನೆ ಹೂಡಿದ್ದ ಸಂಸಾರದ ಸಂಭ್ರಮದ ದಿನಗಳಲ್ಲಿ ಪ್ರಭಾ ಇನ್ನೂ 'ಮಗು' ಅವರು ಹೋದ ಮೇಲೆ ಪ್ರಭಾ ತನ್ನ ಆಶ್ರಯದ ವಿದ್ಯಾರ್ಥಿಯಾಗಿ ಮೂರು ವರ್ಷ ಕಳೆದಾಗಲೂ ಆತ ಮಗುವೇ. ಪ್ರಭಾನೊಡನೆ ಇರಿಸಿದ್ದ ಸಲುಗೆ ಅದೇ ರೀತಿಯದು"(ವ್ಯಾಸರಾಯ ಬಲ್ಲಾಳ, ೨೦೦೨, ಪು.೧೭೬-೧೭೭). ಹೋಟೆಲಿನಲ್ಲಿ ಚಹಾ-ಮಜ್ಜಿಗೆ ಕುಡಿಯುತ್ತಾ ಪ್ರಭಾಕರ ಮತ್ತು ಯಶೋಧೆ ನಡೆಸುವ ಮಾತುಕತೆಯಲ್ಲಿ ಸಂಭ್ರಮ, ಆತಂಕ, ಗತಿಸಿದ ಕಾಲದ ಮಹಿಮೆ, ಕೌಟುಂಬಿಕ ಜೀವನದ ಸ್ವಗತಗಳು ಇವುಗಳೆಲ್ಲಾ ಬಿಚ್ಚಿಕೊಳ್ಳುತ್ತವೆ. ಅವರ ಮನಸ್ಸಿನ ಭಾವನೆಗಳು ಪ್ರಕಟಗೊಳ್ಳುವುದಕ್ಕೆ ಹೋಟೆಲು ವೇದಿಕೆ ಕಲ್ಪಿಸುತ್ತದೆ. ಪ್ರಭಾಕರ ಮತ್ತು ಯಶೋಧೆಯರ ನಡುವಿನ ಮಾತುಕತೆಗಳು ಹೀಗೆ ಮುಂದುವರಿಯುತ್ತವೆ. "ಸಂಪಿಗೆ ಹೂವು ಮುಡಿದು ಯಾವ ಸೌಭಾಗ್ಯ ಸಿಗಬೇಕಾಗಿದೆ ಪ್ರಭಾ. ನಮ್ಮ ಸೌಭಾಗ್ಯವನ್ನು ನಾವೇ ರೂಪಿಸಿಕೊಳ್ಳುವವರು. ಅತ್ತಿಗೆ ಸಂಪ್ರದಾಯವನ್ನು ಇದಿರಿಸುವ ಧೈರ್ಯ ತಂದುಕೊಂಡು ಮುಂದುವರಿಯುವ ಇಚ್ಛೆ ತೋರಿಸಿದಂದೇ ನಮ್ಮ ಸೌಭಾಗ್ಯದ ಮಹಾದ್ವಾರ ತೆರೆಯುತ್ತದೆ. ನನಗೆ ಉಪದೇಶ ಮಾಡುತ್ತೀಯೇನೋ? ಹಾಗಲ್ಲ ಅತ್ತಿಗೆ ನೀನು ಪ್ರೀತಿಸುವ ಹೂವನ್ನು ಮುಡಿಯಲ್ಲಿ ತುಂಬಿಕೊಳ್ಳಲು ನಾಲ್ಕು ಜನರ ಕಣ್ಣು ಹೇಗಿದೆಯೆಂದು ನೋಡಬೇಕೆ? ಯಶೋಧೆಗೆ ಸಿಟ್ಟೇರುತ್ತಿತ್ತು. ಆದರೂ ಪ್ರಭಾನನ್ನು ಗದರಿಸಿ ಬಾಯಿ ಮುಚ್ಚಿಸುವ ಧೈರ್ಯ ಮಾತ್ರ ಇರಲಿಲ್ಲ. "ನನಗೆ ತಿಳಿ ಹೇಳುವ ಅಧಿಕಾರ ನಿನಗಿದೆಯೇ ಪ್ರಭಾ? ನನಗೆ ದುಃಖ ಎಲ್ಲಿದ್ದರೂ ನೋಡಲು ಸಾಧ್ಯವಾಗುವುದಿಲ್ಲ. ಅತ್ತಿಗೆ ನಾನು ದುಃಖವನ್ನು ದ್ವೇಷಿಸುತ್ತೇನೆ. ನಿತ್ಯ ನಗುತ್ತಿರಬೇಕಾದ ಮುಖದಲ್ಲಿ ಕುಂಕುಮವಿಲ್ಲದಿರುವಾಗ, ತುರುಬಿನಲ್ಲಿ ಹೂವಿಲ್ಲದಿರುವಾಗ ಪ್ರಭಾ ಎಂದಾಗ ಯಶೋಧೆಗೆ ಮಜ್ಜಿಗೆ ಕುಡಿಯಲಾಗಲಿಲ್ಲ. ಮುಕ್ಕಾಲು ಲೋಟ ಕುಡಿದು ಉಳಿದ್ದನ್ನು ಹಾಗೆಯೇ ಬಿಟ್ಟು ಅಲ್ಲಿಂದ ಹೊರಬಿದ್ದಳು. ಪ್ರಭಾಕರ ಮರುಮಾತನಾಡದೆ 'ಬಿಲ್' ಕೊಟ್ಟು ಅವಳನ್ನು ಅನುಸರಿಸಿದ"(ಅದೇ, ಪು.೧೭೭). ಇಲ್ಲಿ ಪ್ರಭಾಕರನು ತನ್ನ ಅತ್ತಿಗೆ ಮೇಲೆ ಇರಿಸಿಕೊಂಡಿರುವ ಭಾವನೆಗಳು ಆಧುನಿಕ ನಗರಸಂಸ್ಕೃತಿಯ ಪ್ರತೀಕದಂತೆ ಭಾಸವಾಗುತ್ತಿದ್ದು, ಅದನ್ನು ಪ್ರಕಟಪಡಿಸಲು ಅದೇ ರೀತಿ ಅದಕ್ಕೆ ತನ್ನ ಅತ್ತಿಗೆಯಿಂದ ಬರಬಹುದಾದ ಪ್ರತಿಕ್ರಿಯೆಯನ್ನು ಪಡೆಯಲು ನಗರ ಹೋಟೆಲು ಒಂದು ಚರ್ಚಾಮಂಟಪವಾಗಿ ನಿಲ್ಲುತ್ತದೆ.

ಇದೇ ಲೇಖಕರ 'ಹೊಸ ಹಗಲು' ಕಥೆಯಲ್ಲಿಯೂ ನಗರಪ್ರದೇಶದ ಹೋಟೆಲು ಚಿತ್ರಿತ ವಾಗಿದೆ. ಮುಂಬಯಿ ನಗರದಲ್ಲಿ ವಾಸವಾಗಿದ್ದ ಮಾಧವ ಮತ್ತು ಸುನಂದೆಯರ ವೈವಾಹಿಕ ಸಂಬಂಧದಲ್ಲಿ ಬಿರುಕುಂಟಾದುದನ್ನು ಕಥೆಯಲ್ಲಿ ಚಿತ್ರಿಸಲಾಗಿದೆ. ಹೀಗೆ ಏಕಾಂಗಿಯಾದ ಮಾಧವನಿಗೆ ತನ್ನ ಏಕಾಂತವನ್ನು ಕಳೆಯಲು ನಗರದ ಹೋಟೆಲೊಂದು ಆಶ್ರಯ ಕಲ್ಪಿಸಿತ್ತು. ಕಥೆಯ ಸನ್ನಿವೇಶ ವೊಂದರ ಮೂಲಕ ಇದನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಪರಸ್ಪರ ಪ್ರೇಮವನ್ನು ಕಡಿದುಕೊಂಡ

ಮಾಧವ ಸುನಂದೆಯರು ಮುಂಬಯಿ ಮಹಾನಗರದ ಹೋಟೆಲೊಂದರಲ್ಲಿ ಭೇಟಿಯಾಗುತ್ತಾರೆ. ಆ ಭೇಟಿಯ ಸಂದರ್ಭದಲ್ಲಿ ಅವರ ನಡುವೆ ನಡೆಯುವ ಮಾತುಕತೆಗಳು ಅವರೊಳಗಿನ ಮನಸ್ತಾಪಕ್ಕೆ ಕಾರಣವನ್ನು ನೀಡುವಂತಿವೆ. "ತಿಳಿಯದೇ ಆದ ತಪ್ಪು ನನ್ನನ್ನು ಕ್ಷಮಿಸಿ ನನ್ನನ್ನು ಕ್ಷಮಿಸಿ. ತಾರುಣ್ಯದ ದುಡುಕಿನ ಒಂದು ವಿಷಘಳಿಗೆಯಲ್ಲಿ ಒಬ್ಬ ಸಹಪಾಠಿಯ ಸ್ನೇಹದಿಂದ ಮೋಸ ಹೋದೆ. ದೇವರಂಥ ಮನುಷ್ಯರಿಗೆ ದ್ರೋಹವಾಗಿದೆಯೆಂದು ನನಗೆ ಗೊತ್ತು. ನನ್ನನ್ನು ಕ್ಷಮಿಸಿ"(ಅದೇ, ಪು.೧೮೮-೧೮೯). ಹೀಗೆ ನಗರಪ್ರದೇಶದ ಯುವತಿಯಾದ ಸುನಂದ ಪ್ರೇಮಪಾಶದಲ್ಲಿ ಎಡವಿದ ಪ್ರಸಂಗದ ಧೈರ್ಯವನ್ನು ಹಂಚಿಕೊಳ್ಳುವ ವೇದಿಕೆಯಾಗಿ ಹೋಟೆಲು ಚಿತ್ರಿತವಾಗಿದೆ. ಮಾಧವನ ಹೃದಯದಲ್ಲಿ ಸಂಭವಿಸಿದ ಗಾಯಗಳು ಮಾಯವಾಗುವುದಕ್ಕೆ ಹೋಟೆಲು ನಿರ್ಣಾಯಕ ಪಾತ್ರ ವಹಿಸಿದೆ. ಮಾಧವನಿಗೆ ಮಗದೊಂದು ಸಮಸ್ಯೆಯು ತಲೆದೋರಿದ ಪ್ರಸಂಗವನ್ನು ಕಥೆಯ ಈ ಸನ್ನಿವೇಶದಿಂದ ಸ್ಪಷ್ಟಪಡಿಸಿಕೊಳ್ಳಬಹುದು. "ಈ ಏಕಾಂತತೆ ಬೇಡವೆಂದು ಮನಸ್ಸು ಮೊರೆಯಿಡುತ್ತಿತ್ತು. ಮದುವೆಗೆ ಮೊದಲು ಆಮೇಲೆ ಕೆಲವು ದಿನ ಹೋಟೆಲಿನಲ್ಲಿದ್ದಂತೆ ಇನ್ನೂ ಮುಂದುವರಿಯಬಹುದಿತ್ತು. ಆದರೆ ತಾಯಿ ಒಪ್ಪಿರಲಿಲ್ಲ"(ಅದೇ, ಪು. ೧೯೦). ಹೀಗೆ ಭಗ್ನಪ್ರಣಯಗಳ ಮನೋಗತವನ್ನು ಬಿಚ್ಚಿಡಲು ಹೋಟೆಲು ಇಲ್ಲಿ ಸೂಕ್ತ ವೇದಿಕೆಯನ್ನು ಕಲ್ಪಿಸಿತು.

ಇದೇ ಲೇಖಕರ 'ಬೆಂಕಿ-ನಾಲಿಗೆ' ಎಂಬ ಮತ್ತೊಂದು ಕಥೆಯಲ್ಲಿ ವಿಭಿನ್ನವಾದ 'ಇರಾಣಿ ರೆಸ್ಟೋರಾ'ದ ಚಿತ್ರಣವಿದೆ. ನಗರದಲ್ಲಿ ಉದ್ಯೋಗಸ್ಥರಾಗಿದ್ದ ಚಂದ್ರಕಾಂತ ಮತ್ತು ಯಮುನಾ ಚಹಾ ಸೇವಿಸುವ ಸಲುವಾಗಿ ನಗರದ ಹೋಟಲೊಂದಕ್ಕೆ ಪ್ರವೇಶಿಸುತ್ತಾರೆ. ನಗರದಲ್ಲಿ ದುಡಿಯುವ ಮತ್ತು ನೌಕರಸ್ಥರಿಗೆ ಮನಸ್ಸಿನ ಒತ್ತಡ, ಕಚೇರಿಯ ಒತ್ತಡ, ಸಾರ್ವಜನಿಕರ ಒತ್ತಡಗಳನ್ನು ನಿವಾರಿಸಿಕೊಳ್ಳಲು ಉದ್ಯೋಗಸ್ಥರ ಬದುಕಿನಲ್ಲಿ ಹೋಟೆಲು ಒಂದು ಅನಿವಾರ್ಯ ಅಂಗವಾಗಿರುವುದನ್ನು ಪ್ರಸ್ತುತ ಕಥೆಯು ಪ್ರತಿಪಾದಿಸುತ್ತದೆ. ಅದೇ ರೀತಿ ಅವರ ಕುಟುಂಬದಲ್ಲಾದ ಏರುಪೇರುಗಳನ್ನು ಮರೆಯಲು ಅಲ್ಲಿನ 'ರೆಸ್ಟೋರೆಂಟ್'ಗಳು ಸಹಕಾರಿಯಾಗುತ್ತವೆಂಬುದನ್ನು ಕಥೆಯು ನಿರೂಪಿಸುತ್ತದೆ.

ಜಿ.ಎಸ್. ಸದಾಶಿವ ಅವರ 'ಹ್ಯಾಂಗೋವರ್' ಕಥೆಯಲ್ಲಿ ನಗರ ಬಾರೊಂದರ ಚಿತ್ರಣವಿದೆ. ಸ್ನೇಹಿತರಾದ ಸೋಮು ಮತ್ತು ಕಿಟ್ಟಿ ಆ ಬಾರ್‌ನಲ್ಲಿ ಕುಳಿತು ಮಧ್ಯ ಸೇವಿಸುವಾಗ ಸೋಮು ತನ್ನ ವ್ಯಕ್ತಿತ್ವದಲ್ಲಾದ ಬದಲಾವಣೆಯ ಸ್ವರೂಪವನ್ನು ಕಿಟ್ಟುವಿನೊಂದಿಗೆ ಹಂಚಿಕೊಳ್ಳುತ್ತಾನೆ. ನಗರದಲ್ಲಿನ ಶಾಪಿಂಗ್ ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ಪೂರೈಸಿ 'ಕಾಂಟಿನೆಂಟಲ್ ಬಾರ್'ಗೆ ಬಂದಿರುತ್ತಾರೆ. ಮಧ್ಯಪಾನ ಮತ್ತು ಮಾಂಸಹಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ನಗರಸಂಸ್ಕೃತಿಯ ಪ್ರತೀಕವಾದ ಬಾರೊಂದು ಸೋಮುವಿನ ಮೊದಲು ಇದ್ದ ಭಾವನೆಗಳಿಗೆ ತಿರುವನ್ನುಂಟು ಮಾಡುತ್ತದೆ. ಸೋಮುವಿಗೆ ಕೆಲಸ ಸಿಕ್ಕ ಸಂತಸ ಹಂಚಿಕೊಳ್ಳುವುದಕ್ಕೆ ಬಾರೊಂದನ್ನು ಆಯ್ಕೆ ಮಾಡಿಕೊಂಡಿರುತ್ತಾನೆ. ಕೆಲಸ ಸಿಕ್ಕ ಆನಂದ ಬಾರಲ್ಲಿ ಮತ್ತಷ್ಟು ಪುಷ್ಟಿ ಪಡೆದುಕೊಳ್ಳುವುದು ಈ ಬಗೆಯಲ್ಲಿ ನನ್ನ ದುಡ್ಡಲ್ಲಿ

ನಾನು ಸುಖ ಪಡುವುದು ತಪ್ಪಾಗಿ ಕಾಣುತ್ತಿದೆಯ ಕಿಟ್ಟು ಎಂದು ಮಾತಿಗಿಳಿಯುತ್ತಾನೆ. ನೂರಾರು ಕನಸುಗಳಿಗೆ ಹೀಡಾಗಿದ್ದ ಸೋಮು ಹಣ ಸಂಪಾದಿಸಿರುತ್ತಾನೆ. ಅವನಲ್ಲಿ ಎರಡು ಪ್ರಮುಖ ಆಸೆಗಳು ಇದ್ದುದ್ದನ್ನು ಕಿಟ್ಟಿಗೆ ಹೇಳುತ್ತಾನೆ. ಒಂದು ಬಟ್ಟೆ ತೆಗೆದುಕೊಳ್ಳುವುದನ್ನು, ಎರಡನೆಯದು ಬಾರೊಂದರಲ್ಲಿ ಗುಂಡು ಹಾಕುವುದನ್ನು ಕಿಟ್ಟಿವಿನಲ್ಲಿ ತನ್ನ ಮನೋಹಿಂಗಿತವನ್ನು ವ್ಯಕ್ತಪಡಿಸುತ್ತಾನೆ. ಹೀಗೆ ನಗರಪ್ರದೇಶದ ಬಾರ್ ಆಪ್ತ ಸ್ನೇಹಿತರು ಸಂತೋಷಪಡುವ ತಾಣವಾಗಿರುವುದು ಕಥೆಯು ಕಲಾತ್ಮಕವಾಗಿ ಚಿತ್ರಿಸಿದೆ.

ಅಮರೇಶ ನುಗಡೋಣಿ ಅವರ 'ಏ ದಿಲ್ ಮಾಂಗೇ ಮೋರ್' ಕಥೆಯಲ್ಲಿ ಹುಸೇನವ್ವನ ಹೋಟೆಲು ಹಳ್ಳಿಯಲ್ಲಿ ಚಿರಪರಿಚಿತವಾಗಿದೆ. ಇಲ್ಲಿ ನಗರ ಹವ್ಯಾಸಗಳಲ್ಲೊಂದಾದ ಕ್ರಿಕೆಟ್ ಪಂದ್ಯದ ಪಂದ್ಯಾವಳಿಗಳು ದೂರದರ್ಶನದಲ್ಲಿ ಬಿತ್ತರಗೊಳ್ಳುವುದನ್ನು ಗ್ರಾಹಕರು ನೋಡಿ ಆನಂದ ಪಡುತ್ತಿದ್ದರು. ಪಟ್ಟಣಗಳಿಂದ ಪತ್ರಿಕೆಗಳು ಬಂದು ಗ್ರಾಹಕರಲ್ಲಿ ಯೋಚಿಸುವ ಶಕ್ತಿಯನ್ನು ಇಮ್ಮಡಿಗೊಳಿಸುತ್ತವೆ. ರಾಜಕೀಯ ಇಚ್ಚಾಶಕ್ತಿಯುಳ್ಳ ಗ್ರಾಹಕರು ಹೋಟೆಲಲ್ಲಿ ರಾಜ್ಯದ ವಿವಿಧ ನಗರಗಳಲ್ಲಿ ಮತದಾನ, ಬಹುಮತ ಭಿನ್ನಮತ ಎನ್ನುವುದನ್ನು ಕಲ್ಪಿಸಿಕೊಳ್ಳುತ್ತಿದ್ದರು. ಊರಿನಲ್ಲಿ ಕ್ರಿಕೆಟ್ ಬೆಟ್ಟಿಂಗ್ ಕಟ್ಟುವ ಗುಂಪುಗಳಲ್ಲಿ ನಡೆದ ಘರ್ಷಣೆಯಿಂದಾಗಿ ಹೋಟೆಲು ಮಾಲಕಿ ಪೊಲೀಸ್ ಠಾಣೆಯ ಮೆಟ್ಟಿಲು ಹೇರುತ್ತಾಳೆ. ಸಿದ್ದಪ್ಪನು ಪೊಲೀಸರಿಂದ ಬಿಡುಗಡೆಗೊಳಿಸಿದ್ದನ್ನು ಕಂಡು ಕೃತಜ್ಞತೆಯನ್ನು ಸಲ್ಲಿಸುತ್ತಾಳೆ. ಇಂತಹ ನಗರಪ್ರಜ್ಞೆಯನ್ನು ಗ್ರಾಮೀಣ ಹೋಟೆಲಿನ ಮೂಲಕ ಕಥೆಯು ಮನಮೋಹಕವಾಗಿ ಚಿತ್ರಿಸಿದೆ.

ನಾರಾಯಣಪ್ಪ, ಶಿವಾನಂದ, ಕೃಷ್ಣಪ್ಪ, ಆನಂದಪ್ಪ ಹೋಟೆಲಲ್ಲಿ ಬಂದು ಚಹಾ ಕುಡಿಯುತ್ತ ಪತ್ರಿಕೆಗಳನ್ನು ಓದತೊಡಗುತ್ತಾರೆ. ಹೋಟೆಲಿನ ಗ್ರಾಹಕರ ಮಾತುಕತೆಯ ಸಂದರ್ಭದಲ್ಲಿ ದೇಶ-ವಿದೇಶದ ಗಡಿಸೀಮೆಗಳು ಪ್ರಸ್ತಾಪವಾಗುವುದನ್ನು ಇಲ್ಲಿ ಗಮನಿಸಬಹುದಾಗಿದೆ. "ನುಗ್ಗಿ ಬರ್ತಾರಂತೆ ಒಳಗೆ. ಅದೆಂಗ ಬರ್ತಾರ. ಬಂದು ನೋಡ್ಲಿ ಆಗ್ಲೇ ಸುಸ್ತಾಗಿ ಹಿಂದಕ್ಕೆ ಸರಿದಾರಂತ ನೋಡು ಅಲ್ಲಾ ಈ ಬೋಳಿ ಮಕ್ಕಳು ಎಷ್ಟು ಸೊಕ್ಕು. ಗಡಿಗೆ ಬರಬೇಕಂದ್ರ"(ಅಮರೇಶ ನುಗಡೋಣಿ, ಸವಾರಿ, ೨೦೦೭, ಪು.೪೫). ಹೀಗೆ ಪತ್ರಿಕೆಗಳಲ್ಲಿ ಬಂದ ಸುದ್ದಿ ಸಮಾಚಾರಗಳನ್ನು ಗ್ರಾಹಕರು ರಾಜ್ಯ, ದೇಶ ಹಾಗೂ ವಿದೇಶದ ಪ್ರಜ್ಞೆ ಮೂಡಲು ಹೋಟೆಲು ನಿರ್ಣಾಯಕ ಪಾತ್ರ ವಹಿಸುತ್ತದೆ.

ಸಾರಾ ಅಬೂಬಕ್ಕರ್ ಅವರ 'ಚಪ್ಪಲಿಗಳು' ಕಥೆಯಲ್ಲಿ ನಗರ ಹೋಟೆಲಿನ ಚಿತ್ರಣವಿದೆ. ಇಲ್ಲಿ ಶಬ್ಬೀರನು ಮಂಗಳೂರಿನ ವಸತಿ ಹೋಟೆಲಲ್ಲಿ ಆಶ್ರಯ ಪಡೆದಿರುತ್ತಾನೆ. ಅಲ್ಲಿ ದೊರಕುವ ತಿಂಡಿ-ತಿನಿಸುಗಳನ್ನು ಸೇವಿಸುವಾಗ ಶಬ್ಬೀರನ ಹೆಂಡತಿ ಮತ್ತು ಮಕ್ಕಳು ಅವುಗಳನ್ನು ನೋಡಿ ಆಶ್ಚರ್ಯಪಡುವ ಸಂದರ್ಭವನ್ನು ಕಥೆಯು ಚಿತ್ರಿಸಿದೆ. ಇದೇ ಕಥೆಯಲ್ಲಿ ಮತ್ತೊಂದು ಮುಸ್ಲಿಂ ಕುಟುಂಬದ ಸದಸ್ಯರು ಶೇಕಾಲಿ ಮತ್ತು ಫರೀದಾ ದಂಪತಿಗಳು ಮುಂಬಯಿ ನಗರದ ಭವ್ಯವಾದ

ಹೋಟೆಲಲ್ಲಿ ಬಾಡಿಗೆ ರೂಮು ಪಡೆಯುತ್ತಾರೆ. ಅವರು ಊಟ-ತಿಂಡಿ ತಿಂದಾದ ಮೇಲೆ ಬಿಲ್ಲಿನಲ್ಲಿ ನಮೂದಿಸಿದ್ದ ದರವನ್ನು ಮತ್ತು ಹೋಟೆಲಿನ ಅದ್ದೂರಿತನವನ್ನು ನೋಡಿ ಫರೀದಾ ಬೆರಗಾಗುತ್ತಾಳೆ. ಶೇಕಾಲಿ ಮಡದಿಯನ್ನು ನೋಡಿ ಮುಗುಳ್ನಗುತ್ತಾ ಬಿಲ್ಲನ್ನು ಕ್ಯಾಸ್ ಕೌಂಟರಿನಲ್ಲಿ ಪಾವತಿ ಮಾಡುತ್ತಾನೆ. ಕೊಲ್ಲಿ ರಾಷ್ಟ್ರದಿಂದ ವಾಪಸ್ಸಾದ ಸಲೀಮನು ತನ್ನ ಪತ್ನಿಯಾದ ಶಕೀಲಾಳೊಂದಿಗೆ ಬಾಳ್ವೆ ನಡೆಸಲು ಇಷ್ಟವಿಲ್ಲದಿದ್ದಾಗ ನಗರದ ಹೋಟೆಲೊಂದರಲ್ಲಿ ವಾಸ್ತವ್ಯ ಹೂಡುತ್ತಾನೆ. ಗ್ರಾಹಕರಿಗೆ ಅವರಿಷ್ಟದಂತೆ ಆಧುನಿಕ ಸೌಲಭ್ಯಗಳನ್ನು ಒದಗಿಸುವ ಹೋಟೆಲಿನ ಚಿತ್ರಣ ಇಲ್ಲಿದೆ. ಕಥೆಯಲ್ಲಿನ ಈ ಮೂರು ಸನ್ನಿವೇಶಗಳಲ್ಲೂ ಆಧುನಿಕ ನಗರಸಂಸ್ಕೃತಿ ಹಾಗೂ ನಗರಪ್ರಜ್ಞೆಯ ಭಾಗವಾಗಿ ಹೋಟೆಲು ಚಿತ್ರಿತವಾಗಿದೆ. ಮೊದಲೆರಡು ಸನ್ನಿವೇಶಗಳಲ್ಲಿ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ನಗರದ ಹೋಟೆಲುಗಳಲ್ಲಿನ ವೈಭವವನ್ನು ಕಂಡು ಬೆರಗಾಗುತ್ತಾರೆ. ಮೂರನೆಯ ಸನ್ನಿವೇಶದಲ್ಲಿ ಸಲೀಮನು ತನ್ನ ಸಂಸಾರದಲ್ಲಿ ವಿರಸ ಉಂಟಾಗಿ ನಗರದ ಹೋಟೆಲಿನಲ್ಲಿ ವಾಸ್ತವ್ಯ ಹೂಡುವುದು ಆಧುನಿಕ ನಗರಪ್ರಜ್ಞೆಯ ಪ್ರತೀಕವೆಂದು ಹೇಳಬಹುದು.

ಯಶವಂತ ಚಿತ್ತಾಲರ 'ತ್ರಯೋದಶ ಪುರಾಣ' ಕಥೆಯಲ್ಲಿ ಮುಂಬಯಿ ಮಹಾನಗರದ 'ಶೆಟ್ಟಿ ಹೋಟೆಲಿ'ನ ಚಿತ್ರಣವಿದೆ. ಈ ಹೋಟೆಲಲ್ಲಿ ಶೆಟ್ಟಿಯು ಹತ್ತು, ಹದಿನೈದು ಪರ ಊರಿನ ಬ್ರಾಹ್ಮಣ ಮಾಣಿಗಳನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದನು. ವಿವಿಧೆಡೆಗಳಿಂದ ಬಂದ ಗ್ರಾಹಕರಿಗೆ ತಿಂಡಿ-ತಿನಿಸು ಪೂರೈಸುವುದರ ಜೊತೆಗೆ ಅವರೊಂದಿಗೆ ಮಾತುಕತೆಗೆ ಇಳಿಯುತ್ತಿದ್ದನು. ನಗರ ಸಂಸ್ಕೃತಿಯ ಪ್ರತೀಕವಾಗಿರುವ ಹಲವು ಸಂಗತಿಗಳನ್ನು ಹೋಟೆಲಿನ ಮೂಲಕ ಕಥೆಯು ಕಲಾತ್ಮಕವಾಗಿ ಚಿತ್ರಿಸಿದೆ. ಕಥೆಯ ಸನ್ನಿವೇಶವೊಂದರ ಮೂಲಕ ಇದನ್ನು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. "ಖೇತವಾಡಿಯ ಖೇಮರಾಜ ಭವನಕ್ಕೆ ಮೂರು ವಿಳಾಸಗಳು. ಖೇತವಾಡಿ ೬ನೇ ಗಲ್ಲಿ, ಖೇತವಾಡಿ ೭ನೇ ಗಲ್ಲಿ ಇಲ್ಲವೇ ಬ್ಯಾಂಕ್ ರೋಡ್ ಮೂರನೇ ಮಜಲೆಯ ಮೇಲಿನ ರೂಮ್ ನಂಬರ್ ೩೯ರಲ್ಲಿ ಈ ಮೂರು ವಿಳಾಸಗಳಿಗೆ ಪತ್ರಗಳು ಬರುತ್ತಿದ್ದವು. ೧೩ ಮಂದಿ ನಿವಾಸಿಗಳಿದ್ದರು. ಒಂದು ಕಾಲಕ್ಕೆ ಖೇಮರಾಜ ಭವನದ ತಳಮಜಲೆಯಲ್ಲಿಯ 'ಕೃಷ್ಣವಿಲಾಸ' ಎಂದು ಪ್ರಸಿದ್ಧವಾದ ಉಡುಪಿ ರೆಸ್ಟೋರೆಂಟಿನ ಮಾಲೀಕನಾದ ಸೀತಾರಾಮಶೆಟ್ಟಿ ಇದೇ ಕೋಲಿಯಲ್ಲಿ ಸಂಸಾರ ಹೂಡಿದ್ದು, ಇಂದು ಮುಂಬಯಿಯಲ್ಲಿ ಐದಾರು ಸಣ್ಣಪುಟ್ಟ ಹೋಟೆಲ್ಲುಗಳ ಒಡೆಯನಾದ ಸೀತಾರಾಮಶೆಟ್ಟಿಯ ಶ್ರೀಮಂತಿಕೆ ದೊಡ್ಡ ಪವಾಡದ ಮೆರುಗನ್ನು ಪಡೆದಿದೆ. ಚರ್ಚ್ ಗೇಟ್ ಇದಿರು ಪೋರ್ಟಿನಲ್ಲಿ ಕೆಲಸ ಮಾಡುವವರೆಲ್ಲ ಬಹಳ ಜನಪ್ರಿಯತೆ ಗಳಿಸಿದ 'ಸನ್ಮಾನ' ಎಂಬ ಹೆಸರಿನ ರೆಸ್ಟೋರೆಂಟ್ ಇವನದು. ಪೂರ್ಚೆಟ್ ಹಿಲ್ಲಿನ ಮೂವತ್ತು ಮಜಲುಗಳ ಹೊಚ್ಚ ಹೊಸ ಸ್ಕಾಯ್ ಸ್ಕ್ರೇಪರ್ ಕಟ್ಟಡದಲ್ಲಿ ನಾಲ್ಕು ಕೋಣೆಗಳುಳ್ಳ ಅತ್ಯಾಧುನಿಕ ಮಾದರಿಯ ದೊಡ್ಡ ಫ್ಲಾಟ್ ಇದೆ. ಇಷ್ಟಿದ್ದೂ 'ಖೇಮರಾಜ ಭವನ'ದ 'ಕೃಷ್ಣ ವಿಲಾಸ' ಬಿಟ್ಟುಕೊಡದೆ ತಮ್ಮ ಊರಿನವರೇ ಆದ ಒಬ್ಬರಿಗೆ ನಡೆಸಲು ಸೀತಾರಾಮ ಶೆಟ್ಟರು ಕೊಟ್ಟಿದ್ದಾರೆ. ತಮ್ಮ ಇಂದಿನ ಊರ್ಜಿತಾವಸ್ಥೆಗೆ ಗಟ್ಟಿಯಾದ

ಬುನಾದಿಯನ್ನು ಹಾಕಿದ ಈ ಹೋಟೆಲಿನ ಸಂಬಂಧವನ್ನು ಕಳೆದುಕೊಳ್ಳುವ ಮನಸ್ಸಿಲ್ಲ ಅವರಿಗೆ. ಅದೇ ಕಾರಣಕ್ಕಾಗಿ ಮೂರನೇ ಮಜಲೆಯ ತಿಂಗಳಿಗೆ ಮೂವತ್ತು ರೂಪಾಯಿ ಬಾಡಿಗೆಯಿದ್ದ ಆ ಚಿಕ್ಕ ಕೋಣೆಯನ್ನು ತಮ್ಮ ಹೆಸರಿನಲ್ಲೇ ಇಟ್ಟುಕೊಂಡಿದ್ದಾರೆ. 'ಕೃಷ್ಣವಿಲಾಸ' ೧೩ ಮಂದಿ ಮಾಣಿಗಳು ಅಲ್ಲೀಗ ವಾಸಿಸುತ್ತಾರೆ. ಎಲ್ಲರಿಗೂ ಅಲ್ಲಿ ಮಲಗಲು ಜಾಗ ಸಿಗುವಂತಿಲ್ಲವಾದರೂ ತಮ್ಮ ಬಟ್ಟೆ ಬರೆಗಳನ್ನು ಸಣ್ಣಪುಟ್ಟ ಸಾಮಾನುಗಳನ್ನು ಇಡಲು ಅದು ಜಾಗ ಒದಗಿಸುತ್ತದೆ. ಕೋಣೆಯ ಮೂಲೆಗಳಲ್ಲಿ ನಗಂದಿಗಳ ಮೇಲೆ ಹೋಟೆಲ್ಲಿನ ಒಡೆತನದ ಬಟಾಟೆ, ಉಳ್ಳಾಗಡ್ಡಿ ತುಂಬಿದ ಗೋಣಿಚೀಲಗಳೂ ಹಿಟ್ಟಿನ ಡಬ್ಬಗಳೂ ಹೇರಲ್ಪಟ್ಟಿದ್ದವು. ಆ ಮಾತು ಬೇರೆ. ಈ ನಿವಾಸಿಗಳು ಮಲಗುತ್ತಿದ್ದದ್ದು ಹೆಚ್ಚಾಗಿ ಕೋಣೆಯ ಹೊರಗಿನ ಕಾರಿಡಾರಿನ ಮೇಲೆ ಕೆಳಗೆ ಹೋಟೆಲ್ಲಿನಲ್ಲೇ ಟೇಬಲ್ಲುಗಳನ್ನು ಒಂದಕ್ಕೊಂದು ಜೋಡಿಸಿ ಅವುಗಳ ಮೇಲೆ ಮಲಗುತ್ತಿದ್ದರು"(ಯಶವಂತ ಚಿತ್ತಾಲ, ೨೦೦೭, ಪು.೭೦). ಮುಂಬಯಿ ಮಹಾನಗರದ ಹೋಟೆಲು ಕಾರ್ಮಿಕರ ನೋವು-ನಲಿವುಗಳು ಕೂಡ ನಗರಪ್ರಜ್ಞೆಯ ಭಾಗವೆಂದೇ ಹೇಳಬಹುದು. ಪ್ರಸ್ತುತ ಕಥೆಯಲ್ಲಿನ ಈ ಸನ್ನಿವೇಶವು ಅಂತಹ ಹೋಟೆಲು ಕಾರ್ಮಿಕರ ಜೀವನವಿಧಾನವನ್ನು ತೆರೆದಿಡುತ್ತವೆ. ಇದೇ ಕಥೆಯಲ್ಲಿ ಕೊಲ್ಲಾಪುರ ನಗರದಲ್ಲಿನ 'ಜೈ ಭವಾನಿ ಉಡುಪಿ ಹೋಟೆಲಿ'ನ ಚಿತ್ರಣವಿದ್ದು ಅಲ್ಲೂ ನಗರಪ್ರಜ್ಞೆಯ ಅಭಿವ್ಯಕ್ತಿಯಿದೆ.

ವೀಣಾ ಶಾಂತೇಶ್ವರ ಅವರ 'ಹೋಟೆಲ ಬ್ಲೂ' ಕಥೆಯು ಊಟ ಮತ್ತು ವಸತಿ ಸೌಲಭ್ಯವನ್ನು ಪೂರೈಸುವ ಹೋಟೆಲೊಂದು ನಗರಸಂಸ್ಕೃತಿಯ ಚಟುವಟಿಕೆಗಳ ತಾಣ ಆಗಿರುವುದನ್ನು ಚಿತ್ರಿಸುತ್ತದೆ. ಕಥೆಯ ಆರಂಭದಲ್ಲಿ ಬರುವ ಒಂದು ಸನ್ನಿವೇಶ ಮತ್ತು ಪಾತ್ರಗಳ ಎರಡರ ನಡುವೆ ನಡೆಯುವ ಸಂಭಾಷಣೆಯ ಮೂಲಕ ನಗರಸಂಸ್ಕೃತಿಯು ಅಭಿವ್ಯಕ್ತಗೊಂಡಿರುವುದನ್ನು ಕಂಡುಕೊಳ್ಳಬಹುದಾಗಿದೆ. "ಗುಡ್ ಮಾರ್ನಿಂಗ್ ಅಂಕಲ್-ಹಾಡಿನಂತೆ ಹೇಳುತ್ತಾ ಮಹಡಿಯ ಮೆಟ್ಟಿಲಿಳಿದು ಬಂದಳು ರೀಟಾ, ಕೌಂಟರಿನಲ್ಲಿ ಕೂತಿದ್ದ ಜೋಸೆಫ್ ಕಣ್ಣು ಕಿರಿದುಕೊಳಿಸಿ ಆಕೆಯತ್ತ ನೋಡಿದ. ಉದ್ದಕ್ಕೂ ಹರವಿಕೊಂಡ ತಲೆಗೂದಲು ಇನ್ನೂ ನಿದ್ದೆಯ ಮಂಪರಿನಲ್ಲಿರುವ ನೀಲಿ ಕಣ್ಣುಗಳು ಸುಕ್ಕಾಗಿದ್ದ ಫ್ರಾಕು ಮುಖದಲ್ಲಿ ತೃಪ್ತಿಯ ನಗು, ಗುಡ್ ಮಾರ್ನಿಂಗ್ ರೀಟಾ, ಏನು ನಿನ್ನೆಯ ಶೇಠಜೀ ಕೃಪೆ ಜೋರಿತ್ತಂತ ಕಾಣತೈತಿ? ಓಹ್ ಅದೊಂದು ಮುದಿಗೂಬೆ, ಬರೆ ಚಪಲ. ಅದಕ್ಕೆ ಬಾಸನ ಫ್ರೆಂಡಂತೆ ಸುಮ್ಮ ಇದ್ದೆ ನಾನೂ, ಅಲ್ಲ ಇವತ್ತು ಸಂಡೆ ಚರ್ಚ ಇಲ್ಲೇನು ನಿಮಗ? ಇಷ್ಟಲಗೂ ಡ್ಯೂಟಿ ಸುರೂ ಮಾಡೀರಿ? ಚರ್ಚನ ಮುಗಿಸಿಕೊಂಡ ಬಂದಿನಿ. ಇವತ್ತೊಂದು ಬಾರಿ ಪಾರ್ಟಿ ಅರ್ಡರ್ ಬರೋದೈತಿ ಆ ಅಯ್ಯಂಗಾರಿ ಕಂಡಿದ್ದ ಮುಂಜಾನೆ. ಲಗೂನ ಬಂದು ಡಿಟೇಲ್ಸ್ ಕೊಡ್ತೀನಿ ಅಂದಿದ್ನಂತ. ಲಗೂ ಬಂದ ಕುಂತಿನಿ. ತಿರುಗಿ ಕುರ್ಚಿಯನ್ನು ಮೆಲ್ಲಗೆ ತಿರುಗುತ್ತ ಉತ್ತರಿಸಿದ ಜೋಸೆಫ್.

ಓ ಆ ನ್ಯೂಸ್ ಪೇಪರ್ ಎಡಿಟರನ್ನ? ಉಫ್ ಅಂತ ಊದಿದರೆ ಗಾಳ್ಯಾಗ ಹಾರಿ ಹೋಗಾಂಗ ಅದಾನಲ್ಲಾ? ಸುಮ್ನಿರು ಬಂದು ಗಿಂದಾನು ನೋಡಾಕ ಹಾಂಗ ಕಂಡ್ರೂ ಭಾರೀ ಕುಳಾ. ಈಗ ಅಂವಾ ಇಡಿ ಊರಾಗ ಮನಸ್ಸು ಮಾಡಿದ್ರೆ ನಮ್ಮ ಬಾಸನ ಈ ಹೋಟೇಲನ್ನೇ ಖರೀದಿ ಮಾಡ್ಯಾನು. ಎಮ್ಮೆಲ್ಲೆಗೋಳ್ನ ಬಿಡು, ಇವತ್ತ ಈ ಊರಿಗೆ ಬರೋ ಮಿನಿಸ್ಟರ್ ಸುದ್ದಾ ಅಂಜತಾರ ಅಂವಗೆ. ಅಂದಾಂಗ ಗವ್ರ್ನರ್ಮೆಂಟ್ ಗೆಸ್ಟ್ ಹೌಸಿನಿಂದ ನಿನ್ನ ಸ್ನಾಚ್‌ಗೆ ಆರ್ಡರ್ ಬಂದಿತ್ತಲ್ಲ. ಸ್ಟಾಕ್ ಮಾಡಿದ್ದೆಲ್ಲ ಹೊತ್ತು ಕಳಿಸಿದ್ದು ಬಾಸ್ ಈ ಮಿನಿಸ್ಟರ್ ಪಾರ್ಟಿಗೆ ಏನು? ಇತ್ತಿತ್ಲಾಗ ಭಾಳ ಕಾರಭಾರ ಮಾಡಾಕ್ಹತ್ತೀ ರೀಟಾ, ಹೋಗಿ ಪ್ರೇಶ್ ಆಗಿ ಬಾ. ಹೋಟಲಿಗೆ ರಶ್ ಇರ್ತತಿ ಕೌಂಟರಿನ್ಯಾಗ ನೀನು ಬೇಕು.

ಶಿಳ್ಳಿನಲ್ಲಿ ಇಂಗ್ಲಿಶ್ ಹಾಡು ಗುನುಗುನಿಸುತ್ತ ರೀಟಾ ಕುಣಿಯುತ್ತಾ ಒಳಗಡೆ ಮರೆಯಾಗುವುದನ್ನೇ ನೋಡುತ್ತಿದ್ದ ಜೋಸೆಫ್ ಆತನಿಗೆ ಒಂದು ಥರಾ ಅನಿಸಿತು. ತನ್ನ ಹಾಗೆ ದಾರಿ ತಪ್ಪಿದ ಬಾಳು ಈ ಹುಡುಗಿಯದು ಅನಿಸಿತು. ಕಾರಣವಿಲ್ಲದೆ ಹಿಂದಿನದು ನೆನಪಾಗಿ ಕೆಟ್ಟೆನಿಸಿತು. ಬ್ರಿಟೀಶ್ ಕಾಲದಲ್ಲಿ ಫಿಲೋಸಫಿ ಎಂ.ಎ. ಮಾಡಿದ್ದ ತಾನು ಈ ಹೊತ್ತಿಗೆ ಯಾವುದೋ ಯೂನಿವರ್ಸಿಟಿಯಲ್ಲಿ ಪ್ರೊಫೆಸರಾಗಿದ್ದುಕೊಂಡು ಕನ್ನಡಕ ಹಾಕಿಕೊಂಡು ಕಾರಲ್ಲಿ ಕೂತುಕೊಂಡು ಪುಸ್ತಕ ಓದುತ್ತಾ ಹಾಯಾಗಿ ಓಡಾಡಬಹುದಾಗಿತ್ತು. ಎಲ್ಲ ಬಿಟ್ಟು ಈ ಹೋಟೆಲ್ ಮ್ಯಾನೇಜರ್ ಕೆಲಸಕ್ಕೆ ಇಳಿದದ್ದು ಏಕೆ? ಅದಕ್ಕೆ ಉತ್ತರವಿಲ್ಲ. ಹಾಗೆಯೇ ಈ ರೀಟಾ ಎಲ್ಲ ಹೆಂಗಸರಂತೆ ಯಾರನ್ನೋ ಮದುವೆಯಾಗಿ ಮಕ್ಕಳನ್ನು ಆಡಿಸುತ್ತಾ ಇರುವುದು ಬಿಟ್ಟು ಈ ಹೋಟೆಲಲ್ಲಿ ಕ್ಯಾಬರೆ ಮತ್ತೇನೇನೋ ಮಾಡುತ್ತಿದ್ದಾಳೇಕೆ ಅನ್ನುವುದಕ್ಕೂ ಉತ್ತರವಿಲ್ಲ. ಜೀವನದಲ್ಲಿ ಬಹಳ ಪ್ರಶ್ನೆಗಳಿಗೆ ಉತ್ತರವಿಲ್ಲ(ವೀಣಾ ಶಾಂತೇಶ್ವರ, ೨೦೦೬, ಪುಟ ೧೫೫). ಹೀಗೆ ನಗರದ ಹೋಟೆಲುಗಳು ಗಂಡು ಮತ್ತು ಹೆಣ್ಣಿಗೆ ಜೀವನವನ್ನು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತವೆ ಎಂಬುದನ್ನು ನಿರೂಪಿಸುವ ಕಥೆಯು ಅದರ ಜತೆಯಲ್ಲೇ ಆಧುನಿಕ ನಗರಪ್ರಜ್ಞೆ ಹಾಗೂ ನಗರಸಂಸ್ಕೃತಿಯನ್ನು ಕಥನಪ್ರಜ್ಞೆಯ ಭಾಗವಾಗಿಸಿಕೊಂಡಿದೆ. ಇಷ್ಟೇ ಅಲ್ಲದೆ ಬಗೆಬಗೆಯ ಮನಸ್ಸುಳ್ಳ ಆಧುನಿಕ ಸಂದರ್ಭದ ಗ್ರಾಹಕರಿಗೆ ಹೋಟೆಲು ವಿಹಾರತಾಣವಾಗಿಯೂ, ಕಾಲಾಯಾಪನೆಯ ಕೇಂದ್ರವಾಗಿಯೂ ಪ್ರವರ್ತಿಸುವುದನ್ನು ಕಥೆಯು ಮನೋಜ್ಞವಾಗಿ ಕಟ್ಟಿಕೊಡುತ್ತದೆ.

ಜಿ.ವಿ. ಪ್ರಭು ಅವರ 'ಕೃಷ್ಣಭಟ್ಟರು ಹಾಗೂ ಅವರ ಹೋಟೆಲು ಉದ್ಯಮವು' ಕಥೆಯಲ್ಲಿ ಬೆಂಗಳೂರಿನ 'ಉಡುಪಿ ಶ್ರೀಕೃಷ್ಣದರ್ಶಿನಿ' ಎಂಬ ಹೋಟೆಲಿನ ಚಿತ್ರಣವಿದೆ. ಕಥೆಯಲ್ಲಿ ಮೂಡಿ ಬಂದಿರುವ ಸನ್ನಿವೇಶವೊಂದರ ಮೂಲಕ ನಗರದಲ್ಲಿ ಹೋಟೆಲು ಸ್ಥಾಪಿತವಾಗಿ ಎದುರಿಸುವ ಸಮಸ್ಯೆಗಳನ್ನು ಇಲ್ಲಿ ಕಾಣಬಹುದು. ನಗರದಲ್ಲಿ ಕೃಷ್ಣಭಟ್ಟರ ಹೋಟೆಲು ಆಡಂಬರವಿಲ್ಲದೆ ಉದ್ಘಾಟನೆಯಾದದ್ದು, ಮೂರನೇ ದಿನ ಕೃಷ್ಣಭಟ್ಟರು ಗಲ್ಲಾ ಮೇಲೆ ಕುಳಿತಿರುವುದು ಅವರಿಗೆ

ಉಪಗ್ರಹ ಚಂದ್ರನ ಮೇಲೆ ಹೋಟೆಲು ತೆರೆದಂತೆ ಭಾಸವಾಗಿತ್ತು. ಆಗಷ್ಟೆ ಒಂದಿಬ್ಬರು ಗಿರಾಕಿಗಳ ಬೋಣಿಗೆಯಾಗಿತ್ತು. ಆದೂ ಬೈಟೂ ಕಾಫಿ ಬಿಸಿಬಿಸಿ ತಟ್ಟೆ ಇಡ್ಲಿ/ಉದ್ದಿನ ವಡೆ, ಚಟ್ನಿ, ಸಾಂಬಾರ್, ಖಾರಾಬಾತ್, ಕೇಸರಿಬಾತ್, ಪೂರಿ ಸಾಗು, ವೆಜಿಟಬಲ್ ಫಲಾವ್, ಎಲ್ಲವೂ ನಗರ ಜನರಿಗೆಂದೇ ಹೋಟೆಲಲ್ಲಿ ಸಿದ್ಧವಾಗಿದ್ದವು. ಆದರೆ ಅವುಗಳನ್ನು ಕುಳಿತು ತಿನ್ನಲು ಗಿರಾಕಿಗಳೇ ಬರದಿರುವುದನ್ನು ಹೋಟೆಲು ಮಾಲೀಕರು ಕಾದು ಕುಳಿತಿದ್ದರು. ಹೀಗಿರುವಾಗ ಒಬ್ಬಾತ ನೀಟಾಗಿ ಬಟ್ಟೆ ಧರಿಸಿಕೊಂಡು ಹೋಟೆಲು ಗಲ್ಲಾದ ಹತ್ತಿರ ಬಂದು ನಿಲ್ಲುತ್ತಾನೆ. ಇದನ್ನರಿತ ಭಟ್ಟರು ನಗರ ಹೋಟೆಲು ಭಾಷಾಶೈಲಿಯಲ್ಲಿ ಏನ್ಬೇಕು ಕೂತ್ಕೊಳ್ಳಿ ಸಾರ್ ಎಂದು ನಯವಾಗಿ ಸ್ವಾಗತಿಸಿದ್ದು ನಗರದ ಸಾಂಕೇತಿಕ ರೂಪವೆಂದೇ ಹೇಳಬಹುದು. ಬಂದಾತ ತಿಂಡಿ-ತಿನಿಸುಗಳ ಬದಲಾಗಿ ಹೋಟೆಲು ಪ್ರಾರಂಭಿಸಿದ್ದರ ಪರವಾನಿಗೆ ಬೇಡುತ್ತಾನೆ. ಇದನ್ನು ಕೇಳಿದ ಭಟ್ಟರ ಮುಖ ಕಳೆಗುಂದುತ್ತದೆ. ಬಂದವರ್ಯಾರು ಅಲ್ಲ ನಗರ ಪಾಲಿಕೆಯ ಅಧಿಕಾರಿ ಎಂದು ತಿಳಿದಾಗ ಭಟ್ಟರು ತಬ್ಬಿಬ್ಬಾಗುತ್ತಾರೆ. ಪರವಾನಿಗಿ ಹೊಂದಿಲ್ಲದ್ದನ್ನು ಭಯಭೀತನಾಗಿ ಅಧಿಕಾರಿಗೆ ತಿಳಿಸುತ್ತಾನೆ. ಅಧಿಕಾರಿ ಪರವಾನಿಗೆ ಇಲ್ಲದೆ ನಗರದಲ್ಲಿ ಹೋಟೆಲು ನಡೆಸುವಂತಿಲ್ಲವೆನ್ನುತ್ತಾನೆ. ಅಲ್ಲದೆ ಒಂದು ಸಾವಿರ ದಂಡ ಮತ್ತು ಹೋಟೆಲನ್ನು ಮುಚ್ಚಿಸಲು ಅಧಿಕಾರಿ ಶಿಫಾರಸ್ಸು ಮಾಡುವುದಾಗಿ ದರ್ಪ ಮೆರೆಯುತ್ತಾನೆ. ಭಟ್ಟರನ್ನು ಹೆದರಿಸಿ-ಬೆದರಿಸಿ ಐದು ನೂರರ ಎರಡು ನೋಟುಗಳಿಗೆ ಪುಸಲಾಯಿಸುತ್ತಾನೆ. ಅಲ್ಲಿ ಒಂದು ದೋಸೆ ತಿಂದು ಮತ್ತೆ ಐದು ಮಸಾಲೆ ದೋಸೆ ಪಾರ್ಸಲ್‌ಗಾಗಿ ಆದೇಶಿಸುತ್ತಾನೆ. ಇದನ್ನು ಕೇಳಿದ ಭಟ್ಟರು ನಗರದಲ್ಲಿ ಹೋಟೆಲಿಗೆ ಹೀಗೂ ಉಂಟಾ ಎನ್ನುವುದರೊಂದಿಗೆ ಅಧಿಕಾರಿಗೆ ಹಿಡಿ ಶಾಪ ಹಾಕುತ್ತಾರೆ.

ಮಧ್ಯಾಹ್ನ ಎರಡು ಗಂಟೆಗೆ ನಗರ ಹೋಟೆಲಿಗೆ ಮತ್ತೊಬ್ಬ ಪಾಲಿಕೆ ಆರೋಗ್ಯ ಅಧಿಕಾರಿ ಹೋಟೆಲು ಮಾಲೀಕರ ಕೌಂಟರಿನ ಮುಂದೆ ಬಂದು ನಿಲ್ಲುತ್ತಾನೆ. ಈಗಾಗಲೆ ಪರಿಸ್ಥಿತಿಯನ್ನು ಗಮನಿಸಿದ್ದ ಹೋಟೆಲು ಭಟ್ಟರು ಐದು ನೂರರ ನೋಟನ್ನೇ ತಳ್ಳುತ್ತಾರೆ. ಪಡೆದ ಅಧಿಕಾರಿ ಮೂರು ಜನ ಮಾಡುವ ಪುಕ್ಕಟೆ ಊಟ ಮಾಡಿ ಜಾಗ ಖಾಲಿ ಮಾಡುತ್ತಾನೆ. ಗ್ಯಾಸಿನವನೊಬ್ಬ ಬಂದು ಇಪ್ಪತ್ತು ರೂಪಾಯಿ ಟಿಪ್ಸ್‌ನ ರೂಪದಲ್ಲಿ ಪಡೆಯುತ್ತಾನೆ. ಇವನೂ ಪುಗ್ಸಟ್ಟೆ ಚೌಚೌಬಾತ್ ಸೇವಿಸಿ ಹೊರಡುತ್ತಾನೆ. ನಗರದಲ್ಲಿ ನಡೆಯುವ ರಾಜ್ಯೋತ್ಸವ, ಅಣ್ಣಮ್ಮನ ಜಾತ್ರೆ, ಗಣಪತಿ ಉತ್ಸವ, ಮುಂತಾದವುಗಳಿಗೂ ನಗರ ಹೋಟೆಲು ಸಾವಿರ ಸಾವಿರ ತೆರಬೇಕಾಗುತ್ತಿತ್ತು.

ನಗರದಲ್ಲಿ ಹೋಟೆಲು ನಡೆಸುವ ಸಲುವಾಗಿ ಬಿಡಿ ವ್ಯಾಪಾರಿಗಳ ಮೊರೆ ಹೊಕ್ಕಾಗ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಫಿಗ್ಮಿ ಕಲೆಕ್ಟರ್, ಹಾಲು ಮಾರುವವರು, ತರಕಾರಿ ತರುವವರು, ಕಾಫಿ-ಟೀ ಪುಡಿ ಪೂರೈಸುವವರು, ಲೈಟ್ ಬಿಲ್ಲು ಬರೆಯುವವರು, ನೀರಿನ ಬಿಲ್ಲು, ವಿತರಿಸುವವರು, ಬಿಲ್ಡಿಂಗ್ ಮಾಲೀಕರು, ದಿನಿಸಿ ಸರಬರಾಜು ಮಾಡುವವರು, ಹೂವು ಮಾರುವವರು, ನೀರಿನ ಟ್ಯಾಂಕರ್ ಚಾಲಕ ಮತ್ತು ಕ್ಲೀನರ್, ಮುನ್ಸಿಪಾಲಿಟಿ ಕಸ ಗುಡಿಸುವವರು, ಕರೆಂಟ್ ರೀಪೇರಿ

ಮಾಡುವವರು, ಬ್ಯಾಂಕ್ ಮ್ಯಾನೇಜರುಗಳು ಮುಂತಾದವರಿಗೆಲ್ಲಾ ನಗರ ಹೋಟೆಲು ಪುಸ್ಗೆಟ್ಟೆ ಊಟ-ತಿಂಡಿ ಪೂರೈಸುವ ಕ್ರಮ ಸರ್ವೇಸಾಮಾನ್ಯವಾಗಿದ್ದುದನ್ನು 'ಉಡುಪಿ ಶ್ರೀಕೃಷ್ಣದರ್ಶನಿ' ಮಾಲೀಕರು ಅನುಭವಿಸಿದ ನಗರ ಹೋಟೆಲಿನ ಸ್ವರೂಪವನ್ನು ಕಥೆಯು ಕಲಾತ್ಮಕವಾಗಿ ಚಿತ್ರಿಸಿದೆ.

ಮುಂಬಯಿಯಲ್ಲಿ ಸ್ವಂತ ಹೋಟೆಲು ಮಾಲೀಕರಾಗಿದ್ದ ಎಂ.ಬಿ. ಕುಕ್ಯಾನ್ ಅವರು ಹೋಟೆಲು ಉದ್ಯಮದ ವಿವಿಧ ಅನುಭವಗಳನ್ನು ತಮ್ಮ ಸಣ್ಣಕಥೆಗಳಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಅವುಗಳಲ್ಲಿ 'ಮೃಣಾಲಿನಿ', 'ಎಕ್ಸ್‌ಪರ್ಟ್ ಮ್ಯಾನೇಜರ' ಮತ್ತು 'ಕಳ್ಳರ ಕಳ್ಳ' ಎಂಬ ಕಥೆಗಳು ಮುಖ್ಯವೆನಿಸುತ್ತವೆ. ಮೃಣಾಲಿನಿ ಕಥೆಯು ಗ್ರಾಹಕ ಹೆಣ್ಣುಮಗಳೊಬ್ಬಳ ಮೋಸದಾಟವನ್ನು ಚಿತ್ರಿಸುತ್ತದೆ. ಈ ಕಥೆಯಲ್ಲಿ ನಗರಪ್ರದೇಶದ ಹೋಟೆಲಲ್ಲಿ ನಡೆಯುವ ವಿವಿಧ ಮೋಸದಾಟಗಳ ಚಿತ್ರಣವಿದೆ. ನಗರ ಸಂಸ್ಕೃತಿಯೊಳಗಿನ ನೇತ್ಯಾತ್ಮಕ ಅಂಶಗಳನ್ನು ನಗರವಾಸಿಗಳ ಮೋಸದಾಟಗಳನ್ನು ಹೋಟೆಲಿನ ಚಿತ್ರಣದ ಮೂಲಕ ಕಟ್ಟಿಕೊಡುವ ಪ್ರಯತ್ನ ಪ್ರಸ್ತುತ ಕಥೆಯಲ್ಲಿದೆ. ಕಥೆಯ ಸನ್ನಿವೇಶದ ಮೂಲಕವೇ ನಾವಿದನ್ನು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. "ಶುಕ್ರದೆಸೆಯನ್ನು ಮೆಲುಕು ಹಾಕುವ ಶೆಟ್ಟರಿಗೆ ಆ ದಿನ ಅವರ ಹೋಟೆಲಿಗೆ ಬಂದ ದಡೂತಿ ಹೆಂಗಸಿನ ಬಿಲ್ಲನ್ನು ಕಂಡು ಸಂತೋಷವಾಗುತ್ತದೆ. ಆದರೆ ಬಿಲ್ಲು ಕೊಡಲು ಹೋದಾಗ ಅವಳ ಪರ್ಸು ಕಳೆದುಹೋಗಿದೆ ಎಂದು ಹೋಟೆಲಲ್ಲಿ ಗ್ರಾಹಕರ ಮತ್ತು ಮಾಲೀಕರೆದುರಿಗೆ ಗುಲ್ಲೆಬ್ಬಿಸುತ್ತಾಳೆ. ಅವಳ ಜೊತೆ ಇದ್ದ ಹುಡುಗನನ್ನು ಬಿಟ್ಟು ಹೋಗಿ ಅವನಿಂದ ಕೆಲಸ ಮಾಡಿಸುವಂತೆ ಕೇಳಿಕೊಳ್ಳುತ್ತಾಳೆ. ತನ್ನ ಜೊತೆ ಯಾರನ್ನಾದರೂ ಕಳಿಸಿದರೆ ಹಣ ಪಾವತಿಸುತ್ತೇನೆಂದು ತನ್ನ ಚಾಲಾಕಿತನ ತೋರಿಸುತ್ತಾಳೆ (ಕುಕ್ಯಾನ ಎಂ.ಬಿ.; ೨೦೦೪; ಪು.೪೦)." ಇಲ್ಲಿ ಓದುಗರಿಗೆ ಅವಳೊಬ್ಬಳು ಮೋಸಗಾತಿ ಹೆಂಗಸು ಎಂದು ತಿಳಿದುಕೊಳ್ಳುವುದು ಕಷ್ಟವಾಗುವುದಿಲ್ಲ. ಆದರೆ ಅದೇ ಕಥೆಯಲ್ಲಿ ಸಕ್ಕರೆಯ ಅಭಾವವಿದ್ದ ಆ ಕಾಲದಲ್ಲಿ ಸಕ್ಕರೆಯ ಕಾಳಸಂತೆಯ ಮಾರಾಟದಲ್ಲಿ ಆಗುವ ಮೋಸದಾಟ ಹಾಗೂ ಹೋಟೆಲಲ್ಲಿ ಗ್ರಾಹಕರು ಮೋಸದಲ್ಲಿ ಜಾರುವ ಪರಿ ಮಾತ್ರ ಇಲ್ಲಿ ಅಚ್ಚರಿ ಹುಟ್ಟಿಸುತ್ತದೆ. ಪ್ರಸ್ತುತ ಕಥೆಯಲ್ಲಿ ತಾವು ಎಷ್ಟೇ ಜಾಗ್ರತರಾಗಿದ್ದರೂ ಅಲ್ಲಿನ ನಯವಂಚಕರು ಹೇಗಾದರೂ ಮಾಡಿ ಹೋಟೆಲಲ್ಲಿ ತಮ್ಮನ್ನು ಮೋಸದ ಬಲೆಯಲ್ಲಿ ಸಿಲುಕಿಸುತ್ತಾರೆ ಎಂಬ ಪ್ರಜ್ಞೆಯು ಮೂಡಿಬಂದಿದೆ.

'ಎಕ್ಸ್‌ಪರ್ಟ್ ಮ್ಯಾನೇಜರ' ಕಥೆಯು ವಿದೇಶಿ ಕಂಪನಿಯೊಂದರ ಕ್ಯಾಂಟೀನ್ ಮ್ಯಾನೇಜರೊಬ್ಬರ ತಮ್ಮ ಮೋಸದಾಟದ ಪರಿಣಾಮದಿಂದಾಗಿ ಉದ್ಯೋಗವನ್ನೇ ಕಳೆದುಕೊಂಡ ಸನ್ನಿವೇಶವನ್ನು ಕಟ್ಟಿಕೊಡುತ್ತದೆ. ಲಿಂಡಿಯಾ ಕಂಪನಿಯ ಕ್ಯಾಂಟೀನ್ ಮ್ಯಾನೇಜರ್ ಹುದ್ದೆಗಾಗಿ 'ಟೈಮ್ಸ್' ಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತನ್ನು ನೋಡಿ ರಾಮಚಂದ್ರನು ಅರ್ಜಿ ಸಲ್ಲಿಸುತ್ತಾನೆ. ಸಂದರ್ಶನಕ್ಕೆ ಹಾಜರಾದ ಹಲವಾರು ನಿರುದ್ಯೋಗಿ ಯುವಕರ ಪೈಕಿ ರಾಮಚಂದ್ರನು ಆಯ್ಕೆಯಾಗುತ್ತಾನೆ.

ಕ್ಯಾಂಟೀನ್ ಮ್ಯಾನೇಜರ್ ಹುದ್ದೆಗೇರಿದ ಎರಡು ತಿಂಗಳಲ್ಲಿ ರಾಮಚಂದ್ರನು ಹಲವು ಬದಲಾವಣೆಗಳನ್ನು ತರುತ್ತಾನೆ. ರಾಮಚಂದ್ರನ ಕಾರ್ಯದಕ್ಷತೆ, ಕೊಡಮಾಡುವ ತಿಂಡಿಗಳ ರುಚಿ ಸವಿದ ಕಂಪನಿ ಕೆಲಸಗಾರರು ಖುಷಿ ಪಡುತ್ತಾರೆ. ಕ್ಯಾಂಟೀನಿನ ಹೊಸ ಮ್ಯಾನೇಜರ್‌ನ ಇಂಗ್ಲಿಷ್ ಭಾಷಾಶೈಲಿಗೆ ವಿದೇಶಿಯ ಕಾರ್ಮಿಕರು ಮತ್ತು ಅಧಿಕಾರಿಗಳು ಮರುಳಾಗಿದ್ದರು. ಕಂಪನಿಯ ಇಡೀ ಆಡಳಿತ ವರ್ಗವು ಕ್ಯಾಂಟೀನ್‌ನಲ್ಲಿ ರಾಮಚಂದ್ರನು ಕೆಲಸಗಾರರು, ತಿಂಡಿ-ತಿನಿಸುಗಳು ಹಾಗೂ ಸಲಕರಣೆಗಳನ್ನು ಮ್ಯಾನೇಜು ಮಾಡುವ ಚಾಕಚಕ್ಯತೆ ನೋಡಿ ಅಧಿಕಾರಿಗಳು ಮತ್ತು ಗ್ರಾಹಕರು ಖುಷಿ ಪಡುತ್ತಿದ್ದರು. ಲಿಂಡಿಯಾ ಕಂಪನಿಯಲ್ಲಿನ ಕಂಟ್ರ್ಯಾಕ್ಟರ್ ಹಾಗೂ ಕ್ಯಾಂಟೀನ್‌ನ ಮಾಲೀಕರಾದ ಜಗನ್ನಾಥರು ಉತ್ತಮ ಮ್ಯಾನೇಜರ್‌ನ ಆಯ್ಕೆಯಿಂದಾಗಿ ತುಸು ಖುಷಿ ಪಡುತ್ತಿದ್ದರು. ರಾಮಚಂದ್ರನು ಉತ್ತಮ ಗುಣ ಪ್ರದರ್ಶನ ಮತ್ತು ಶುಚಿತ್ವದ ಉಪಾಹಾರ ಪೂರೈಸುವುದಕ್ಕಾಗಿ ಕಂಪನಿಯ ಇಡೀ ಕೆಲಸಗಾರರು ಹಾಗೂ ಅಧಿಕಾರಿಗಳ ಹೃದಯಗಳು ಸದಾ ಮಿಡಿಯುತ್ತಿದ್ದವು. ರಾಮಚಂದ್ರನು ತನ್ನ ಅಚ್ಚುಕಟ್ಟಾದ ಕಾರ್ಯದಕ್ಷತೆಯಿಂದ ಕ್ಯಾಂಟೀನ್ ಮಾಲೀಕರ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಹೀಗಿರುವಾಗ ಕಂಪನಿಯು ಅಡುಗೆ ಅನಿಲದ ಜೊತೆಗೆ ಸೀಮೆ ಎಣ್ಣೆ ಪೂರೈಸುವ ಒಪ್ಪಂದವನ್ನು ಮಾಡಿಕೊಂಡಿತ್ತು. ಇದರಿಂದ ಕ್ಯಾಂಟೀನ್‌ನ ಹೊಸ ಎಕ್ಸ್‌ಪರ್ಟ್ ಮ್ಯಾನೇಜರ್‌ನ ವ್ಯಕ್ತಿತ್ವದಲ್ಲಿ ಕಪ್ಪುಚುಕ್ಕೆ ಮೂಡಿಸುವ ಸಂದರ್ಭ ಬಂದೊದಗುತ್ತದೆ. ರಾಮಚಂದ್ರನು ಸೀಮೆ ಎಣ್ಣೆ ಹೊರಗಿನಿಂದ ತರಿಸಿಕೊಳ್ಳದೆಯೇ ಕೋಟಾ ಬಿಲ್ಲನ್ನು ಹಚ್ಚಿ ಹಣ ಪಡೆಯುತ್ತಾನೆ. ಲಿಂಡಿಯಾ ಕಂಪನಿಯ ಸುಸಜ್ಜಿತವಾದ ಆಡಳಿತ ವ್ಯವಸ್ಥೆಯ ಕಣ್ಣಿಗೆ ಮಣ್ಣೆರಚಿ ಮುಖ್ಯದ್ವಾರದಿಂದ ಹಿಡಿದು ಮ್ಯಾನೇಜಿಂಗ್ ಡೈರೆಕ್ಟರ್‌ವರೆಗಿನ ವ್ಯಕ್ತಿಗಳ ಏಳು ಮಂದಿಯ ನಕಲಿ ಸಹಿ ಮಾಡಿ ಹಣ ದುರುಪಯೋಗಪಡಿಸಿಕೊಳ್ಳುತ್ತಾನೆ. ಮ್ಯಾನೇಜರ್‌ನ ಈ ಗುಪ್ತ ವ್ಯವಹಾರಗಳು ಅಕೌಂಟೆಂಟ್ ರಾಜನ ಮೂಲಕ ಅಧಿಕಾರಿಗಳ ಗಮನಕ್ಕೆ ಬರುತ್ತವೆ. ಸಂಬಂಧಪಟ್ಟ ವ್ಯಕ್ತಿಗಳ ನೈಜ ಸಹಿಗಳಂತೆಯೇ ಕೋಟಾ ಸಹಿಗಳನ್ನು ಮಾಡಿದ ಮ್ಯಾನೇಜರನ ಚಾಕಚಕ್ಯತೆಯನ್ನು ಕಂಡು ಕಂಪನಿ ಅಧಿಕಾರಿಗಳು ದಂಗಾಗುತ್ತಾರೆ. ಅಸಲಿ ಸಹಿಗಳ ತಲೆ ಬಡಿಯುವ ಮಟ್ಟಕ್ಕೆ ರಾಮಚಂದ್ರನ ನಕಲಿ ಸಹಿಗಳು ಇಡೀ ಲಿಂಡಿಯಾ ಕಂಪನಿಯ ಆಡಳಿತ ವ್ಯವಸ್ಥೆ ಮತ್ತು ಕ್ಯಾಂಟೀನ್‌ನ ವ್ಯವಸ್ಥಾಪಕ ಮಂಡಳಿಗೆ ದಂಗುಪಡಿಸಿದ್ದವು. ಮ್ಯಾನೇಜರ್‌ನ ಈ ಕುತಂತ್ರವನ್ನು ಆಯ್ಕೆ ಮಾಡುವ ಸಲುವಾಗಿ ಕಂಪನಿಯ ನೌಕರರು ಮತ್ತು ಅಧಿಕಾರಿಗಳು ಉನ್ನತ ಅಧಿಕಾರಿಗಳ ಬಳಿಗೆ ತೆರಳುತ್ತಾರೆ. ರಾಮಚಂದ್ರನ ಕಪಟ ಕಾರ್ಯಕೌಶಲ್ಯವು ಕಂಪನಿಯ ಹಾಗೂ ಕ್ಯಾಂಟೀನ್‌ನ ಮಾಲೀಕನನ್ನೂ ದಿಗ್ಭ್ರಮೆಗೊಳಿಸುತ್ತದೆ. ಅಧಿಕಾರಿಗಳ ನಕಲಿ ಸಹಿ ಮಾಡಿ ಸೀಮೆ ಎಣ್ಣೆ ಲಪಟಾಯಿಸಿದ ಸುದ್ದಿಯು ಇಡೀ ಕಂಪನಿಯ ಆಡಳಿತ ವರ್ಗವು ಗಾಂಭೀರ್ಯದಿಂದ ಯೋಚಿಸುವ ಸನ್ನಿವೇಶಕ್ಕೀಡು ಮಾಡುತ್ತದೆ. ವಿದೇಶಿ ಜನರಲ್ ಮ್ಯಾನೇಜರ್, ಕ್ಯಾಂಟೀನ್‌ನ ಮಾಲೀಕರು, ಉನ್ನತ ಅಧಿಕಾರಿಗಳು ಹಾಗೂ ಅಕೌಂಟೆಂಟ್

ರಾಜನ್ ಈ ವಿಷಯವಾಗಿ ತುರ್ತು ಸಭೆ ಸೇರಿ ಚರ್ಚಿಸುತ್ತಾರೆ. ಈ ಎಕ್ಸ್‌ಪರ್ಟ್ ಮ್ಯಾನೇಜರನು ಲಿಂಡಿಯಾ ಕಂಪನಿಯನ್ನು ಹೇಗೆ ಪ್ರವೇಶ ಪಡೆದನು ಎಂಬುದಾಗಿ ಕ್ಯಾಂಟೀನ್ ಮಾಲೀಕರನ್ನು ತರಾಟೆಗೆ ತೆಗೆದುಕೊಳ್ಳುವ ಸಂದರ್ಭವು ಏರ್ಪಡುತ್ತದೆ. ಕಂಪನಿ ಮತ್ತು ಕ್ಯಾಂಟೀನ್‌ನ ಶಿಸ್ತುಬದ್ಧ ವ್ಯವಸ್ಥೆಯೊಳಗೆ ರಾಮಚಂದ್ರನು ನಡೆಸಿದ ಈ ಕಳ್ಳ ವ್ಯವಹಾರವು ಆತನ ಬಗೆಗೆ ಅಧಿಕಾರಿಗಳಿಗೆ ಅಪನಂಬಿಕೆ ಹುಟ್ಟುವಂತೆ ಮಾಡುತ್ತದೆ. ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಆ ಎಕ್ಸ್‌ಪರ್ಟ್ ಮ್ಯಾನೇಜರ್‌ನನ್ನು ತಮ್ಮ ಮುಂದೆ ಹಾಜರುಪಡಿಸುವಂತೆ ಆಡಳಿತ ವ್ಯವಸ್ಥೆಗೆ ಆದೇಶಿಸುತ್ತಾರೆ. ಅದರಂತೆ ಹೊರಗಡೆ ನಿಂತಿದ್ದ ರಾಮಚಂದ್ರನನ್ನು ಕಂಪನಿಯು ಕ್ಯಾಬಿನ್‌ನೊಳಕ್ಕೆ ಕರೆದುತರುತ್ತಾರೆ. ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರರು ರಾಮಚಂದ್ರನ ಮೋಸ ಮಾಡುವ ತಜ್ಞತೆಗೆ ವ್ಯಂಗ್ಯವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತಾರೆ. 'ನಿಮ್ಮ ತಜ್ಞತೆಗೆ ಲಿಂಡಿಯಾ ಕಂಪನಿಯ ಕ್ಯಾಂಟೀನ್ ತೀರ ಸಣ್ಣದಾಯಿತು. ಇಲ್ಲಿ ಸೀಮೆ ಎಣ್ಣೆ ಅಲ್ಲದೆ ಬೇರೆನೂ ಸಿಗಲಾರದು. ನೀವೊಂದು ದೊಡ್ಡ ರಾಷ್ಟ್ರೀಕೃತ ಬ್ಯಾಂಕನ್ನು ಕೊಳ್ಳೆಯೊಡೆಯಲು ಸಮರ್ಥಿಸಿದ್ದೀರಿ' ಎಂದು ವ್ಯಂಗ್ಯವಾಗಿ ಸೂಚಿಸಿ ಅವರು ರಾಮಚಂದ್ರನ ಮೋಸದ ಮುಖವನ್ನು ನೋಡಲಾರದೆ ಆತನನ್ನು ಕ್ಯಾಂಟೀನ್ ಹಾಗೂ ಕಂಪನಿಯ ಮುಖ್ಯದ್ವಾರದಿಂದ ಹೊರದೂಡುತ್ತಾರೆ. ಹೀಗೆ ನಗರಪ್ರದೇಶದಲ್ಲಿನ ಕಂಪನಿಯ ಕ್ಯಾಂಟೀನ್‌ಗಳಲ್ಲಿ ನಡೆಯುವ ಅವ್ಯವಹಾರಗಳನ್ನು 'ಎಕ್ಸ್‌ಪರ್ಟ್ ಮ್ಯಾನೇಜರ' ಕಥೆಯು ಮನೋಜ್ಞವಾಗಿ ಚಿತ್ರಿಸುತ್ತದೆ. ಶೇಠ ಜಗನ್ನಾಥನಂತ ದೊಡ್ಡ ಕಾಂಟ್ರಾಕ್ಟರ್ ಅಡಿಯಲ್ಲಿ ಕೆಲಸ ಮಾಡುವ ಜನಗಳು ಎಂತೆಂತಹ ವಂಚನೆಗಳನ್ನು ನಗರದಲ್ಲಿ ನಡೆಸುತ್ತಾರೆಂಬುದನ್ನು ಹೋಟೆಲಿನ ಚಿತ್ರಣದ ಮೂಲಕ ಈ ಕಥೆಯು ಬಿಚ್ಚಿಡುತ್ತದೆ.

'ಕಳ್ಳರ ಕಳ್ಳ' ಕಥೆಯು ವೇಟರ್ ಸೋಗಿನಲ್ಲಿ ಬಂದು ಗ್ರಾಹಕರ ಬೆಲೆ ಬಾಳುವ ಮೊಬೈಲ್ ಫೋನ್‌ನನ್ನು ಕದಿಯುವ ಖದೀಮರ ಕೃತ್ಯವನ್ನು ಚಿತ್ರಿಸುವುದರ ಜೊತೆಗೆ ದೂರು ಕೊಡಲು ಹೋದ ದೂರುದಾರರನ್ನು ಸುಲಿಗೆ ಮಾಡುವ ಪೊಲೀಸರ ಮೋಸದಾಟವನ್ನು ಕಟ್ಟಿಕೊಡುತ್ತದೆ. ವೇಟರ್ ಕೆಲಸ ಕೇಳಿಕೊಂಡು 'ನಿತ್ಯಾನಂದ ಹೋಟೆಲಿ'ನ ಮಾಲೀಕರಾದ ಮೋನಪ್ಪನವರ ಬಳಿ ಒಬ್ಬ ತರುಣ ಬರುತ್ತಾನೆ. ಆಕರ್ಷಕ ಮುಖದ ತರುಣನೊಬ್ಬ ಕ್ಯಾಶ್ ಕೌಂಟರಿನ ಬಳಿ ಬಂದು ನಿಲ್ಲುತ್ತಾನೆ. ಈಗಾಗಲೇ ಎಂಟು ಮಂದಿಯಲ್ಲಿ ಅವತ್ತು ನಾಲ್ಕು ಮಂದಿ ಗೈರು ಹಾಜರಾಗಿದ್ದರು. ಹೋಟೆಲಲ್ಲಿ ಗ್ರಾಹಕರ ದಟ್ಟಣೆಯಿಂದಾಗಿ ಬಂದ ಯುವಕನನ್ನು ನೋಡಿ ಸಂತಸಪಡುತ್ತಾರೆ. ಕೆಲಸ ಅರಸಿಕೊಂಡು ಬಂದವನೇ ಸಂದೀಪ ಗಾಂಗೊಲಿ ಎಂದು ತನ್ನ ಹೆಸರನ್ನು ಸಾದರಪಡಿಸುತ್ತಾನೆ. ತಾನು 'ವೈಶಾಲಿ ಹೋಟೆಲಲ್ಲಿ ಮೂರು ವರ್ಷ; ವೆಲ್‌ಕಮ್ ಹೋಟೆಲಲ್ಲಿ ಐದು ವರ್ಷ ಹಾಗೂ ಆನಂದಾಶ್ರಮದಲ್ಲಿ ಕೆಲಸ ಮಾಡಿದ ವಿವರವನ್ನು ಮೋನಪ್ಪನವರಲ್ಲಿ ಬಿನ್ನವಿಸಿಕೊಳ್ಳುತ್ತಾನೆ. ಇದರಿಂದ ಹೋಟೆಲು ಮಾಲೀಕರಿಗೆ ಗಾಂಗೊಲಿಯ

ಬಗೆಗೆ ಒಂದು ರೀತಿಯ ಭರವಸೆ ಮೂಡುತ್ತದೆ. ಶೇಠ್ ಮೋನಪ್ಪ ಹಾಗೂ ಉದ್ಯೋಗಾಕಾಂಕ್ಷಿ ಗಾಂಗೊಲಿಯ ಮಾತುಕತೆಯ ಸನ್ನಿವೇಶವೊಂದರ ಮೂಲಕ ಇದನ್ನು ಖಚಿತಪಡಿಸಿಕೊಳ್ಳಬಹುದಾಗಿದೆ'. "ಶೇಠ್ ಮೋನಪ್ಪನವರು ಇವನು ಇಂದು ಬಂದು ನಾಳೆ ಹೋಗುವವನಲ್ಲ ಎಂದು ಮನಸ್ಸಿನಲ್ಲಿ ಖುಷಿಗೊಂಡು ಹಾಗಾದರೆ ನೀನು ಇಂದೇ ಕೆಲಸಕ್ಕೆ ತಾಗು" ಎಂದು ಆಗಂತುಕನ ಮುಖ ನೋಡಿದರು. ಸಂದೀಪ ತನ್ನ ಎಲ್ಲ ಹಲ್ಲುಗಳನ್ನು ಬಿಟ್ಟು ತನ್ನೊಪ್ಪಿಗೆಯನ್ನು ಸೂಚಿಸಿ ಹೇಳಿದ. ಶೇಠ್ ನಾನು ನಾಳೆ ಬೆಳಿಗ್ಗೆ ಬಂದು ಕೆಲಸಕ್ಕೆ ಸೇರುತ್ತೇನೆ. ಇಂದು ನನ್ನ ಅಣ್ಣ ಆಸ್ಪತ್ರೆಯಲ್ಲಿದ್ದಾನೆ. ಅವನನ್ನು ನೋಡಲು ನಾನು ಹೋಗಬೇಕಾಗಿದೆ. ಇಂದು ನಾನು ಸ್ವಲ್ಪ ಹೋಟೆಲಿನ ಒಳಗೆ ಹೋಗಿ ನೋಡಿಕೊಂಡು ಬರುತ್ತೇನೆ ಎಂದು ಅವರ ಅಪ್ಪಣೆಗಾಗಿ ಹಲ್ಲುಬಿಟ್ಟು ನಿಂತ ದೀನನಾಗಿ ಶೇಠ್ ಟೇಬಲ್ ಬಾಯ್‌ನನ್ನು ಕರೆದು "ಈ ಮನುಷ್ಯನನ್ನು ಒಳಗೆ ಕರೆದುಕೊಂಡು ಹೋಗು, ಅವನು ನಾಳೆಯಿಂದ ಕೆಲಸಕ್ಕೆ ಸೇರುತ್ತಾನೆ. ಅವನಿಗೊಂದು ಕಫ್ ಚಹಾ ಕೂಡ ಕೊಡು" ಎಂದರು ಶೇಠ್.

ಸಾಹೇಬರ ಚಹಾ ಕುಡಿಸುವ ಔದಾರ್ಯಕ್ಕಾಗಿ ಮತ್ತೊಮ್ಮೆ ಹಲ್ಲುಬಿಟ್ಟು ಹೋಟೆಲಿನ ಒಳಕ್ಕೆ ನಡೆದು ಹೋಟೆಲಿನ ಸುತ್ತಲೂ ನೋಡಲಾರಂಭಿಸಿದ ಸಂದೀಪ್. 'ಟೇಬಲ್ ಬಾಯ್' ಕೆಲಸ ಮಾಡುವವರು ಚಹಾ ಕುಡಿಯುವುದನ್ನು ಕಂಡು ಕಿರುಚುವ ಶೇಠ್ ಈ ದಿನಗಳಲ್ಲಿ ಕೆಲಸ ಬೇಕೆಂದು ಬರುವವರಿಗೆ ಚಹಾ ಕುಡಿಸುವಷ್ಟು ಬದಲಾಗಿದ್ದಾರೆಂದು ಮನಸ್ಸಿನಲ್ಲೇ ಆಲೋಚಿಸಿ ನಸುನಗುತ್ತಾನೆ"(ಕುಕ್ಯಾನ ಎಂ.ಬಿ.; ೨೦೦೭; ಪು. ೨೧-೨೨). ಪ್ರಸ್ತುತ ದಿನಮಾನಗಳಲ್ಲಿ ಹೋಟೆಲು ಮಾಲೀಕರು ಬದಲಾಗಿದ್ದಾರೆ. ಸಮಕಾಲೀನ ಸಂದರ್ಭದಲ್ಲಿ ಹೋಟೆಲುಗಳಲ್ಲಿ ಕೆಲಸ ಮಾಡಲು ಕಾರ್ಮಿಕರೇ ಸಿಗುವುದಿಲ್ಲ. ಮಂಗಳೂರಿನವರಂತೂ ಪ್ರಸ್ತುತ ದಿನಮಾನಗಳಲ್ಲಿ ನಗರಗಳಿಗೆ ಬರುವುದೇ ಅಪರೂಪವಾಗಿದೆ. ಬಂದರೂ ಅವರು ಹೋಟೆಲುಗಳಲ್ಲಿ ಕೆಲಸ ಮಾಡುವುದಿಲ್ಲ. ಹಲವು ವರ್ಷಗಳಲ್ಲಿ ಕರ್ನಾಟಕದ ಗೌಡರು ಹೋಟೆಲು ಕಾರ್ಮಿಕರಾಗಿ ಕೆಲಸ ನಿರ್ವಹಿಸಿರುತ್ತಾರೆ. ಈ ದಿನಮಾನಗಳಲ್ಲಿ ಅವರು ಕಡಿಮೆಯಾಗಿದ್ದಾರೆ. ಹೋಟೆಲು ಉದ್ಯಮಿಗಳ ಸಂಖ್ಯೆ ದಿನೇ ದಿನೇ ಕಾಲದ ವಿಶೇಷತೆಯಿಂದ ಹೆಚ್ಚಾಗತೊಡಗಿರುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ನೇಪಾಳಿಗರು, ಬಂಗಾಳಿಗಳು, ಅಸ್ಸಾಂನವರು ಮತ್ತು ಬಿಹಾರಿಗಳು ಹೋಟೆಲು ಕಾರ್ಮಿಕರ ಕೊರತೆಯನ್ನು ನೀಗಿಸುತ್ತಿದ್ದಾರೆ. ಈ ಕಾರ್ಮಿಕರು ಕೆಲವರು ಸಂಬಳ ಪಡೆದು ಮಾರನೇ ದಿನ ಮದುವೆ ಮತ್ತೊಂದಕ್ಕೆ ಊರಿಗೆ ಹೋಗುವವರಿದ್ದಾರೆ. ಅವರು ಆರು ತಿಂಗಳು ತಿರುಗಿ ನಗರ ಮತ್ತು ಹೋಟೆಲನ್ನು ನಡೆಸುವುದಿಲ್ಲ. ಇನ್ನು ಕೆಲವರು ಹೆಂಡತಿ ಹೆರಿಗೆಗೆಂದು ಹೋದವರು ಮತ್ತೊಂದು ಹೆರಿಗೆಯ ತಯಾರಿ ನಡೆಸಿಯೇ ನಗರಗಳಿಗೆ ಹಿಂದಿರುಗುವವರಿದ್ದಾರೆ. ಇದನ್ನರಿತ ಹೋಟೆಲು ಮಾಲೀಕರಾದ ಮಾನಪ್ಪನವರ ಮನೋ ಇಂಗಿತಕ್ಕೆ ಸಂದೀಪ ಗಾಂಗೊಲಿ ಹೋಟೆಲಿನ

ಕೆಲಸ ಅರಸಿಕೊಂಡು ಬಂದು ಗ್ರಾಹಕರಲ್ಲಿ ಮೋಸವೆಸಗುವ ಸನ್ನಿವೇಶವು ಕಥೆಯಲ್ಲಿ ಮೂಡಿಬಂದಿದೆ. "ಸಂದೀಪ ಗಾಂಗೊಲಿ ಹೋಟೆಲಿನ ಸುತ್ತು ತಿರುಗಿ ಆದ ಮೇಲೆ ಮೂಲೆಯಲ್ಲಿ ಕೂತು ಪುಕ್ಕಟೆ ಚಹಾ ಹೀರುತ್ತಿದ್ದ. ಆಗಲೇ ಹೋಟೆಲಿನೊಳಗೆ ನಾಲ್ಕೈದು ಮಂದಿ ಗ್ರಾಹಕರು ಆಗಮಿಸಿದ್ದರು. ಅದರೊಳಗೆ ಒಂದು ಜೋಡಿ ಪ್ರೇಮಿಗಳಿದ್ದರು. ಪ್ರಿಯತಮ ಬಲಗೈಯಿಂದ ತನ್ನ ಪ್ರೇಯಸಿಯ ನಡು ಬಳಸಿ, ಎಡಗೈಯಿಂದ ಮೊಬೈಲ್ ಫೋನಿನ ವಿಶೇಷತೆಯನ್ನು ಬಣ್ಣಿಸುತ್ತಿದ್ದನು. ಪ್ರಿಯತಮೆಯ ಎಡಗೈ ಆತನ ಸೊಂಟವನ್ನು ಆವರಿಸಿತ್ತು. ಬಲಗೈಯಲ್ಲಿ ಆಕೆಯ ಪರ್ಸ್ ಇತ್ತು. ವಾತಾನು ಕೂಲಿತ ಹಾಲಿನ ಬಾಗಿಲನ್ನು ತೆರೆದು ಅವರನ್ನು ಕನಸಿನ ಲೋಕದಿಂದ ಸಂದೀಪ ಎಚ್ಚರಿಸುತ್ತಾನೆ. ಸಂದೀಪನನ್ನು ಉದ್ದೇಶಿಸಿ ಪ್ರೇಮಿಗಳು ವೇಟರ್‌ನನ್ನು ಕಳಿಸಿಕೊಡಲು ಅಹವಾಲನ್ನು ಕೊಡುತ್ತಾರೆ. ಇದನ್ನರಿತ ಸಂದೀಪ ಎರಡು ಲೋಟ ನೀರು ಪ್ರೇಮಿಗಳ ಟೇಬಲಿನ ಮೇಲಿಡುತ್ತಾನೆ. ಮೆನು ಕಾರ್ಡನ್ನು ಟೇಬಲಿನ ಮೇಲಿಡುತ್ತಾನೆ. ಮೆನು ಕಾರ್ಡನ್ನು ನೋಡುವುದಕ್ಕಾಗಿ ಮೊಬೈಲನ್ನು ಪ್ರಿಯತಮ ಮೇಜಿನ ಮೇಲಿಡುತ್ತಾನೆ. ಸಂದೀಪ ಅವರ ಆರ್ಡರನ್ನು ಕೇಳುವುದರೊಂದಿಗೆ ಅವರ ಮೊಬೈಲನ್ನು ಪಡೆಯುತ್ತಾನೆ"(ಕುಕ್ಯಾನ ಎಂ.ಬಿ.; ೨೦೦೭; ಪು. ೩೨-೩೩). ಹೋಟೆಲು ಕಾರ್ಮಿಕ ಕೆಲಸಕ್ಕಾಗಿ ಬಂದ ಗಾಂಗೊಲಿ ಮೊಬೈಲ್ ಕಳ್ಳನಾಗಿ ಹೋಟೆಲಿನಿಂದ ಪರಾರಿಯಾಗುವ ಸನ್ನಿವೇಶವು ಇಲ್ಲಿ ಚಿತ್ರಿತವಾಗಿದೆ.

ಉದ್ಯೋಗ ಕೇಳುವ ನೆಪ ಮಾಡಿಕೊಂಡು ಬಂದು ಹೋಟೆಲು ಗ್ರಾಹಕರ ಮೊಬೈಲ್ ಕದ್ದು ಪರಾರಿಯಾಗುವ ವ್ಯಕ್ತಿಯೊಬ್ಬನ ಮೋಸದಾಟದ ಕಥೆ ಇದಾಗಿದೆ. ಮೊಬೈಲ್ ಕಳೆದುಕೊಂಡ ಗ್ರಾಹಕನು ಹೋಟೆಲು ಮಾಲೀಕರ ವಿರುದ್ಧ ಪೊಲೀಸರಿಗೆ ದೂರು ನೀಡುತ್ತಾನೆ. ಮಾಲೀಕರನ್ನು ಪೊಲೀಸ ಠಾಣೆಗೆ ಕರೆಸಿ ವಿಚಾರಿಸುವ ನೆಪದಲ್ಲಿ ದೂರುದಾರ ಮತ್ತು ಆರೋಪಿ ಇಬ್ಬರಿಂದಲೂ ಪೊಲೀಸರು ಹಣ ಕೀಳುತ್ತಾರೆ. ನಗರ ಹೋಟೆಲುಗಳಲ್ಲಿ ಹಲವಾರು ವಿದ್ಯಮಾನಗಳಿಂದಾಗಿ ಉದ್ಭವಿಸಬಹುದಾದ ಸಮಸ್ಯೆಯನ್ನು ಕಥೆಯು ವಿವರವಾಗಿ ಕಟ್ಟಿಕೊಡುತ್ತದೆ.

ಕಾದಂಬರಿಗಳು ಹೋಟೆಲಿನ ಚಿತ್ರಣದ ಮೂಲಕ ನಗರಸಂಸ್ಕೃತಿಯ ವಿಸ್ತಾರವಾದ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸಿವೆ. ಹೋಟೆಲು ಕಟ್ಟಡದ ವಿನ್ಯಾಸದಿಂದ ತೊಡಗಿ ಒಳಗಿನ ಸೌಲಭ್ಯಗಳು, ತಿಂಡಿ-ತಿನಿಸುಗಳ ವೈವಿಧ್ಯ, ಅವುಗಳನ್ನು ವಿತರಿಸುವ ಕ್ರಮ, ಸೇವಿಸುವ ವಿಧಾನ, ಮಾಲೀಕ, ಕಾರ್ಮಿಕ ಮತ್ತು ಗ್ರಾಹಕರ ನಡುವಿನ ಸಂಬಂಧಗಳು, ಅವರೆಲ್ಲರ ಮನಸ್ಥಿತಿ-ಮನೋಧರ್ಮಗಳು ನಗರಜೀವನ ಅಥವಾ ನಗರಸಂಸ್ಕೃತಿಯ ಭಾಗವಾಗಿ ಹೋಗಿರುವ ಹೋಟೆಲುಗಳು, ಇವೆಲ್ಲದರ ಕಲಾತ್ಮಕ ಚಿತ್ರಣ ಕನ್ನಡದ ಅನೇಕ ಕಾದಂಬರಿಗಳಲ್ಲಿ ಕಂಡುಬರುತ್ತದೆ. ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಶೀನಮಯ್ಯನ ಮಕ್ಕಳು ಬೆಂಗಳೂರು ಮಹಾನಗರದಲ್ಲಿ ವಿವಿಧೆಡೆ ಹೋಟೆಲು ಸ್ಥಾಪಿಸಿ ಸ್ಥಿತಿವಂತರಾಗಿದ್ದನ್ನು ಇಲ್ಲಿ ಚಿತ್ರಿಸಲಾಗಿದೆ. ಬೆಂಗಳೂರಿನ ಬಳೆಪೇಟೆಯ ಹೋಟೆಲು

ವ್ಯವಹಾರದಿಂದಾದ ಲಾಭದಲ್ಲಿ ತರಗುಪೇಟೆ, ಚಿಕ್ಕಪೇಟೆಗಳಲ್ಲಿ, ಸುಸಜ್ಜಿತ ಹೋಟೆಲು ಸ್ಥಾಪಿಸಿದ್ದನ್ನು ಕಾದಂಬರಿ ಪಡಿಮೂಡಿಸಿದೆ. ನಗರದ ಈ ಮೂರು ಹೋಟೆಲುಗಳು ಹೊಸ ಹೊಸ ಗ್ರಾಹಕರ ಗಮನ ಸೆಳೆದುಕೊಂಡಿದ್ದವು. ಇಲ್ಲಿ ದೊರಕಿದ ಅನುಭವ ಮತ್ತು ಸಂಪಾದನೆಯು ನರಸಿಂಹನಿಗೆ ಆನಂದವನ್ನು ಉಂಟುಮಾಡಿದ್ದವು. ನರಸಿಂಹನ ತಂದೆಯನ್ನು ಊರಿಗೆ ಪ್ರತಿಷ್ಠಿತ ವ್ಯಕ್ತಿಯನ್ನಾಗಿ ಬೆಂಗಳೂರಿನ ಹೋಟೆಲುಗಳು ಮಾರ್ಪಡಿಸಿದ್ದವು. ನರಸಿಂಹನ ಬದುಕಿಗೆ ವೈಭವ ಹಾಗೂ ವ್ಯಾಪಾರದಲ್ಲಿ ಕಂಡ ಸಂಭ್ರಮವು ನಗರದ ಹೋಟೆಲು ಕೊಡಮಾಡಿದ ಲಾಭದಿಂದಾಗಿತ್ತು. ದಿನ ಕಳೆದಂತೆ ನಿರೀಕ್ಷಿತ ಮಟ್ಟ ಮೀರಿ ನಗರದ ಹೋಟೆಲು ಲಾಭದಂಶದಿಂದಾಗಿ ಆಸ್ತಿಯ ಪರದೆಯು ಹಿಗ್ಗುತ್ತಾ ಹೋಗಿತ್ತು. ಆಸ್ತಿಯ ವಿಚಾರವಾಗಿ ಒರಟನು ನರಸಿಂಹನ ನಗರದ ಹೋಟೆಲು ವ್ಯವಹಾರಗಳಿಂದ ಬೇರೆಯಾಗುತ್ತಾನೆ. ಬೆಂಗಳೂರು ನಗರದಲ್ಲಿನ ಹೋಟೆಲು ವ್ಯವಹಾರದಿಂದ ನರಸಿಂಹನು ಗಳಿಸಿದ ಲಾಭದಿಂದಾಗಿ ಆತನ ಹೋಟೆಲು ಉದ್ಯಮವು ಮೈಸೂರು ನಗರಕ್ಕೂ ವಿಸ್ತರಿಸಿಕೊಳ್ಳುತ್ತದೆ. ಮೈಸೂರು ನಗರದಲ್ಲಿನ 'ಶ್ರೀ ರಾಮಾ ರೆಸ್ಟೋರೆಂಟ್' ನರಸಿಂಹನಲ್ಲಿ ಹೊಸ ಆಶಾಭಾವನೆಯನ್ನು ಮೂಡಿಸುತ್ತದೆ. ತಮ್ಮನಾದ ಒರಟನು ಮೈಸೂರು ನಗರದಲ್ಲಿ 'ದಿಲ್ಲಿ ದರ್ಬಾರ' ಎಂಬ ಹೋಟೆಲು ಪ್ರಾರಂಭಿಸುವುದಕ್ಕೆ ನರಸಿಂಹನ 'ಶ್ರೀರಾಮಾ ದರ್ಶಿನಿ'ಯೇ ಪ್ರೇರಣೆಯಾಗುತ್ತದೆ. 'ದಿಲ್ಲಿ ದರ್ಬಾರ' ಹೋಟೆಲಿನ ಮೂಲಕ ಸಂಪಾದಿಸಿದ ಹಣದಿಂದ ಒರಟನು ವೈಭವಯುತ ಜೀವವನ್ನು ನಡೆಸುತ್ತಾನೆ. ಕಾದಂಬರಿಯಲ್ಲಿ ಚಿತ್ರಿತವಾದ ಹೇರ್ಳೆಯವರ ಇನ್ನೊಂದು ಹೋಟೆಲು ಕೂಡ ನಗರಸಂಸ್ಕೃತಿಯ ಅಂಶಗಳನ್ನೊಳಗೊಂಡಿದೆ. ಬೆಂಗಳೂರಿನಲ್ಲಿ ಬ್ರಾಹ್ಮಣ ಯಾತ್ರಾರ್ಥಿಗಳಿಗಷ್ಟೆ ಊಟ-ಉಪಾಹಾರಗಳನ್ನು ಪೂರೈಸುವ ಹೋಟೆಲೆಂದು ಪ್ರಸಿದ್ಧಿ ಪಡೆದಿತ್ತು.

ವಿದ್ಯಾಭ್ಯಾಸಕ್ಕೆಂದು ನಗರಕ್ಕೆ ಹೋದ ಲಚ್ಚನು ವಾಸ್ತವ್ಯ ಹೂಡಿದ್ದ ಹೋಟೆಲುಗಳು ಕೂಡ ನಗರಸಂಸ್ಕತಿಯ ಪ್ರತೀಕಗಳಾಗಿ ಚಿತ್ರಿತವಾಗಿವೆ. ಆತನು ಮೊದಲು ತಂಗಿದ್ದ ಗೋಟರ ಹೋಟೆಲಿನ ಮೂಲಕ ಇಸ್ಪೀಟಾಟವನ್ನು ಕಲಿತುಕೊಳ್ಳುತ್ತಾನೆ. ಮುಂದೆ ಕಿಟ್ಟಿಯ ಹೋಟೆಲಲ್ಲೂ ಅದಕ್ಕೆ ಅವಕಾಶ ದೊರೆಯುತ್ತದೆ. ಹೀಗೆ ಹೋಟೆಲಿನ ಸಹವಾಸದ ಮೂಲಕ ವ್ಯಕ್ತಿಯು ನಗರ ಜೀವನದ ಪ್ರಭಾವಕ್ಕೊಳಗಾಗುವುದನ್ನು ಕಾದಂಬರಿಯ ಈ ಸನ್ನಿವೇಶವು ನಿರೂಪಿಸುತ್ತದೆ.

ಶ್ರೀಕೃಷ್ಣ ಆಲನಹಳ್ಳಿ ಅವರ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲಿ ಚಿತ್ರಿತ ವಾದಂತೆ ಭುಜಂಗಯ್ಯನು ತಾನು ಮಾದಳ್ಳಿಯಲ್ಲಿ ಹೋಟೆಲನ್ನು ಪ್ರಾರಂಭಿಸುವುದಕ್ಕೂ ಮುನ್ನ ಮೈಸೂರು ನಗರದ ಹೋಟೆಲೊಂದರಲ್ಲಿ ಕೆಲಸಕ್ಕೆ ಸೇರಿದನು. ಆ ಹೋಟೆಲು ಪರಿಸರವು ಅಲ್ಲಿನ ಇತರೆ ಕಾರ್ಮಿಕರಿಗೆ ಅಂಟಿಸಿದ್ದ ದುಶ್ಚಟಗಳನ್ನು ಭುಜಂಗಯ್ಯನಿಗೂ ಅಂಟಿಸುತ್ತದೆ. ಹೋಟೆಲಲ್ಲಿ ಕೆಲಸ ಮಾಡುವವರು ಸೂಳೆಮನೆಯ ಸಹವಾಸದ ರುಚಿಯನ್ನು ಹತ್ತಿಸಿಕೊಂಡವರಾಗಿದ್ದರು. ನಂತರದಲ್ಲಿ ಅವರು ಭುಜಂಗಯ್ಯನ ಗಂಡಸ್ಥನದ ಬಗೆಗೆ ಗುರಿ ಇಟ್ಟು ರೇಗಿಸಿದ್ದು ನಗರಪ್ರದೇಶದ

ಹೋಟೆಲಲ್ಲಿಯೇ. ಮತ್ತೊಂದು ಸಲ ಅಲ್ಲಿಗೆ ಹೋಗುವಂತೆ ಅಲ್ಲದೆ ಸೂಳೆಯ ಜೊತೆ ಮಲಗಿ ಬರುವುದಕ್ಕೆ ವ್ಯವಸ್ಥೆ ಕಲ್ಪಿಸಿತ್ತು. ಈ ಹೋಟೆಲು ಪರಿಸರದಿಂದಾಗಿ ನಗರ ಸಮಾಚಾರಗಳ ಸ್ವರೂಪ ವನ್ನು ಭುಜಂಗಯ್ಯನು ಮನನ ಮಾಡಿಕೊಂಡಿದ್ದನು. ಮುಂದೆ ಆತ ಮಾದಳ್ಳಿಯಲ್ಲಿ ಹೋಟೆಲನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಆತನಿಗೆ ಮೈಸೂರು ನಗರದಲ್ಲಿನ ಹೋಟೆಲು ಅನುಭವವು ಪ್ರೇರಣೆಯನ್ನು ನೀಡುತ್ತದೆ.

ನಾ. ಮೊಗಸಾಲೆ ಅವರ 'ಉಲ್ಲಂಘನೆ' ಕಾದಂಬರಿಯಲ್ಲಿ ನಗರಪ್ರಜ್ಞೆಯ ಸಂಕೇತವಾಗಿ ಹೋಟೆಲುಗಳು ಚಿತ್ರಿತವಾಗಿವೆ. ಮುಂಬಯಿ ನಗರದಲ್ಲಿನ ತಾಂಪಣ್ಣ ರೈಯವರ 'ವಿಹಾರ ಲಂಚ್ ಹೋಂ ಹೋಟೆಲಿ'ನ ಚಿತ್ರಣವಿದೆ. ಅಲ್ಲದೇ ಇನ್ನೆರಡು ಹೋಟೆಲುಗಳ ಸಾಹುಕಾರನಾಗಿ ಮುಂಬಯಿ ನಗರದಲ್ಲಿ ಪ್ರಖ್ಯಾತಿಗೆ ಪಾತ್ರನಾಗಿದ್ದನು. ತನ್ನ ಸ್ವಂತ ಊರಾದ ಸಾಂತೇರು ಗುತ್ತಿವಿನಿಂದ ಬಾಬು ಪೂಜಾರಿ ಎಂಬ ಮಾಣಿಯನ್ನು ಕರೆತಂದಿದ್ದನು. ಇವರು ಕಾದಂಬರಿಯಲ್ಲಿ ಬಿಂಬಿತನಾದ ಸಂಕಪ್ಪ ಹೆಗ್ಡೆಯವರ ಚಿಕ್ಕಪ್ಪನಾಗಿರುತ್ತಾನೆ. ಸಾಂತೇರು ಗುತ್ತಿನಿಂದ ಬಂದ ಮೂರು ಜನ ಗಾಂಧಿ ತತ್ವಕ್ಕೆ ಒಳಗಾಗಿದ್ದು ಸಂಕಪ್ಪ ಹೆಗ್ಡೆ, ಕಾಂತಪ್ಪ, ಬಾಲಕೃಷ್ಣ ಈ ಮೂರು ಯುವಕರಿಗೆ ಸಂಪರ್ಕದ ವಿಳಾಸವಾಗಿ ನಗರ ಹೋಟೆಲು ಮುಖ್ಯ ಪಾತ್ರವಹಿಸಿರುತ್ತದೆ. ಇದು ಮುಂಬಯಿ ನಗರಸಂಸ್ಕೃತಿಯ ಪ್ರತೀಕವಾಗಿ ತಾಂಪಣ್ಣ ರೈಗಳ ಹೋಟೆಲಾಗಿರುತ್ತದೆ. ಅಂಬಕ್ಕನ ಹಿರಿಯ ಮಗಳು ಶಾರದೆಯು ತಮ್ಮ ನಗರದ ಹೋಟೆಲಿನ ವ್ಯವಹಾರ ಉನ್ನತಿ ಪಡೆದಿದ್ದನ್ನು ತಿಳಿಸುತ್ತಾಳೆ. ಅಲ್ಲದೇ ಸಾಂತೇರು ಗುತ್ತಿಗೆ ತಾವು ಸ್ವಂತ ಕಾರಿನಲ್ಲಿ ಬರುವುದಾಗಿ ಪತ್ರದಲ್ಲಿ ತಿಳಿಸುತ್ತಾಳೆ.

ಇದೇ ಕಾದಂಬರಿಯಲ್ಲಿ ದಿಲ್ಲಿ ಮಹಾನಗರದ ಹೋಟೆಲೊಂದು ಚಿತ್ರಿತವಾಗಿರುತ್ತದೆ. ಅಂಬಕ್ಕನ ಮಗ ರಂಜಿತ ತಾಯಿಗೆ ವಾಸ್ತವ್ಯಕ್ಕೆ ನಿಗದಿಪಡಿಸಿರುತ್ತಾನೆ. ಇಲ್ಲಿ ಅಂಬಕ್ಕ ಮಗ ತನ್ನ ಸ್ನೇಹಿತರಿಗಾಗಿ ಏರ್ಪಡಿಸಿದ ಔತಣಕೂಟ ನೋಡಿ ಅಂಬಕ್ಕ ತನ್ನ ಸಾಂತೇರುಗುತ್ತಿನ ವೈಭವ ಪರಾಭವಗೊಳ್ಳುತ್ತದೆ. ಅಲ್ಲಿ ಪೂರೈಸುವ ತಿಂಡಿ-ಊಟ-ಉಪಾಹಾರಗಳ ರುಚಿ, ಸ್ವಾದ ಮತ್ತು ಉತ್ತಮ ರೀತಿಯಿಂದ ಊಟ ಮಾಡಿದ್ದನ್ನು ಕಂಡು ದಿಗ್ಭ್ರಮೆಗೊಳ್ಳುತ್ತಾಳೆ. ಪ್ರವೇಶ ಪಡೆದ ಅತಿಥಿಗಳೆಲ್ಲರೂ ಕರಿಕೋಟು ಹಾಕಿ ಟೈ ಕಟ್ಟಿಕೊಂಡು ಮಿರಿಮಿರಿ ಮಿಂಚುತ್ತಿದ್ದರು. ಅವರು ಬಗೆಬಗೆಯ ಶೂಗಳು ಪಾದಗಳಲ್ಲಿ ರಾರಾಜಿಸುತ್ತಿದ್ದವು. ರಂಜಿತ ಮುಂಚಿತವಾಗಿ ತನ್ನ ಬಂಧುಗಳನ್ನು ಸ್ನೇಹಿತರಿಗೆ ಪರಿಚಯಿಸುವ ಬಗೆಯು ವಿಶಿಷ್ಟವಾಗಿತ್ತು. ಆತ ಪರಿಚಯ ಮಾಡಿಕೊಟ್ಟವರೆಲ್ಲರೂ ತುಂಬ ಗಾಂಭೀರ್ಯದಿಂದ ಕೈ ಕುಲುಕುವಾಗ ಅಂಬಕ್ಕನಿಗೆ ಮುಜುಗರ ಉಂಟಾಗುತ್ತದೆ. ತನ್ನ ಮಗ ಪ್ರತಿಷ್ಠಿತ ಅಧಿಕಾರಿಗಳ ನಡುವೆ ಸಂಬಂಧ ಇರುವುದನ್ನು ಕಂಡು ಸಂತಸಕ್ಕೀಡಾಗುತ್ತಾಳೆ. ಹೀಗೆ ನಗರಪ್ರದೇಶದಲ್ಲಿನ ಹೋಟೆಲಿನ ಊಟ-ಉಪಾಹಾರ, ಕಟ್ಟಡ ವಿನ್ಯಾಸ, ಮತ್ತು ಅಲ್ಲಿನ ಪೀಠೋಪಕರಣಗಳ ಸ್ವರೂಪಗಳು ಕಾದಂಬರಿಯಲ್ಲಿ ದಿಲ್ಲಿ ಮಹಾನಗರದ ಹೋಟೆಲಿನ ಚಿತ್ರಣವನ್ನು ಕಟ್ಟಿಕೊಡುತ್ತದೆ.

ಬೀಚಿ ಅವರ 'ಆರಿದ ಚಹಾ' ಕಾದಂಬರಿಯಲ್ಲಿ ಬೆಂಗಳೂರು ನಗರದ ಹೋಟೆಲಿನ ಚಿತ್ರಣವಿದೆ. ರಮೇಶನು ರಘುನಾಥನನ್ನು ಕೆಲಸ ಕೊಡಿಸಲೆಂದು ಕರೆದುಕೊಂಡು ಬಂದಾಗ ನಗರದ ಹೋಟೆಲಿನಲ್ಲಿ ಆತಿಥ್ಯವನ್ನು ಕಲ್ಪಿಸಿಕೊಡುತ್ತಾನೆ. ನಂತರ ನಗರದಲ್ಲಿ ಪರಿಚಯಸ್ಥರ ಮನೆಯಲ್ಲಿ ಮಲಗುವ ವ್ಯವಸ್ಥೆ ಮತ್ತು ಹೋಟೆಲಲ್ಲಿ ಊಟದ ವ್ಯವಸ್ಥೆ ಕಲ್ಪಿಸುತ್ತಾನೆ. ಕಾದಂಬರಿಯ ಸನ್ನಿವೇಶವೊಂದರ ಮೂಲಕ ಇಲ್ಲಿ ಅಭಿವ್ಯಕ್ತವಾದ ಹಳ್ಳಿಯ ರಘುನಾಥ ಉದ್ಯೋಗ ಅರಸಿಕೊಂಡು ಬೆಂಗಳೂರಿಗೆ ಬಂದಿರುತ್ತಾನೆ. ಸ್ನೇಹಿತನಾದ ರಮೇಶನು ತನ್ನ ಪರಿಚಯಸ್ಥರಾದ ಅಯ್ಯಂಗಾರರ ಮನೆಯಲ್ಲಿ ಆಶ್ರಯ ಕಲ್ಪಿಸಿಕೊಡುತ್ತಾನೆ. 'ವಾಸ ಅಯ್ಯಂಗಾರರ ಮನೆಯಲ್ಲಿ ಊಟ ತಿಂಡಿ ಹೋಟೆಲಿನಲ್ಲಿ' ಈ ರೀತಿ ಬೆಂಗಳೂರಿನಲ್ಲಿ ರಘುನಾಥನ ಪ್ರಾರಂಭದ ದಿನಗಳು ಸಾಗುತ್ತಿರುತ್ತವೆ. ರಮೇಶನು ರಘುನಾಥನಿಗೆ ಹೇಳುವ ಮಾತುಗಳಲ್ಲಿ ನಗರಜೀವನದ ಅನುಭವವು ಪ್ರತಿಫಲಿತವಾಗುತ್ತದೆ. "ಬೇಗ ರೂಮು ಹುಡಿಕಿಕೊಳ್ಳಿ. ಸಿಕ್ಕುವವರೆಗೆ ಮನೆಯಲ್ಲಿ ಸ್ನಾನ, ನಿದ್ರೆ ಮಾತ್ರ ಈ ಮನೆಯಲ್ಲಿ ಊಟಕ್ಕೆ ಹೋಟೆಲಿಗೆ ಹೋಗಿ ಇದು ಬೆಂಗಳೂರು"(ಬೀಚಿ, ೨೦೦೩, ಪು. ೬೨). ಅಯ್ಯಂಗಾರರೊಂದಿಗೆ ಆತನು "ತಾವು ಊಟ ಮಾಡಿ, ನಾನು ಹೋಟೆಲಿಗೆ ಹೋಗಿ ಊಟ ಮಾಡಿ ಬಂದು ಬಿಡುತ್ತೇನೆ. ಎಂದು ಹೇಳಿ ಹೋಟೆಲಿಗೆ ಹೋರಡುತ್ತಾನೆ(ಅದೇ). ಆಗ ಅಯ್ಯಂಗಾರರು ಅಯ್ಯಾ ಬಾರಪ್ಪ ಆ ಹಾಳು ಹೋಟೆಲು ಊಟ ಅಂದೊಡನೆ ರಘುನಾಥನ ತಲೆಯಲ್ಲಿ ಒಮ್ಮೆಲೆ ನೂರಾರು ಪ್ರಶ್ನೆಗಳು ಎದ್ದವು. ಇವರು ಇಲ್ಲಿಯೇ ಉಣ್ಣೆಂದು ಆಗ್ರಹ ಮಾಡಿದರೆ ಇದು ಬೆಂಗಳೂರು ಹೋಟೆಲಲ್ಲಿ ಊಟ ಮಾಡಿ ಎಂದು ರಮೇಶ ಹೇಳಿದರಲ್ಲ(ಅದೇ, ಪುಟ ೬೩). ಹೀಗೆ ರಘುನಾಥ, ಅಯ್ಯಂಗಾರ, ರಮೇಶರ ಮಾತುಕತೆಗಳ ಸಂದರ್ಭದಲ್ಲಿ ಪದೇ ಪದೇ ಪ್ರಸ್ತಾಪವಾಗುವ 'ಇದು ಬೆಂಗಳೂರು' ಎಂಬ ಮಾತಿನಲ್ಲಿ ನಗರಜೀವನ ವ್ಯವಸ್ಥೆಗೆ ಒಗ್ಗಿಕೊಳ್ಳಬೇಕಾದ ಅನಿವಾರ್ಯತೆಯ ಸೂಚನೆ ಇದೆ. ಜೊತೆಗೆ ಬೆಂಗಳೂರಿನಂತೆ ಮಹಾನಗರಗಳಲ್ಲಿ ಜೀವನಾವಲಂಬನೆಗೆ ಹೋಟೆಲು ಕೂಡ ಹೇಗೆ ಅನಿವಾರ್ಯ ಎಂಬುದನ್ನು ಈ ಸನ್ನಿವೇಶವು ನಿರೂಪಿಸುತ್ತದೆ. ಹೀಗೆ ನಗರಜೀವನ ಹಾಗೂ ನಗರಪ್ರಜ್ಞೆಯ ಭಾಗವಾಗಿ ಇಲ್ಲಿ ಹೋಟೆಲು ಪ್ರಸ್ತಾಪಗೊಂಡಿದೆ.

ಎಸ್.ಎಲ್. ಭೈರಪ್ಪನವರ 'ಕವಲು' ಕಾದಂಬರಿಯಲ್ಲಿ ದೇಶ ಮತ್ತು ವಿದೇಶಿಯ ಹೋಟೆಲುಗಳು ಚಿತ್ರಿತವಾಗಿರುತ್ತವೆ. ದಿಲ್ಲಿ ನಗರದ 'ಸ್ಟಾರ್ ಪ್ಯಾರಡೈಸಿ'ನ ಆಧುನಿಕವಾದ ಕಟ್ಟಡವಾಗಿದೆ. ವಿವಿಧ ಸ್ಟಾರ್ ಹೋಟೆಲುಗಳಂತೆ ಸೊಗಸಾಗಿ ವೇಷಭೂಷಣಗಳಿಂದ ಅಲಂಕೃತಗೊಂಡ ಸ್ವಾಗತಕಾರಿಣಿಯರಿದ್ದರು. ಅಲ್ಲಿ ಸಾಮಾನು, ಸೂಟಕೇಸು ಒಯ್ಯಲು ನುರಿತ ಕಾರ್ಮಿಕ ಯುವಕರಿದ್ದರು. ಕೋಣೆಗೊಂದರಂತೆ ಕರಗಂಟೆಯನ್ನು ಅಲ್ಲಿ ಅಳವಡಿಸಿರುತ್ತಾರೆ. ಈ ಹೋಟೆಲಲ್ಲಿ ಲೈಂಗಿಕ ಆಸಕ್ತಿ ಪೂರೈಸಿಕೊಳ್ಳಲು ಯುವತಿಯರನ್ನು ಗ್ರಾಹಕರಿಗೆ ಕಾರ್ಮಿಕರು ಸೆಟ್ ಮಾಡುತ್ತಿದ್ದರು. ಸ್ಟಾರ್ ದರ್ಜೆಯ ಹೋಟಲಿನಲ್ಲಿ ಇಳಿದುಕೊಂಡಿರುವ ಕುಟುಂಬಸ್ಥರ ಮಹಿಳೆಯರಂತೆ ಅವರು ನಟಿಸಿದ್ದರು.

ಯುವಕರು ಅಲ್ಲಿ ಯಾವ ತೊಂದರೆಗಳು ಇಲ್ಲದಿರುವುದನ್ನು ಗ್ರಾಹಕರಿಗೆ ಗಟ್ಟಿಗೊಳಿಸುತ್ತಿದ್ದರು. ಹೋಟೆಲಿಗೆ ಕರೆದು ತಂದ ಹೆಂಗಸರು ತಮ್ಮ ಅಸಲಿ ಹೆಸರನ್ನು ಬಹಿರಂಗಪಡಿಸದಿರುವುದು ಇಲ್ಲಿ ಕುತೂಹಲ ಸಂಗತಿಯಾಗಿರುತ್ತದೆ. ಸ್ಟಾರ್ ಹೋಟೆಲು ರಿಜಿಸ್ಟರನಲ್ಲಿಯೇ ನಕಲಿ ಹೆಸರುಗಳನ್ನು ಗ್ರಾಹಕರಾದವರು ಕೆಲವರು ನಮೂದಿಸುತ್ತಿದ್ದರು. ಹೆಂಗಸರು ತಾವು ವೃತ್ತಿಯಾಗಿ ಈ ಕೆಲಸ ಮಾಡುವವರಲ್ಲ. ಅಲ್ಲಿ ಬರುವವರಲ್ಲ ಹೆಚ್ಚಾಗಿ ವಿವಾಹಿತ ಗೃಹಿಣಿಯರಾಗಿರುತ್ತಾರೆ. ಮನೆಯಲ್ಲಿ ತುಂಬ ಕಷ್ಟವಿರುವುದರಿಂದ ಹೋಟೆಲಿಗೆ ಬಂದ ಸಬ್ಯಸ್ಥರು ಬಯಸಿದಾಗ ಅವರು ಬರುತ್ತಿರುತ್ತಾರೆ. ಕೆಲವರು ಹೋಟೆಲಿನವರೊಂದಿಗೆ ಒಪ್ಪಂದವನ್ನು ಮಾಡಿಕೊಂಡಿರುತ್ತಿದ್ದರು. ಕೆಲವು ಗೃಹಿಣಿಯರು ಮನೆಯ ಖರ್ಚುವೆಚ್ಚ ಸರಿದೂಗಿಸಲು ಹೋಟೆಲಿಗೆ ಬರುತ್ತಿರುತ್ತಾರೆ. ಇನ್ನು ಕೆಲವರು ಒಡವೆ, ವಸ್ತ್ರ, ಸಿನಿಮಾ ಸಂಪಾದನೆಯ ಹಾದಿ ಹಿಡಿದವರು ಇರುತ್ತಿದ್ದರು. ಇಲ್ಲಿ ಚಿತ್ರಿತವಾಗಿರುವ ಹೆಂಗಸರಿಗೆ ಹಣವಲ್ಲದೇ ವಿವಿಧ ರೀತಿಯ ಪರಪುರುಷರೊಡನೆ ಸ್ವತಃ ಶೋಕಿಗಾಗಿ ಸುಖಿಸುವವರು ಹೋಟೆಲಿಗೆ ಬರುತ್ತಿರುತ್ತಾರೆ. ಪ್ಯಾಂಟ್, ಶರಟು, ಬೂಟ್, ಹೇರ್‌ಕಟ್, ಇಂಗ್ಲೀಷ್ ಬಲ್ಲ ಮಹಿಳೆಯರು ಇಲ್ಲಿಗೆ ಬರುತ್ತಿರುತ್ತಾರೆ. ಅವರು ಬರೆ ದುಡ್ಡಿಗಾಗಿ ಬರುವವರಲ್ಲ. ಕರಿಸುವವರ ವ್ಯಕ್ತಿತ್ವವನ್ನು ಗಮನಿಸಿ ಆಮೇಲೆ ಸಹಮತಕ್ಕೆ ಬರುತ್ತಿದ್ದರು. ಹೋಟೆಲಿಗೆ ಬರುವ ಹೆಂಗಸರು ಸುಂದರಿ ಅನಿಸಿಕೊಳ್ಳುವುದಕ್ಕಿಂತ ಬುದ್ಧಿಶಾಲಿ ಅನಿಸಿಕೊಳ್ಳುವುದಕ್ಕೆ ಇಷ್ಟಪಡುತ್ತಿದ್ದರು (ಭೈರಪ್ಪ ಎಸ್.ಎಲ್.; ೨೦೧೧; ಪು. ೧೬೬-೧೬೭). ಹೀಗೆ ದಿಲ್ಲಿ ನಗರಸಂಸ್ಕೃತಿ ಮತ್ತು ನಗರಪ್ರಜ್ಞೆಯನ್ನು ಕಾದಂಬರಿಯು ಹೋಟೆಲು ಚಿತ್ರಣದ ಮೂಲಕ ಸಾಬೀತುಪಡಿಸುತ್ತದೆ.

ಈಗಾಗಲೇ ಗಮನಿಸಿದಂತೆ ನಗರಪ್ರದೇಶದ ಹೋಟೆಲುಗಳ ಚಿತ್ರಣದ ಮೂಲಕ ಕನ್ನಡದ ಅನೇಕ ಕಥೆ-ಕಾದಂಬರಿಗಳು ನಗರಸಂಸ್ಕೃತಿ ಹಾಗೂ ನಗರಪ್ರಜ್ಞೆಯನ್ನು ಅಭಿವ್ಯಕ್ತಿಪಡಿಸಿವೆ. ವ್ಯಾಸರಾವ ನಿಂಜೂರ ಅವರ 'ತೆಂಕನಿಡಿಯೂರಿನ ಕುಳವಾರಿಗಳು' ಎಂಬ ಕಾದಂಬರಿಯು ಮುಂಬಯಿ ಮಹಾನಗರದ ಹೋಟೆಲುಗಳ ಮೂಲಕ ಇಂತಹ ನಗರಸಂಸ್ಕೃತಿ ಮತ್ತು ನಗರ ಪ್ರಜ್ಞೆಯನ್ನು ತೀರಾ ವಿಭಿನ್ನವಾದ ರೀತಿಯಲ್ಲಿ ಅಭಿವ್ಯಕ್ತಿಪಡಿಸಿದೆ. ತೆಂಕನಿಡಿಯೂರು ಶಂಭು ಶೆಟ್ಟಿಯು ಮುಂಬಯಿ ಮಹಾನಗರದಲ್ಲಿ ತನ್ನೂರಿನವರ ಹುಡುಕಾಟದ ಸಂದರ್ಭದಲ್ಲಿ ನರಸಿಂಹನು ಹೀಗೆ ಪರಿಚಯಿಸುತ್ತಾನೆ. "ಓ ಅಲ್ಲಿ ನೋಡು ಎರಡು ಮಾಳಿಗೆಯ ಇಮಾರತು. ಅದೇ ಬಿಲ್ಡಿಂಗಿನಲ್ಲಿ ನಿಮ್ಮ ಊರಿನವರ ಹೋಟೆಲು ಇರುವುದು. 'ಪವಿತ್ರ' ಅಂತ ಹೋಟೆಲಿನ ಹೆಸರು. ಅಂತಿಂಥ ಹೋಟೆಲಲ್ಲ ಮಾರಾಯ. 'ಗ್ರೇಡ್ I ಹೋಟೆಲ' ಎನ್ನುತ್ತ ಗ್ರೇಡ್ I ರ ಬಗ್ಗೆ ತನಗೆ ತಿಳಿದುದ್ದನ್ನೆಲ್ಲ ಹೇಳಿ 'ಈ ಏರಿಯಾದಲ್ಲಿ 'ಫೇಮಸ್ಸು ಹೋಟೆಲು' ಎಂದೂ ಸೇರಿಸಿದ(ವ್ಯಾಸರಾವ ನಿಂಜೂರ, ೨೦೧೬, ಪು. ೯೦). ಹೀಗೆ ನರಸಿಂಹನು ಶಂಭುಶೆಟ್ಟಿಗೆ ಮಹಾನಗರದ ಹೋಟೆಲಿನ ವಿಹಂಗಮ ಹೊರನೋಟವನ್ನು ಪರಿಚಯಿಸುತ್ತಾನೆ. ಇಷ್ಟೇ ಅಲ್ಲದೆ ಇಬ್ಬರೂ ಹೋಟೆಲಿನ ಒಳಹೊಕ್ಕು ಖಾಲಿ ಇದ್ದ ಮೆತ್ತನೆಯ

ಸೀಟಿನಲ್ಲಿ ಕುಳಿತುಕೊಳ್ಳುತ್ತಾರೆ. ಟೇಬಲ್ಲಿಗೆ ಮಾಣಿ ಮೆನು ಕಾರ್ಡ್ ತಂದಿರಿಸುವುದು, ದೋ ಚಾಯ್ ಎಂದಾಗ ಸರ್ವರ್ ಮಾಣಿ ಇವರನ್ನು ತಾತ್ಸಾರದಿಂದ ನೋಡುವುದು, ನರಸಿಂಹನು ವೈಭಯುತವಾದ ಕ್ಯಾಶ್ ಕೌಂಟರನ್ನು ಗಮನಿಸುವುದು, ಅಲ್ಲಿ ಸರ್ವರ್‌ಗಳು ಟ್ರೇಯಲ್ಲಿ ತಂದ ಬಿಲ್ಲು ಕ್ಯಾಶಿಯರಿಗೆ ಕೊಡುವುದು, ನರಸಿಂಹನು ಮಾಣಿಗ ಒಂದು ರೂಪಾಯಿ ಟಿಪ್ಸ್ ನೀಡುವುದು, ತೆಗೆದುಕೊಂಡ ಮಾಣಿಯು ಸಂತಸಪಡುವುದು ಮುಂತಾದ ಸಂದರ್ಭಗಳು ನಗರದ ಹೋಟೆಲಿನ ಸ್ವರೂಪವನ್ನು ಕಟ್ಟಿಕೊಡುತ್ತವೆ.

ಶೇಖರ ಮತ್ತು ಸುಂದರರ ಕೊರಳಲ್ಲಿ ಮಜಭೂತಾದ ಪದಕವುಳ್ಳ ಚೈನು, ಕೈಯಲ್ಲಿ ದಪ್ಪದಾಗಿರುವ ಪಾಟಲಿ, ರಟ್ಟೆಯಲ್ಲಿರುವ ಚಿನ್ನದ ತಾಯತ, ಇವೆಲ್ಲವೂ ನಗರದಲ್ಲಿನ ಹೋಟೆಲು ವ್ಯವಹಾರದಿಂದ ಬಂದವುಗಳೆಂದು ಕಾದಂಬರಿಯು ನಿರೂಪಿಸುತ್ತದೆ.

ನಗರದಲ್ಲಿ ಹೋಟೆಲು ವ್ಯವಹಾರ ನಡೆಸಲು ಗ್ಯಾಂಗ್ ನೇಮಿಸಿಕೊಂಡದ್ದು, ಸ್ಮಗ್ಲಿಂಗ್, ಕಳ್‌ಬಟ್ಟಿ, ಸಾರಾಯಿ ದಂಧೆ, ಎಲ್ಲೆಲಿಂದಲೊ ಹುಡುಗಿಯರನ್ನು ತಂದು ಘರವಾಲಿಗಳಿಗೆ ಮಾರುವ ಕೆಲಸ, ಕರಿಮಲಾಲನ ಗ್ಯಾಂಗಿನ ಸದಸ್ಯರಂತೆ ಶೇಖರ ಮತ್ತು ಸುಂದರರು ಇರುವುದು. ಮಹಾನಗರದಲ್ಲಿ ಕಳ್ಳಮಾಲುಗಳ ವ್ಯವಹಾರ, ವಿದೇಶದಿಂದ ಫಾರಿನ್ ಸರಕುಗಳ ಶೇಖರಣೆ, ಚಿನ್ನ, ಮದ್ಯ ಇಂತಹ ಕಳ್ಳ ಮಾಲನ್ನು ದುಪ್ಪಟ್ಟು ಬೆಲೆಗೆ ಮಾರುವುದು ಮುಂತಾದ ಕಾನೂನುಬಾಹಿರ ಚಟುವಟಿಕೆಗಳಿಗೆ ಶೇಖರ ಹಾಗೂ ಸುಂದರರ ಹೋಟೆಲು ಕೇಂದ್ರವಾಗಿರುವುದನ್ನು ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ.

ನಗರದ ಹೋಟೆಲು ಮಾಲೀಕರಾದ ಶೇಖರ ಹಾಗೂ ಸುಂದರರು ಊರಿಗೆ ಬಂದಾಗಿನ ಅವರ ರೂಪ, ಮೈಗೆ ಧರಿಸಿದ ಬಂಗಾರ, ಒಕ್ಕಲಗಳಿಗೆ ಭಕ್ಷೀಸು ಕೊಡುವ ಗರಿಗರಿ ನೋಟುಗಳು ಇವೆಲ್ಲ ಚಟುವಟಿಕೆಗಳು ಹೋಟೆಲು ವ್ಯವಹಾರ ಮತ್ತು ಅದರ ಭಾಗವಾಗಿ ಅವರು ನಡೆಸುತ್ತಿದ್ದ ಕಳ್ಳದಂಧೆಗಳಿಂದ ಬಂದದ್ದು ಎಂಬುದು ಹಳ್ಳಿಯವನಾದ ಶಂಭುವಿಗೆ ಗೊತ್ತಾಗುತ್ತದೆ.

'ಹೋಟೆಲು ಪವಿತ್ರ'ದ ನೆಲಮಾಳಿಗೆಯು ಅವರು ಭಯವಿಲ್ಲದೆ ಕಳ್ಳದಂಧೆಯನ್ನು ನಡೆಸುವುದಕ್ಕೆ ಅನುಕೂಲವಾಗಿತ್ತು. ಇಲ್ಲಿ ವೇಶ್ಯಾವಾಟಿಕೆ, ಪಿಕ್‌ಪಾಕೆಟ್, ಪರರ ಹೆಣ್ಣುಮಕ್ಕಳನ್ನು ಕರೆತರುವುದು ಮುಂತಾದ ವಿಷಯಗಳ ಕುರಿತು ಅವರ ಗುಪ್ತ ಸಮಾಲೋಚನೆ ನಡೆಯುತ್ತಿತ್ತು. ಬರುಬರುತ್ತ 'ಪವಿತ್ರ ಹೋಟೆಲು' ಬಾರ್ ಮತ್ತು ರೆಸ್ಟೋರೆಂಟಾಗಿ ಮಾರ್ಪಟ್ಟಿತ್ತು. ಇದು ಅಲ್ಲದೆ ಸಂಜೆ ವೇಳೆಗೆ ಡ್ಯಾನ್ಸ್‌ಬಾರಾಗಿ ಪರಿವರ್ತನೆಗೊಳ್ಳುತ್ತದೆ. ಇಲ್ಲೊಂದು ಡ್ಯಾನ್ಸಿಗಾಗಿಯೇ ಪ್ರತ್ಯೇಕ ಹಾಲ್ ಕೂಡ ಸಿದ್ಧವಾಗಿತ್ತು. ಅಲ್ಲಿ ಮೆತ್ತನೆಯ ಸುಖಾಸನಗಳು, ಸಲಕರಣೆಗಳು ಮತ್ತು ಹವಾನಿಯಂತ್ರಿತ ತಂಪಾದ ವಾತಾವರಣ ಪಸರಿಸಿತ್ತು. ಹಿಂದಿ ಹಾಡುಗಳೊಂದಿಗೆ ಕುಣಿಯುವ ಬಾಲೆಯರು

ನೋಡುಗರ ಕಣ್ಣು ಕುಕ್ಕಿಸುವಂತಿದ್ದರು. ಪಾನಮತ್ತ ಗಿರಾಕಿಗಳು ಕರೆನ್ಸಿ ನೋಟುಗಳನ್ನು ಬಿಸಾಡುತ್ತಿರುವುದು, ಗಿರಾಕಿಗಳು ನಶೆಯಲ್ಲಿ ಹುಡುಗಿಯರ ಅಂಗ ಸ್ಪರ್ಶ ಮಾಡುವುದನ್ನು ತಡೆಯಲು ಬೌನ್ಸರ್‌ಗಳನ್ನು ನಿಯೋಜಿಸಿರುವುದು ಹೀಗೆ 'ಡ್ಯಾನ್ಸ್ ಬಾರಿ'ನ ರಮ್ಯಚಿತ್ರಣ ನಗರಸಂಸ್ಕೃತಿ ಮತ್ತು ನಗರಪ್ರಜ್ಞೆಯನ್ನು ಕಾದಂಬರಿಯು ಕಟ್ಟಿಕೊಡುತ್ತದೆ.

ಸರಕಾರದಿಂದ ಕಳ್ಳಬಟ್ಟಿ ದಂಧೆಗೆ ಸ್ವಲ್ಪ ಪೆಟ್ಟು ಕೊಟ್ಟದ್ದರಿಂದ ಅಂಗಡಿಗಳಿಗೆ ಪೂರೈಕೆಯಾಗುತ್ತಿದ್ದ ಸಾರಾಯಿ ಬಾರಿಗೆ ಸಿಗುವಂತಾಗಿತ್ತು. ಇದರಿಂದ ಶೇಖರ ಮತ್ತು ಸುಂದರರಿಗೆ 'ಬಾರ್ ಮತ್ತು ರೆಸ್ಟೋರೆಂಟಿ'ನಲ್ಲಿ ದುಪ್ಪಟ್ಟು ಲಾಭ ಕಂಡುಕೊಳ್ಳಲು ಅನುಕೂಲವಾಗಿತ್ತು. ದುಬಾರಿ ಪೆಗ್ ಸೇವಿಸಿದ ಗಿರಾಕಿಗಳಿಗೆ ಕಡಿಮೆ ಬೆಲೆಯ ಲಿಕ್ಕರ್ ಬೆರೆಸಿಕೊಡಲಾಗುತ್ತಿತ್ತು. ಇದರಿಂದ 'ಪಾರಿಜಾತ ಬಾರ್ ಮತ್ತು ರೆಸ್ಟೋರೆಂಟ್' ಮಾಲೀಕರಾದ ಶೇಖರ ಸುಂದರರಿಗೆ ಹಣದ ಹೊಳೆಯೇ ಹರಿದುಬರುತ್ತಿತ್ತು. ತಿಂಡಿ, ಪಾನೀಯಗಳು, ಫರ್ನಿಚರ್, ಹೀಗೆ ಎಲ್ಲವನ್ನು ಕಂಪನಿಗಳು ಪುಕ್ಕಟೆಯಾಗಿ ಪೂರೈಸುತ್ತಿದ್ದವು. ಊಟ, ತಿಂಡಿ, ಕಾಫಿ, ಚಹ ಕಂಪನಿ ಕ್ಯಾಂಟೀನುಗಳಿಗೆ ವರ್ಷವಿಡಿ ಪೂರೈಸಲು ಗುತ್ತಿಗೆ ಅಧಾರದಲ್ಲಿ ನಗರದಲ್ಲಿ ತಮಗೆ ದಕ್ಕುವಂತೆ ಕಾರ್ಮಿಕ ಸಂಘದ ಲೀಡರ್‌ಗಳನ್ನೂ ಮತ್ತೆ ಕಂಪನಿಗಳ ಅಧಿಕಾರಿಗಳನ್ನೂ ಕಪ್ಪ ಸಲಿಸುವುದರ ಮೂಲಕ 'ಕ್ಯಾಂಟಿನ್' ವ್ಯವಹಾರದಲ್ಲೂ ಮಹಾನಗರದಲ್ಲಿ ಈ ಸಹೋದರರು ಮೆರೆಯುತ್ತಿದ್ದರು. ಹೋಟೆಲು 'ಪವಿತ್ರ ಬಾರ್ ಮತ್ತು ರೆಸ್ಟೋರೆಂಟ್' ಹಾಗೂ 'ಹೋಟೆಲು ಪಾರಿಜಾತ ಬಾರ್ ಮತ್ತು ರೆಸ್ಟೋರೆಂಟ್' ಇಷ್ಟೇ ಅಲ್ಲದೆ ಔದ್ಯಮಿಕ ಕಂಪನಿಗಳ ಕ್ಯಾಂಟೀನುಗಳು ನಗರದಲ್ಲಿ ಕಾರ್ಮಿಕರ ಸಂಘರ್ಷನಾತ್ಮಕ ಶಕ್ತಿ, ಗುತ್ತಿಗೆದಾರರು ಅವರ ಜೊತೆಗೆ ಇರಿಸಿಕೊಳ್ಳುವ ವ್ಯಾವಹಾರಿಕ ಸಂದರ್ಭಗಳು 'ಕ್ಯಾಂಟೀನಿ'ನ ಚಿತ್ರಣದ ಮೂಲಕ ನಗರಸಂಸ್ಕೃತಿ ಮತ್ತು ನಗರಪ್ರಜ್ಞೆಯು ಕಾದಂಬರಿಯಲ್ಲಿ ವ್ಯಕ್ತವಾಗಿರುತ್ತದೆ.

ಬದುಕಿನಲ್ಲಿ ನಾವು ಬಯಸಿದ್ದು ನಮಗೆ ಸಿಗದೇ ಹೋದಾಗ ಬಯಕೆಯನ್ನೇ ಶಂಭುಶೆಟ್ಟಿ ನಿಯಂತ್ರಿಸಿಕೊಂಡು, ಏನು ಸಿಕ್ಕಿದೆಯೋ ಅದನ್ನು ಒಪ್ಪಿಕೊಂಡು, ಅದರಲ್ಲಿಯೇ ತೃಪ್ತಿಯನ್ನು ಪಡೆದುಕೊಂಡಿದ್ದಾನೆ. ಶೇಖರ ಹಾಗೂ ಸುಂದರರು ಬಯಸಿದ್ದನ್ನು ಪಡೆಯಲು ಸದಾ ಪ್ರಯತ್ನಿಸುತ್ತಿರುತ್ತಾರೆ. ಮುಂಬಯಿ ಮಹಾನಗರದ ಹೋಟೆಲುಗಳಿಂದ ಸುಖ ಮತ್ತು ಸಾರ್ಥಕವನ್ನು ಆ ಪ್ರಯತ್ನದಿಂದ ಕಂಡವರಾಗಿದ್ದಾರೆ. ಇಲ್ಲಿ ಹೆಗ್ಗಡೆ ಸಹೋದರರಿಗೆ ಸೋಲು ಗೆಲುವುಗಳಿಗಿಂತ ಸಂಕಲ್ಪ ಹಾಗೂ ಆ ಸಂಕಲ್ಪದಿಂದ ಹುಟ್ಟುವ ಕ್ರಿಯಾಶೀಲತೆಯೇ ಮುಖ್ಯವಾಗಿರುತ್ತದೆ. ಆ ಕ್ರಿಯಾಶೀಲತೆಯಲ್ಲಿ ಹೋಟೆಲು ವ್ಯವಹಾರವು ಪ್ರಮುಖ ಪಾತ್ರ ವಹಿಸುತ್ತದೆ. ಹೋಟೆಲೊಂದನ್ನು ಪ್ರಾರಂಭಿಸುವ ಹಂಬಲದಲ್ಲಿ ಅದನ್ನು ಸಾಧಿಸಹೊರಟ ಶಂಭುಶೆಟ್ಟಿ ಜೀವನಕ್ಕೊಂದು ಉದ್ದೇಶವಿರದಂತೆ ಆಗುತ್ತದೆ. ಪರ್ಯಾಯವಾಗಿ ಹುಸಿಯಾದ ಗುರಿ ಶಂಭುವಿಗೆ ಪ್ರಾಶವಾಗಿ ಬಿಡುತ್ತದೆ. ಬಯಕೆ ಈಡೇರಿಕೆ, ದೃಢಸಂಕಲ್ಪ ಮಾಡಿ ಹೋಟೆಲು ಆರಂಭಿಸಿದಾಗಿನಿಂದಲೆ ಉನ್ನತಿಗೆ ಹೆಗ್ಗಡೆ ಸಹೋದರರು ಸಾಕ್ಷಿಯಾಗುತ್ತಾಪೆ.

ಹೀಗೆ 'ಪವಿತ್ರ ಬಾರ್ ಮತ್ತು ರೆಸ್ಟೋರೆಂಟ್' ಹಾಗೂ 'ಪಾರಿಜಾತ ಬಾರ್ ಮತ್ತು ರೆಸ್ಟೋರೆಂಟ್', ವಿವಿಧ ಕಂಪನಿ 'ಕ್ಯಾಂಟೀನುಗಳು', 'ಕಾಶಿ ವಿಶ್ವನಾಥ ಟೀ ಸ್ಟಾಲ್', 'ಪ್ರಕಾಶ ಹೋಟೆಲು' ಮಂತಾದವುಗಳು ನಗರದಲ್ಲಿ ಜನರ ಭಾಷೆ, ಸಂಸ್ಕೃತಿ, ರಾಜಕೀಯ ಪ್ರಜ್ಞೆ, ಸಾಮಾಜಿಕ ಪ್ರಕ್ರಿಯೆಯು ಅಲ್ಲಿನ ವಿವಿಧ ನಗರಕೇಂದ್ರಿತ ಚಟುವಟಿಕೆಗಳ ಅಭ್ಯುದಯಕ್ಕೆ ಕಾರಣವಾಗಿದ್ದನ್ನು ತೆಂಕನಿಡಿಯೂರಿನ ಕುಳವಾರಿಗಳು ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಟ್ಟಿದೆ.

ಕಾದಂಬರಿಗಳಲ್ಲಿ ಹೋಟೆಲಿನಿಂದ ನಗರಸಂಸ್ಕೃತಿ ವ್ಯಕ್ತವಾದಂತೆ ಜನಪ್ರಿಯ ಕಾದಂಬರಿಗಳಲ್ಲೂ ಅಭಿವ್ಯಕ್ತಗೊಂಡಿರುತ್ತದೆ. ಕೆ.ಟಿ. ಗಟ್ಟಿ ಅವರ ಯುಗಾಂತರ ಕಾದಂಬರಿಯಲ್ಲಿ ನಗರಸಂಸ್ಕೃತಿ ಪ್ರತೀಕವಾಗಿ ಹೋಟೆಲು ಚಿತ್ರಿತವಾಗಿದೆ. ಕಾಂತಿಮತಿ ಮತ್ತು ಮಿತ್ರರನ್ನು ಜಯಂತನು ಭಾನುವಾರ ಪಾರ್ಟಿಗಾಗಿ ಆಹ್ವಾನಿಸುತ್ತಾನೆ. ನಗರದ ಹೋಟೆಲೊಂದರಲ್ಲಿ ಗ್ರಾಹಕರಾಗಿ, ಅಲ್ಲಿ ಪೂರೈಕೆಯಾಗುವ ಬ್ರಾಂಡಿ, ವಿಸ್ಕಿ, ಬಿಯರನ್ನು ಕಂಠಪೂರ್ತಿ ಕುಡಿದು ಪ್ರಜ್ಞಾಹೀನರಾಗುತ್ತಾರೆ. ಇವರನ್ನು ಉಪಾಯ ದಿಂದ ಕಾರೊಂದನ್ನು ತನ್ನ ಮನೆಗೆ ಕರೆದೊಯ್ಯಲು ಕಾಂತಿಮತಿ ಬಾಡಿಗೆಗೆ ಕರೆಸಿಕೊಳ್ಳುತ್ತಾಳೆ. ಕಾಂತಿಮತಿ ಅವಳು ಜಯಂತನನ್ನು ಬೇಡ್‌ರೂಮಿಗೆ ಕರೆದೊಯ್ಯುವ ಸನ್ನಿವೇಶವು ಇಲ್ಲಿದೆ.

ನಗರದ ಹೋಟೆಲು ಮಾಲೀಕರು ತಮ್ಮ ವ್ಯವಹಾರದ ಜೊತೆಗೆ ಹಲವಾರು ಎಡರು ತೊಡರುಗಳನ್ನು, ವಿದ್ಯಮಾನಗಳನ್ನು ಎದುರಿಸಬೇಕಾಗುತ್ತದೆ. ನಗರಪ್ರದೇಶದ ಹೋಟೆಲುಗಳ ವಿದ್ಯಮಾನಗಳು ಗ್ರಾಮೀಣ ಪ್ರದೇಶಗಳ ವಿದ್ಯಮಾನಗಳಿಗಿಂತ ಭಿನ್ನ ಸ್ವರೂಪದವುಗಳಾಗಿರುತ್ತವೆ. ವಿವಿಧ ಮನಸ್ಥಿತಿಯ ಗ್ರಾಹಕರ ವರ್ತನೆ–ನಡೆವಳಿಕೆಗಳನ್ನು, ಕಾರ್ಮಿಕರ ಅಥವಾ ಗ್ರಾಹಕರ ಸೋಗಿನಲ್ಲಿ ಬಂದು ಹಣ ಅಥವಾ ಬೆಲೆ ಬಾಳುವ ವಸ್ತುಗಳನ್ನು ದೋಚುವ ಕಳ್ಳರನ್ನು, ಮಾಮೂಲಿ ಅಥವಾ ಹಪ್ತ ವಸೂಲಿ ಮಾಡುವ ಪೊಲೀಸರು ಮತ್ತು ರೌಡಿಗಳನ್ನು ಎದುರಿಸುತ್ತಲೇ ಮುಂಬಯಿ ಯಂತಹ ಮಹಾನಗರಗಳಲ್ಲಿ ಹೋಟೆಲು ಉದ್ಯಮವನ್ನು ಮುನ್ನಡೆಸಬೇಕಾಗುತ್ತದೆ. ಎಷ್ಟೋ ಮಂದಿ ಹೋಟೆಲು ಮಾಲೀಕರು ಇಂತಹ ಅಡ್ಡಿ–ವಿಡ್ಡುರಗಳನ್ನು ಎದುರಿಸಲಾರದೆ ಹೋಟೆಲನ್ನು ಮುಚ್ಚಿ ಊರಿಗೆ ವಾಪಸ್ಸಾದ ಪ್ರಸಂಗಗಳು ಇವೆ. ಜಿ.ವಿ. ಪ್ರಭು ಅವರ 'ಕೃಷ್ಣಭಟ್ಟರು ಹಾಗೂ ಅವರ ಹೋಟೆಲು ಉದ್ಯಮವು' ಎಂಬ ಕಥೆಯು ಇಂತಹ ಸನ್ನಿವೇಶವೊಂದನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ಬೆಂಗಳೂರು ಮಹಾನಗರದಲ್ಲಿ ಹೋಟಲೊಂದನ್ನು ತೆರೆಯಬೇಕೆಂಬ ಕೃಷ್ಣಭಟ್ಟರ ಕನಸು ನುಚ್ಚು ನೂರಾಗುವುದನ್ನು ಕಥೆಯು ನಿರೂಪಿಸುತ್ತದೆ. ವ್ಯಾಸರಾಯ ನಿಂಜೂರ ಅವರ 'ತೆಂಕನಿಡಿಯೂರಿನ ಕುಳವಾರಿಗಳು' ಎಂಬ ಕಾದಂಬರಿಯು ಮುಂಬಯಿ ಮಹಾನಗರದಲ್ಲಿ ಹೋಟೆಲು ಉದ್ಯಮದ ಭಾಗವಾಗಿ ಬರುವ ಹಪ್ತ ವಸೂಲಿಯ ವಿವಿಧ ಮುಖಗಳನ್ನು ತೆರೆದಿಡುತ್ತದೆ. ಹೀಗೆ ಕಾರ್ಮಿಕರು ಮತ್ತು ಗ್ರಾಹಕರ ಸೋಗಿನಲ್ಲಿ ಹೋಟೆಲಿಗೆ ಬಂದು ತಮ್ಮ ಕೈಚಳಕ ತೋರಿಸುವ ಕಳ್ಳರು ಅವರ ಬಗೆಗೆ ದೂರು ಕೊಡಲು ಹೋದಾಗ ದೂರುದಾರರನ್ನೇ ಸುಲಿಗೆ ಮಾಡುವ

ಕಳ್ಳ ಪೊಲೀಸರು ಹೋಟೆಲು ಮಾಲೀಕರಿಂದ ಹಪ್ತ ವಸೂಲಿ ಮಾಡುವ ರೌಡಿಗಳು ಮತ್ತು ಪೋಲಿಸರು ಇವರು ನಡೆಸುವ ಮೋಸದಾಟಗಳ ವಿದ್ಯಮಾನಗಳು ಇವೆಲ್ಲಾ ನಗರಪ್ರದೇಶದಲ್ಲಿ 'ಹೋಟೆಲು ಸಂಸ್ಕೃತಿ'ಯಾಗಿ ಕನ್ನಡದ ಸಣ್ಣಕಥೆ–ಕಾದಂಬರಿಗಳಲ್ಲಿ ಚಿತ್ರಿತವಾಗಿವೆ.

ಒಟ್ಟಾರೆಯಾಗಿ ಆಧುನಿಕತೆಯ ಒಂದು ಘಟಕವಾದ ಹೋಟೆಲು ಕನ್ನಡದ ಸಣ್ಣಕಥೆ ಮತ್ತು ಕಾದಂಬರಿಗಳಲ್ಲಿ ಆಧುನಿಕರಣ ಪ್ರಕ್ರಿಯೆಯ ಪ್ರತೀಕವಾಗಿ ಪ್ರವರ್ತಿಸುವುದರ ಜೊತೆಗೆ ನಗರಸಂಸ್ಕೃತಿ, ನಗರಪ್ರಜ್ಞೆಗಳ ಅಭಿವ್ಯಕ್ತಿಯ ಸಾಧನವೂ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಕನ್ನಡದ ಬಹುಪಾಲು ಕಥೆ ಕಾದಂಬರಿಗಳಲ್ಲಿ ಕರ್ನಾಟಕದ ವಿವಿಧ ಗ್ರಾಮಾಂತರ ಪ್ರದೇಶಗಳಿಂದ ಬೆಂಗಳೂರು ಮುಂಬಯಿ ಗಳಂತೆ ಮಹಾನಗರಗಳಿಗೆ ಶಿಕ್ಷಣ ಹಾಗೂ ಉದ್ಯೋಗ ನಿಮಿತ್ಯ ವಲಸೆ ಹೋದ ವ್ಯಕ್ತಿಗಳ ಪಾತ್ರಗಳೇ ಹೆಚ್ಚಾಗಿ ಕಂಡುಬರುತ್ತವೆ. ಹೋಟೆಲು ಉದ್ಯಮವನ್ನು ಆರಂಭಿಸಿ ಪ್ರಗತಿ ಸಾಧಿಸುವ ವ್ಯಕ್ತಿಗಳ ಪಾತ್ರಗಳು ಅಲ್ಲಿರುತ್ತವೆ. ನಗರವಾಸಿಗಳಾದ ಇಂತಹ ಹೋಟೆಲು ಮಾಲೀಕರಾಗಲಿ, ಕಾರ್ಮಿಕರಾಗಲಿ, ಗ್ರಾಹಕರಾಗಲಿ ತಂತಮ್ಮ ನಗರಜೀವನದಲ್ಲಿ ಹಲವು ಸಂಕೀರ್ಣ ಅನುಭವಗಳನ್ನು ಪಡೆದಿರುತ್ತಾರೆ. ಇಂತಹ ಸಂಕೀರ್ಣ ಅನುಭವಗಳಿಗೆ ತಾಯ್ನಾಡಿನೊಂದಿಗಿನ ಅವರ ಸಂಬಂಧ ಅಥವಾ ಮುಖಾಮುಖಿಯ ಆಯಾಮಗಳು ಇರುತ್ತವೆ. ಸೂಕ್ಷ್ಮ ಸಂವೇದನಾಶೀಲರಾದ ಬರಹಗಾರರು ತಮ್ಮ ಕೃತಿಗಳ ಮೂಲಕ ಈ ತೆರನಾದ ಅನುಭವಗಳಿಗೆ ನೀಡುವ ಕಲಾತ್ಮಕ ಅಭಿವ್ಯಕ್ತಿಯೇ 'ನಗರಪ್ರಜ್ಞೆ' ಎನಿಸಿಕೊಳ್ಳುತ್ತದೆ. ನಗರಗಳಲ್ಲಿ ನೆಲೆಸಿರುವ ಲೇಖಕರು, ನಗರಜೀವನದ ಅನುಭವಗಳನ್ನು ಪಡೆದಿರುವ ಇತರ ಲೇಖಕರು ತಮ್ಮ ಕಥೆ–ಕಾದಂಬರಿಗಳಲ್ಲಿ ಹೋಟೆಲಿನ ಚಿತ್ರಣದ ಮೂಲಕ ನಗರಸಂಸ್ಕೃತಿ ಜೊತೆಗೆ ಇಂತಹ ನಗರಪ್ರಜ್ಞೆಯನ್ನು ಅಭಿವ್ಯಕ್ತಿಪಡಿಸಿರುವುದು ನಮಗೆ ಇಲ್ಲಿ ಮನದಟ್ಟಾಗುತ್ತದೆ.

ಅಧ್ಯಾಯ : ಆರು

# ಕಥನದ ಬೆಳವಣಿಗೆ ಮತ್ತು ಸನ್ನಿವೇಶ ನಿರ್ಮಾಣದಲ್ಲಿ ಹೋಟೆಲುಗಳ ಪಾತ್ರ

ಅಧ್ಯಾಯ : ಆರು

# ಕಥನದ ಬೆಳವಣಿಗೆ ಮತ್ತು ಸನ್ನಿವೇಶ ನಿರ್ಮಾಣದಲ್ಲಿ ಹೋಟೆಲುಗಳ ಪಾತ್ರ

## ೬.೧. ಕಥನದ ಬೆಳವಣಿಗೆ ಮತ್ತು ಸನ್ನಿವೇಶ ನಿರ್ಮಾಣ

ಈಗಾಗಲೇ ಗಮನಿಸಿದಂತೆ ಕನ್ನಡದ ಅನೇಕ ಕಥೆ-ಕಾದಂಬರಿಗಳಲ್ಲಿ ಆಧುನೀಕರಣ ಪ್ರಕ್ರಿಯೆಯ ಭಾಗವಾಗಿ ಹೋಟೆಲು ಚಿತ್ರಣಗೊಂಡಿದೆ. ಇದು ಸಾಹಿತ್ಯ ಮತ್ತು ಹೋಟೆಲಿನ ಅಂತಃಸಂಬಂಧದ ಒಂದು ಪ್ರಮುಖ ನೆಲೆಯಾದರೆ ಈ ಅಂತಃಸಂಬಂಧಕ್ಕೆ ಇನ್ನೊಂದು ನೆಲೆಯೂ ಇದೆ ಎಂಬುದನ್ನು ಮರೆಯುವಂತಿಲ್ಲ. ಅದುವೇ ಕಥನದ ಬೆಳವಣಿಗೆಗೆ ಮತ್ತು ಸನ್ನಿವೇಶ ನಿರ್ಮಾಣಕ್ಕೆ ಹೋಟೆಲಿನ ಬಳಕೆ. ಕಥೆ ಅಥವಾ ಕಾದಂಬರಿಯಲ್ಲಿ ಘಟನೆ ನಡೆಯುವುದಕ್ಕೆ ಒಂದು ಸ್ಥಳ, ಆವರಣ ಬೇಕಾಗುತ್ತದೆ. ಅದು ಮನೆಯಾಗಿರಬಹುದು, ಶಾಲೆ-ಕಾಲೇಜು, ವಿಶ್ವವಿದ್ಯಾಲಯಗಳಾಗಿರಬಹುದು, ಬಸ್ಸು ನಿಲ್ದಾಣವಾಗಿರಬಹುದು. ರೈಲ್ವೆ ನಿಲ್ದಾಣವಾಗಿರಬಹುದು, ಅಂಚೆ ಕಛೇರಿಯಾಗಿರಬಹುದು, ಆಸ್ಪತ್ರೆಯಾಗಿರಬಹುದು, ರಸ್ತೆಯಾಗಿರಬಹುದು, ಹಾಸ್ಟೆಲ್ ಆಗಿರಬಹುದು, ಕಾರ್ಖಾನೆಯಾಗಿರಬಹುದು ಅಥವಾ ಹೋಟೆಲಾಗಿರಬಹುದು. ಕಥೆ-ಕಾದಂಬರಿಗಳ ಘಟನೆ, ಸನ್ನಿವೇಶಗಳು ಹೋಟೆಲಿಗೆ ಸಂಬಂಧಿಸಿರುವುದು ಒಂದು ಬಗೆಯ ಸಂಬಂಧವಾದರೆ ಹೋಟೆಲಲ್ಲಿ ಸಂಭವಿಸುವುದು ಇನ್ನೊಂದು ತೆರನಾದ ಅಂತಃಸಂಬಂಧವಾಗಿದೆ. ಕಥೆ-ಕಾದಂಬರಿಗಳ ಘಟನಾವಳಿಗಳು ಹೋಟೆಲಲ್ಲಿ ಸಂಭವಿಸಿದರೆ ಅಲ್ಲಿ ಸನ್ನಿವೇಶ ನಿರ್ಮಾಣಕ್ಕಾಗಿ ಅಷ್ಟೇ ಹೋಟೆಲು ಬಳಕೆಯಾಗಿದೆ ಎನ್ನಬಹುದು.

ಕನ್ನಡದ ಅನೇಕ ಸಣ್ಣಕಥೆ-ಕಾದಂಬರಿಗಳಲ್ಲಿ ಸನ್ನಿವೇಶ ನಿರ್ಮಾಣಕ್ಕಾಗಿ ಮಾತ್ರ ಹೋಟೆಲನ್ನು ಬಳಸಿಕೊಳ್ಳಲಾಗಿದೆ. ಕೆಲವೊಂದು ಸಂದರ್ಭಗಳಲ್ಲಿ ಇಡೀ ಸನ್ನಿವೇಶಗಳು ಹೋಟೆಲಲ್ಲಿ ನಡೆಯ ಬಹುದು. ಅಂದರೆ ಒಂದು ಕಥೆ ಅಥವಾ ಕಾದಂಬರಿಯ ಇಡೀ ಘಟನಾವಳಿಯೆಲ್ಲ ಹೋಟೆಲಲ್ಲಿ

ಸಂಭವಿಸುವುದು. ಮತ್ತೆ ಕೆಲವು ಸಂದರ್ಭಗಳಲ್ಲಿ ಭಾಗಶಃ ಸನ್ನಿವೇಶಗಳು ಮಾತ್ರ ಹೋಟೆಲಲ್ಲಿ ಸಂಭವಿಸಬಹುದು. ಅದೇ ರೀತಿ ಬೇರೆ ಬೇರೆ ಘಟನೆ, ಸನ್ನಿವೇಶಗಳು ಬೇರೆ ಬೇರೆ ಆವರಣಗಳಲ್ಲಿ ನಡೆಯಬಹುದು.

ಕನ್ನಡದ ಅನೇಕ ಜನಪ್ರಿಯ ಮತ್ತು ಪತ್ತೆದಾರಿ ಕಾದಂಬರಿಗಳಲ್ಲಿ ಕೇವಲ ಸನ್ನಿವೇಶ ನಿರ್ಮಾಣಕ್ಕಾಗಿ ಅಷ್ಟೇ ಹೋಟೆಲು ಬಳಕೆಯಾಗುತ್ತದೆ. ಹಾಗೆ ಬಳಕೆಗೊಂಡಾಗ ಕಥನದ ಬೆಳವಣಿಗೆಗೂ ಅದು ಸಹಕಾರಿಯಾಗುತ್ತದೆ. ನಿರ್ದಿಷ್ಟವಾದ ಒಂದು ಆವರಣ, ಸ್ಥಳ ಅಥವಾ ಕೇಂದ್ರವಿಲ್ಲದಿದ್ದರೆ ಯಾವುದೇ ಘಟನೆ ನಡೆಯಲು ಸಾಧ್ಯವಿಲ್ಲ. ಅದರಂತೆ ಸಣ್ಣಕಥೆ-ಕಾದಂಬರಿಗಳಲ್ಲೂ ಘಟನೆ ನಡೆಯಲು ನಿರ್ದಿಷ್ಟವಾದ ಆವರಣವೊಂದು ಬೇಕೇ ಬೇಕು. ಹಾಗಾಗಿ ಸಣ್ಣಕಥೆ-ಕಾದಂಬರಿಗಳಲ್ಲಿ ಕಥನದ ಬೆಳವಣಿಗೆಯಾಗಬೇಕಾದರೆ ಆವರಣವು ಅನಿವಾರ್ಯವಾಗುತ್ತದೆ. ಆಧುನಿಕ ಬದುಕಿನ ಭಾಗವಾಗಿರುವ ಹೋಟೆಲು ಇಂತಹ ಆವರಣವಾಗಿ ಕನ್ನಡದ ಕಥೆ-ಕಾದಂಬರಿಗಳಲ್ಲಿ ಹೇಗೆ ಚಿತ್ರಣಗೊಂಡಿದೆ ಎಂಬುದನ್ನು ಇಲ್ಲಿ ಪರಿಶೀಲಿಸಬಹುದಾಗಿದೆ. ಹಾಗೆ ನೋಡಿದರೆ ಇದುವರೆಗೆ ಪರಿಶೀಲಿಸಿದ ಅನೇಕ ಕಥೆ-ಕಾದಂಬರಿಗಳಲ್ಲಿ ಆಧುನೀಕರಣ ಪ್ರಕ್ರಿಯೆಯ ಪ್ರತೀಕವಾಗಿಯೂ, ಸನ್ನಿವೇಶ ನಿರ್ಮಾಣದ ಘಟಕವಾಗಿಯೂ ಹೋಟೆಲು ಬಳಕೆ ಗೊಂಡಿದ್ದನ್ನು ಗಮನಿಸಬಹುದಾಗಿದೆ. ಈಗಾಗಲೇ ಗಮನಿಸಿದ ಅವುಗಳ ಹೊರತಾಗಿಯೂ ಕೆಲವು ಕೃತಿಗಳಲ್ಲಿ ಕೇವಲ ಸನ್ನಿವೇಶ ನಿರ್ಮಾಣಕ್ಕಾಗಿ ಮಾತ್ರ ಹೋಟೆಲು ಬಳಕೆಗೊಂಡಿದೆ. ಅಂತಹ ಕೆಲವು ಕೃತಿಗಳನ್ನು ಇಲ್ಲಿ ಗಮನಿಸಬಹುದು.

ಕಥನಸಾಹಿತ್ಯದಲ್ಲಿ ಆಧುನಿಕತೆಯ ಘಟಕವಾಗಿಯೂ, ಆಧುನೀಕರಣ ಪ್ರಕ್ರಿಯೆಯ ಪ್ರತೀಕ ವಾಗಿಯೂ, ಗ್ರಾಮಾಂತರ ಪ್ರದೇಶದ ಸ್ಥಿತ್ಯಂತರದ ಪ್ರಮುಖ ಕೇಂದ್ರವಾಗಿಯೂ, ನಗರ ಸಂಸ್ಕೃತಿ ಮತ್ತು ನಗರಪ್ರಜ್ಞೆಯ ಪ್ರತೀಕವಾಗಿಯೂ ಹೋಟೆಲು ಚಿತ್ರಿತವಾಗಿದೆ. ಈ ಪರಿಕಲ್ಪನೆಗಳ ಹೊರತಾಗಿಯೂ ಹೋಟೆಲು ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿದೆ. ಅದುವೇ ಸನ್ನಿವೇಶ ನಿರ್ಮಾಣ ಮತ್ತು ಕಥನದ ಬೆಳವಣಿಗೆಗಾಗಿ ಕಥನಸಾಹಿತ್ಯದಲ್ಲಿ ಹೋಟೆಲನ್ನು ಬಳಸಿಕೊಂಡ ಬಗೆ. ಕನ್ನಡದ ಅನೇಕ ಸಣ್ಣಕಥೆ-ಕಾದಂಬರಿಗಳಲ್ಲಿ ಸನ್ನಿವೇಶ ನಿರ್ಮಾಣಕ್ಕಾಗಿ ಮಾತ್ರ ಹೋಟೆಲನ್ನು ಬಳಸಿಕೊಳ್ಳಲಾಗಿದೆ. ಕೆಲವೊಂದು ಸಂದರ್ಭದಲ್ಲಿ ಉದಾಹರಣೆಗೆ ಕೊಡಗಿನ ಗೌರಮ್ಮನವರ 'ವಾಣಿ ಸಮಸ್ಯೆ' ಕಥೆಯಲ್ಲಿ ಹೋಟೆಲು ಸನ್ನಿವೇಶ ನಿರ್ಮಾಣಕ್ಕಾಗಿ ಬಳಕೆಗೊಂಡಿದೆ. ರತ್ನ, ವಾಣಿ, ಇಂದಿರಾ ಕಥೆಯ ಪ್ರಮುಖ ಪಾತ್ರಗಳಾಗಿ ಚಿತ್ರಿತರಾಗಿದ್ದಾರೆ. ರತ್ನ ಮತ್ತು ವಾಣಿ ಇಬ್ಬರು ದಂಪತಿಗಳಾಗಿ ಒಳ್ಳೆಯ ರೀತಿಯಲ್ಲಿ ಬದುಕುತ್ತಿರುವವರು. ಇಂದಿರಾ ಒಬ್ಬಂಟಿಯಾಗಿ ವಾಣಿಯ ನೆರೆಮನೆಯಲ್ಲಿ ವಾಸಿಸುತ್ತಿರುತ್ತಾಳೆ. ಹೀಗಿರುವಾಗ ಅನಿರೀಕ್ಷಿತವಾಗಿ ವಾಣಿ ತವರೂರಿಗೆ ಹೋಗುವ ಪ್ರಸಂಗವು ಬಂದಿತು. ತಾನು ಹೊರಡುವಾಗ ವಾಣಿಯು ತನ್ನ ಗಂಡನ ಊಟ-

ತಿಂಡಿ ವಿಚಾರವನ್ನು ನೋಡಿಕೊಳ್ಳುವಂತೆ ಇಂದಿರಾಳಿಗೆ ಹೇಳಿಹೋಗುತ್ತಾಳೆ. ಆದರೆ ಒಬ್ಬಂಟಿಯಾದ ಇಂದಿರಾಳನ್ನು ತಾನು ಊಟ-ತಿಂಡಿಯ ವಿಷಯದಲ್ಲಿ ಭೇಟಿಯಾದರೆ ಅನಗತ್ಯ ಅಪವಾದಕ್ಕೆ ಕಾರಣವಾಗಬಹುದೆಂಬ ಭಯದಿಂದ ರತ್ನನು ತನ್ನ ಊಟ-ತಿಂಡಿಗೆ ಹೋಟೆಲನ್ನು ಅವಲಂಬಿಸುತ್ತಾನೆ. ಹೆಂಡತಿ ತವರುಮನೆಯಿಂದ ವಾಪಸ್ಸಾಗುವವರೆಗೆ ದಿನಕ್ಕೆರಡು ಬಾರಿಯಂತೆ ಹೋಟೆಲಿಗೆ ಹೋಗಿ ಬರುತ್ತಾನೆ.

"ವಾಣಿ ಹೊರಟುಹೋದ ಮೇಲೆ ಅವನಿಗೆ ಹೋಟೆಲಲ್ಲಿ ಊಟ-ಕ್ಲಬ್‌ನಲ್ಲಿ ವಾಸ. ಮನೆಗೆ ಬರಬೇಕಾದರೆ ಬಟ್ಟೆ ಬದಲಾಯಿಸುವುದಕ್ಕೆ, ಮತ್ತೆ ರಾತ್ರಿ ನಿದ್ರೆ ಮಾಡುವುದಕ್ಕೆ ಅಷ್ಟೇ. ಕ್ಲಬ್‌ನಿಂದ ಕೊನೆಯ ವ್ಯಕ್ತಿ ಹೋಗುವ ತನಕವೂ ಅವನಲ್ಲೇ ಇರುತ್ತಿದ್ದ. ಮತ್ತೆ ಹೋಟೆಲಿಗೆ ಹೋಗಿ ಊಟ ಮಾಡಿ ಮನೆ ತಲುಪಬೇಕಾದರೆ ಹನ್ನೊಂದು ಗಂಟೆ ಹೊಡೆದು ಹೋಗುತ್ತಿತ್ತು" (ದಿವಾಕರ ಎಸ್. (ಸಂ), ೧೯೯೭, ಪು. ೧೨೦-೧೨೧). ಈ ಕಥೆಯಲ್ಲಿ ವಾಣಿಯ ಅನುಪಸ್ಥಿತಿ ಇಂದುವಿನ ಬಗೆಗೆ ರತ್ನನು ಇರಿಸಿಕೊಂಡಿದ್ದ ಭಾವನಾತ್ಮಕತೆ ಈ ಎರಡನ್ನು ಮರೆಸುವ ತಾಣವಾಗಿ ಹೋಟೆಲು ಪ್ರಸ್ತಾಪಗೊಂಡಿದೆ.

ಯಶವಂತ ಚಿತ್ತಾಲರ 'ಮುಖಾಮುಖಿ' ಕಥೆಯಲ್ಲಿ ದಾಸಪ್ಪನ ಚಾದಂಗಡಿ ಸನ್ನಿವೇಶ ನಿರ್ಮಾಣಕ್ಕಾಗಿ ಬಳಕೆಗೊಂಡಿದೆ. ಕಥೆಯಲ್ಲಿ ಇಬ್ಬರು ವ್ಯಕ್ತಿಗಳ ನಡುವಿನ ಮುಖಾಮುಖಿಯಾಗುವ ಸನ್ನಿವೇಶವೊಂದು ಮಾದನ ಚಿಟ್ಟಿ ಎಂಬ ಊರಲ್ಲಿರುವ ದಾಸಪ್ಪನ ಚಾದಂಗಡಿಯಲ್ಲಿ ನಡೆಯುತ್ತದೆ. ಕಥೆಯ ನಿರೂಪಕನು ಚಾದಂಗಡಿಯ ಮಾಲೀಕನಾದ ದಾಸಪ್ಪನ ಮಗ ಸರ್ವೋತ್ತಮನು ಸ್ನೇಹಿತರು. ಸರ್ವೋತ್ತಮ ಮತ್ತು ಮೀಸೆಯವನು ಚಾದಂಗಡಿಯಲ್ಲಿ ಪರಸ್ಪರ ಮುಖಾಮುಖಿಯಾಗುತ್ತಾರೆ. ವಿಧವೆ ಇಂದಿರಕ್ಕನ ಜೊತೆಗೆ ಅನೈತಿಕ ಸಂಬಂಧವಿರಿಸಿಕೊಂಡಿದ್ದ ಮೀಸೆಯವನು ದಾಸಪ್ಪನ ಚಾದಂಗಡಿಗೆ ಹಾಗಾಗ ಬರುತ್ತಲಿದ್ದ. ಇಂದಿರಕ್ಕನೊಂದಿಗೆ ಆತ ಅನೈತಿಕ ಸಂಬಂಧವಿರಿಸಿಕೊಂಡಿದ್ದ ವಿಷಯವು ಹೋಟೆಲಿಗೆ ಬರುವ ಗ್ರಾಹಕರ ಗುಸುಗುಸು ಮಾತಿನ ವಸ್ತುವಾಗಿತ್ತು. ದಾಸಪ್ಪನ ಮಗ ಸರ್ವೋತ್ತಮ ಹಾಗೂ ನಿರೂಪಕರಿಬ್ಬರೂ ಆ ಗುಸುಗುಸು ಮಾತನ್ನು ಕೇಳಿಸಿಕೊಂಡವರಾಗಿದ್ದರು. ಕೊನೆಗೆ ಇಂದಿರಕ್ಕನೊಂದಿಗೆ ಸಂಬಂಧವಿರಿಸಿಕೊಂಡಿದ್ದ ಮೀಸೆಯ ವ್ಯಕ್ತಿ ಆತನೇ ಎಂಬುದನ್ನು ಸರ್ವೋತ್ತಮ ಮತ್ತು ನಿರೂಪಕರು ಗುರುತಿಸುವ ಸನ್ನಿವೇಶವು ದಾಸಪ್ಪನ ಚಾದಂಗಡಿಯಲ್ಲಿ ನಡೆಯುತ್ತದೆ. ಚಾದಂಗಡಿಗೆ ಬರುತ್ತಿದ್ದ ಮೀಸೆಯವನ ವರ್ತನೆ ಹೇಗಿತ್ತೆಂಬುದನ್ನು ಕಥೆಯ ಸನ್ನಿವೇಶವೊಂದರ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. "ಅಪ್ಪನ ನಿರ್ಗಮನದಷ್ಟೇ ನಿಗೂಢವಾದ ಆ ಪೊತ್ತೆ ಮೀಸೆಯವನ ಆಗಮನ, ಪೊತ್ತೆ ಮೀಸೆಯವನು ಎನ್ನುವುದಕ್ಕೆ ಕಾರಣ ಅವನ ಪೊತ್ತೆ ಮೀಸೆಯಷ್ಟೇ ನನ್ನ ಸ್ಮೃತಿಯಲ್ಲಿ ನೆಲೆನಿಂತಿದ್ದು, ಅವನ ರೂಪ ನೆನದಾಗಲೆಲ್ಲಾ ಕಣ್ಣುಮುಂದೆ ನಿಲ್ಲುತ್ತಿದ್ದುದು. ಎಲ್ಲಿಂದ ಬಂದ? ಯಾಕ ಬಂದ?

ಗೊತ್ತಾಗಲಿಲ್ಲ. ಅಂತೂ ಬಂದ ಬಂದವನೇ ಮಾದನಚಟ್ಟಿಯಲ್ಲಿ ಷಷ್ಠಿ ತೇರಿನ ರಾತ್ರಿ ಮೃಗಬೇಟೆ ಯಾಡುತ್ತಿದ್ದ ಜೋಡಿ ಕಟ್ಟೆಗಳಿಲ್ಲವೇ? ಅವುಗಳ ಹತ್ತಿರವೇ ಇದ್ದ ದಾಸಪ್ಪನ ಚಾದಂಗಡಿಯಲ್ಲಿ ಝಾಂಡ ಹಾಕಿದ. ದಾಸಪ್ಪನ ಮಗ ಸರ್ವೋತ್ತಮ ನನ್ನ ಗೆಳೆಯ ಅವನಿಂದಲೇ ಗೊತ್ತಾಯಿತು. ಹೋದ ಮೂರು ದಿನಗಳಿಂದಲೂ ಸಂಜೆಯ ಹೊತ್ತಿಗೆ ಚಹಾ ಕುಡಿಯುವ ನೆಪಮಾಡಿ ಅಂಗಡಿಗೆ ಬರುತ್ತಾನಂತೆ. ಕತ್ತಲೆಯಾದ ಮೂಲೆಯಲ್ಲಿಯ ಬಾಂಕಿನ ಮೇಲೆ ಒಬ್ಬನೇ ಕೂತು ಚಹಾ ಕುಡಿಯುತ್ತಾನಂತೆ, ಬೀಡಿ ಸೇದುತ್ತಾನಂತೆ. ಯಾರೊಬ್ಬರ ಕೂಡ ಮಾತಿಲ್ಲ, ಕತೆಯಿಲ್ಲ. ಕತ್ತಲೆಯಾದದ್ದೇ ಹೊರಟು ಹೋಗುತ್ತಿದ್ದ. ಮುಂದೊಂದು ದಿನ ಗುಸುಗುಸು ಎಂದಂತೆ ಸುದ್ದಿ. ಅವನು ಇಳಕೊಂಡಿದ್ದು ಗೋಕರ್ಣದ ಒಬ್ಬರ ಮನೆಯಲ್ಲೆಂದು. ಹಾಗೆನೇ ಹಳ್ಳಿಗೆ ಬರುತ್ತಿದ್ದುದು ಇಂದಿರಕ್ಕನನ್ನು ಸಂದಿಸಲೆಂದೇ"(ಯಶವಂತ ಚಿತ್ತಾಲ, ೨೦೦೭, ಪು. ೧೧೧-೧೧೨). ಹೀಗೆ ವಿವಿಧ ಸನ್ನಿವೇಶ ಹಾಗೂ ನೆನಪುಗಳ ಮುಖಾಮುಖಿಗೆ ದಾಸಪ್ಪನ ಚಾದಂಗಡಿ ಕೇಂದ್ರವಾಗಿ ರುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ. ಚಾದಂಗಡಿಯಲ್ಲಿ ಮೀಸೆಯವನನ್ನು ನೋಡಿದಾಗಲೇ ನಿರೂಪಕರ ಸ್ಮೃತಿ ಪಟಲದಲ್ಲಿ ನಡೆದ ಹಲವಾರು ಘಟನೆ-ಸನ್ನಿವೇಶಗಳ ನೆನಪುಗಳು ಬಿಚ್ಚಿಕೊಳ್ಳುತ್ತವೆ. ಅಂತಹ ನೆನಪುಗಳಲ್ಲಿ ತನ್ನ ಊರಿನವಳಾದ ಇಂದಿರಕ್ಕನ ಬದುಕಿನ ಕುರಿತಾದ ನೆನಪುಗಳು ಸೇರಿಕೊಂಡಿರುತ್ತವೆ. ಹೀಗೆ ದಾಸಪ್ಪನ ಚಾದಂಗಡಿಯಲ್ಲಿ ನಿರೂಪಕರು ಮೀಸೆಯವನನ್ನು ನೋಡುವ ಒಂದು ಸಣ್ಣ ಸನ್ನಿವೇಶವು ಇಡೀ ಕಥನದ ಬೆಳವಣಿಗೆಗೆ ಕಾರಣವಾಗಿರುವುದನ್ನು ನಾವಿಲ್ಲಿ ಗುರುತಿಸಬಹುದಾಗಿದೆ.

ಅನಂತಮೂರ್ತಿ ಅವರ 'ಪ್ರಸ್ತ' ಕಥೆಯಲ್ಲಿ ಪುಂಡರೀಕ ನೇತ್ರಾವತಿಯ ಆಸೆಗಾಗಿ ಹೋಟೆಲಿಡುವುದಕ್ಕೆ ಒಪ್ಪಿತವಾದ ಸನ್ನಿವೇಶವಿದೆ. ಇವರ ಇನ್ನೊಂದು ಕಥೆ ಆಕ್ರಮಣದಲ್ಲಿಯೂ ಮನಸ್ಸು ತಿಳಿಯಾಗಲೆಂದು ನಿರೂಪಕ ಬಾರೊಂದರಲ್ಲಿ ಬ್ರ್ಯಾಂಡಿ ಕುಡಿಯುವ ಸನ್ನಿವೇಶವು ಚಿತ್ರಿತವಾಗಿದೆ. "ಬಾರಿನ ಸ್ಟೂಲಿನ ಮೇಲೆ ಕೂತಿದ್ದ ನಿರೂಪಕನು ಅಕಸ್ಮಾತ್ ಎಂಬಂತ ಟಾಮ್ ಮತ್ತು ಶೀಲರನ್ನು ಭೇಟಿಯಾಗಿ ಅವರ ಮಾತು, ವರ್ತನೆಗೆ ಸಾಕ್ಷಿಯಾಗುತ್ತಾನೆ. ಆಕ್ರಮಣ ಎಂಬ ಪರಿಕಲ್ಪನೆಯನ್ನೇ ಹಿಗ್ಗಿಸುವ ಕಥೆಯಾಗಿದೆ. ಇಲ್ಲಿ ಕೆಲವೇ ಗಂಟೆಗಳ ಬಾರೊಂದರ ಸೀಮಿತ ಕಾಲಾವಕಾಶದಲ್ಲಿ ಮೂವರು ವ್ಯಕ್ತಿಗಳ ನಡುವಣ ಮುಖಾಮುಖಿಯಾಗಿದೆ. ಮನುಷ್ಯ ಸಂಬಂಧಗಳ ಸ್ವರೂಪ ಮತ್ತು ಬೆಳವಣಿಗೆಯಲ್ಲಿ ಸನ್ನಿವೇಶಗಳು ನಿರ್ಮಾಣವಾಗಿರುತ್ತವೆ" (ಅಶೋಕ ಟಿ.ಪಿ., ೨೦೧೪, ಪು. ೫೭-೫೮). ಇವರ ಸೂರ್ಯನ ಕುದುರೆ ಕಥೆಯಲ್ಲಿ ಹೆಡೆವೆಂಕಟ ಸಂಸಾರಿಯಾಗಿ ಚಿತ್ರಿತನಾಗಿದ್ದಾನೆ. "ಅವನು ಕುಟುಂಬ ನಿರ್ವಹಣೆಯ ಜವಾಬ್ದಾರಿ ಯನ್ನು ಬೆನ್ನಮೇಲೆ ಹೊತ್ತುಕೊಂಡಿರುತ್ತಾನೆ. ಮಾರ್ಕ್ಸ್ ಹೇಳುವ 'ಗ್ರಾಮಮೌಢ್ಯಕ್ಕೆ' ಉದಾಹರಣೆ ಯಾಗಿರುವವನು. ಅಭ್ಯಂಜನ ಮಾಡಿಸಿ ಹೊಟ್ಟೆ ಹೊರೆಯುತ್ತಿರುವವನು. ಇವನು ಯಾಕೆ

ನಗರದಲ್ಲಿ ಉನ್ನತ ಹುದ್ದೆಯಲ್ಲಿರುವ ಪ್ರತಿಷ್ಠಿತ ವ್ಯಕ್ತಿ ಅನಂತಗೆ ಸವಾಲಾಗಬೇಕು? ನೆನಪಾಗಿಯೂ ಏಕೆ ಕಾಡಬೇಕು? ಹೆಡೆವೆಂಕಟ ಅನಂತುವಿನ ಮನಸ್ಸಿನಲ್ಲಿ ಉಳಿದಿರುವುದಕ್ಕೆ ಅವನ ವಿಲಕ್ಷಣ ಆಕೃತಿ ಕಾರಣವೇ? ಬಾಲ್ಯದ ಸಖ್ಯ ಕಾರಣವೇ? ತನ್ನ ಬದುಕಿನ ಸಾಫಲ್ಯಕ್ಕಾಗಿ ಅನಂತು ಕಂಡುಕೊಂಡ ಮಾರ್ಗಗಳನ್ನು ಗಂಭೀರವಾಗಿ ತೆಗೆದುಕೊಳ್ಳದ ವೆಂಕಟನ ಸ್ಥಾಯಿಭಾವ ಯಾವುದು? ಉಡಾಫೆ, ಉದಾಸೀನ, ನಿರ್ಲಿಪ್ತತೆ, ಅಸಹಾಯಕತೆ, ಬೇಜವಾಬ್ದಾರಿತನ, ಅಲ್ಪತೃಪ್ತತೆ, ಸರಳತೆ, ಮುಗ್ಧತೆ, ಅವಧೂತತನ, ಅಂಗಡಿಯ ಪ್ರಭುವಿನ ಕಣ್ಣಿನಲ್ಲಿ "ಒಟ್ಟಿನಲ್ಲಿ ಜೋಯಿಸ್ರು ನನ್ನ ಹಾಗೆ ನತದೃಷ್ಟ ಮನುಷ್ಯ, ಮಗ ಇದಾನೆ ಹೆಸರಿಗೆ, ಶುದ್ಧಪುಂಡ, ಓದಲಿಲ್ಲ ಪಾಸಾಗಲಿಲ್ಲ. ಹೋಟ್ಲು ಚಟ ಬೇರೆ, ಏನೋ ನಾವಿದ್ದ ಕಾಲ ಒಳ್ಳೇದು. ಈಗ ಎಲ್ಲಾ ಯಶಸ್ವಿಯಾಗಿ ಬಿಡ್ತು"(ಅಶೋಕ ಟಿ.ಪಿ., ೨೦೧೪, ಪು. ೬೭). ಹೀಗೆ ಹೆಡೆವೆಂಕಟನ ವ್ಯಕ್ತಿತ್ವವು ಹೋಟೆಲಿನ ಚಿತ್ರಣದೊಂದಿಗೆ ಕಥೆಯು ವಿಸ್ತೃತವಾಗಿರುವುದನ್ನು ಇಲ್ಲಿ ಕಾಣಬಹುದು.

ಅಮರೇಶ ನುಗಡೋಣಿಯವರ 'ಕಾಗಿಕೂಟ' ಕಥೆಯಲ್ಲಿ ಚಾದಂಗಡಿ ಮಾಲೀಕನಾದ ಮಾಲಿಂಗನು ಹಳ್ಳಿಯೊಂದರಲ್ಲಿ ಸಂಭವಿಸುವ ಘಟನೆ-ವಿದ್ಯಮಾನಗಳಿಗೆ ಸ್ಪಂದಿಸುವ ಸನ್ನಿವೇಶವು ರೋಚಕತೆಯಿಂದ ಕೂಡಿದೆ. ಮುಖ್ಯವಾಗಿ ಇಲ್ಲಿ ಮಾಲಿಂಗನ ಜೀವನದಲ್ಲಿ ಸಂಭವಿಸುವ ಘಟನೆ-ವಿದ್ಯಮಾನಗಳು ಆತನ ಚಾದಂಗಡಿಯನ್ನು ಕೇಂದ್ರವಾಗಿರಿಸಿಕೊಂಡಿರುತ್ತವೆ. ಮಾಲಿಂಗ ಹೊಟ್ಟೆಪಾಡಿಗಾಗಿ ಹಳ್ಳಿಯೊಂದರ ಖಾಲಿ ಜಾಗದಲ್ಲಿ ಚಾದಂಗಡಿ ಪ್ರಾರಂಭಿಸಿರುತ್ತಾನೆ. ಚಾದಂಗಡಿ ಪ್ರಾರಂಭದೊಂದಿಗೆ ಆತನಲ್ಲಿರುವ ಕಲ್ಯಾಣ ಗುಣಗಳು ಒಂದೊಂದಾಗಿ ಬೆಳಕಿಗೆ ಬರತೊಡಗುತ್ತವೆ. ಮೂಡಲ ಹರಿಯುತ್ತಿದ್ದಂತೆ ಮಾಲಿಂಗನು ಚಾದಂಗಡಿ ಸೇರಿ ತನ್ನ ದಿನನಿತ್ಯದ ಕೆಲಸಗಳಲ್ಲಿ ನಿರತನಾಗಿರುತ್ತಿದ್ದನು. ಬರಬರುತ್ತಾ ಮಾಲಿಂಗನ ಅಂತರಂಗದ ಕಣ್ಣುಗಳು ತನ್ನೂರಿನ ಸುಮಿತ್ರಾಳನ್ನು ಸುತ್ತುವರಿದ ಘಟನೆಯು ಕಥೆಯಲ್ಲಿ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಈ ಘಟನೆಗೆ ಪೂರಕವಾಗಿ ಮಾಲಿಂಗನು ಸುಮಿತ್ರಾಳನ್ನು ವರ್ಣಿಸುವ ಸನ್ನಿವೇಶವು ಸೇರಿಕೊಂಡಿದೆ. ಅವಳ ನಡತೆ, ಶೃಂಗಾರ, ಮಾತುಗಾರಿಕೆ ಇತ್ಯಾದಿಗಳ ವರ್ಣನೆಯು ಚಾದಂಗಡಿಯಲ್ಲಿ ಒಂದು ಬಗೆಯ ಕಾವ್ಯ ಕಮ್ಮಟದ ಸನ್ನಿವೇಶವನ್ನು ನಿರ್ಮಾಣ ಮಾಡುತ್ತದೆ.

ಸುಮಿತ್ರಾಳು ಒಂದೆರಡು ದಿನ ಬಾರದೆ ಮತ್ತೆ ಬಂದಾಗ ಮಾಲಿಂಗನಲ್ಲಿ ಉತ್ಸಾಹ, ಸಡಗರಗಳು ಗರಿಗೆದರುತ್ತಿದ್ದವು. ಅಲ್ಲದೆ ಅವಳ ಮೈಮಾಟ, ಶೃಂಗಾರ ಇತ್ಯಾದಿಗಳನ್ನು ವರ್ಣಿಸುತ್ತಾ ಅವಳನ್ನು ಮಾಲಿಂಗನು ವಿವಿಧ ಹೆಸರುಗಳಿಂದ ಕರೆಯುವ ಸನ್ನಿವೇಶವು ಕಥೆಯಲ್ಲಿ ಚಿತ್ರಣಗೊಂಡಿದೆ. ಮಾಲಿಂಗನ ವರ್ಣನೆಯಿಂದ ಸಂತೋಷಗೊಂಡ ಸಮಿತ್ರಾಳು ತನ್ನ ಉಟ್ಟ ಸೀರೆ ಬಿರಿಯುವಂತೆ ಹಿರಿಹಿರಿ ಹಿಗ್ಗುತ್ತಾಳೆ. ಸುಮಿತ್ರಾಳು ಮಧ್ಯಾಹ್ನದಲ್ಲಿ ಯಾರು ಇಲ್ಲದ ಸಮಯ ಸಾಧಿಸಿ ಬರುವುದು, ಯಾರಾದರೂ ಒಬ್ಬೊಬ್ಬರು ಇದ್ದರು ಲೆಕ್ಕಕ್ಕೆ ತೆಗೆದುಕೊಳ್ಳದೇ ಒಳಬರುವ ಸಂದರ್ಭವು

ಚಾದಂಗಡಿಯ ಹಿತ್ತಲ ಬಾಗಿಲಿನಲ್ಲಿ ಒಂದು ಗ್ಲಾಸಿನಲ್ಲಿ ಚಾ ಹಾಕಿಸಿಕೊಂಡು ಹೋಗುವ ಸನ್ನಿವೇಶವು ಹಳ್ಳಿಯಲ್ಲಿ ಸುದ್ದಿಗೆ ಗ್ರಾಸವಾಗುತ್ತದೆ.

ಅನಕೃ ಅವರ ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು, ಕಳಂಕಿನಿ, ಅಪರಂಜಿ, ಪಂಕಜ, ಸುಂದರೂ ಸಂಸಾರ ಮೊದಲಾದ ಕಾದಂಬರಿಗಳಲ್ಲೂ ಸನ್ನಿವೇಶ ನಿರ್ಮಾಣಕ್ಕೆ ಹೋಟೆಲು ಬಳಕೆಯಾಗಿದೆ. 'ನಗ್ನಸತ್ಯ' ಕಾದಂಬರಿಯಲ್ಲಿ ಭಾಗಮ್ಮಳ ದುರಾಶೆಯ ಬದುಕು, ಕಮಲಾಳ ಹೀನಾಯ ಬದುಕಿಗೆ ಬೇಸತ್ತ ಶ್ರೀನಾಥ ಅವರ ಮನೆಯಿಂದ ದೂರವಾಗುತ್ತಾನೆ. ನಂತರ ಕಮಲಾಳು ತನ್ನ ಈ ಸ್ಥಿತಿಗೆ ಕಾರಣಳಾದ ತಾಯಿಯನ್ನು ಶಪಿಸುತ್ತಾ ಶ್ರೀನಾಥನಿಗಾಗಿ, ಅವನ ಪ್ರೀತಿಗಾಗಿ ಹಂಬಲಿಸುತ್ತಾ ಕುಡಿತದಲ್ಲಿ ಮಗ್ನಳಾಗುತ್ತಾಳೆ. ಕಾಲ ಉರುಳಿದಂತೆ ಕಮಲಾಳಲ್ಲಿದ್ದ ಸಂಗ್ರಹದ ಹಣ ಬರಿದಾಗುತ್ತದೆ. ಅವಳ ರೋಗಗಳು ಹೆಚ್ಚಾಗಿ ಹಣದ ಸಂಪಾದನೆಗೆ ಮುತ್ತಮ್ಮನ ಮನೆಯ ದಾರಿಯನ್ನು ಹಿಡಿಯುತ್ತಾಳೆ. ಕ್ರಮೇಣ ಕಮಲಾಳ ಮನೆ ಗಂಡಸರಿಗೆ ಕದವಿಲ್ಲದ ಮನೆಯಾಗುತ್ತದೆ. ಶ್ರೀನಾಥ, ಭಾಗಮ್ಮ ಮತ್ತು ಕಮಲಾಳ ಮೋಸಕ್ಕೆ ಒಳಗಾಗಿ ಯಾರಿಗೂ ಕಾಣದೆ ಹೋಟೆಲೊಂದರಲ್ಲಿ ವಾಸ ಮಾಡುತ್ತಿರುತ್ತಾನೆ. ನಾಗರಾಜ ಅವನ ವಿಳಾಸವನ್ನು ಪತ್ತೆ ಮಾಡಿ ಅವನ ಗೆಳೆಯರಾದ ಶರ್ಮ, ನೀಲಕಂಠರಾಯರನ್ನು ಕರೆತಂದು ಶ್ರೀನಾಥನು ಹೋಟೆಲಲ್ಲಿ ರುವ ಸ್ಥಿತಿ ತೋರಿಸುವ ಸನ್ನಿವೇಶವು ಕಾದಂಬರಿಯಲ್ಲಿ ಮೂಡಿಬಂದಿದೆ.

'ಸಂಜೆಗತ್ತಲು' ಕಾದಂಬರಿಯಲ್ಲಿ ಸರಸ್ವತಿಯ ಹೀನಚಾರಿತ್ರ್ಯವನ್ನು ತಿಳಿದುಕೊಂಡ ಜೀವಣ್ಣರಾಯ ಅವಳಿಂದ ದೂರವಾಗುತ್ತಾನೆ. ರಾಮರಾಜಪ್ಪ, ನಂಜಪ್ಪ, ಜೀವಣ್ಣರಾಯರ ವರ್ತನೆಯಿಂದ ಸರಸ್ವತಿ ಕುದಿಯತೊಡಗುತ್ತಾಳೆ. ಕೊನೆಗೆ ಹಣದ ಸಂಪಾದನೆಗೆ ಜೀವಣ್ಣರಾಯ ನಿಂದಲೇ ಪರಿಚಯವಾಗಿದ್ದ 'ಸನ್‌ರೈಸ್ ಹೋಟೆಲಿ'ನಲ್ಲಿ ಆಶ್ರಯ ಪಡೆಯುತ್ತಾಳೆ. ಅಲ್ಲಿ ಅಲ್ಪಸ್ವಲ್ಪ ಹಣ ಸಂಪಾದನೆಗೆ ತೊಡಗುವ ಸನ್ನಿವೇಶವಿದೆ. ಇದೇ ಕಾದಂಬರಿಯಲ್ಲಿನ ಮತ್ತೊಂದು ಹೋಟೆಲು ಸಂಬಂಧಿತ ಸನ್ನಿವೇಶ ಇಲ್ಲಿ ಏರ್ಪಟ್ಟಿದೆ. ಸರಸ್ವತಿ ಇದ್ದ ತನ್ನ ಎಲ್ಲಾ ಗಿರಾಕಿಗಳನ್ನು ದೂರ ಮಾಡಿಕೊಂಡ ಮೇಲೆ ರೇಷನ್ ಇನ್ಸ್‌ಪೆಕ್ಟರ ದೇವರಾಜನ ಸ್ನೇಹ ಮಾಡುತ್ತಾಳೆ. ದೇವರಾಜನನ್ನು ಸಾಕಷ್ಟು ತೃಪ್ತಿಗೊಳಿಸಿದ ಸರಸ್ವತಿ ಅವನನ್ನು ಮೋಹದ ಬಲೆಯಲ್ಲಿ ಬೀಳಿಸಿ ಕೊಳ್ಳುತ್ತಾಳೆ. ಇವುಗಳೆಲ್ಲದರ ಜೊತೆಗೆ 'ಸನ್‌ರೈಸ್ ಹೋಟೆಲಿ'ನೊಂದಿಗೆ ಸಂಪರ್ಕ ಬೆಳೆಸಿಕೊಳ್ಳುವ ಸಂದರ್ಭವು ಇಲ್ಲಿದೆ.

ಇದೇ ಲೇಖಕರ 'ಅಪರಂಜಿ' ಕಾದಂಬರಿಯಲ್ಲಿಯು ಹೋಟೆಲು ಸನ್ನಿವೇಶ ನಿರ್ಮಾಣಕ್ಕೆ ಬಳಕೆಗೊಂಡಿದೆ. ಕಾಮಾಕ್ಷಿ ತನ್ನ ತಮ್ಮನಾದ ಪರಮಶಿವನೊಂದಿಗೆ ಊರು ಬಿಟ್ಟು ಹೋಗಿ ವೇಶ್ಯಾವೃತ್ತಿಯನ್ನು ಅವಲಂಬಿಸುತ್ತಾಳೆ. ಹೋದ ಕಡೆಯೆಲ್ಲಾ ಅವಳಿಗೆ ಜೀವನದಲ್ಲಿ ಹಣವೇ

ಪ್ರಧಾನ ಎನಿಸತೊಡಗುತ್ತದೆ. ತನ್ನ ಹತ್ತಿರ ಬಂದ ಗಿರಾಕಿಗಳ ಬಳಿ ಮೊದಲು ವ್ಯಾವಹಾರಿಕ ಮಾತುಗಳನ್ನಾಡಿ ಅನಂತರ ಅವರೊಂದಿಗೆ ಸಂಬಂಧ ಬೆಳೆಸುತ್ತಿರುತ್ತಾಳೆ. ಹಾಗೆಯೇ ಬೆಂಗಳೂರಿಗೆ ಬರುವ ಕಾಮಾಕ್ಷಿಗೆ 'ಸನ್‌ರೈಸ್ ಹೋಟೆಲು' ಆಶ್ರಯತಾಣವಾಗುತ್ತದೆ. ಅಲ್ಲಿ ಆಗ ತಾನೇ ವರ್ಗವಾಗಿ ಬಂದಿದ್ದ ಸದಾಶಿವರಾಯ ಅವರನ್ನು ಗುರುತಿಸಿ ಅವಳನ್ನು ಮುತ್ತಮ್ಮನಲ್ಲಿಗೆ ಕರೆದೊಯ್ಯುವುದು ಹೋಟೆಲಿನಿಂದಲೇ. 'ಸನ್‌ರೈಸ್ ಹೋಟೆಲಿ'ನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಕಾಮಾಕ್ಷಿಯನ್ನು ಸದಾಶಿವರಾಯನು ಭೇಟಿಯಾಗಿ ಮುತ್ತಮ್ಮನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಮುಂದೆ ಮುತ್ತಮ್ಮನ ಮನೆಯಲ್ಲಿ ಕಾಮಾಕ್ಷಿಯ ಚಟುವಟಿಕೆಗಳು ಮುಂದುವರಿಯುತ್ತವೆ. ಹೀಗೆ ಕಾಮಾಕ್ಷಿಯ ಬದುಕು ತಿರುವು ಪಡೆದುಕೊಳ್ಳುವುದಕ್ಕೂ ಆ ಮೂಲಕ ಕಥನವು ಬೆಳವಣಿಗೆ ಹೊಂದುವುದಕ್ಕೂ 'ಸನ್‌ರೈಸ್ ಹೋಟೆಲಿ'ನಲ್ಲಿ ನಡೆಯುವ ಕಾಮಾಕ್ಷಿ ಮತ್ತು ಸದಾಶಿವರಾಯನ ಭೇಟಿಯ ಸನ್ನಿವೇಶವು ಕಾರಣವಾಗಿರುವುದನ್ನು ನಾವಿಲ್ಲಿ ಗಮನಿಸಬಹುದು.

ಇದೇ ಕಾದಂಬರಿಯಲ್ಲಿ ನಿರಂತರ ಅಲೆದಾಡುವ ಕಾಮಾಕ್ಷಿಯ ಜೀವನವನ್ನು ಸರಿಪಡಿಸಲೇಬೇಕೆಂಬ ಸಂಕಲ್ಪದಿಂದ ಅಪರಂಜಿ ರಾಜಶೇಖರನನ್ನು ಕಷ್ಟಪಟ್ಟು ಹುಡುಕಿ ಭೇಟಿ ಮಾಡಿಸುತ್ತಾಳೆ. ರಾಜಶೇಖರ ಮತ್ತು ಕಾಮಾಕ್ಷಿ ಮೊದಲು ಆಪ್ತರಾಗಿದ್ದು ಕಾರಣಾಂತರಗಳಿಂದ ಅವನು ಕಾಮಾಕ್ಷಿಯ ಸಂಬಂಧವನ್ನು ಕಳೆದುಕೊಂಡಿದ್ದನು. ಈಗ ಅವಳನ್ನು ಕಂಡು ಯೋಗಕ್ಷೇಮ ವಿಚಾರಿಸಿ ಅವಳ ಮುಂದಿನ ಜೀವನದ ಬಗ್ಗೆ ಕೇಳಿ, ಆ ವೃತ್ತಿಯನ್ನು ಬಿಟ್ಟು ಬರುವುದಾದರೆ ತಾನು ಕ್ಷಮಿಸುವುದಾಗಿಯೂ ಹೇಳುತ್ತಾನೆ. ಆದರೆ ಕಾಮಾಕ್ಷಿಯು ರಾಜಶೇಖರನಿಗೆ ತನ್ನನ್ನು ಈಗ ಅರ್ಪಿಸಿಕೊಳ್ಳುವುದು ಸಮ್ಮತವಲ್ಲ. ತನಗೆ ಈಗ ಈ ಬಾಳ್ವೆ ಮಾಡಲು ಯೋಗ್ಯತೆ ಇಲ್ಲವೆಂದು 'ಸನ್‌ರೈಸ್ ಹೋಟೆಲಿ'ನಲ್ಲಿ ವಾಸ ಮಾಡತೊಡಗುತ್ತಾಳೆ. ಪರಮಶಿವ ಮತ್ತು ಸನ್‌ರೈಸ್ ಹೋಟೆಲು ಮಾಲೀಕ ಗಣೇಶರಾಯ ಹಾಸನದ ಆದಿರಾಜನನ್ನು ಕಾಮಾಕ್ಷಿಗೆ ಗಂಟು ಹಾಕುತ್ತಾರೆ. ಅಪಾರ ಶ್ರೀಮಂತ, ಹಣವಂತನಾದ ಆದಿರಾಜನನ್ನು ಕಾಮಾಕ್ಷಿ ಚೆನ್ನಾಗಿಯೇ ಸುಲಿಯುತ್ತಾಳೆ. ಅವನು ಕೂಡ ಅವಳ ಮೋಹದ ಬಲೆಯಲ್ಲಿ ಬಿದ್ದು ಅವಳಿಗಾಗಿ ಮತ್ತು ಅವಳ ತಮ್ಮನಿಗಾಗಿ ಅಪಾರ ಹಣ ವ್ಯಯ ಮಾಡಿಕೊಳ್ಳುವ ಕಾದಂಬರಿಯಲ್ಲಿನ ಈ ಸನ್ನಿವೇಶದಲ್ಲಿ ಕೂಡ ರಾಜಶೇಖರನು 'ಸನ್‌ರೈಸ್ ಹೋಟೆಲ'ಲ್ಲಿ ಭೇಟಿಯಾಗುತ್ತಾನೆ. ಆ ವೇಳೆಗೆ ಆಕೆಯ ವಾಸ್ತವ್ಯವು ಮುತ್ತಮ್ಮನ ಮನೆಯಿಂದ ಮತ್ತೆ 'ಸನ್‌ರೈಸ್ ಹೋಟೆಲಿ'ಗೆ ಸ್ಥಳಾಂತರಗೊಂಡಿರುತ್ತದೆ. ರಾಜಶೇಖರನ ಅಭಿಪ್ರಾಯದಂತೆ ನಡೆಯಲೊಪ್ಪದ ಕಾಮಾಕ್ಷಿಯು 'ಸನ್‌ರೈಸ್ ಹೋಟೆಲ'ಲ್ಲಿ ತನ್ನ ವೃತ್ತಿಯನ್ನು ಮುಂದುವರಿಸುತ್ತಾಳೆ. ಹೀಗೆ ಅನಕೃ ಅವರ ಕಾದಂಬರಿಗಳ ಸನ್ನಿವೇಶ ನಿರ್ಮಾಣದಲ್ಲಿ 'ಸನ್‌ರೈಸ್ ಹೋಟೆಲು' ಪ್ರಮುಖ ಪಾತ್ರ ವಹಿಸಿದೆ.

'ಪಂಕಜ' ಹೋಟೆಲಿನ ಸನ್ನಿವೇಶವುಳ್ಳ ಅನಕೃ ಅವರ ಇನ್ನೊಂದು ಕಾದಂಬರಿಯಾಗಿದೆ. ಇಲ್ಲಿ ಕೂಡ ಬೆಂಗಳೂರಿನ 'ಸನ್‌ರೈಸ್ ಹೋಟೆಲು' ಸನ್ನಿವೇಶ ನಿರ್ಮಾಣಕ್ಕಾಗಿ ಬಳಕೆಗೊಂಡಿದೆ. ಪಂಕಜ ಪ್ರತಿಷ್ಠಿತ ವಕೀಲರ ಮಗಳಾಗಿರುತ್ತಾಳೆ. ಕಾಲೇಜು ಓದುತ್ತಿರುವಾಗಲೇ ನಂಜುಂಡರಾಯ ಎಂಬ ಗೆಳೆಯನ ಸಹವಾಸದಿಂದ ಒಂದು ಮಗುವಿನ ತಾಯಿಯಾಗುತ್ತಾಳೆ. ಆ ಮಗು ಹುಟ್ಟು ವಾಗಲೇ ಸಾಯುತ್ತದೆ. ನಂತರ ತಂದೆ-ತಾಯಿಗಳು ಮಗಳನ್ನು ಚಿನ್ನಸ್ವಾಮಿ ಎಂಬ ಲಾಯರ್‌ಗೆ ಕೊಟ್ಟು ಮದುವೆ ಮಾಡಿ ಸಾವನ್ನಪ್ಪುತ್ತಾರೆ. ತನ್ನ ಮಾವನ ಕಚೇರಿ ನಿರ್ವಹಣೆಯ ಜವಾಬ್ದಾರಿ ಚಿನ್ನಸ್ವಾಮಿಯ ಮೇಲೆ ಬೀಳುತ್ತದೆ. ಇದರಿಂದ ಪಂಕಜಳಿಗೆ ಮನೆಯಲ್ಲಿ ಕುಳಿತು ಬೇಸರವಾಗುತ್ತದೆ. ಆಕೆ ರಾಘವಾಚಾರಿಗಳ ಹತ್ತಿರ ಸಂಗೀತ ಕಲಿಯಲು ಹೋಗುತ್ತಾಳೆ. ಅವರು ಸಂಗೀತ ಕಲಿಸುವುದರ ಜೊತೆಗೆ ಜೀವಣ್ಣರಾಯರ ಮತ್ತು ಪಂಕಜಳ ನಡುವೆ ಸಂಬಂಧ ಬೆಳೆಯುವಂತೆ ಮಾಡುತ್ತಾರೆ. ಇದರಿಂದ ಪಂಕಜಳಿಗೆ 'ಸನ್‌ರೈಸ್ ಹೋಟೆಲು' ಚಿರಪರಿಚಿತವಾಗುತ್ತದೆ. ಒಮ್ಮೆ 'ಸನ್‌ರೈಸ್ ಹೋಟೆಲಿ'ನಲ್ಲಿ ಸದಾಶಿವರಾಯನ ಸ್ಥಾನಕ್ಕೆ ವರ್ಗವಾಗಿ ಬಂದಾಗ ರಾಜಣ್ಣನಿಗೆ ಆಕಸ್ಮಿಕವಾಗಿ ಪಂಕಜ ಕಣ್ಣಿಗೆ ಬೀಳುತ್ತಾಳೆ. ರಾಜಣ್ಣ ಅವಳ ಸೌಂದರ್ಯಕ್ಕೆ ಮಾರುಹೋಗುವ ಸನ್ನಿವೇಶವು ಇಲ್ಲಿ ಚಿತ್ರಣವಾಗಿದೆ.

ಇದೇ ಲೇಖಕರ 'ಕಳಂಕಿನಿ' ಕಾದಂಬರಿಯಲ್ಲಿ 'ವೈಕುಂಠ ಭವನ' ಎಂಬ ಹೆಸರಿನ ಹೋಟೆಲು ಸನ್ನಿವೇಶ ನಿರ್ಮಾಣಕ್ಕಾಗಿ ಬಳಕೆಗೊಂಡಿದೆ. ಲತಾಳು ಇಲ್ಲಿ ಹಲವು ದಿನಗಳು ವಾಸ್ತವ್ಯ ಹೂಡಿದ್ದನ್ನು ಪ್ರಸ್ತಾಪಿಸುತ್ತದೆ. ಹೋಟೆಲಲ್ಲಿ ಗಿರಾಕಿಗಳು ಕೊಟ್ಟ ಹಣದಲ್ಲಿಯೇ ಸುಖ ಜೀವನ ಸಾಗಿಸುತ್ತಿರುತ್ತಾಳೆ. ಇಲ್ಲಿರುವಾಗಲೇ ಬಸಮ್ಮ ಎಂಬ ಘರವಾಲಿಯ ಪರಿಚಯದಿಂದಾಗಿ ವಾಸಕ್ಕೆ ಪ್ರತ್ಯೇಕ ಬಾಡಿಗೆ ಮನೆ ಪಡೆಯುತ್ತಾಳೆ. ಹೊಸ ಹೊಸ ಗಿರಾಕಿಗಳು ಮತ್ತು ಲತಾಳ ಆಪ್ತತೆಯಿಂದ ಹೋಟೆಲಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಆಪ್ತರ ಬಳಗದ ಪಾರ್ಥಸಾರಥಿಯನ್ನು ಹೋಟೆಲಲ್ಲಿ ಬಳಸಿಕೊಂಡು ಲತಾಳು ಯಶಸ್ವಿಯಿಂದ ಇರಲು ಪ್ರಾರಂಭಿಸುತ್ತಾಳೆ. ಸಾಹಿತಿ ಸುದರ್ಶನರ ಪರಿಚಯ ಹಾಗೂ ಪ್ರೇರಣೆ ದೊರೆತಿದ್ದರಿಂದ ಮೂರು ಕಾದಂಬರಿಗಳನ್ನು ಲತಾ ಬರೆಯಲಿಕ್ಕೆ ಸಾಧ್ಯವಾಗುತ್ತದೆ. ಇದರಿಂದ ಅವಳು ಪ್ರಸಿದ್ಧಿಗೆ ಪಾತ್ರಳಾಗುವ ಸನ್ನಿವೇಶವಿದೆ. ಅವಳ ಸಮಗ್ರ ಬದುಕಿನಲ್ಲಾದ ಯಶಸ್ಸುಗಳೆಲ್ಲವೂ 'ವೈಕುಂಠ ಭವನ'ದ ವಾಸ್ತವ್ಯದಿಂದಾಗಿಯೇ ಎಂಬುದನ್ನು ಕಾದಂಬರಿಯ ಕಥನದ ಬೆಳವಣಿಗೆಗೆ ಪೂರಕವಾದ ಸಂಗತಿಗಳನ್ನು ಇಲ್ಲಿ ಚಿತ್ರಿಸಲಾಗಿದೆ.

'ಸುಂದರೂ ಸಂಸಾರ' ಕಾದಂಬರಿಯಲ್ಲಿ ಶ್ರೀನಿವಾಸನು ಕಾಟ್ನಳ್ಳಿಯಿಂದ ಉದ್ಯೋಗ ಅರಸಿ ನಗರಪ್ರದೇಶಕ್ಕೆ ತೆರಳುವ ಸಂದರ್ಭದಲ್ಲಿ ಪ್ರಯಾಣ ಮಧ್ಯೆ ರೈಲುನಿಲ್ದಾಣದ ಹೋಟೆಲೊಂದ ರಲ್ಲಿ ಉಪಾಹಾರ ಸೇವಿಸುತ್ತಾನೆ. ಆಮೇಲೆ ಹೋಟೆಲಿನ ಮಾಲೀಕನೊಂದಿಗೆ ತನ್ನ ಮುಂದಿನ ಪ್ರಯಾಣಕ್ಕೆ ಅನುಕೂಲವಾಗುವಂತೆ ರೈಲಿನ ವೇಳಾಪಟ್ಟಿಯನ್ನು ಕೇಳಿ ತಿಳಿದುಕೊಳ್ಳುತ್ತಾನೆ.

ಮುಂದೆ ಹಾಸನ ನಗರದಲ್ಲಿ ಉದ್ಯೋಗದ ಪ್ರಯತ್ನದಲ್ಲಿ ತೊಡಗಿರುವಾಗಲೂ ಊಟ-ಉಪಚಾರಕ್ಕೆಂದು 'ಯದುಗಿರಿ ಭವನ' ಎಂಬ ಹೋಟೆಲನ್ನು ಆಶ್ರಯಿಸುತ್ತಾನೆ. ಕಾದಂಬರಿಯಲ್ಲಿ ಹೋಟೆಲನ್ನು ಸನ್ನಿವೇಶ ನಿರ್ಮಾಣಕ್ಕಾಗಿ ಬಳಸಿಕೊಳ್ಳುವುದರ ಜೊತೆಗೆ ಹೋಟೆಲಿನಲ್ಲಿ ನಡೆಯುವ ಕೆಲವೊಂದು ವಿದ್ಯಮಾನಗಳನ್ನು ಚಿತ್ರಿಸಲಾಗಿದೆ. ಹೋಟೆಲಿನ ಮಾಲೀಕರಾದ ಚೆಲುವಯ್ಯಂಗಾರರು ಮತ್ತು ಆದಿಕೇಶವಲು ನಡುವೆ ನಡೆಯುವ ವ್ಯವಹಾರವನ್ನು ಕಾದಂಬರಿಯು ಕಟ್ಟಿಕೊಡುತ್ತದೆ. ಹೋಟೆಲಿನ ಮಾಲೀಕ ಮತ್ತು ಆಹಾರ ಪರಿವೀಕ್ಷಕರ ನಡುವೆ ಮಧ್ಯವರ್ತಿಗಳಾಗಿ ಬಂದು ತಮ್ಮ ಬೇಳೆ ಬೇಯಿಸಿಕೊಳ್ಳುವ ಗ್ರಾಹಕರಿಬ್ಬರ ಪ್ರವೃತ್ತಿಯನ್ನು ಈ ಸನ್ನಿವೇಶವು ಪಡಿಮೂಡಿಸಿದೆ. "ಲೋಕಾಭಿರಾಮನ ಆಜ್ಞಾನುಸಾರ ಶ್ರೀನಿವಾಸ 'ಯದುಗಿರಿ ಭವನ'ದಲ್ಲಿ ಕುಳಿತು ಒಂದು ಬೆಣ್ಣೆ ದೋಸೆ, ಮಸಾಲ ದೋಸೆ ಎಂದ. ಅಯ್ಯಂಗಾರ ಅವನನ್ನು ನುಂಗಿಬಿಡುವಂತೆ ನೋಡಿ ನಾಡಿದ್ದು ಹತ್ತನೆಯ ತಾರೀಖು ಶ್ರೀನಿವಾಸರಾಯರೇ, ಆಗಲಿ ನಾಳೆ ತನಕ ಟೈಮ್ ಇದೆಯಲ್ಲಾ ಎಂದು ಅಯ್ಯಂಗಾರಿ ದೋಸೆಗೆ ಆರ್ಡರ್ ಮಾಡಿದ. ದೋಸೆ ಬರಲು ಅದನ್ನು ಸಾವಕಾಶವಾಗಿ ತಿನ್ನುತ್ತಾ ಶ್ರೀನಿವಾಸ ತಮಾಷೆಗೆ ಕಾಯುತ್ತ ಕುಳಿತ ಕೆಲವು ನಿಮಿಷಗಳು ಕಳೆಯುವುದೇ ಒಬ್ಬ ಫುಡ್ ಇನ್ಸ್‌ಪೆಕ್ಟರ್ ಇಬ್ಬರು ಆಳುಗಳೊಂದಿಗೆ ಪ್ರವೇಶಿಸಿದರು. ಚೆಲುವಯ್ಯಂಗಾರಿ ಪೀಠ ಬಿಟ್ಟೆದ್ದು ಇನ್ಸ್‌ಪೆಕ್ಟರಿಗೆ ನಮಸ್ಕರಿಸುವುದು, ಬರಬೇಕು ಇನ್ಸ್‌ಪೆಕ್ಟರ್ ಸಾಹೇಬರು ಬೆಣ್ಣೆ ದೋಸೆಗೆ ಹೇಳಲೆ? ಎಂದು ಅತ್ಯಂತ ವಿನಯದಿಂದ ಕೇಳುವುದು, ಇನ್ಸ್‌ಪೆಕ್ಟರ್ ಆದಿಕೇಶವಲು ಒಂದು ಫೈಲ್ ಓಪನ್ ಮಾಡುವುದರ ಜೊತೆಗೆ ಅಯ್ಯಂಗಾರರೇ ನಿಮ್ಮ ಮೇಲೆ ಬಹಳ ಕಂಪ್ಲೆಂಟ್ಸ್ ಬಂದಿವೆ ಎಂದು ಕಾನೂನಿನ ಅರಿವು ಮೂಡಿಸುವುದು, ನಿಮ್ಮ ಹೋಟೆಲಿನ ಬಚ್ಚಲಿನ ನೀರು ಪಕ್ಕದ ಮನೆಗೆ ನುಗ್ಗುತ್ತಿರುವುದು ಮತ್ತು ನಿಮ್ಮ ಅಡುಗೆ ಮನೆ ಹೊಗೆ ಪಕ್ಕದ ಫ್ರೇಮ್ ವರ್ಕ್ಸ್‌ಗೆ ವ್ಯಾಪಿಸಿರುವುದನ್ನು ನೀವು ಮಸಾಲಾದೋಸೆ, ಮಸಾಲಾವಡೆಗೆ ಕೋಳಿ ಮೊಟ್ಟೆ ಹಾಕುತ್ತಿರುವುದನ್ನು ಆದಿಕೇಶವಲು ಅಯ್ಯಂಗಾರರನ್ನು ಉದ್ದೇಶಿಸಿ ಇದು ನಿಜವೇ? ಆಗ ಅಯ್ಯಂಗಾರಿ ಮುಖದಲ್ಲಿ ಬೆವರಿಳಿಯುವ ಸನ್ನಿವೇಶ ಮತ್ತು ಅವನು ನಡುಗುತ್ತ ಯಾರು ಸರ್ ಕಂಪ್ಲೆಂಟ್ ಕೊಟ್ಟಿರುವವರು ಎಂದಾಗ ಅಧಿಕಾರಿಯು ಒಬ್ಬರಲ್ಲ, ಇಬ್ಬರಲ್ಲ ಹತ್ತಾರು ಜನ ಕೊಟ್ಟಿರುವುದರಿಂದ ಇನ್ಸ್‌ಪೆಕ್ಷನ್ ಮಾಡಲು ಆದಿಕೇಶವಲು ಒಳಗೆ ನುಗ್ಗುವುದನ್ನು ನೋಡಿ ಜನಸಂದಣಿ ಸೇರಿತು. ಮತ್ತೆ ಕೆಲವು ಗಿರಾಕಿಗಳು ಈ ಸಮಯ ಸಾಧಿಸಿ ಶ್ರೀನಿವಾಸ ಮತ್ತು ಲೋಕಾಭಿರಾಮ ಬಿಲ್ಲು ಕೊಡದೇ ಹೊರಬೀಳುತ್ತಾರೆ"(ಅನಕೃ; ೨೦೦೨, ಪು. ೫೫, ೬೪).

ಯು.ಆರ್. ಅನಂತಮೂರ್ತಿ ಅವರ 'ಪ್ರೀತಿ, ಭಯ ಮತ್ತು ಸಾವು' ಕಾದಂಬರಿಯಲ್ಲಿ ಶೇಖರನ ಪಾತ್ರ ಪ್ರಮುಖವಾಗಿದೆ. ಹೋಟೆಲಿನಲ್ಲಿ ನಡೆಯುವ ಎರಡು ಸನ್ನಿವೇಶಗಳು ಶೇಖರನ ಮನಸ್ಸಿನ ಭಾವನೆಗಳನ್ನು ಅಭಿವ್ಯಕ್ತಿಪಡಿಸುತ್ತವೆ. ಮೊದಲನೇ ಸನ್ನಿವೇಶದಲ್ಲಿ ನಾವು ತುಂಬ

ಪ್ರೀತಿಸುವ ವ್ಯಕ್ತಿಯ ಸಾವು ಕೂಡ ಜೀವನದ ಉಳಿದ ಎಷ್ಟೋ ಘಟನೆಗಳ ಸಾಲಿಗೆ ಸುಮ್ಮನೆ ಸೇರಿ ಹೋಗುವ, ಮತ್ತೊಂದು ಘಟನೆಯಾಗಿ ಬಿಡುವ ವಿಪರ್ಯಾಸದ ಕುರಿತು ಶೇಖರನು ಯೋಚಿಸುವುದು ಹೋಟೆಲಿನಲ್ಲಿ ಕುಳಿತುಕೊಂಡು. ಎರಡನೇ ಸನ್ನಿವೇಶದಲ್ಲಿ ತಮ್ಮನ ಮೃತದೇಹ ದಹನದ ನಂತರ ಮತ್ತೆ ಹೋಟೆಲಲ್ಲಿ ತಿಂಡಿ ತಿನ್ನುವಾಗ ಎಲ್ಲರೂ ನಿರಾಳವಾಗಿ ಸಮಕಾಲೀನ ರಾಜಕೀಯದ ಬಗ್ಗೆ, ಯಾರದೋ ದಂತಚಿಕಿತ್ಸೆಯ ಬಗ್ಗೆ, ಮತ್ತೇನೋ ಕ್ಷುಲ್ಲಕವಾದುದರ ಬಗ್ಗೆ ಹಗುರವಾಗಿ ಹರಟುತ್ತಾರೆ. ಶೇಖರನು ಇದಕ್ಕೆ ಸಾಕ್ಷಿಯಾಗುವ ಸನ್ನಿವೇಶವು ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಸಂಸ್ಕಾರ ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯರು ತಮ್ಮ ಬ್ರಾಹ್ಮಣ್ಯವನ್ನು ಬದಿಗಿಟ್ಟು ಹೊಸ ಮನುಷ್ಯರಾಗುವಾಗ ಜಾತ್ರೆಯಲ್ಲಿ ಹೋಟೆಲಿಗೆ ಹೋಗಿ ಕಾಫಿ ಕುಡಿಯುವ ಸನ್ನಿವೇಶವಿದೆ. 'ಭಾರತೀಪುರ' ಕಾದಂಬರಿಯಲ್ಲಿ ಜಗನ್ನಾಥ ತನ್ನ ವರ್ಗಗುಣವನ್ನು ತೊರೆದು ಒಂದು ಸಣ್ಣ ಪ್ರಯತ್ನದೊಂದಿಗೆ ವಾಸುವಿನೊಡನೆ ಹೋಟೆಲಿನಲ್ಲಿ ಕಾಫಿ ಕುಡಿಯುವ ಸನ್ನಿವೇಶವು ಚಿತ್ರಣ ಗೊಂಡಿದೆ. ಇಲ್ಲಿ ಜಾತಿ, ವರ್ಗಭೇದವನ್ನು ತೊರೆದು ಎಲ್ಲರೂ ಒಂದೆಡೆ ಸೇರುವ ಸಾರ್ವಜನಿಕ ಕೇಂದ್ರವಾಗಿ ಹೋಟೆಲು ಚಿತ್ರಿತವಾಗಿದೆ.

ವೇಣುಗೋಪಾಲ ಕಾಸರಗೋಡು ಅವರ 'ಬಯಲಾಟ' ಕಾದಂಬರಿಯಲ್ಲಿ ರಂಗಕಲೆಯಲ್ಲಿ ಹೋಟೆಲಿನ ಸ್ಥಾನ ಹೇಗೆ ಮುಖ್ಯವಾಗುತ್ತದೆ ಎಂಬುದನ್ನು ಚಿತ್ರಿಸಲಾಗಿದೆ. ಕಿಟ್ಟು ಅಭಿಮನ್ಯುವಿನ ಪಾತ್ರ ನಿರ್ವಹಿಸಿ ಮುಂಜಾವಿನಲ್ಲಿ ನಿದ್ದೆ ತಡೆಯಲಾಗದೆ ಮೈದಾನದ ಪಕ್ಕದಲ್ಲಿ ಹಾಕಲಾಗಿದ್ದ 'ಚಾದಂಗಡಿ'ಯಲ್ಲಿ ಚಹಾ ಕುಡಿಯುತ್ತಾನೆ. ಚಹಾ ಕುಡಿದು ಅವನು ಹೂವಿನಂತೆ ಹಗುರವಾಗುತ್ತಾನೆ. ಗುರಿ ಮುಟ್ಟಿದ ಸಾಧಕನೊಬ್ಬನಲ್ಲಿ ಇರಬೇಕಾದ ತೃಪ್ತಿಯು ಅವನಲ್ಲಿ ಉಂಟಾಗುತ್ತದೆ. ಕೆಂಪ, ಸೊಂಪ ಮತ್ತು ಮೋನ್ ಕಿಟ್ಟುವು ಬೈಲಾಟದ ಪಾತ್ರದಲ್ಲಿ ಹಿರಿಮೆಯನ್ನು ತೋರಿದ್ದರ ವಿರುದ್ಧವಾಗಿ ಹೋಟೆಲಲ್ಲಿ ಕುಳಿತು ಮಾತನಾಡುತ್ತಾರೆ. ಕೆಂಪ ತಲೆದೂಗುತ್ತಾ ಹಾಗೆ ಕುಳಿತರೆ ಕೂತಲ್ಲೇ ಆದೀತು. ಏನಾದ್ರೂ ಮಾಡಬೇಕು. ಅವನಿಗೊಂದು ಗತಿ ಕಾಣಿಸಬೇಕು ಎನ್ನುತ್ತಾ ಬಾಯಿಗೆ ಸುರಿದಿದ್ದ ಚಹಾವನ್ನು ಪಿಚಕ್ಕನೇ ಹೊರಗೆ ಉಗುಳುತ್ತಾನೆ. ಅದನ್ನು ಕಂಡ ಹೋಟೆಲು ಭಟ್ಟರು ಹಿಗ್ಗಾಮುಗ್ಗಾ ಬೈಯುತ್ತಾರೆ. ಕನ್ನಡದ ಹಲವಾರು ಜನಪ್ರಿಯ ಹಾಗೂ ಪತ್ತೆದಾರಿ ಕಾದಂಬರಿಗಳಲ್ಲಿ ಸನ್ನಿವೇಶ ನಿರ್ಮಾಣಕ್ಕಾಗಿ ಯಥೇಚ್ಛವಾಗಿ ಇಂತಹ ಸನ್ನಿವೇಶಗಳು ಬಳಕೆಯಾಗಿವೆ.

ಸಾಯಿಸುತೆ ಅವರ 'ಶಿಶಿರದ ಇಂಚರ' ಕಾದಂಬರಿಯಲ್ಲಿ ಸನ್ನಿವೇಶ ನಿರ್ಮಾಣಕ್ಕೆ ಹೋಟೆಲನ್ನು ಬಳಸಿಕೊಳ್ಳಲಾಗಿದೆ. ಹೋಟೆಲೊಂದರಲ್ಲಿ ಇಂಚರ, ಅಶ್ವಿನಿಕುಮಾರ ಹಾಗೂ ಸಂಗಡಿಗರು ತಿಂಡಿ ಸೇವಿಸುತ್ತಾರೆ. ಇಂಚರ ಒಂದು ಬಗೆಯ ಮಾನಸಿಕ ಖಿನ್ನತೆಗೊಳಗಾಗಿರುತ್ತಾಳೆ. ಆಕೆಯ ಗೆಳತಿಯಾದ ಲಲಿತ ಕಳೆದ ಬಾರಿ ಇದೆ ಹೋಟೆಲಿಗೆ ಬಂದಿದ್ದಾಗ ತನ್ನ ಪರ್ಸನ್ನು ಮರೆತು ಬಿಟ್ಟುಹೋಗಿದ್ದಳು. ಇಂಚರ ಕಳೆದುಹೋಗಿದ್ದ ಪರ್ಸನ್ನು ಹುಡುಕುತ್ತಾಳೆ. ಅಶ್ವಿನಿಕುಮಾರ

ವಿನೋದಪೂರ್ಣವಾಗಿ ಮೆನುಕಾರ್ಡ್ ನೋಡುತ್ತಾ ಇಂಚರ, ಕುಮುದಾ, ಕುಸುಮಾ ಎಲ್ಲರಿಗೂ ಹೋಟೆಲಲ್ಲಿ ತಿಂಡಿಗೆ ಆರ್ಡರ್ ಮಾಡುತ್ತಾನೆ. ರೆಸ್ಟೋರೆಂಟಿನ ವಿಹಂಗಮ ನೋಟವು ಅಶ್ವಿನಿ ಕುಮಾರನಲ್ಲಿ ಉಲ್ಲಾಸವನ್ನು ಉಂಟುಮಾಡುತ್ತದೆ. ಮೊದಲು ಎಂದಾದರೂ ಈ 'ರೆಸ್ಟೋರೆಂಟಿ'ಗೆ ಬಂದಿದ್ರಾ? ಏನಾದ್ರೂ ಸಿಹಿ ಅನುಭವಗಳು ಎಂದು ಅಶ್ವಿನಿಕುಮಾರ ಕುಳಿತು ತಿಂಡಿ ಸೇವಿಸುತ್ತಾ ಉಳಿದವರೊಂದಿಗೆ ಕೇಳುತ್ತಾನೆ. ಲಲಿತ ಹಿಂದೆ ಕಳೆದುಕೊಂಡಿದ್ದ ಪರ್ಸ್ ಇರುವ ಕವರನ್ನು ಹೋಟೆಲಿನ ವೇಟರ್ ತಂದುಕೊಡುತ್ತಾನೆ. ಕುಸುಮಾಳಿಗೆ ತಾನು ಹಿಂದೆ ದಿಲೀಪಕುಮಾರನೊಂದಿಗೆ ಇದೇ ಹೋಟೆಲಿಗೆ ಬಂದಿದ್ದ ಸನ್ನಿವೇಶವು ನೆನಪಾಗುತ್ತದೆ. ಹೀಗೆ ಕಾದಂಬರಿಯಲ್ಲಿನ ಸನ್ನಿವೇಶ ವೊಂದು 'ರೆಸ್ಟೋರೆಂಟಿ'ನಲ್ಲಿ ನಡೆಯುವುದನ್ನು ನಾವಿಲ್ಲಿ ಗಮನಿಸಬಹುದು.

ಕೆ.ಟಿ. ಗಟ್ಟಿ ಅವರ ಅಮುಕ್ತ, ಪುನರಪಿಜನನ, ಅಭಿಚಾರ, ಯುಗಾಂತರ, ಮಿತಿ ಮುಂತಾದ ಕಾದಂಬರಿಗಳಲ್ಲಿ ಸನ್ನಿವೇಶ ನಿರ್ಮಾಣಕ್ಕಾಗಿ ಹೋಟೆಲನ್ನು ಬಳಸಿಕೊಳ್ಳಲಾಗಿದೆ. ಅಮುಕ್ತ ಕಾದಂಬರಿಯಲ್ಲಿ ಸನ್ನಿವೇಶ ನಿರ್ಮಾಣ ಮತ್ತು ಕಥನದ ಬೆಳವಣಿಗೆಗಾಗಿ ಹೋಟೆಲು ಬಳಕೆ ಗೊಂಡಿದೆ. ಉತ್ತಮ ಮತ್ತು ಮಧು ಎಂಬುವವರು ಪರಸ್ಪರ ಸ್ನೇಹಿತರಾಗುತ್ತಾರೆ. ಮಧು ಮೊದಲು ಮದಾಪುರದ ಹೋಟೆಲೊಂದರ ಮಾಲೀಕನಾಗಿದ್ದನು. ಉತ್ತಮನಿಗೆ ಮಧುವಿನೊಡನೆ ಹೋಟೆಲಲ್ಲಿಯೇ ಪರಿಚಯವಾಗಿರುತ್ತದೆ. ಇವರಿಬ್ಬರೂ ಸೇರಿ ಮತ್ತೊಂದು ಹೋಟೆಲನ್ನು ಪ್ರಾರಂಭಿಸುತ್ತಾರೆ. ಈ ಹೋಟೆಲು ವ್ಯವಹಾರದಿಂದ ಅಗತ್ಯಕ್ಕೆ ಮೀರಿ ಲಾಭವನ್ನು ಸಂಪಾದಿಸುತ್ತಾರೆ. ದಿನ ಕಳೆದಂತೆ ಮಧು ಮತ್ತು ಉತ್ತಮರಲ್ಲಿ ಹೋಟೆಲು ವ್ಯವಹಾರದ ಕಾನೂನು ಪರಿಧಿ ಮೀರಿದ ಚಟುವಟಿಕೆಗಳಿಂದಾಗಿ ಭಿನ್ನಾಭಿಪ್ರಾಯ ಉಂಟಾಗುತ್ತದೆ. ಮಧು ಹೋಟೆಲು ಆವರಣ ದೊಳಗಡೆಯಿಂದಲೇ ಹೆಣ್ಣುಮಕ್ಕಳನ್ನು ಬೇರೆಡೆಗೆ ಸಾಗಿಸುವ ವ್ಯವಹಾರವನ್ನು ನಡೆಸುತ್ತಿರುತ್ತಾನೆ. ಅಲ್ಲದೇ ಉತ್ತಮ ಪ್ರೀತಿಸುವ ಮಾಲಾಳನ್ನು ಮಾರುವ ಪ್ರಯತ್ನಕ್ಕೆ ಮಧು ಮುಂದಾದಾಗ ಇಬ್ಬರಲ್ಲಿ ಮುನಿಸಿಗೆ ಕಾರಣವಾಗುತ್ತದೆ. ಈ ವಿಚಾರದಿಂದ ಬೇಸತ್ತ ಉತ್ತಮನು ಸಂಘರ್ಷಕ್ಕೆ ಈಡಾಗುವ ಸನ್ನಿವೇಶವಿದೆ. ಇದರ ನಡುವೆಯೇ ಅನುಮಾನಾಸ್ಪದವಾಗಿ ಹೋಟೆಲು ಹಿಂದೆ ಮಾಲಾ ಸತ್ತು ಬಿದ್ದಿರುತ್ತಾಳೆ. ಇದನ್ನರಿತು ಬಂದ ಪೊಲೀಸರು ಹೋಟೆಲು ಸುತ್ತಲಿರುವ ಜನರನ್ನು ಅನುಮಾನಸ್ಪದ ಸಾವಿನ ಬಗೆಗೆ ವಿಚಾರಿಸುತ್ತಾರೆ. ಇಲ್ಲಿಯೇ ಇರುವ ಉತ್ತಮನು ಸ್ವತಃ ಮಾಲಾಳೊಂದಿಗೆ ಸಂಬಂಧವಿರುವುದಾಗಿ ಮಾಲಾಳ ಸಾವಿನ ತನಿಖಾ ತಂಡದವರಿಗೆ ತಿಳಿಸುತ್ತಾನೆ. ಪೊಲೀಸರಿಗೆ ಉತ್ತಮನು ತನ್ನ ಜೀವನದ ವೃತ್ತಾಂತವನ್ನು ತಿಳಿಸುತ್ತಾನೆ. ಹೋಟೆಲು ಆರಂಭಿಸಿದ ಸಣ್ಣ ಕಾರಣದಿಂದಾಗಿ ಮಧುವಿನೊಡನೆ ಜಗಳ, ಹೆಣ್ಣು ಮಾರಾಟದ ಬಗೆಗೆ ತಿರಸ್ಕಾರ, ಮಾಲಾಳ ಅನುಮಾನಾಸ್ಪದ ಸಾವು ಈ ಎಲ್ಲಾ ವಿದ್ಯಮಾನಗಳಿಗೆ ಇವರಿಬ್ಬರ ಸಹಭಾಗಿತ್ವದ ಹೋಟೆಲು ಮೂಲಕಾರಣವಾಗುತ್ತದೆ. ಹೋಟೆಲಿನೊಳಗೆ ಸ್ನೇಹಿತನಾದ ಮಧು

ನಡೆಸುತ್ತಿದ್ದ ಅನೈತಿಕ ಚಟುವಟಿಕೆಗಳು ಹಾಗೂ ಮಾಲಾಳ ಸಾವಿನ ದುಷ್ಪರಿಣಾಮವು ಉತ್ತಮನ ಮೇಲೆ ಬೀರುತ್ತದೆ.

ಈ ಎಲ್ಲಾ ವಿದ್ಯಮಾನಗಳಿಂದಾಗಿ ಖಿನ್ನತೆಗೊಳಗಾಗಿದ್ದ ಉತ್ತಮನು ತಾನು ಮಾಲಾಳ ಆಕಸ್ಮಿಕ ಸಾವಿನ ಅಪವಾದದಿಂದ ಹೊರಬರಲಾಗದೇ ಜೈಲು ಸೇರುವ ಸನ್ನಿವೇಶ ಉಂಟಾಗುತ್ತದೆ. ಹೀಗೆ ಹೋಟೆಲು ವ್ಯವಹಾರದ ಆರಂಭ ಮತ್ತು ಅವನತಿಗಳೆರಡನ್ನು ಮಧು ಹಾಗೂ ಉತ್ತಮರ ಪಾತ್ರ - ಸನ್ನಿವೇಶಗಳ ಮೂಲಕ ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಡುತ್ತದೆ. ಇಲ್ಲಿ ಕಥನದ ಬೆಳವಣಿಗೆಗೂ ಈ ಸನ್ನಿವೇಶ ನಿರ್ಮಾಣವು ಸಹಕಾರಿಯಾಗಿದೆ.

'ಪುನರಪಿಜನನ' ಹೋಟೆಲು ಚಿತ್ರಣವುಳ್ಳ ಮತ್ತೊಂದು ಕಾದಂಬರಿಯಾಗಿದೆ. ಇಲ್ಲಿ ಸ್ನೇಹಿತರಾದ ಶಂಕರಭಟ್ಟ ಮತ್ತು ಖಾಸಿಮರು ಮುಂಬಯಿ ನಗರದ ಹೋಟೆಲೊಂದರಲ್ಲಿ ವಾಸವಾಗಿರುತ್ತಾರೆ. ಅಲ್ಲಿರುವಾಗ ಶಂಕರಭಟ್ಟರು ಆಕಸ್ಮಿಕ ಸಾವಿಗೀಡಾಗುತ್ತಾರೆ. ಖಾಸಿಮನು ಮಡಿವಂತ ಸಮಾಜದಲ್ಲಿ ಬದುಕಲಿಕ್ಕಾಗಿ ತಾನೇ ಬ್ರಾಹ್ಮಣ ಶಂಕರಭಟ್ಟ ಎಂಬುದಾಗಿ ನಗರದ ಜನರಿಗೆ ವಿಶ್ವಾಸ ಮೂಡಿಸುತ್ತಾನೆ. ಮುಸ್ಲಿಂ ಖಾಸಿಮನು ಬ್ರಾಹ್ಮಣ ಶಂಕರಭಟ್ಟನಾಗಿ ಹೋಟೆಲಲ್ಲಿ ಕೆಲಸ ಗಿಟ್ಟಿಸಿ ಕೊಳ್ಳುತ್ತಾನೆ. ಹೋಟೆಲಿನ ಮಾಲೀಕರು ಮತ್ತು ಗ್ರಾಹಕರನ್ನು ನಂಬಿಸಲು ನೂಲು ತಂದು ಖಾಸಿಮನು ಜನಿವಾರ ಧರಿಸಿಕೊಳ್ಳುವ ಸನ್ನಿವೇಶವಿದೆ. ಖಾಸಿಮನು ಹೋಟೆಲು ಕಾರ್ಮಿಕನಾಗಿ ರುವಾಗಲೇ ಸಮಾಜಶಾಸ್ತ್ರದಲ್ಲಿ ಎಂ.ಎ. ಪಾಸು ಮಾಡುತ್ತಾನೆ. ನಂತರ ಪಿಎಚ್.ಡಿ. ಪದವಿಯನ್ನು ಪಡೆಯುತ್ತಾನೆ. ಇಲ್ಲಿ ಖಾಸಿಮನು ಶಂಕರಭಟ್ಟನಾಗಿ ಮರುಜನ್ಮ ಪಡೆಯುವುದಕ್ಕೆ ಹೋಟೆಲು ಸೂಕ್ತ ಸನ್ನಿವೇಶ ನಿರ್ಮಿಸಿಕೊಡುವುದನ್ನು ಪ್ರಸ್ತುತ ಕಾದಂಬರಿ ಚಿತ್ರಿಸುತ್ತದೆ.

'ಅಭಿಚಾರ' ಕಾದಂಬರಿಯಲ್ಲಿ ಭೀಮಸ್ವಾಮಿ ಜಾನಕಿಯನ್ನು ಹೋಟೆಲಿಗೆ ಕರೆದೊಯ್ಯುವ ಸನ್ನಿವೇಶವಿದೆ. ಭೀಮಸ್ವಾಮಿ ತುಂಬ ಒಳ್ಳೆಯ ಹುಡುಗ. ಏನೂ ಕೆಟ್ಟ ಚಾಳಿ ಇಲ್ಲದವನು. ಅವನ ತಂದೆ ಶ್ರೀಮಂತನಾಗಿದ್ದು ಚಂದ್ರಹಾಸ ನಗರದಲ್ಲಿ 'ಅನುರಾಧ ಹೋಟೆಲು' ಆರಂಭಿಸಿರುತ್ತಾನೆ. ಭೀಮಸ್ವಾಮಿಯ ಮೂವರು ಅಕ್ಕಂದಿರು ಮದುವೆಯಾಗಿ ಹೋಗಿದ್ದಾರೆ. ಮೂರು, ನಾಲ್ಕು ಬಾರಿ 'ಅಭಿನಯ' ಎಂಬ ಬೇರೆ ಹೋಟೆಲಲ್ಲಿ ರೂಮು ಪಡೆದು ಜಾನಕಿಯೊಡನೆ ಸಂಭ್ರಮಿಸಿ ರುತ್ತಾನೆ. ಜಾನಕಿ ಮತ್ತು ಭೀಮಸ್ವಾಮಿ ರಸ್ತೆಯಲ್ಲಿ ನಿಂತು ಮಾತನಾಡುವುದನ್ನು ಒಂದು ಸಾರಿ ಆಕೆಯ ತಂಗಿ ಲಕ್ಷ್ಮಿ ಗಮನಿಸುತ್ತಾಳೆ. ಆಗ ಲಕ್ಷ್ಮಿ ಅವರ್ಯಾರು ಎಂದು ಜಾನಕಿಯನ್ನು ಕೇಳುತ್ತಾಳೆ. ಜಾನಕಿ ತನ್ನ ಪ್ರೇಮ ಪ್ರಕರಣವನ್ನು ಹೇಳುತ್ತಾಳೆ. 'ಅಭಿನಯ' ಹೋಟೆಲಿನ ಪ್ರತ್ಯೇಕ ರೂಮಿನಲ್ಲಿ ಈ ಹಿಂದೆ ನಡೆದದ್ದನ್ನು ತಿಳಿಸಲು ಹಿಂದೇಟಾಕುತ್ತಾಳೆ. ಜಾನಕಿ ಮತ್ತೊಂದು ಹೋಟೆಲು 'ಪಲ್ಲವಿ ರೆಸ್ಟೋರೆಂಟಿ'ನ ಸ್ಪೆಷಲ್ ರೂಮಿನಲ್ಲಿ ನಡೆದ ಪ್ರೇಮದ ಮಾತುಕತೆಗಳನ್ನು ಮಾತ್ರ ತಿಳಿಸುತ್ತಾಳೆ. ತಾವು ಪರಸ್ಪರ ಇಬ್ಬರೂ ಪ್ರೀತಿಸುವುದಾಗಿ ತಂಗಿ ಲಕ್ಷ್ಮಿಗೆ ಹೇಳುತ್ತಾಳೆ.

ಜಾನಕಿ ಭೀಮಸ್ವಾಮಿಯ ರೂಪ ಮತ್ತು ಗುಣವನ್ನು ಮೆಚ್ಚಿಕೊಂಡಿದ್ದಳು. ಭೀಮಸ್ವಾಮಿಯ ಅಪ್ಪನ 'ಅನುರಾಧ ಹೋಟೆಲಿ'ನ ಬಗೆಗೆ ಕೀಳರಿಮೆಯನ್ನು ತಾಳಿದ್ದಳು. ಪರಸ್ಪರ ಪ್ರೇಮ ಸಲ್ಲಾಪದ ಮಾತುಕತೆ ಮತ್ತು ಲೈಂಗಿಕ ಆಸೆಯನ್ನು ಪೂರೈಸಿಕೊಳ್ಳಲು ಇಲ್ಲಿ ಹೋಟೆಲು ಮುಖ್ಯ ಕೇಂದ್ರವಾಗಿ ರುತ್ತದೆ. ಕಾದಂಬರಿಯ ಸನ್ನಿವೇಶ ನಿರ್ಮಾಣದಲ್ಲಿ ಹೋಟೆಲು ತನ್ನತನ ಮೆರೆದಿರುವುದನ್ನು ನಾವು ಕಾಣಬಹುದಾಗಿದೆ.

'ಯುಗಾಂತರ' ಕಾದಂಬರಿಯಲ್ಲಿ ಹೋಟೆಲು ಸನ್ನಿವೇಶ ನಿರ್ಮಾಣದ ಉದಾಹರಣೆಯಿದೆ. ಜಯಂತನು ಕಾಂತಿಮತಿ ಮತ್ತು ಮಿತ್ರರನ್ನು ಭಾನುವಾರದ ಪಾರ್ಟಿಗಾಗಿ ಹೋಟೆಲಿಗೆ ಕರೆದಿರುತ್ತಾನೆ. ಬಾರೊಂದರಲ್ಲಿ ಈ ಪಾರ್ಟಿ ಉತ್ಸಾಹದಿಂದ ಏರ್ಪಟ್ಟಿರುತ್ತದೆ. ಅಲ್ಲಿ ಜಯಂತ ಮತ್ತು ಅವನ ಮಿತ್ರರು ಕಂಠಪೂರ್ತಿ ಮದ್ಯಪಾನ ಮಾಡಿ ಬಾರಲ್ಲಿ ಪ್ರಜ್ಞಾಹೀನರಾಗುತ್ತಾರೆ. ಈ ಸಮಯ ಸಾಧಿಸಿ ಕಾಂತಿಮತಿ ತನ್ನ ಮನೆಗೆ ಜಯಂತನನ್ನು ಕಾರಲ್ಲಿ ಕರೆದೊಯ್ಯುತ್ತಾಳೆ. ಇವನನ್ನು ತನ್ನ ಬೆಡ್‌ರೂಮಿಗೆ ಕರೆದೊಯ್ಯುತ್ತಾಳೆ. ಆ ರೂಮಿನಲ್ಲಿದ್ದ ವೈರಿನ ತುಂಡೊಂದನ್ನು ತೆಗೆದು ಗೋಡೆಯ ಮೇಲಿದ್ದ ವಿದ್ಯುತ್ ಸಾಕೆಟ್‌ಗೆ ತುರುಕುತ್ತಾಳೆ. ವಿದ್ಯುತ್ ಸರಬರಾಜು ಕಡಿತವಾಗುತ್ತದೆ. ಆಗ ಡ್ರಾನಲ್ಲಿದ್ದ ಪಿಸ್ತೂಲಿನಿಂದ ಗುಂಡು ಹಾರಿಸಿ ಜಯಂತನನ್ನು ಕೊಂದುಹಾಕುತ್ತಾಳೆ. ಅವನ ಗೆಳೆಯರನ್ನು ಕೊಂದು ಕಾಂತಿಮತಿ ಆತ್ಮಹತ್ಯೆಗೆ ಶರಣಾಗುವ ಸಂಕೀರ್ಣ ಸನ್ನಿವೇಶವು ಈ ಕಾದಂಬರಿಯಲ್ಲಿದೆ.

'ಮಿತಿ' ಕಾದಂಬರಿಯಲ್ಲಿ ನಗರದ ಹೋಟೆಲುಗಳ ಚಿತ್ರಣವಿದೆ. ನಗರದಲ್ಲಿನ ಫ್ಯಾಕ್ಟರಿಯ ಉದ್ಯೋಗಿಗಳಿಗೆ 'ಕ್ಯಾಂಟಿನ್' ಪುಕ್ಕಟೆ ಊಟ ಪೂರೈಸುವ ಸನ್ನಿವೇಶದ ಚಿತ್ರಣವಿದೆ. ಕಾದಂಬರಿಯ ಇನ್ನೊಂದು ಸನ್ನಿವೇಶದಲ್ಲಿ ಅಮಿತಾಳು ತನ್ನ ಗಂಡ ಮತ್ತು ಮಕ್ಕಳೊಂದಿಗೆ ನಗರದಲ್ಲಿ ಸುತ್ತಾಡುವ ವೇಳೆ ಊಟಕ್ಕಾಗಿ ಹೋಟೆಲೊಂದನ್ನು ಪ್ರವೇಶಿಸುತ್ತಾಳೆ. ರಾಮ ಮೋಹನ್ ಮತ್ತು ಸೀಮಾ ಯುವಪ್ರೇಮಿಗಳಿಗೆ ಬೆಂಗಳೂರಿನ 'ಫೈವ್ ಸ್ಟಾರ್ ಹೋಟೆಲು' ಉಪಾಹಾರ, ವಿಶ್ರಾಂತಿಗೆ ಅವರಣವಾಗಿರುವುದನ್ನು ಇದೇ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಶಿವರಾಯ, ಕಮಲಮ್ಮ ವೈದ್ಯ ದಂಪತಿಗಳು ಮದ್ರಾಸ್ಸಿನ ಹೋಟೆಲೊಂದರಲ್ಲಿ ಊಟ-ವಾಸ್ತವ್ಯದ ಸಲುವಾಗಿ ತಂಗುವ ಸನ್ನಿವೇಶವಿದೆ. ಈ ದಂಪತಿಗಳು ತಮ್ಮ ತಮ್ಮ ಭಾವನಾತ್ಮಕ ಲೋಕದಲ್ಲಿ ಹೋಟೆಲಲ್ಲಿ ಕಾಲ ಕಳೆಯುವ ಚಿತ್ರಣವು ಇಲ್ಲಿದೆ. ಹೀಗಿರುವಾಗ ಶಿವರಾಯಪ್ಪನಿಗೆ ಹೆಂಡತಿಯ ಭಾವನೆಗಳನ್ನು ತಿಳಿಯುವುದಕ್ಕೆ ಹೋಟೆಲು ಒಂದು ವೇದಿಕೆಯಾಗಿ ಪರಿಣಮಿಸಿರುತ್ತದೆ. ಟೂರಿಸ್ಟ್ ಬಸ್ಸಿನಲ್ಲಿ ನಿರಂತರ ಪ್ರವಾಸದ ಆಯಾಸವನ್ನು ಅಲ್ಲಿ ಕಳೆಯುವ ಸಂದರ್ಭವಿದೆ. ರಾಂಚಿ ಟ್ರಿಪ್ಲಿಕೇನ್ ಬೀಚುಗಳನ್ನು ಹೋಟೆಲಲ್ಲಿ ಇದ್ದುದಕ್ಕಾಗಿಯೇ ನೋಡಲಿಕ್ಕೆ ಸಾಧ್ಯವಾಯಿತೆಂದು ನೆನಪಿಸಿಕೊಳ್ಳುತ್ತಾರೆ. ಮತ್ತೆ ಅಲ್ಲಿ ಮತ್ತೊಂದು ಬೀಚಿಗೆ ಹತ್ತಿರವಿರುವ ಚಿರಾನಿನಲ್ಲಿ ಬಾಡಿಗೆ ರೂಮು ಪಡೆಯುತ್ತಾರೆ. ಅಲ್ಲಿ ಎರಡು ದಿನ

ವಿಶ್ರಾಂತಿಯ ಜೊತೆಗೆ ನಗರ ಸುತ್ತಾಡುತ್ತಾರೆ. ಮುಂದಿನ ಭುವನೇಶ್ವರದ ಪ್ರಯಾಣದ ತೀರ್ಮಾನವನ್ನು ಈ ಹೋಟೆಲಲ್ಲಿಯೇ ಕೈಗೊಳ್ಳುತ್ತಾರೆ. ಹೀಗೆ 'ಮಿತಿ' ಕಾದಂಬರಿಯಲ್ಲಿ ಮುಂಬಯಿ, ಮದ್ರಾಸ್ ಹಾಗೂ ಬೆಂಗಳೂರು ಮಹಾನಗರಗಳ ಹೋಟೆಲುಗಳು ಸನ್ನಿವೇಶ ನಿರ್ಮಾಣ ಮತ್ತು ಕಥೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ನಾ. ಡಿಸೋಜಾ ಅವರ ಬೆಂಕಿಯ ನಾಲಿಗೆ, ಹರಿಯುವ ನದಿ, ವಿಷಾನಿಲ ಹೋಟೆಲು ಚಿತ್ರಣವುಳ್ಳ ಕಾದಂಬರಿಗಳಾಗಿವೆ. 'ಬೆಂಕಿಯ ನಾಲಿಗೆ' ಕಾದಂಬರಿಯಲ್ಲಿ ರಘುನಾಥ ಮತ್ತು ಮನೋಹರ ಹೋಟೆಲಲ್ಲಿ ಊಟ-ತಿಂಡಿ ತಿನ್ನುವ ಭಾಗಶಃ ಸನ್ನಿವೇಶವಿದೆ. 'ಹರಿಯುವ ನದಿ' ಕಾದಂಬರಿಯಲ್ಲಿ ಸನ್ನಿವೇಶ ನಿರ್ಮಾಣ ಮತ್ತು ಕಥನದ ಬೆಳವಣಿಗೆಗೆ ಹೋಟೆಲನ್ನು ಚಿತ್ರಿಸಲಾಗಿದೆ. ಮೀನುಗಾರರು, ಪ್ರಯಾಣಿಕರು, ಪ್ರಯಾಣದ ದೋಣಿಯ ಅಂಬಿಗರು ಮುಂತಾದವರು ದಾಮೋದರ ಕಾಮತರ 'ಚಾ ದುಕಾನಿ'ನಲ್ಲಿ ಚಹಾ, ತಿಂಡಿಗಾಗಿ ಪ್ರತಿದಿನ ಸೇರುತ್ತಿದ್ದರು. ಕಾಮತರ 'ಚಾ ದುಕಾನು' ನದಿ ದಡದಲ್ಲಿ ದೇಸಿ ವಸ್ತುಗಳಿಂದ ನಿರ್ಮಿತವಾದ ಕಟ್ಟಡ, ಅಡುಗೆ ಮಾಡುವ ಸಲಕರಣೆಗಳು ಇವು ಕಾದಂಬರಿಯ ಸನ್ನಿವೇಶದಲ್ಲಿ ಎದ್ದುಕಾಣುತ್ತವೆ. ತೆಂಗಿನ ಮಡಲು ಹಾಸಿದ ಮಾಳಿಗೆ, ಹಿತ್ತಾಳೆಯ ಪಾತ್ರೆಯಲ್ಲಿ ಚಾ ಕುದಿಯುತ್ತಿರುವುದು, ಪಾತ್ರೆಯಲ್ಲಿ ಸದ್ದು ಮಾಡುತ್ತಾ ತಾಮ್ರದ ಬಿಲ್ಲೆ ತಿರುಗಿಸುವುದು, ಅವಲಕ್ಕಿ, ಖಾರಾ, ಸೇವಾ, ಗಾಜಿನ ಪೆಟ್ಟಿಗೆಯಲ್ಲಿ ರುವುದು, ಹೊರಗೆ ಎರಡು ಕಲ್ಲಿನಿಂದ ಕಟ್ಟೆ ಕಟ್ಟಿರುವುದು, ಮೇಲೆ ದಬ್ಬೆಗಳನ್ನು ಹಾಸಿರುವುದು ಹೀಗೆ ಕಮತಿಯವರ 'ದುಕಾನಿ'ನ ಒಳ ಮತ್ತು ಹೊರ ಆವರಣದ ಚಿತ್ರಣವನ್ನು ಕಾದಂಬರಿಯು ಕಟ್ಟಿಕೊಡುತ್ತದೆ.

ಜನರು ಅವಲಕ್ಕಿ, ಖಾರಾ ಸೇವಾ ತಿಂದು ಚಹಾ ಸೇವಿಸಿ ಆ ಕಟ್ಟೆಯ ಮೇಲೆ ಕುಳಿತು ಪಟ್ಟಾಂಗ ಹೊಡೆಯುವ ಸನ್ನಿವೇಶವು ಇಲ್ಲಿದೆ. ದಿನನಿತ್ಯ ಪ್ರಯಾಣದ ದೋಣಿ ನಡೆಸುವ ಸಣ್ಣಿ ಪ್ರಯಾಣಿಕರ ಹಿತದೃಷ್ಟಿ ಇಟ್ಟುಕೊಂಡು ದುಕಾನಿನಲ್ಲಿ ಇರುತ್ತಿದ್ದನು. ದೋಣಿಯಲ್ಲಿ ಬರುವವರು ಹಾಗೂ ಹೋಗುವವರು ಕರೆದಾಗ ಸ್ಪಷ್ಟವಾಗಿ ಸಣ್ಣಿಗೆ ಕೇಳಿಸುತ್ತಿತ್ತು.

ದಾಮೋದರ ಕಾಮತರಿಗೆ 'ಚಾ ದುಕಾನು' ವರದಾನದಂತಿತ್ತು. ಅದರಾಚೆಗೂ ಪ್ರಯಾಣಿಕರ ದೋಣಿಗಳ ಸಂಖ್ಯೆಯನ್ನು ಹೆಚ್ಚಿಸಿತ್ತು. ಮೀನುಗಾರರ ದೋಣಿಗಳು ಹೆಚ್ಚಾಗಲು ಇದು ಕಾರಣೀಭೂತವಾಗಿತ್ತು. ಸಾರ್ವಜನಿಕರು ದಿನನಿತ್ಯದ ಬದುಕಿನ ಚಟುವಟಿಕೆಗಳಿಗಾಗಿ ಸಂಚರಿಸುವವರು ನದಿಯನ್ನು ಅವಲಂಬಿಸುವಂತೆ 'ಚಾ ದುಕಾನು' ಮಾಡಿತ್ತು. ಸಾರ್ವಜನಿಕರ ಪ್ರಾಥಮಿಕ ಅವಶ್ಯಕತೆಗಳಿಗೆ ದುಕಾನು ಸ್ಪಂದಿಸುತ್ತಿತ್ತು. ಸುತ್ತಮುತ್ತಣ ಪರಿಸರದ ಜನರ ಬದುಕಿನಲ್ಲಿ ಕಾಮತರ ದುಕಾನು ಮಹತ್ವದ ಪಾತ್ರ ವಹಿಸಿತ್ತು. ಮೂವತ್ತು ವರ್ಷಗಳ ಸುದೀರ್ಘ ಇತಿಹಾಸದಲ್ಲಿ ದುಕಾನಿನ ಆಕಾರದಲ್ಲಾಗಲೀ, ಊಟ-ಉಪಾಹಾರಗಳಲ್ಲಾಗಲಿ ಮಾಲೀಕ ದಾಮೋದರರಲ್ಲಾಗಲಿ ಮಹತ್ವದ ವ್ಯತ್ಯಾಸಗಳು ಆಗಿರಲಿಲ್ಲ.

ಹೀಗಿರುವಾಗ ಒಂದು ದಿನ ಸಣ್ಣಿ ಧರೆ ಹತ್ತಿ ಬಂದು ಮೇಲುಸಿರು ಬಿಡುತ್ತಾನೆ. ಬಂದಾಗ ಕಾಮತರ ದುಕಾನಿನ ಬಾಗಿಲಿಗೆ ಬೀಗ ಹಾಕಿದ್ದನ್ನು ಕಾಣುತ್ತಾನೆ. ಹೊರಗಿನ ಕಟ್ಟೆ ಖಾಲಿ ಇರುವುದನ್ನು ನೋಡಿ ಅವಾಕ್ಕಾಗುತ್ತಾನೆ. ಸಣ್ಣಿ ತಿಮ್ಮನಾಯಕನಿಂದ ಕಾಮತರು ಮೇಲೆ ಗುಂಡಬೋಳೆಯಲ್ಲಿ ಹೊಸ ಹೋಟೆಲು ಪ್ರಾರಂಭಿಸಿದ್ದನ್ನು ಕೇಳಿ ತಿಳಿಯುತ್ತಾನೆ. ಸಣ್ಣಿ ಮತ್ತು ತಿಮ್ಮನಾಯಕರು ಅಲ್ಲಿ ಅಡಿಕೆ ಮೆಲುಕುತ್ತಾ ಚಾ ದುಕಾನಿನ ಗುಣಗಾನ ಮಾಡುವುದರಲ್ಲಿ ತಲ್ಲೀನರಾಗುತ್ತಾರೆ. ನದಿ ದಾಟುವ ಪ್ರಯಾಣಿಕರು, ನದಿ ದಾಟಿಸುವ ಅಂಬಿಗರು, ಮೀನು ಮಾರುವವರು, ಮೀನು ಕೊಳ್ಳುವ ಗ್ರಾಹಕರು ಮುಂತಾದವರು ಕುಳಿತು ಚಹಾ ಕುಡಿಯಲಿಕ್ಕೆ ಚಾ ದುಕಾನು ಆಸರೆಯಾಗಿತ್ತು. ಈ ದುಕಾನಿನಿಂದ ಕಾಮತರು ಹೆಚ್ಚು ಹಣ ಸಂಪಾದಿಸಿ ಕೊಂಡಿದ್ದರು. ಸುತ್ತಮುತ್ತಲ ಹಳ್ಳಿಗರಿಗೆ ಕಾಮತರ ಚಾ ದುಕಾನು ಸಾಂಸ್ಕೃತಿಕ ಕೇಂದ್ರವಾಗಿತ್ತು. ಒಟ್ಟಾರೆಯಾಗಿ ಕಾದಂಬರಿಯಲ್ಲಿನ ಪಾತ್ರಪೋಷಣೆ ಮತ್ತು ಕಥನದ ಬೆಳವಣಿಗೆಯಲ್ಲಿ ಕಾಮತರ ದುಕಾನಿನ ಸನ್ನಿವೇಶವು ಮಹತ್ವದ ಪಾತ್ರ ವಹಿಸುತ್ತದೆ.

ಇವರ 'ವಿಷಾನಿಲ' ಎಂಬ ಮತ್ತೊಂದು ಕಾದಂಬರಿಯಲ್ಲಿ ಹೋಟೆಲಿನಿಂದಾಗಿ ಹಳ್ಳಿ ನಗರದತ್ತ ಸಾಗುವ ಸಂದರ್ಭವನ್ನು ಚಿತ್ರಿಸಲಾಗಿದೆ. ಶಾಂತಗೇರಿಯಲ್ಲಿ ಒಂದು ಕಾರ್ಖಾನೆ ಪ್ರಾರಂಭವಾದದ್ದು, ಅಲ್ಲಿನ ಕೆಲಸಗಾರರಿಗೆಂದೇ ನಿರ್ಮಿತವಾದ ಸುಸಜ್ಜಿತ ಮನೆಗಳು, ಪೇಟೆ ಬೀದಿಗಳು, ಅಂಚೆ ಕಚೇರಿ ಇವುಗಳ ಸಾಲಿನಲ್ಲಿ ಅಲ್ಲಿ ಒಂದು ಹೋಟೆಲನ್ನು ಆರಂಭಿಸಲಾಗುತ್ತದೆ. ಹೊಟ್ಟೆ ಹೊರೆಯಲು, ಚಿಲ್ಲರೆ ಕಾಸಿನವರಿಗಾಗಿ ಗೋಪಾಲ ಶಾಂತಗೇರಿ ಕೂಡುರಸ್ತೆಯಲ್ಲಿ ಸಣ್ಣ ಹೋಟೆಲನ್ನು ಪ್ರಾರಂಭಿಸುತ್ತಾನೆ. ರಾಮಕೃಷ್ಣಪ್ಪನ ಹಣದ ಸಹಕಾರ ಮತ್ತು ಆತನ ಪ್ರೇರಣೆಯೊಂದಿಗೆ ಗೋಪಾಲ ಹೋಟೆಲು ಉದ್ಯಮವನ್ನು ಉನ್ನತೀಕರಿಸುತ್ತಾನೆ. ಹೆಚ್ಚು ಹಣ ಸಂಪಾದಿಸಿ ಶ್ರೀಮಂತ ನೆನಿಸಿಕೊಳ್ಳುವ ವಿಚಾರಗಳು ಗೋಪಾಲನಲ್ಲಿ ಬೆಳೆಯಲಾರಂಭಿಸುತ್ತವೆ. ಗೋಪಾಲನು ಎರಡು ಸಾವಿರ ರೂಪಾಯಿಗೆ ಹರಿಯ ಸೈಟನ್ನು ಕೊಂಡುಕೊಳ್ಳುತ್ತಾನೆ. ಹೋಟೆಲು ಉದ್ಯಮ ದಿಂದಾಗಿ ಗೋಪಾಲನ ಉದ್ದೇಶ ಈಡೇರುತ್ತದೆ. ಅವನ ಬದುಕು ಸುಧಾರಣೆಗೊಳ್ಳುತ್ತದೆ. ಹಳ್ಳಿಯ ಜನರಿಗೂ ಕಾರ್ಖಾನೆಯ ಕಾರ್ಮಿಕರಿಗೂ ನಗರಪ್ರದೇಶದ ಊಟ-ಉಪಾಹಾರಗಳು ಗೋಪಾಲನ ಹೋಟೆಲಿನ ಮೂಲಕ ಲಭ್ಯವಾಗುತ್ತವೆ. ಆತನ ಹೋಟೆಲು ಉದ್ಯಮದಲ್ಲಿ ಅಲ್ಪಮಟ್ಟದ ವ್ಯತ್ಯಾಸಗಳು ಕಾಣಲಾರಂಭಿಸುತ್ತೇವೆ. ಗೋಪಾಲನ ಸಣ್ಣ ಹೋಟೆಲಿನಿಂದ ಉಂಟಾದ ಸಂಗತಿಗಳು ಕಾದಂಬರಿಯ ಕಥನದ ಬೆಳವಣಿಗೆಯಲ್ಲಿ ಪರೋಕ್ಷವಾಗಿ ಮಹತ್ತರವಾದ ಪರಿಣಾಮ ವನ್ನು ಬೀರಿರುತ್ತವೆ.

ಶಾಂತಗೇರಿಗೆ ಟಾರು ರಸ್ತೆ ಬಂದಿತು. ಹೊಸದಾಗಿ ಹಲವು ಕಚೇರಿಗಳು ಬಂದವು. ನೀರಿನ ಟ್ಯಾಂಕ್ ನಿರ್ಮಾಣದ ಹಂತದಲ್ಲಿದೆ. ಪ್ರೌಢಶಾಲೆ ಪ್ರಾರಂಭವಾಗಿರುವುದು, ಬ್ಯಾಂಕ್,

ಪೋಸ್ಟ್, ಸ್ಟೇಷನ್, ಬಸ್‌ಸ್ಟ್ಯಾಂಡ್ ಎಲ್ಲಕ್ಕೂ ಸ್ಥಳ ಕಾದಿರಿಸಿದಂತೆ ಅದರಲ್ಲಿ ಹೋಟೆಲೂ ಒಂದಾಗಿತ್ತು. ಗೋಪಾಲ ಈಗ ಬದಲಾಗಿದ್ದ. ಅವನು ಹೋಟೆಲಿಗೆ ಆರಿಸಿಕೊಂಡ ಜಾಗ ಒಳ್ಳೆಯದಾಗಿತ್ತು. ಫ್ಯಾಕ್ಟರಿ ಕಾರ್ಮಿಕರು, ಕೀಟನಾಶಕವನ್ನು ಒಯ್ಯಲು ಬರುವ ಲಾರಿ ಚಾಲಕರು ಬರುತ್ತಿದ್ದರು. ರಾಮಕೃಷ್ಣಪ್ಪನವರಿಂದ ಪಡೆದ ಸಾಲ ತೀರಿಸಿ ಹೋಟೆಲಿಗೆ ಕುರ್ಚಿ, ಮೇಜು ಹಾಕಿಸಿದನು. ಗೋಪಾಲಪ್ಪ ಹೆಂಡತಿಗೆ ಬಂಗಾರದ ಒಡವೆಗಳು ಮಾಡಿಸಿಕೊಟ್ಟನು.

'ಪ್ರೀತಿಯೊಂದೇ ಸಾಲದೇ' ಕಾದಂಬರಿಯಲ್ಲಿ ಹೋಟೆಲು ಸನ್ನಿವೇಶದ ಚಿತ್ರಣವಿದೆ. ಥಾಮಸ್ ಕತ್ತಿನಾರ ಮಗ ಮನುವೇಲುನ ತಾಯಿ ಅಕಾಲಿಕ ಮರಣ ಹೊಂದುತ್ತಾಳೆ. ನಂತರ ತಂದೆ ಪಾತಿಮಾಳನ್ನು ಮರುಮದುವೆಯಾಗುತ್ತಾನೆ. ಚಿಕ್ಕಮ್ಮ ಮತ್ತು ದುಮಿಂಗರ ಅನೈತಿಕ ಸಂಬಂಧ ಹೊಂದಿದ್ದು ಮನುವೇಲನಿಗೆ ಬೇಸರವಾಗಿರುತ್ತದೆ. ಶಿವಮೊಗ್ಗದೆಡೆಗೆ ಓಡಿಹೋಗಿ ಹೋಟೆಲಲ್ಲಿ ಬಾಲಕ ಮನುವೇಲು ಕೆಲಸಕ್ಕೆ ಸೇರಿಕೊಳ್ಳುತ್ತಾನೆ.

ಉಷಾ ನವರತ್ನರಾಮ್ ಅವರ 'ಯೌವ್ವನದ ಹೊನಲಲ್ಲಿ' ಎಂಬ ಕಾದಂಬರಿಯಲ್ಲಿಯೂ ಹೋಟೆಲಿನ ಸನ್ನಿವೇಶದ ಚಿತ್ರಣವಿದೆ. ಇಲ್ಲಿ ಶೃತಿ, ಶಶಿಧರ, ಭಾನು, ಸಿಂಧೂ, ನಾಗವೇಣಿಯಮ್ಮ, ಕಲ್ಯಾಣಿ, ಶ್ಯಾಮಲಾ ಒಂದು ಕುಟುಂಬದ ಬಾಂಧವ್ಯ ಹೊಂದಿದ ಪಾತ್ರಗಳಾಗಿರುತ್ತವೆ. ನಿರಂಜನ, ಮಾಧವನ್, ರಮೇಶ ಭಟ್ಟ, ಪ್ರಾಧ್ಯಾಪಕ ರೇವಣ್ಣ, ಸ್ವರ್ಣಮ್ಮ ಮತ್ತೊಂದು ಕುಟುಂಬದ ಸದಸ್ಯತ್ವ ಮತ್ತು ಬಾಂಧವ್ಯದಲ್ಲಿರುತ್ತಾರೆ. ಭೀನಾ, ಜ್ಯೋತಿ, ಲೀಲಾ, ತ್ರಿಭುವನ, ಶೀಲಾ, ರೀಟಾ, ರಾಮನ್ ಅಂಕಲ್ ಇವರು ಕಾದಂಬರಿಯಲ್ಲಿ ಸೂಚಿತವಾಗಿರುವ ಎರಡು ಕುಟುಂಬಗಳ ಬಾಂಧವ್ಯ ಹೊಂದಿರುವ ಸದಸ್ಯರಾಗಿದ್ದಾರೆ. ಇವರೆಲ್ಲರೂ ಒಂದಿಲ್ಲೊಂದು ಕಾರಣವನ್ನಿಟ್ಟುಕೊಂಡು ಹೋಟೆಲು ಪ್ರವೇಶಿಸುವ ಪ್ರಸಂಗಗಳು ಈ ಕಾದಂಬರಿಯಲ್ಲಿ ಪ್ರಸ್ತಾಪಗೊಂಡಿವೆ. ತಾವು ಬದುಕಿರುವ ವ್ಯವಸ್ಥೆ ಮತ್ತು ಸಮಾಜದಲ್ಲಿ ಸಂಭವಿಸುವ ಇಕ್ಕಟ್ಟುಗಳು, ವಿರೋಧಗಳು ಉದ್ಭವಿಸಿದಾಗ ನಿವಾರಿಸಿಕೊಳ್ಳುವ ಕೇಂದ್ರವಾಗಿ ಹೋಟೆಲನ್ನು ಕಾದಂಬರಿಯು ಸನ್ನಿವೇಶ ನಿರ್ಮಾಣಕ್ಕಾಗಿ ಬಳಸಿಕೊಂಡಿದೆ. ಅವರ ಅಂತರಂಗದ ಯೋಚನೆಗಳು, ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ತಾಣವಾಗಿ ಹೋಟೆಲು ಚಿತ್ರಿತವಾಗಿದೆ. ಯುವಕರಲ್ಲಿ ಉಂಟಾಗುವ ತಲ್ಲಣ, ಜಿಜ್ಞಾಸೆಗಳಿಗೆ ಹೋಟೆಲು ಶಾಂತ ಪರಿಸರವನ್ನು ಸೃಷ್ಟಿಸುವ ಸ್ಥಳವಾಗಿದೆ. ಈ ಮೇಲೆ ಹೆಸರಿಸಿದ ಪಾತ್ರಗಳ ಮನಸ್ಸು ಚಂಚಲತೆಗೆ ಒಳಗಾದಾಗ ಸಂತೃಪ್ತಿ ಸೂಚಿಸುವ ನೆಲೆಯಲ್ಲಿ ಹೋಟೆಲು ಚಿತ್ರಿತವಾಗಿದೆ. ಇಲ್ಲಿನ ಪಾತ್ರಗಳು ತಾವು ಬದುಕುತ್ತಿರುವ ಸ್ಥಳ ಪ್ರಕೃತಿದತ್ತವಾದದ್ದು ಎನಿಸಿದರೂ ಅಂತರಂಗದಲ್ಲಿ ಆಧುನಿಕತೆಯ ಪ್ರತೀಕವಾದ ಹೋಟೆಲು ವೈಜ್ಞಾನಿಕ ಸಂಗತಿಗಳ ಕುರಿತು ಚರ್ಚಿಸುವ ಪ್ರಯೋಗಾಲಯವಾಗಿದೆ. ನಾಗವೇಣಿಯಮ್ಮನ ಮಗಳಾದ ಶೃತಿಯ ಜೊತೆಗೂಡಿ ನಿರಂಜನ ಒಂದು ಅನಿವಾರ್ಯ ಪ್ರಸಂಗದಲ್ಲಿ ಹೋಟೆಲು ಪ್ರವೇಶ ಪಡೆಯುತ್ತಾನೆ. ನಾಗರಿಕ ಪ್ರಜ್ಞೆಯುಳ್ಳ

ಯೌವ್ವನದ ಯುವತಿ ಭೀನಾ ತ್ರಿಭುವನ ಜೊತೆಗೆ ವಿವಾಹಪೂರ್ವದ ಲೈಂಗಿಕತೆಯ ಮಾತುಕತೆ ಯಾಡಲಿಕ್ಕೆ ಹೋಟೆಲನ್ನು ಆಯ್ಕೆ ಮಾಡಿಕೊಂಡಿರುತ್ತಾಳೆ.

ನಿರಂಜನ ಮತ್ತು ಶೃತಿ ಇಬ್ಬರೂ ತಮ್ಮ ಕುಟುಂಬದವರ ವಿರೋಧದ ನಡುವೆ ಪ್ರೇಮ ವಿವಾಹವಾಗಿ ಎದುರಿಸುತ್ತಿರುವ ಸಂಕಟಗಳಿಗೆ ಹೋಟೆಲು ಒಂದು ನೆಮ್ಮದಿ ಕೇಂದ್ರವಾಗಿದೆ. ಅವರಿಗೆ ಅಡುಗೆಗೆ ಪಾತ್ರೆಗಳ ಕೊರತೆ, ಅನುಭವದ ಕೊರತೆ, ಸಂಸಾರದ ಸಾರವೇ ಗೊತ್ತಿರದ ಇಬ್ಬರೂ ಊಟಕ್ಕಾಗಿ ಸಿದ್ಧರಾಗುವ ಸನ್ನಿವೇಶದಲ್ಲಿ ನಿರಂಜನನು ಹೋಟೆಲಿನ ಪ್ರಸ್ತಾಪ ಮಾಡುತ್ತಾನೆ. ಅವನು ಪತ್ನಿಯಾದ ಶೃತಿಗೆ ಅನ್ನವನ್ನಷ್ಟೇ ಮಾಡಿ ಇಡು ಸಾಂಬಾರು ಹೋಟೆಲಿನಿಂದ ತರುತ್ತೇನೆ ಎನ್ನುತ್ತಾನೆ. ಹೀಗೆ ಯುವಜೋಡಿಗಳು ವಿವಾಹವಾಗಿ ಅಸಹಾಯಕತೆಯಿಂದ ಬಳಲುವಾಗ ಹೋಟೆಲು ಅವರಿಗೆ ಆಸರೆಯ ತಾಣವಾಗುತ್ತದೆ.

ಇವುಗಳಲ್ಲದೇ ಹೋಟೆಲು ಪ್ರಸ್ತಾಪವಿರುವ ಅನೇಕ ಸಣ್ಣಕಥೆ-ಕಾದಂಬರಿಗಳು ಕನ್ನಡದಲ್ಲಿವೆ. ಪಂಜೆ ಮಂಗೇಶರಾಯರ 'ಕಮಲಪುರದ ಹೊಟ್ಲೆ'ನಲ್ಲಿ ಕನ್ನಡದ ಮೊದಲಘಟ್ಟದ ಕಥೆಯಾಗಿದೆ. ಕಥೆಗಾರರು ಕಥೆಯ ಸನ್ನಿವೇಶವನ್ನು ತಮ್ಮ ಸಮಕಾಲೀನ ಬದುಕಿನಿಂದ ಆಯ್ದುಕೊಂಡು ಚಿತ್ರಿಸಿದ್ದಾರೆ. ಹೊಟ್ಲಿನ ಸುತ್ತ ಹೆಣೆದ ಕಥೆಯ ಸನ್ನಿವೇಶಗಳ ಹಂದರವಾಗಿದೆ. ಈ ಹಿನ್ನೆಲೆಯಲ್ಲಿ ಕಥೆಯ ಸನ್ನಿವೇಶಗಳು ಹೊಟ್ಲಿನ ಮೂಲಕ ಅಂದಿನ ವಾಸ್ತವ ಬದುಕಿನ ತಿಳಿಹಾಸ್ಯ, ಕುತೂಹಲ, ವಿಡಂಬನೆ, ವ್ಯಂಗ್ಯ, ಹುಡುಕಾಟ, ನೋವು-ನಲಿವು, ಸಂಭ್ರಮ, ವಿಶ್ವಾಸ, ಪ್ರೀತಿ-ಪ್ರೇಮ, ಬಡತನ, ಒಂಟಿತನ, ಬಂಡತನ, ವಿಷಾದ, ನಯ-ವಿನಯ, ಆಚಾರ-ವಿಚಾರ, ಕಸುಬು, ರಾಜಕೀಯ, ಕೌಟುಂಬಿಕತೆ, ಆಧುನಿಕತೆ, ಮನುಷ್ಯನ ಸಣ್ಣತನ, ಸಿಡುಕುತನ ಹೀಗೆ ಇನ್ನೂ ಮೊದಲಾದ ಬದುಕಿನ ನಾಡಿ-ಮಿಡಿತವನ್ನು ಹೊಟ್ಲಿನ ಕಥೆಯ ಸನ್ನಿವೇಶವಾಗಿಸುವುದರ ಮೂಲಕ ಈ ಮೇಲಿನ ಎಲ್ಲಾ ಸಂಗತಿಗಳಿಗೆ ಜೀವ ತುಂಬಿದ್ದಾರೆ.

ವ್ಯಾಸರಾಯ ಬಲ್ಲಾಳರ 'ಎರಡು ಧ್ರುವ' ಕಥೆಯಲ್ಲಿ ಹೋಟೆಲು ಸನ್ನಿವೇಶವು ಪ್ರಮುಖ ಪಾತ್ರ ವಹಿಸುತ್ತದೆ. ನಗರದ ಹೋಟೆಲಲ್ಲಿ ಮಾಧವ ಮತ್ತು ಪಲ್ಲವಿ ಕೋಕಾಕೋಲಾ ಕುಡಿಯುವ, ಪ್ರೇಮಸಲ್ಲಾಪದಲ್ಲಿ ತೊಡಗುವ, ಗಂಡು-ಹೆಣ್ಣು ಪ್ರೇಮ ಭಾವಗಳನ್ನು ವ್ಯಕ್ತಪಡಿಸುವ ಸನ್ನಿವೇಶಗಳು ಕಥೆಯಲ್ಲಿ ಪ್ರಸ್ತಾಪವಾಗಿವೆ. 'ಸಂಪಿಗೆ ಹೂವು' ಕಥೆಯಲ್ಲಿ ಯಶೋಧಾ ಮತ್ತು ಪ್ರಭಾಕರನು 'ತಾಂಜ ಉಪಾಹಾರ ಮಂದಿರ'ದಲ್ಲಿ ಕಾಫಿ ಕುಡಿಯುವ, ಅಲ್ಲಿಯ ಸಂಪ್ರದಾಯ, ಆಧುನಿಕತೆ, ವೈಚಾರಿಕತೆ ಮನೋಭಾವನೆಗಳು, ಗರಿಬಿಚ್ಚಿಕೊಳ್ಳುವ ಸನ್ನಿವೇಶವು ಈ ಕಥೆಯಲ್ಲಿ ಚಿತ್ರಿತವಾಗಿದೆ. 'ಬೆಂಕಿಯ ನಾಲಿಗೆ' ಎಂಬ ಕಥೆಯಲ್ಲಿ ಆಫೀಸಿನ ಒತ್ತಡ, ಕೌಟುಂಬಿಕ ಕಲಹ, ನೌಕರಸ್ಥರ ತಲ್ಲಣಗಳಿಗೆ 'ರೆಸ್ಟೋರೆಂಟಿನ' ಸನ್ನಿವೇಶವಿದೆ. ಕಾಡುಮಲ್ಲಿಗೆ ಕಥೆಯಲ್ಲಿ ಮುಂಬಯಿ ನಗರ ಹೋಟೆಲಲ್ಲಿ ಮಾಣಿಯ ಕೆಲಸಕಾರ್ಯಗಳ, ತಿಂಡಿ ವಿವಿಧ ಬಗೆಯಲ್ಲಿ ಲಭ್ಯವಿರುವ, ಮಾಲೀಕರು,

ಕಾರ್ಮಿಕರು ಹಾಗೂ ಗ್ರಾಹಕರ ಪರಸ್ಪರ ಮುಖಾಮುಖಿಯಾಗುವ ಸನ್ನಿವೇಶವಿದೆ. 'ಹೊಸ ಹಗಲು' ಕಥೆಯಲ್ಲಿಯು ಮಾಧವ ಸುನಂದೆಯರ ವೈವಾಹಿಕ ಸಂಬಂಧದ ಬಿರುಕುಂಟಾಗುವುದು ಮುಂಬಯಿ ನಗರ ಹೋಟೆಲೊಂದರಲ್ಲಿ ನಡೆಯುವ ಸನ್ನಿವೇಶವಾಗಿರುತ್ತದೆ. ಯಶವಂತ ಚಿತ್ತಾಲರ 'ತ್ರಯೋದಶ ಪುರಾಣ' ಕಥೆಯಲ್ಲಿ ಹೋಟೆಲಿನ ಇಡೀ ಆವರಣ ಸನ್ನಿವೇಶವಾಗಿ ಪ್ರಸ್ತಾಪವಾಗಿದೆ. ಇದು ಹೋಟೆಲು ಕಾರ್ಮಿಕರಾದ ಗಣೇಶ ಮತ್ತು ಗೋಪಾಲ ಸಂಭಾಷಣೆಯೇ ಮುಖ್ಯವಾದ ಕಥೆಯ ಸನ್ನಿವೇಶವಾಗಿದೆ. ಹೋಟೆಲಿನ ಕೆಲಸಗಳು, ತಿಂಡಿಯ ವಿವರಗಳು, ಹೋಟೆಲು ಕಾರ್ಮಿಕರ ಮನಸ್ಸುಗಳ ಸನ್ನಿವೇಶಗಳು ಇಲ್ಲಿ ಚಿತ್ರಿತವಾಗಿರುತ್ತವೆ.

ಚದುರಂಗರ 'ನಾಲ್ಕು ಮೊಳ ಭೂಮಿ' ಕಥೆಯಲ್ಲಿ ಕೋರ್ಟಿನ ಸಮಯದಲ್ಲಿ ಲಾಯರನಿಗೆ ಊಟ, ಶುಚಿ ರುಚಿಯ ತಿಂಡಿ ಪೂರೈಸುವ ನೆಲೆಯಲ್ಲಿ ಹೋಟೆಲಿನ ಸನ್ನಿವೇಶವಿದೆ. ಕಥೆಯಲ್ಲಿ ಯುವಕರು, ದುಡಿಯುವವರು, ಕೂಲಿಕಾರರು ಮೊದಲಾದವರನ್ನು ಹೋಟೆಲು ಗ್ರಾಹಕರಾಗಿಸಿ ಕೊಳ್ಳುವ ಸನ್ನಿವೇಶವಿದೆ. ಇವರ 'ಶವದ ಮನೆ' ಕಥೆಯಲ್ಲಿ ಮಾಣಿಯು ಆಧುನಿಕ ಶೈಲಿಯಲ್ಲಿ ಹೋಟೆಲಿನ ತಿಂಡಿ ಪರಿಚಯಿಸುವ ಸನ್ನಿವೇಶ, ವೆಂಕಟರಮಣಪ್ಪ ಮತ್ತು ನಾರಾಯಣಪ್ಪ ತಿಂಡಿಗೆ ಹೋಟೆಲಿಗೆ ಹೋಗುವ ಸನ್ನಿವೇಶವಿದೆ.

ಯು.ಆರ್. ಅನಂತಮೂರ್ತಿ ಅವರ 'ಪ್ರಕೃತಿ' ಕಥೆಯಲ್ಲಿ ಸಂಕಪ್ಪಯ್ಯ. ಮಗ ನಾರಾಯಣರ ನಡುವೆ ಪರಂಪರೆ, ಆಧುನಿಕತೆ ಸಂಭಾಷಣೆಗೆ ಹೋಟೆಲು ಸನ್ನಿವೇಶವು ಮುಖ್ಯ ಕಾರಣವಾಗಿರುತ್ತದೆ. ಪ್ರಸ್ತುತ ಕಥೆಯಲ್ಲಿನ ಪುಂಡರಿಕ ಮತ್ತು ನೇತ್ರಾ ಪರಂಪರೆ ಮತ್ತು ಪೌರೋಹಿತ್ಯ ಬಿಟ್ಟು ಹೋಟೆಲು ಉದ್ಯಮದ ಬಗೆಗೆ ಮಾತುಕತೆಯನ್ನಾಡುವ ಸನ್ನಿವೇಶವಿದೆ. 'ಬೋಜರಾಜ' ಕಥೆಯಲ್ಲಿ ಅರುಂಧತಿ ಮತ್ತು ರಾಜಣ್ಣ ನಗರ ಹೋಟೆಲು ಪ್ರವೇಶಿಸುವ ಸನ್ನಿವೇಶವಿದೆ. 'ಕ್ಲಿಪ್ ಜಾಯಿಂಟ್' ಕಥೆಯಲ್ಲಿ 'ಮೀರಮಿಡ್ ಬಾರಿ'ನ ಚಿತ್ರಣವಿದೆ. ಮಾವಿನಕೆರೆ ರಂಗನಾಥರ 'ಉಳಿದದ್ದು ಆಕಾಶ' ಕಥೆಯಲ್ಲಿ 'ಶ್ರೀ ರಾಘವೇಂದ್ರ ಕಾಫಿ ಕ್ಲಬ್' ಆಧುನಿಕತೆಯ ಪ್ರತೀಕವಾಗಿ ಚಿತ್ರಣಗೊಂಡಿದೆ. ಜಿ.ಎಸ್. ಸದಾಶಿವ ಅವರ 'ಮೀಸೆಯವರು' ಕಥೆಯಲ್ಲಿ ಅಂಗಡಿ, ಸಿನಿಮಾ, ಬೀದಿ ದೀಪಗಳ ಸಾಲಿನಲ್ಲಿ ಹೋಟೆಲಿನ ಪ್ರಸ್ತಾಪವು ಕಂಡುಬರುತ್ತದೆ.

ಅಮರೇಶ ನುಗಡೋಣಿ ಅವರ 'ಏ ದಿಲ್ ಮಾಂಗೇ ಮೋರ್' ಕಥೆಯಲ್ಲಿ ಖಾಜಾವಲಿ ಮತ್ತು ಸಾಂತ ಪ್ರೀತಿಯ ವಿಷಯವಾಗಿ ಹೋಟೆಲು ಪ್ರಸ್ತಾಪವಾಗಿದೆ. ಸಾಂತಿಯನ್ನು ಖಾಜಾವಲಿಯೇ ಓಡಿಸಿಕೊಂಡು ಹೋಗಿದ್ದಾನೆಂಬ ಸುದ್ದಿಯಿಂದ ಊರಲ್ಲಿ ಹುಡುಕಾಟ ಪ್ರಾರಂಭವಾಗುತ್ತದೆ. ಸಾಂತಿಯನ್ನು ಮದುವೆ ಮಾಡಿಕೊಳ್ಳಬಯಸಿದ ಆಕೆಯ ಮಾವ ವಿರೂಪಾಕ್ಷಿ, ಗಿರೀಶ ಮತ್ತಿತರೊಂದಿಗೆ 'ಹುಸೇನವ್ವನ ಹೋಟೆಲಿ'ಗೆ ನುಗ್ಗುತ್ತಾರೆ.

ತ್ರಿವೇಣಿ ಅವರ 'ಮೊದಲ ಹೆಜ್ಜೆ' ಕಾದಂಬರಿಯಲ್ಲಿ ಶಿವು ಮತ್ತು ರಂಗರಾಜರು ಪ್ರಮುಖ ಪಾತ್ರವಾಗಿ ಕಂಡುಬರುತ್ತಾರೆ. ಸ್ಥಿತಿವಂತ ಯುವಕನಿಗೆ ವೈಭವಯುತವಾದ ಜೀವನ

ಕಳೆಯಲು ಹೋಟೆಲು ಸನ್ನಿವೇಶವನ್ನು ಇಲ್ಲಿ ಚಿತ್ರಿಸಲಾಗಿದೆ. ಕಾದಂಬರಿಯ ಸನ್ನಿವೇಶವೊಂದರ ಮೂಲಕ ಇದನ್ನು ಉದಾಹರಿಸಬಹುದಾಗಿದೆ. "ನನ್ನ ತಂದೆ ತಾಯಿಗೆ ನಾನೊಬ್ಬನೇ ಮಗ. ಯಾವ ಆಜ್ಞೆಯೂ ಇಲ್ಲದೆ ನಾನು ಬೆಳೆದೆ. ನಮ್ಮ ತಂದೆ ಜಮೀನ್ದಾರರು. ಅವರು ನನಗೆ ಕೈತುಂಬ ಹಣ ಕೊಡುತ್ತಿದ್ದರು. ಅವರು ಕಳುಹಿಸಿದ ಹಣವನ್ನೆಲ್ಲಾ ನಾನು ಸಿಗರೇಟು, ಸಿನಿಮಾ, ಹೋಟೆಲುಗಳಿಗೆ ಖರ್ಚು ಮಾಡಿದೆ". ಹೀಗೆ ಮನುಷ್ಯನ ಮುಖ್ಯ ವ್ಯಸನಗಳಲ್ಲಿ 'ಹೋಟೆಲು' ಸಹವಾಸ ಒಂದು ಎಂಬುದನ್ನು ಕಾದಂಬರಿಯು ಪ್ರಸ್ತಾಪಿಸುತ್ತದೆ.

ಅನಕೃ ಅವರ 'ಶನಿಸಂತಾನ' ಕಾದಂಬರಿಯಲ್ಲಿ ಹೋಟೆಲಿನ ಪ್ರಸ್ತಾಪವಿದೆ. ಸರಸ್ವತಿ ಗಂಡನು ಅಕಾಲಿಕ ಮರಣಕ್ಕೆ ತುತ್ತಾಗುತ್ತಾನೆ. ಸಾಲ ಕೊಟ್ಟವರು ಮನೆಯ ಮುಂದೆ ಬಂದು ಕೇಳುವಂತಹ ಸ್ಥಿತಿ ನಿರ್ಮಾಣವಾಗಿತ್ತು. ಕುಡಿತದ ಚಟಕ್ಕೆ ಬಿದ್ದು ಸತ್ತಿದ್ದರಿಂದಾಗಿಯೇ ಬಂದವರಲ್ಲಿ 'ಮೋಹಿನಿ ಉಪಾಹಾರ ಮಂದಿರ'ದ ಮಾಲಕ ಮಂಜಯ್ಯ ಬರುತ್ತಾನೆ. ಮಂಜಯ್ಯ ಸಾಲ ವಸೂಲಿಗೆ ಬಂದವನಿಗೆ ಸರಸ್ವತಿಯ ಸೌಂದರ್ಯಕ್ಕೆ ಆಕರ್ಷಿತನಾಗುವ ಪ್ರಸ್ತಾಪವಿದೆ.

ನಿರಂಜನ ಅವರ 'ಚಿರಸ್ಮರಣೆ' ಕಾದಂಬರಿಯಲ್ಲಿ ಸನ್ನಿವೇಶ ನಿರ್ಮಾಣಕ್ಕಾಗಿ ಹೋಟೆಲು ಬಳಕೆಯಾಗಿದೆ. ರೈತರ ಚಳುವಳಿ, ಜನರ ಗುಂಪು ಘರ್ಷಣೆಯಿಂದಾಗಿ ಚಿರಾಕುಂಡ ಮತ್ತು ಅಪ್ಪು ಪೊಲೀಸರ ಕೆಂಗಣ್ಣಿಗೆ ಗುರಿಯಾಗುತ್ತಾರೆ. ನ್ಯಾಯಾಲಯದಲ್ಲಿ ಜೈಲು ಶಿಕ್ಷೆ ಪ್ರಕಟವಾಗಿರುತ್ತದೆ. ಆ ಆದೇಶದ ಮೇರೆಗೆ ಪೊಲೀಸರು ಚಿರಾಕುಂಡ ಮತ್ತು ಅಪ್ಪುನನ್ನು ದಸ್ತಗಿರಿ ಮಾಡಲು ಹುಡುಕುತ್ತಿರುತ್ತಾರೆ. ಪೊಲೀಸರ ಕಣ್ಣಿಂದ ತಪ್ಪಿಸಿಕೊಳ್ಳಲು ಇಬ್ಬರೂ ಹೋಟೆಲೊಂದರಲ್ಲಿ ಅವಿತು ಕೊಳ್ಳುವ ಸನ್ನಿವೇಶ ಕಾದಂಬರಿಯಲ್ಲಿ ಪ್ರಸ್ತಾಪವಾಗಿರುತ್ತದೆ.

ಸಾಯಿಸುತೆ ಅವರ 'ಪ್ರೇಮಸಾಫಲ್ಯ' ಕಾದಂಬರಿಯಲ್ಲಿ ಹೋಟೆಲಿನ ಪ್ರಸ್ತಾಪವಿದೆ. ಕಾದಂಬರಿಯಲ್ಲಿ ರಶ್ಮಿ ಮತ್ತು ನಿರುಪಮ ಪ್ರಮುಖ ಪಾತ್ರಗಳಾಗಿದ್ದಾರೆ. ರಶ್ಮಿಯು ನಿರೂಪಮನ ವ್ಯಕ್ತಿತ್ವದ ಬಗೆಗೆ ವ್ಯಕ್ತಪಡಿಸುವ ಅನಿಸಿಕೆಗಳು ಹೀಗಿವೆ: "ಹೊರಗಡೆ ಹೋದರೆ ಹೋಟೆಲಲ್ಲಿ ತಿಂದು ಬರುವ ನಿರುಪಮ ಒಂದೊಂದು ಸಲ ಮಡಿ ಮೈಲಿಗೆ ಬಗ್ಗೆ ಹಾರಾಡುತ್ತಿದ್ದರು. ಆದರೆ ರಾಯರಿಗೆ ಕೈಯೆತ್ತಿ ಮುಗಿಯಬೇಕೆನಿಸಿತು. ನಿಜವಾದ ಮಾನವಧರ್ಮವನ್ನು ಅರ್ಥ ಮಾಡಿ ಕೊಂಡವರು ಇವರು"(ಸಾಯಿಸುತೆ; ೨೦೦೯; ಪು.೫೩). ಇಲ್ಲಿ ನಿರುಪಮ ಮತ್ತು ರಾಯರ ವ್ಯಕ್ತಿತ್ವವನ್ನು ತುಲನೆ ಮಾಡಲು ಹೋಟೆಲಿನಲ್ಲಿ ಆಹಾರ ಸೇವನೆ ಮಾಡುವ ಅಭ್ಯಾಸವನ್ನು ಪ್ರಸ್ತಾಪಿಸಲಾಗಿದೆ.

ಕೆ.ಟಿ. ಗಟ್ಟಿ ಅವರ 'ಮೃತ್ಯೋರ್ಮಾ ಅಮೃತಂಗಮಯ', 'ಪುನರಪಿ ಜನನ', 'ಅಭಿಚಾರ' ಕಾದಂಬರಿಗಳಲ್ಲಿ ಹೋಟೆಲಿನ ಪ್ರಸ್ತಾಪವಿದೆ. ಮೃತ್ಯೋರ್ಮಾ ಅಮೃತಂಗಮಯ ಎಂಬ ಕಾದಂಬರಿಯಲ್ಲಿ ಸಾಮಾಜಿಕ ವ್ಯವಸ್ಥೆಯೊಂದನ್ನು ವಿಮರ್ಶಿಸುವ ಸಲುವಾಗಿ ಹೋಟೆಲು

ಪ್ರಸ್ತಾಪಗೊಂಡಿದೆ. ಸುರೇಂದ್ರನು ಮನೋಹರನ ಮನೆಯಲ್ಲಿ ಕಾಫಿ ಕುಡಿಯಲು ಅಸಮ್ಮತಿ ಸೂಚಿಸುತ್ತಾನೆ. ಹೀಗೆ ನಿರಾಕರಿಸಿದ್ದು ಮನೋಹರನ ಮನಸ್ಸಿನಲ್ಲಿ ವ್ಯಥೆಯನ್ನುಂಟು ಮಾಡುತ್ತದೆ. ಇಡೀ ವ್ಯವಸ್ಥೆಯ ವಿರುದ್ಧ ಮನೋಹರನು ಹೋಟೆಲು ಕುರಿತಾದ ಈ ಮಾತುಗಳನ್ನಾಡುತ್ತಾನೆ. "ಹೋಟೆಲಲ್ಲಿ ಯಾರ್ಯಾರು ಮಾಡಿದ್ದು ಆಗುತ್ತೆ, ನೂರಾರು ಜನ ಕಚ್ಚಿ ಕುಡಿದ ಗ್ಲಾಸು, ತಿಂದ ತಟ್ಟೆ ಆಗುತ್ತೆ. 'ಬ್ರಾಹ್ಮಣರ ಹೋಟೆಲು' ಎಂದು ಬೋರ್ಡ್ ಇದ್ದರೆ ಸಾಕು. ಆದರೆ ನಮ್ಮ ಮನೆಯಲ್ಲಿ ಒಂದು ಲೋಟ ಕೂಡ ಕುಡಿಯೋಕಾಗಲ್ಲ! ನಾವು ಶೂದ್ರರು, ನೀವು ಬ್ರಾಹ್ಮಣರು ಅಂತ ತೋರಿಸಿಕೊಳ್ಳುವುದಕ್ಕೆ ತಾನೆ"(ಕೆ.ಟಿ. ಗಟ್ಟಿ; ೨೦೧೧; ಪು. ೧೯) ಎಂಬ ಮಾತುಗಳಲ್ಲಿ ಮನೋಹರನಿಗೆ ಹೋಟೆಲಿನ ಬಗೆಗೆ ಇರುವಂತಹ ತಿರಸ್ಕಾರ ಭಾವ ವ್ಯಕ್ತವಾಗುತ್ತದೆ. ಇಲ್ಲಿ ಜಾತಿವ್ಯವಸ್ಥೆಯ ಪ್ರಶ್ನೆಯನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಚರ್ಚಿಸುವುದಕ್ಕೋಸ್ಕರ ಹೋಟೆಲಿನ ಪ್ರಸ್ತಾಪವನ್ನು ಮಾಡಲಾಗಿದೆ.

ಇದೇ ಲೇಖಕರ 'ಪುನರಪಿ ಜನನ' ಕಾದಂಬರಿಯಲ್ಲೂ ಜಾತಿಸಮಸ್ಯೆಯ ಕುರಿತು ವಿಚಾರ ಮಾಡುವ ಸಲುವಾಗಿ ಹೋಟೆಲಿನ ಪ್ರಸ್ತಾಪವನ್ನೇ ತರಲಾಗಿದೆ. ರಾಮಭಟ್ಟರು ಶೂದ್ರಳೊಬ್ಬಳನ್ನು ಮನೆಯ ಅಡುಗೆಗಾಗಿ ಇರಿಸಿಕೊಂಡಿರುತ್ತಾರೆ. ಸಾರ್ವಜನಿಕರು ಮನಸ್ಸಿಗೆ ಬಂದ ಹಾಗೇ ಮಾತನಾಡಿಕೊಳ್ಳುತ್ತಾರೆ. ಸಹಿಸಿಕೊಳ್ಳದಾದಾಗ ರಾಮಭಟ್ಟರು ಪ್ರತಿಕ್ರಿಯಿಸುವ ಈ ನುಡಿಗಳನ್ನು ಗಮನಿಸಬಹುದು. "ಬ್ರಾಹ್ಮಣರ ಹೋಟೆಲೆಂದರೆ ಸರಿ! ಯಾರೋ ಮಾಡಿದ ಅಡುಗೆಯಾದರೂ ಆಗುತ್ತೆ. ಯಾರು ಉಂಡು ತಿಂದ ತಟ್ಟೆಗಳಾದರೂ ಆಗುತ್ತವೆ. ಮನೆಯಲ್ಲಿ ಶೂದ್ರಳೊಬ್ಬಳು ನಿರ್ಮಲವಾಗಿ ಅಡುಗೆ ಮಾಡಿಕೊಟ್ಟರೆ ಆಗುವುದಿಲ್ಲ"(ಕೆ.ಟಿ. ಗಟ್ಟಿ, ೨೦೧೨ ಪು. ೧೧೭). ಮಡಿವಂತರ ಟೀಕೆಗೆ ಉತ್ತರವಾಗಿ ಹೋಟೆಲನ್ನು ನೆಪವಾಗಿರಿಸಿಕೊಂಡು ರಾಮಭಟ್ಟರು ಆಡುವ ಈ ಮಾತುಗಳಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆಯ ಕುರಿತಾದ ವಿಮರ್ಶೆಯಿದೆ.

ಇದೇ ಲೇಖಕರ 'ಅಭಿಚಾರ' ಕಾದಂಬರಿಯಲ್ಲಿ ಭೀಮಸ್ವಾಮಿ, ಲಕ್ಷ್ಮಿಯನ್ನು ಹೋಟೆಲಿಗೆ ಕರೆದೊಯ್ಯುವ ಸನ್ನಿವೇಶವಿದೆ. ಅಲ್ಲಿ ಉಪಾಹಾರ ಸೇವಿಸುವಾಗ ಪರಸ್ಪರ ಪ್ರೇಮಸಲ್ಲಾಪದ ಮಾತುಗಳನ್ನಾಡುವುದಕ್ಕೆ ಹೋಟೆಲು ಮುಖ್ಯಕೇಂದ್ರವಾಗಿರುತ್ತದೆ. ಕಾದಂಬರಿಯ ಸನ್ನಿವೇಶ ನಿರ್ಮಾಣದಲ್ಲಿ ಹೋಟೆಲು ತನ್ನತನ ಮೆರೆದಿರುವುದನ್ನು ನಾವು ಕಾಣಬಹುದಾಗಿದೆ.

ಕಥೆ-ಕಾದಂಬರಿಗಳಿಗಿಂತ ಭಿನ್ನ ರೀತಿಯಲ್ಲಿ ಪತ್ತೆದಾರಿ ಕಾದಂಬರಿಗಳು ಹೋಟೆಲಿನ ಸನ್ನಿವೇಶವನ್ನು ಚಿತ್ರಿಸುತ್ತವೆ. ಟಿ.ಕೆ. ರಾಮರಾವ್ ಅವರ 'ಆಷಾಢ ರಾತ್ರಿಗಳು' ಕಾದಂಬರಿಯಲ್ಲಿ ಹೋಟೆಲು ಚಿತ್ರಣವು ಕಂಡುಬರುತ್ತದೆ. 'ರೊಡ್ಡವೆಸ್ಟ್‌ಎಂಡ್ ಹೋಟೆಲಿ'ನಲ್ಲಿ ವಜ್ರಗಳ ವ್ಯಾಪಾರಿಯಾದ ಪೋರ್ಟರ್‌ನನ್ನು ಕೊಲ್ಲುತ್ತಾನೆ. ದರೋಡೆ, ಹಿಂಸೆ, ಕೊಲೆ ಈ ಎಲ್ಲಾ ಅನಿಷ್ಟ ಪರಂಪರೆಗಳು ಹೋಟೆಲಲ್ಲೇ ಸಂಭವಿಸುತ್ತವೆ.

ಸುದರ್ಶನ ದೇಸಾಯಿ ಅವರ 'ಸೀಳು ನಾಲಿಗೆ' ಕಾದಂಬರಿಯಲ್ಲಿನ ಹೋಟೆಲು ಸನ್ನಿವೇಶ ನಿರ್ಮಾಣಕ್ಕಾಗಿ ಬಳಕೆಯಾಗಿದೆ. 'ಮಧುದರ್ಶಿನಿ ಹೋಟೆಲಿ'ನ ಚಿತ್ರಣವಿದೆ. ಅಲ್ಲಿ ದೇಶಪಾಂಡೆ ಅಚ್ಚರಿಗೊಳ್ಳುವ, ಸಂಭ್ರಮಗೊಳ್ಳುವ ಸನ್ನಿವೇಶ, ಮೇಜರ್ ಹೇಮಂತನ ಸಂಗಾತಿಯ ಹಾಗೂ ತನ್ನ ಆತ್ಮೀಯ ಸ್ನೇಹಿತನೂ ಆದ ಅಶೋಕ ಎದುರಿಗೆ ಬಂದದ್ದು, ಅಲ್ಲಿ ಆತ್ಮೀಯತೆಯಿಂದ ಕೈಕುಲುಕುವ ಸಂದರ್ಭ, ಇಬ್ಬರೂ ಸೇರಿ ಹೋಟೆಲಲ್ಲಿ ತಿಂಡಿ ತಿಂದು ಕಾಫಿ ಕುಡಿಯುವುದು. ಇಬ್ಬರೂ ಕುಶಲೋಪಚಾರಿ ಮಾತುಗಳನ್ನಾಡುವ ಕೇಂದ್ರವಾಗಿ ಹೋಟೆಲು ಚಿತ್ರಿತವಾಗಿದೆ. ಕಾದಂಬರಿಯಲ್ಲಿನ ಈ ಎಲ್ಲಾ ಸನ್ನಿವೇಶ ಮತ್ತು ವಿದ್ಯಮಾನಗಳು ಹೋಟೆಲಲ್ಲೇ ನಡೆಯುತ್ತವೆ.

ಹೇಮಂತ, ಅಶೋಕ ಮತ್ತು ಸುಷ್ಮಾಳು ಮತ್ತೊಂದು ದಿನ ಅದೇ 'ಮಧುದರ್ಶಿನಿ'ಗೆ ಹೋಗುತ್ತಾರೆ. ಅಲ್ಲಿ ಅವರು ಸಂಗೀತನಗರ ತಲುಪುವುದು ಹೇಗೆ, ಆದರ್ಶ ಕಾಲೋನಿ ಪತ್ತೆ ಹಚ್ಚುವ ಕಲ್ಪನೆ, ಇದಕ್ಕೆ ಮೊದಲು ಕಾಫಿ ಸೇವಿಸಿ ಆಯಾಸ ಪರಿಹರಿಸಿಕೊಳ್ಳುವುದು. ಹೋಟೆಲು ಚಿಕ್ಕದಾಗಿದ್ದರೂ ಚೊಕ್ಕಟವಾಗಿರುವುದು ಈ ಮೂವರಿಗೆ ಅರಿವಾಗುತ್ತದೆ. ಅಲ್ಲಿನ ಮಾಣಿಯ ಜೊತೆ ಮಾತುಕತೆ ಏರ್ಪಟ್ಟಿರುವುದು, ಪದೇ ಪದೇ ಈ ಹೋಟೆಲು ಸ್ಪೆಷಲ್ ಏನು ಎಂದು ಮಾಣಿಯನ್ನು ಪೀಡಿಸುವುದು, ಮಾಣಿ ಪ್ರತಿಯಾಗಿ ಹೋಟೆಲಿನ ಉಪಾಹಾರಗಳ ಪಟ್ಟಿ ಹೇಳುವುದು, ಇದಕ್ಕೆ ಸಾಕ್ಷಿಯೆಂಬಂತೆ 'ಮಧುದರ್ಶಿನಿ' ರವೆ ಇಡ್ಲಿ, ರುಚಿ ಸ್ವಾದದ ಪರಿಯು ಈ ಮೂವರ ಕಲ್ಪನೆಯಲ್ಲಿ ಸುಳ್ಳಾಗಿರಲಿಲ್ಲ. ಮಾಣಿಯಿಂದ ಆದರ್ಶ ಕಾಲೋನಿಯ ಮಾಹಿತಿ ಪಡೆಯುವುದು ಮತ್ತು ಅವನು ಹೋಟೆಲಲ್ಲಿ ನೀಡಿದ ಸರ್ವಿಸನ್ನು ಗಮನಿಸಿ ಐದು ರೂಪಾಯಿ ಟಿಪ್ಸ್ ಕೊಡುವುದು, ಇದನ್ನು ಗಮನಿಸಿ ಮಾಣಿಯ ಕಣ್ಣು-ಮುಖ ಅರಳುವುದು ಹೀಗೆ ಕಾದಂಬರಿಯ ಸನ್ನಿವೇಶ ನಿರ್ಮಾಣದಲ್ಲಿ 'ಮಧುದರ್ಶಿನಿ ಹೋಟೆಲು' ಪ್ರಮುಖ ಪಾತ್ರ ವಹಿಸುತ್ತದೆ.

ಇದೇ ಲೇಖಕರ 'ಪೊಲೀಸ್ ಡಾಗ್' ಕಾದಂಬರಿಯಲ್ಲಿ ಹೋಟೆಲು 'ಗ್ರೀನ್ ಗಾರ್ಡನ್'ನ ಚಿತ್ರಣವಿದೆ. "ಮೇಜರ್ ಹೇಮಂತ ಮತ್ತು ಆತನ ಸಹಾಯಕ ನಾಯಿ ಕೊಲೆಯೊಂದರ ಅಪರಾಧಿಗಳನ್ನು ಪತ್ತೆ ಮಾಡುವ ಸಂದರ್ಭದಲ್ಲಿ ಆ ಹೋಟೆಲಿಗೆ ಹೋಗುತ್ತಾರೆ. ಕೊಲೆಯ ಬಗೆಗೆ ಹಲವು ಸಮಸ್ಯಾತ್ಮಕ ಆಲೋಚನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡ ಹೇಮಂತನು ಊಟಕ್ಕೆಂದು 'ಗ್ರೀನ್ ಗಾರ್ಡನ್' ಹೋಟೆಲಿಗೆ ಪ್ರವೇಶಿಸುತ್ತಾನೆ. ಹೋಟಲೆಂದರೆ ಅಂತಿಂಥ ಹೋಟೆಲಲ್ಲ ಅದು. ನಗರದ ಮುಖ್ಯರಸ್ತೆಗೆ ಹೊಂದಿ ವಿಶಾಲವಾದ ಜಾಗದಲ್ಲಿ ಸುಂದರವಾಗಿ ಆ ಹೋಟೆಲನ್ನು ಕಟ್ಟಲಾಗಿತ್ತು. ಅದರ ಹೆಸರೇ ಸೂಚಿಸುವಂತೆ ಎತ್ತ ನೋಡಿದರೂ ಹಸಿರು ಬಣ್ಣವೇ ಕಣ್ಣಿಗೆ ರಾರಾಜಿಸುತ್ತಿತ್ತು. ಕಟ್ಟಡಕ್ಕೆ ಹೊಂದಿಕೊಂಡಂತೆ ವಿಶಾಲವಾದ ಪಾರ್ಕ್, ಬಣ್ಣ ಬಣ್ಣದ ಕಾರಂಜಿಗಳು, ಹಂದರಕ್ಕೆ ಹಬ್ಬಿದ ಮಲ್ಲಿಗೆ ಬಳ್ಳಿ, ಮಧ್ಯೆ ಕಲಾತ್ಮಕವಾಗಿ ರೌಂಡ್ ಹಾಕಿದ್ದ ಟೇಬಲ್ ಮತ್ತು

ಕುರ್ಚಿಗಳು, ಲವಲವಿಕೆಯಿಂದ ಓಡಾಡುವ ವೇಟರ್‌ಗಳು, ಅವರ ಮೇಲ್ವಿಚಾರಕರಾಗಿ ನೇಮಕಗೊಂಡ ಸುಂದರ ತರುಣಿಯರು, ಹೋಟೆಲ್ ಗ್ರೀನ್ ಗಾರ್ಡನ್ನಿನ ಆಕರ್ಷಣೆ ಅವರೇ ಎಂಬುದನ್ನು ಒಡೆದು ಹೇಳಬೇಕಾಗಿರಲಿಲ್ಲ. ಒಳಗಡೆ ಚಿಕ್ಕ ಚಿಕ್ಕ ಟೇಬಲ್‌ಗಳು, ಮಧ್ಯ ದೊಡ್ಡದೊಂದು ಹಾಲ್, ಅಲ್ಲೂ ಸಹ ಹಸಿರು ಬಣ್ಣ ಎಲ್ಲೆಡೆ ರಾರಾಜಿಸುತ್ತಿತ್ತು. ಟೇಬಲಿನಲ್ಲಿ ಕುಳಿತರೆ ಏನೂ ಕಾಣಲಾರದೆಂದು ಯೋಚಿಸಿ ಹೇಮಂತ ಹೊರಗಡೆಯಿದ್ದ ಜನರಲ್ ಹಾಲಿನಲ್ಲಿ ಆಸೀನವಾಗುತ್ತಾನೆ. ವಿಶೇಷವೆಂದರೆ ಅಲ್ಲಿಂದ ಆತ ಹೊರಗೆ ದೃಷ್ಟಿ ಇಡಬಹುದಿತ್ತು.

ಹಸಿರು ನ್ಯಾಪ್‌ಕಿನ್ ಹೇಮಂತನ ಪಕ್ಕದಲ್ಲಿ ತಂದಿಟ್ಟ ವೇಟರ್ ಊಟದ ಆರ್ಡರ್‌ನೊಂದಿಗೆ ಮರಳುತ್ತಾನೆ. ಎದುರಿಗಿದ್ದ ಮೆನುಕಾರ್ಡ್ ಎತ್ತಿಕೊಂಡ ಹೇಮಂತ ಹೋಟೆಲಿನ ಫೋನ್ ನಂಬರಿನತ್ತ ನೋಡುತ್ತಾನೆ. ಅಂದುಕೊಂಡ ನಂಬರ್ ಕಾರ್ಡಿನಲ್ಲಿ ಇದ್ದುದು ತಾನು ಅಂದುಕೊಂಡದ್ದಾಗಿರಲಿಲ್ಲ. ಇದರಿಂದ ಅವನಿಗೆ ಮಿಂಚು ಹೊಡೆದಂತಾಗುತ್ತದೆ. ಅವನ ಬಳಿಯಿದ್ದ ಶೇಖರ ಹೇಳಿದ ನಂಬರೇ ಬೇರೆಯದಾಗಿತ್ತು. ಕಲ್ಪನೆಗಳು ಗೊಂದಲಕ್ಕೀಡಾದವು. ರಹಸ್ಯದ ವಾಸನೆ ಹೊಳೆದಿತ್ತು. ಹೋಟೆಲು 'ಗ್ರೀನ್ ಗಾರ್ಡನ್' ಹೆಸರಿಗಿದ್ದ ಆ ಫೋನ್ ಬೇರೆಲ್ಲೋ ಗೌಪ್ಯವಾಗಿ ಅಳವಡಿಸಲಾಗಿತ್ತು. ಇಲ್ಲಿಗೆ ನಿಲ್ಲದೆ ಕಾದಂಬರಿಯ ಕಥನವು ರೂಪ ಬರೆದಿಟ್ಟಿರುವ ನಂಬರಿನ ಹುಡುಕಾಟ, ಅದು ಯಾವುದೋ ಪ್ರೈವೇಟ್ ಪಾರ್ಟಿಯ ಪಾಲಾಗಿದ್ದದ್ದು, ಅವರ ಬಗೆಗೆ ತಿಳಿದುಕೊಳ್ಳುವ ಉತ್ಕಟತೆ ಹೇಮಂತನಲ್ಲಿ ಆವರಿಸಿಕೊಳ್ಳುವ ಕಥನ ಬೆಳವಣಿಗೆಯು ಸಾಗಿರುವುದು ಕಾಣಬಹುದಾಗಿದೆ. ಹೇಮಂತನ ಕರ್ತವ್ಯನಿಷ್ಠೆಯು ಇಲ್ಲಿ ಹೋಟೆಲನ್ನು ಗಮನಿಸುತ್ತಲೂ ನಿರೀಕ್ಷಿಸಿ ಎಲ್ಲೆಲ್ಲಿ ಏನೇನು ಇದೆ? ಏನೇನು ನಡೆಯುತ್ತದೆ? ಬಾಗಿಲುಗಳು ಎಷ್ಟು? ಮುಂದಿನ ಬಾಗಿಲು ಎಲ್ಲಿದೆ? ಕಳ್ಳ ಮಾರ್ಗ ಇರುವ ಸಾಧ್ಯತೆ? ಮುಂತಾದ ಸಂಗತಿಗಳ ಕುರಿತಾಗಿ ಪೊಲೀಸ್ ವ್ಯವಸ್ಥೆಯಲ್ಲಿರುವ ಹೇಮಂತ ಯೋಚಿಸುತ್ತಾ ಊಟ ಮುಗಿಸುವ ಸನ್ನಿವೇಶವು ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಕಾದಂಬರಿಯಲ್ಲಿ ಪೊಲೀಸ್ ವ್ಯವಸ್ಥೆಯ ನಿರ್ಣಾಯಕವಾದ ಕಾನೂನಿನ ಅರಿವು ಹೇಮಂತನಲ್ಲಿ ವ್ಯಕ್ತವಾಗುತ್ತದೆ. ಹೋಟೆಲಿನಿಂದಾದ ಹೊಸ ಕಾನೂನುಬಾಹಿರವಾದ ಚಟುವಟಿಕೆಗಳ ಬಗೆಗೆ ಹೇಮಂತನ ತಲ್ಲಣಗಳು ಸೃಷ್ಟಿಯಾಗಲಾರಂಭಿಸುತ್ತವೆ"(ಸುದರ್ಶನ ದೇಸಾಯಿ; ೧೯೯೪, ಪು. ೯೫-೯೬).

'ಗ್ರೀನ್ ಗಾರ್ಡನ್' ಹೋಟೆಲು ಆವರಣದಲ್ಲಿ ಮುಖ್ಯಪಾತ್ರಗಳಾದ ಉಸ್ಮಾನ್, ಸಂದೀಪ, ರೂಪಾ, ಸೈಯದ್ ಮಿರ್ಜಾ, ಹರೀಶ ಮುಂತಾದವರೆಲ್ಲ ಕೂಡಿ ಹೊಸ ವರ್ಷಾಚರಣೆ ನಡೆಸುತ್ತಾರೆ. ಇದೇ ಸನ್ನಿವೇಶದಲ್ಲಿ ಹೇಮಂತ ಮತ್ತು ಡಾನ್(ನಾಯಿ) ಗ್ರೀನ್ ಗಾರ್ಡನ್ ಹೋಟೆಲನ್ನು ಪ್ರವೇಶಿಸುತ್ತಾರೆ. ಇಲ್ಲಿ ನಡೆಯುವ ಕೃತ್ಯಗಳ ಬಗೆಗೆ ಹೇಮಂತನ ತಪಾಸಣೆ ಇನ್ನಷ್ಟು ಚುರುಕುಗೊಳ್ಳುತ್ತದೆ. ಕಾದಂಬರಿಯಲ್ಲಿ ಗ್ರೀನ್ ಗಾರ್ಡನ್ ಹೋಟೆಲು ಮಾತ್ರವಲ್ಲದೆ

ಇತರ ಹೋಟೆಲುಗಳ ಪ್ರಸ್ತಾಪವು ಬರುತ್ತದೆ. ಹೀಗೆ ಕಾದಂಬರಿಯ ಸನ್ನಿವೇಶ ನಿರ್ಮಾಣದಲ್ಲಿ ಹೋಟೆಲು ಪ್ರಮುಖ ಪಾತ್ರ ವಹಿಸಿದೆ.

ಹೀಗೆ ನವೋದಯ ಕಾಲಘಟ್ಟದಿಂದ ತೊಡಗಿ ನವ್ಯೋತ್ತರದವರೆಗಿನ ಕನ್ನಡದ ಬಹುಪಾಲು ಕಥೆ-ಕಾದಂಬರಿಗಳಲ್ಲಿ ಸನ್ನಿವೇಶ ನಿರ್ಮಾಣಕ್ಕಾಗಿ ಹೋಟೆಲು ಬಳಕೆಗೊಂಡಿರುವುದನ್ನು ನಾವು ಕಾಣಬಹುದಾಗಿದೆ. ನವೋದಯ, ಪ್ರಗತಿಶೀಲ, ನವ್ಯ ಹಾಗೂ ನವ್ಯೋತ್ತರ ಕಥೆ-ಕಾದಂಬರಿಗಳು, ಜನಪ್ರಿಯ ಕಾದಂಬರಿಗಳು, ಪತ್ತೆದಾರಿ ಕಾದಂಬರಿಗಳು ಹೀಗೆ ಎಲ್ಲಾ ಬಗೆಯ ಕಥನಸಾಹಿತ್ಯದಲ್ಲೂ ಹೋಟೆಲಿನ ಸನ್ನಿವೇಶ ಚಿತ್ರಣಗೊಂಡಿದೆ. ಪ್ರಗತಿಶೀಲ ಕಾಲಘಟ್ಟದ ಅನಕೃ ಅವರ ಬಹುಪಾಲು ಕಾದಂಬರಿಗಳಲ್ಲಿ ವೇಶ್ಯಾವೃತ್ತಿಯ ತಾಣವಾಗಿ ಹೋಟೆಲು ಚಿತ್ರಿತವಾಗಿದೆ. ಜನಪ್ರಿಯ ಕಾದಂಬರಿಗಳಲ್ಲಿ ಕೇವಲ ಸನ್ನಿವೇಶ ನಿರ್ಮಾಣ ಮತ್ತು ಕಥನದ ಬೆಳವಣಿಗೆಗಾಗಿ ಮಾತ್ರ ಹೋಟೆಲನ್ನು ಬಳಸಿ ಕೊಳ್ಳಲಾಗಿದೆ ಎಂದು ಕಂಡುಬಂದರೂ ಕೆಲವು ಜನಪ್ರಿಯ ಕಾದಂಬರಿಗಳು ಅದರಾಚೆಗಿನ ವಿದ್ಯಮಾನಗಳ ಚಿತ್ರಣಕ್ಕಾಗಿಯೂ ಹೋಟೆಲನ್ನು ಬಳಸಿಕೊಂಡದ್ದಿದೆ. ಕೆ.ಟಿ ಗಟ್ಟಿ ಮತ್ತು ನಾ. ಡಿಸೋಜಾ ಅವರ ಕೆಲವು ಕಾದಂಬರಿಗಳು ಇವಕ್ಕೆ ಸೂಕ್ತ ಉದಾಹರಣೆಯಾಗಿವೆ. ಕೆ.ಟಿ. ಗಟ್ಟಿಯವರ ಅಮುಕ್ತ, ಪುನರಪಿ ಜನನ, ಯುಗಾಂತರ ಕಾದಂಬರಿಗಳಲ್ಲಿ, ನಾ. ಡಿಸೋಜಾ ಅವರ ಹರಿಯುವ ನದಿ, ವಿಷಾನಿಲ ಮುಂತಾದ ಕಾದಂಬರಿಗಳಲ್ಲಿ ವಿವಿಧ ಪರಿಕಲ್ಪನಾತ್ಮಕ ಅಭಿವ್ಯಕ್ತಿಗಾಗಿ ಹೋಟೆಲಿನ ಸನ್ನಿವೇಶಗಳನ್ನು ಚಿತ್ರಿಸಲಾಗಿದೆ.

ಬಹುಪಾಲು ಪತ್ತೆದಾರಿ ಕಾದಂಬರಿಗಳಲ್ಲಿ ಕೇವಲ ಸನ್ನಿವೇಶ ನಿರ್ಮಾಣಕ್ಕಾಗಿ ಮಾತ್ರ ಹೋಟೆಲು ಬಳಕೆಗೊಳ್ಳುತ್ತದೆ. ಕೊಲೆ, ಸುಲಿಗೆ, ದರೋಡೆ ನಡೆಯುವ ತಾಣವಾಗಿ ಪತ್ತೇದಾರರು ಊಟ-ಉಪಾಹಾರ ಸೇವಿಸಿ ಪ್ರಕರಣವನ್ನು ಭೇದಿಸುವ ಕುರಿತು ತಮ್ಮ ಸಹಾಯಕರೊಂದಿಗೆ ಸಮಾಲೋಚಿಸುವ ಕೇಂದ್ರವಾಗಿ ಅಲ್ಲಿ 'ಹೋಟೆಲುಗಳು' ಚಿತ್ರಿತವಾಗಿವೆ. ಕಥನಸಾಹಿತ್ಯದಲ್ಲಿ ಸನ್ನಿವೇಶ ನಿರ್ಮಾಣ ಮತ್ತು ಕಥನದ ಬೆಳವಣಿಗೆ ಎಂಬಿವು ಪರಸ್ಪರ ಪೂರಕ ಸಂಬಂಧವುಳ್ಳ ಸಂಗತಿಗಳಾಗಿವೆ. ಕಥೆ ಅಥವಾ ಕಾದಂಬರಿಯ ನಿರ್ದಿಷ್ಟ ಘಟನೆ, ಸನ್ನಿವೇಶಗಳು ಹೋಟೆಲಿನಲ್ಲಿ ಸಂಭವಿಸುವಂತೆ ಚಿತ್ರಿತವಾದರೆ ಅಲ್ಲಿ ಹೋಟೆಲಿನ ಸನ್ನಿವೇಶ ನಿರ್ಮಾಣವಿದೆ ಎನ್ನಬಹುದು. ಅದೇ ರೀತಿ ಆ ನಿರ್ದಿಷ್ಟ ಘಟನೆ, ಸನ್ನಿವೇಶಗಳ ಪರಿಣಾಮವಾಗಿ ಕಥೆ ಅಥವಾ ಕಾದಂಬರಿ ಮಹತ್ವದ ತಿರುವು ಪಡೆದುಕೊಂಡರೆ ಆ ಸನ್ನಿವೇಶವು ಕಥನದ ಬೆಳವಣಿಗೆಗೆ ಪೂರಕವಾಗುತ್ತದೆ ಎನ್ನಬಹುದು. ಒಟ್ಟಾರೆಯಾಗಿ ಹೇಳುವುದಾದರೆ ಆಧುನಿಕತೆಯ ಒಂದು ಘಟಕವಾದ, ಅದೇ ರೀತಿ ಆಧುನೀಕರಣ ಪ್ರಕ್ರಿಯೆಯ ಪ್ರತೀಕವಾದ ಹೋಟೆಲು ಕನ್ನಡ ಕಥನಸಾಹಿತ್ಯದ ಸನ್ನಿವೇಶ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿರುವುದನ್ನು ನಾವು ಗಮನಿಸಬಹುದಾಗಿದೆ.

### ೬.೨ ಘಟನೆ–ವಿದ್ಯಮಾನಗಳ ಸುದ್ದಿ ಪ್ರಸರಣ ಕೇಂದ್ರಗಳಾಗಿ ಹೋಟೆಲುಗಳು

ಮೇಲ್ನೋಟಕ್ಕೆ ಒಂದು ಉದ್ಯಮವೆಂದು ಪರಿಗಣಿಸಲಾಗುವ ಹೋಟೆಲು ಸಾರ್ವಜನಿಕ ವಲಯದಲ್ಲಿ ಇತರೆ ಔದ್ಯಮಿಕ ಘಟಕಗಳಿಗಿಂತ ಭಿನ್ನವೂ, ವಿಶಿಷ್ಟವೂ ಆದ ಪಾತ್ರವನ್ನು ವಹಿಸುತ್ತದೆ. ಉದ್ಯಮದಾಚೆಗಿನ ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳಿಂದಾಗಿಯೂ ಆಧುನಿಕ ಸಮಾಜದಲ್ಲಿ ಹೋಟೆಲುಗಳು ಗಮನ ಸೆಳೆಯುತ್ತವೆ. ಹೋಟೆಲುಗಳಲ್ಲಿ ಊಟ–ಉಪಾಹಾರಗಳ ವ್ಯವಹಾರದ ಜೊತೆಗೆ ಇತರ ಕೆಲವು ಸಾಮಾಜಿಕ ವಿದ್ಯಮಾನಗಳು ನಡೆಯುತ್ತಿರುತ್ತವೆ. ಗ್ರಾಮೀಣ ಪರಿಸರದ ಹೋಟೆಲುಗಲ್ಲಂತೂ ಇಂತಹ ಸಾಮಾಜಿಕ ವಿದ್ಯಮಾನಗಳು ವಿಶೇಷವಾಗಿ ನಡೆಯುತ್ತವೆ. ಚಾ, ತಿಂಡಿ ಸೇವನೆಯ ಸಂದರ್ಭದಲ್ಲಿ ಊರಿನಲ್ಲಿ ಅಥವಾ ಊರಿನ ಯಾರದೆ ಮನೆಯಲ್ಲಿ ಸಂಭವಿಸಿದ ಘಟನೆ–ವಿದ್ಯಮಾನಗಳ ಕುರಿತು ಚರ್ಚಿಸುವುದು, ಅವುಗಳಿಗೆ 'ಉಪ್ಪು ಕಾರ ಹಚ್ಚಿ' ಒಬ್ಬರಿಂದೊಬ್ಬರಿಗೆ ಪ್ರಸಾರ ಮಾಡುವುದು–ಇಂತಹ ಕಾಲಾಯಾಪನೆಯ ಚಟುವಟಿಕೆಗಳು ಗ್ರಾಮೀಣ ಪರಿಸರದ ಹೋಟೆಲುಗಳಲ್ಲಿ ತೀರಾ ಸಹಜ ಎಂಬ ರೀತಿಯಲ್ಲಿ ನಡೆಯುತ್ತಿರುತ್ತವೆ. ಇಂತಹ ಸುದ್ದಿ–ವರ್ತಮಾನಗಳಲ್ಲಿ ಕೆಲವು ನೈಜ ಘಟನೆಗಳಾಗಿದ್ದರೆ, ಮತ್ತೆ ಕೆಲವು ಕಲ್ಪಿತ ಸಂಗತಿಗಳಾಗಿ ರುತ್ತವೆ. ಕೆಲಮೊಮ್ಮೆ ನೈಜ ಘಟನೆಗಳಿಗೆ ತಮ್ಮದೇ ಆದ ವಿವರಗಳನ್ನು ಸೇರಿಸಿ ರಂಜನೀಯವಾಗಿ ಮಾತನಾಡುವ ಸಂದರ್ಭಗಳು ಉಂಟು. ಹಾಗಾಗಿ ಆಧುನಿಕ ಸಂದರ್ಭದಲ್ಲಿ ಇತರ ಔದ್ಯಮಿಕ ಘಟಕಗಳಿಗಿಂತ ಭಿನ್ನವಾದ ಆಯಾಮಗಳು ಹೋಟೆಲಿಗೆ ಇವೆ ಎನ್ನಬಹುದು. ಹೋಟಲಿಗೆ ಇರುವಂತೆ ಈ ಬಗೆಯ ಬಹುಆಯಾಮಗಳನ್ನು ಕನ್ನಡದ ಸಣ್ಣಕಥೆ–ಕಾದಂಬರಿಗಳು ಕಲಾತ್ಮಕವಾಗಿ ಕಟ್ಟಿಕೊಟ್ಟಿವೆ. ರಸವತ್ತಾದ ಸನ್ನಿವೇಶ ನಿರ್ಮಾಣದ ದೃಷ್ಟಿಯಿಂದಲೂ ಇಂತಹ ಚಿತ್ರಣಗಳು ಕನ್ನಡ ಕಥನಸಾಹಿತ್ಯದಲ್ಲಿ ಗಮನ ಸೆಳೆಯುತ್ತವೆ.

ಪಂಜೆ ಮಂಗೇಶರಾಯರ ಕಮಲಪುರದ 'ಹೋಟ್ಲಿನಲ್ಲಿ' ಕಥೆಯಲ್ಲಿ ಪೂರ್ಣಸ್ವಾಮಿ ಅಯ್ಯಂಗಾರರು ಹೋಟೆಲಿನ ಮಾಲೀಕರಾಗಿ ಗಮನ ಸೆಳೆಯುತ್ತಾರೆ. ಅವರು ಬಂದರಿನ ಸುತ್ತ ಮುತ್ತ ನಡೆಯುವ ಘಟನೆ ವಿದ್ಯಮಾನಗಳನ್ನು ಅತಿರಂಜಿತವಾಗಿ ಹೋಟೆಲಿಗೆ ಬರುವ ಗ್ರಾಹಕರಿಗೆ ವಿಸ್ಮಯ ಮೂಡಿಸುವಂತೆ ವಿವರಿಸುತ್ತಾರೆ. ಕಥೆಯಲ್ಲಿ ಬರುವ ಸನ್ನಿವೇಶವೊಂದರ ಮೂಲಕ ಇದನ್ನು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ ಸ್ವತಂತ್ರವಾದ ಜೀವನವನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ 'ಹೋಟ್ಲ'ನ್ನು ತಾನು ಮಾಡಿರುವನಲ್ಲದೆ, ಅದರಿಂದ ಪ್ರಯೋಜನಾಂಶವೇನೂ ಇಲ್ಲವೆಂದು ಅವರು ಯಾವ ಕಾರಣದಿಂದಲೋ ಗೊಣಗುಟ್ಟುತ್ತಿದ್ದರು. ಆದರೂ ಗ್ರಾಹಕರ ಸಂಖ್ಯೆ ದಿನೇ ದಿನೇ ಏರಿಹೋಗುತ್ತಲಿತ್ತು. ಒಂದು ಪೈಸೆ ಕಾಫಿ ಕುಡಿಯಲಿಕ್ಕೆ ಬಂದವನು ಸಹ ಅಯ್ಯಂಗಾರರ ಯಾತ್ರಾ ಸಮಾಚಾರವನ್ನು ಕೇಳುತ್ತ ಕೇಳುತ್ತ, ತಿಂದ ತಿಂಡಿಯನ್ನು ತಿಳಿಯದೆ ಉಡಿಯಲ್ಲಿದ್ದ ಹಣವನ್ನೆಲ್ಲಾ ಸಮರ್ಪಿಸಿ ಹೋಗುತ್ತಿದ್ದನು. ಒಬ್ಬಿಬ್ಬರು, ಅಯ್ಯಂಗಾರರು ತಮ್ಮ ಸಮಾಚಾರಗಳ

'ಮೂಟೆಯನ್ನು ಬಿಚ್ಚುವಂತೆ' ಮಾಡಿ ಅವರು ಅದರ ಆನಂದದಲ್ಲಿ ಮಗ್ನರಾಗಿದ್ದ ಸಮಯ ನೋಡಿ ಮೆಲ್ಲನೆ ಮಾಯವಾಗುತ್ತಿದ್ದರು. ತತ್‌ಕ್ಷಣದಲ್ಲಿಯೇ ಅಯ್ಯಂಗಾರರು ಬೆಚ್ಚಿದಂತಾಗಿ ಅವರ ಬೆನ್ನು ಹಿಡಿದು ಹಣವನ್ನು 'ವಸೂಲ್' ಮಾಡುತ್ತಿದ್ದರು.

ಮೊದ ಮೊದಲು ಪೂರ್ಣಸ್ವಾಮಿಯವರಿಗೆ ಕಮಲಪುರದ ಯುವಕರನ್ನು ಕುರಿತು ಒಳ್ಳೆಯ ಅಭಿಪ್ರಾಯವಿತ್ತು. ಇತ್ತಲಾಗೆ ಆ ಅಭಿಪ್ರಾಯವು ಬೇರೆಯಾಗಿ ಹೋಯಿತು. "ಅನೇಕ ಗ್ರಾಹಕರು ಲಡ್ಡು ತಿನ್ನುವ ಬದಲಾಗಿ ದುಡ್ಡು ತಿನ್ನಲು ಪ್ರಾರಂಭಿಸಿದರು. ಕಾರಣಾಂತರಗಳಿಂದ ದೂರ ದೇಶಗಳಿಗೆ ಹೋಗಿದ್ದ ಪ್ರಿಯ ಗ್ರಾಹಕರಿಗೆ ತನ್ನ ಕ್ಷೇಮವಾರ್ತೆಯನ್ನು ಕುರಿತು ಕಾಗದಗಳನ್ನು ಬರೆದು ನೋಡಿದರು. 'ಬಡವನ ಬಿನ್ನಹ' ಎಂದು ಹಲಗೆಯನ್ನು ಸಾಲಗಾರನ ಹೆಸರು ಬರೆದು 'ಹೋಟ್ಲೆ'ನ ಗೋಡೆಗೆ ತೂಗಾಡಿಸಿದರು. ಕೊನೆಗೆ ಲೆಕ್ಕವನ್ನು ಹೇಗೊ ಸರಿಮಾಡದೆ ಬಿಡಲಿಲ್ಲ. ಆರು ವರ್ಷಗಳಿಂದ ಸಾಗಿಸಿ ತಂದ ಸಾಲಗಾರರ ಹೆಸರನ್ನೆಲ್ಲಾ ಲೆಕ್ಕದ ಪುಸ್ತಕದಲ್ಲಿ ಕೆಂಪು ಶಾಯಿಯ ಗೆರೆಗಳಿಂದ ಅಡಗಿಸಿಬಿಟ್ಟರು. ರಾಮೇಶ್ವರ ಸಮುದ್ರ ದಾಟಿ, ಮುಣುಗಿದ ಹಡಗನ್ನು ಬೆನ್ನು ಕೊಟ್ಟು ತೇಲಿಸಿ ಕುಮಾರಿಯ ಭೂಶಿರವನ್ನು ಮುಟ್ಟಿದ್ದನು. ಕಾವೇರಿ ಸ್ನಾನದಲ್ಲಿ ಮೊಸಳೆ ಬಾಯಿಂದ ಬಿಡಿಸಿಕೊಂಡದ್ದನ್ನು ವಿವರಿಸುತ್ತಾರೆ. ಮಲೆಯಾಳ ಸೀಮೆಯಲ್ಲಿ ರೋಗದಿಂದ ಹಾಸಿಗೆ ಹಿಡಿದು ಮಲಗಿದ್ದಾಗಿ ಹೇಳುತ್ತಾರೆ. ತಮ್ಮ ಟಿಫಿನ್ ತರಿಸಿ ಕುಳಿತ ಕುಪ್ಪಣ್ಣ ಶಾಮರಾಯರು ಇವರ ಸಮಾಚಾರಕ್ಕೆ ಆಸೆಗೊಂಡು ಹತ್ತಿರಕ್ಕೆ ಬಂದರು. ಅಯ್ಯಂಗಾರರು ತಿನ್ನಿ! ತಿನ್ನಿ! ಎಂದು ಹೇಳಿದಾಗ ಮಾತು ತನ್ನನ್ನು ಉದ್ದೇಶಿಸಿ ಹೇಳಿದ್ದೆಂದು ತಿಳಿದು, ಕುಪ್ಪಣ್ಣನವರು ದೊನ್ನೆಯೊಳಗೆ ಬೆರಳು ಮುಳುಗಿಸಿ, ಎಡಗೈಯಿಂದ ಕಾಫಿ ಪಂಚಪಾತ್ರೆಯನ್ನು ಹಿಡಿದುಕೊಂಡರು. ಶ್ಯಾಮರಾಯರ ಕೈಗಳು ಹಾಗೆಯೇ ಮಾಡತೊಡಗಿದವು. ಅಯ್ಯಂಗಾರರು ಚೇಳು ಕಚ್ಚಿದ ಮೋರೆ ಮಾಡಿದರು"(ನಾಯಕ ಜಿ.ಎಚ್; ೨೦೧೩, ಪುಟ ೨–೩). ಪೂರ್ಣಸ್ವಾಮಿ ಅಯ್ಯಂಗಾರರು ಗ್ರಾಹಕರೊಂದಿಗೆ ವಿನೋದಪೂರ್ಣವಾಗಿ ಮಾತನಾಡುವ ಈ ಸಂಗತಿಗಳನ್ನು ಗಮನಿಸಿದರೆ ಅವುಗಳಲ್ಲಿ ಬಹುಪಾಲು ವಿವರಗಳು ಅವರ ಸ್ವಕಲ್ಪಿತ ಸಂಗತಿಗಳೆಂಬುದು ಮನವರಿಕೆಯಾಗುತ್ತದೆ. ರಂಜನೀಯವಾದ ಅವರ ಮಾತುಗಳನ್ನೇ ಕೇಳಿ ಕೆಲವು ಗ್ರಾಹಕರು ಖುಷಿ ಪಡುತ್ತಿದ್ದರು. ಆದರೆ ಶಾಮರಾಯ ಕುಪ್ಪಣ್ಣನಂತಹ ಕೆಲವು ಗ್ರಾಹಕರು ಅಯ್ಯಂಗಾರರು ಸುಮ್ಮನೆ ಕಥೆ ಕಟ್ಟಿ ಹೇಳುತ್ತಾರೆಂದು ಅವುಗಳಿಗೆ ತಮ್ಮದೇ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದರು. ಇನ್ನೂ ಕೆಲವು ಗ್ರಾಹಕರು ಅಯ್ಯಂಗಾರರು ತಮ್ಮ ವಾಕ್ವೈಭವದಲ್ಲಿ ತಲ್ಲೀನರಾಗಿರಬೇಕಾದರೆ ಚಾ–ತಿಂಡಿಯ ದುಡ್ಡನ್ನು ಕೊಡದೆ ಹೋರಟು ಹೋಗುತ್ತಿದ್ದಿದ್ದು ಉಂಟು.

ಅಯ್ಯಂಗಾರರು ಗ್ರಾಹಕರನ್ನು ಮೋಡಿ ಮಾಡುವಂತೆ ನಿರೂಪಿಸುತ್ತಿದ್ದ ವಿವಿಧ ಘಟನೆ–ವಿದ್ಯಮಾನಗಳಿಗೆ ಸಂಬಂಧಿಸಿದ ಸುದ್ದಿ–ವರ್ತಮಾನಗಳು ಕರಿಯೂರ ಶ್ಯಾಮರಾಯರಲ್ಲಿ ಮತ್ತು

ಮಲೆನಾಡಿನ ಕುಪ್ಪಣ್ಣನವರಲ್ಲಿ ವಿಶ್ವಾಸವನ್ನೇ ಮೂಡಿಸುತ್ತಿರಲಿಲ್ಲ. ಅಯ್ಯಂಗಾರರು ಹೆಚ್ಚು ವ್ಯಾಪಾರ ಮಾಡುವದಕ್ಕೋಸ್ಕರ ಅಸತ್ಯದಿಂದ ಕೂಡಿದ ಘಟನೆಗಳನ್ನು ಉಪಾಯದಿಂದ ಬಿಂಬಿಸಿದ್ದಕ್ಕಾಗಿ ಕೆಲವು ಗ್ರಾಹಕರು ಜಗಳಕ್ಕೆ ಇಳಿಯುತ್ತಿದ್ದರು. ಇವರಿಂದ ಬೇಸತ್ತ ಅಯ್ಯಂಗಾರರು ತಾನು ಹೇಳಿದ ಘಟನೆ-ಸುದ್ದಿ ಸತ್ಯದಿಂದ ಕೂಡಿದ ವಿದ್ಯಮಾನವೆಂದು ಮನಗಾಣಿಸುವ ಪ್ರಯತ್ನವನ್ನು ನಡೆಸುತ್ತಾರೆ.

ಅಯ್ಯಂಗಾರರು, ಶಾಮರಾಯರು ಮತ್ತು ಕುಪ್ಪಣ್ಣನವರು ಪರಸ್ಪರ ಮಾತನಾಡುವ ಸನ್ನಿವೇಶವನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. “ರಾಯರೆ ಅಯ್ಯಂಗಾರರು ರಾಮೇಶ್ವರ ಸಮುದ್ರವನ್ನು ಈಸಿ ಹೋದ ಸಂಗತಿಯನ್ನು ಬಿಟ್ರೆ? ಮೂಗುತೂರಿಸಿ ಬರಲು, ಅಯ್ಯಂಗಾರರು ಅದಕ್ಕೆ ಪ್ರತೀಕಾರವಾಗಿ ಎಂದಿನಂತೆ ಹುಬ್ಬು ಗಂಟಿಕ್ಕದೆ ಮನಸ್ಸಿನಲ್ಲಿ ಆನಂದವನ್ನು ತುಂಬಿಕೊಂಡು ಉಕ್ಕುತ್ತಿದ್ದರು. ನಡುವೆ ಕುಪ್ಪಣ್ಣ ಮಾತಿಗೆ ಧ್ವನಿಗೂಡಿಸಿ ಅಂದು ನಿಮ್ಮೊಡನೆ ಯಾರಿದ್ದರು ಅಯ್ಯಂಗಾರರೆ? ಈ ಆಪತ್ತಿನಿಂದ ನಿಮ್ಮನ್ನು ಪಾರು ಮಾಡಿಸಿದವರು ಆ ಗುಂಡಾಚಾರ್ಯರೆ? ಎಂದು ಕೇಳಿದರು. ಅಲ್ಲದೆ ಕುಪ್ಪಣ್ಣ ಅದನ್ನು ಪುನಃ ಬೆಳಸಿ ಆ ಗುಂಡಾಚಾರ್ಯರೆ ಇರಬೇಕು, ಇಲ್ಲವಾದರೆ ನಮ್ಮ ಅಯ್ಯಂಗಾರರು ಅಂಡಮಾನ ದ್ವೀಪಕ್ಕೆ ಹೋಗುತ್ತಿದ್ದರೆಂದು ವಿಡಂಬಿಸ ತೊಡಗಿದರು. ಅಯ್ಯಂಗಾರರು ಇದನ್ನು ಗಂಭೀರವಾಗಿ ತೆಗೆದುಕೊಳ್ಳದೆ ಮೌನವ್ರತದಿಂದ ಇದ್ದರು. ಪುನಃ ಇದನ್ನು ಗಮನಿಸಿದ ಶಾಮರಾಯರು ನಿಮ್ಮ ಗುಂಡಾಚಾರ್ಯರು ಈಗ ಎಲ್ಲಿದ್ದಾರೆ? ಅವರ ಮೌನವನ್ನು ಹೊಡೆಯಲು ಪ್ರಯತ್ನಿಸುವರು”(ನಾಯಕ ಜಿ.ಎಚ್; ೨೦೧೩; ಪುಟ ೩-೪). ವಿಸ್ಮಯಕಾರಿ ಪ್ರಸಂಗಗಳನ್ನು ಕಲ್ಪಿಸಿ ಅವುಗಳನ್ನು ರಂಜನೀಯವಾಗಿ ಗ್ರಾಹಕರೆದರು ನಿರೂಪಿಸುವ ಅಯ್ಯಂಗಾರರ ಕಲ್ಪನಾ ಚಾತುರ್ಯ ಅದೇ ರೀತಿ ಅವುಗಳಿಗೆ ವ್ಯಂಗಾತ್ಮಕವಾಗಿ ಪ್ರತಿಕ್ರಿಯಿಸುವ ಶ್ಯಾಮರಾಯ ಮತ್ತು ಕುಪ್ಪಣ್ಣನಂತವರ ವಿನೋದ ‘ಪ್ರಜ್ಞೆ’ ಇವರೆಲ್ಲರ ಪ್ರಸ್ತುತ, ಸನ್ನಿವೇಶದಿಂದ ನಮಗೆ ವೇದ್ಯವಾಗುತ್ತದೆ. ಒಟ್ಟಾರೆಯಾಗಿ ಪ್ರಸ್ತುತ ಕಥೆಯಲ್ಲಿ ಹೋಟೆಲಿನ ಮಾಲಕರ ಜೊತೆಗೆ ಗ್ರಾಹಕರು ಕೂಡ ವಿವಿಧ ಸುದ್ಧಿ-ವರ್ತಮಾನಗಳ ಬಗೆಗೆ ಹೋಟೆಲಿನಲ್ಲಿ ಕುಳಿತು ಮಾತನಾಡುವ ಸನ್ನಿವೇಶಗಳಿವೆ ಹೀಗೆ ಹಲವು ಘಟನೆ-ವಿದ್ಯಮಾನಗಳು ಹೋಟ್ಲೆನ ಸಂಬಂಧದೊಂದಿಗೆ ಜೀವಂತಿಕೆಯನ್ನು ಪಡೆದಿರುವುದನ್ನು ಕಮಲಪುರದ ಹೋಟ್ಲೆನಲ್ಲಿ ಕಥೆಯು ಕಲಾತ್ಮಕವಾಗಿ ಚಿತ್ರಿಸುತ್ತವೆ.

ಅಮರೇಶ ನುಗಡೋಣಿಯವರ ‘ಏ ದಿಲ್ ಮಾಂಗೆ ಮೋರ್’ ಕಥೆಯಲ್ಲಿಯೂ ಘಟನೆ-ವಿದ್ಯಮಾನಗಳ ಸುದ್ದಿ ಪ್ರಸರಣ ಕೇಂದ್ರವಾಗಿ ಹೋಟೆಲು ಪ್ರಮುಖ ಪಾತ್ರ ವಹಿಸುತ್ತದೆ. ಹುಸೇನವ್ವಳ ಚಾದಂಗಡಿಗೆ ಪ್ರತಿದಿನ ಬರುವ ಗ್ರಾಹಕರು ದಿನಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಸುದ್ದಿ ವರ್ತಮಾನಗಳನ್ನು ಓದಿ ಅದೇ ರೀತಿ ಟಿ.ವಿ. ಮಾಧ್ಯಮಗಳಲ್ಲಿ ಪ್ರಸಾರವಾಗುವ

ವಾರ್ತೆಗಳನ್ನು ನೋಡಿ ಅವುಗಳನ್ನು ಒಬ್ಬರಿಂದೊಬ್ಬರು ಹಂಚಿಕೊಂಡು ಚರ್ಚೆ ಮಾಡುತ್ತಾರೆ. ಭಾರತ–ಪಾಕಿಸ್ತಾನ ಯುದ್ಧ, ಭಾರತ ಮತ್ತು ಪಾಕಿಸ್ತಾನ ನಡುವಣ ಕ್ರಿಕೆಟ್ ಪಂದ್ಯಾವಳಿ, ಅದೇ ರೀತಿ ಇತರ ರಾಜಕೀಯ ಸುದ್ದಿಗಳು ಅಲ್ಲಿನ ಗ್ರಾಹಕರ ಚರ್ಚೆಯ ವಿಷಯಗಳಾಗಿರುತ್ತಿದ್ದವು. ಇವಲ್ಲದೆ ಊರಲ್ಲಿ ಸಂಭವಿಸುತ್ತಿದ್ದ ಇನ್ನಿತರ ಘಟನಾವಳಿಗಳ ಬಗೆಗೂ ಅಲ್ಲಿ ಗ್ರಾಹಕರು ಚರ್ಚಿಸುತ್ತಿದ್ದರು.

ನಾಗಪ್ಪ–ಅಂಬಕ್ಕನ ಮಗಳಾದ ಸುಸ್ಮಿತಳು ಅಡ್ಡದಾರಿ ಹಿಡಿದ ಸುದ್ದಿ, ಕಾಶಿಂಬಿ ಚಂದಪ್ಪನ ಮಗ ಖಾಜಾವಲಿಯು ಶಾಂತಿಯೊಂದಿಗೆ ಅನೈತಿಕ ಸಂಬಂಧವನ್ನು ಬೆಳಸಿದ ಸುದ್ದಿ, ಕ್ರಿಕೆಟ್ ಪಂದ್ಯಾವಳಿಯನ್ನು ನೋಡುವ ಸಂದರ್ಭದಲ್ಲಿನ ಹಿಂದೂ–ಮುಸ್ಲಿಂ ಯುವಕರ ಕೋಮುಗಲಬೆಯ ಸುದ್ದಿ, ಪಾಕಿಸ್ತಾನ ಮತ್ತು ಭಾರತದ ಕ್ರಿಕೆಟ್ ಆಟಗಾರ ಕುರಿತಂತೆ ಉದ್ಭವಿಸಿರುವ ಗಲಾಟೆಗಳ ಸುದ್ದಿ, ವಿವಿಧ ರಾಜಕೀಯ ಪಕ್ಷಗಳ ಮುಖಂಡರಾದ ರಾಮಲಿಂಗಪ್ಪ, ನಾಗಯ್ಯ, ನಾಗಲಕ್ಷ್ಮಿ ಇವರುಗಳ ನಡುವೆ ನಡೆಯುವ ರಾಜಕೀಯ ಪ್ರೇರಿತ ಗಲಾಟೆಯ ಸುದ್ದಿ, ಮದರ್ ಸಾಬಿ, ಖಾಜಪ್ಪ, ಪೀರವ್ವ, ಚಂದಪ್ಪ, ನರಯ್ಯ, ಮಾನಿಸಯ್ಯ ಇವೆಲ್ಲ ಹುಸೇನವ್ವಳ ಚಾದಂಗಡಿಯಲ್ಲಿ ಚರ್ಚೆಗೆ ಒಳಗಾಗುತ್ತಿದ್ದವು. ಇವುಗಳ ಜೊತೆಗೆ ಭಾರತ–ಪಾಕಿಸ್ತಾನ ನಡುವಣ ಯುದ್ಧದ ಕುರಿತಂತೆ ಗಿರೀಶ ಮತ್ತು ಜಾಫರನ ನಡುವೆ ವಾದ ವಿವಾದಗಳು ಹುಸೇನವ್ವಳ ಚಾದಂಗಡಿಯಲ್ಲಿ ನಡೆಯುತ್ತಿದ್ದವು.

ಗ್ರಾಹಕರು ಮಾತ್ರವಲ್ಲದೆ ಚಾದಂಗಡಿಯ ಮಾಲೀಕಳಾದ ಹುಸೇನವ್ವಳು ಊರಿನ ಕೆಲವು ವಿದ್ಯಮಾನಗಳಿಗೆ ಸಂಬಂಧಿಸಿದಂತೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುವ ಸನ್ನಿವೇಶವು ಕಥೆಯಲ್ಲಿ ಗಮನ ಸೆಳೆಯುತ್ತದೆ. "ರಾಜಕೀಯಕ್ಕೆ ಕೊಳ್ಳಿಯಿಡ! ಊರು ಕೇರಿ ಮಂದಿ ಕಂಡಲ್ಲಿ ಕೂತಲ್ಲಿ ಒಂದೀಟು ಚಂದ ಮಾತಡದೇ ಕಾಣೆ! ಲಿಂಗಪ್ಪನದೊಂದು, ಭೀಮಪ್ಪನದೊಂದು, ಫಕೀರಪ್ಪನದೊಂದು ಅಂತ ತಲಿಗೊಂದು ಪಾರ್ಟಿ ಮಾಡಿಕೊಂಡು ಬರೀ ಕಚ್ಚಾಡುತಾವ! ಊರು ಕೇರಿ ಮಂದಿ ಕೂಡಿ ಪಸಂದಾಗಿ ಮಾತನಾಡುವ ಕಾಲವೇ ಸತ್ತು ಹೋಯ್ತು"(ಅಮರೇಶ ನುಗಡೋಣಿ; ೨೦೦೨; ಪುಟ ೪೪). ಹೀಗೆ ಪ್ರಸ್ತುತ ಕಥೆಯಲ್ಲಿ ಹೋಟೆಲು ಗ್ರಾಮೀಣ ಜನರ ನಡುವಣ ಸುದ್ದಿ ಪ್ರಸರಣ ಕೇಂದ್ರವಾಗಿ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ವಿದ್ಯಮಾನಗಳ ಚರ್ಚಾ ವೇದಿಕೆಯಾಗಿದೆ.

ಇದೇ ಲೇಖಕರ 'ಕಣ್ಣು ಮುಕ್ಕಾದ ಬೀಜಗಳು' ಎಂಬ ಕಥೆಯಲ್ಲಿ ರೈತರ ಸಂಘಟನಾತ್ಮಕ ಹೋರಾಟ ಕುರಿತಾದ ಚರ್ಚೆಗೆ ಶೆಟ್ಟಿಯ ಹೋಟಲು ಕೇಂದ್ರವಾಗಿ ಬಳಕೆಯಾದದ್ದನ್ನು ಗಮನಿಸಬಹುದಾಗಿದೆ. ಹೋಟೆಲು ಮಾಲೀಕನಾದ ಶೆಟ್ಟಿಯು ಹಲವು ಸಂದರ್ಭಗಳಲ್ಲಿ ರೈತ ಸಂಘದವರ ಚಳುವಳಿಗಳಿಂದ ಉಂಟಾದ ದರ್ಪದ ಘಟನೆಗಳನ್ನು ಎದುರಿಸಬೇಕಾಗುತ್ತದೆ.

ಕಥೆಯ ಸನ್ನಿವೇಶವೊಂದರ ಮೂಲಕ ಈ ಅಂಶವನ್ನು ಗುರುತಿಸಬಹುದಾಗಿದೆ. "ಶೆಟ್ಟಿ ನಾಸ್ಟಾ ಕಾಲಿ ನಾಷ್ಟ ಕಾಲಿ ಎಂದು ಒಳಗಿನಿಂದಲೇ ಕೂಗಿ ಕೂಗಿ ಹೇಳಿದ, ಅದೇ ಹೊತ್ತಿಗೆ ಧಿಕ್ಕಾರ! ಧಿಕ್ಕಾರ! ದೌರ್ಜನಕ್ಕೆ ಧಿಕ್ಕಾರ! ಎಂಬ ಕೂಗು ಕೇಳಿಸಿತು. ಗಾಬರಿಯಿಂದ ನೋಡುವುದರಲ್ಲಿ ಹದಿನೈದು, ಇಪ್ಪತ್ತು ಹುಡುಗರು ಸೈಕಲ್ ಲೂನಾಗಳ ಮೇಲೆ ಡಬಲ್, ತ್ರಿಬಲ್ ಸವಾರಿ ಮಾಡಿಕೊಂಡು ಬಂದರು. ಕೂಗುತ್ತ ಹೋಟಲಿಗೆ ನುಗ್ಗಿದರು. "ಹೋಟ್ಲು ಬಂದ್ ಮಾಡ್ರಿ" ಎಂದು ದಬಾಯಿಸಿದರು. ಶೆಟ್ಟಿ ದಡಕ್ಕನೆ ಹೋಟೆಲ್ಲಿನ ಬಾಗಿಲು ಮುಚ್ಚಿದ ಅಷ್ಟರ ಒಳಗೆ ಕೆಲವರು ಹೊರಹೋಗಿದ್ದರು. ಹೊರಗಿನವರು ಒಳಬಂದಿದ್ದರು. ಹೇ ಶೆಟ್ಟಿ ನಾಸ್ಟಾ ಏನದ ಜಲ್ದಿ ಕೊಡು! ಎಂದು ಗದರಿಸಿದರು. ಎಲ್ಲಾ ಕಾಲಿಯಾಗ್ಯಾದ್ರಪ್ಪ" ಎನ್ನುತ್ತ ಭಯದಿಂದ ದೊಡ್ಡ ದೊಡ್ಡ ಬೋಗಾಣಿಗಳನ್ನು ತೋರಿಸಿದನು, ಹುಡುಗರ ಸಿಟ್ಟು ಜಾಸ್ತಿಯಾಯ್ತು. ಹೋಟೆಲಲ್ಲಿದ್ದ ಕಂಡ ಕಂಡ ವಸ್ತುಗಳಿಗೆ ಕೈ ಹಾಕಿದರು"(ಅಮರೇಶ ನುಗಡೋಣಿ, ೨೦೦೩; ಪುಟ ೬೮). ಹೀಗೆ ಶೆಟ್ಟಿ ಹೋಟೆಲು ರೈತ ಸಂಘದವರ ಆಕ್ರೋಶಕ್ಕೆ ತುತ್ತಾಗುವುದನ್ನು ಕಥೆಯು ಚಿತ್ರಿಸುತ್ತದೆ.

ಯಶವಂತ ಚಿತ್ತಾಲರ ಮುಖಾಮುಖಿ ಕಥೆಯಲ್ಲಿ ಬರುವ ದಾಸಪ್ಪನ ಚಾದಂಗಡಿಯು ಇಂದಿರಕ್ಕ ಮತ್ತು ಮೀಸೆಯವನ ಗುಪ್ತ ಅನೈತಿಕ ಸಂಬಂಧದ ಕುರಿತಾದ ಚರ್ಚಾವೇದಿಕೆಯಾಗಿ ಗಮನ ಸೆಳೆಯುತ್ತದೆ. ವಿಧವೆ ಇಂದಿರಕ್ಕನ ಜೊತೆಗೆ ಮೀಸೆಯವನು ಅನೈತಿಕ ಸಂಬಂಧವಿರಿಸಿ ಕೊಂಡಿದ್ದ ಸುದ್ದಿಯನ್ನು ಗ್ರಾಹಕರು ಸಂಶಯಾತ್ಮಕವಾಗಿ ಇಲ್ಲಿ ಮಾತನಾಡಿಕೊಳ್ಳುತ್ತಾರೆ. ಮೀಸೆಯವನು ದಾಸಪ್ಪನ ಚಾದಂಗಡಿಗೆ ಕದ್ದು ಮುಚ್ಚಿ ಬರುವ ಸಂಗತಿಯು ಸಹ ಗ್ರಾಹಕರಲ್ಲಿ ಮಾಲೀಕರಲ್ಲಿ ಗುಪ್ತಚರ್ಚೆಯ ವಿಷಯವಾಗಿರುತ್ತದೆ. ಗ್ರಾಹಕರ ಗುಸು ಗುಸು ಮಾತಿನಿಂದಾಗಿ ಇಂದಿರಕ್ಕನೊಂದಿಗೆ ಅನೈತಿಕ ಸಂಬಂಧವಿರಿಸಿಕೊಂಡಿರುವವನು ಮೀಸೆಯವನೇ ಎಂಬುದು ಪುರುಷೋತ್ತಮ ಮತ್ತು ನಿರೂಪಕರಿಗೆ ಮನವರಿಕೆಯಾಗುತ್ತದೆ. ಹೋದ ಮೂರು ದಿನಗಳಿಂದಲೂ ಸಂಜೆಯ ಹೊತ್ತಿಗೆ ಚಾ ಕುಡಿಯಲು ನೆಪಮಾಡಿ ಚಾದಂಗಡಿಗೆ ಬರುವ ಸುದ್ದಿ, ಸಂಜೆಯ ಮಬ್ಬು ಕತ್ತಲಿನಲ್ಲಿ ಮೂಲೆಯಲ್ಲಿ ಕಟ್ಟೆಯ ಮೇಲೆ ಕೂತು ಒಬ್ಬನೆ ಚಾ ಕುಡಿಯುವ ಸಮಾಚಾರ, ಅಲ್ಲಿಯೇ ಬೀಡಿ ಸೇದುವ ಸನ್ನಿವೇಶ, ಯಾರೂ ಸಂಗಡ ಮಾತನಾಡದಿರುವ ಸಂಗತಿ, ಕತ್ತಲೆ ಆವರಿಸತೊಡಗುತ್ತಿದ್ದಂತೆ ಹೊರಟುಹೋಗುವ ಸಂದರ್ಭ, ಅವನು ಉಳಿದುಕೊಂಡಿರುವುದು ಗೋಕರ್ಣದ ಮನೆಯೊಂದರಲ್ಲಿ ಎಂಬ ಮಾತು, ಮೀಸೆಯವನು ಚಾದಂಗಡಿಗೆ ಬರುವ ನೆಪ ಮಾಡಿ ಪಕ್ಕದ ಬೀದಿಯಲ್ಲಿರುವ ಇಂದಿರಕ್ಕನೊಂದಿಗೆ ಲೈಂಗಿಕ ತೃಷೆ ತೀರಿಸಿಕೊಳ್ಳುವ ಸುದ್ದಿ ಹೀಗೆ ಇಂದಿರಕ್ಕ ಮತ್ತು ಮೀಸೆಯವನ ನಡುವಿನ ಅನೈತಿಕ ಸಂಬಂಧಗಳ ಕುರಿತಾದ ಚರ್ಚೆಗೆ ಕಥೆಯಲ್ಲಿನ ದಾಸಪ್ಪನ ಚಾದಂಗಡಿ ಪ್ರಮುಖ ತಾಣವಾಗಿರುತ್ತದೆ. ಚಾದಂಗಡಿಯಲ್ಲಿ ಮೀಸೆಯವನ ಇರುವಿಕೆಯ ಕಾರಣದಿಂದಾಗಿ ಮಾಲೀಕರು, ಗ್ರಾಹಕರು ಮತ್ತು ನಿರೂಪಕರು ಆತನ ವ್ಯಕ್ತಿತ್ವದ

ಬಗೆಗೆ ತಮ್ಮದೇ ಆದ ರೀತಿಯಲ್ಲಿ ಕಲ್ಪಿಸಿಕೊಳ್ಳುವ ಸನ್ನಿವೇಶವನ್ನು ಕಥೆಯು ಕಲಾತ್ಮಕವಾಗಿ ಕಟ್ಟಿಕೊಡುತ್ತದೆ.

ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯು ಹೋಟೆಲು ಉದ್ಯಮದಾಚೆಗಿನ ಸಾಂಸ್ಕೃತಿಕ ವಿದ್ಯಮಾನಗಳನ್ನು ಬಿಚ್ಚಿಡುತ್ತದೆ. ಪಂಡ್ರಿ, ಕರಿಯಪ್ಪ, ಗಾರ್ಡ್‌ನಾಗರಾಜ ಇವರು ಊರಿನ ಕಥೆ ಮತ್ತು ಪ್ರಮುಖ ಘಟನೆಗಳನ್ನು ಹೋಟೆಲಲ್ಲಿ ಕುಳಿತು ಪ್ರಸಾರ ಮಾಡುತ್ತಾರೆ. ಕಾದಂಬರಿಯಲ್ಲಿನ ಇಂತಹ ಸನ್ನಿವೇಶವೊಂದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. "ಭುಜಂಗಯ್ಯ ಹೋಟೆಲಲ್ಲಿ ಮಲಗಿದ ರಾತ್ರಿ ಇವರು ಉಳಿಯುತ್ತಿದ್ದರು. ನಡುರಾತ್ರಿಯಾದರೂ ಯಾರು ಕಣ್ಣು ಮುಚ್ಚದಂತೆ ಏನಾದರೂ ರಸವತ್ತಾದ ಕಥೆಯನ್ನು, ವಿಷಯಗಳನ್ನು ಪಂಡ್ರಿ ಹೇಳುತ್ತಿದ್ದ. ಉರುಪನಿಗಂತೂ ಪಂಡ್ರಿಯ ಕತೆಗಳೆಂದರೆ ಪ್ರಾಣ. ಬಾಯಿ ತೆರೆದು ಇಡೀ ರಾತ್ರಿ ಬೇಕಾದರೂ ಕುಕ್ಕರಗಾಲಲ್ಲೆ ಕೂತು ಕೇಳುತ್ತಿದ್ದ. ಪಂಡ್ರಿಗೆ ಊರಿನಲ್ಲಿ ನಡೆಯುವ ಪ್ರತಿಯೊಂದು ವಿದ್ಯಮಾನಗಳನ್ನು ಹೇಗೋ ವಿವರವಾಗಿ ತಕ್ಷಣವೆ ತಿಳಿದುಬಿಡುತ್ತಿದ್ದವು. ಬಹಳ ದೊಡ್ಡ ಮನುಷ್ಯರೆನಿಸಿಕೊಂಡವರು ಮಾಡುತ್ತಿದ್ದ ಕಳ್ಳ ಹಾದರಗಳನ್ನು ಯಾರಾದರೂ ಕಣ್ಣಿಗೆ ಸಿಕ್ಕಿಬಿದ್ದಾಗ ಅವರ ಪರದಾಟಗಳು, ಹಾಗೆಯೇ ಊರಿನ ಯಾವ ಹೆಣ್ಣು ಯಾರ ಜೊತೆ ಎಲ್ಲಿ ಯಾವಾಗ ಮಲಗಿತ್ತು, ಮುಂದೆ ಏನಾಯಿತು ಅನ್ನುವುದನ್ನೆಲ್ಲ ಅಭಿನಯ ಪೂರ್ವಕವಾಗಿ ವರ್ಣಿಸುತ್ತಿದ್ದ. ಪಂಡ್ರಿ ಭುಜಂಗಯ್ಯ ಹೇಳುವಂತೆ ಹುಟ್ಟು ಕಲೆಗಾರ"(ಶ್ರೀಕೃಷ್ಣ ಆಲನಹಳ್ಳಿ; ೧೯೯೮; ಪುಟ ೫೫-೫೬). ಪಂಡ್ರಿಯು ಹಳ್ಳಿಯಲ್ಲಿನ ಘಟನೆ ವಿದ್ಯಮಾನಗಳಿಗೆ ಕಲಾತ್ಮಕ ರೂಪ ಕೊಟ್ಟು ಕಥೆ ಕಟ್ಟಿ ಹೇಳುವ ಪರಿಯನ್ನು ಪ್ರಸ್ತುತ ಸನ್ನಿವೇಶವು ಚಿತ್ರಿಸುತ್ತದೆ.

ಹೋಟೆಲಿನ ವಿಶ್ರಾಂತಿ ರೂಮಿನಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತಿದ್ದ ಭುಜಂಗಯ್ಯನ ಮನಸ್ಸಿನಲ್ಲಿ ಈ ಹಿಂದೆ ಪಂಡ್ರಿ ಹೇಳಿದ್ದ ಮಾದಳ್ಳಿಯ ಒಂದೊಂದೆ ಪ್ರೇಮಾಖ್ಯಾನಗಳು ಬಿಚ್ಚಿಕೊಳ್ಳತೊಡಗುತ್ತವೆ. "ಹೊರಗೇನೂ ತೋರಿಸಿಕೊಳ್ಳದಿದ್ದರೂ ಭುಜಂಗಯ್ಯ ಒಳಗೊಳಗೆ ಎಂಥ ಪುಳಕಕ್ಕೆ ಒಳಗಾಗಿದ್ದನೆಂದರೆ ಚಳಿಯಲ್ಲೂ ಅವನ ರೊಮಗಳೆಲ್ಲ ನೆಟ್ಟಗೆ ನಿಂತಿದ್ದವು. ಪಂಡ್ರಿ ಹೇಳಿದ ಘಟನೆಗಳಲ್ಲಿ ಗುಂಡಪ್ಪನವರು ಕಾಳಿಯ ಮಗಳು ಚೆಲುವಿಯ ಜೊತೆ ನಡೆಸಿರುವ ವ್ಯವಹಾರ ತುಂಬಾ ಮೋಜಿನದಾಗಿತ್ತು. ಇಡೀ ಮಾದಳ್ಳಿಗೆ ಗೊತ್ತಿತ್ತು ಗುಂಡಪ್ಪ ಕಾಳಿಯನ್ನು ಇಟ್ಟುಕೊಂಡಿದ್ದುದು. ಬೆಳೆದ ಜೋಳದ ಹೊಲಗಳಲ್ಲೊ ಇಲ್ಲ ಕಳ್ಳಿಯ ಬೇಲಿಯ ಮರೆಗೂ ಅವರು ಮಲಗುತ್ತಿದ್ದುದನ್ನು ಸುಮಾರು ಜನ ಕಂಡಿದ್ದರು. ಕೆಲವು ಪೋಲಿಹುಡುಗರು ಅವರು ಊರಿನಿಂದ ಹೊರಗೆ ಹೊರಡುತ್ತಿದ್ದದ್ದನ್ನು ಕಾಳಿ ಶಾನುಭೋಗರ ಜೊತೆಗಿನ ಸಂಬಂಧಕ್ಕೆ ಅಭಿಮಾನಪಟ್ಟುಕೊಂಡಿದ್ದಳು. ತಾನು ಬಯಸಿದಾಗಲೆಲ್ಲ ತೃಪ್ತಿಗೊಳಿಸುವ ಕಾಳಿಯ ಹೆಸರಿಗೆ ಬೇಚರಾಕು ಗ್ರಾಮದ ಮಸಣಕುಪ್ಪೆ ಸರ್ವೇಗೆ ಸೇರಿದ ಜಮೀನಿನಲ್ಲಿ ನಾಲ್ಕು ಎಕರೆಯನ್ನು ಥರಖಾಸ್ತಿಯಲ್ಲಿ ಹಿಡಿದು ಸಾಗುವಳಿ

ಚೀಟಿ ಕೊಡಿಸಿದ್ದರು. ಈ ಒಂದು ಉಪಕಾರಕ್ಕಾಗಿ ಕಾಳಿ ಶಾನುಭೋಗರಿಗೆ ತನ್ನೆಲ್ಲ ಸರ್ವಸ್ವವನ್ನೂ ಒಪ್ಪಿಸಲು ಸಿದ್ಧಳಾಗಿದ್ದರೂ ಶಾನುಭೋಗರಿಗೆ ಯಾಕೊ ಕಾಳಿಗಿಂತ ಅವಳ ಮಗಳು ಚಲುವೆಯೇ ಬೇಕೆನಿಸಿತು. ಹಾಗೆ ನೋಡಿದರೆ ಚಲುವೆಗಿಂತ ದೊಡ್ಡ ಹೆಣ್ಣುಮಗಳಿದ್ದಳು. ಮದುವೆಗೆ ಬಂದುನಿಂತ ಮಗಳಿಗಾಗಿ ಶಾನುಭೋಗರು ವರಾನ್ವೇಷಣೆಗೆಂದು ಹತ್ತು ಕಡೆ ಸುತ್ತಿ ಬಂದಿದ್ದರು. ಈ ನಡುವೆ ಊರಲ್ಲಿ ಕರೀಗೌಡರ ಕಡೆಯ ಮಗ ನಾರಾಯಣನಿಗೂ ಶಾನುಭೋಗರ ಮಗಳು ವನಜಾಕ್ಷಿಗೂ ಅಂಟಿರುವ ನಂಟಿನ ವಾಸನೆ ಹಬ್ಬಿತ್ತಾದರೂ ಅದರ ವಿವರಗಳು ಪಂಡ್ರಿಯ ಕಡತದಲ್ಲಿ ಇನ್ನೂ ದಾಖಲಾಗಿರಲಿಲ್ಲ. ಪಂಡ್ರಿಯ ವಿಶಾಲವಾದ ದೃಷ್ಟಿಯಲ್ಲಿ ಮಾದಳ್ಳಿಯ ಹಾದರಗಳ್ಳರಿಗೆ ಈ ಸಲದ ಮುಂಗಾರುಮಳೆ ತುಂಬಾ ಅನ್ಯಾಯ ಮಾಡಿತ್ತು. ಕಾಲಕ್ಕೆ ಸರಿಯಾಗಿ ಮಳೆ ಬಿದ್ದಿದ್ದರೆ ಇಷ್ಟರಲ್ಲಾಗಲೆ ಊರಿನ ಸುತ್ತಮುತ್ತ ಎತ್ತ ನೋಡಿದರತ್ತ ಆಳೆತ್ತರ ಬೆಳೆದ ಜೋಳದ ಹೊಲಗಳು ಅದೆಷ್ಟು ರತಿರಹಸ್ಯಗಳನ್ನು ಅಡಗಿಸಿಕೊಳ್ಳುತ್ತಿದ್ದವೊ? ಮಳೆ ಕೈಕೊಟ್ಟು ಎಲ್ಲಿ ನೋಡಿದರೂ ಬಯಲು ಬಟಾ ಬಯಲು. ಕದ್ದು ಕೂಡುವವರಿಗೆ ಕಳ್ಳಿ ಪೊದೆಗಳೇ ಗತಿಯಾಗಿದ್ದರೂ ಕಳ್ಳಿಯ ಹಾಲು ಚರ್ಮದ ಮೇಲೆ ಬಿದ್ದರೆ ಸಾಕು ಚರ್ಮವು ಸುಟ್ಟು ಗಾಯವಾಗುವ ಅಪಾಯ ತಿಳಿದಿದ್ದರೂ ಅದನ್ನು ಲೆಕ್ಕಿಸುತ್ತಿರಲಿಲ್ಲ"(ಅದೇ; ಪುಟ, ೫೬-೫೭). ಹೀಗೆ ಹಿಂದೆ ಘಟಿಸಿದ ಮುಂದೆ ಘಟಿಸಬಹುದಾದ ಅನೈತಿಕ ಘಟನೆಗಳು ಭುಜಂಗಯ್ಯನ ಸ್ವಗತದಲ್ಲಿ ಕಲ್ಪನೆಗಳ ಚಳುವಳಿಯನ್ನು ಆರಂಭಿಸಿರುತ್ತವೆ.

ಕಳ್ಳ ಪ್ರೇಮಪ್ರಕರಣಗಳ ಬಗೆಗಿನ ಪಂಡ್ರಿಯ ಅಭಿಪ್ರಾಯವು ಹಳ್ಳಿಯಲ್ಲಿನ ಜನಸಾಮಾನ್ಯರಿಗೆ ನೀತಿ ಪಾಠ ಒಪ್ಪಿಸುವ ಸನ್ನಿವೇಶದಂತಿದೆ. "ಕಾಮಾತುರರಿಗೆ ಭಯ, ಬೀತಿ, ಮಾನ, ಅಪಮಾನ, ಚಳಿ, ಗಾಳಿ, ಬೆಂಕಿ, ಬಿಸಿಲು ಈ ಯಾವುದರ ಪರಿವೆಯೂ ಇರುವುದಿಲ್ಲ. ಯಾವುದು ತಪ್ಪು ಯಾವುದು ಸರಿಯೆಂದು ಅವರು ಯೋಚಿಸುವುದೇ ಅವರ ದೃಷ್ಟಿಯಲ್ಲಿ ಭಯಂಕರ ಪಾಪ. ಅದಕ್ಕೆ ತಕ್ಕ ಉದಾಹರಣೆಯಾಗಿ ಮುದಿ ಶಾನುಭೋಗರಿಗೂ, ಅವರ ಮಗಳಿಗಿಂತ ಚಿಕ್ಕವಳಾದ ಚಲುವೆಗೂ ಇರುವ ಸಂಬಂಧವನ್ನು ಹೇಳಿದ ಪಂಡ್ರಿ ಕಟ್ಟಕಡೆಯ ಮಾತೋ ಎನ್ನುವಂತೆ ಬಲತ್ಕಾರ ಇಲ್ಲದಿದ್ದರೆ ಯಾರು ಯಾರನ್ನಾದರೂ ಸರಿ, ಎಂತಾದರೂ ಸರಿ ಮನಃಪೂರ್ವಕ ಇಷ್ಟಪಟ್ಟು ಕೂಡಿದರೆ ಅದು ತಪ್ಪಲ್ಲ ಪಾಪವಲ್ಲವೆಂದು ತಾನು ತಿಳಿದ ತನ್ನ ಪ್ರಣಯನೀತಿಯನ್ನು ಅಪ್ಪಣೆ ಕೊಡಿಸಿದೆ"(ಅದೇ; ಪುಟ ೫೮). ಪಂಡ್ರಿಯ ಈ ಮಾತುಗಳು ಅವನ ಗೆಳೆಯರ ಮನಸ್ಸಿನಲ್ಲಿ ಏನೇನೊ ನೆನಪುಗಳನ್ನು ಕೆದಕಿ-ಕೆರಳಿಸಿ ಅವರು ಗೊಂದಲಕ್ಕಿಡಾಗುತ್ತಾರೆ. ಅವರೊಳಗೆ ಅವಿತುಕೊಂಡಿದ್ದ ಹಲವು ಬಯಕೆಗಳು ಮೇಲೆ ಉಲ್ಲೇಖಿಸಿದ ಸನ್ನಿವೇಶದಲ್ಲಿ ವ್ಯಕ್ತವಾಗುತ್ತವೆ.

ಭುಜಂಗಯ್ಯನ ಹೋಟೆಲಲ್ಲಿ ಕುಳಿತು ಬಳೆಶೆಟ್ಟರು ತಮ್ಮ ಮಗಳ ಮದುವೆ-ವರಾನ್ವೇಷಣೆಗೆ ಸಂಬಂಧಪಟ್ಟಂತೆ ಹಾಡುವ ಮಾತುಗಳು ಇಲ್ಲಿ ಪ್ರಸ್ತುತವೆನಿಸುತ್ತವೆ. "ತಮಗೊಬ್ಬಳೆ ಮಗಳಿದ್ದು

ಅವಳ ತಾಯಿ ಕೆಲವು ವರ್ಷದ ಹಿಂದೆ ಕ್ಷಯದಿಂದ ತೀರಿಕೊಂಡಿದ್ದು, ತದನಂತರ ತಾವು ಇನ್ನೊಂದು ಮದುವೆ ಮಾಡಿಕೊಂಡಿದ್ದು, ತನ್ನ ಹೊಸ ಹೆಂಡತಿಗೂ ಮಗಳಿಗೂ ಹೊಂದಾಣಿಕೆಯಾಗದೆ ಮನೆಯಲ್ಲಿ ನಿತ್ಯವೂ ಏನಾದರೊಂದು ಜಗಳ ಇದ್ದೇ ಇರುವುದು ಇತ್ಯಾದಿ. ಸಮಾಚಾರಗಳನ್ನು ಚರ್ಚಿಸುತ್ತಾ, ಮಗಳಿಗೊಂದು ಅನುರೂಪನಾದ ಗಂಡನನ್ನು ಹುಡುಕುತ್ತಿರುವುದಾಗಿ ಹೇಳಿದ್ದರು. ತಮ್ಮ ಜಾತಿಯಲ್ಲಿ ಹುಡುಗರು ಸಿಕ್ಕುವುದೇ ಕಷ್ಟ, ಸಿಕ್ಕಿದರೂ ಯೋಗ್ಯರು ಸಿಕ್ಕುವುದು ಅಪರೂಪ. ದಿನವೂ ವ್ಯಾಪಾರದಿಂದಾಗಿ ಹಣ ಕೈಯಲ್ಲಿರುವುದರಿಂದ ಅವರು ಎಲ್ಲಾ ಕಸುಬುಗಳನ್ನು ಕಲಿತುಬಿಟ್ಟಿರುತ್ತಾರೆ. ದಿನಕ್ಕೊಂದು ಊರು-ಯಾವ ಊರಲ್ಲಿ ಏನು ಮಾಡಿ ಬಂದಿರುತ್ತಾರೊ? ಏನು ಕತೆಯೋ ಅಂತೂ ಅವರಲ್ಲೆ ಒಬ್ಬನನ್ನು ಹುಡುಕಿ ತೆಗೆಯಬೇಕು. ತನ್ನ ಮಗಳು ಬಂಗಾರದಂಥೆ ಹುಡುಗಿ ನಡೆ-ನುಡಿಯಲ್ಲಿ ಥೇಟು ಅವಳ ತಾಯಿಯ ಹಾಗೆಯೆ" (ಅದೇ; ಪುಟ ೬೯). ಬಳೆಶಟ್ಟರು ಮಗಳ ನೆಪದಲ್ಲಿ ಗತಿಸಿದ ಪತ್ನಿಯ ಗುಣಗಾನ ಮಾಡುತ್ತಾ ಹೋಟೆಲಿನ ಮಾಲೀಕನ ಸಮಕ್ಷಮದಲ್ಲಿ ದುಃಖತಪ್ತನಾಗುವ ವಿದ್ಯಮಾನವನ್ನು ಕಾದಂಬರಿಯು ಚಿತ್ರಿಸುತ್ತದೆ.

ಹಂಪಾಪುರದ ತಂಬೂರಿ ಅಯ್ನೋರು ಭುಜಂಗಯ್ಯನು ಇಲ್ಲದಿರುವಾಗ ಗ್ರಾಹಕರೆದರು ಶ್ರೀಮಠದ ಗುಣಗಾನವನ್ನು ಮತ್ತು ಕಾಲಜ್ಞಾನದ ಸ್ವರೂಪವನ್ನು ತಿಳಿಸುವ ಈ ಸನ್ನಿವೇಶವನ್ನು ಉದಾಹರಿಸಬಹುದಾಗಿದೆ "ಮಾದಳ್ಳಿಗೆ ದೊಡ್ಡಮಠದ ಸ್ವಾಮಿಗಳು ಆಗಮಿಸುವುದನ್ನು, ಅದರಲ್ಲೂ ತನಗೆ ಬೇಕಾದ ಭುಜಂಗಯ್ಯನ ಆಮಂತ್ರಣವನ್ನು ಅವರು ಒಪ್ಪಿದ್ದನ್ನು ತಿಳಿದು ಪರಮ ಸಂತೋಷದಿಂದ ಹಿಗ್ಗಿದ್ದರು. ಮೂರು ತಿಂಗಳಿಗೊಮ್ಮೆ ಶ್ರೀಮಠಕ್ಕೆ ಹೋಗಿ ಬರುತ್ತಿದ್ದ ಅಯ್ನೋರಿಗೆ ಈ ಮಠದ ಕೀರ್ತಿಯನ್ನು ಎಷ್ಟು ಹೊಗಳಿದರೂ ಸಾಲದು. ದಿನವೂ ಭಕ್ತಾದಿಗಳಿಗೆ ಅಲ್ಲಿ ನಡೆಯುವ ಅನ್ನಸಂತರ್ಪಣೆ ಒಂದು ಪವಾಡವೇ ಸರಿ. ಬೇಯಿಸಿ ಹಾಕುತ್ತೀರೋ ಅಯ್ನೋರಿಗೆ ಅದೊಂದು ದೊಡ್ಡ ರಹಸ್ಯವೆನಿಸಿತ್ತು"(ಅದೇ; ಪುಟ ೮೩). ಹೀಗೆನ್ನುತ್ತಾ ಅಯ್ನೋರು ಹೋಟೆಲಲ್ಲಿ ಕೂತವರಿಗೆ ಶ್ರೀಮಠದ ಬಗ್ಗೆ ಇನ್ನಷ್ಟು ಹೇಳಿ ಕಡೆಗೆ ಕಾಲಜ್ಞಾನದ ಪದಗಳನ್ನು ತಂಬೂರಿ ಮೀಟುತ್ತಾ ಹಾಡತೊಡಗಿದರು. ಆಗ ಬಳೆಶೆಟ್ಟರು, ಮಗಳು ಸುಶೀಲಳೂ ಇದ್ದರು. ರಾಗವಾಗಿ ಹಾಡುವ ಅಯ್ನೋರ ಧ್ವನಿ ಇಂಪಾಗಿದ್ದರಿಂದ ಎದ್ದು ಹೋಗಬೇಕೆಂದಿದ್ದರೂ ಮತ್ತೆ ಗಟ್ಟಿಯಾಗಿ ಕೂತರು. ಅಲ್ಲದೆ ಅವರ ಹಾಡುಗಳ ಅರ್ಥವೂ ಕೂತವರ ಮನಸ್ಸನ್ನು ಹಿಡಿದು ಅಲ್ಲಾಡಿಸುವ ಸಂದರ್ಭವು ಕಾದಂಬರಿಯಲ್ಲಿ ವ್ಯಕ್ತವಾಗಿದೆ.

ಭುಜಂಗಯ್ಯನು ಗ್ರಾಮದಲ್ಲಿ ನ್ಯಾಯ ತೀರ್ಮಾನ ಮಾಡಿದ್ದರ ಬಗೆಗೂ ಗ್ರಾಹಕರು ಹೋಟೆಲಿನಲ್ಲಿ ಕುಳಿತು ಪ್ರಸ್ತಾಪಿಸುತ್ತಾರೆ. "ಆ ರಾತ್ರಿ ಹೋಟೆಲಲ್ಲಿ ಭುಜಂಗಯ್ಯನ ಗೆಳೆಯರ

ಸಮೂಹಕ್ಕಂತೂ ಬರಿಸಲಾಗದ ಉತ್ಸಾಹ ಆನಂದ. ಭುಜಂಗಯ್ಯನಿಂದಾಗಿಯೆ ಇವತ್ತು ದೊಡ್ಡವರು ಅನಿಸಿಕೊಂಡವರು ಮಾಡಬಹುದಾಗಿದ್ದ ಅನಾಹುತ ತಪ್ಪಿತು. ನ್ಯಾಯದ ವಿಷಯ ತುಂಬಾ ತಮಾಷೆಯದು. ಮರ್ಯಾದಸ್ಥರು ಆ ಬಗ್ಗೆ ಮಾತನಾಡುವುದರಲ್ಲಿ ಅವರ ವಿವರವನ್ನೆಲ್ಲಾ ಕೇಳುವುದು ಅಸಹ್ಯವೆನಿಸುವಂತಾಗಿತ್ತು. ಪರಿವಾರದ ದೊಡ್ಡ ತಮ್ಮ ಆ ನ್ಯಾಯ ತಂದಿದ್ದ. ಅದೆಂದರೆ ಕೆಲವು ವರ್ಷದ ಹಿಂದೆ ಗತಿಸಿದ ಚಾಮನಾಯಕನ ಹೆಂಡತಿ ಕರಿಸಿದ್ದಿಯದು. ಅವಳು ತನ್ನ ಮೈದುನ ಬೆಟ್ಟನಾಯಕನನ್ನು ಮಡಗಿಕೊಂಡು ಬಿಟ್ಟಿದ್ದಳೆಂದೂ ಅದರಿಂದಾಗಿ ತಮ್ಮ ಕುಲಕ್ಕೇ ಅವಮಾನವಾಗಿದೆ ಯೆಂದೂ ದೊಡ್ಡ ತಮ್ಮನಾಯಕನ ತಕರಾರು. ಅವರ ಜಾತಿಯ ಕೇರಿಯಲ್ಲಿ ಅವನೇ ಸ್ವಲ್ಪ ಮಾತು ಕಲಿತಿದ್ದನಾದ್ದರಿಂದ ಎಲ್ಲರೂ ಅವನಿಗೆ ಮನ್ನಣೆ ಕೊಡುತ್ತಿದ್ದರು. ಸಹಜವಾಗಿ ಕರಿಸಿದ್ದಿ ಬೆಟ್ಟನ ಜೊತೆ ಸಂಬಂಧ ಇಟ್ಟುಕೊಂಡಿದ್ದಳೊ ಇಲ್ಲವೊ ಒಟ್ಟಾರೆ ದೊಡ್ಡತಮ್ಮ ಪ್ರಯತ್ನ ಪಟ್ಟಾಗ ಅವಳು ಅವನಿಗೆ ದಕ್ಕಿರಲಿಲ್ಲ. ಯಾರೊ ಒಂದಿಬ್ಬರು ಸಾಕ್ಷಿ ತಯಾರಿ ಮಾಡಿಕೊಂಡು ಬಂದಿದ್ದ ದೊಡ್ಡತಮ್ಮ ಭುಜಂಗಯ್ಯನ ಪ್ರಶ್ನೆಗೆ ಪೆಚ್ಚಾಗಿ ಆ ಸಂಬಂಧದಲ್ಲಿ ತನಗೆ ಶಾಮೀಲಾಗಿ ಮಾತನಾಡುತ್ತೇನೆಂದು ಹೇಳಿದ್ದ ಸಣ್ಣ ತಮ್ಮ. ರುದ್ರಪ್ಪನವರು ಕೈಕೊಟ್ಟಿದ್ದು ಪೂರ ತಲೆ ತಗ್ಗಿಸುವ ಪ್ರಸಂಗವು ಬಂದೊದಗಿದ್ದು ಕರಿಸಿದ್ದಿ ಬೆಟ್ಟನನ್ನು ಕೂಡಿದ್ದಕ್ಕೆ ಯಾವ ಪುರಾವೆಯೂ ರುಜು ವಾತಾಗಲಿಲ್ಲ ಅವಳಿಗೆ ಒಂದು ಪಕ್ಷ ಬಸಿರಾದರೂ ನಿಂತಿರುವ ಪಕ್ಷಕ್ಕೆ, ತಪ್ಪು ಹೊರಿಸಲು ಸಾಧ್ಯವಿತ್ತು"(ಅದೇ, ಪು.೧೧೩-೧೧೪). ಹೀಗೆ ಅತಿ ಸಂಕೀರ್ಣತೆಯುಳ್ಳ ಕೌಟುಂಬಿಕ ಸಮಸ್ಯೆಗಳು ಭುಜಂಗಯ್ಯನ ಹೋಟೆಲಲ್ಲಿ ಚರ್ಚೆಗೆ ಒಳಗಾಗುತ್ತವೆ. ಆ ಮೂಲಕ ಒಬ್ಬರಿಂದೊಬ್ಬರಿಗೆ ಪ್ರಸರಣಗೊಳ್ಳುತ್ತವೆ.

ಭುಜಂಗಯ್ಯನ ಹೋಟೆಲಲ್ಲಿ ಸ್ಕೂಲಿನ ಹರಿಜನ ಜಾತಿಯ ಮೇಷ್ಟರೊಬ್ಬರು ಬಂದು ರಾಜಾರೋಷವಾಗಿ ಎಲ್ಲರೆದರು ತಿಂಡಿ ತಿಂದು, ಟೀ ಕುಡಿದು ಹೋಗಿದಾಗಿಯೂ, ಅವರು ತಿಂದು ಕುಡಿದು ಲೋಟ ತಟ್ಟೆಗಳನ್ನು ಎಲ್ಲದರ ಜೊತೆಗೆ ಬೆರೆಸಿ ಇಟ್ಟುದಾಗಿಯೂ ದ್ಯಾವಣ್ಣ ಮಾದಳ್ಳಿಯ ಲಿಂಗಾಯತ ಕೇರಿಯುದ್ದಕ್ಕೂ ಡಂಗೂರ ಹೊಡೆಯುತ್ತಾ ಹೊರಟ. ಆ ರಾತ್ರಿಯೇ ಮುಖಂಡರೆಲ್ಲರೂ ಸೇರಿರುವ ಸಂದರ್ಭ, ದ್ಯಾವಣ್ಣನ ಜೊತೆ ಇದ್ದ ಕೇರಿಯ ಇಬ್ಬರನ್ನು ಕರೆಸುವ ಸನ್ನಿವೇಶ, ಒಬ್ಬನು ಭುಜಂಗಯ್ಯನಿಗೆ ಅವನ್ಯಾವ ಜಾತಿಯವವೆಂಬುದು ತಿಳಿದಿಲ್ಲವೆಂಬ ಸುದ್ದಿ ಇದರಿಂದಾಗಿ ತಕ್ಷಣ ಲಿಂಗಾಯತ ಆಚಾರರ ಕೇರಿಯಿಂದ ಉರುಪನ ತಾಯಿ, ನಂಟರನ್ನು ಕರೆಸುವುದು, ಉರುಪ ಏನಾದರೂ ಭುಜಂಗಯ್ಯನ ಹೋಟೆಲಲ್ಲಿ ಕೆಲಸ ಮಾಡಿದರೆ ಕುಲದಿಂದ ಹೊರಗಿಡುವ ಸಂಗತಿ, ಕುಲಕ್ಕೆ ಸೇರಿದವರಿಗೂ ಹೋಟೆಲೊಳಗೆ ಕಾಲಿಡದಂತೆ ಸಭೆಯು ತೀರ್ಮಾನಿಸಿದ್ದು, ರುದ್ರಪ್ಪ ಖಾರವಾಗಿ ಹೋಟೆಲು ಮುಚ್ಚುವಂತೆ ಅಗ್ರಹಿಸುವುದು, ಭುಜಂಗಯ್ಯನು ಇದಕ್ಕೆ ಉತ್ತರವಾಗಿ ಹೋಟೆಲು ಮುಚ್ಚಲಾರದೆ ಬೈಯುವ ಸಂದರ್ಭ,

ಕರೀಗೌಡರು ಇದಕ್ಕೆ ಎದುರಾಗಿ ವಾದಿಸುವ ಮಾತುಗಳು. ಹೀಗೆ ಹೋಟೆಲಲ್ಲಿ ನಡೆದ ಸಣ್ಣ ಘಟನೆಯೊಂದು ದೊಡ್ಡ ಅವಾಂತರವಾಗಿ ಸೃಷ್ಟಿಯಾದುದನ್ನು ಕಾದಂಬರಿಯು ಚಿತ್ರಿಸುತ್ತದೆ.

ದು.ನಿಂ. ಬೆಳಗಲಿಯವರ 'ಕಾತ್ರಾಳ ರತ್ನಿಯ ಚಾದಂಗಡಿ' ಕಾದಂಬರಿಯಲ್ಲಿ ನಂದೂರಿನಲ್ಲಿ ನಡೆಯುವ ವಿದ್ಯಮಾನಗಳ ಬಗೆಗೆ ಚಾದಂಗಡಿಯಲ್ಲಿ ಕುಳಿತು ಚರ್ಚಿಸುವ ಸನ್ನಿವೇಶವಿದೆ. ಚಾದಂಗಡಿ ಮಾಲೀಕಳಿಗೆ ಕಾರ್ಮಿಕನಾದ ಪಾಂಡು ದಾನೇಶಿಯು ಊರಲ್ಲಿ ಎಸಗಿದ ನಿಗೂಢ ವಿಷಯದ ಹೊಸ ಭಾನಗಡಿಯನ್ನು ತಿಳಿಸುತ್ತಾನೆ. ಹೊಸೂರ ನಾಗಪ್ಪ ಕಮಲಾಳ ಮೇಲೆ ಅತ್ಯಾಚಾರ ಮಾಡಿದ್ದು, ರಾಯಪ್ಪನನ್ನು ಹೊಡೆದದ್ದು, ದಾನೇಶ ಗೌಡನ ಕ್ರೌರ್ಯದ ಬಗೆಗೆ ರತ್ನಳ ಚಾದಂಗಡಿಯಲ್ಲಿ ಗ್ರಾಹಕರು ಚರ್ಚಿಸುತ್ತಾರೆ. ಪಾಂಡು ಹೇಳುವ ಸಮಾಚಾರ ಕೇಳಲು ಗ್ರಾಹಕರಾದವರು ತಮ್ಮ ತಮ್ಮ ಜಾಗ ಬಿಟ್ಟು ಆತನನ್ನು ಸುತ್ತಿದ್ದರು. ರಾಯಪ್ಪ, ಕಮಲಾ, ಎಲ್ಲಪ್ಪ ಈ ಮೂವರ ಚಾದಂಗಡಿಯ ಜನರ ಎಲುಬಿಲ್ಲದ ನಾಲಿಗೆಯ ಮೇಲೆ ಕುಣಿದಾಡುತ್ತಿದ್ದರು. ಹೊಸೂರ ನಾಗಪ್ಪ ರತ್ನಕ್ಕನಿಗೆ ಯಾವನೊ ತ್ರಿಪುರಾಂತಕ ಸ್ವಾಮಿ ಊರಲ್ಲಿ ಟಿಕಾಣಿ ಹೂಡಿದ್ದ ಸುದ್ದಿ ತಿಳಿಸುತ್ತಾನೆ. ಅಂದಾನಿ ಸ್ವಾಮಿಗಳಿಗಾಗಿ ಊರಿನಲ್ಲಿ ಗುಡಿ ಕಟ್ಟಿಸುವ ವಿಚಾರವನ್ನು ಕಂಟೆಪ್ಪನು ಚಾದಂಗಡಿಯಲ್ಲಿ ಕುಳಿತುಕೊಂಡು ಸಮರ್ಥಿಸುತ್ತಾನೆ. ದಾನೇಶಿಯು ಚಾದಂಗಡಿಯಲ್ಲಿ ತಿಂಡಿ ತಿಂದು ರೊಕ್ಕ ಕೊಡುವ ನೆಪದಲ್ಲಿ ರತ್ನಾಳ ಕೈಹಿಡಿಯಲು ಮುಂದಾದದ್ದು. ಆಗ ರತ್ನಾ ತನ್ನ ಎಡಗಾಲು ಚಪ್ಪಲಿ ಬಿಟ್ಟು ಮತ್ತೆ ಕಾಲಿಗೆ ಹಾಕಿಕೊಂಡದ್ದು. ಈ ಸಂಗತಿಯನ್ನು ಚನ್ನುನಿಗೆ ರತ್ನಾ ವಿಧಿಯಿಲ್ಲದೆ ತಿಳಿಸುವ ರೀತಿ, ಗಂಗಾಧರ ಗೌಡನ ಕೊಲೆಯಾದದ್ದು, ಅದಕ್ಕೆ ಹಲವು ಕಾರಣಗಳು ಹುಟ್ಟಿಕೊಂಡದ್ದು, ಈ ಎಲ್ಲಾ ಸಂಗತಿಗಳ ಕುರಿತು ನಡೆಯುತ್ತಿದ್ದ ಚರ್ಚೆಗಳಿಗೆ ಚಾದಂಗಡಿಯ ಚನ್ನ ಮತ್ತು ರತ್ನಾ ಕಿವಿ ಕೊಡಬೇಕಾಗಿ ಬರುತ್ತದೆ. ಗಂಗಾಧರ ಗೌಡನ ಕೊಲೆಗೆ ಕಾರಣವಾದದ್ದು ಸಹೋದರರ ಆಸ್ತಿ ಪಾಲುದಾರಿಕೆಯ ಜಗಳ ಎಂದು ಕೆಲವರು, ಒಂದು ಹೆಣ್ಣಿಗಾಗಿ ಎಂದು ಹಲವರು, ಅಣ್ಣನ ಹೆಂಡತಿಯನ್ನು ಕೆಣಕಿದ್ದಕ್ಕಾಗಿ ಮತ್ತೆ ಕೆಲವರು ಹೀಗೆ ಬಗೆ ಬಗೆಯಾಗಿ ಚಾದಂಗಡಿಯಲ್ಲಿ ಸುದ್ದಿಗೆ ಜೀವ ಕೊಡುತ್ತಿದ್ದರು.

ವಂಕಾರಿಯು ಪರಪ್ಪ ಸಾವುಕಾರನ ಬಣವಿಗೆ ಬೆಂಕಿ ಬಿದ್ದ ಸುದ್ದಿಯನ್ನು ಯಜಮಾನಿ ರತ್ನಾಳಲ್ಲಿ ಭಯಭೀತನಾಗಿ ಬಿತ್ತರಿಸುತ್ತಾನೆ. ಹೀಗೆ ರತ್ನಾಳ ಚಾದಂಗಡಿಗೆ ಸುದ್ದಿಗಳ ಸರಮಾಲೆಯೇ ಹರಿದು ಬರುತ್ತದೆ. ಚಾದಂಗಡಿಯಲ್ಲಿ ಈ ರೀತಿ ಸುದ್ದಿಗಳು ಹರಿದಾಡುವ ಸನ್ನಿವೇಶಗಳು ಕಾದಂಬರಿಯಲ್ಲಿ ಅತ್ಯಂತ ಸ್ವಾರಸ್ಯಕರವಾಗಿ ಮೂಡಿಬಂದಿವೆ. "ಸಂಜೆ ಜಮಖಂಡಿ ಬಸ್ಸಿನಿಂದ ಮತ್ತೆ ಸುದ್ದಿಗಳ ಸರಮಾಲೆ ಹರಿದು, ನಂದೂರ ಬಸ್ ನಿಲ್ದಾಣದಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿ ಕೊಂಡಾಗ ಅವೆಲ್ಲ ರತ್ನಾಳ ಹೋಟೆಲಿನತ್ತ ಧಾವಿಸಿ ಬಂದು, ಅಲ್ಲಿದ್ದ ಗಿರಾಕಿಗಳ ಬಾಯಿಗೆ ಈಡಾಗಿದ್ದು, ಒಂದು ಸಂಗತಿಯಂತೂ ವಿಚಿತ್ರವಾಗಿ ಕಂಡಿತ್ತು. ಅದೇ ಮುಂಜಾನೆ ಪರಪ್ಪ

ಸಾವುಕಾರ ಹಿರಿಯ ಮಗನ ಜತೆ ಚಮನಕೇರಿಗೆ ಹೋಗಿ ಪೋಲೀಸ್ ಠಾಣೆಯಲ್ಲಿ ದೂರು ಕೊಡುವ ಮೊದಲೇ ಕಟಬರ ಕಾಳ್ಯಾ, ಅಲ್ಲಿ ಹಾಜರಾಗಿ ತಾನು ಪರಪ್ಪನ ಬಣವಿಗೆ ಬೆಂಕಿಯಿಟ್ಟ ಬಗೆಗೆ ಹೇಳಿ ಆತ್ಮ ಸಮರ್ಪಣೆ ಮಾಡಿಕೊಂಡಿದ್ದ. ಮೊದಲು ಪೋಲೀಸರು ಆತನಿಗೆ ಪ್ರೇರಣೆ ನೀಡಿದವರ ಹೆಸರನ್ನು ಕಾಳ್ಯಾನ ಬಾಯಿಂದ ಬಿಡಿಸಲು ನಾಲ್ಕು ತದಕಿದ್ದು, ತಾನೆ ಮುಖ್ಯ ಕಾರಣನೆಂದು ಹೇಳಿದ್ದನಂತೆ, ಇನ್ನೂ ಒಂದಿಷ್ಟು ಕಠಿಣ ಕ್ರಮ ಕೈಗೊಂಡಿದ್ದರೂ, ಬೇರೆ ಹೆಸರನ್ನು ಹೇಳಲು ಆತನ ಬಾಯಿ ಸಿದ್ಧವಿರಲಿಲ್ಲ. ಉಪಾಯವಾಗಿ ಆತನ ಸಾಕಷ್ಟು ಹಣ್ಣುಗಾಯಿ-ನೀರುಗಾಯಿ ಮಾಡಿದ್ದರೂ ಆತನ ಬಾಯಿಂದ (ಬ್ರ) ಎಂದು ಬೇರೆ ಹೆಸರು ಬಂದಿರಲೇ ಇಲ್ಲ. ಈಗಿನ ಲಾಕಪ್ ಸಾವಿನ ಹಿನ್ನೆಲೆಯನ್ನರಿತ ಪೋಲೀಸಿನವರು ಉಪಾಯವಾಗಿ ಆತನ ಬಾಯಿ ಬಿಡಿಸಲು ಯತ್ನಿಸಿದ್ದರಂತೆ, ಇನ್ನೂ ಏನೇನೋ ಮಾತುಗಳು ಕತೆಯ ಸ್ವರೂಪ ಪಡೆದು ಅಲ್ಲಿಯ ಜನರ ಬಾಯಿಗೆ ಆಹಾರವಾಗಿದ್ದವು"(ಬೆಳಗಲಿ ದು.ನಿಂ.; ೧೯೯೮; ಪು. ೧೦೧-೧೦೨).

ಜಮಖಂಡಿ ಬಸ್ಸಿನಿಂದ ಇಳಿದ ಜಕನೂರ ನೂರಂದನು ಚಾದಂಗಡಿಗೆ ಬರುತ್ತಾನೆ. ಉತ್ಸುಕತೆಯಿಂದ ಕೂಡಿದ ಅಲ್ಲಿದ್ದ ಜನರಿಗೆ ಕೇಳುವಂತೆ ವಿಶೇಷ ಸಂಗತಿಯನ್ನು ಪ್ರಸರಿಸುತ್ತಾನೆ. ಆತನ ಬೀಗನೊಬ್ಬ ದಾಯಾದಿ ಕಲಹದಲ್ಲಿ ಬಂಧಿತನಾಗಿ ಪೋಲೀಸ್ ಲಾಕಪ್ಪಿನಲ್ಲಿದ್ದದ್ದನ್ನು ಕಾಣಲು ಪೋಲೀಸ್ ಠಾಣೆಗೆ ಹೋದಾಗ ನಂದೂರಿನ ಜೋಡಿ ಕೊಲೆಯ ಜವಾಬ್ದಾರಿ ಹೊತ್ತು ಇಬ್ಬರೂ ತಾವೇ ಠಾಣೆಗೆ ಹಾಜರಾದ ಸುದ್ದಿಯನ್ನು ಚಾದಂಗಡಿಯಲ್ಲಿ ಗ್ರಾಹಕರೆದುರು ತೆರದಿಡುತ್ತಾನೆ. ಜಂಬಗಿ ದಾರಿಯಲ್ಲಿ ಗೌಡರ ತೋಟದ ಹತ್ತಿರ ಸೈಕಲ್ ಮೋಟಾರು ಸುಟ್ಟು ಬಿದ್ದದ್ದು, ಅಲ್ಲಿ ರಕ್ತ ಚೆಲ್ಲಾಪಿಲ್ಲಿಯಾದದ್ದು, ಇದನ್ನು ಅಲ್ಲಿದ್ದ ಒಬ್ಬ ಗಿರಾಕಿ ಹೋಟೆಲಿನಲ್ಲಿ ಕುಳಿತವರಿಗೆ ಉತ್ಸುಕತೆಯಿಂದ ಹೇಳುವುದು, ನಿತ್ಯ ಬೆಳಿಗ್ಗೆ ನಂದೂರಿನ ಹಾಗೂ ಸುತ್ತಲಿನ ಸಮಾಚಾರಗಳು, ಪತ್ರಿಕೆ, ಆಕಾಶವಾಣಿ, ದೂರದರ್ಶನಗಳಿಗೆ ತಿಳಿಯದೆ ಇರುವ ಸ್ಥಳೀಯ ಸುದ್ದಿಗಳು ಮೊದಲು ರತ್ನಾಳ ಹೋಟೆಲಿನಲ್ಲಿಯೇ ಬಿತ್ತರಗೊಳ್ಳುತ್ತಿದ್ದವು.

ಗಂಗಾರಾಮನ ಪಾನಪಟ್ಟಿಯನ್ನು ಪೊಲೀಸರು ಎತ್ತಂಗಡಿ ಮಾಡಿದ್ದನ್ನು ಚಾದಂಗಡಿ ರತ್ನಾ ಊರವರಿಗೆ ತಿಳಿಸುವ ಸುದ್ದಿ "ಬಾ ಪಾಂಡು ಹರ್‍ಯಾಗೆ ಪೊಲೀಸ್ರು ಬಂದು ಉಪಕಾರ ಮಾಡಿದರು. ನೀವ ಜಮಖಂಡಿಗೆ ಹೋಗಿ ಹೇಳಬೇಕಾದ ಕೆಲ್ಸ ಪರಪ್ಪ ಸಾವ್ಕಾರು ಮಾಡ್ಸಿರು"(ಅದೇ, ಪುಟ ೧೮೩) ಎಂದು ರತ್ನಾ ಒಂದಿಷ್ಟು ನೆಮ್ಮದಿಯಿಂದ ಬೆಳಗಿನಲ್ಲಿ ಜರುಗಿದ ಪ್ರಸಂಗವನ್ನು ವಿವರಿಸುತ್ತಾಳೆ.

ಬಿಜಾಪುರಕ್ಕೆ ವಾರಗಳ ಹಿಂದೆ ಕಟ್ಟುನಿಟ್ಟಿನ ಜಿಲ್ಲಾ ಪೋಲೀಸ್ ಅಧಿಕಾರಿ ವರ್ಗವಾಗಿ ಬಂದದ್ದು, ಜಿಲ್ಲೆಯಲ್ಲಿ ಖುಲ್ಲಂ ಖುಲ್ಲಾ ನಡೆಯುತ್ತಿದ್ದ ಅಕ್ರಮ ವ್ಯವಹಾರಗಳಿಗೆ, ವೇಶ್ಯಾವೃತ್ತಿ ದಂಥೆಯ ಬಗೆಗೆ ಉಗ್ರಕ್ರಮ ಕೈಗೊಂಡಿದ್ದು ಎಲ್ಲರೆದುರು ಗಂಗಾರಾಮನ ತಂದೆ ರತ್ನಪ್ಪನನ್ನು

ಜಾಲಿಬೆಂಚಿಯಿಂದ ಹಿಡಿದುಕೊಂಡು ಹೋದದ್ದು ಮುಂತಾದ ಹಲವು ತಾಜಾ ಸುದ್ದಿಗಳು ಬೆಳಗಿನ ಹೊತ್ತು ರತ್ನಾಳ ಚಾದಂಗಡಿಯಲ್ಲಿ ಗ್ರಾಹಕರ ಮತ್ತು ಊರವರ ಚರ್ಚೆಗೆ ಗ್ರಾಸವಾಗುತ್ತಿದ್ದವು. ಚಾದಂಗಡಿಯ ಮೂಲಕ ನಂದೂರಿನಲ್ಲಿ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಘಟಿಸಿದ ಸುದ್ದಿ ಹಾಗೂ ಸಾಮಾಜಿಕ ವಿಘಟನೆಗಳನ್ನು ಪ್ರಸ್ತುತ ಕಾದಂಬರಿಯು ಕಲಾತ್ಮಕವಾಗಿ ಕಟ್ಟಿಕೊಡುತ್ತದೆ.

ವ್ಯಾಸರಾವ ನಿಂಜೂರರ 'ಶ್ರೀ ಚಾಮುಂಡೇಶ್ವರಿ ಭವನ' ಕಾದಂಬರಿಯಲ್ಲಿನ ವಾಸಪ್ಪಯ್ಯನ ಹೋಟೆಲು ಕೆಮ್ಮಣ್ಣುವಿನಲ್ಲಿ ಪುಟ್ಟ ಕ್ರಾಂತಿಯನ್ನು ಉಂಟುಮಾಡಿರುತ್ತವೆ. ಚಾಮುಂಡೇಶ್ವರಿ ಭವನ ಕೆಮ್ಮಣ್ಣುವಿನ ಮಟ್ಟಿಗೆ ಅಧಿಕೃತ ವಾರ್ತಾ ಸಂಸ್ಥೆಯಾಗಿರುತ್ತದೆ. ಇಲ್ಲಿ ಬೇರೆಡೆ ಸಿಗದ ವರ್ತಮಾನಗಳು, ಮಾಹಿತಿಗಳು, ಹೆಚ್ಚಾಗಿ ದೊರೆಯುತ್ತವೆ. ಸುತ್ತಲ ನಾಲ್ಕೈದು ಹರದಾರಿ ಹೆಚ್ಚಿನ ಸುದ್ದಿಗಳಿಗೆ ಸೀಮಿತವಾಗಿದ್ದರೂ ದೂರದ ನೆಹರೂ, ಐಸೆನ್ ಹೂವರ್, ಕ್ರುಶ್ಚೇಷ, ನಸೇರ್ ಚರ್ಚಿಲ್‌ರಂತಹ ರಾಜಕೀಯ ಪಟುಗಳ ಸುದ್ದಿಗಳು ಇಲ್ಲಿ ಪ್ರಸಾರಗೊಳ್ಳುತ್ತಿರುತ್ತವೆ. ಲಾಲ ಅಮರನಾಥ, ಸಿ.ಕೆ. ನಾಯ್ಡ್, ವಿನೂ ಮಂಕಡ್, ವಿಜಯ ಹಜಾರೆ, ವಿಜಯ ಮರ್ಚಂಟ್ ಮೊದಲಾದ ಕ್ರೀಡಾಪಟುಗಳ ಸುದ್ದಿ ಪ್ರಸಾರವು ಇಲ್ಲಿರುತ್ತದೆ. ದೇಶ ವಿದೇಶದ ಎಲ್ಲಾ ವಿದ್ಯಮಾನಗಳು ಇಲ್ಲಿ ಚರ್ಚೆಗೆ ಒಳಪಡುತ್ತಿದ್ದವು. ಇಂತಹ ಚರ್ಚೆಗಳು ತಾರಕಕ್ಕೇರಿದಾಗ ಅದರ ಕಾವನ್ನು ತಿಳಿಗೊಳಿಸುವುದಕ್ಕೆ, ಚರ್ಚೆಯ ವೇಗ ಸಾಲದಿದ್ದಾಗ ಇವುಗಳಿಗೆ ತೀರ್ಪು ಕೊಡುವುದಕ್ಕೆ ಹೋಟೆಲು ಮಾಲೀಕ ವಾಸಪ್ಪಯ್ಯ ಸಿದ್ಧರಾಗಿರುತ್ತಿದ್ದರು. ಭವನದಲ್ಲಿನ ಯಾವುದೇ ಸುದ್ದಿ ವರ್ತಮಾನಗಳಿಗೆ ಮಾಲೀಕ ಭಟ್ಟರು ಟಿಪ್ಪಣೆ-ವ್ಯಾಖ್ಯಾನ ಕೊಟ್ಟ ಮೇಲೆ ಅಂತಹ ಸುದ್ದಿಗಳು ಅಧಿಕೃತವಾಗುತ್ತಿದ್ದವು.

ಚಾಮುಂಡೇಶ್ವರಿ ಭವನದಲ್ಲಿ ಬಿತ್ತರಗೊಳ್ಳುವ ಸ್ಥಳೀಯ ಚರಿತ್ರೆಯಂತಿರುವ ಸುದ್ದಿ-ವರ್ತಮಾನಗಳನ್ನು ಕಾದಂಬರಿಯಲ್ಲಿನ ಪ್ರಸ್ತುತ ಸನ್ನಿವೇಶವು ಸಾಕ್ಷೀಕರಿಸುತ್ತದೆ. "ಹಾರಾಡಿ ರಾಮನಿಗೆ ಮೈ ಸರಿ ಇಲ್ಲದ್ದರಿಂದ ಪಂದು ಬೆಟ್ಟಿನಲ್ಲಿ ನಡೆದ ಮಂದರ್ತಿ ಮೇಳದ 'ಕರ್ಣಾರ್ಜುನ ಕಾಳಗ'ಕ್ಕೆ ಕಳೆಕಟ್ಟಿದ ಆಟ ಬೂಸವಾಗಿರುತ್ತದೆ. ವಂಡಾರು ಕಂಬಳದಲ್ಲಿ ನೇತುಹಾಕಿದ ಪತಾಕೆಯ ಮೇಲೆ ದೇಜು ಶೆಟ್ಟರ ಹೋರಿಗಳು ಹಲಗೆ ಓಟದಲ್ಲಿ ಹಾರಿಸಿದ ಕೆಸರು ರಸ್ತೆಗೆ ಬಳಿದ ದಾಂಬರಿನಂತಿರುತ್ತದೆ. ಇಲ್ಲಿ ಜಾತಿ ಮತ್ಸರ ಹಾಗೂ ಹಗೆಗಳಿಂದಾಗಿ ತೀರ್ಪುಗಾರರಾಗಿದ್ದ ಪಟೇಲ ತೌಡ ಶೆಟ್ಟರು ಚಿನ್ನದ ಪದಕವನ್ನು ಕಂಬದ ಕೋಣೆ ವಿಠಲ ನ್ಯಾಕರ ಹೋರಿಗಳಿಗೆ ಕೊಡಿಸಿರುತ್ತಾರೆ. ಪಡಮುನ್ನೂರು ನಾರಾಯಣಪ್ಪಯ್ಯನವರ ಮನೆಯಲ್ಲಿ ನಡೆದ ಪಂಜರ್ಲಿ ಕೂಲದ ದಿನವೇ ಬಾಳ ಭಂಡಾರ ಹೊತ್ತ ಕೃಷ್ಣಯ್ಯನವರ ಹೆಂಡತಿ ಹೆತ್ತಿರುತ್ತಾಳೆ. ನಡೆದ ಕೂಲಕ್ಕೆ ಮೈಲಿಗೆಯಾದ್ದರಿಂದಲೆ, ಹಸಿ ಬಾಣಂತಿ ನಂಜೇರಿ ಅಸು ನೀಗಿದ್ದಳು. ಅಂಬಾಗಿಲು ದುಗ್ಗಪ್ಪಯ್ಯನ ಮೈನೆರೆದ ದಿಗಡದಿಮ್ಮಿ ಮಗಳನ್ನು ಉಡುಪಿಯ ಎಲ್ಲು ಭಂಡಾರಿ ಗದ್ದೆಯಲ್ಲಿ

ಠಿಕಾಣಿ ಹೂಡಿದ ನಾಟಕ ಕಂಪನಿಯವರು ರಾತ್ರೋರಾತ್ರಿ ಹಾರಿಸಿಕೊಂಡು ಹೋದರು. ಕುವೇಟಿನಲ್ಲೊ ಇನ್ಯಾವ ಮಸಣದಲ್ಲೊ ದುಡಿಯುತ್ತಿದ್ದ ಅಂತೋಣಿ ನಾಯ್ಕನ ಹೆಂಡತಿ ಹರೆಯದವಳು ಲಿಲ್ಲಿಬಾಯಿ. ಗಂಡ ಅಂತೋಣಿನಾಯ್ಕ ಪರವೂರಿಗೆ ಹೋದ ವರ್ಷದ ಮೇಲೆ ಬಸಿರಾಗಿರುತ್ತಾಳೆ. ಅವಳು ಹೆರುವದಕ್ಕೆ ನಾಲ್ಕು ತಿಂಗಳು ಮೊದಲು ಯಾರಾರಿಗೊ ದಮ್ಮಯ್ಯ ದಕ್ಕಯ್ಯ ಹಾಕಿದ್ದಳು. ಅವನನ್ನು ಯಾವ ಮಾಯಕದಲ್ಲೋ ಕರೆಸಿ ಹುಟ್ಟಿದ ಮಗುವಿನ ಪಿತೃತ್ವ ವನ್ನು ಅವನ ತಲೆಗೆ ಕಟ್ಟಿ ತನ್ನ ಪಾತಿವ್ರತ್ಯ ಉಳಿಸಿಕೊಂಡಿದ್ದಳು. ಅಂತೋಣಿಯನ್ನು ಕರೆಸುವಲ್ಲಿ ಲಿಲ್ಲಿಬಾಯಿಗೆ ಅಪ್ಪು ಬೆಲ್ಚಾಡೆ ತೈನತಿಯಾಗಿದ್ದನು. ಎಳೆನೀರು, ತಾಳೆಬೊಂಡ ಕೊಯ್ಯುವ ನೆಪದಲ್ಲಿ ಆಕೆಯ ಮನೆಗೆ ಹೊತ್ತು ಕಂತಿದ ಮೇಲೂ ಎಡತಾಕುತ್ತಿದ್ದನು. ಆತ ಕೈ ಹಾಕುತ್ತಿದ್ದ ಬೊಂಡದ ಕುರಿತು ವಿಪರೀತ ಗುಮಾನಿ ಎದ್ದು ಲಿಲ್ಲಿಬಾಯಿಯ ಲೀಲೆ ಸಾಬೀತಾಗುತ್ತದೆ. ತೋಡುಬಳಿ ತಂತ್ರಿ ವಿಧವೆ ಮಗಳು ತನಗಿರದ ಸುಖ ಪರರಿಗ್ಯಾಕೆ ಎಂದು ತಮ್ಮನಿಗೆ ಮದುವೆ ಮಾಡಿಸಿರುತ್ತಾಳೆ. ಸಹ ನಾದಿನಿ ಬಿಲ್‌ಕುಲ್ ತೊಡೆ ಎರಡು ಮಾಡದಂತೆ ಸರ್ಪಗಾವಲು ಇಟ್ಟಿದ್ದಳು. ತಂತ್ರಿ ಮಾಣಿಗೆ ಮರಳು ಹಿಡಿದು ಅವ ದೇಶಾಂತರ ಓಡಿಹೋಗಿದ್ದನು. ಪ್ರಜಾ ಪಾರ್ಟಿಯ ಸುಬ್ರಾಯ ಶ್ಯಾನುಭೋಗರು ಅವರ ಖಾಸಾಭಾವನ ಕಿತಾಪತಿಯಿಂದಾಗಿ ಚುನಾವಣೆಯಲ್ಲಿ ಸೋತುಹೋಗುತ್ತಾನೆ. ಗಣಪ್ಪಯ್ಯ ಪೌರಾಣಿಕರು 'ಇಗಾ ಈ ಮುಹೂರ್ತ ಸಮವಿಲ್ಲ' ಎಂದು ಸಾರಿ ಸಾರಿ ರಂದಿ ಹೇಳಿದರೂ ಲೆಕ್ಕಿಸದೆ ಮುಂಬಯಿ ಬಾಬಾನ ಆದೇಶ ದಂತೆ ಹೊಸ ಮಚ್ವೆಯನ್ನು ಗುರುವ ತಂಡೆಲ ನೀರಿಗಿಳಿಸಿದ್ದನು. ಅದು ತೋನ್ವೇಪಾರಿನ ಸಮೀಪ ಕಡಲಿನ ತಳ ಕಂಡಿರುತ್ತದೆ"(ವ್ಯಾಸರಾವ ನಿಂಜೂರ, ೨೦೦೨, ಪು. ೮–೯). ಚಾಮುಂಡೇಶ್ವರಿ ಭವನದಲ್ಲಿ ಬಿತ್ತರಗೊಳ್ಳುವ ಸುದ್ದಿ–ವರ್ತಮಾನಗಳು ಇಷ್ಟಕ್ಕೆ ಕೊನೆಗೊಳ್ಳುವುದಿಲ್ಲ. ಕಾದಂಬರಿ ಯುದ್ದಕ್ಕೂ ಇಂತಹ ಸುದ್ದಿ ವಿಶ್ಲೇಷಣೆಯ ಸನ್ನಿವೇಶಗಳನ್ನು ಅಲ್ಲಲ್ಲಿ ಗುರುತಿಸ ಬಹುದಾಗಿದೆ.

ಕಿಟ್ಟಣ್ಣ ಮಾಸ್ತರ, ಐತಾಳರು, ರಾಘವೇಂದ್ರ ಇವರು ವೆಂಕಟಸ್ವಾಮಿಯ ಕಟಿಂಗ್ ಸೆಲೂನಿನ ಸುದ್ದಿ ಪ್ರಸರಿಸಿದಾಗ ವಾಸುಭಟ್ಟರು ಅದಕ್ಕೆ 'ಉಪ್ಪು ಖಾರ' ಹಚ್ಚಿ ಪ್ರತಿಕ್ರಿಸುವ ಸನ್ನಿವೇಶವು ಕಾದಂಬರಿಯಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ. "ಅಲ್ಲ ಯಾರಾದರೂ ಅಪ್ಪನಿಗೆ ಹುಟ್ಟಿದ ಮಗನಾದರೆ ಸೆಲೂನಿಗೆ ರಾಜರಾಜೇಶ್ವರಿ ಹೇರ್ ಕಟಿಂಗ್ ಸೇಲೂನ ಅಂತ ಬೋರ್ಡು ಹಾಕಿಯಾನ? ಅವ ಏನು ನಮ್ಮ ದುರ್ಗಾಂಬಿಕೆ ರಾಜೇಶ್ವರಿಯನ್ನು ಮುಂದೆ ಮಾಡಲು ಹೊರಟವನ ಹೇಳಿ ನೋಡುವ, ಹಾಳಾಗಿ ಹೋಗಲಿ ನಮಗ್ಯಾಕೆ ಇಲ್ಲದ ತರಲೆ"(ಅದೇ, ಪುಟ ೧೫).

ಬಸ್ಸು ಕೆಮ್ಮಣ್ಣಿಗೆ ಬಂದು ಸಡಗರದಿಂದ ಇಡೀ ಊರನ್ನೆ ಉತ್ಸಾಹಗೊಳಿಸಿ ಉಡುಪಿಯತ್ತ ಹೊರಳಿದಾಗ ಗ್ರಾಮದವರು ಅತೃಪ್ತರಾಗುವ ಈ ಮುಂದಿನ ಸಂದರ್ಭವನ್ನು ಗಮನಿಸಬಹುದಾಗಿದೆ.

"ಅಭಿಜಿನ್ ಮುಹೂರ್ತದಲ್ಲಿ ಪೇಟೆ ಪ್ರವೇಶಿಸಿದ ಬಸ್ಸು ತಿಂಗಳೊಪ್ಪತ್ತಾದರೂ ಕೆಮ್ಮಣ್ಣಿಗೆ ಮುಖ ತೋರಿಸಲಿಲ್ಲ ತೋನ್ಸೆಯ ಮುಖಂಡರೆಲ್ಲ ಬಸ್ಸಿನ ವ್ಯವಸ್ಥಾಪಕರನ್ನು ಕಂಡರಿದ್ದಾಯಿತು. ತಾಲ್ಲೂಕು ದೊರೆಗಳನ್ನು ಭೇಟಿ ಮಾಡಿದ್ದಾಯಿತು. ಏನೋ ಉಪಯೋಗವಾಗಲಿಲ್ಲ ಕೊನೆಗೆ ಜಿಲ್ಲಾಧಿಕಾರಿಗಳ ಬಳಿ ನಿಯೋಗ ಹೋಯಿತು. ರಸ್ತೆ ರೀಪೇರಿ ಕೆಲಸಕ್ಕೆ ಸಾರ್ವಜನಿಕ ಕಾಮಗಾರಿ ಇಲಾಖೆಯ ಹಣ ಮಂಜೂರಾಗದೆ ಏನೂ ಮಾಡುವಂತಿಲ್ಲ. ಈಗ ಪಂಚಾಯಿತಿ ಬೋರ್ಡಿನವರೇ ಏನಾದರೂ ವಿಲೇವಾರಿ ಮಾಡಿದರೆ ಮುಂದಿನ ಅಯವ್ಯಯ ವರ್ಷದಲ್ಲಿ ಏನಾದರೂ ಆಗುತ್ತದೊ ನೋಡೋಣ ಎನ್ನುವ ಅರೆಬರೆ ಅಶ್ವಾಸನೆ ಮಾತ್ರ ಅವರಿಂದ ಒದಗಿತ್ತು. ಅಂತೂ ಕೆಮ್ಮಣ್ಣಿನ ಹಾಗೂ ಅಸುಪಾಸಿನ ಜನಗಳಿಗೆ ಮುಖಭಂಗವಾಗಿತ್ತು"(ಅದೇ, ಪುಟ ೫೫). ಹೀಗೆ ಊರಿನಲ್ಲಿರುವ ಬಸ್ಸಿನ ಸಮಸ್ಯೆಗೆ ಹಾಗೂ ಹದೆಗೆಟ್ಟ ರಸ್ತಗಳ ಕುರಿತು ಪ್ರತಾಪ ಹೆಗ್ಗಡೆಯವರು ಚಾಮುಂಡೇಶ್ವರಿ ಭವನದಲ್ಲಿ ಇತರೆ ಗ್ರಾಹಕರೊಂದಿಗೆ ಚರ್ಚಿಸುತ್ತಾರೆ.

ಚಾಮುಂಡೇಶ್ವರಿ ಭವನದಲ್ಲಿ ಹೋಟೆಲಿನ ಮಾಲೀಕರಾದ ವಾಸುದೇವ ಭಟ್ಟರು ಗೌಪ್ಯ ವ್ಯವಹಾರಗಳ ಸುದ್ದಿಯು ಗ್ರಾಹಕರ ನಡುವೆ ಚರ್ಚೆಗೆ ಬರುತ್ತಿತ್ತು. ಕಿಟ್ಟಣ್ಣ ಮಾಸ್ತರ ವಾಸುದೇವಭಟ್ಟರೆ ಉಡುಪಿಯ ಪಯಣ, ಅಲ್ಲಿ ವಾಸುದೇವ ಭಟ್ಟರು ಗುಲಾಬಿಯನ್ನು ಅಕ್ರಮವಾಗಿ ಸಂದಿಸುವ ಸುದ್ದಿ, ಇವೆಲ್ಲ ಭವನದಲ್ಲಿ ಪ್ರಸರಣಗೊಳ್ಳುತ್ತಿದ್ದವು. ಹೀಗೆ ಊರ ಮತ್ತು ಪರವೂರ ಹತ್ತು ಹಲವು ಸುದ್ದಿ-ಸಮಾಚಾರಗಳು ಚಾಮುಂಡೇಶ್ವರಿ ಭವನದಲ್ಲಿ ಪ್ರಸರಣಗೊಂಡು ವಿಶ್ಲೇಷಣೆಗೊಳ ಪಡುತ್ತವೆ.

ಇದೇ ಲೇಖಕರ 'ತೆಂಕನಿಡಿಯೂರಿನ ಕುಳವಾರಿಗಳು' ಕಾದಂಬರಿಯಲ್ಲಿನ ಭಟ್ಟರ ತಟ್ಟಿ ಹೋಟೆಲು ತೆಂಕನಿಡಿಯೂರಿನ ಪ್ರಮುಖ ಸುದ್ದಿ-ವರ್ತಮಾನಗಳನ್ನು ಬಿತ್ತರಿಸುವ ಕೇಂದ್ರವಾಗಿದೆ. ಹೋಟೆಲಿನ ಮಾಲೀಕ ಭಟ್ಟರು ಡಿಸೋಜಾ ಪಲ್ಲೇರ ಮಗಳು ಹೆಲನಳೂ ಪುರೋಹಿತ ಉಪದ್ರರ ಮಗ ಕೃಷ್ಣಮೂರ್ತಿಗೂ 'ಲವ್ ಆಫೇರ್' ಇದ್ದದನ್ನು, ಮೂರ್ತಿ ಆಕೆಯನ್ನು ಮದುವೆಯಾಗಿ ಕ್ರಿಶ್ಚನ್ ಮತಕ್ಕೆ ಪರಿವರ್ತನೆಯಾಗುವ ಸೂಚನೆಯಿದ್ದದನ್ನು ತಾನು ಬೇರಾದರೆ ಭರವಸೆ ಕೊಡುವದಾಗಿಯು ಹೋಟೆಲಲ್ಲಿ ನೆರದ ಗಿರಾಕಿಗಳ ಜೊತೆಗೆ ವಿರಾಜಮಾನರಾಗಿ ಭಟ್ಟರು ಸುದ್ದಿ ಪಸರಿಸುವ ಸನ್ನಿವೇಶವು ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ದುಗ್ಗಪ್ಪ ಶೆಟ್ಟರು ತನಿಯನು ತನ್ನನ್ನು ಬೈದಿರುವುದರಿಂದ ಅವನನ್ನು ಚೆನ್ನಾಗಿ ಬಡಿದಿರುವ ಭಟ್ಟರಿಗೆ ಒಪ್ಪಿಸುವ ಸುದ್ದಿ, ತನಿಯನಿಗೆ ತಟ್ಟಿ ಹೋಟೆಲಲ್ಲಿ ತಪ್ಪು ಒಪ್ಪಿಕೊಂಡಾಗ ಶೆಟ್ಟರು ಒಂದು ಕಟ್ಟು ಬಜಿ ಕೊಡಿಸುವುದು, ಹೋಟೆಲಿನ ಮಾಲೀಕನ ಕುತೂಹಲ ತಣಿಸಲು ತನಿಯನ ಪ್ರಕರಣವನ್ನು ರಂಗಾಗಿ ಹೇಳುವುದು. ಸಂಗತಿ ಏನು ಎಂದು ತಿಳಿಯದೆ ಕುತೂಹಲದಿಂದ

ಒದ್ದಾಡುತ್ತಿದ್ದ ಭಟ್ಟರಿಗೆ ನಡೆದ ಕಥೆ ಹೇಳುವುದು. ಇದು ಇನ್ನೊಂದು ವಾರ ತನ್ನ ಗಿರಾಕಿಗಳಿಗೆ ಮನರಂಜನೆ ನೀಡಲು ಒಳ್ಳೆಯ ಸುದ್ದಿ ಸಿಕ್ಕಿರುವ ಖುಷಿ, ಈ ವರ್ತಮಾನಗಳೆಲ್ಲ ಸುದ್ದಿ ಪ್ರಸಾರಕ್ಕೆ ಹೆಸರು ಮಾಡಿರುವ ಭಟ್ಟರ ಕಡತದಲ್ಲಿ ಸೇರಿಕೊಂಡಿರುವುದನ್ನು ಕಾದಂಬರಿಯು ಕಟ್ಟಿಕೊಟ್ಟಿದೆ.

ಕೂಜಳ್ಳಿಯಿಂದ ಹುಡಿಗಿಯೊಬ್ಬಳು ಕಾಣೆಯಾಗಿದ್ದಳು. ಆ ಪಾಪದ ಹುಡುಗಿಯನ್ನು ಬೊಂಬಾಯಿಗೆ ರವಾನಿಸಿದ ಸುದ್ದಿ ಎಲ್ಲರಿಗೂ ಗೊತ್ತಿತ್ತು. ಕೃಷ್ಣಪ್ಪನ ಕೈವಾಡವಿರುವುದಾಗಿ ಭಟ್ಟರು ಬಿತ್ತರಿಸುವ ಈ ವರ್ತಮಾನವು ತಾಜಾ ಸುದ್ದಿಯಾಗಿತ್ತು. ಮುಂಬಯಿಯ ದಲ್ಲಾಳಿ ಕೃಷ್ಣಪ್ಪನಿಗೆ ಸಾವಿರಗಟ್ಟಲೆ ಹಣ ಸುರಿದ ಸಂಗತಿ ಊರ ತುಂಬಾ ಬಿತ್ತರಗೊಂಡಿತ್ತು. ಕಾಲು ಸುಂಕ ಮಾಡಿಸುತ್ತೇನೆ. ರಸ್ತೆಗೆ ಜಲ್ಲಿ ಮಣ್ಣು ಹಾಕಿಸುತ್ತೇನೆ. ಕೃಷ್ಣಪ್ಪ ಕೋಟಾ ರಶೀದಿ ಸೃಷ್ಟಿ ಮಾಡುತ್ತಿರುತ್ತಾನೆ. ಪಂಚಾಯಿತಿಯಿಂದಲೂ ಬೋರ್ಡಿನಲ್ಲಿ ಅಗತ್ಯಕ್ಕಿಂತ ಜಾಸ್ತಿ ಪುಕ್ಕಟೆ ಹಣ ಪಡೆದುಕೊಂಡ ವಿಚಾರವು ಸುದ್ದಿಗೆ ಕಾರಣವಾಗುತ್ತದೆ. ತನಿಯನ ಹೆಸರಿನಲ್ಲಿರುವ ಏಳುನೂರು ಕೀಳುವುದನ್ನು ದುಗ್ಗಪ್ಪ ಶೆಟ್ಟರಿಗೆ ತಟ್ಟಿ ಹೋಟೆಲಲ್ಲಿ ಭಟ್ಟರು ಮುನ್ನೆಚರಿಕೆ ಮಾತುಗಳನ್ನಾಡುತ್ತಾರೆ.

ಶಂಭುಶೆಟ್ಟಿ ಊರು ಬಿಟ್ಟು ಮುಂಬಯಿ ಸೇರಿದ ಸುದ್ದಿಯು ಶೇನರ ದಿನಸಿ ಅಂಗಡಿಗೆ ಸಾಬೂನು ಕೊಳ್ಳಲು ಹೋದ ಪಾಂಚನ ಕಿವಿಗೆ ಬೀಳುತ್ತದೆ. ಸುದ್ದಿಯನ್ನು ಪಾಂಚನು ಭಟ್ಟರ ತಟ್ಟಿ ಹೋಟೆಲಲ್ಲಿ ಕುಳಿತು ಇತರ ಗ್ರಾಹಕರಿಗೆ ಪ್ರಸರಣ ಮಾಡುತ್ತಾನೆ "ಕೆಮ್ಮಣ್ಣು ಸಂತೆಗೆ ಹೋದವ ಬೆಲ್ಲ, ಚಾಪುಡಿ, ಒಣ ಮೆಣಸು ಕೊಳ್ಳಲು ಹೊಕ್ಕಾಗ ಒಂದಿಬ್ಬರು ಮಾತನಾಡುವುದನ್ನು ಕೇಳಿಸಿಕೊಂಡಿದ್ದನಂತೆ. ಅದರ ಪ್ರಕಾರ ಶಂಭುವಿನ ನಡತೆ ಚೆನ್ನಾಗಿಲ್ಲವಂತೆ. ಅವನಿಗೆ ಹಲವಾರು ಪ್ರಾಯಕ್ಕೆ ಬಂದ ಹುಡುಗಿಯರೊಂದಿಗೆ ಸದರವಿತ್ತಂತೆ. ಅದು ಹೋಗಲಿ ಉಡುಪಿಯಲ್ಲಿ ಅದಾವುದೋ ಬ್ರಾಂಬ್ರ ಹೆಂಗಸಿನೊಂದಿಗೂ ಸಂಬಂಧವಿತ್ತಂತೆ. ಆ ಬ್ರಾಂಬ್ರ ವಿಧವೆಯೇ ತನ್ನ ಗುಟ್ಟು ರಟ್ಟಾಗುವುದು ಬೇಡ ಎಂದು ಅವನಿಗೆ ದುಡ್ಡು ಕೊಟ್ಟು ಬೊಂಬಾಯಿಗೆ ಓಡುವಂತೆ ಮಾಡಿದ್ದಂತೆ"(ವ್ಯಾಸರಾವ ನಿಂಜೂರ, ೨೦೧೬, ಪುಟ ೫೮). ಈ ಅಂತೆ ಕಂತೆಗಳ ಸುದ್ದಿಯನ್ನು ಪಾಂಚ ತಟ್ಟಿ ಹೋಟೆಲಲ್ಲಿ ಬಿತ್ತರಿಸುತ್ತಾನೆ. ಹೋಟೆಲು ಮಾಲೀಕರಂತೂ ಈ ಸುದ್ದಿಯನ್ನು ಗಿರಾಕಿಗಳಿಗೆ ರಂಗು ರಂಗಾಗಿ ಹೇಳಲಿಕ್ಕೆ ಅಣಿಯಾಗುತ್ತಾರೆ.

ಪಾಂಚ ಊರಿನ ಅಂತ ಕಂತೆಗಳನ್ನು ಹೋಟೆಲಲ್ಲಿ ಬಿತ್ತರಿಸಿದ್ದನ್ನು ಭಟ್ಟರು 'ಉಪ್ಪು ಕಾರ ಹಚ್ಚಿ' ದುಗ್ಗಪ್ಪ ಶೆಟ್ಟರಿಗೆ ಹೇಳುತ್ತಾರೆ. ಕಾದಂಬರಿಯಲ್ಲಿನ ಈ ಸನ್ನಿವೇಶವಂತೂ ಅತ್ಯಂತ ಸ್ವಾರಸ್ಯಕರವಾಗಿ ಮೂಡಿಬಂದಿದೆ. "ಬ್ರಾಂಬ್ರ ಹೆಂಗಸಿನೊಂದಿಗೆ ಸಂಬಂಧ ಇತ್ತು ಎನ್ನುವುದು ಭಟ್ಟರ ಜಾತಿಪ್ರೇಮದಿಂದಾಗಿ ಗೌಡ ಸಾರಸ್ವತ ಬ್ರಾಹ್ಮಣ ಎಂದಾಗಿತ್ತು. ಅಸಲಿಗೆ ಕಾಲೇಜಿಗೆ

ಹೋಗುವ ಹುಡುಗಿಯೇ ಆಗಿದ್ದಳು ಎನ್ನುವ ಪರಿಷ್ಕರಣೆ ಬೇರೆ. ಮದುವೆಯಾಗಿತ್ತು ನಿಜ. ಆದರೆ ಗಂಡನಿಗೆ ಸದಾ ಕಾಯಿಲೆ. ಹೀಗಾಗಿ ಹುಡುಗಿ ಮಂಜೇಶ್ವರದ ತನ್ನ ಗಂಡನ ಮನೆ ಬಿಟ್ಟು ತವರುಮನೆಯಾದ ಉಡುಪಿಯಲ್ಲೇ ವ್ಯಾಸಂಗ ಮಾಡುತ್ತಿರುವ ಪೈಕಿ, ಕಾಲೇಜು ಗೀಲೇಜು ಅಲ್ಲವಂತೆ. ಟೀಚರ್ಸ್ ಟ್ರೈನಿಂಗ್‌ಗೆಗೆ ಹೋಗುತ್ತಿದ್ದುದಂತೆ. ಆಯ್ತು ಕೃಷ್ಣಮಠದಲ್ಲಿ "ಶಂಭುವಿಗೆ ಆಕೆಯ ಪ್ರಥಮ ದರ್ಶನವಂತೆ. ಆ ಮೇಲೆ ಮಿತ್ರ ಸಮಾಜ, ಅಜ್ಜರಕಾಡು, ವಡಭಾಂಡೇಶ್ವರದ ಕಡಲಕಿನಾರೆ ಎಂದೆಲ್ಲಾ ಇಬ್ಬರೂ ತಿರುಗಿದ್ದೇ ತಿರುಗಿದ್ದು. ಆಕೆ ಬಸಿರಾದದ್ದೆ ಕೊಂಕಣದ ಪಡೆ ಶಂಭುವನ್ನು ಕೊಚ್ಚಿಹಾಕಲು ಬಂತಂತೆ ಕಡೆಗೆ ಬಾಬು ರಾಯರು ಎನ್ನುವ ಗೃಹಸ್ತರ ಮಧ್ಯಸ್ಥಿತಿಕೆಯಲ್ಲಿ ಹುಡುಗಿಯನ್ನು ಮಣಿಪಾಲ ಆಸ್ಪತ್ರೆಗೂ ಶಂಭುವನ್ನು ಬೊಂಬಾಯಿಗೂ ಕಳಿಸಲಾಯಿತಂತೆ" (ಅದೇ, ಪುಟ ೫೫). ಕೆಮ್ಮಣ್ಣುವಿನಲ್ಲಿ ಹರಡಿಕೊಂಡಿದ್ದ ಇಂತಹ ಗೌಪ್ಯ ಸುದ್ದಿಯನ್ನು ಭಟ್ಟರು ಮಗ್ಗಪ್ಪ ಶೆಟ್ಟರ ಮುಂದೆ ಸ್ಫೋಟಗೊಳಿಸುತ್ತಾರೆ. ಹೀಗೆ ಹತ್ತು ಹಲವು ರಂಜನೀಯ ಸುದ್ದಿಗಳ ಪ್ರಸರಣ ಕೇಂದ್ರವಾಗಿ ಭಟ್ಟರ ತಟ್ಟಿ ಹೋಟೆಲು ಕಾದಂಬರಿಯಲ್ಲಿ ಗಮನ ಸೆಳೆಯುತ್ತದೆ.

ಒಟ್ಟಾರೆಯಾಗಿ ಗ್ರಾಮೀಣ ಪರಿಸರದ ಸಮಾಜಶಾಸ್ತ್ರೀಯ ಸಂಗತಿಗಳ ಅಧ್ಯಯನಕ್ಕೆ ಅಲ್ಲಿನ ಹೋಟೆಲುಗಳು ಪ್ರಮುಖ ಆಕರ ತಾಣಗಳಾಗಿರುತ್ತವೆ. ಅಂತಹ ಹೋಟೆಲುಗಳ ಪ್ರತಿನಿಧೀಕರಣವುಳ್ಳ ಸಣ್ಣಕಥೆ ಮತ್ತು ಕಾದಂಬರಿಗಳಲ್ಲಿನ ಸನ್ನಿವೇಶಗಳು ಈ ಅಂಶವನ್ನು ಸಾಬೀತುಪಡಿಸುತ್ತವೆ. ಊರು ಅಥವಾ ಪರವೂರುಗಳಲ್ಲಿ ಸಂಭವಿಸಿರಬಹುದಾದ ಘಟನೆ-ವಿದ್ಯಮಾನಗಳ, ಸುದ್ದಿ-ವರ್ತಮಾನಗಳನ್ನು ಅವರಿವರಿಂದ ಕೇಳಿಸಿಕೊಂಡ ಗ್ರಾಹಕರು ಹಾಗೂ ಮಾಲೀಕರು ಅವುಗಳ ಬಗೆಗೆ ಹೋಟೆಲಲ್ಲಿ ಚಾ ಕುಡಿಯುವ ವೇಳೆ ವಿಶ್ಲೇಷಣೆ ನಡೆಸುವುದು, ಅವುಗಳನ್ನು ಒಬ್ಬರಿಂದೊಬ್ಬರಿಗೆ ಹರಡುವುದು ಇವೆಲ್ಲ ಸಹಜ ವಿದ್ಯಮಾನವೆಂಬಂತೆ ಕನ್ನಡದ ಸಣ್ಣಕಥೆ-ಕಾದಂಬರಿಗಳಲ್ಲಿ ರಸವತ್ತಾಗಿ ಮೂಡಿಬಂದಿವೆ.

ಅಧ್ಯಾಯ : ಏಳು

# ಸಮಾಪನ

ಅಧ್ಯಾಯ : ಏಳು

# ಸಮಾಪನ

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಾದ ಸಣ್ಣಕಥೆ-ಕಾದಂಬರಿಗಳಲ್ಲಿ ಹೋಟೆಲು ಪ್ರತಿನಿಧೀಕರಣಗೊಂಡ ವಿವಿಧ ಪರಿಕಲ್ಪನಾತ್ಮಕ ನೆಲೆಗಳನ್ನು ಇದುವರೆಗಿನ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ. ಆಧುನಿಕ ನಾಗರಿಕ ಬದುಕಿನ ಒಂದು ಅನಿವಾರ್ಯ ಘಟಕವೆಂಬಂತೆ ಬೆಳೆದುಬಂದಿರುವ ಹೋಟೆಲು ಸಹಜವಾಗಿಯೇ ಆಧುನಿಕ ಸಾಹಿತ್ಯದಲ್ಲೂ ಪ್ರವೇಶ ಪಡೆಯಿತು. ಲೇಖಕರಾದವರು ಹಲವು ಉದ್ದೇಶಗಳಿಗಾಗಿ ವೈವಿಧ್ಯಮಯ ಹೋಟೆಲುಗಳನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಕಥೆ-ಕಾದಂಬರಿಗಳಲ್ಲದೇ ಇತರ ಪ್ರಕಾರಗಳಾದ ಲಲಿತಪ್ರಬಂಧ, ಅಂಕಣ ಸಾಹಿತ್ಯ, ಸಂಪಾದಕೀಯ ಬರಹ, ಪ್ರವಾಸಕಥನ ಮುಂತಾದ ಸಾಹಿತ್ಯ ಪ್ರಕಾರಗಳಲ್ಲೂ ಹೋಟೆಲಿನ ಪ್ರಸ್ತಾಪವಿದೆ. ಆದರೆ ಕಥನಸಾಹಿತ್ಯದಲ್ಲಿ ಅವೆಲ್ಲಕ್ಕಿಂತಲೂ ಭಿನ್ನವಾದ ರೀತಿಯಲ್ಲಿ ಹೋಟೆಲು ಅಭಿವ್ಯಕ್ತಿಯನ್ನು ಪಡೆದುಕೊಂಡಿದೆ. ಆ ಅಭಿವ್ಯಕ್ತಿ ಸ್ವರೂಪಗಳನ್ನೇ ಅಲ್ಲಿ 'ಪರಿಕಲ್ಪನೆ'ಗಳೆಂದು ಪರಿಭಾವಿಸಿಕೊಂಡು ಅಧ್ಯಯನ ನಡೆಸಲಾಗಿದೆ. ಕೆಲವೆಡೆಗಳಲ್ಲಿ ಸನ್ನಿವೇಶ ನಿರ್ಮಾಣ ಹಾಗೂ ಕಥನದ ಬೆಳವಣಿಗೆಗೆ ಒಂದು ಅವರಣವಾಗಿ ಅಷ್ಟೇ ಹೋಟೆಲು ಬಳಕೆಗೊಂಡರೆ ಇನ್ನೂ ಕೆಲವೆಡೆಗಳಲ್ಲಿ ಆಧುನಿಕತೆಯ ಘಟಕವಾಗಿ, ಆಧುನೀಕರಣ ಪ್ರಕ್ರಿಯೆಯ ಪ್ರತೀಕವಾಗಿ ಬಳಕೆಗೊಂಡಿದೆ. ಮತ್ತೆ ಕೆಲವೆಡೆಗಳಲ್ಲಿ ಗ್ರಾಮೀಣ ಪರಿಸರದಲ್ಲಾದ ಸ್ಥಿತ್ಯಂತರಗಳನ್ನು ಅಭಿವ್ಯಕ್ತಿಪಡಿಸಲು, ಅದೇ ರೀತಿ ನಗರಸಂಸ್ಕೃತಿ ಹಾಗೂ ನಗರಪ್ರಜ್ಞೆಯ ದ್ಯೋತಕವಾಗಿಯೂ ಹೋಟೆಲು ಚಿತ್ರಣಗೊಂಡಿದೆ. ಈ ಎಲ್ಲಾ ಪರಿಕಲ್ಪನಾತ್ಮಕ ನೆಲೆಗಳನ್ನು ಮೇಲಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಪ್ರಸ್ತುತ ಚರ್ಚೆಯ ಫಲಿತಗಳನ್ನು ಈ ಕೆಳಗಿನಂತೆ ಕ್ರೋಡೀಕರಿಸಬಹುದಾಗಿದೆ.

* ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಾದ ಸಣ್ಣಕಥೆ–ಕಾದಂಬರಿಗಳಲ್ಲಿ ಹೋಟೆಲು ಪ್ರತಿನಿಧೀಕರಣಗೊಂಡ ವಿವಿಧ ಪರಿಕಲ್ಪನಾತ್ಮಕ ನೆಲೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

* ಆಧುನಿಕ ಬದುಕಿನಲ್ಲಿ ಆಧುನಿಕತೆಯ ಒಂದು ಪ್ರಮುಖ ಘಟಕವಾಗಿ ಕಂಡುಬರುವ ಹೋಟೆಲು ಅಧುನಿಕ ಸಾಹಿತ್ಯದಲ್ಲಿ ಅಧುನೀಕರಣ ಪ್ರಕ್ರಿಯೆಯ ಪ್ರತೀಕವಾಗಿ ಚಿತ್ರಿತವಾಗಿದೆ.

* ಕನ್ನಡದ ಸಣ್ಣಕಥೆ-ಕಾದಂಬರಿಗಳಲ್ಲಿ ವಿಭಿನ್ನ ಪರಿಕಲ್ಪನಾತ್ಮಕ ನೆಲೆಗಳಲ್ಲಿ ಅಭಿವ್ಯಕ್ತಿಗೊಂಡಿರುವ ಹೋಟೆಲು ಅಂಕಣ ಬರಹ, ಸಂಪಾದಕೀಯ ಬರಹ, ಲಲಿತಪ್ರಬಂಧ, ಪ್ರವಾಸಕಥನಗಳಂತಹ ಇತರ ಸಾಹಿತ್ಯ ಪ್ರಕಾರಗಳಲ್ಲೂ ಪ್ರಸ್ತಾಪಗೊಂಡಿದೆ.

* ಅಂಕಣ ಸಾಹಿತ್ಯ, ಸಂಪಾದಕೀಯ ಬರಹ ಮತ್ತು ಲಲಿತಪ್ರಬಂಧಗಳಲ್ಲಿ ಹೋಟೆಲು ಅಥವಾ ಹೋಟೆಲಿನ ಊಟ, ತಿಂಡಿ-ತಿನಿಸುಗಳು ಬರಹದ ವಸ್ತುವಾಗಿರುವುದು.

* ಪ್ರವಾಸಕಥನಗಳಲ್ಲಿ ಹೊರರಾಜ್ಯಗಳಿಗೂ, ಹೊರದೇಶಗಳಿಗೂ ಪ್ರವಾಸ ಹೋದಾಗ ಅಲ್ಲಿ ತಂಗಿದ್ದ ಅಥವಾ ಊಟ, ಉಪಾಹಾರ ಸೇವಿಸಿದ ಹೋಟೆಲಿನ ವಿವರಣೆ ಇರುತ್ತದೆ.

* ಆದರೆ ಕಥನಸಾಹಿತ್ಯದಲ್ಲಿ ಹೋಟೆಲು ಸೃಜನಶೀಲ ಅಭಿವ್ಯಕ್ತಿಯ ನೆಲೆಯನ್ನು ಪಡೆದುಕೊಳ್ಳುತ್ತದೆ.

* ಬಹುಪಾಲು ಕಥೆ-ಕಾದಂಬರಿಗಳಲ್ಲಿ ಸನ್ನಿವೇಶ ನಿರ್ಮಾಣ ಮತ್ತು ಕಥನದ ಬೆಳವಣಿಗೆಗೆ ಒಂದು ಅವರಣವಾಗಿ ಹೋಟೆಲು ಚಿತ್ರಣಗೊಂಡಿರುವುದುಂಟು.

* ಆದರೆ ಕಥನಸಾಹಿತ್ಯದಲ್ಲಿ ಹೋಟೆಲಿನ ಚಿತ್ರಣವು ಕೇವಲ ಇಷ್ಟಕ್ಕೆ ಸೀಮಿತಗೊಂಡಿಲ್ಲ.

* ಮನುಷ್ಯ ಬದುಕಿನಲ್ಲಿ, ಅದೇ ರೀತಿ ಸುತ್ತಲಿನ ಪರಿಸರದಲ್ಲಿ ಉಂಟಾಗುವ ಆಧುನೀಕರಣ ಪ್ರಕ್ರಿಯೆಯನ್ನು ಅಭಿವ್ಯಕ್ತಿಪಡಿಸಲು ಹೋಟೆಲನ್ನು ಬಳಸಿಕೊಂಡಿರುವುದು ಕಥನಸಾಹಿತ್ಯದ ಒಂದು ಮಹತ್ವದ ಬೆಳವಣಿಗೆ ಎನ್ನಬಹುದು.

* ಗ್ರಾಮೀಣ ಜೀವನದ, ಅದೇ ರೀತಿ ಪರಿಸರದ ಸ್ಥಿತ್ಯಂತರಕ್ಕೆ ಕಾರಣವಾಗುವ ಹೋಟೆಲು ನಗರೀಕರಣ ಪ್ರಕ್ರಿಯೆಯ ಪ್ರತೀಕವೂ ಹೌದು.

* ಹಾಗಾಗಿ ಆಧುನಿಕ ಗ್ರಾಮೀಣ ಪರಿಸರದಲ್ಲಿ ಹೋಟೆಲಿನ ಮೂಲಕ ನಡೆಯುವ ಈ ಎಲ್ಲಾ ಪ್ರಕ್ರಿಯೆಗಳು ಆಧುನಿಕ ಸಾಹಿತ್ಯರೂಪಗಳಾದ ಸಣ್ಣಕಥೆ-ಕಾದಂಬರಿಗಳಲ್ಲೂ ಕಲಾತ್ಮಕ ಅಭಿವ್ಯಕ್ತಿಯನ್ನು ಪಡೆದುಕೊಂಡಿವೆ.

* ನಗರಪ್ರದೇಶಗಳಲ್ಲಿನ ಹೋಟೆಲುಗಳ ಸ್ವರೂಪವೇ ಬೇರೆಯಾಗಿರುತ್ತದೆ. ಇಂತಹ ನಗರ ಪ್ರದೇಶಗಳ ಹೋಟೆಲುಗಳ ಚಿತ್ರಣವು ಕನ್ನಡದ ಕಥನಸಾಹಿತ್ಯದಲ್ಲಿದೆ.

* ನಗರಪ್ರದೇಶದ ಹೋಟೆಲುಗಳು ನಗರಸಂಸ್ಕೃತಿಯ ದ್ಯೋತಕವಾಗಿರುತ್ತವೆ. ಅದರಂತೆ ಕನ್ನಡದ ಹಲವು ಸಣ್ಣಕಥೆ-ಕಾದಂಬರಿಗಳು ನಗರಪ್ರದೇಶದ ಹೋಟೆಲುಗಳ ಚಿತ್ರಣದ ಮೂಲಕ ನಗರಸಂಸ್ಕೃತಿ ಹಾಗೂ ನಗರಪ್ರಜ್ಞೆಯನ್ನು ಅಭಿವ್ಯಕ್ತಪಡಿಸಿವೆ. ಮುಂಬಯಿ ಕನ್ನಡ ಲೇಖಕರ ಬಹುಪಾಲು ಸಣ್ಣಕಥೆ-ಕಾದಂಬರಿಗಳು ಹೋಟೆಲಿನ ಚಿತ್ರಣದ ಮೂಲಕ ನಗರಸಂಸ್ಕೃತಿ ಮತ್ತು ನಗರಪ್ರಜ್ಞೆಯನ್ನು ವಿಶೇಷವಾಗಿ ಅಭಿವ್ಯಕ್ತಿಪಡಿಸಿವೆ.

* ಕಥನ ಸಾಹಿತ್ಯದಲ್ಲಿ ಹೋಟೆಲಿನ ಚಿತ್ರಣದ ಮೂಲಕ ಗ್ರಾಮ, ನಗರಗಳ ನಡುವಣ ಸಂಬಂಧಗಳ ವಿವಿಧ ನೆಲೆಗಳನ್ನು ಅಭಿವ್ಯಕ್ತಿಪಡಿಸಲಾಗಿದೆ.

* ಕನ್ನಡದ ಸಣ್ಣಕಥೆ-ಕಾದಂಬರಿಗಳಲ್ಲಿ ಚಿತ್ರಿತವಾದ ಹೋಟೆಲುಗಳು ಗ್ರಾಮೀಣ ಪರಿಸರದಲ್ಲಿ ಸಂಭವಿಸುವ ಘಟನೆ–ವಿದ್ಯಮಾನಗಳ ಸುದ್ಧಿಗಳನ್ನು ಒಬ್ಬರಿಂದ ಒಬ್ಬರಿಗೆ ಬಿತ್ತರಿಸುವ ಕೇಂದ್ರಗಳಾಗಿಯು ಕಾರ್ಯನಿರ್ವಹಿಸುತ್ತವೆ. ಬಸವರಾಜ ಕಟ್ಟೀಮನಿಯವರ ಖಾನಾವಳಿ ನೀಲಾ, ಶ್ರೀಕೃಷ್ಣ ಆಲನಹಳ್ಳಿಯವರ ಭುಜಂಗಯ್ಯನ ದಶಾವತಾರಗಳು, ದು.ನಿಂ. ಬೆಳಗಲಿಯವರ ಕಾತ್ರಾಳ ರತ್ನಿಯ ಚಹಾದಂಗಡಿ, ವ್ಯಾಸರಾವ್ ನಿಂಜೂರರ ತೆಂಕನಿಡಿಯೂರಿನ ಕುಳವಾರಿಗಳು, ವ್ಯಾಸರಾಯ ಬಲ್ಲಾಳರ ಬಂಡಾಯ, ನಾ. ಮೊಗಸಾಲೆಯವರ ಉಲ್ಲಂಘನೆ, ಮೊಗಳ್ಳಿ ಗಣೇಶ್ ಅವರ ಅನಾದಿ ಮುಂತಾದ ಕಾದಂಬರಿಗಳನ್ನೂ, ಯು.ಆರ್. ಅನಂತಮೂರ್ತಿಯವರ ಪ್ರಕೃತಿ, ಪ್ರಸ್ತ, ಅಮರೇಶ ನುಗಡೋಣಿಯವರ ಏ ದಿಲ್ ಮಾಂಗೆ ಮೋರ್, ಕಣ್ಣು ಮುಕ್ಕಾದ ಬೀಜಗಳು, ಮಾವಿನಕೆರೆ ರಂಗನಾಥರ ಉಳಿದದ್ದು ಆಕಾಶ ಮುಂತಾದ ಸಣ್ಣಕಥೆಗಳನ್ನು ಇಲ್ಲಿ ಗಮನಿಸಬಹುದಾಗಿದೆ.

* ಪ್ರಗತಿಶೀಲ ಕಾದಂಬರಿಗಳಲ್ಲಿ ವೇಶ್ಯಾವೃತ್ತಿಯ ತಾಣವಾಗಿ ಹೋಟೆಲು ಚಿತ್ರಿತವಾಗಿದೆ. ಉದಾಹರಣೆಗಾಗಿ ಅನಕೃ ಅವರ ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು, ಕಳಂಕಿನಿ, ಅಪರಂಜಿ ಮುಂತಾದ ಕಾದಂಬರಿಗಳನ್ನು ಇಲ್ಲಿ ಗಮನಿಸಬಹುದಾಗಿದೆ.

* ಹೋಟೆಲಿನ ಮೂಲಕ ಮನುಷ್ಯ ಸಮಾಜವು ಆಧುನೀಕರಣ ಪ್ರಕ್ರಿಯೆಗೆ ಒಳಗಾಗುವ ಹಂತದಲ್ಲಿ ಪರಂಪರೆ ಮತ್ತು ಅಧುನಿಕತೆಗಳ ನಡುವೆ ಸಂಘರ್ಷ ಏರ್ಪಡುವುದನ್ನೂ ಕೆಲವು ಸಣ್ಣಕಥೆ–ಕಾದಂಬರಿಗಳು ಚಿತ್ರಿಸಿವೆ. ಭಾರತೀಯ ಪರಂಪರೆಯಲ್ಲಿ ಅನ್ನದಾನಕ್ಕೆ ವಿಶೇಷ ಮಹತ್ವವಿತ್ತು. ಆದರೆ ಆಧುನಿಕ ಜಗತ್ತಿಗೆ ಹೋಟೆಲು ಎಂಬ ಆಧುನಿಕತೆಯ ಘಟಕವು ಕಾಲಿರಿಸಿದಾಗ ಅಲ್ಲಿ ಅನ್ನದಾನದ ಪರಂಪರೆಗೆ ವ್ಯತಿರಿಕ್ತವಾದ ಅನ್ನವಿಕ್ರಯದ ಉದ್ಯಮವು ಪ್ರಾರಂಭವಾಯಿತು ಎನ್ನಬಹುದು. ಹೀಗೆ ಅನ್ನದಾನದ ಪರಂಪರೆಯಿಂದ ಅನ್ನವಿಕ್ರಯದ ಉದ್ಯಮಕ್ಕೆ ಸ್ಥಿತ್ಯಂತರಗೊಳ್ಳುವಲ್ಲಿ ಹೋಟೆಲಿನ ಪಾತ್ರ ಮಹತ್ವದ್ದಾಗಿದೆ. ಇದರಂತೆ

ಹೋಟೆಲು ಉದ್ಯಮದ ಮೂಲಕ ಅನ್ನದಾನದ ಪರಂಪರೆಯಿಂದ ಅನ್ನವಿಕ್ರಯದ ಆಧುನಿಕತೆಗೆ ಅನಿವಾರ್ಯವಾಗಿ ಒಗ್ಗಿಕೊಳ್ಳಬೇಕಾದ ಹಂತದಲ್ಲಿ ನಮ್ಮ ಸಂಪ್ರದಾಯಿಕ ಮನಃಸ್ಥಿತಿಗಳು ಹಲವು ಬಗೆಯ ಸಂಘರ್ಷಗಳಿಗೆ ಒಳಗಾಗಿವೆ. ಇಂತಹ ಸಂಘರ್ಷಗಳಿಗೂ ಕನ್ನಡ ಸಣ್ಣಕತೆ–ಕಾದಂಬರಿಗಳು ಕಲಾತ್ಮಕ ಅಭಿವ್ಯಕ್ತಿಯನ್ನು ನೀಡಿವೆ.

* ಕನ್ನಡದ ಹಲವು ಸಣ್ಣಕಥೆ–ಕಾದಂಬರಿಗಳು ಆಧುನಿಕತೆಯ ಘಟಕವಾದ ಹೋಟೆಲಿನಲ್ಲಿ ಸಾಂಪ್ರದಾಯಿಕ ಜಾತಿವ್ಯವಸ್ಥೆಯನ್ನು ಹೇಗೆ ಪಾಲಿಸಲಾಗುತ್ತದೆ ಎಂಬುದನ್ನು ಶಿವರಾಮ ಕಾರಂತರ ಮರಳಿ ಮಣ್ಣಿಗೆ, ಶ್ರೀಕೃಷ್ಣ ಆಲನಹಳ್ಳಿಯವರ ಭುಜಂಗಯ್ಯನ ದಶಾವತಾರಗಳು, ವ್ಯಾಸರಾವ ನಿಂಜೂರರ ಶ್ರೀಚಾಮುಂಡೇಶ್ವರಿ ಭವನ, ಮೊಗಳ್ಳಿ ಗಣೇಶ್ ಅವರ ಅನಾದಿ ಮುಂತಾದ ಕಾದಂಬರಿಗಳು ಚಿತ್ರಿಸಿದರೆ ಇನ್ನೂ ಕೆಲವು ಸಣ್ಣಕಥೆ–ಕಾದಂಬರಿಗಳು ಇಂಥ ವರ್ಗಗಳ ಅಸಮಾನತೆಯನ್ನು ಮರೆತು ಎಲ್ಲರೂ ಒಂದೆಡೆ ಸೇರುವ ಸಾರ್ವಜನಿಕ ಕೇಂದ್ರವಾಗಿ ಹೋಟೆಲನ್ನು ಚಿತ್ರಿಸಿವೆ.

* ಇದೇ ವೇಳೆ ಸಾಂಪ್ರದಾಯಿಕ ವರ್ಗಭೇದವನ್ನು ಮರೆತು, ಸಮಾನತೆಯನ್ನು ಪ್ರತಿಪಾದಿಸುವ ಸಾರ್ವಜನಿಕ ಕೇಂದ್ರವಾಗಿಯೂ ಹೋಟೆಲು ಚಿತ್ರಿತವಾಗಿದೆ.

ಯು.ಆರ್. ಅನಂತಮೂರ್ತಿಯವರ ಭಾರತೀಪುರ ಕಾದಂಬರಿಯಲ್ಲಿ ಜಗನ್ನಾಥನು ವಾಸುವಿನೊಂದಿಗೆ ಹೋಟೆಲಿನಲ್ಲಿ ಚಹಾ ಕುಡಿಯುವ ಸನ್ನಿವೇಶವು ಇದಕ್ಕೆ ಸೂಕ್ತ ಉದಾಹರಣೆ ಎನಿಸುತ್ತದೆ.

* ಕೆ.ಟಿ.ಗಟ್ಟಿಯವರ ಕೆಲವು ಕಾದಂಬರಿಗಳಲ್ಲಿ ಜಾತಿ ಪ್ರಶ್ನೆಯನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಚರ್ಚಿಸುವುದಕ್ಕೋಸ್ಕರ ಹೋಟೆಲನ್ನು ಬಳಸಿಕೊಳ್ಳಲಾಗಿದೆ. ಉದಾಹರಣೆಗೆ ಮೃತ್ಯೋರ್ಮಾ ಅಮೃತಂಗಮಯ, ಪುನರಪಿ ಜನನ ಮುಂತಾದ ಕಾದಂಬರಿಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಕನ್ನಡದ ಸಣ್ಣಕಥೆ–ಕಾದಂಬರಿಗಳು ಹೋಟೆಲಿನ ಚಿತ್ರಣದ ಮೂಲಕ ಗ್ರಾಮೀಣ ಪ್ರದೇಶದ ಸಮಾಜಶಾಸ್ತ್ರೀಯ ಸಂಗತಿಗಳನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತವೆ.

* ಹೋಟೆಲು ಕಾರ್ಮಿಕರ ಸಂಘರ್ಷದ ಜೀವನವನ್ನು ಕನ್ನಡದ ಕಥನ ಸಾಹಿತ್ಯವು ಅಷ್ಟಾಗಿ ಚಿತ್ರಿಸಿದಂತಿಲ್ಲ.

ಮೇಲ್ನೋಟಕ್ಕೆ ಹೋಟೆಲು ನಮಗಿಂದು ಒಂದು ಉದ್ಯಮವಾಗಿ ಕಂಡುಬಂದರೂ ಉದ್ಯಮದಾಚೆಗಿನ ಕೆಲವೊಂದು ವಿದ್ಯಮಾನಗಳಾಗಿಯೂ ಅದು ನಮಗೆ ಪ್ರಸ್ತುತವೆನಿಸುತ್ತದೆ. ಗ್ರಾಮೀಣ ಪ್ರದೇಶದ ಹೋಟೆಲುಗಳಲ್ಲಂತೂ ಉದ್ಯಮದ ವ್ಯವಹಾರಗಳು ಮತ್ತು ಉದ್ಯಮದಾಚೆಗಿನ ವಿದ್ಯಮಾನಗಳು ಜತೆ ಜತೆಯಲ್ಲೇ ಸಾಗುತ್ತಿರುತ್ತವೆ. ಗ್ರಾಮೀಣ ಪ್ರದೇಶದ ಹೋಟೆಲುಗಳಲ್ಲಿ

ಮಾಲೀಕರು, ಕಾರ್ಮಿಕರು ಮತ್ತು ಗ್ರಾಹಕರೊಂದಿಗಿನ ಸಂಬಂಧಗಳು ವಿಶಿಷ್ಟವಾಗಿರುತ್ತವೆ. ಮೂವರು ಸೇರಿ ಊರಿನ ಪರವೂರಿನ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಮುಂತಾದ ವಿಷಯ–ವಿದ್ಯಮಾನಗಳ ಕುರಿತು ಮಾತನಾಡುತ್ತಾರೆ. ಅದೇ ರೀತಿ ಚರ್ಚಿಸುತ್ತಾರೆ. ಹೀಗಾಗಿ ಹೋಟೆಲು ಸುದ್ದಿಪ್ರಸರಣ ಕೇಂದ್ರವಾಗಿಯೂ ಗಮನ ಸೆಳೆಯುತ್ತದೆ. ಗ್ರಾಮೀಣ ಪರಿಸರಕ್ಕೆ ಆಧುನಿಕತೆಯ ಪ್ರವೇಶದ್ವಾರದಂತೆ ಕೆಲಸ ನಿರ್ವಹಿಸುತ್ತದೆ. ಆಧುನಿಕತೆಯ ಘಟಕವಾದ ಹೋಟೆಲು ಗ್ರಾಮೀಣ ಪರಿಸರದಲ್ಲಿ ವಿವಿಧ ಸಾಂಸ್ಕೃತಿಕ ಸಂಘರ್ಷಗಳಿಗೂ ಎಡೆ ಮಾಡಿಕೊಡುತ್ತದೆ. ಸಾಂಪ್ರದಾಯಿಕ ಜಾತಿ ಶ್ರೇಣೀಕರಣ ವ್ಯವಸ್ಥೆಯು ಗ್ರಾಮೀಣ ಪ್ರದೇಶದ ಹೋಟೆಲುಗಳಲ್ಲಿ ಪಾಲನೆಯಾಗುತ್ತದೆ. ಈ ಎಲ್ಲಾ ಸಂಗತಿಗಳನ್ನು ಗಮನಿಸಿದರೆ ಉದ್ಯಮದಾಚೆಗಿನ ವಿದ್ಯಮಾನ ಗಳಾಗಿಯೂ ಹೋಟೆಲು ಹೇಗೆ ಪ್ರಸ್ತುತವಾಗುತ್ತಿದೆ ಎಂಬುದನ್ನು ನಾವು ಕಂಡುಕೊಳ್ಳಬಹುದಾಗಿದೆ. ಅಲ್ಲಿ ನಡೆಯುವ ಉದ್ಯಮದಾಚೆಗಿನ ವಿದ್ಯಮಾನಗಳನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತಾ ಹೆಚ್ಚಿನ ಗಮನ ಹರಿಸಿವೆ ಎನ್ನಬಹುದು. ಪ್ರಸ್ತುತ ಅಧ್ಯಯನದ ಮೂಲಕ ಕನ್ನಡ ಕಥನ ಸಾಹಿತ್ಯವು ಹೋಟೆಲಿನೊಳಗಿನ ಉದ್ಯಮದಾಚೆಗಿನ ವಿದ್ಯಮಾನಗಳಿಗೆ ನೀಡಿರುವ ಕಲಾತ್ಮಕ ಅಭಿವ್ಯಕ್ತಿಯ ಸ್ವರೂಪವನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

ಒಟ್ಟಿನಲ್ಲಿ ಕನ್ನಡದ ಆರಂಭಘಟ್ಟದ ಸಣ್ಣಕಥೆ–ಕಾದಂಬರಿಗಳಿಂದ ತೊಡಗಿ ಸಮಕಾಲೀನ ಸಂದರ್ಭದ ಸಣ್ಣಕಥೆ–ಕಾದಂಬರಿಗಳವರೆಗೆ ಹೋಟೆಲು ವಿಭಿನ್ನ ರೀತಿಗಳಲ್ಲಿ ಪ್ರತಿನಿಧೀಕರಣ ಗೊಂಡಿರುವುದನ್ನು ಗಮನಿಸಬಹುದಾಗಿದೆ. ಗ್ರಾಮೀಣ ಪರಿಸರದ ವಿವಿಧ ಜಾತಿ ಸಮುದಾಯಗಳಲ್ಲಿ ಹೋಟೆಲಿನ ಬಗೆಗಿರುವ ನಿಲುವುಗಳು ಸಾಂಸ್ಕೃತಿಕ ಸಂಘರ್ಷದ ಸ್ವರೂಪ, ಸಾಮಾಜಿಕ, ಆರ್ಥಿಕ, ಔದ್ಯೋಗಿಕ ಹಾಗೂ ವೃತ್ತಿಪರ ಸ್ಥಿತ್ಯಂತರದ ನೆಲೆಗಳು ಮುಂತಾದ ಪ್ರಕ್ರಿಯೆಗಳನ್ನು ಹೋಟೆಲಿನ ಚಿತ್ರಣದ ಮೂಲಕ ಕನ್ನಡದ ಸಣ್ಣಕಥೆ–ಕಾದಂಬರಿಗಳು ಕಟ್ಟಿಕೊಟ್ಟಿವೆ. ಪ್ರಾದೇಶಿಕ ಸಂಸ್ಕೃತಿಯ ಅದೇ ರೀತಿ ಪಾರಂಪರಿಕ ವೃತ್ತಿ ಬದುಕಿನ ಪಲ್ಲಟದ ಸ್ವರೂಪಗಳಿಗೂ ಹೋಟೆಲಿನ ಚಿತ್ರಣದ ಮೂಲಕ ಸಾಹಿತ್ಯಿಕ ಅಭಿವ್ಯಕ್ತಿಯನ್ನು ನೀಡಲಾಗಿದೆ. ಕರಾವಳಿ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಮತ್ತು ಸಮಕಾಲೀನ ಸಂದರ್ಭದ ನಾ. ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಗಳು ಈ ನಿಟ್ಟಿನಲ್ಲಿ ಮಹತ್ವವನ್ನು ಪಡೆದುಕೊಳ್ಳುತ್ತವೆ. ಆಧುನಿಕ ಕಾಲಘಟ್ಟದಲ್ಲಿ ಕರಾವಳಿ ಪ್ರದೇಶದ ಬ್ರಾಹ್ಮಣ ಸಮುದಾಯದ ವಿವಿಧ ತಲೆಮಾರುಗಳಲ್ಲಿ ಉಂಟಾಗುವ ಸ್ಥಿತ್ಯಂತರದ ಸ್ವರೂಪವನ್ನು 'ಮರಳಿ ಮಣ್ಣಿಗೆ' ಕಾದಂಬರಿಯು ಹೋಟೆಲಿನ ಚಿತ್ರಣದ ಮೂಲಕ ಕಟ್ಟಿಕೊಡುತ್ತದೆ. ಅನ್ನದಾನದ ಪರಂಪರೆಯಿಂದ ಅನ್ನವಿಕ್ರಯದ ಉದ್ಯಮಕ್ಕೆ ಸ್ಥಿತ್ಯಂತರಗೊಳ್ಳುವಾಗಿನ ಸಾಂಸ್ಕೃತಿಕ ಸಂಘರ್ಷದ ಪ್ರಸ್ತಾಪವು ಅಲ್ಲಿದೆ.

'ಉಲ್ಲಂಘನೆ' ಕಾದಂಬರಿಯು ತುಳುನಾಡಿನ ಭಂಟ ಮನೆತನದಲ್ಲಿನ ಪಾರಂಪರಿಕ ಕೃಷಿಸಂಸ್ಕೃತಿಯು ಪಲ್ಲಟಗೊಳ್ಳುವ ಹಂತದಲ್ಲಿ ಪರ್ಯಾಯವೃತ್ತಿಯಾಗಿ ಹುಟ್ಟಿಕೊಳ್ಳುವ ಹೋಟೆಲು ಉದ್ಯಮದ ವಿವರಗಳನ್ನು ಕಟ್ಟಿಕೊಡುತ್ತದೆ.

ಇದುವರೆಗೆ ಗಮನಿಸಿದಂತೆ ಆಧುನಿಕತೆಯ ಘಟಕಗಳಲ್ಲೊಂದಾದ ಹೋಟೆಲು ಕನ್ನಡದ ಸಣ್ಣಕಥೆ–ಕಾದಂಬರಿಗಳಲ್ಲಿ ಕೇವಲ ಸನ್ನಿವೇಶ ನಿರ್ಮಾಮಕ್ಕಾಗಿ ಅಷ್ಟೇ ಬಳಕೆಯಾಗದೆ ಪರಿಕಲ್ಪನಾತ್ಮಕ ಅಭಿವ್ಯಕ್ತಿಯನ್ನೂ ಪಡೆದುಕೊಂಡಿದೆ. ಆಧುನಿಕತೆಯ ಇತರ ಘಟಕಗಳಿಗಿಂತ ಭಿನ್ನವೂ, ವಿಶಿಷ್ಟವೂ ಆದ ಸೃಜನಶೀಲ ಅಭಿವ್ಯಕ್ತಿಯ ಆಯಾಮಗಳು ಹೋಟೆಲಿಗೆ ಪ್ರಾಪ್ತವಾಗಿದೆ. ಪಾರಂಪರಿಕ ವೃತ್ತಿ ಬದುಕಿನ ಪಲ್ಲಟದ ಹಂತದಲ್ಲಿ ಪರ್ಯಾಯ ವೃತ್ತಿಯಾಗಿ, ಉದ್ಯಮವಾಗಿ, ಆಧುನಿಕ ಬದುಕಿನಲ್ಲಿ ಪ್ರಮುಖ ಪಾತ್ರವಹಿಸುವ ಹೋಟೆಲು ಅದರಾಚೆಗಿನ ಕೆಲವು ಸಮಾಜಶಾಸ್ತ್ರೀಯ ಸಂಗತಿಗಳಿಗಾಗಿಯೂ ಗಮನಸೆಳೆಯುತ್ತದೆ. ಇಂತಹ ಸಂಗತಿಗಳು, ಅನುಭವಗಳು ನಮ್ಮ ಸೃಜನಶೀಲ ಬರಹಗಾರರ ಮೂಲಕ ಕಲಾತ್ಮಕ ಅಭಿವ್ಯಕ್ತಿಯನ್ನು ಪಡೆದುಕೊಂಡಿವೆ. ಹಾಗಾಗಿ ಕನ್ನಡದ ಕಥನ ಸಾಹಿತ್ಯದಲ್ಲಿ ಕಂಡುಬರುವ ಹೋಟೆಲಿನ ಪ್ರತಿನಿಧೀಕರಣಕ್ಕೆ ವಿವಿಧ ಪರಿಕಲ್ಪನಾತ್ಮಕ ನೆಲೆಗಳು ಇವೆ ಎಂಬುದನ್ನು ಪ್ರಸ್ತುತ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

# ಅನುಬಂಧ

ಅ. ಪ್ರಧಾನ ಆಕರಗಳು
ಆ. ಆನುಷಂಗಿಕ ಆಕರಗಳು
ಇ. ಹೋಟೆಲು ಪ್ರತಿನಿಧೀಕರಣಗೊಂಡಿರುವ
ಸಣ್ಣಕಥೆ-ಕಾದಂಬರಿಗಳ ಸೂಚಿ

ಅ.ಪ್ರಧಾನ ಆಕರಗಳು

**I. ಕಾದಂಬರಿಗಳು**

೧. ಅನಂತಮೂರ್ತಿ ಯು.ಆರ್; ೨೦೦೮(೮ನೇ ಮುದ್ರಣ); **ಭಾರತೀಪುರ**; ಅಕ್ಷರ ಪ್ರಕಾಶನ, ಹೆಗ್ಗೋಡು.

೨. ಅನಂತಮೂರ್ತಿ ಯು.ಆರ್; ೨೦೧೨; **ಪ್ರೀತಿ, ಭಯ ಮತ್ತು ಸಾವು**; ಅಕ್ಷರ ಪ್ರಕಾಶನ, ಹೆಗ್ಗೋಡು.

೩. ಅನಂತಮೂರ್ತಿ ಯು.ಆರ್.; ೨೦೧೫(೧೩ನೇ ಮುದ್ರಣ); **ಸಂಸ್ಕಾರ**; ಅಕ್ಷರ ಪ್ರಕಾಶನ, ಹೆಗ್ಗೋಡು.

೪. ಅ.ನ.ಕೃ.; ೨೦೦೩; **ಸಂಧ್ಯಾರಾಗ**; ಅಂಕಿತ ಪುಸ್ತಕ, ಬೆಂಗಳೂರು.

೫. ಅ.ನ.ಕೃ.; ೨೦೦೪; **ನಗ್ನಸತ್ಯ**; ಸಾಗರ ಪ್ರಕಾಶನ, ಬೆಂಗಳೂರು.

೬. ಅ.ನ.ಕೃ.; ೨೦೦೪; **ಶನಿಸಂತಾನ**; ಸಾಗರ ಪ್ರಕಾಶನ, ಬೆಂಗಳೂರು.

೭. ಅ.ನ.ಕೃ.; ೨೦೦೪; **ಸಂಜೆಗತ್ತಲು**; ಸಾಗರ ಪ್ರಕಾಶನ, ಬೆಂಗಳೂರು.

೮. ಅ.ನ.ಕೃ.; ೨೦೦೬; **ಕಳಂಕಿನಿ**; ಸಾಗರ ಪ್ರಕಾಶನ, ಬೆಂಗಳೂರು.

೯. ಅ.ನ.ಕೃ.; ೨೦೦೬; **ಪಂಕಜ**; ಸಾಗರ ಪ್ರಕಾಶನ, ಬೆಂಗಳೂರು.

೧೦. ಅ.ನ.ಕೃ.; ೨೦೦೭; **ಅಪರಂಜಿ**; ಸಾಗರ ಪ್ರಕಾಶನ, ಬೆಂಗಳೂರು.

೧೧. ಅ.ನ.ಕೃ.; ೨೦೦೭(೨ನೇ ಮುದ್ರಣ); **ಸುಂದರೂ ಸಂಸಾರ**; ಸಾಗರ ಪ್ರಕಾಶನ, ಬೆಂಗಳೂರು.

೧೨. ಉಷಾ ನವರತ್ನರಾಂ; ೨೦೦೭; **ಯೌವನದ ಹೊನಲಲ್ಲಿ**; ಓಂ ಶಕ್ತಿ ಪ್ರಕಾಶನ, ಬೆಂಗಳೂರು.

೧೩. ಕುವೆಂಪು; ೨೦೦೮(೧೩ನೇ ಮುದ್ರಣ); **ಮಲೆಗಳಲ್ಲಿ ಮದುಮಗಳು**; ಉದಯರವಿ ಪ್ರಕಾಶನ, ಮೈಸೂರು.

೧೪. ಗಟ್ಟಿ ಕೆ.ಟಿ.; ೧೯೭೬; **ಅಮುಕ್ತ**; ಬಹದ್ದೂರ ಪ್ರಕಾಶನ, ಬೆಂಗಳೂರು.

೧೫. ಗಟ್ಟಿ ಕೆ.ಟಿ.; ೧೯೮೩; **ಯುಗಾಂತರ**; ಬಾಪ್ಕೋ ಪ್ರಕಾಶನ, ಮೈಸೂರು.

೧೬. ಗಟ್ಟಿ ಕೆ.ಟಿ.; ೧೯೮೭; **ಅಭಿಚಾರ**; ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೧೭. ಗಟ್ಟಿ ಕೆ.ಟಿ.; ೨೦೧೦; **ಮಿತಿ**; ಸುಧಾ ಎಂಟರ್‌ಪ್ರೈಸಸ್, ಬೆಂಗಳೂರು.

೧೮. ಗಟ್ಟಿ ಕೆ.ಟಿ.; ೨೦೧೧(೨ನೇ ಮುದ್ರಣ); **ಮೃತ್ಯೋರ್ಮಾ ಅಮೃತಂ ಗಮಯಾ**; ಧೃತಿ ಪ್ರಕಾಶನ; ಬೆಂಗಳೂರು.

೧೯. ಗಟ್ಟಿ ಕೆ.ಟಿ.; ೨೦೧೨(೨ನೇ ಮುದ್ರಣ); **ಪುನರಪಿ ಜನನ**; ಎ. ವಸಂತ ಎಂಟರ್‌ಪ್ರೈಸಸ್, ಬೆಂಗಳೂರು.

೨೦. ಚಂದ್ರಶೇಖರ ಕಂಬಾರ; ೧೯೯೫; **ಕರಿಮಾಯಿ**; ಅಕ್ಷರ ಪ್ರಕಾಶನ, ಬೆಂಗಳೂರು.

೨೧. ಡಿಸೋಜಾ ನಾ.; ೨೦೦೯; **ಬೆಂಕಿಯ ನಾಲಿಗೆ**; ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.

೨೨. ಡಿಸೋಜಾ ನಾ.; ೨೦೦೯; **ಹರಿವ ನದಿ**; ರವೀಂದ್ರ ಪುಸ್ತಕಾಲಯ, ಸಾಗರ.

೨೩. ಡಿಸೋಜಾ ನಾ.; ೧೯೮೫; **ಪ್ರೀತಿಯೊಂದೇ ಸಾಲದೆ**; ಗೀತಾ ಬುಕ್ ಹೌಸ್, ಮೈಸೂರು.

೨೪. ತ್ರಿವೇಣಿ; ೨೦೦೮; **ಮೊದಲ ಹೆಜ್ಜೆ**; ರವಿ ಪಬ್ಲಿಕೇಷನ್ಸ್, ಮೈಸೂರು.

೨೫. ನರಸಿಂಹಯ್ಯ ಎನ್.; ೨೦೦೨; **ಪಾತಾಳ ಗರಡಿ**; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೬. ನಿರಂಜನ; ೨೦೧೩; (೧ನೇ ಮುದ್ರಣ ೧೯೫೫); **ಚಿರಸ್ಮರಣೆ**; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೭. ಪೂರ್ಣಚಂದ್ರ ತೇಜಸ್ವಿ ಕೆ.ಪಿ.; ೧೯೬೬; **ಸ್ವರೂಪ**; ಬೆಂಗಳೂರು ಪ್ರಿಂಟರ್ಸ್ ಅಂಡ್ ಪಬ್ಲಿಷಿಂಗ್ ಹೌಸ್, ಬೆಂಗಳೂರು.

೨೮. ಪೂರ್ಣಚಂದ್ರ ತೇಜಸ್ವಿ ಕೆ.ಪಿ.; ೧೯೯೮; **ಚಿದಂಬರ ರಹಸ್ಯ**; ಪುಸ್ತಕ ಪ್ರಕಾಶನ, ಮೈಸೂರು.

೨೯. ಪೂರ್ಣಚಂದ್ರ ತೇಜಸ್ವಿ ಕೆ.ಪಿ; ೨೦೧೨(೧೦ನೇ ಮುದ್ರಣ); **ಜುಗಾರಿ ಕ್ರಾಸ್**; ಪುಸ್ತಕ ಪ್ರಕಾಶನ, ಮೈಸೂರು.

೩೦. ಬಸವರಾಜ ಕಟ್ಟೀಮನಿ; ೧೯೫೩; **ಖಾನಾವಳಿ ನೀಲಾ**; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೩೧. ಬಸವರಾಜ ಕಟ್ಟೀಮನಿ; ೨೦೦೮(೨ನೇ ಮುದ್ರಣ); **ಬೀದಿಯಲ್ಲಿ ಬಿದ್ದವಳು**; ಸಪ್ನ ಬುಕ್ ಹೌಸ್, ಬೆಂಗಳೂರು.

೩೨. ಬೀಚಿ; ೨೦೦೩; **ಆರಿದಾ ಚಹಾ**; ಸಮಾಜ ಪುಸ್ತಕಾಲಯ, ಧಾರವಾಡ.

೩೩. ಬೆಳಗಲಿ ದು.ನಿಂ.; ೧೯೯೮; **ಕಾತ್ರಾಳ ರತ್ನಿಯ ಚಾದಂಗಡಿ**; ವಿಶ್ವಕರ್ನಾಟಕ ಸಾಹಿತ್ಯ ಸಂಪದ, ಬನಹಟ್ಟಿ.

೩೪. ಭೈರಪ್ಪ ಎಸ್.ಎಲ್.; ೨೦೧೧(೨೧ನೇ ಮುದ್ರಣ); **ಕವಲು**; ಸಾಹಿತ್ಯ ಭಂಡಾರ, ಬೆಂಗಳೂರು.

೩೫. ಮೊಗಸಾಲೆ ನಾ.; ೨೦೦೮; **ಉಲ್ಲಂಘನೆ**; ಸುಮುಖ ಪ್ರಕಾಶನ, ಬೆಂಗಳೂರು.

೩೬. ಮೊಗಳ್ಳಿ ಗಣೇಶ್; ೨೦೦೮; **ಅನಾದಿ**; ಪಲ್ಲವ ಪ್ರಕಾಶನ, ಚನ್ನಪಟ್ಟಣ.

೩೭. ರಾಮರಾವ್ ಟಿ.ಕೆ.; ೨೦೦೯(೨ನೇ ಮುದ್ರಣ); **ಆಷಾಢದ ರಾತ್ರಿಗಳು**; ವೈಷ್ಣವಿ ಎಂಟರ್ ಪ್ರೈಸಸ್, ಬೆಂಗಳೂರು.

೩೮. ವೀರಭದ್ರಪ್ಪ ಕುಂ.ವಿ.; ೨೦೧೦; **ಕೋಟ್ರೇಶಿ ಕನಸು**; ಸಪ್ನ ಬುಕ್ ಹೌಸ್, ಬೆಂಗಳೂರು.

೩೯. ವೇಣುಗೋಪಾಲ ಕಾಸರಗೋಡು; ೨೦೦೩; **ಬಯಲಾಟ**; ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು.

೪೦. ವ್ಯಾಸರಾಯ ಬಲ್ಲಾಳ; ೧೯೮೮(೫ನೇ ಮುದ್ರಣ); **ವಾತ್ಸಲ್ಯ ಪಥ**; ಗೀತಾ ಬುಕ್ ಹೌಸ್, ಮೈಸೂರು.

೪೧. ವ್ಯಾಸರಾಯ ಬಲ್ಲಾಳ; ೨೦೦೦; **ಹೆಜ್ಜೆ**; ಗೀತಾ ಬುಕ್ ಹೌಸ್, ಮೈಸೂರು.

೪೨. ವ್ಯಾಸರಾಯ ಬಲ್ಲಾಳ; ೨೦೦೭ (೬ನೇ ಮುದ್ರಣ), **ಬಂಡಾಯ**; ವಸಂತ ಪ್ರಕಾಶನ, ಬೆಂಗಳೂರು.

೪೩. ವ್ಯಾಸರಾವ್ ನಿಂಜೂರು; ೨೦೦೨; **ಶ್ರೀ ಚಾಮುಂಡೇಶ್ವರಿ ಭವನ**; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೪. ವ್ಯಾಸರಾವ್ ನಿಂಜೂರು; ೨೦೧೬; **ತಂಕನಿಡಿಯೂರಿನ ಕುಳವಾರಿಗಳು**; ಅಂಕಿತ ಪುಸ್ತಕ, ಬೆಂಗಳೂರು.

೪೫. ಶಂಕರ ಮೊಕಾಶಿ ಪುಣೇಕರ; ೧೯೯೯; **ಗಂಗವ್ವ ಗಂಗಾಮಾಯಿ**; ಗೀತಾ ಬುಕ್ ಹೌಸ್, ಮೈಸೂರು.

೪೬. ಶಾಂತಿನಾಥ ದೇಸಾಯಿ; ೧೯೮೨; **ಬೀಜ**; ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು.

೪೭. ಶಿವರಾಮ ಕಾರಂತ; ೨೦೧೦(೩ನೇ ಮುದ್ರಣ); **ಮರಳಿ ಮಣ್ಣಿಗೆ**; ಸಪ್ನ ಬುಕ್ ಹೌಸ್, ಬೆಂಗಳೂರು.

೪೮. ಶ್ರೀಕೃಷ್ಣ ಆಲನಹಳ್ಳಿ; ೧೯೯೫; **ಪರಸಂಗದ ಗೆಂಡೆತಿಮ್ಮ**; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೪೯. ಶ್ರೀಕೃಷ್ಣ ಆಲನಹಳ್ಳಿ; ೧೯೯೮; **ಭುಜಂಗಯ್ಯನ ದಶವತಾರಗಳು**; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫೦. ಸಾಯಿಸುತೆ; ೨೦೦೩; **ಶಿಶಿರದ ಇಂಚರ**; ಕರ್ನಾಟಕ ಸಾಹಿತ್ಯ ಪ್ರಕಾಶನ, ತುಮಕೂರು.

೫೧. ಸಾಯಿಸುತೆ; ೨೦೦೫; **ಪರಿಸರದ ಶ್ರೀಗಂಧ**; ಸುಧಾ ಎಂಟರ್‌ಪ್ರೈಸಸ್, ಬೆಂಗಳೂರು.

೫೨. ಸಾಯಿಸುತೆ; ೨೦೦೯(೪ನೇ ಮುದ್ರಣ); **ಪ್ರೇಮ ಸಾಫಲ್ಯ**; ಸುಧಾ ಎಂಟರ್‌ಪ್ರೈಸಸ್, ಬೆಂಗಳೂರು.

೫೩. ಸುದರ್ಶನ ದೇಸಾಯಿ; ೧೯೯೪; **ಪೋಲೀಸ್ ಡಾಗ್**; ಭಾಗ್ಯಲಕ್ಷ್ಮೀ ಪ್ರಕಾಶನ; ಬೆಂಗಳೂರು

೫೪. ಸುದರ್ಶನ ದೇಸಾಯಿ; ೧೯೯೫; **ಸೀಳು ನಾಲಿಗೆ**; ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

**II. ಸಣ್ಣಕಥಾ ಸಂಕಲನಗಳು**

೧. ಅನಂತಮೂರ್ತಿ ಯು.ಆರ್; ೨೦೦೭; **ಐದು ದಶಕದ ಕತೆಗಳು**; ಅಕ್ಷರ ಪ್ರಕಾಶನ, ಹೆಗ್ಗೋಡು.

೨. ಅಮರೇಶ ನುಗಡೋಣಿ; ೨೦೦೭; **ಸವಾರಿ**; ಅಂಕಿತ ಪುಸ್ತಕ, ಬೆಂಗಳೂರು.

೩. ಅಮರೇಶ ನುಗಡೋಣಿ; ೨೦೦೮; **ತಮಂಧದ ಕೇಡು**; ಧಾತ್ರಿ ಪುಸ್ತಕ, ಬೆಂಗಳೂರು.

೪. ಕುಕ್ಯಾನ್ ಎಂ.ಬಿ.; ೨೦೦೪; **ಮೋಸದ ತಿರುವುಗಳು**; ಸಾಯಿದೀಪ ಪ್ರಕಾಶನ, ಮುಂಬಯಿ.

೫. ಕುಕ್ಯಾನ್ ಎಂ.ಬಿ.; ೨೦೦೭; **ಮೋಸದ ಮುಖಗಳು**; ಸಾಯಿದೀಪ ಪ್ರಕಾಶನ, ಮುಂಬಯಿ.

೬. ಚದುರಂಗ; ೧೯೯೯; **ಚದುರಂಗರ ಸಮಗ್ರ ಕಥೆಗಳು**; ಅಭಿರುಚಿ ಪ್ರಕಾಶನ, ಮೈಸೂರು.

೭. ದಿವಾಕರ ಎಸ್.(ಸಂ); ೧೯೯೭; **ಶತಮಾನದ ಸಣ್ಣ ಕಥೆಗಳು**; ಪ್ರಿಸಂ ಬುಕ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೮. ನಾಯಕ ಜಿ.ಹೆಚ್.(ಸಂ); ೨೦೧೩; **ಕನ್ನಡ ಸಣ್ಣ ಕಥೆಗಳು**; ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ದೆಹಲಿ.

೯. ರಂಗನಾಥ್ ಮಾವಿನಕೆರೆ; ೧೯೮೩; **ಕಥಾಸಂಪದ**; ಸುಭಾಷ್ ಪ್ರಕಾಶನ, ಬೆಂಗಳೂರು.

೧೦. ವೀಣಾ ಶಾಂತೇಶ್ವರ; ೨೦೦೬; **ನಡದದ್ದೆ ದಾರಿ**; ಸುಂದರ ಪುಸ್ತಕ ಪ್ರಕಾಶನ, ಧಾರವಾಡ.

೧೧. ವೀರಭದ್ರಪ್ಪ ಕುಂ.; ೨೦೧೦; **ಬರಿ ಕಥೆಯಲ್ಲೊ ಅಣ್ಣಾ**; ಸಪ್ನ ಬುಕ್ ಹೌಸ್, ಬೆಂಗಳೂರು.

೧೨. ವ್ಯಾಸರಾಯ ಬಲ್ಲಾಳ; ೨೦೦೨; **ವ್ಯಾಸರಾಯ ಬಲ್ಲಾಳರ ಸಮಗ್ರ ಕಥೆಗಳು**; ಅಂಕಿತ ಪುಸ್ತಕ, ಬೆಂಗಳೂರು.

೧೩. ಸದಾಶಿವ ಜಿ.ಎಸ್.; ೧೯೯೯; **ಇದುವರೆಗಿನ ಕಥೆಗಳು**; ಪ್ರಿಸಂ ಬುಕ್ಸ್ ಪ್ರೈವೇಟ್ ಲಿ., ಬೆಂಗಳೂರು.

೧೪. ಸಾರಾ ಅಬೂಬಕ್ಕರ್; ೨೦೧೦; **ಚಪ್ಪಲಿಗಳು**; ಚಂದ್ರಗಿರಿ ಪ್ರಕಾಶನ, ಮಂಗಳೂರು.

**III. ಪತ್ರಿಕೆಯಲ್ಲಿನ ಬಿಡಿ ಕಥೆಗಳು**

೧. ಪ್ರಭು ಜಿ.ವಿ.; **ಕೃಷ್ಣ ಭಟ್ಟರು ಹಾಗೂ ಅವರ ಹೋಟೆಲು ಉದ್ಯಮವು**; ತುಷಾರ ಮೇ, ೨೦೧೨.

೨. ಬೇಲೂರು ರಾಮಮೂರ್ತಿ; **ಶೀನಣ್ಣನ ಟೀ ಅಂಗಡಿ**; ತರಂಗ, ಏಪ್ರಿಲ್, ೨೦೧೨.

೩. ವೇಣು ಬಿ.ಎಲ್.; **ಗೌರಿ ಮೆಸ್ಸು**; ಸುಧಾ. ಆಗಸ್ಟ್ ೨೩, ೨೦೧೨.

## ಆ. ಆನುಷಂಗಿಕ ಆಕರಗಳು

### I. ಅಂಕಣ ಸಾಹಿತ್ಯ


೧. ಈಶ್ವರ ದೈತೋಟ; ೧೯೯೫; **ಅಂತರ ದೃಷ್ಟಿ**; ಫಾರ್ಮರ್ ಟ್ರಸ್ಟ್, ಪುತ್ತೂರು.

೨. ಗಣೇಶ ಆರ್.; ೨೦೦೫; **ಅಭಿರುಚಿ**; ವಸಂತ ಪ್ರಕಾಶನ, ಬೆಂಗಳೂರು.

೩. ಜಯಂತ ಕಾಯ್ಕಿಣಿ; ೨೦೦೫; **ಶಬ್ದತೀರ, ಬಿಡಿ ಬರಹಗಳು**; ಅಂಕಿತ ಪುಸ್ತಕ, ಬೆಂಗಳೂರು.

೪. ದುರ್ಗದ ರಾಜೇಗೌಡ; ೧೯೯೩; **ಸೂರ್ಯ**; ದೇವಗಿರಿ ಪ್ರಕಾಶನ, ಹುಲಿಯೂರು.

೫. ನಾಗಲೋಟಿಮಠ ಸ.ಜ.; ೨೦೦೦; **ಕಳವು ಕಲಿಸುವ ದೇವರು**; ನವಕರ್ನಾಟಕ ಪ್ರಕಾಶನ, ಬೆಂಗಳೂರು.

೬. ನಾಗೇಶ ಹೆಗಡೆ; ೧೯೯೬; **ಕ್ಯಾಪ್ಸೂಲಗಿತ್ತಿ**; ಅಭಿನವ ಪ್ರಕಾಶನ, ಬೆಂಗಳೂರು.

೭. ರಾಮಚಂದ್ರದೇವ; ೧೯೯೨; **ಮಾತುಕತೆ**; ಕರ್ನಾಟಕ ಸಂಘ, ಧಾರವಾಡ.

೮. ವೈದೇಹಿ; ೨೦೦೭; **ಮೇಜು ಮತ್ತು ಬಡಗಿ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಶ್ರೀಕಂಠಯ್ಯ ತೀ.ನಂ.; ೧೯೬೪; **ನಂಟರು**; ಶಾರದಾ ಮಂದಿರ, ಮೈಸೂರು.

೧೦. ಸಂತೋಷಕುಮಾರ ಗುಲ್ವಾಡಿ; ೨೦೦೦; **ಅಂತರಂಗ ಬಹಿರಂಗ**; ಕಾವ್ಯಾಲಯ, ಬೆಂಗಳೂರು.

೧೧. ಹನೀಫ್ ಬಿ.ಎಂ.; ೨೦೦೮; **ಬಣ್ಣದ ಬುಗುರಿ**; ಸಂವಹನ ಪ್ರಕಾಶನ, ಮೈಸೂರು.

೧೨. ಹರಿದಾಸ ಭಟ್ಟ ಕು.ಶಿ.; ೧೯೯೪; **ಲೋಕಾಭಿರಾಮ ಸಂಪುಟ–೫**; ಮಣಿಪಾಲ ಪ್ರಿಂಟರ್ಸ್, ಮಣಿಪಾಲ.

೧೩. ಹರಿದಾಸ ಭಟ್ಟ ಕು.ಶಿ.; ೧೯೯೮; **ಲೋಕಾಭಿರಾಮ ಸಂಪುಟ–೬**; ಜಾನಪದ ರಂಗಕೃತಿಗಳ ಅಧ್ಯಯನ ಕೇಂದ್ರ, ಉಡುಪಿ.


### II. ಲಲಿತಪ್ರಬಂಧಗಳು


೧. ಈರಪ್ಪ ಕಂಬಳಿ; ೨೦೦೩; **ಹೀಗೊಂದು ಟಾಪ್ ಪ್ರಯಾಣ, ಲಲಿತಪ್ರಬಂಧಗಳು**; ಚಾರ್ವಾಕ ಪ್ರಕಾಶನ, ಬೆಂಗಳೂರು.

೨. ಕಟಗೇರಿ ನ.ಹ.; ೧೯೯೯; **ಹೇಗೆ ಮರೆಯಲಿ ಆ ದಿನಗಳನ್ನು**; ಶಾರದಾ ಪ್ರಕಾಶನ, ಧಾರವಾಡ.

೩. ಕೃಷ್ಣಾನಂದ ಕಾಮತ್; ೨೦೦೦; **ಪ್ರವಾಸಿಯ ಪ್ರಬಂಧಗಳು**; ಪ್ರವಾಸಾನುಭವ ಆಧಾರಿತ ಲಲಿತ ಪ್ರಬಂಧಗಳು; ಶ್ರೀವಾರಿ ಪ್ರಕಾಶನ, ಬೆಂಗಳೂರು.

೪. ನಾಯಕ ಕೆ.ಎಸ್.; ೨೦೦೫; **ಆಯ್ದ ಲಲಿತ ಪ್ರಬಂಧಗಳು**; ಪ್ರಸಾರಾಂಗ, ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರ್ಗಿ.

೫. ಪರಮಶಿವಯ್ಯ ಜೀ.ಶಂ.; ೧೯೯೮; **ಪ್ರಬಂಧ;** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬. ಭಗವಾನ್ ಕೆ.ಎಸ್.; ೨೦೦೩; **ಕಾರ್ಖಾನೆ ಚಿತ್ರಗಳು;** ದತ್ತಿ ಪ್ರಕಾಶನ, ಬೆಂಗಳೂರು.

೭. ಮಂದಾಕಿನಿ(ಸಂ.); ೧೯೯೪; **ಪ್ರಬಂಧ;** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೮. ಮಿತ್ರ ಅ.ರಾ.; ೨೦೦೫; **ನಾನೇಕೆ ಕೊರೆಯುತ್ತೇನೆ;** ವಂಸತ ಪ್ರಕಾಶನ, ಬೆಂಗಳೂರು.

೯. ವೀರೇಂದ್ರ ಸಿಂಪಿ; ೨೦೦೩; **ಆಯ್ದ ಲಲಿತಪ್ರಬಂಧಗಳು;** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೦. ಶಾಂತಲಾ ಎಸ್.ಎನ್; ೧೯೯೨; **ಜನಪ್ರಿಯ ಪ್ರಬಂಧಗಳು;** ಹಂಸಧ್ವನಿ ಪ್ರಕಾಶನ, ಬೆಂಗಳೂರು.

೧೧. ಶಿವರುದ್ರಪ್ಪ ಜಿ.ಎಸ್.(ಸಂ.); ೨೦೦೩; **ಪು.ತಿ.ನ. ಸಮಗ್ರ ಗದ್ಯ;** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೨. ಸಬಿಹಾ(ಸಂ.); **ಪ್ರಬಂಧ ೧೯೯೯;** ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

೧೩. ಸೀತಾರಾಮಯ್ಯ ವಿ.; ೧೯೯೩; **ವಿ.ಸೀ. ಸಮಗ್ರ ಗದ್ಯ;** ವಿ.ಸೀ. ಸಂಪದ; ಬೆಂಗಳೂರು.

**III. ಪ್ರವಾಸಕಥನಗಳು**

೧. ಅನುಪಮಾ ನಿರಂಜನ; ೨೦೦೪; **ಅಂಗೈಯಲ್ಲಿ ಯೂರೋ ಅಮೆರಿಕಾ;** ಡಿ.ವಿ.ಕೆ. ಮೂರ್ತಿ ಪ್ರಕಾಶನ, ಬೆಂಗಳೂರು.

೨. ಗೊರೂರು ರಾಮಸ್ವಾಮಿ ಅಯ್ಯಂಗಾರ್; ೨೦೦೬; **ಅಮೆರಿಕಾದಲ್ಲಿ ಗೊರೂರು;** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೩. ಜವರೇಗೌಡ ದೇ.; ೨೦೦೧; **ವಿದೇಶದಲ್ಲಿ ನಾಲ್ಕು ವಾರ;** ಡಿ.ವಿ.ಕೆ. ಮೂರ್ತಿ ಪ್ರಕಾಶನ, ಬೆಂಗಳೂರು.

೪. ನಾಗತೀಹಳ್ಳಿ ಚಂದ್ರಶೇಖರ; ೧೯೯೭; **ಅಮೆರಿಕಾ ಅಮೆರಿಕಾ;** ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ, ಬೆಂಗಳೂರು.

೫. ಪಾಟೀಲ ಎಚ್.ಎಸ್.; ೨೦೦೮; **ಅಮೆರಿಕಾ, ಲಂಡನ್ ಮತ್ತು ಪ್ಯಾರಿಸ್ ಪ್ರವಾಸಾನುಭವಗಳು;** ಲಿಂಗರಾಜ ಪ್ರಕಾಶನ, ಧಾರವಾಡ.

೬. ಪೂರ್ಣಚಂದ್ರ ತೇಜಸ್ವಿ ಕೆ.ಪಿ.; ೨೦೦೩; **ಅಲೆಮಾರಿ ಅಂಡಮಾನ್ ಮತ್ತು ಮಹಾನದಿ ನೈಲ್;** ಪುಸ್ತಕ ಪ್ರಕಾಶನ, ಮೈಸೂರು.

೭. ಪ್ರಭಾಕರ ಶಿಶಿಲ; ೧೯೯೮; **ದೇಶ ಯಾವುದಾದರೇನು;** ಸ್ವಂತಿಕಾ ಸಾಹಿತ್ಯ ಬಳಗ, ಸುಳ್ಯ.

೮. ಪ್ರಭುಶಂಕರ; ೨೦೦೫; **ಅಮೆರಿಕಾದಲ್ಲಿ ನಾನು ಶಾಂತಿ;** ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೯. ಶಿವರಾಮ ಕಾರಂತ ಕೆ.; ೧೯೯೮; **ಅಪೂರ್ವ ಪಶ್ಚಿಮ**; ಎಸ್.ಬಿ.ಎಚ್. ಪಬ್ಲಿಕೇಶನ್,ಬೆಂಗಳೂರು.

೧೦. ಶಿವರುದ್ರಪ್ಪ ಜಿ.ಎಸ್.; ೧೯೯೮; **ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ**; ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೧೧. ಸ್ವಾಮಿ ಬಿ.ಜಿ.ಎಲ್.; ೨೦೦೬; **ಅಮೆರಿಕಾದಲ್ಲಿ ನಾನು**; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

**IV. ಅನುವಾದಿತ ಕೃತಿಗಳು**

೧. ವಿಠ್ಠಲ ವೆಂಕಟೇಶ ಕಾಮತ್; ೨೦೧೧; (ಅನು. ಅಕ್ಷತಾ ದೇಶಪಾಂಡೆ); **ಇಡ್ಲಿ ಆರ್ಕಿಡ್ ಮತ್ತು ಆತ್ಮಬಲ**; ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

**V. ಅಧ್ಯಯನ ಕೃತಿಗಳು**

೧. ಅಶೋಕ ಟಿ.ಪಿ.; ೨೦೦೪; **ಶಿವರಾಮ ಕಾರಂತ: ಎರಡು ಅಧ್ಯಯನಗಳು**; ಅಕ್ಷರ ಪ್ರಕಾಶನ, ಹೆಗ್ಗೋಡು.

೨. ಅಶೋಕ ಟಿ.ಪಿ.; ೨೦೧೪; **ಅನಂತಮೂರ್ತಿ ವಾಙ್ಮಯ**; ಅಕ್ಷರ ಪ್ರಕಾಶನ, ಹೆಗ್ಗೋಡು.

೩. ಉಪಾಧ್ಯ ಜಿ.ಎನ್.(ಸಂ.); ೨೦೧೫; **ಮಿತ್ರಾವಳಿ**(ಮಿತ್ರ ವೆಂಕಟರಾಜ ಸಾಹಿತ್ಯ ದರ್ಶನ); ಕನ್ನಡ ಸಾಹಿತ್ಯ ಪರಿಷತ್ತು, ಮಹಾರಾಷ್ಟ್ರ ಘಟಕ, ಮುಂಬೈ.

೪. ನಾಗವೇಣಿ ಹೆಚ್.; ೨೦೧೨; **ಕೊಡಗಿನ ಗೌರಮ್ಮ**; ಸಾಹಿತ್ಯ ಅಕಾಡೆಮಿ, ನವದೆಹಲಿ.

೫. ರಾಜಶೇಖರ ಹಳೆಮನಿ; ೨೦೧೧; **ತಲೆಮಾರುಗಳ ಸಂಕಥನ**; ನೆಲಮನೆ ಪಬ್ಲಿಷಿಂಗ್ ಹೌಸ್, ಮೈಸೂರು.

೬. ರಾಜಶ್ರೀ ಇನಾಂದಾರ್; ೨೦೧೩; **ಮುಂಬಯಿ ಕಾದಂಬರಿಗಳು: ಒಂದು ಅಧ್ಯಯನ**; ಪುಸ್ತಕ ನಿಧಿ, ಕುಂದಾಪುರ.

೭. ಶೇಖರ್ ಎಂ.ಎಸ್.; ೧೯೯೪; **ಶ್ರೀಕೃಷ್ಣ ಆಲನಹಳ್ಳಿಯವರ ಸಾಹಿತ್ಯ: ಒಂದು ಅಧ್ಯಯನ**; ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೮. ಸುದೀಪ್ ಬಿ.ಎಸ್.; ೨೦೧೧; **ಅನಕೃ ಕಾದಂಬರಿಗಳಲ್ಲಿ ಸ್ತ್ರೀವಾದಿ ಅಧ್ಯಯನ**; ರೂಪಾ ಪ್ರಕಾಶನ, ಮೈಸೂರು

೯. ಸುನೀತಾ ಶೆಟ್ಟಿ ಎಂ.; ೨೦೦೦; **ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ**; ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.

**VI. ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧಗಳು**

೧. ಅಮರೇಶ ಶೆಟ್ಟಿ; ೨೦೦೨; **ಬಸವರಾಜ ಕಟ್ಟೀಮನಿಯವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ**; ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

೨. ಕವಿತಾ ರಾಣಿ ಎಸ್.ಎಂ.; ೨೦೦೫; **ಯು.ಆರ್. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ**; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ದುರ್ಗಾಪ್ರವೀಣ ಎಂ.ಎಸ್.; ೨೦೦೭; **ಆಧುನಿಕ ಕನ್ನಡ ಸಾಹಿತ್ಯ ಹಾಗು ಜನಪ್ರಿಯತೆಯ ಪ್ರಶ್ನೆ**; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಬಸವರಾಜ ಸಾದರ; ೧೯೮೯; **ಬಸವರಾಜ ಕಟ್ಟೀಮನಿ**; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ಭಜಂತ್ರಿ ವೈ.ಎಂ.; ೨೦೦೨; **ದು.ನಿಂ. ಬೆಳಗಲಿ ಅವರ ಕಾದಂಬರಿಗಳು: ಒಂದು ಅಧ್ಯಯನ**; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಮಂಟೋಳಿ ಎಸ್.ಟಿ. ೨೦೦೩; **ದು.ನಿಂ. ಬೆಳಗಲಿ ಬದುಕು ಬರಹ: ಒಂದು ಅಧ್ಯಯನ**; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಮುನಿಯಪ್ಪ; ೨೦೦೪; **ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಜಕೀಯ ಪ್ರಜ್ಞೆ: ಒಂದು ಅಧ್ಯಯನ**; ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೮. ರಾಜೇಶ ಬಿ.; ೨೦೧೧; **ಕೆ.ಟಿ. ಗಟ್ಟಿಯವರ ಕೃತಿಗಳಲ್ಲಿ ಪ್ರತಿರೋಧದ ನೆಲೆಗಳು**; ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೯. ರೇವಯ್ಯ ಒಡೆಯರ; ೨೦೦೧; **ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಮಾನವೀಕರಣದ ನೆಲೆಗಳು**; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ವರದಾ ಪಿ.ಎಸ್.; ೧೯೯೬. **ಪಂಜೆಯವರ ಕೃತಿಗಳು: ಒಂದು ಅಧ್ಯಯನ**; ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೧. ವಿಜಯಲಕ್ಷ್ಮಿ ಡಿ.; ೧೯೯೭; **ವ್ಯಾಸರಾಯ ಬಲ್ಲಾಳರು: ಒಂದು ಅಧ್ಯಯನ**; ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**೩. ಹೋಟೆಲು ಪ್ರತಿನಿಧೀಕರಣಗೊಂಡಿರುವ ಸಣ್ಣಕಥೆ–ಕಾದಂಬರಿಗಳ ಸೂಚಿ**

**I. ಸಣ್ಣಕಥೆಗಳು**

೧. ಅನಂತಮೂರ್ತಿ ಯು.ಆರ್; ೨೦೦೭; **ಪ್ರಕೃತಿ**; ಐದು ದಶಕದ ಕತೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೨. ಅನಂತಮೂರ್ತಿ ಯು.ಆರ್; ೨೦೦೭; **ಘೋಜರಾಜ**; ಐದು ದಶಕದ ಕಥೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೩. ಅನಂತಮೂರ್ತಿ ಯು.ಆರ್; ೨೦೦೭; **ಪ್ರಸ್ತ**; ಐದು ದಶಕದ ಕಥೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೪. ಅನಂತಮೂರ್ತಿ ಯು.ಆರ್; ೨೦೦೭; **ಕ್ಲಿಪ್ ಜಾಯಿಂಟ್**; ಐದು ದಶಕದ ಕಥೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೫. ಅನಂತಮೂರ್ತಿ ಯು.ಆರ್; ೨೦೦೭; **ಆಕ್ರಮಣ**; ಐದು ದಶಕದ ಕಥೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೬. ಅನಂತಮೂರ್ತಿ ಯು.ಆರ್; ೨೦೦೭; **ಲೋತ್ ಮತ್ತು ರಸೂಲ್**; ಐದು ದಶಕದ ಕಥೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೭. ಅನಂತಮೂರ್ತಿ ಯು.ಆರ್; ೨೦೦೨; **ಆಕಾಶ ಮತ್ತು ಬೆಕ್ಕು**; ಅನಂತಮೂರ್ತಿ ಕಥಾವಾಚಿಕೆ; ಅಕ್ಷರ ಪ್ರಕಾಶನ, ಹೆಗ್ಗೋಡು.

೮. ಅನಂತಮೂರ್ತಿ ಯು.ಆರ್; ೨೦೦೭; **ಸೂರ್ಯನ ಕುದುರೆ**; ಐದು ದಶಕದ ಕಥೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೯. ಅನಂತಮೂರ್ತಿ ಯು.ಆರ್; ೨೦೦೭; **ಅಕ್ಕಯ್ಯ**; ಐದು ದಶಕದ ಕಥೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೧೦. ಅನಂತಮೂರ್ತಿ ಯು.ಆರ್; ೨೦೦೭; **ಬೇಟೆ**; ಐದು ದಶಕದ ಕಥೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೧೧. ಅನಂತಮೂರ್ತಿ ಯು.ಆರ್; ೨೦೦೭; **ಬಳ ಮತ್ತು ಓತಿಕೇತ**; ಐದು ದಶಕದ ಕಥೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೧೨. ಅನಂತಮೂರ್ತಿ ಯು.ಆರ್; ೨೦೦೭; **ಬರ**; ಐದು ದಶಕದ ಕಥೆಗಳು; ಅಕ್ಷರ ಪ್ರಕಾಶನ, ಹೆಗ್ಗೋಡು.

೧೩. ಅಮರೇಶ ನುಗಡೋಣಿ; ೨೦೦೭; **ಏ ದಿಲ್ ಮಾಂಗೇ ಮೋರ್**; ಸವಾರಿ; ಅಂಕಿತ ಪುಸ್ತಕ, ಬೆಂಗಳೂರು.

೧೪. ಅಮರೇಶ ನುಗಡೋಣಿ; ೨೦೦೭; **ಕಣ್ಣು ಮುಕ್ಕಾದ ಬೀಜಗಳು**; ಸವಾರಿ; ಅಂಕಿತ ಪುಸ್ತಕ, ಬೆಂಗಳೂರು.

೧೫. ಅಮರೇಶ ನುಗಡೋಣಿ; ೨೦೦೭; **ಕುಡಿ ಬಂದ ದೀಪಗಳು**; ಸವಾರಿ; ಅಂಕಿತ ಪುಸ್ತಕ, ಬೆಂಗಳೂರು.

೧೬. ಅಮರೇಶ ನುಗಡೋಣಿ; ೨೦೦೮; **ಕಾಗಿಕೂಟ**; ತಮಂಧದ ಕೇಡು; ಧಾತ್ರಿ ಪುಸ್ತಕ, ಬೆಂಗಳೂರು.

೧೭. ಕುಕ್ಯಾನ್ ಎಂ.ಬಿ.; ೨೦೦೪; **ಮೃಣಾಲಿನಿ**; ಮೋಸದ ತಿರುವುಗಳು; ಸಾಯಿದೀಪ ಪ್ರಕಾಶನ, ಮುಂಬಯಿ.

೧೮. ಕುಕ್ಯಾನ್ ಎಂ.ಬಿ.; ೨೦೦೭; **ಕಳ್ಳರ ಕಳ್ಳ;** ಮೋಸದ ಮುಖಗಳು; ಸಾಯಿದೀಪ ಪ್ರಕಾಶನ, ಮುಂಬಯಿ.

೧೯. ಕುಕ್ಯಾನ್ ಎಂ.ಬಿ.; ೨೦೦೭; **ಎಕ್ಸ್‌ಪರ್ಟ್ ಮ್ಯಾನೇಜರ;** ಮೋಸದ ಮುಖಗಳು; ಸಾಯಿದೀಪ ಪ್ರಕಾಶನ, ಮುಂಬಯಿ.

೨೦. ಚದುರಂಗ; ೧೯೯೯; **ತುಳಸಿ;** ಚದುರಂಗರ ಸಮಗ್ರ ಕಥೆಗಳು; ಅಭಿರುಚಿ ಪ್ರಕಾಶನ, ಮೈಸೂರು.

೨೧. ಚದುರಂಗ; ೧೯೯೯; **ಶವದ ಮನೆ;** ಚದುರಂಗರ ಸಮಗ್ರ ಕಥೆಗಳು; ಅಭಿರುಚಿ ಪ್ರಕಾಶನ, ಮೈಸೂರು.

೨೨. ಚದುರಂಗ; ೧೯೯೯; **ನಾಲ್ಕು ಮೊಳ ಭೂಮಿ;** ಚದುರಂಗರ ಸಮಗ್ರ ಕಥೆಗಳು; ಅಭಿರುಚಿ ಪ್ರಕಾಶನ, ಮೈಸೂರು.

೨೩. ಚದುರಂಗ; ೧೯೯೯; **ನನ್ನ ಮಗು;** ಚದುರಂಗರ ಸಮಗ್ರ ಕಥೆಗಳು; ಅಭಿರುಚಿ ಪ್ರಕಾಶನ, ಮೈಸೂರು.

೨೪. ಚದುರಂಗ; ೧೯೯೯; **ಕಾಳಿ;** ಚದುರಂಗರ ಸಮಗ್ರ ಕಥೆಗಳು; ಅಭಿರುಚಿ ಪ್ರಕಾಶನ, ಮೈಸೂರು.

೨೫. ಚದುರಂಗ; ೧೯೯೯; **ಭೂತದ ಚೇಷ್ಟೆ;** ಚದುರಂಗರ ಸಮಗ್ರ ಕಥೆಗಳು; ಅಭಿರುಚಿ ಪ್ರಕಾಶನ, ಮೈಸೂರು.

೨೬. ಚದುರಂಗ; ೧೯೯೯; ೧೯೯೭; ಚದುರಂಗರ ಸಮಗ್ರ ಕಥೆಗಳು; ಅಭಿರುಚಿ ಪ್ರಕಾಶನ, ಮೈಸೂರು.

೨೭. ತ್ರಿವೇಣಿ; ೧೯೯೭; **ವಾಣಿಯ ಸಮಸ್ಯೆ;** ಶತಮಾನದ ಸಣ್ಣಕಥೆಗಳು; (ಸಂ.) ಎಸ್. ದಿವಾಕರ; ಪ್ರೀಸಮ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

೨೮. ನಾಗವೇಣಿ ಎಚ್.; ೨೦೧೦(೨ನೇ ಮುದ್ರಣ); **ಹಬ್ಬಗಳ ಬಾಲ್ಯ;** ವಸುಂಧರೆಯ ಗ್ಯಾನ; ಲೋಹಿಯಾ ಪ್ರಕಾಶನ, ಬಳ್ಳಾರಿ.

೨೯. ಪಂಜೆ ಮಂಗೇಶರಾಯ; ೨೦೧೫(೨ನೇ ಮುದ್ರಣ); **ಕಮಲಪುರದ ಹೊಟ್ಲಿನಲ್ಲಿ ಪಂಜೆ ಮಂಗೇಶರಾಯರ ಕಥೆಗಳು;** ಅಂಕಿತ ಪುಸ್ತಕ, ಬೆಂಗಳೂರು.

೩೦. ಮಾವಿನಕೆರೆ ರಂಗನಾಥ; ೧೯೮೩; **ಉಳಿದದ್ದು ಆಕಾಶ;** ಕಥಾ ಸಂಪದ; ಸುಭಾಷ್ ಪ್ರಕಾಶನ, ಬೆಂಗಳೂರು.

೩೧. ಯಶವಂತ ಚಿತ್ತಾಲ; ೨೦೦೭; **ತ್ರಯೋದಶ ಪುರಾಣ;** ಕಥೆಯಾದಳು ಹುಡುಗಿ; ಪ್ರಿಸಮ್ ಬುಕ್ಸ್ ಪ್ರೈ. ಲಿ., ಬೆಂಗಳೂರು.

೩೨. ಯಶವಂತ ಚಿತ್ತಾಲ; ೨೦೦೭; **ಮುಖಾಮುಖಿ**; ಕಥೆಯಾದಳು ಹುಡುಗಿ; ಪ್ರಿಸಮ್ ಬುಕ್ಸ್ ಪ್ರೈ. ಲಿ., ಬೆಂಗಳೂರು.

೩೩. ವೀಣಾ ಶಾಂತೇಶ್ವರ; ೨೦೦೬; **ಹೋಟೆಲ ಬ್ಲೂ**; ನಡದದ್ದೇ ದಾರಿ; ಸುಂದರ ಪುಸ್ತಕ ಪ್ರಕಾಶನ, ಧಾರವಾಡ.

೩೪. ವೀರಭದ್ರಪ್ಪ ಕುಂ.; ೨೦೧೦; **ಕಪ್ಪು ನೆಲದಲ್ಲೊಂದು ಕೆಂಪು ಕಥೆ**; ಬರಿ ಕಥೆಯಲ್ಲೋ ಅಣ್ಣಾ; ಸ್ವಪ್ನ ಬುಕ್ ಹೌಸ್, ಬೆಂಗಳೂರು.

೩೫. ವೀರಭದ್ರಪ್ಪ ಕುಂ.; ೨೦೧೦; **ಕಿವುಡ ನಾಯಿಯಾದ ಪ್ರಸಂಗ**; ಬರಿ ಕಥೆಯಲ್ಲೋ ಅಣ್ಣಾ; ಸಪ್ನ ಬುಕ್ ಹೌಸ್, ಬೆಂಗಳೂರು.

೩೬. ವೀರಭದ್ರಪ್ಪ ಕುಂ.; ೨೦೧೦; **ಚರಾಸ್ತಿ**; ಬರಿ ಕಥೆಯಲ್ಲೋ ಅಣ್ಣಾ; ಸಪ್ನ ಬುಕ್ ಹೌಸ್, ಬೆಂಗಳೂರು.

೩೭. ವೀರಭದ್ರಪ್ಪ ಕುಂ.; ೨೦೧೦; **ಭಗವತಿ ಕಾಡು**; ಬರಿ ಕಥೆಯಲ್ಲೋ ಅಣ್ಣಾ; ಸಪ್ನ ಬುಕ್ ಹೌಸ್, ಬೆಂಗಳೂರು.

೩೮. ವೀರಭದ್ರಪ್ಪ ಕುಂ.; ೨೦೧೦; **ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯು**; ಬರಿ ಕಥೆಯಲ್ಲೊ ಅಣ್ಣಾ; ಸಪ್ನ ಬುಕ್ ಹೌಸ್, ಬೆಂಗಳೂರು.

೩೯. ವೀರಭದ್ರಪ್ಪ ಕುಂ.; ೨೦೧೦; **ನಿಜಲಿಂಗಪ್ಪ**; ಬರಿ ಕಥೆಯಲ್ಲೊ ಅಣ್ಣಾ; ಸಪ್ನ ಬುಕ್ ಹೌಸ್, ಬೆಂಗಳೂರು.

೪೦. ವ್ಯಾಸರಾಯ ಬಲ್ಲಾಳ; ೨೦೦೪; **ಎರಡು ದ್ರುವ**; ವ್ಯಾಸರಾಯ ಬಲ್ಲಾಳರ ಆಯ್ದ ಕಥೆಗಳು; ಅಂಕಿತ ಪುಸ್ತಕ, ಬೆಂಗಳೂರು.

೪೧. ವ್ಯಾಸರಾಯ ಬಲ್ಲಾಳ; ೨೦೦೪; **ಸಂಪಿಗೆ ಹೂವು**; ವ್ಯಾಸರಾಯ ಬಲ್ಲಾಳರ ಆಯ್ದ ಕಥೆಗಳು; ಅಂಕಿತ ಪುಸ್ತಕ, ಬೆಂಗಳೂರು.

೪೨. ವ್ಯಾಸರಾಯ ಬಲ್ಲಾಳ; ೨೦೦೪; **ಬೆಂಕಿಯ ನಾಲಿಗೆ**; ವ್ಯಾಸರಾಯ ಬಲ್ಲಾಳರ ಆಯ್ದ ಕಥೆಗಳು; ಅಂಕಿತ ಪುಸ್ತಕ, ಬೆಂಗಳೂರು.

೪೩. ವ್ಯಾಸರಾಯ ಬಲ್ಲಾಳ; ೨೦೦೪; **ಹೊಸ ಹಗಲು**; ವ್ಯಾಸರಾಯ ಬಲ್ಲಾಳರ ಆಯ್ದ ಕಥೆಗಳು; ಅಂಕಿತ ಪುಸ್ತಕ, ಬೆಂಗಳೂರು.

೪೪. ವ್ಯಾಸರಾಯ ಬಲ್ಲಾಳ; ೨೦೦೪; **ಕಾಡುಮಲ್ಲಿಗೆ**; ವ್ಯಾಸರಾಯ ಬಲ್ಲಾಳರ ಆಯ್ದ ಕಥೆಗಳು; ಅಂಕಿತ ಪುಸ್ತಕ, ಬೆಂಗಳೂರು.

೪೫. ಶ್ರೀಕೃಷ್ಣ ಆಲನಹಳ್ಳಿ; ೨೦೦೦; **ಸುಟ್ಟ ತಿಕದ ದೇವರು**; ಗೋಡೆ; ಪುಸ್ತಕ ಪ್ರಕಾಶನ, ಮೈಸೂರು.

೪೬. ಸದಾಶಿವ ಜಿ.ಎಸ್.; ೧೯೯೭; **ಮೀಸೆಯವರು**; ಶತಮಾನದ ಸಣ್ಣಕಥೆಗಳು; (ಸಂ.) ದಿವಾಕರ ಎಸ್.; ಪ್ರೀಸಮ್ ಬುಕ್ಸ್ ಪ್ರೈ. ಲಿ., ಬೆಂಗಳೂರು.

೪೭. ಸದಾಶಿವ ಜಿ.ಎಸ್.; ೧೯೯೯; **ಹ್ಯಾಂಗೋವರ್**; ಇದುವರೆಗಿನ ಕಥೆಗಳು; ಪ್ರೀಸಮ್ ಬುಕ್ಸ್ ಪ್ರೈ. ಲಿ., ಬೆಂಗಳೂರು.

೪೮. ಸಾರಾ ಅಬೂಬಕ್ಕರ್; ೨೦೧೦; **ಮೂಲೆ ಮುಟ್ಟಿದ ಹಾಳು**; ಚಪ್ಪಲಿಗಳು; ಚಂದ್ರಗಿರಿ ಪ್ರಕಾಶನ, ಮಂಗಳೂರು.

೪೯. ಸಾರಾ ಅಬೂಬಕ್ಕರ್; ೨೦೧೦; **ಮಸೀದಿ ಕಟ್ಟುವವರು**; ಚಪ್ಪಲಿಗಳು; ಚಂದ್ರಗಿರಿ ಪ್ರಕಾಶನ, ಮಂಗಳೂರು.

**II. ಕಾದಂಬರಿಗಳು**

೧. ಅನಂತಮೂರ್ತಿ ಯು.ಆರ್; ೨೦೦೮(೮ನೇ ಮುದ್ರಣ); **ಭಾರತೀಪುರ**; ಅಕ್ಷರ ಪ್ರಕಾಶನ, ಹೆಗ್ಗೋಡು.

೨. ಅನಂತಮೂರ್ತಿ ಯು.ಆರ್; ೨೦೧೨; **ಪ್ರೀತಿ, ಭಯ ಮತ್ತು ಸಾವು**; ಅಕ್ಷರ ಪ್ರಕಾಶನ, ಹೆಗ್ಗೋಡು.

೩. ಅನಂತಮೂರ್ತಿ ಯು.ಆರ್.; ೨೦೧೫(೧೩ನೇ ಮುದ್ರಣ); **ಸಂಸ್ಕಾರ**; ಅಕ್ಷರ ಪ್ರಕಾಶನ, ಹೆಗ್ಗೋಡು.

೪. ಅ.ನ.ಕೃ.; ೨೦೦೩; **ಸಂಧ್ಯಾರಾಗ**; ಅಂಕಿತ ಪುಸ್ತಕ, ಬೆಂಗಳೂರು.

೫. ಅ.ನ.ಕೃ.; ೨೦೦೪; **ನಗ್ನಸತ್ಯ**; ಸಾಗರ ಪ್ರಕಾಶನ, ಬೆಂಗಳೂರು.

೬. ಅ.ನ.ಕೃ.; ೨೦೦೪; **ಶನಿಸಂತಾನ**; ಸಾಗರ ಪ್ರಕಾಶನ, ಬೆಂಗಳೂರು.

೭. ಅ.ನ.ಕೃ.; ೨೦೦೪; **ಸಂಜೆಗತ್ತಲು**; ಸಾಗರ ಪ್ರಕಾಶನ, ಬೆಂಗಳೂರು.

೮. ಅ.ನ.ಕೃ.; ೨೦೦೬; **ಕಳಂಕಿನಿ**; ಸಾಗರ ಪ್ರಕಾಶನ, ಬೆಂಗಳೂರು.

೯. ಅ.ನ.ಕೃ.; ೨೦೦೬; **ಪಂಕಜ**; ಸಾಗರ ಪ್ರಕಾಶನ, ಬೆಂಗಳೂರು.

೧೦. ಅ.ನ.ಕೃ.; ೨೦೦೭; **ಅಪರಂಜಿ**; ಸಾಗರ ಪ್ರಕಾಶನ, ಬೆಂಗಳೂರು.

೧೧. ಅ.ನ.ಕೃ.; ೨೦೦೭(೨ನೇ ಮುದ್ರಣ); **ಸುಂದರೂ ಸಂಸಾರ**; ಸಾಗರ ಪ್ರಕಾಶನ, ಬೆಂಗಳೂರು.

೧೨. ಅನುಪಮಾ ನಿರಂಜನ; ೧೯೮೧; **ಕೊಳಚೆ ಕೊಂಪೆಯ ದಾನಿಗಳು**; ಡಿವಿಕೆ ಮೂರ್ತಿ, ಮೈಸೂರು.

೧೩. ಅನುಪಮಾ ನಿರಂಜನ; ೧೯೮೯; **ಆಳ**; ಡಿವಿಕೆ ಮೂರ್ತಿ, ಮೈಸೂರು.

೧೪. ಅರವಿಂದ ಮಾಲಗತ್ತಿ; ೧೯೮೮; **ಕಾರ್ಯ**; ಶೈಲ ಪ್ರಕಾಶನ, ಮುದ್ದೇಬಿಹಾಳ.

೧೫. ಉಷಾ ನವರತ್ನರಾಂ; ೨೦೦೭; ಯೌವನದ ಹೊನಲಲ್ಲಿ; ಓಂ ಶಕ್ತಿ ಪ್ರಕಾಶನ, ಬೆಂಗಳೂರು.

೧೬. ಕುವೆಂಪು; ೧೯೯೨; ಕಾನೂರು ಹೆಗ್ಗಡತಿ; ಉದಯರವಿ ಪ್ರಕಾಶನ, ಮೈಸೂರು.

೧೭. ಕುವೆಂಪು; ೨೦೦೮(೧೩ನೇ ಮುದ್ರಣ); ಮಲೆಗಳಲ್ಲಿ ಮದುಮಗಳು; ಉದಯರವಿ ಪ್ರಕಾಶನ, ಮೈಸೂರು.

೧೮. ಗಟ್ಟಿ ಕೆ.ಟಿ.; ೧೯೭೯; ಅಮುಕ್ತ; ಬಹದ್ದೂರ ಪ್ರಕಾಶನ, ಬೆಂಗಳೂರು.

೧೯. ಗಟ್ಟಿ ಕೆ.ಟಿ.; ೧೯೮೩; ಯುಗಾಂತರ; ಬಾಪ್ಕೋ ಪ್ರಕಾಶನ, ಮೈಸೂರು.

೨೦. ಗಟ್ಟಿ ಕೆ.ಟಿ.; ೧೯೮೭; ಅಭಿಚಾರ; ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೨೧. ಗಟ್ಟಿ ಕೆ.ಟಿ.; ೨೦೧೦; ಮಿತಿ; ಸುಧಾ ಎಂಟರ್‌ಪ್ರೈಸಸ್, ಬೆಂಗಳೂರು.

೨೨. ಗಟ್ಟಿ ಕೆ.ಟಿ.; ೨೦೧೧(೨ನೇ ಮುದ್ರಣ); ಮೃತ್ಯೋರ್ಮಾ ಅಮೃತಂ ಗಮಯಾ; ಧೃತಿ ಪ್ರಕಾಶನ; ಬೆಂಗಳೂರು.

೨೩. ಗಟ್ಟಿ ಕೆ.ಟಿ.; ೨೦೧೨(೨ನೇ ಮುದ್ರಣ); ಪುನರಪಿ ಜನನ; ವಸಂತ ಎಂಟರ್‌ಪ್ರೈಸಸ್, ಬೆಂಗಳೂರು.

೨೪. ಜವರಯ್ಯ ಮ.ನ.; ೧೯೮೭; ಮಾಗಿ; ಸಂಕ್ರಮಣ ಪ್ರಕಾಶನ, ಧಾರವಾಡ

೨೫. ಚಂದ್ರಶೇಖರ ಕಂಬಾರ; ೧೯೯೫; ಕರಿಮಾಯಿ; ಅಕ್ಷರ ಪ್ರಕಾಶನ, ಬೆಂಗಳೂರು.

೨೬. ಜಂಬಣ್ಣ ಅಮರಚಿಂತ; ೧೯೯೪; ಕುರುಮಯ್ಯ ಮತ್ತು ಅಂಕುಶದೊಡ್ಡಿ; ಬಸವಂತಕುಮಾರ ಪ್ರಕಾಶನ, ಗುಲಬರ್ಗಾ.

೨೭. ಡಿಸೋಜಾ ನಾ.; ೨೦೦೯; ಬೆಂಕಿಯ ನಾಲಿಗೆ; ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.

೨೮. ಡಿಸೋಜಾ ನಾ.; ೨೦೦೯; ಹರಿವ ನದಿ; ರವೀಂದ್ರ ಪುಸ್ತಕಾಲಯ, ಸಾಗರ.

೨೯. ಡಿಸೋಜಾ ನಾ.; ೧೯೮೫; ಪ್ರೀತಿಯೊಂದೇ ಸಾಲದೆ; ಗೀತಾ ಬುಕ್ ಹೌಸ್, ಮೈಸೂರು.

೩೦. ತ್ರಿವೇಣಿ; ೧೯೯೦; ಅಪಸ್ವರ; ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.

೩೧. ತ್ರಿವೇಣಿ; ೧೯೯೦; ಮುಚ್ಚಿದ ಬಾಗಿಲು; ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.

೩೨. ತ್ರಿವೇಣಿ; ೧೯೯೦; ಅವಳ ಮಗಳು; ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.

೩೩. ತ್ರಿವೇಣಿ; ೧೯೯೧; ಅಪಜಯ; ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.

೩೪. ತ್ರಿವೇಣಿ; ೧೯೯೧; ವಸಂತಗಾನ; ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.

೩೫. ತ್ರಿವೇಣಿ; ೧೯೯೧; ಬೆಳ್ಳಿಮೋಡ; ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.

೩೬. ತ್ರಿವೇಣಿ; ೧೯೯೫; ಹೃದಯಗೀತೆ; ಸಾಯಿ ಪ್ರಕಾಶನ, ಮೈಸೂರು.

೩೭. ತ್ರಿವೇಣಿ; ೨೦೦೮; **ಮೊದಲ ಹೆಜ್ಜೆ**; ರವಿ ಪಬ್ಲಿಕೇಷನ್ಸ್, ಮೈಸೂರು.

೩೮. ದೇವನೂರು ಮಹದೇವ; ೧೯೮೮ (೨ನೇ ಮುದ್ರಣ); **ಕುಸುಮ ಬಾಲೆ**; ಸಂಗಾತಿ ಪ್ರಕಾಶನ, ಬೆಂಗಳೂರು

೩೯. ದೇವನೂರು ಮಹದೇವ; ೨೦೧೬ (೪ನೇ ಮುದ್ರಣ); **ದ್ಯಾವನೂರು ಮತ್ತು ಒಡಲಾಳ**; ಸಂಗಾತಿ ಪ್ರಕಾಶನ, ಬೆಂಗಳೂರು

೪೦. ನರಸಿಂಹಯ್ಯ ಎನ್.; ೨೦೦೨; **ಪಾತಾಳ ಗರಡಿ**; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೧. ನಿರಂಜನ; ೧೯೯೫; **ಪಾಲಿಗೆ ಬಂದ ಪಂಚಾಮೃತ**; ಐಬಿಎಚ್ ಪ್ರಕಾಶನ, ಬೆಂಗಳೂರು.

೪೨. ನಿರಂಜನ; ೨೦೧೩; (೧ನೇ ಮುದ್ರಣ ೧೯೫೫); **ಚಿರಸ್ಮರಣೆ**; ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೪೩. ಪೂರ್ಣಚಂದ್ರ ತೇಜಸ್ವಿ ಕೆ.ಪಿ.; ೧೯೬೬; **ಸ್ವರೂಪ**; ಬೆಂಗಳೂರು ಪ್ರಿಂಟರ್ಸ್ ಅಂಡ್ ಪಬ್ಲಿಷಿಂಗ್ ಹೌಸ್, ಬೆಂಗಳೂರು.

೪೪. ಪೂರ್ಣಚಂದ್ರ ತೇಜಸ್ವಿ ಕೆ.ಪಿ.; ೧೯೮೮; **ಚಿದಂಬರ ರಹಸ್ಯ**; ಪುಸ್ತಕ ಪ್ರಕಾಶನ, ಮೈಸೂರು.

೪೫. ಪೂರ್ಣಚಂದ್ರ ತೇಜಸ್ವಿ ಕೆ.ಪಿ; ೨೦೧೨(೧೦ನೇ ಮುದ್ರಣ); **ಜುಗಾರಿ ಕ್ರಾಸ್**; ಪುಸ್ತಕ ಪ್ರಕಾಶನ, ಮೈಸೂರು.

೪೬. ಬರಗೂರು ರಾಮಚಂದ್ರಪ್ಪ; ೧೯೯೦; **ಸೂರ್ಯ**; ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

೪೭. ಬಸವರಾಜ ಕಟ್ಟೀಮನಿ; ೧೯೫೩; **ಖಾನಾವಳಿ ನೀಲಾ**; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೪೮. ಬಸವರಾಜ ಕಟ್ಟೀಮನಿ; ೨೦೦೮(೨ನೇ ಮುದ್ರಣ); **ಬೀದಿಯಲ್ಲಿ ಬಿದ್ದವಳು**; ಸಪ್ನ ಬುಕ್ ಹೌಸ್, ಬೆಂಗಳೂರು.

೪೯. ಬೀಚಿ; ೨೦೦೩; **ಆರಿದಾ ಚಹಾ**; ಸಮಾಜ ಪುಸ್ತಕಾಲಯ, ಧಾರವಾಡ.

೫೦. ಬೆಳಗಲಿ ದು.ನಿಂ.; ೧೯೯೮; **ಕಾತ್ರಾಳ ರತ್ನಿಯ ಚಾದಂಗಡಿ**; ವಿಶ್ವಕರ್ನಾಟಕ ಸಾಹಿತ್ಯ ಸಂಪದ, ಬನಹಟ್ಟಿ.

೫೧. ಭೈರಪ್ಪ ಎಸ್.ಎಲ್.; ೨೦೧೧(೨೦ನೇ ಮುದ್ರಣ); **ಕವಲು**; ಸಾಹಿತ್ಯ ಭಂಡಾರ, ಬೆಂಗಳೂರು.

೫೨. ಮೊಗಸಾಲೆ ನಾ.; ೨೦೦೮; **ಉಲ್ಲಂಘನೆ**; ಸುಮುಖ ಪ್ರಕಾಶನ, ಬೆಂಗಳೂರು.

೫೩. ಮೊಗಳ್ಳಿ ಗಣೇಶ್; ೨೦೦೮; **ಅನಾದಿ**; ಪಲ್ಲವ ಪ್ರಕಾಶನ, ಚನ್ನಪಟ್ಟಣ.

೫೪. ಯಶವಂತ ಚಿತ್ತಾಲ; ೧೯೯೫(೬ನೇ ಮುದ್ರಣ); **ಶಿಕಾರಿ**; ಗೀತಾ ಬುಕ್ ಹೌಸ್, ಮೈಸೂರು.

೫೫. ರಾಮರಾವ್ ಟಿ.ಕೆ.; ೨೦೦೯(೨ನೇ ಮುದ್ರಣ); **ಆಷಾಢದ ರಾತ್ರಿಗಳು**; ವೈಷ್ಣವಿ ಎಂಟರ್ ಪ್ರೈಸಸ್, ಬೆಂಗಳೂರು.

೫೬. ಲಲಿತಾ ನಾಯಕ ಬಿ.ಟಿ.; ೧೯೯೨; **ಗತಿ**; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೫೭. ವೀಣಾ ಶಾಂತೇಶ್ವರ; ೧೯೮೪; **ಶೋಷಣೆ**; ಸುಂದರ ಪುಸ್ತಕ ಪ್ರಕಾಶನ, ಧಾರವಾಡ.

೫೮. ವೀಣಾ ಶಾಂತೇಶ್ವರ; ೧೯೮೪; **ಬಂಡಾಯ**; ಸುಂದರ ಪುಸ್ತಕ ಪ್ರಕಾಶನ, ಧಾರವಾಡ.

೫೯. ವೀರಭದ್ರಪ್ಪ ಕುಂ.; ೧೯೮೧; **ಕಪ್ಪು**; ಯುವಕರ ಸಂಘ, ಹಗರಿಬೊಮ್ಮನಹಳ್ಳಿ.

೬೦. ವೀರಭದ್ರಪ್ಪ ಕುಂ.; ೨೦೧೦; **ಕೋಟ್ರೇಶಿ ಕನಸು**; ಸಪ್ನ ಬುಕ್ ಹೌಸ್, ಬೆಂಗಳೂರು.

೬೧. ವೇಣುಗೋಪಾಲ ಕಾಸರಗೋಡು; ೨೦೦೩; **ಬಯಲಾಟ**; ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು.

೬೨. ವ್ಯಾಸರಾಯ ಬಲ್ಲಾಳ; ೧೯೮೮(೫ನೇ ಮುದ್ರಣ); **ವಾತ್ಸಲ್ಯ ಪಥ**; ಗೀತಾ ಬುಕ್ ಹೌಸ್, ಮೈಸೂರು.

೬೩. ವ್ಯಾಸರಾಯ ಬಲ್ಲಾಳ; ೧೯೮೯; **ಅನುರಕ್ತ**; ಗೀತಾ ಬುಕ್ ಹೌಸ್, ಮೈಸೂರು.

೬೪. ವ್ಯಾಸರಾಯ ಬಲ್ಲಾಳ; ೧೯೯೦; ಉತ್ತರಾಯಣ; ಗೀತಾ ಬುಕ್ ಹೌಸ್, ಮೈಸೂರು.

೬೫. ವ್ಯಾಸರಾಯ ಬಲ್ಲಾಳ; ೧೯೯೦; **ಹೇಮಂತ ಗಾನ**; ಗೀತಾ ಬುಕ್ ಹೌಸ್, ಮೈಸೂರು.

೬೬. ವ್ಯಾಸರಾಯ ಬಲ್ಲಾಳ; ೨೦೦೦; **ಹೆಜ್ಜೆ**; ಗೀತಾ ಬುಕ್ ಹೌಸ್, ಮೈಸೂರು.

೬೭. ವ್ಯಾಸರಾಯ ಬಲ್ಲಾಳ; ೨೦೦೭(೬ನೇ ಮುದ್ರಣ), **ಬಂಡಾಯ**; ವಸಂತ ಪ್ರಕಾಶನ, ಬೆಂಗಳೂರು.

೬೮. ವ್ಯಾಸರಾವ್ ನಿಂಜೂರು; ೨೦೦೨; **ಶ್ರೀ ಚಾಮುಂಡೇಶ್ವರಿ ಭವನ**; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೯. ವ್ಯಾಸರಾವ್ ನಿಂಜೂರು; ೨೦೧೬; **ತೆಂಕನಿಡಿಯೂರಿನ ಕುಳವಾಲಿಗಳು**; ಅಂಕಿತ ಪುಸ್ತಕ, ಬೆಂಗಳೂರು.

೭೦. ಶಂಕರ ಮೊಕಾಶಿ ಪುಣೇಕರ; ೧೯೯೯; **ಗಂಗವ್ವ ಗಂಗಾಮಾಯಿ**; ಗೀತಾ ಬುಕ್ ಹೌಸ್, ಮೈಸೂರು.

೭೧. ಶಾಂತಿನಾಥ ದೇಸಾಯಿ; ೧೯೮೨; **ಬೀಜ**; ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು.

೭೨. ಶಿವರಾಮ ಕಾರಂತ; ೨೦೧೦(೩ನೇ ಮುದ್ರಣ); **ಮರಳಿ ಮಣ್ಣಿಗೆ**; ಸಪ್ನ ಬುಕ್ ಹೌಸ್, ಬೆಂಗಳೂರು.

೭೩. ಶ್ರೀಕೃಷ್ಣ ಆಲನಹಳ್ಳಿ; ೧೯೭೪; **ಕಾಡು**; ನೆಲೆಮನೆ ಪ್ರಕಾಶನ, ಮೈಸೂರು.

೭೪. ಶ್ರೀಕೃಷ್ಣ ಆಲನಹಳ್ಳಿ; ೧೯೯೫; **ಪರಸಂಗದ ಗೆಂಡೆತಿಮ್ಮ**; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೭೫. ಶ್ರೀಕೃಷ್ಣ ಆಲನಹಳ್ಳಿ; ೧೯೯೮; **ಭುಜಂಗಯ್ಯನ ದಶವತಾರಗಳು**; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೭೬. ಸಾಯಿಸುತೆ; ೨೦೦೩; **ಶಿಶಿರದ ಇಂಚರ**; ಕರ್ನಾಟಕ ಸಾಹಿತ್ಯ ಪ್ರಕಾಶನ, ತುಮಕೂರು.

೭೭. ಸಾಯಿಸುತೆ; ೨೦೦೫; **ಪರಿಸರದ ಶ್ರೀಗಂಧ**; ಸುಧಾ ಎಂಟರ್‌ಪ್ರೈಸಸ್, ಬೆಂಗಳೂರು.

೭೮. ಸಾಯಿಸುತೆ; ೨೦೦೯(೪ನೇ ಮುದ್ರಣ); **ಪ್ರೇಮ ಸಾಫಲ್ಯ**; ಸುಧಾ ಎಂಟರ್‌ಪ್ರೈಸಸ್, ಬೆಂಗಳೂರು.

೭೯. ಸುದರ್ಶನ ದೇಸಾಯಿ; ೧೯೯೪; **ಪೋಲೀಸ್ ಡಾಗ್**; ಭಾಗ್ಯಲಕ್ಷ್ಮೀ ಪ್ರಕಾಶನ; ಬೆಂಗಳೂರು

೮೦. ಸುದರ್ಶನ ದೇಸಾಯಿ; ೧೯೯೫; **ಸೀಳು ನಾಲಿಗೆ**; ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ